ಪ್ರಬುದ್ಧ ಕರ್ಣಾಟಕ

ಸಂಪುಟ ೩೬—ಸಂಚಿಕೆ ೪

೧೪೨

ಜಯ ಸಂವತ್ಸರ

ಪುಷ್ಯ ಸಂಚಿಕೆ

ಮೈಸೂರು

ಮೈಸೂರು ವಿಶ್ವವಿದ್ಯಾನಿಲಯ

೧೯೫೫

...ಯ ಸೂಚಿಕೆ

ಪ್ರಬುದ್ಧ ಕರ್ಣಾಟಕ

ಜಯ ಸಂವತ್ಸರ | ೧೪೨ | ಪುಷ್ಯ ಸಂಚಿಕೆ

ದೀಪಾವಳಿ

ಯಾವ ಸೀಮೆಯು ಎಣ್ಣೆ ದೀಪ ಉರಿಯುತಲಿತ್ತು
ಶಾನುಭೋಗರ ಮನೆಯ ಮೂಲೆ ಕೋಣೆಯ ಒಳಗೆ
ಮೊದಲ ಬಾರಿಗೆ ನನ್ನ ಕಣ್ಣುಗಳು ತೆರೆದಾಗ
ಮೂವತ್ತು ವರ್ಷಗಳ ಕೆಳಗೆ ?
ಒಂದೆ ದೀಪದ ಬೆಳಕು ಮಸುಕಾಗಿ ಚೆಲ್ಲಿದ್ದ
ನಾಲ್ಕು ಕಂಭದ ಆ ಹಜಾರದಲಿ
ಎನಿತು ಸೌಮ್ಯವು ಅಜ್ಜಿ ತಾಯಿತಂದೆಯ ಮುಖವು,
ಎನಿತು ಪ್ರಿಯ ಅಕ್ಕತಂಗಿಯರದು !
ಮಲಗುವಾಗಿನ್ನಿನಿತು ಕಿರಿದಾದ ದೀಪಕುಡಿ
ಅಜ್ಜಿ ಕತೆಗಳಿಗೆನಿತು ಹೊಂದುತಿತ್ತು !
ಗುಡಿಯ ಮಿಣುಕುವ ಹಣತೆ ತೋರಿ ತೋರದ ಮೂರ್ತಿ
ಮಂಗಳಾರತಿಗೊಂದು ಕ್ಷಣ ವಿರಾಜಿಸುತಿತ್ತು.
ಎರಡು ದೀಪಸ್ತಂಭ ಬೆಳಗಿದಿನಿಯಳ ಮುಖವ
ಓರೆ ನೋಟದಿ ನೋಡುತೊಲಿದೆನೆನಿತು !
ನಮ್ಮ ಕೇಳಿರಹಸ್ಯವೆಲ್ಲವನು ಅರಿತಿದ್ದ

ಮಲಗು ಕೋಣೆಯ ಸೊಡರು ಮೆಲ್ಲನುಸುರಿತ್ತು:
'ದೀಪದಿಂದಲೆ ದೀಪ,
ಜೀವದಿಂದಲೆ ಜೀವ.'
ಮನೆಯ ದೇವರ ಮುಂದೆ ಮನೆಯೆಲ್ಲ ದೀಪಗಳ
ಮಾತೃ ಬೀಜದೊಲು ಮಿನುಗುತಿರುವ ನಂದಾದೀಪ,
ನಾನು ಹುಟ್ಟಿದ ಮನೆಯ
ಬೆಳಗುತಿರು ಸಿರುತವೂ!

ಜ್ವಲಿತ ವಿದ್ಯುದ್ದೀಪಗಳ ಬೆಂಕಿಯನು ಮುಡಿದ,
ಸುಖದುಃಖ ಚಕ್ರದಲಿ ಸಿಕ್ಕಿ ಭ್ರಮಿಸುತಲಿರುವ
ಹೃದಯದಳುಕನು ತೋರಗೊಡದೆ ಹಲ್ಲನು ಕಿರಿವ
ಇರದ ರಕ್ಷಣೆಗಾಗಿ ದಿಕ್ಕು ದಿಕ್ಕರಸುವ
ಲಕ್ಷೋಪಲಕ್ಷ ಜನ ಕಿಕ್ಕಿರಿದ ನಗರವನು
ಕುದಿವ ತೈಲ ಕಟಾಹಕೊಗೆದರೋ ಎನೆ ಹೊಕ್ಕೆ.
೧೦. ದೀಪ ಮೂಲದ ಸುತ್ತ
೧೧. ಕವಿವ ನೆರಳಿನ ಕುತ್ತ.
ವಿದ್ಯುತ್ಪ್ರಕಾಶವಾಹಿನಿ ಚಿಮ್ಮಲೇನಾಯಿತು,
ಕತ್ತಲಿನ ಮರುವಿನೊಮ್ಮೊಲೆ ಧಗ್ಗೆಂದರೂ
ಮುಳುಗುವುದು ಉಳಿದೆಲ್ಲ ಗಾಢತರ ತಮಸಿನಲಿ.
ಪಾರ್ಶ್ವದಲಿ ಪವಡಿಸಿರೆ ಬತ್ತಲೆಯ ದೈವತವು
ಹಚ್ಚೆ ಕಿಚ್ಚಿನ ದೀಪ ಬೆಚ್ಚಿ ವೈಗರೆಯದೇ?
ಉರಿಯಿಂದ ಬೆಳಕೆ?
ಸುದ್ದಿಸಂಗ್ರಹದಿಂದ ಬೆಳೆಯುವುದೆ ಬುದ್ಧಿ?
ಬೆಳೆದರೂ ಬುದ್ಧಿ ಲಭಿಸುವುದೆ ಜ್ಞಾನ?
ಜ್ಞಾನವೃದ್ಧಿಯನೇ ಆತ್ಮಸಿದ್ಧಿಯೆನಲಾದೀತೆ?
ನಮ್ಮ ನವವಿಜ್ಞಾನ ಮೃತ್ಯುಪಾಶಗಳೆಲ್ಲಿ
ನಚಿಕೇತನರಸಿದಾತ್ಮ ವಿದ್ಯಾಮೃತವೆಲ್ಲಿ?

ನಗರವನು ಹಿಂದಿಟ್ಟು ನಡೆದೆ ನಡುರಾತ್ರಿಯಲಿ.
ದೂರ ದೂರಕೆ ಸಾರಿದಂತೆ ಮಸುಕಾಗುತ್ತ
ತಮ್ಮ ತಮ್ಮಯ ತಾವುಗಳಿಗೆ ಬೀಳುತ ತಾವು

ಪೂರ್ಣ ದೃಷ್ಟಿಯನೆ ಪರಿಪೋಷಿಸಲು ಪುರದೀಪಗಳು,
ನಿಂತೆನಲ್ಲಿಯೆ ನಡುವೆ ನಗರಕೂ ನನ್ನೂರಿಗೂ
ವೇದದರ್ಶನಕೂ ವಿಜ್ಞಾನದನುಮಾನಕೂ
ಭೂತಕಾಲಕೂ ವರ್ತಮಾನಕೂ
ಅರಿಯದೆ ಭವಿಷ್ಯತ್ತು ಅರಸುತ್ತ ಸತ್ಯವನು.
ಅನಾದ್ಯಸೀಮಾಂಧಕಾರವನು ಭೇದಿಸಿ
ಅಮಾವಾಸ್ಯೆಯಾಕಾಶದಲಿ ಸೂರ್ಯಕೋಟಿಗಳು !
ಕತ್ತಲೆಯ ಬೆನ್ನಿನೊಳಗೀ ಖಡ್ಗಧಾರೆಗಳ
ಝಳಪಿಸಿದುದಾವ ಕೈ ? ನಿಜಾಂತರ್ಜ್ಯೋತಿಯಿಂ
ದಾವ ದೈವತ ಪ್ರಥಮ ಕಿರಣವನು ಸೆಳೆದಿತ್ತು ?
ಮೂಲ ಪ್ರಕೃತಿಯ ಮೇಲೆ ಹಾಯ್ದು ಪುರುಷ ಜ್ಯೋತಿ
ಮಾರ್ಪಡಿಸದೇ ಸ್ಪರ್ಶಶಿಲೆಯಂತೆ ಪ್ರಕೃತಿಯನೆ ?
ಕತ್ತಲೆಯೆ ತಪಿಸುತ್ತ ತನ್ನೊಳಗನರಿಯುತ್ತ
ವಿಷಮತೆಯ ನೀಗುತ್ತ ಸಮರಸವ ಸೃಜಿಸುತ್ತ
ಕಂಡ ಸತ್ಯವೆ ಬೆಳಕೊ ? ಅಂತರಂಗವನೀವ
ಘನಿಸುತ್ತ ಘನಿಸುತ್ತ ನೀಹಾರಿಕೆಯೆ ಸಿಡಿದು
ನಕ್ಷತ್ರ ಲೋಕಗಳೊ ? ಹುಡಿಯಿಂದಲೇ ಕಿಡಿಯೊ,
ಪಾರ್ಥಿವದಿ ಪರಮಾರ್ಥವೋ, ಮೃತ್ತಿನಿಂದಲೆ ಚಿತ್ತೊ,
ಬೋಧಿವೃಕ್ಷದ ಕೆಳಗೆ ನರನೆ ನಾರಾಯಣನೊ ?
ಪುರುಷನಾಗಾಮಿಯೋ ಅಥವಾ ಪುರಾಣನೋ ?
ಹಾಲುಗಡಲಿನ ನಡುವೆ ಹಾವಿನೊಳು ಪವಡಿಸಿದ
ಆವ ದೈವತ ರಾಮನಾಗಿ ಅವತರಿಸಿತ್ತು ?
ಪಾತಕಿಯ ಹೃದ್ದೇಶದಲ್ಲಿಯೂ ಹುದುಗಿರುವ
ಪರಮಾತ್ಮನಾರು ? ಜೀವಾಣು ವಾಮನ ರೂಪ
ತನ್ನೊಳಿರುವಾವ ದೈವಾಂಶದಿಂ ದ್ವಿಗುಣಿಸುತ
ಆ ತ್ರಿವಿಕ್ರಮನಂತೆ ವಿಶ್ವವನೆ ಆಕ್ರಮಿಸುತಿದೆ ?
ಪೂತವಾಗಿರಲಾತ್ಮ ಪ್ರಕೃತಿಪತ್ರದ ಮೇಲೆ
ಮುತ್ತುಹನಿಯಂತಾರ ಸೂರ್ಯ ಸಾಕ್ಷಾತ್ಕಾರ
ಅದರೊಳಗ ಬೆಳಬೆಳಗುತೊಯ್ಯುತಿದೆ ತನ್ನೊಳಗೆ ?

ಮಣ್ಣಿಗುಸಿರನ್ನಿತ್ತನಾರಾ ಮಹಾದಾನಿ ?
ಆತ್ಮಬೀಜವ ಜೀವದೊಳು ಬಿತ್ತಿದ ಮಹಾತ್ಮನು ಅದಾರು ?
ತನ್ನನೇ ತಾನೀವನೆಲ್ಲ ತಾನಾಗಿಸನೆ
ಅಣುವಿಗಣು ಮಹತ್ತಿಗೆ ಮಹೀಮನ್ ಆ ಏಕ ಮೇವಾದ್ವಿತೀಯ ?
ಭೂತಕಾಲದ ರುಂದ್ರ ರೋಧಸಿನ ಸೈಕತದ
ಸೂಕ್ಷ್ಮಪದ ಚಿಹ್ನೆಗಳಲೊಂದರಲಿ ಪ್ರಕೃತಿಯೇ
ಪ್ರಾಣವಾಯುವನು ಪಚನವನು ಪರಿಚಲನೆಯನು
ಸಾಧಿಸಿತೊ ಪ್ರತಿ ಸೃಷ್ಟಿಯನು ?
ಕತ್ತಲೆಯ ಮನೆಗೆ ಮಣಿದೀಪವಿಟ್ಟಂತೆ
ವಂಶದ ಭವಿಷ್ಯವನು ತೊಟ್ಟಿಲಲಿ ತೂಗುತಿರೆ
ಹೃಚ್ಚಂದ್ರಕಾಂತ ಶಿಲೆ ದ್ರವಿಸುವಮೃತಕಿರಣ
ಪ್ರಣಯ ನೇತ್ರಗಳಲ್ಲಿ ಮಿನುಗುತಿರೆ ಮಿಂಚುತಿರೆ,
ಜೀವಸಂತಾನ ನಿರ್ಜೀವತೆಯ ಗೆಲ್ಲದೇ ?
ಜೀವದಾಹಾರದಲಿ ರಸಿಕನಾಹ್ಲಾದದಲಿ
ಸ್ನೇಹ ಮಾಯಾರಸದಿ ಕವಿಯ ಕಲ್ಪನೆಯಲ್ಲಿ
ಋಷಿಜನ ತಪಸ್ಯೆಯಲಿ ಜಡತೆ ಚೇತರಿಸದೇ ?
ಜೀವಾಗ್ನಿಕುಂಡದಲಿ ಆತ್ಮತೇಜೋಬೀಜ
ಬೆಳೆಯದೇ ಅರಸದೇ ಸೃಜಿಸದೇ ನಿರುತವೂ ?
ಕತ್ತಲಿಂದ ದೀಪವೋ
ದೀಪದಿಂದ ದೀಪವೋ
ಕತ್ತಲೆಯು ಕರಗಲಿ !
ಜಡತೆಯಿಂದ ಜೀವವೋ
ಜೀವದಿಂದ ಜೀವವೋ
ಜಡತೆಯಳಿದು ಹೋಗಲಿ !
ನರನೆ ಮುಂದೆ ನಾರಾಯಣನೊ
ದಿವ್ಯತೆಗೆ ಏರಲಿ !
ನಾರಾಯಣನೆ ಹಿಂದೊ ನಾರಾಯಣನೆ ಮುಂದೊ
ದಿವ್ಯತೆಗೆ ಎತ್ತಲಿ !
ನಾನು ಹುಟ್ಟಿದ ಬೆಳೆದ ಮನೆಯ ನಂದಾದೀಪ ದೀಪಗಳೆ

ಕಲಿತು ವಿದ್ಯೆಯು ನಾನು ತೋರೆದ ನಗರದ ದೂರದೀಪಗಳೆ,
ವಿಶ್ವವಿಸರಣ ಕಿರಣಮಾಲಿಗಳೆ, ಆಕಾಶದೀಪಗಳೆ,
ಒಲುಮೆಗಣ್ಣಿನ ಮಿನುಗೆ,
ಅಂತಶ್ಚಕ್ಷುದರ್ಶನದ ದೀಧಿತಿಯೆ,
ಅವತಾರಿ, ಓ ಪುರುಷ,
ಪುರುಷಗರ್ಭೇ, ಪ್ರಕೃತಿ,
ಅಸತೋ ಮಾ ಸದ್ಗಮಯ
ತಮಸೋ ಮಾ ಜ್ಯೋತಿರ್ಗಮಯ
ಮೃತ್ಯೋರ್ಮಾ ಅಮೃತಂಗಮಯ

—ಕೆ. ನರಸಿಂಹಮೂರ್ತಿ

ಶಾರದಾಮಣಿ ದೇವಿಯರ ಸೂಕ್ತಿಯೊಂದು

ನೀರ ಹರಿವು ತಗ್ಗಿನೆಡೆಗೆ
ನೀರಿಗದುವೆ ಸಹಜವು
ಸೆಳೆದು ಬಾನಿಗೊಯ್ಯುವುದದನು
ರವಿಯ ಪ್ರಖರ ಕಿರಣವು.

ವಿಷಯ ಸುಖವೆ ಪ್ರಿಯವು ಮನಕೆ
ಕೀಳೆಡೆಗೇ ಓಟವು
ಮೇಲಕದನು ಉಯ್ಯುವುದೊಂದೆ
ಈಶಕೃಪಾಕಿರಣವು.

—ಎ. ಎಸ್. ರಾಮಕೃಷ್ಣ

ಶ್ರೀ ಕೃಷ್ಣಜನ್ಮಾಷ್ಟಮಿ

ರಾಕ್ಷಸ ಕಂಸನ ಮಥುರೆಯ ಮೇಲೆ
   ಘನ ಘೋರಾಂಧತೆ ಕವಿದಿತ್ತು;
ಮಿಂಚಿನ ಸಿಡಿಲಿನ ಮೋಡದ ಲೀಲೆ
   ತಿರೆಯ ಮೋರೆಯನು ತಿವಿದಿತ್ತು;
ಕೆರಳಿದ ಕೇಸರಿಯಂದದಿ ಗರ್ಜಿಸಿ
   ಗಾಳಿಯು ಭರದಲಿ ಬೀಸಿತ್ತು;
ಮುಗಿಲಿನ ಚಿಪ್ಪೊಡೆದಾಲಿಯ ಕಲ್ಗಳ
   ಕವಣೆಯವೋಲ್ ಮಳೆ ಸೂಸಿತ್ತು! . . .
ರಾಕ್ಷಸ ಕಂಸನ ಮಥುರೆಯ ಮೇಲೆ
ಶತಶತಮಾನಗಳಾಚೆಯ ದೂರದ
   ದ್ವಾಪರಯುಗದಲ್ಲಿ!

—'ಅಗ್ನಿಹಂಸ'ದಿಂದ.

ಎಂತಹ ಘೋರ ರಾತ್ರಿ! ಆದರೂ ಅದೆಂತಹ ದಿವ್ಯರಾತ್ರಿ! ಆ ಚಿರಸ್ಮರಣೀಯ ಕಾಳರಾತ್ರಿಯಲ್ಲಿಯೆ ಲೋಕಕ್ಕೊಂದು ಮಹಾಜ್ಯೋತಿ, ಉಜ್ಜ್ವಲತಮವಾದ ಪರಂಜ್ಯೋತಿ, ಅವತರಿಸಿದ್ದು. ಆ ರಾತ್ರಿ ಧನ್ಯರಾತ್ರಿ. ಆ ಒಂದು ರಾತ್ರಿಯ ದಿವ್ಯಗರ್ಭದಿಂದ ಉದ್ಭವಿಸಿದ ಬೆಳಕು ನಮ್ಮ ಭೂಮಿಯ ಬಾಳಿನ ಅದೆಷ್ಟು ಹಗಲು ಗಳಿಗೆ ಜೀವವೀಯುತ್ತಿದೆ! ಅದು ಲೋಕಕ್ಕೆ ಶ್ರೀಮದ್ ಭಗವದ್‌ಗೀತೆಯನ್ನು ಕೊಟ್ಟವನನ್ನು ಕೊಟ್ಟ ರಾತ್ರಿ! ಪೂರ್ಣಾವತಾರನೆಂದು ಸರ್ವಲೋಕ ಪೂಜ್ಯನಾಗಿರುವ ಶ್ರೀ ಕೃಷ್ಣನನ್ನು ಪಡೆದ ರಾತ್ರಿ! ಮರ್ತ್ಯದ ಪ್ರಜ್ಞೆ ಉನ್ನತತರವಾಗುವಂತೆಯೂ ವಿಸ್ತೃತತರವಾಗುವಂತೆಯೂ ಅದಕ್ಕೆ ದೈವೀಪ್ರಜ್ಞೆಯ ಸಂಸರ್ಗ ಸಂಭವಿಸುವಂತೆ ಮಾಡಿದ ರಾತ್ರಿ, ಈ ಕೃಷ್ಣಜನ್ಮಾಷ್ಟಮಿಯ ರಾತ್ರಿ! ಕ್ಲೇಶ, ಕಷ್ಟ, ಸಂಕಟ, ಕಣ್ಣೀರು, ಚಿತ್ತಕ್ಷೋಭೆ, ಧರ್ಮಗ್ಲಾನಿ—ಇವೆಲ್ಲ ನಮ್ಮ ಹೃದಯದಲ್ಲಿ ಉಲ್ಬಣಿಸಿ, ನಮ್ಮ ಜೀವ ಕಾಳರಾತ್ರಿಯ ಕಗ್ಗತ್ತಲೆಯ ಸೆರೆಯಲ್ಲಿ ಸಿಕ್ಕಿ, ವ್ಯಾಕುಲಪೂರ್ಣವಾಗಿ ಪ್ರಾರ್ಥಿಸಿ ಮೊರೆಯಿಟ್ಟಾಗಲೆ ಅಲ್ಲವೆ, ಇಂದಿಗೂ ಎಂದಿಗೂ, ಆರ್ತ ಹೃದಯದಲ್ಲಿ ಭಗವಂತನ ಆವಿರ್ಭಾವವಾಗುವುದು? ಶ್ರೀ ಕೃಷ್ಣಜನ್ಮಾಷ್ಟಮಿಯಾಗುವುದು?

ಲೋಕಲೋಕಗಳಲ್ಲಿ ಯುಗಯುಗಗಳಲ್ಲಿ ದೇಶದೇಶಗಳಲ್ಲಿ ಜನಾಂಗಜನಾಂಗಗಳಲ್ಲಿ ಪ್ರತಿ ಚೇತನ ಚೇತನದಲ್ಲಿ ಪ್ರತಿ ಕ್ಷಣ ಕ್ಷಣದಲ್ಲಿಯೂ ಸಂಭವಿಸುವ ಗ್ಲಾನಿಯ ಮಧ್ಯೆ ಆವಿರ್ಭವಿಸುವ ಭಗವದಾಶಾಕಿರಣವನ್ನೆ ಭಾಗವತದ ಪುರಾಣಕವಿ ಶ್ರೀ ಕೃಷ್ಣ ಜನನ ವೃತ್ತಾಂತದಲ್ಲಿ ಪ್ರತಿಮಾವಿಧಾನದಿಂದ ನಿರೂಪಿಸಿದ್ದಾನೆ. ಆ ಮಹಾಪ್ರತಿಮೆಯಿಂದ ಹೊಮ್ಮುವ ದರ್ಶನಧ್ವನಿಯ ನಿತ್ಯಸತ್ಯವನ್ನು ನಾವು ವರುಷ ವರುಷವೂ ಈ ಶ್ರೀ ಕೃಷ್ಣಜನ್ಮಾಷ್ಟಮಿಯ ದಿನದಂದು ಅನುಶೀಲನಮಾಡದಿದ್ದರೆ ನಮ್ಮ ಭಾಗಕ್ಕೆ ಅದು ಸ್ವಾರಸ್ಯವಾದ ಕಟ್ಟುಕತೆ ಮಾತ್ರವಾಗಿ ಉಳಿದೀತು :

ಇಲ್ಲಿ ಬಾ ಸಂಭವಿಸು ಇಂದೆನ್ನ ಹೃದಯದಲಿ,
 ನಿತ್ಯವೂ ಅವತರಿಪ ಸತ್ಯಾವತಾರ !
ಮಣ್ಣಾಗಿ ಮರವಾಗಿ ಮಿಗವಾಗಿ ಖಗವಾಗಿ
 ಭವಭವದಿ ಭವಿಸಿ, ಓ ಭವವಿದೂರ,
ಮಣ್ತನಕೆ ಮರತನಕೆ ಮಿಗತನಕೆ ಖಗತನಕೆ
 ಮುನ್ನಡೆಗೆ ಕಣ್ಣಾದ ಗುರುವೆ, ಬಾರ !
ಮೂಡಿ ಬಂದಿಂದೆನ್ನ ನರರೂಪ ಚೇತನದಿ
 ನಾರಾಯಣತ್ವಕ್ಕೆ ದಾರಿ ತೋರ !
ಅಂದು ಅರಮನೆಯಲ್ಲಿ, ಮತ್ತೆ ಸೆರೆಮನೆಯಲ್ಲಿ,
ಅಲ್ಲಿ ತುರುಪಟ್ಟಿಯಲಿ, ಇಲ್ಲಿ ಕಿರುಗುಡಿಸಲಲಿ,
ದೇಶದೇಶದಿ ವೇಷವೇಷಾಂತರವನಾಂತು
ವಿಶ್ವಸಾರಥಿಯಾಗಿ ಲೀಲಾರಥವನೆಂತು
 ಚೋದಿಸಿರುವೆಯೊ ಅಂತೆ, ಸೃಷ್ಟಿಲೋಲ,
ಅವತರಿಸು ಬಾ ಇಲ್ಲಿ ಇಂದೆನ್ನ ಚೈತ್ಯದಲಿ,
 ಹೇ ದಿವ್ಯ ಸಚ್ಚಿದಾನಂದ ಶೀಲ !*

ಎಂಬ ಜೀವಂತ ಶ್ರದ್ಧೆಯ ಅಭೀಪ್ಸೆ ಪ್ರಾರ್ಥನಾಗೋರೂಪದಿಂದ ಪುರುಷೋತ್ತಮನ ಕ್ಷೀರಸಾನ್ನಿಧ್ಯದತ್ತ ಹೊನಲ್ವರಿಯಬೇಕು. ಅದನ್ನೆ ಭಾಗವತದ ಪುರಾಣಕವಿ "ಗೌರ್ಭೂತ್ವಾ ಅಶ್ರುಮುಖೀ ಸ್ವಿನ್ನಾ ಕ್ರಂದಂತೀ ಕರುಣಂ ವಿಭೋಃ | ಉಪಸ್ಥಿತಾಂತಿಕೇ ತಸ್ಮೈ ವ್ಯಸನಂ ಸ್ವಂ ಅವೋಚತ" ಎಂದು ಆಸುರೀಶಕ್ತಿಯ ಪೀಡೆಗೆ ಸಹಿಸದ ಭೂದೇವಿ ಗೋರೂಪಧಾರಣೆ ಮಾಡಿ ವಿಧಾತನೆಡೆಗೆ ತೆರಳಿ ಮೊರೆಯಿಡುವಂತೆ ವರ್ಣಿಸಿದ್ದಾನೆ. ಆ ಮೊರೆಗೇಳಿದ ಜಗನ್ನಾಥನು ವಸುದೇವನ ಮನೆಯಲ್ಲಿ ಹುಟ್ಟಿಬರುತ್ತೇನೆಂದು ಆಶ್ವಾಸನೆ ಕೊಡುತ್ತಾನೆ.

* 'ಅಗ್ನಿಹಂಸ'ದಿಂದ.

ಆ ನಾಂದಿಯು ತರುವಾಯ ನಾಟಕ ಪ್ರಾರಂಭವಾಗುತ್ತದೆ. ಕಂಸ, ವಸುದೇವ, ದೇವಕಿ ಮೊದಲಾದವರೆಲ್ಲ ನಿಮಿತ್ತ ಮಾತ್ರ ಪಾತ್ರಗಳಾಗುತ್ತಾರೆ. ಹಾಗೆ ಯಾವುದಾದರೂ ಒಂದು ಲೌಕಿಕ ಕಾರಣವನ್ನು ಆಶ್ರಯಿಸಿದಲ್ಲದೆ ಭಗವದ್‌ವಿಭೂತಿ ಅವತರಿಸುವುದಾದರೂ ಎಂತು? ರಾವಣನೊ ಕಂಸನೊ ನೆವವಾಗುತ್ತಾರೆ. ಆದರೆ ನಿಜವಾಗಿಯೂ ರಾವಣ ಕಂಸರನ್ನು ವ್ಯಕ್ತಿಶಃ ಕೊಲ್ಲುವುದಕ್ಕೆ ಮಾತ್ರವಾಗಿಯೆ ಭಗವಂತನು ಅವತರಿಸುತ್ತಾನೆ ಎಂಬುದು ಅಯೋಗಮತಿಗಳಿಗಾಗಿ ಇರುವ ಕವಿಕಲ್ಪನೆಯಷ್ಟೆ. ಭಗವಂತ ಅವತರಿಸದಿದ್ದರೂ ಅವರು ಕಾಲಧರ್ಮದಿಂದಲೆ ಸ್ವಲ್ಪ ತಡವಾಗಿಯಾದರೂ ಸಾಯುತ್ತಿದ್ದರು. ಆದ್ದರಿಂದ ಎಷ್ಟೇ ದುಷ್ಟರಾಗಿದ್ದರೂ ಎಂತಹ ಬೃಹತ್ ಪ್ರಮಾಣದ ಕೇಡಿಗಳಾಗಿದ್ದರೂ ಕೆಲವು ವ್ಯಕ್ತಿಗಳನ್ನು ಕೊಲ್ಲುವುದಕ್ಕಾಗಿಯೆ ದೇವರು ಅವತರಿಸುತ್ತಾನೆ ಎಂಬುದು ಮನುಷ್ಯ ನ್ಯಾಯಕ್ಕೆ ಸಂಬಂಧಪಟ್ಟ 'ಅಲ್ಪ'ವಾಗುತ್ತದೆ. ಅದಕ್ಕಿಂತಲೂ 'ಭೂಮ'ವಾದ ಉದ್ದೇಶವಿರಬೇಕು ಭಗವಂತನಂತಹನ ಅವತಾರಕ್ಕೆ! ದ್ರಷ್ಟಾರರು ಹೇಳುತ್ತಾರೆ: ಸೃಷ್ಟಿಯ ಸಮಷ್ಟಿಪ್ರಜ್ಞೆಯ ಸಾಮೂಹಿಕ ವಿಕಾಸಕ್ಕಾಗಿಯೂ ಸರ್ವತೋಮುಖವಾದ ಚೈತನ್ಯೋನ್ಮೇಷನಕ್ಕಾಗಿಯೂ ನವೋನವ ಋತಶಕ್ತಿ ಪ್ರಕಾಶನಕ್ಕಾಗಿಯೂ ಭಗವದವತಾರದ ಆವಶ್ಯಕತೆ ಒದಗುತ್ತದೆ ಎಂದು. ಆದರೆ ಸೈಜವಾದ ಭಗವದುದ್ದೇಶ ಅಪ್ರಕಟವಾಗಿ ಛದ್ಮವಾಗಿ ಹಿಂದಿದ್ದುಕೊಂಡು ರಾವಣ ಕಂಸಾದಿ ಸಂಹಾರ ಕಾರಣದ ಲೌಕಿಕೋದ್ದೇಶವನ್ನೆ ಮುಂದಕ್ಕಿಟ್ಟು ತನ್ನ ಲೀಲಾ ಪ್ರಯೋಜನವನ್ನು ಸಾಧಿಸುತ್ತದೆ.

ಊರ್ಧ್ವಲೋಕಗಳಲ್ಲಿ ಪ್ರಾರಂಭವಾದ ದೇವವ್ಯೂಹ ಲೋಕಭೂಮಿಕೆಗೆ ಇಳಿದು ಮೊಳೆಯಲು ಮೊದಲಾಗುತ್ತದೆ, ಮಧುರಾಪುರಿಯಲ್ಲಿ. ದೌಷ್ಟ್ಯಪ್ರಮಾಣದಲ್ಲಿ ಇತರ ಅಂತಹ ಮಾನವರಂತೆಯೆ ಇದ್ದಿರಬಹುದಾದ ಕಂಸನ ಕೆಟ್ಟತನವನ್ನು ರಾಕ್ಷಸಪ್ರಮಾಣಕ್ಕೆ ಏರುವಂತೆ ಮಾಡುವ ಕೀಲಣೆ ಜರುಗುತ್ತದೆ: ಅಶರೀರವಾಣಿ! ಮದುಮಗಳಾದ ತಂಗಿ ತನ್ನ ಗಂಡನೊಡನೆ ತೇರೇರಿ ಮೆರವಣಿಗೆ ನಡೆಯುತ್ತಿರಲು ಸಂತೋಷಕ್ಕೂ ಅಕ್ಕರೆಗೂ ಉಕ್ಕಿ ಹಿಗ್ಗಿ ತಾನೆ ಸಾಂಥಿಯಾಗಿ ಅಶ್ವವಾಘೆಯನ್ನು ಕೈಲಾಂತು ಸಂಭ್ರಮದಿಂದ ರಥವೆಸಗುತ್ತಿದ್ದ ಕಂಸನ ಕಿವಿಗೆ ವಿಷಹೊಯ್ಯುತ್ತದೆ ಆ ಅಶರೀರವಾಣಿ: 'ಅಸ್ಯಾಸ್ತ್ವಾಮಷ್ಟಮೋ ಗರ್ಭೋ ಹಂತಾ ಯಾಂ ನಯಸೇ ಅಬುಧ!'

ಕಂಸ ನಮ್ಮ ಪುರಾಣಗಳನ್ನು ಓದಿದ್ದವನಾಗಿದ್ದರೆ ಅವನಿಗೆ ಚೆನ್ನಾಗಿ ಗೊತ್ತಾಗುತ್ತಿತ್ತು, ಈ ಅಶರೀರವಾಣಿಗಳಿಗೆ ಕಿವಿಗೊಡುವುದರಿಂದಲೆ ಕೇಡಿಗೆ ಹಾದಿ ಹಾಕಿದಂತಾಗುತ್ತದೆ ಎಂದು: ಅದು ಸೂಚಿಸುವ ಕೇಡಿನಿಂದ ಪರಿಹಾರ ಪಡೆಯಲು

ಮಾಡುವ ಪ್ರಯತ್ನವೆ ತನ್ನನ್ನು ಕೇಡಿಗೆ ತಳ್ಳುವ ಉಪಾಯವಾಗುತ್ತದೆ ಎಂದು! ಅಶರೀರವಾಣಿಯ ರೂಪದಲ್ಲಿ ಅಥವಾ ನಾರದನ ರೂಪದಲ್ಲಿ ಬರುವ ಹಿತವೇಷದ ಎಚ್ಚರಿಕೆಗಳೆಲ್ಲ ಅಹಿತ ಪರಿಣಾಮಕ್ಕೆ ನಮ್ಮನ್ನು ತಳ್ಳುವುದಕ್ಕಾಗಿಯೆ ಬರುತ್ತವೆ ಎಂದು! ರಾಹುಕಾಲವನ್ನು ತಿಳಿಸುವ ಪಂಚಾಂಗವೆ ರಾಹುನಿವಾಸ ಎಂದು! ಆಗ ಅವನು ಆ ಅಶರೀರವಾಣಿಯನ್ನು ಕೇಳಿಯೂ ಕೇಳದವನಂತೆ ಅದನ್ನು ನಿರೀಕ್ಷಿಸಿ ಆ ಶುಭದ ಮೆರವಣಿಗೆಯ ಮಂಗಳಕ್ಕೆ ಹಾನಿ ತಟ್ಟದಂತೆ ವರ್ತಿಸಿ, ತನ್ನ ಅಶುಭವನ್ನು ಪರಿಹರಿಸಿಕೊಳ್ಳುತ್ತಿದ್ದನೆಂದು ತೋರುತ್ತದೆ. ಆದರೆ ಆ ವಿಚಾರದಲ್ಲಿ ತುಂಬ ಆಸ್ತಿಕನಾಗಿದ್ದ ಅವನು ಶ್ರದ್ಧೆಯಿಂದ ವರ್ತಿಸಿ ತನ್ನಲ್ಲಿ ಅಂತರ್ಗತವಾಗಿದ್ದ ಅಸುರತ್ವ ಸುಪ್ರಕಟವಾಗುವಂತೆ ವರ್ತಿಸುತ್ತಾನೆ.

ತಂಗಿಯ ಎಂಟನೆಯ ಗರ್ಭದಲ್ಲಿ ಹುಟ್ಟುವವನಿಂದ ತನಗೆ ಮರಣ ನಿಜವಾದರೆ ಅವಳನ್ನೆ ಕೊಂದುಬಿಟ್ಟರೆ ಮರಣಕಾರಣದ ಮೂಲವನ್ನೆ ಪರಿಹರಿಸಿದಂತಾಗುವುದಿಲ್ಲವೆ? ಆದರೆ ವಿಧಿ ಅವಿವೇಕದ ಹೃದಯದಲ್ಲಿಯೆ ಅದರ ನಿರ್ಮೂಲನಕ್ಕೆ ಕಾರಣವಾಗುವ ಒಂದು ವಿವೇಕಾಂಶವನ್ನೂ ಇಟ್ಟಿ ಇರುತ್ತದೆ. ಕಂಸನಲ್ಲಿದ್ದ ಆ ಅಂಶದ ಸಹಾಯದಿಂದ ವಸುದೇವ ತನ್ನ ಹೆಂಡತಿಯ ಕೊಲೆಯನ್ನು ತಡೆಯುತ್ತಾನೆ. 'ನಿನ್ನ ತಂಗಿಯನ್ನೇಕೆ ಕೊಲ್ಲುವೆ? ಆಕೆಗೆ ಹುಟ್ಟುವ ಮಕ್ಕಳೆಲ್ಲವನ್ನೂ ಕೂಡಲೆ ನಿನಗೆ ತಂದೊಪ್ಪಿಸುತ್ತೇನೆ.'

ದೇವಕಿಗೆ ಹುಟ್ಟಿದ ಮೊದಲನೆಯ ಮಗುವನ್ನು ವಸುದೇವನು ತಂದೊಪ್ಪಿಸಿದಾಗ ಕೀರ್ತಿಮಂತ ಎಂಬ ಆ ಕುಮಾರನನ್ನು ಕಂಸ ಕೊಲ್ಲಲಿಲ್ಲ. "ಎಂಟನೆಯ ಗರ್ಭದಿಂದ ನನಗೆ ಮರಣವಾಗುವುದು ಎಂದು ನಿಶ್ಚಯವಾಗಿರುವ ಕಾರಣ ಇವನಿಂದ ನನಗೇನೂ ಭಯವಿಲ್ಲ. ಈ ಬಾಲಕ ಮನೆಗೆ ಹೋಗಲಿ" ಎಂದನಂತೆ. ಆದರೆ ವಿಧಿಯ ವ್ಯೂಹಕ್ಕೆ ಕಂಸನ ಸೌಜನ್ಯದಿಂದ ಭಂಗವೊದಗುತ್ತಿತ್ತೊ ಏನೊ. ಆದ್ದರಿಂದ ಹಿಂದೆ ಅಶರೀರವಾಣಿಯನ್ನು ಒಡ್ಡಿದ ಶಕ್ತಿ ಈಗ ನಾರದನನ್ನು ಕಳಿಸುತ್ತದೆ. ಆ ದೇವರ್ಷಿಯ ಮಾತಿಗೆ ಕಿವಿಗೊಟ್ಟು ಭೀತನೂ ದಿಗ್‌ಭ್ರಾಂತನೂ ಆಗಿ ವಸುದೇವ ದೇವಕಿಯರನ್ನು ಸಂಕಲೆಗಳಿಂದ ಬಂಧಿಸಿ ಸೆರೆಮನೆಯಲ್ಲಿಡಿಸುತ್ತಾನೆ ಕಂಸ.

ಅಲ್ಲಿ ಸಂಭವಿಸುತ್ತದೆ ಜಗನ್ನಾಥನ ಪೂರ್ಣಾವತಾರ.

ಆ ಭಯಂಕರ ಸೆರೆಮನೆಯಲ್ಲಿ ನಿತ್ಯವೂ ಜಗದ್ರಕ್ಷಕನಾದ ಭಗವಂತನನ್ನು ನೆನೆಯುತ್ತಾ ಪ್ರಾರ್ಥಿಸುತ್ತಾ ವಸುದೇವನು ಅನನ್ಯ ಶರಣನಾಗಿರುತ್ತಿರಲು, ಆರ್ತನ ಆ ಪ್ರಾರ್ಥನಾರೂಪವಾದ ತಪಸ್ಸೇತುವಿನಿಂದಲೆ ಆಕರ್ಷಿತನಾಗಿ ಭಗವಂತನು ತನ್ನ ಪರಿಪೂರ್ಣ ರೂಪದಿಂದ ಭೂಸಂಕಟ ನಿವಾರಣಕ್ಕಾಗಿ ವಸುದೇವನ

ಚಿತ್ಕಮಲಕ್ಕೆ ಇಳಿಯುತ್ತಾನೆ. ತರುವಾಯ ವಸುದೇವನ ಮನಸ್ಸಿನಿಂದ ಆ ಅಚ್ಯುತಾಂಶ ದೇವಕೀದೇವಿಯ ಶ್ರೀ ಮನಸ್ಸನ್ನು ಪ್ರವೇಶಿಸುತ್ತದೆ:

ಭಗವಾನಪಿ ವಿಶ್ವಾತ್ಮಾ ಭಕ್ತಾನಾಮಭಯಂಕರಃ |
ಆವಿವೇಶಾಂಶಭಾಗೇನ ಮನ ಆನಕದುಂದುಭೇಃ ||
ತತೋ ಜಗನ್ಮಂಗಳಮಚ್ಯುತಾಂಶಂ
ಸಮಾಹಿತಂ ಶೂರಸುತೇನ ದೇವೀ |
ದಧಾರ ಸರ್ವಾತ್ಮಕಮಾತ್ಮಭೂತಂ
ಕಾಷ್ಠಾ ಯಥಾನಂದಕರಂ ಮನಸ್ತಃ ||

ಇತ್ತ ಕಂಸನು ತನ್ನನ್ನು ಕೊಲ್ಲುವುದಕ್ಕಾಗಿಯೆ ಹುಟ್ಟಲಿರುವ ಮಹಾವಿಷ್ಣುವನ್ನು ವೈರಬುದ್ಧಿಯಿಂದ ಹಗಲಿರುಳೂ ನೆನೆಯುತ್ತಾ ವೈರಭಾವ ಸಾಧಕನಾಗಿರಲು, ಅವನಿಗೆ ಜಗತ್ತೆಲ್ಲ ವಿಷ್ಣುಮಯವಾಗಿ ತೋರತೊಡಗಿತು. ಸಾಧನೆ ಅಷ್ಟು ಮುಂದುವರಿದ ಮೇಲೆ ಸಿದ್ಧಿ ಬಹುದೂರವಿರುವುದಿಲ್ಲ.

ಭಗವಂತನ ಅವತರಣ ನಿರೂಪಣೆಯಲ್ಲಿ ಭಾಗವತದ ಕವಿ ಕಾವ್ಯದ ಸೂಚನೆಯ ಅಥವಾ ಧ್ವನಿಯ ಮಾರ್ಗವನ್ನು ಅವಲಂಬಿಸದೆ ಪುರಾಣದ ನೇರವಾದ ಪ್ರಕಟ ಮಾರ್ಗವನ್ನೆ ಹಿಡಿದಿದ್ದಾನೆ. ಸ್ವಲ್ಪ ಹೆಚ್ಚು ಕಡಮೆ ಆ ವಿಚಾರ ಗೊತ್ತಾಗ ಬೇಕಾಗಿದ್ದ ಮುಖ್ಯರಿಗೆಲ್ಲ ಗೊತ್ತಾಗಿರುತ್ತದೆ. ಬ್ರಹ್ಮರುದ್ರಾದಿ ದೇವತೆಗಳೂ ನಾರದಾದಿಮುನಿಗಳೂ ದೇವಕೀ ಗರ್ಭಸ್ಥನಾದ ಪರಮಾತ್ಮನನ್ನು ದೀರ್ಘವಾಗಿ ತಾತ್ತ್ವಿಕವಾದ ಮಾತುಗಳಿಂದ ನುತಿಸುವುದಿರಲಿ; ವಸುದೇವನು ಕೂಡ ಶಂಖಚಕ್ರ ಗದಾಧಾರಿಯಾಗಿ ಶ್ರೀವತ್ಸಲಾಂಛನನಾಗಿ ಕೌಸ್ತುಭರತ್ನಶೋಭಿತನಾಗಿ ದಿವ್ಯ ಪೀತಾಂಬರಾಲಂಕೃತನಾಗಿ ತನ್ನ ನಿಜರೂಪದಿಂದಲೆ ದೇವಕೀ ದೇವಿಯಲ್ಲಿ ಹುಟ್ಟಿದ ಅದ್ಭುತ ಶಿಶುವನ್ನು ಬೆರಗುಬಡಿದ್ದು ನೋಡುತ್ತಾನೆ; ಪ್ರೌಢವಾದ ತತ್ತ್ವಪ್ರಬಂಧವೂ ನಾಚಿ ತಲೆ ತಗ್ಗಿಸುವಂತೆ ಸುದೀರ್ಘವಾಗಿ ಸ್ತೋತ್ರಗೈಯುತ್ತಾನೆ.[1]

---

[1] ತಮದ್ಭುತಂ ಬಾಲಕಮಂಬುಜೇಕ್ಷಣಂ
ಚತುರ್ಭುಜಂ ಶಂಖಗದಾದ್ಯುದಾಯುಧಂ
ಶ್ರೀವತ್ಸಲಕ್ಷ್ಮಂ ಗಳಶೋಭಿ ಕೌಸ್ತುಭಂ
ಪೀತಾಂಬರಂ ಸಾಂದ್ರಪಯೋದ ಸೌಭಗಂ.
ಮಹಾರ್ಹ ವೈಡೂರ್ಯ ಕಿರೀಟ ಕುಂಡಲ-
ತ್ವಿಷಾ ಪರಿಷ್ವಕ್ತ ಸಹಸ್ರಕುಂತಲಂ
ಉದ್ದಾಮ ಕಾಂಚ್ಯಂಗದ ಕಂಕಣಾದಿಭಿ-
ರ್ವಿರೋಚಮಾನಂ ವಸುದೇವ ಐಕ್ಷತ!

ಭಗವಂತನು ತನ್ನ ತಾಯಿಯಾದ ದೇವಕಿಯು ಕಣ್ಣಿಗೂ ತಂದೆಗೆ ಕಂಡಂತೆಯೆ ನಿಜರೂಪದಿಂದಲೆ ಕಾಣುತ್ತಾನೆ. ಆಕೆಯೂ ಆತನನ್ನು ಸ್ತುತಿಸಿ ನಿಜರೂಪವನ್ನು ಮರೆಮಾಡಿಕೊಳ್ಳುವಂತೆ ಬೇಡಿಕೊಳ್ಳುತ್ತಾಳೆ. 'ಎಲ್ಲವನ್ನೂ ಹೊಟ್ಟೆಯಲ್ಲಿಟ್ಟು ಕೊಂಡಿರುವ ನೀನು ನನ್ನ ಹೊಟ್ಟೆಯಲ್ಲಿ ಹುಟ್ಟಿಬಂದೆ ಎಂದರೆ ಲೋಕ ನಂಬುವುದೇ ? ಸರ್ವೇಶ್ವರನಾದ ನೀನು ಮಾನುಷಿಯಾದ ನನ್ನ ಜಠರದಲ್ಲಿ ಜನಿಸಿದೆ ಎಂದರೆ ಲೋಕ ನಗುವುದಿಲ್ಲವೇ ?'[1]

ಆಗ ಭಗವಂತನು ತಾಯಿಗೆ ಧೈರ್ಯ ಹೇಳುತ್ತಾನೆ. ತನ್ನನ್ನು ಗೋಕುಲಕ್ಕೆ ಕರೆದುಕೊಂಡು ಹೋಗುವಂತೆ ತಂದೆಗೆ ಆದೇಶವೀಯುತ್ತಾನೆ. ಇಷ್ಟೆಲ್ಲ ಸ್ಪಷ್ಟವಾಗಿ ನಡೆದ ತರುವಾಯವೆ ಅವನು 'ಪ್ರಾಕೃತಶಿಶು'ವಾಗಿ ಲೋಕಲೀಲಾನಿಯಮಗಳಿಗೆ ಅಧೀನನಾಗುತ್ತಾನೆ.

ಪ್ರಾಕೃತಶಿಶುವಾಗಿಯೆ ಮೊದಲಿನಿಂದಲೂ ತೋರದೆ ನಿಜರೂಪದಿಂದ ತೋರಿದುದಕ್ಕೆ ಕಾರಣವನ್ನು ಹೇಳುತ್ತಾ ಭಗವಂತನು ವಸುದೇವ ದೇವಕಿಯರ ಸ್ವಾಯಂಭುವ ಮನ್ವಂತರದ ಪೂರ್ವಜನ್ಮ ವೃತ್ತಾಂತವನ್ನು ತಿಳಿಸುತ್ತಾನೆ. ಅಂದು 'ನಿನ್ನಂತಹ ಪುತ್ರನಾಗಬೇಕು' ಎಂದು ಅವರು ಬೇಡಿದ ವರದಂತೆ ಇಂದು ಅವರಿಗೆ ಮಗನಾಗಿ ಬಂದಿದ್ದಾನೆ. ಅದರ ನೆನಪಿಗಾಗಿಯೆ ತನ್ನ ನೈಜವಾದ ದಿವ್ಯರೂಪವನ್ನು ಅವರಿಗೆ ತೋರಿಸಿದ್ದಾನೆ; ಇಲ್ಲವಾದರೆ ಮನುಷ್ಯಜನ್ಮದಲ್ಲಿ ಮನುಷ್ಯತನುವನ್ನು ಆಶ್ರಯಿಸಿದ ಭಗವಂತನನ್ನು ತಿಳಿಯಲಾಗುವುದೆಂತು ?

ಏತದ್ ವಾಂ ದರ್ಶಿತಂ ರೂಪಂ ಪ್ರಾಗ್ ಜನ್ಮ ಸ್ಮರಣಾಯ ಮೇ |
ನಾನ್ಯಥಾ ಮದ್‌ಭವಂ ಜ್ಞಾನಂ ಮರ್ತ್ಯಲಿಂಗೇನ ಜಾಯತೇ ||

ಭಗವದಾಜ್ಞೆಯಂತೆ ವಸುದೇವನು ದಿವ್ಯಶಿಶುವನ್ನೆತ್ತಿಕೊಂಡು ಹೊರಟನು. 'ಹೊರಗಡೆ ಕತ್ತಲೆ, ಬಿರುಮಳೆ, ಗಾಳಿ ; ಕುಣಿದಳು ಇರುಳಿನ ಕಾಳಿ, ಕರಾಳಿ !' ಆ

---

[1] ರೂಪಂ ಚೇದಂ ಪೌರುಷಂ ಧ್ಯಾನಧಿಷ್ಣ್ಯಂ |
ಮಾ ಪ್ರತ್ಯಕ್ಷಂ ಮಾಂಸದೃಶಾಂ ಕೃಷೀಷ್ಠಾಃ ||
ಉಪಸಂಹರ ವಿಶ್ವಾತ್ಮನ್ನದೋ ರೂಪಮಲೌಕಿಕಂ |
ಶಂಖಚಕ್ರಗದಾಪದ್ಮಶ್ರಿಯಾ ಜುಷ್ಟಂ ಚತುರ್ಭುಜಂ ||
ವಿಶ್ವಂ ಯದೇತತ್ ಸ್ವತನೌ ನಿಶಾಂತೇ
ಯಥಾವಕಾಶಂ ಪುರುಷಃ ಪರೋ ಭವಾನ್
ಬಿಭರ್ತಿ ಸೋಽಯಂ ಮಮ ಗರ್ಭಗೋಽಭೂದ್
ಅಹೋ ನೃಲೋಕಸ್ಯ ವಿಡಂಬನಂ ಮಹತ್ !

ಗುಡುಗು, ಮಿಂಚು, ಸಿಡಿಲು, ಮಳೆ, ಗಾಳಿಗಳ ರೌದ್ರರಭಸವೆ ಜನಸಂಚಾರಕ್ಕೆ ಒಂದಿನಿತೂ ಅವಕಾಶವಿಲ್ಲದಂತೆ ಮಾಡಿತ್ತು. ಕಾವಲುಗಾರರು ಮೃತಪ್ರಾಯರೆಂಬಂತೆ ನಿದ್ರಾಮಗ್ನರಾಗಿದ್ದರು. ಕಬ್ಬಿಣದ ಲಾಳವಿಂಡಿಗೆಗಳಿಂದ ಸುಭದ್ರವಾಗಿದ್ದ ಸೆರೆ ಮನೆಯ ಭೀಮಾಕಾರದ ದ್ವಾರಗಳು ಒಂದಾದ ಮೇಲೊಂದರಂತೆ ತಮಗೆ ತಾವೆ ತೆರೆದುಕೊಂಡುವು. ಆದಿಶೇಷನೆ ತನ್ನ ಸಾವಿರ ಹೆಡೆಯ ಕೊಡೆಬಿಚ್ಚಿ ಊಳಿಗವೆಸಗಿ ಹಿಂಬಾಲಿಸಿದನು.

ಮಘೋನಿ ವರ್ಷತ್ಯಸಕೃದ್ಯಮಾನುಜಾ
ಗಂಭೀರ ತೋಯೌಘ ಜವೋರ್ಮಿ ಫೇನಿಲಾ |
ಭಯಾನಕಾವರ್ತಶತಾಕುಲಾ ನದೀ
ಮಾರ್ಗಂ ದದೌ ಸಿಂಧುರಿವ ಶ್ರಿಯಃ ಪತೇಃ ||

ಎಡೆಬಿಡದೆ ಸುರಿವ ಕಾರ್ಮಳೆಗೆ ತುಂಬಿ, ಉಕ್ಕಿ, ಭೋರ್ಗರೆದು, ನೊರೆಯೆದ್ದು ಸುತ್ತುವ ಸುಳಿಗಳಿಂದ ಭೀಕರವಾಗಿ ಹರಿಯುತ್ತಿದ್ದ ಯಮಾನುಜೆ ಯಮುನೆ, ಹಿಂದೆ ಶ್ರೀರಾಮನಿಗೆ ಹೆಗ್ಗಡಲು ಹಿಂಜರಿದಂತೆ, ಹೆದರಿ ದಾರಿಬಿಟ್ಟಳು! ಅಂತೂ ಕಡೆಗೆ ಈ ಶ್ರಾವಣ ಅಷ್ಟಮಿಯ ನಿಶಿಯಲ್ಲಿ ವಸುದೇವ ದೇವಕಿಯರ ಕಂದನು ಗೋಕುಲದಲ್ಲಿ ನಂದ ಯಶೋದೆಯರ ನಂದನನಾಗಿ ಮೆರೆಯತೊಡಗುತ್ತಾನೆ. ಪೃಥ್ವಿಯ ಶ್ರೇಯಸ್ಸಿಗಾಗಿ ಜಗದ್ರಕ್ಷಕನನ್ನೇ ರಕ್ಷಿಸಿದ ಆ ವಸುದೇವನಿಗೆ ನಾವೆಲ್ಲ ಇಂದು ಎಷ್ಟು ಕೃತಜ್ಞರಾದರೂ ಚಿರಂತನ ಋಣಿಗಳಾಗಿಯೆ ಉಳಿಯಬೇಕಾಗುತ್ತದೆ!

ಗೋಕುಲದಿಂದ ಹಿಂತಿರುಗಿದ ವಸುದೇವನು ತಂದ ಯಶೋದೆಯ ಹೆಣ್ಣು ಮಗುವನ್ನು ದೇವಕಿಯ ಎಂಟನೆಯ ಮಗುವೆಂದೆ ಭ್ರಮಿಸಿ, ಅದನ್ನು ಶಿಲೆಗೆ ಅಪ್ಪಳಿಸಿ ಕೊಲ್ಲುವ ಕಾರ್ಯದಲ್ಲಿ ವಿಫಲನಾದ ಕಂಸನು ಪಶ್ಚಾತ್ತಾಪದಿಂದ ತಂಗಿ ಬಾವಂದಿರ ಕ್ಷಮೆಯನ್ನು ಯಾಚಿಸಿ 'ದೈವಮಪ್ಯನೃತಂ ವಕ್ತಿ ನ ಮರ್ತ್ಯಾ ಏವ ಕೇವಲಂ' 'ದೈವವೂ ಸುಳ್ಳಾಡುತ್ತದೆ, ಮನುಷ್ಯರು ಮಾತ್ರವೇ ಅಲ್ಲ!' ಎಂದು ತನ್ನನ್ನು ಮೂದಲಿಸಿದ ದೈವವನ್ನೆ ಮೂದಲಿಸುತ್ತಾನೆ.

ಆದರೆ ದೈವ ಸುಳ್ಳಾಡುವುದಿಲ್ಲ ಎಂಬುದು ಅವನಿಗೆ ಮುಂದೆ ಗೊತ್ತಾಗಿಯೆ ಆಗುತ್ತದೆ!

ಶ್ರೀ ಕೃಷ್ಣನು ಜನ್ಮವೆತ್ತಿದ ಈ ರಾತ್ರಿ ಸರ್ವಲೋಕ ಪೂಜ್ಯವಾದ ಪವಿತ್ರ ರಾತ್ರಿ. ಆ ಮತ ಈ ಮತ, ಆ ಧರ್ಮ ಈ ಧರ್ಮ, ಆ ದೇಶ ಈ ದೇಶ, ಆ ಜನಾಂಗ ಈ ಜನಾಂಗ ಎನ್ನದೆ ಎಲ್ಲರಿಂದಲೂ ಎಲ್ಲ ಕಾಲಕ್ಕೂ ಗೌರವಕ್ಕೆ ಪಾತ್ರವಾಗಿರುವ 'ಭಗವದ್ಗೀತೆ'ಗೆ ಅಂಕುರಾರ್ಪಣೆಯಾದ ದಿವ್ಯರಾತ್ರಿ. ಏಕೆಂದರೆ ಶ್ರೀಮದ್ ಭಗವದ್

ಗೀತೆ ಶ್ರೀ ಕೃಷ್ಣನ ವಾಕ್‌ಕೃತಿರೂಪದ ಅವತಾರವಾಗಿದ್ದರೆ ಶ್ರೀ ಕೃಷ್ಣ ಶ್ರೀಮದ್ ಭಗವದ್‌ಗೀತೆಯ ಪುರುಷೋತ್ತಮರೂಪದ ಅವತಾರವಾಗಿದ್ದಾನೆ. ಭಗವದ್‌ಗೀತೆಯಲ್ಲಿ ಪ್ರಣೀತವಾದ ಪೂರ್ಣದೃಷ್ಟಿಯ ಪೂರ್ಣದರ್ಶನಕ್ಕೆ ತನ್ನ ಸಮಗ್ರಜೀವನವನ್ನೆ ನಿದರ್ಶನವನ್ನಾಗಿ ಒಡ್ಡಿದ್ದಾನೆ ಶ್ರೀ ಕೃಷ್ಣ. ಶ್ರೀಮದ್ ಭಗವದ್ಗೀತೆ ಶ್ರೀ ಕೃಷ್ಣನ ವಾಙ್ಮಯ ಶರೀರ; ಶ್ರೀ ಕೃಷ್ಣ ಶ್ರೀಮದ್ ಭಗವದ್ಗೀತೆಯ ಚಿನ್ಮಯ ಕಳೇವರ! ಸಮನ್ವಯ, ಸರ್ವೋದಯ ಮತ್ತು ಪೂರ್ಣದೃಷ್ಟಿ—ಈ ತತ್ತ್ವಗಳು ನಮ್ಮ ಲೋಕದ ಭವಿತವ್ಯದ ಬಾಳಿಗೆ ಮಾರ್ಗದರ್ಶಕ ದೀಪಗಳಾಗಬೇಕಾದರೆ ಭಗವದ್ಗೀತೆಯ ವ್ಯೋಮವಿಶಾಲವಕ್ಷವನ್ನು ಆಶ್ರಯಿಸಿದಲ್ಲದೆ ಗತ್ಯಂತರವಿಲ್ಲ. ದ್ವಾಪರಯುಗದ ಗರ್ಭದಿಂದ ಹೊಮ್ಮಿ ಕಲಿಯುಗದ ಹೃತ್‌ಕೇಂದ್ರಕ್ಕೆ ದುಮುಕುತ್ತಿರುವ ಆ ಕ್ಷೀರಜಲಪಾತದ ಪಾಂಚಜನ್ಯಘೋಷ ನಮ್ಮೆಲ್ಲರ ಪ್ರಾಣಗಳಲ್ಲಿ ಪ್ರತಿಸ್ಪಂದಿಸಿ ಅನುರಣಿತವಾಗಲಿ!

ಅನನ್ಯಾಶ್ಚಿಂತಯಂತೋ ಮಾಂ ಯೇ ಜನಾಃ ಪರ್ಯುಪಾಸತೇ |
ತೇಷಾಂ ನಿತ್ಯಾಭಿಯುಕ್ತಾನಾಂ ಯೋಗಕ್ಷೇಮಂ ವಹಾಮ್ಯಹಂ ||
ಯತ್ಕರೋಷಿ ಯದಶ್ನಾಸಿ ಯಜ್ಜುಹೋಷಿ ದದಾಸಿ ಯತ್ |
ಯತ್ತಪಸ್ಯಸಿ ಕೌಂತೇಯ ತತ್‌ಕುರುಷ್ವ ಮದರ್ಪಣಮ್ ||
ಮನ್ಮನಾ ಭವ ಮದ್‌ಭಕ್ತೋ ಮದ್ಯಾಜೀ ಮಾಂ ನಮಸ್ಕುರು |
ಮಾಮೇವೈಷ್ಯಸಿ ಸತ್ಯಂ ತೇ ಪ್ರತಿಜಾನೇ ಪ್ರಿಯೋಸಿ ಮೇ ||
ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ |
ಅಹಂ ತ್ವಾಂ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾ ಶುಚಃ ||

ಓಂ ಶಾಂತಿಃ

—ಕುವೆಂಪು

ಭಾಷೆ: ಲೋಕೋಪಯೋಗಿ ಮತ್ತು ಭಾವೋಪಯೋಗಿ

ಅರ್ಥಃ ಸಹೃದಯ ಶ್ಲಾಘ್ಯಃ ಕಾವ್ಯಾತ್ಮಾ ಯೋ ವ್ಯವಸ್ಥಿತಃ |
ವಾಚ್ಯ ಪ್ರತೀಯಮಾನಾಖ್ಯೌ ತಸ್ಯ ಭೇದಾವುಭೌ ಸ್ಮೃತೌ ||

—ಧ್ವನ್ಯಾಲೋಕ.

A statement may be used for the sake of the *reference*, true or false, which it causes. This is the *scientific* use of language. But it may also be used for the sake of the effects in emotion and attitude produced by the reference it occassions. This is the *emotive* use of language.

—I. A. RICHARDS.

ಭಾಷೆಯ ಬೇರೆ ಬೇರೆಯ ಉಪಯೋಗಗಳನ್ನೂ ಪ್ರಯೋಜನಗಳನ್ನೂ ಗುರುತಿಸದೆ ಲೆಕ್ಕಿಸದೆ ಕಾವ್ಯದ ಅಥವಾ ಶಾಸ್ತ್ರದ ಬರವಣಿಗೆಗಳನ್ನು ಓದತೊಡಗಿದರೆ ಸ್ವಲ್ಪ ದೂರ ಮುಂದುವರಿಯುವುದರೊಳಗಾಗಿ ನಾವು ಭಾವದ ಅಥವಾ ಬುದ್ಧಿಯ ತೊಡಕುಗಳಿಗೆ ಅನಿವಾರ್ಯವಾಗಿ ಒಳಗಾಗಬೇಕಾಗುತ್ತದೆ. ಶಾಸ್ತ್ರಕ್ಷೇತ್ರದಲ್ಲಿ ಪದ, ಪದಪುಂಜ ಮತ್ತು ವಾಕ್ಯಗಳಿಗಿರುವ ವ್ಯಾಪಾರ ವ್ಯಾಪ್ತಿಗಳನ್ನು ಕಾವ್ಯಕ್ಷೇತ್ರಕ್ಕೂ ವಿಸ್ತರಿಸಿ, ಒಂದನ್ನು ಮತ್ತೊಂದರಿಂದ ಅಳೆದು ತೂಗಿ, ಒಂದರ ಉದ್ದೇಶವನ್ನು ಮತ್ತೊಂದರಲ್ಲಿ ಕಾಣಬಯಸಿ, ಆ ಎರಡರ ನಿಜವಾದ ಪ್ರಯೋಜನದಿಂದಲೂ ವಂಚಿತರಾಗುತ್ತೇವೆ.

ಒಂದು ಉದಾಹರಣೆ. ಕುಮಾರವ್ಯಾಸ ಭಾರತದ ಕರ್ಣಪರ್ವದ ಮೊದಲನೆಯ ಸಂಧಿಯ ಪ್ರಾರಂಭದಲ್ಲಿ ಕುರುಕ್ಷೇತ್ರದ ಕೌರವರಣದ ಸರ್ವಸೇನಾನಿಯಾಗಿದ್ದ ಆಚಾರ್ಯ ದ್ರೋಣನು ಮಡಿದ ರುದ್ರವಾರ್ತೆಯನ್ನು ಸಂಜಯ ಧೃತರಾಷ್ಟ್ರನಿಗೆ ತಿಳಿಸುತ್ತಾನೆ. ಅಲ್ಲಿ ಕವಿವಕ್ರೋಕ್ತಿ ಹೀಗಿದೆ:

ಕೋಲಗುರುವಿನ ಮರಣವಾರ್ತಾಕಾಲಸರ್ಪನ ತಂದು ಸಂಜಯ
ಹೇಳಿಗೆಯನೀಡಾಡಿದನು ಧೃತರಾಷ್ಟ್ರನಿದಿರಿನಲಿ.

ಭಯಂಕರವಾದ ಆ ಸುದ್ದಿಯನ್ನು ಕೇಳಿ ಆಸ್ಥಾನದವರಿಗೂ ಧೃತರಾಷ್ಟ್ರನಿಗೂ ಇತರರಿಗೂ ಏನಾಯಿತೆಂಬುದನ್ನು ಕವಿವಾಣಿ ಹೀಗೆ ವರ್ಣಿಸುತ್ತದೆ:

ಬೆದಱಿತಾ ಆಸ್ಥಾನ. ಧಿಗಿಲೆಂದುದು ಧರಾಧೀಶ್ವರನ ತಂದೆಯ
ಹೃದಯದಲಿ. ಹುರುಳೇನು ಬಳಿಕುಳಿದವರ ಮೋಱೆಗಳ ?
ಕದಡಿತಂತಃಕರಣ. ಅರಸನ ಕದಪು ಕೈಯಲಿ ಕೀಲಿಸಿತು. ಹೇ
ಳಿದನು ಸಂಜಯ ಮತ್ತೆ ಮೇಲಣ ರಣದ ವಾರ್ತೆಯನು.
ಗುಡಿಯ ಕಟ್ಟಿಸು ಜೀಯ. ಬಱಿತುದು ಕಡಲು ; ಮುಱಿದುದು ಮೇರು ; ತಿರುಗಿತು
ಪೊಡವಿ ; ಬಿದ್ದುದು ಭಾನುಮಂಡಲವಹಹ ವಿತಳದಲಿ !
ಮಡಿದುದೈ ನಿನ್ನಾನೆ. ನಿನ್ನುಗ್ಗಡದ ಭಟ ಬೀಳ್ಕೊಂಡನೈ ; ಕಡಿ
ವಡೆದನೈ ! ಕಲಿ ಕರ್ಣನೊಸಗೆಯ ಮಾಡಹೇಳೆಂದ.

ಲೋಕವ್ಯಾಪಾರದ ರೀತಿಯಲ್ಲಿ ಆ ವಾರ್ತೆಯನ್ನು ತಿಳಿಸುವುದಾಗಿದ್ದರೆ ಸಂಜಯ ಧೃತರಾಷ್ಟ್ರನ ಮುಂದೆ ಕೈಮುಗಿದು ನಿಂತು 'ಸ್ವಾಮಿ, ದ್ರೋಣಾಚಾರ್ಯರು ತೀರಿಕೊಂಡರು' ಎಂದಿದ್ದರೆ ಸಾಕಿತ್ತು. ನಡೆದ ವಿಷಯ ಏನು ಎಂಬುದು ಧೃತರಾಷ್ಟ್ರನಿಗೆ ಗೊತ್ತಾಗುತ್ತಿತ್ತು. ಆದರೆ ಕುಮಾರವ್ಯಾಸನ ಸಂಜಯ ಮಾಡಿದ್ದೇನು ? ನ್ಯಾಯವಾಗಿ 'ಹೇಳಿದ್ದೇನು ?' ಎಂದು ಪ್ರಶ್ನೆ ಹಾಕಬೇಕಿತ್ತು. ಆದರೆ ಕುಮಾರವ್ಯಾಸನ ಸಂಜಯ ಏನನ್ನೊ ಹೇಳಿದಂತೆ ವರ್ಣಿತವಾಗಿಲ್ಲ. ಇನ್ನೇನನ್ನೊ ಮಾಡಿದಂತೆ ವರ್ಣಿತವಾಗಿದೆ: 'ಮರಣವಾರ್ತಾ ಕಾಲಸರ್ಪವನ್ನು ತಂದು ಅದನ್ನು ಇಟ್ಟಿದ್ದ ಬುಟ್ಟಿಯ ಬಾಯಿ ತೆರೆದುಬೀಳುವಂತೆ ಧೃತರಾಷ್ಟ್ರನ ಮುಂದೆ ಬೀಸಾಡಿಬಿಟ್ಟನು.' ಭಾಷೆಗೆ ನಿಷ್ಕೃಷ್ಟವಾದ ಶಾಸ್ತ್ರವ್ಯಾಪಾರವನ್ನು ಆರೋಪಿಸುವ ಲೋಕಸಂವಾದಾಪೇಕ್ಷಿಯಾದ ಬುದ್ಧಿ 'ಇಲ್ಲಿ ಸರ್ಪ ಎಲ್ಲಿಂದ ಬಂತು ? ಬುಟ್ಟಿ ಏನು ? ಹಾವನ್ನು ತಂದು ದೊರೆಯ ಎದುರಿಗೆ ಎಸೆದಿದ್ದೇಕೆ ? ಸಂಜಯನಿಗೇನು ಹುಚ್ಚು ? ಅಥವಾ ಕವಿಗೋ !' ಎಂದು ಅಂತಹ ಅಪ್ರಸಂಗ ಅಧಿಕಪ್ರಸಂಗ ಮಿಥ್ಯಾಪ್ರಸಂಗಗಳನ್ನು ತಿರಸ್ಕರಿಸುತ್ತದೆ.

ಆದರೆ ಮುಂದಿನ ಪದ್ಯದಲ್ಲಿ ಆ ಸುದ್ದಿ ಯಾರು ಯಾರಮೇಲೆ ಏನೇನು ಪರಿಣಾಮ ಉಂಟುಮಾಡಿತು ಎಂದು ಹೇಳುವಾಗ ಅಲ್ಲಿ ಕವಿವರ್ಣನೆಯಲ್ಲಿ ಲೋಕಸಂವಾದವಿರುವುದರಿಂದ ಸತ್ಯವೆಂದು ಒಪ್ಪುತ್ತೇವೆ. ಆಸ್ಥಾನ ಬೆದರಿತು, ಧೃತರಾಷ್ಟ್ರನ ಎದೆ ದಿಗಿಲೆಂದಿತು, ಇತ್ಯಾದಿಯಾಗಿ. ಬಹುಶಃ ಇಲ್ಲಿಯೂ ಆ ಲೋಕನಿಷ್ಠೆಯ ನಿಷ್ಕೃಷ್ಟ ಬುದ್ಧಿ 'ಆಸ್ಥಾನ ಬೆದರಿತು ಎಂದರೆ ಏನರ್ಥ ? ಆಸ್ಥಾನಕ್ಕೇನು ಜೀವವಿದೆಯೆ ? ಆಸ್ಥಾನದಲ್ಲಿದ್ದ ಜನರು ಎಂದು ಹೇಳಬೇಕು' ಎಂದೆಲ್ಲ ಕೊಂಕುಮಾತೆತ್ತಬಹುದಿತ್ತು ! ಸದ್ಯಕ್ಕಿರಲಿ.

ಮುಂದೆ ಸಂಜಯ ಮತ್ತೂ ಹೇಳುತ್ತಾನೆ: 'ಬಱಿತುದು ಕಡಲು: ಮುಱಿದುದು ಮೇರು! ಬಿದ್ದುದು ಭಾನುಮಂಡಳವಹಹ ವಿತಳದಲಿ' ಇತ್ಯಾದಿಯಾಗಿ. ಅದನ್ನಾಲಿಸಿ

ಲೋಕಸಂವಾದಾಪೇಕ್ಷಿಯಾದ ವೈಜ್ಞಾನಿಕ ಬುದ್ಧಿ ತತ್ತರಿಸುತ್ತದೆ, ಕಂಗಾಲಾಗುತ್ತದೆ: ಇದೇನು ಹೇಳುತ್ತಾನೆ ಈ ಸಂಜಯ? ಸುಳ್ಳಿನ ಮೇಲೆ ಸುಳ್ಳು! ಸುಳ್ಳಿನ ಮೇಲೆ ಸುಳ್ಳು! ಅಪ್ರಕೃತ! ಅಪ್ರಸಂಗ: 'ದ್ರೋಣ ಸತ್ತ' ಎಂದು ಹೇಳುವುದನ್ನು ಬಿಟ್ಟು 'ಸಮುದ್ರ ಬತ್ತಿತು! ಮೇರು ಮುರಿದುಹೋಯ್ತು! ಸೂರ್ಯ ಪಾತಾಳಕ್ಕೆ ಬಿದ್ದುಬಿಟ್ಟ!' ಎಂದೆಲ್ಲ ಒದರುತ್ತಿದ್ದಾನಲ್ಲಾ ತಲೆಕೆಟ್ಟು! ಇವನೇನು ಸಮುದ್ರವನ್ನು ನೋಡಿಕೊಂಡು ಬಂದಿದ್ದಾನೆಯೆ! ಅದರ ನೀರೆಲ್ಲ ಬತ್ತಿಹೋಗಿದ್ದು ನಿಜವೇ? ಮೇರು ಮುರಿಯಿತಂತೆ? ಮುರಿಯುವುದಿರಲಿ. ಮೇರು ಎನ್ನುವುದಾದರೂ ಎಲ್ಲಿದೆ? ಯಾರು ನೋಡಿದ್ದಾರೆ? ಬರಿಯ ಸುಳ್ಳು! ಮೊಲದ ಕೊಂಬು ತಿವಿದು ದ್ರೋಣ ಸತ್ತ ಎಂದಿದ್ದರೂ ಎನ್ನಬಹುದಾಗಿತ್ತಲ್ಲವೆ? ಸುಳ್ಳಿನ ಮೇಲೆ ಸುಳ್ಳನ್ನು ಪೇರಿಸಿದ್ದಲ್ಲದೆ ಅದಕ್ಕೊಂದು ಕಲಶ ಬೇರೆ ಇಡುತ್ತಾನೆ: ಸೂರ್ಯಮಂಡಲ ಪಾತಾಳಕ್ಕೆ ಬಿದ್ದುಹೋಯಿತು ಎಂದು. ಹಾಗೇನಾದರೂ ನಡೆದಿದ್ದರೆ ಅದನ್ನು ಹೇಳುವುದಕ್ಕಾದರೂ ಸಂಜಯ ಇರುತ್ತಿದ್ದನೆ? ನಾವಾದರೂ ಅದನ್ನು ಓದುವುದಕ್ಕೆ ಇರುತ್ತಿದ್ದೆವೆ? ಇತ್ಯಾದಿಯಾಗಿ.

ಆದರೆ ಸಹೃದಯನ ಹೃದಯ ಕವಿಯ ಆ ವರ್ಣನೆಯನ್ನು ಓದಿದಾಗ ಒಂದು ರಸಾನುಭವವನ್ನು ಆಸ್ವಾದಿಸಿ ಹಿಗ್ಗುತ್ತದೆ. ಆ ಸಂದರ್ಭದಲ್ಲಿ ಕವಿಯ ಉಕ್ತಿಯೇ ಸತ್ಯತಮ; 'ದ್ರೋಣಸತ್ತ' ಎಂಬ ವಾರ್ತಾಸತ್ಯ ಅತ್ಯಂತ ಅಲ್ಪಸತ್ಯ ಅಥವಾ ಸತ್ಯದ ಅತ್ಯಂತ ಕನಿಷ್ಠಾಂಶ; ರಕ್ತಮಾಂಸ ಹೃದಯ ಪ್ರಾಣ ಮನಸ್ಸು ಚೇತನ ಸಹಿತವಾದ ಜೀವಂತ ಮನುಷ್ಯನ ವ್ಯಕ್ತಿತ್ವಕ್ಕೂ ಅವನ ಅಸ್ಥಿಪಂಜರಕ್ಕೂ ಇರುವಷ್ಟು ವ್ಯತ್ಯಾಸ, ಅಂತರ, ಕವಿ ಹೇಳಿರುವ ಪೂರ್ಣ ಸತ್ಯಕ್ಕೂ 'ದ್ರೋಣ ಸತ್ತ' ಎಂಬ ವರದಿಯ ಅಂಶ ಸತ್ಯಕ್ಕೂ ಎಂಬುದು ಸುಸ್ಪಷ್ಟವಾಗಿ ಅನುಭವಗೋಚರವಾಗುತ್ತದೆ.

ಏಕೆ ಹೀಗಾಗುತ್ತದೆ? ಲೋಕಸಂವಾದಾಪೇಕ್ಷಿಯಾದ ವೈಜ್ಞಾನಿಕ ದೃಷ್ಟಿಗೂ ಸಹೃದಯನ ದೃಷ್ಟಿಗೂ ಈ ಅಂತರ ಒದಗುವುದಕ್ಕೆ ಕಾರಣವೇನು? ಯಾರ ದೃಷ್ಟಿ ತಪ್ಪು? ಯಾರದ್ದು ಸರಿ?

ಇಬ್ಬರದ್ದೂ ಸರಿ: ಏಕೆಂದರೆ ಒಬ್ಬೊಬ್ಬರದೂ ಬೇರೆ ಬೇರೆಯ ಗುರಿ! ಪ್ರಯೋಗದಲ್ಲಿ ಭಾಷೆ ಒಂದೆ ಆಗಿ ತೋರಿದರೂ ಅದರ ಉಪಯೋಗಗಳು ಬೇರೆ ಬೇರೆ. ಒಂದು ಲೋಕೋಪಯೋಗಿ: ಇನ್ನೊಂದು ಭಾವೋಪಯೋಗಿ. ಭಾಷೆಯ ಒಂದು ಉಪಯೋಗವನ್ನು ಅದರ ಇನ್ನೊಂದು ಉಪಯೋಗದಲ್ಲಿ ಕಾಣಬಯಸಿದರೆ ದಿಕ್ಕು ತಪ್ಪಿದಂತಾಗಿ ಸೇರಬೇಕಾದ ಗುರಿಯನ್ನೆ ನಾವು ಸೇರುವುದಿಲ್ಲ.

ಭಾಷೆ ಲೋಕೋಪಯೋಗಿಯಾದಾಗ ಅದು ಲೋಕಸಂವಾದವನ್ನು ನಿರೀಕ್ಷಿಸುತ್ತದೆ, ಅಪೇಕ್ಷಿಸುತ್ತದೆ; ಭಾವೋಪಯೋಗಿಯಾದಾಗ ಅದು ಮುಖ್ಯವಾಗಿ

ಭಾವಸಂವಾದವನ್ನೆ ಅಪೇಕ್ಷಿಸುತ್ತದೆ. ಭಾಷೆಯ ಈ ಉಪಯೋಗ ಸಾಹಿತ್ಯದಲ್ಲಿ ಮಾತ್ರವಲ್ಲ ಲೋಕದಲ್ಲಿಯೂ ಅನ್ವಯವಾಗುತ್ತದೆ. ಈ ರಹಸ್ಯವನ್ನು ನಾವು ಸ್ಪಷ್ಟವಾಗಿ ಗ್ರಹಿಸದಿದ್ದರೆ, ಅರ್ಥಮಾಡಿಕೊಳ್ಳದಿದ್ದರೆ, ವೈಜ್ಞಾನಿಕ ಮನೋಧರ್ಮದ ಹೆಸರಿನಲ್ಲಿ ನಾವು ಪರಿಪೂರ್ಣವಾಗಿ ವಂಚಿತರಾಗುತ್ತೇವೆ, ಸಾಹಿತ್ಯವೀಯುವ ರಸಾನುಭವದ ಪುರುಷಾರ್ಥವನ್ನು ಅಸತ್ಯವೆಂಬ ಕಾರಣದಿಂದ ತಿರಸ್ಕರಿಸಿ.

ಭಾಷೆಯ ಲೋಕೋಪಯೋಗದ ಮತ್ತು ಭಾವೋಪಯೋಗದ ಭೇದವನ್ನು ಗ್ರಹಿಸುವುದು ಅಷ್ಟೇನೂ ಕ್ಲಿಷ್ಟವಿಷಯವಲ್ಲ. ಲೋಕದಲ್ಲಿರುವ ಒಂದು ವಸ್ತುವಿನ 'ಸಂವಾದ'ಕ್ಕಾಗಿಯೆ ನಾವು ಪದಗಳನ್ನು ಉಪಯೋಗಿಸಬಹುದು; ಅಥವಾ ಆ ಪದಗಳು ನಮ್ಮಲ್ಲಿ ಪ್ರಚೋದಿಸುವ 'ಭಾವ'ಕ್ಕಾಗಿಯೋ 'ಚಿತ್ತಭಂಗಿ'ಗಾಗಿಯೋ ಅವುಗಳನ್ನು ಉಪಯೋಗಿಸಬಹುದು. ಎಷ್ಟೋ ಸಾರಿ ನಾವು ಯಾವ ಲೋಕ ಸಂವಾದವನ್ನೂ ನಿರೀಕ್ಷಿಸದೆ ಅವು ನಮ್ಮಲ್ಲಿ ಪ್ರಚೋದಿಸುವ 'ಚಿತ್ತಭಂಗಿ' ಅಥವಾ 'ಭಾವ'ವನ್ನು ಮಾತ್ರ ಅಪೇಕ್ಷಿಸಿ ಮಾತುಗಳನ್ನು ಬಳಸುತ್ತೇವೆ.

ಉರಿಬಿಸಿಲಲ್ಲಿ ಬಂದವನು 'ಉಃಫ್ ಏನು ಬಿಸಿಲಪ್ಪಾ? ಬೆಂದೇ ಹೋದೆ! ಸುಟ್ಟು ಬೂದಿಯಾದೆ!' ಎಂದಾಗ ತನಗಾಗಿರುವ ಬೇಗೆಯ 'ಅನುಭವ ನಿಜತ್ವ'ವನ್ನು ಅದರ ಪೂರ್ಣಪ್ರಮಾಣದಲ್ಲಿ ನಮಗೆ ಹೃದ್‌ಗೋಚರವನ್ನಾಗಿ ಮಾಡುವ ವಿವಕ್ಷೆ ಅವನಿಗೆ ಇರುತ್ತದೆಯೆ ವಿನಾ ತನ್ನ ಮಾತಿಗೆ ಲೋಕಸಂವಾದವಿರಬೇಕೆಂಬ ಉದ್ದೇಶವಿರುವುದಿಲ್ಲ. ಅವನ ಮಾತನ್ನು ಕೇಳಿ ಯಾರಾದರೂ ಅವನು ಬೆಂದಿದ್ದಾನೆಯೋ ಇಲ್ಲವೋ ಬೂದಿಯಾಗಿದ್ದಾನೆಯೋ ಇಲ್ಲವೋ ಎಂದು ವೈಜ್ಞಾನಿಕವಾಗಿ ಪರೀಕ್ಷಿಸಿದರೆ! ಆ ಮಾತಿಗೆ ಲೋಕಸಂವಾದವೇನೂ ಕಾಣದೆ ಅದು ಅಸತ್ಯವಾಗಿ ತೋರುತ್ತದೆ. ಆದರೆ ಹಾಗೆ ಪರೀಕ್ಷಿಸುವುದಾಗಲಿ, ಅದನ್ನು ಅಸತ್ಯವೆಂದು ವೈಜ್ಞಾನಿಕವಾಗಿ ತೀರ್ಮಾನಿಸುವುದಾಗಲಿ ಅಪ್ರಕೃತವಾಗಿ ಹಾಸ್ಯಾಸ್ಪದವಾಗುತ್ತದೆ. ಆ ಮಾತಿನ ವಿವಕ್ಷೆ ಆಲಿಸಿದವರಲ್ಲಿ ಒಂದು 'ಚಿತ್ತಭಂಗಿ'ಯನ್ನುಂಟುಮಾಡುವುದಷ್ಟೆ ಆಗಿರುತ್ತದೆ. ಅದು ಸಾಧಿತವಾದರೆ ಸಾಕು ಆ ಮಾತು ಸಾರ್ಥಕವಾಗುತ್ತದೆ. ಅಂತಹ ಸಾರ್ಥಕತೆಯಲ್ಲಿಯೆ ಅದರ ಸತ್ಯಸಿದ್ಧಿ. ಅಂದರೆ ಆ ಮಾತು ಲೋಕ ಸಂವಾದಾಪೇಕ್ಷಿಯಾದುದಲ್ಲ, ಭಾವಸಂವಾದಾಪೇಕ್ಷಿಯಾದುದು. ಆ ಭಾವದ ಸಂವಾದ ಒದಗಿತೆಂದರೆ ಅದರ ಕೆಲಸ ತೀರಿತು. ಅದು ಸಾರ್ಥಕವಾಯಿತು. ಸತ್ಯವೂ ಆಯಿತು[1].

[1] We may either use words for the sake of the references they promote, or we may use them for the sake of the attitudes and emotions which ensue.—I. A. Richards.

ಭಾರತೀಯ ಕಾವ್ಯಮೀಮಾಂಸೆ ಬಹು ಪ್ರಾಚೀನಕಾಲದಲ್ಲಿಯೆ ಶಬ್ದಾರ್ಥ ಸ್ವರೂಪ ವಿಚಾರವಾದ ಈ ಸತ್ಯವನ್ನು ಕಂಡುಕೊಂಡಿದೆ. ಶಬ್ದಕ್ಕೆ ಅರ್ಥ ಎರಡು ವಿಧವಾಗಿದೆ ಎಂದು. ಒಂದು 'ವಾಚ್ಯ' ಮತ್ತೊಂದು 'ಪ್ರತೀಯಮಾನ.' ಶಬ್ದಕ್ಕೆ ಅರ್ಥವನ್ನು ಕೊಡುವ ಸಾಮರ್ಥ್ಯಕ್ಕೆ 'ವೃತ್ತಿ' ಎಂದು ಹೆಸರು. ಶಬ್ದಕ್ಕೆ ವಾಚ್ಯವಾದ ಅಥವಾ ಲೋಕೋಪಯೋಗಿಯಾದ[2] ನೇರವಾದ ಅರ್ಥವನ್ನು ಕೊಡುವ ವೃತ್ತಿ 'ಅಭಿಧಾ'; ಪ್ರತೀಯಮಾನವಾದ (ಭಾವೋಪಯೋಗಿಯಾದ) ಅಥವಾ ಗಮ್ಯವಾದ ಅರ್ಥವನ್ನು ಕೊಡುವ ವೃತ್ತಿ ಕವಲೊಡೆದು ಎರಡಾಗಿದೆ. ಒಂದು 'ಲಕ್ಷಣಾ' ಮತ್ತೊಂದು 'ವ್ಯಂಜನಾ.' ಶಬ್ದದ ಅಭಿಧಾವೃತ್ತಿಯಿಂದ ನೇರವಾದ ವಾಚ್ಯಾರ್ಥ ಸ್ಫುರಿಸುತ್ತದೆ. ಲಕ್ಷಣೆಯಿಂದ ಲಕ್ಷ್ಯಾರ್ಥವೂ ವ್ಯಂಜನೆಯಿಂದ ವ್ಯಂಗ್ಯಾರ್ಥವೂ ಸ್ಫುರಿಸುತ್ತವೆ. ಈ ಅರ್ಥ ಒಂದು ಶಬ್ದದಲ್ಲಿ ವ್ಯವಹರಿಸಬಹುದು; ಒಂದು ಪದಸಮೂಹದಲ್ಲಿ ವ್ಯವಹರಿಸಬಹುದು; ಒಂದು ವಾಕ್ಯವನ್ನೆ ವ್ಯಾಪಿಸಬಹುದು; ಒಂದು ಕಾವ್ಯಭಾಗವನ್ನೆಲ್ಲ ಆಕ್ರಮಿಸಬಹುದು; ಕೊನೆಗೆ ಇಡಿಯ ಕಾವ್ಯವನ್ನೂ ತುಂಬಿ ಹರಿಯಬಹುದು

ಅಂದರೆ ಒಂದು ಪದಕ್ಕೆ ಇರುವುದು ಒಂದೆ ಅರ್ಥ ಅಲ್ಲ; ಅಲ್ಲದೆ ಅರ್ಥ ಎಂಬ ಪದಕ್ಕೂ ಅನೇಕಾರ್ಥಗಳಿವೆ!

ಶ್ರೀಕೃಷ್ಣನು ಕರ್ಣನಿಗೆ ಅವನ ಜನನ ವೃತ್ತಾಂತವನ್ನೆಲ್ಲ ವಿವರಿಸಿ, ಅವನು ಪಾಂಡವರ ಅಗ್ರಜನಾದುದರಿಂದ ಆ ಪಕ್ಷಕ್ಕೆ ಬರಬೇಕೆಂದು ಸೂಚಿಸಿದಾಗ ಕರ್ಣ ತುಂಬ ಸಂಕಟಪಟ್ಟುಕೊಂಡು 'ಕೌರವೇಂದ್ರನ ಕೊಂದೆ ನೀನು' ಎನ್ನುತ್ತಾನೆ. ಅಲ್ಲಿ 'ಕೊಂದೆ' ಎನ್ನುವ ಪದಕ್ಕೆ ಅಭಿಧಾವೃತ್ತಿಯಿಂದ ಒದಗುವ ನೇರವಾದ ವಾಚ್ಯಾರ್ಥ 'ಸಾಯಿಸಿಬಿಟ್ಟೆ' ಎಂದು. ಆದರೆ ದುರ್ಯೋಧನ ಆಗ ಸತ್ತಿಲ್ಲ. ಅಂದರೆ ಕರ್ಣ ಸುಳ್ಳಾಡುತ್ತಿದ್ದಾನೆಯೆ? ಅದಲ್ಲ ಕರ್ಣನ ಉದ್ದೇಶ. ಅಲ್ಲಿಯ ಅರ್ಥ 'ಕೊಂದೆ' ಎಂಬ ಪದದ ವಾಚ್ಯಾರ್ಥದಲ್ಲಿಲ್ಲ; ಆ ಅರ್ಥದ ಉದ್ದೇಶ ಲೋಕಸಂವಾದವನ್ನು ಅಪೇಕ್ಷಿಸುವುದರಲ್ಲಿಲ್ಲ. ಭಾವಸಂವಾದವೆ ಅದರ ಪ್ರಯೋಜನ; ಅದರ ಉದ್ದೇಶ ಸಾರ್ಥಕವಾಗುವುದು ನಾವು ಸಂದರ್ಭೋಚಿತವಾಗಿ ಲಕ್ಷ್ಯವೂ ವ್ಯಂಗ್ಯವೂ ಆಗುವ ಅದರ ಪ್ರತೀಯಮಾನಾರ್ಥವನ್ನು ಗ್ರಹಿಸಿದಾಗ.

'ಕೋಲಗುರುವಿನ ಮರಣವಾರ್ತಾ ಕಾಲಸರ್ಪನ ತಂದು ಸಂಜಯ

---

2 'ವಾಚ್ಯ' ಮತ್ತು 'ಪ್ರತೀಯಮಾನ'ಗಳು 'ಲೋಕೋಪಯೋಗಿ' ಮತ್ತು 'ಭಾವೋಪಯೋಗಿ' ಎಂಬ ಪದಗಳಿಗೆ ಸಂಪೂರ್ಣವಾಗಿ ಪರ್ಯಾಯಪದಗಳಾಗುವುದಿಲ್ಲ. ಈ ವಿಚಾರವಾದ ಜಿಜ್ಞಾಸೆ ಬೇರೊಂದು ಪ್ರಬಂಧದಲ್ಲಿ ದೊರೆಯುತ್ತದೆ.

ಹೇಳಿಗೆಯನ್ನೀಡಾಡಿದನು ಧೃತರಾಷ್ಟ್ರನಿದಿರಿಸಲಿ’ ಎಂಬ ಕವಿಯ ಉಕ್ತಿಯ ಪ್ರಯೋಜನ ಏನನ್ನು ಅದು ನೇರವಾಗಿ ಹೇಳುತ್ತದೆಯೊ ಆ ವಾಚ್ಯಾರ್ಥದಲ್ಲಿಲ್ಲ; ಅದು ಲೋಕಸತ್ಯದಲ್ಲಿಲ್ಲ; ಅದಕ್ಕೆ ಸಂವಾದವಿಲ್ಲ. ಸಂಜಯನ ಬಳಿ ಹಾವೂ ಇಲ್ಲ, ಹಾವಿನ ಬುಟ್ಟಿಯೂ ಇಲ್ಲ; ಹಾವಿರುವ ಹಾವಿನ ಬುಟ್ಟಿಯನ್ನು ತಂದು ದೊರೆಯ ಮುಂದೆ ಅದರ ಬಾಯಿ ಕಳಚಿ ಎಸೆದು ಅವನನ್ನು ದಿಗಿಲುಗೊಳಿಸುವ ಪ್ರಸಂಗವೂ ಅನುಚಿತವಾಗಿ ತೋರಿ ನಗೆಗೀಡಾಗುತ್ತದೆ. ಆದ್ದರಿಂದ ಆ ಉಕ್ತಿಯ ಪ್ರಯೋಜನ ಅದರ ಪ್ರತೀಯಮಾನಾರ್ಥದಲ್ಲಿ ಮಾತ್ರ ನಿಹಿತವಾಗುತ್ತದೆ. ಅದು ಸಂಜಯನ ಭಾವ ಅಥವಾ ಚಿತ್ತಭಂಗಿಯನ್ನು ಪ್ರಕಟಿಸುವ ‘ಭಣಿತಿ ಪ್ರತಿಮೆ’ಯಾಗುತ್ತದೆ; ಆ ಭಾವ ಅಥವಾ ಚಿತ್ತಭಂಗಿ ಅದನ್ನಾಲಿಸುವ ಸಹೃದಯ ಹೃದಯದಲ್ಲಿ ಸಂಚಾರವಾದರೆ ಅಥವಾ ಮನಸ್ಸಿನಲ್ಲಿ ಮೂಡಿದರೆ ಸಫಲವಾದಂತೆಯೆ ಕವಿಯ ಉಕ್ತಿ ಅಥವಾ ಭಣಿತಿ. ಅಂತಹ ಭಾವದ ಇಲ್ಲವೆ ಭಂಗಿಯ ‘ಅನುಭವ ಸಂವಾದ’ವೆ ಕವಿಯ ಉಕ್ತಿಯ ಉದ್ದೇಶ; ವಸ್ತು ಸಂವಾದವಲ್ಲ. ಆ ಅನುಭವ ಸಂವಾದ ಒದಗಿತೆಂದರೆ ಅದು ‘ಸತ್ಯ’ವಾದಂತೆಯೆ. ಅಲ್ಲಿ ಭಾಷೆ ಭಾವೋಪಯೋಗಿಯೆ ಹೊರತು ಲೋಕೋಪಯೋಗಿ ಅಲ್ಲ.

ಹಾಗಾದರೆ ಭಾಷೆಯ ಲೋಕೋಪಯೋಗ, ಅಭಿಧಾವೃತ್ತಿ, ವಾಚ್ಯಾರ್ಥ ಇವುಗಳ ಪ್ರಯೋಜನವೆ ಇಲ್ಲವೆ ಅದರ ಭಾವೋಪಯೋಗದಲ್ಲಿ, ಲಕ್ಷಣಾ ವ್ಯಂಜನಾ ವೃತ್ತಿಗಳಲ್ಲಿ, ವ್ಯಂಗ್ಯಾರ್ಥದಲ್ಲಿ? ಕಾಲಸರ್ಪ, ಹೇಳಿಗೆ, ಈಡಾಡು ಈ ಪದಗಳ ಲೋಕೋಪಯೋಗದಿಂದಲೆ ಹೊಮ್ಮುತ್ತದೆ ಆ ಭಾವೋಪಯೋಗ. ಅವುಗಳ ‘ವಾಚ್ಯಾರ್ಥವಿಮುಖತ್ವ’ದಿಂದಲೆ ಸ್ಫುರಿಸುತ್ತದೆ ಆ ವ್ಯಂಗ್ಯಾರ್ಥ ಅಥವಾ ಧ್ವನಿ.[1] ಸರ್ಪ ಎಂಬ ಪದಕ್ಕೆ ಸರ್ವರಿಗೂ ಸಮಾನವಾದ ಒಂದು ನಿಘಂಟಿನ ಅರ್ಥವಿರುವಂತೆಯೆ ಒಬ್ಬೊಬ್ಬರಿಗೂ ಸರ್ಪವಿಷಯಕವಾದ ಅವರವರ ಅನುಭವಗಳಿಂದ ಸಿದ್ಧವಾಗಿ ಸಂಸ್ಕಾರರೂಪದಲ್ಲಿರುವ ವಿಶಿಷ್ಟವಾದ ಒಂದು ‘ಭಾವಕೋಶ’ವಿರುತ್ತದೆ. ಭಾಷೆಯ ಭಾವೋಪಯೋಗವೆಲ್ಲ ಈ ‘ಭಾವಕೋಶ’ದ ಆಧಾರದ ಮೇಲೆ

---

1 ಯಥಾ ಪದಾರ್ಥದ್ವಾರೇಣ ವಾಕ್ಯಾರ್ಥಃ ಸಂಪ್ರತೀಯತೇ | ವಾಚ್ಯಾರ್ಥಪೂರ್ವಿಕಾ ತದ್ವತ್ ಪ್ರತಿಪತ್ತಸ್ಯ ವಸ್ತುನಃ || . . . ತದ್ವತ್ ಸಚೇತಸಾಂ ಸೋಽರ್ಥೋ ವಾಚ್ಯಾರ್ಥವಿಮುಖಾತ್ಮನಾಮ್ | ಬುದ್ಧೌ ತತ್ತ್ವಾರ್ಥದರ್ಶಿನ್ಯಾಂ ಝಟಿತ್ಯೇವಾವಭಾಸತೇ ||—

ಧ್ವನ್ಯಾಲೋಕ.

But usually references are involved *as conditions* for, or *stages in*, the ensuing development of attitudes, yet it is still the attitudes not the references which are important.—I. A. Richards.

ನಿಲ್ಲುತ್ತದೆ. ಕಾವ್ಯದ ಭಾಷೆಯು ಪ್ರಯೋಜನವಂತೂ ಈ 'ಭಾವಕೋಶ'ವನ್ನೆ ಸಂಪೂರ್ಣವಾಗಿ ಅವಲಂಬಿಸುತ್ತದೆ. ಸರ್ಪ ಎಂಬ ಮಾತು ಕಿವಿಗೆ ಬಿದ್ದೊಡನೆ ಅದರ ಅಭಿಧಾವೃತ್ತಿಯಿಂದ ಹಾವು ಎಂಬ ವಾಚ್ಯಾರ್ಥ ಸಿದ್ಧಿಸುತ್ತದೆ. ಒಡನೆಯೆ ಲಕ್ಷಣಾ ವೃತ್ತಿ ಬೆನ್ನಟ್ಟುತ್ತದೆ: ಹಾವಿನ ವಿಷ, ಹಾವಿನ ಹೆದರಿಕೆ, ಹಾವು ಕಚ್ಚಿ ಸತ್ತವರು, ಹಾವಿನ ನೀಳ್ಪುಸುಣ್ಪಿನ ಭೀತಿಜುಗುಪ್ಸೆ ಇತ್ಯಾದಿ ಇತ್ಯಾದಿ. ಅದರಿಂದ ಒಂದು ಲಕ್ಷ್ಯಾರ್ಥ ಸ್ಫುರಿಸಿ ಭಾವಸಂಚಾರವಾಗುತ್ತದೆ; ಭಾವಕೋಶ ಕಣ್ದೆರೆಯುತ್ತದೆ. ಆ ವ್ಯಾಪಾರ ಅಲ್ಲಿಗೇ ನಿಲ್ಲಬೇಕಾಗಿಲ್ಲ. ವ್ಯಂಜನಾವೃತ್ತಿಯ ಮಿಂಚು ತಟ್ಟಿ ಭಾವ ಕೋಶವೆ ಆಸ್ಫೋಟಿಸಿದಂತಾಗಿ, ಒಂದು ನಿಸ್ಸೀಮವೂ ನೇಮಿರಹಿತವೂ ಆದ ರಸಪರಿವೇಷದ ಅನುಭವಾಕಾಶದಲ್ಲಿ ಅದು ಪರ್ಯವಸಾಯಿಯಾಗಬಹುದು. ಅಂತಹ ವ್ಯಂಗ್ಯಾರ್ಥದ್ಯೋತನವೆ ಕವಿಯ ಉಕ್ತಿಯ ಪರಮೋದ್ದೇಶ ಮತ್ತು ಚರಮಫಲ.

'ಸಂಜಯನು ದ್ರೋಣನ ಮರಣವಾರ್ತೆಯನ್ನು ತಂದು ಧೃತರಾಷ್ಟ್ರನಿಗೆ ಹೇಳಿದನು' ಎಂದು ಕವಿ ಹೇಳಿದ್ದರೆ ಅದು ಬರಿಯ 'ವಾರ್ತೆ'ಯಾಗುತ್ತಿತ್ತು. ದ್ರೋಣನ ಮರಣ ಸಂಜಯನ ಮೇಲೆ ಏನು ಪರಿಣಾಮಮಾಡಿತು? ಆಚಾರ್ಯರ ಮರಣವಾರ್ತೆಯನ್ನು ಕೇಳಿದ ಧೃತರಾಷ್ಟ್ರನಿಗೆ ಏನು ಅನುಭವವಾಯಿತು? ಅದರ ಭಯಂಕರತೆ ಏನು? ಅದರ ಸಂಕಟವೇನು? ಅದರಿಂದ ಒದಗಿದ ವಿಪತ್ತಿನ ಭಯಾನಕ ಸ್ವರೂಪ ಎಷ್ಟು ಭೀಕರವಾದದ್ದು? ಆ ಸಂದರ್ಭದ ಗಭೀರತೆ ಎಷ್ಟು? ಮೊದಲಾದ ವಿವಿಧ ಜನರ ವಿವಿಧ ಹೃದಯಗಳ ವಿವಿಧಾನುಭವಗಳೂ ಭಾವಗಳೂ ಆ ಹೇಳಿಕೆಯ ಹೊರಗುಳಿಯುತ್ತಿದ್ದುವು. ಸಂಜಯನ ಆ ಹೇಳಿಕೆ ನಡೆದ ಬಹಿರ್ಘಟನೆಯನ್ನು ಮಾತ್ರ, ಎಂದರೆ ಲೋಕಸಂಗತಿಯನ್ನು ಮಾತ್ರ ತಿಳಿಸುತ್ತಿತ್ತು. ಅದಕ್ಕಿಂತಲೂ ಸಾವಿರಮಡಿ ನಿಜವಾದ ಅಂತರ್ಘಟನಾಕೋಟಿಗಳನ್ನು ಮುಚ್ಚಿಬಿಡುತ್ತಿತ್ತು; ಮರೆಮಾಚುತ್ತಿತ್ತು. ಅಂದರೆ ಭಾವಸತ್ಯದ ದೃಷ್ಟಿಯಿಂದ ಅದು ಸುಳ್ಳಾಡಿದಂತೆಯೆ ಆಗುತ್ತಿತ್ತು. ಆದ್ದರಿಂದಲೆ ಕವಿಯ ವಕ್ರೋಕ್ತಿ ತಿಳಿಸುತ್ತಿರುವುದೆ ಹೆಚ್ಚಿನ ಸತ್ಯ. ಅದಕ್ಕೆ ಲೋಕಸಂವಾದಕ್ಕಿಂತಲೂ ಅತ್ಯತಿಶಯವಾದ ಭಾವಸಂವಾದವಿದೆ. ಈ ವಿಮರ್ಶೆಯ ಬೆಳಕಿನಲ್ಲಿ ಮತ್ತೊಮ್ಮೆ ಆಲಿಸಿ, ಅನುಭವಿಸಿ, ಸಮೀಕ್ಷಿಸಿ.

> "ಕೋಲಗುರುವಿನ ಮರಣವಾರ್ತಾ ಕಾಲಸರ್ಪನ ತಂದು ಸಂಜಯ
> ಹೇಳಿಗೆಯನೀಡಾಡಿದನು ಧೃತರಾಷ್ಟ್ರನಿದಿರಿನಲಿ!"

ಆಯಿತು; ಇದೇನೊ ಸರಿಹೋಯ್ತು. ಆದರೆ ಆ 'ಬಱತುದು ಕಡಲು; ಮುಱಿದುದು ಮೇರು; ತಿರುಗಿತು ಪೊಡವಿ; ಬಿದ್ದುದು ಭಾನುಮಂಡಲವಹಹ ವಿತಳದಲಿ!' ಇದಕ್ಕೇನು ಹೇಳುತ್ತೀರಿ! 'ಮರಣವಾರ್ತಾ ಕಾಲಸರ್ಪ' ಎಂಬಲ್ಲಿ 'ಭಾವೋಪ

ಯೋಗಿ 'ಗೆ 'ಮರಣವಾರ್ತೆ' ಎಂಬ 'ಲೋಕೋಪಯೋಗಿ 'ಯ ಸಂಬಂಧವಾದರೂ ಇದೆ. ಇಲ್ಲಿ 'ಬಿಳಿತುದು ಕಡಲು ' ಎಂಬುವುದಕ್ಕೆ ಯಾವ 'ಲೋಕೋಪಯೋಗಿ 'ಯ ಸಂಬಂಧವೂ ಇಲ್ಲವಲ್ಲ! ಸಂಜಯ ಏನು ಹೇಳುತ್ತಿದ್ದಾನೆಯೊ ಅದು ಪೂರ್ತಿ ಸುಳ್ಳು! ಅವನು ತಿಳಿಸಬೇಕಾದುದಕ್ಕೂ ಹೇಳುತ್ತಿರುವುದಕ್ಕೂ ಏನಾದರೂ ಸಂವಾದವಿದೆಯೆ?

'ಸಂವಾದ 'ವೇನೊ ಇದೆ. ಆದರೆ ಅದನ್ನು ನಾವು ಲೋಕವಾಸ್ತವದಲ್ಲಿ ಅರಸಬಾರದು. ಏಕೆಂದರೆ ಅಲ್ಲಿಯ ಭಾಷೆ ಸಂಪೂರ್ಣವಾಗಿ ಭಾವೋಪಯೋಗಿ. ಸಂಜಯ ತನ್ನ ಭಾವಾನುಭವದ ಅಭಿವ್ಯಕ್ತಿಗೆ 'ಭಣಿತಿ ಪ್ರತಿಮೆ 'ಗಳನ್ನೊಡ್ಡುತ್ತಿದ್ದಾನೆ. ಅವನ ಭಾವಾತಿಶಯದ 'ಚಿತ್ತಭಂಗಿ 'ಯ ಸತ್ಯ ಆಲಿಸಿದವರ ಹೃದಯಗಳಲ್ಲಿ ಅಪರೋಕ್ಷವಾಗಿ ಸ್ಫುರಿಸುವಂತೆ, ಜಲಕ್ಕನೆ ಅನುಭವವೇದ್ಯವಾಗುವಂತೆ, ಪ್ರತಿಮಾವಿಧಾನದಿಂದ ಭಾಷಿಸುತ್ತಿದ್ದಾನೆ. ಇಲ್ಲಿಯ ಭಾಷೆಗೆ ಲೋಕಸಂವಾದ ಪ್ರಯೋಜನವಿಲ್ಲ; ಅದು ಭಾವಸಂವಾದಮಾತ್ರಪ್ರಯೋಜನವಾದದ್ದು. ದ್ರೋಣರ ಸಾವಿನಿಂದಾದ ಅನಾಹುತ ಎಷ್ಟು ಅಗಾಧವಾದದ್ದು, ಅಪಾರವಾದದ್ದು ಎಂದರೆ ಅದನ್ನು ಬೇರೆ ಯಾವ ರೀತಿಯಿಂದಲೂ ಒಕ್ಕಣಿಸಲು ಆಗುವುದಿಲ್ಲ. ಅಕಸ್ಮಾತ್ತಾಗಿ ಸಮುದ್ರವೆ ಬತ್ತಿಹೋಗಿದ್ದರೆ! ಭೂಮಿ ಕಂಡಬಟ್ಟೆ ಪಥಕ್ರಮ ತಪ್ಪಿ ಉರುಳಿದ್ದರೆ! ಸೂರ್ಯಮಂಡಲವೆ ಕಳಚಿಕೊಂಡು ಪಾತಾಳಕ್ಕೆ ಕೆಡೆದಿದ್ದರೆ! ಏನು ಅನುಭವವಾಗುತಿತ್ತು, ಊಹಿಸಿಕೊಳ್ಳಿ: ಏನು ಹಾಹಾಕಾರ! ಏನು ರೋದನ! ಏನು ಓಡಾಟ! ಏನು ಗಡಿಬಿಡಿ! ಏನು ದಿಗಿಲು! ಏನು ಹತಾಶೆ: ಏನು . . . ಏನು . . . ಏನು . . .! ಅಯ್ಯೊ ಹೇಳಿ ಪೂರೈಸುವುದಕ್ಕಾಗುತ್ತದೆಯೆ? ಆ ಭಾವಾನುಭವಸಮಷ್ಟಿಗೆಲ್ಲಕ್ಕೂ ಪ್ರತಿಮಾ ಪಂಕ್ತಿಗಳನ್ನೆಸೆಯುತ್ತಿದೆ ಸಂಜಯನ ಹೃದಯಭಾಷೆ! ಅವನ ಭಾಷೆಯ ಉದ್ದೇಶ ಸಂಪೂರ್ಣವಾಗಿ ಸಾರ್ಥಕವಾಗಿ ಸತ್ಯವಾಗುತ್ತದೆ. ಏಕೆಂದರೆ ಆ ಭಾಷೆಗೆ 'ಲೋಕಸತ್ಯ'ವನ್ನು ಹೇಳುವ ಉದ್ದೇಶವೆ ಇಲ್ಲ. 'ಭಾವಸತ್ಯ'ವನ್ನು ನೀಡುವುದೆ ಅದರ ಕರ್ತವ್ಯ. ಅದನ್ನು ಸಹೃದಯನ ಹೃದಯಕ್ಕೆ ಸರಿಯಾಗಿ 'ಹೇಳಿದರೆ' 'ನೀಡಿದರೆ' ಅದು ಸತ್ಯವಾಗುತ್ತದೆ. ಆ ಭಾವಸಂವಾದ ಸರಿಯಾಗಿ ಆಗದಿದ್ದರೆ ಮಾತ್ರ ವಿಫಲವಾಗಿ ಅಸತ್ಯವಾಗುತ್ತದೆ. 'ಮುಳಿದುದು ಮೇರು' ಎಂದಾಗ ಮೇರು ಎಂಬ ದೇವಲೋಕ ಪರ್ವತ ವಾಸ್ತವವಾಗಿ ಇದೆಯೊ ಇಲ್ಲವೊ ಎನ್ನುವುದೂ ಇಲ್ಲ ಅಪ್ರಕೃತ.[1] ಮೇರು ಇದೆ. ಎಂದಿಟ್ಟುಕೊಳ್ಳಿ! ಅದು ಮುರಿದುಬೀಳುವ

[1] It matters not at all in such cases whether the references are true or false. Their sole function is to bring about and support the attitudes which are the further response. The questioning, verificatory way of handling is irrelevant, and in a competent reader it is not allowed to interfere.

—I. A. Richards

ಧಿಗಿಲ್ಲೆನಿಸುವ ದೃಶ್ಯವನ್ನು ಕಲ್ಪಿಸಿಕೊಳ್ಳಿ. ಆ ಭೀಷಣ ಭೂಮಾನುಭವದಿಂದ ಉಂಟಾಗುವ ಭಾವಸಂಚಾರ ಸಹೃದಯ ಹೃದಯಗೋಚರವಾಗುವಂತೆ ಮಾಡಿ, ಅದನ್ನು ರಸವಿದ್ಯುತ್ ಕ್ರಿಯೆಯಿಂದ ಜ್ರೋಣನ ಮರಣದಿಂದಾದ ಭಯಂಕರಾನುಭವಕ್ಕೆ ಜಲಕ್ಕನೆ ತಗುಳ್ಚುವುದೆ ಕುಮಾರವ್ಯಾಸನ ವಿವಕ್ಷೆ. ಆ ಭಾಷೆ ಸಿಡಿಮದ್ದಿನ ಸಜೀವಬೀಜಸೂತ್ರದಂತೆ ಸಿಡಿದು ಕೆಲಸಮಾಡಿ ಕವಿಯ ವಿವಕ್ಷೆ ಸಹೃದಯಾನುಭವದಲ್ಲಿ ಸಂಪೂರ್ಣವಾಗಿ ಸಾರ್ಥಕವಾಗುವಂತೆ ಮಾಡುವುದಿಲ್ಲವೆ? ಮತ್ತೊಮ್ಮೆ ಓದಿ ಅನುಭವಿಸಿ ಪರೀಕ್ಷಿಸಿ ನೋಡಿ.

ಕೋಪಗೊಂಡ ತಂದೆ ತುಂಬ ತಂಟೆಮಾಡಿದ ಹುಡುಗನಿಗೆ 'ನೀನೆಲ್ಲಾದರೂ ಇನ್ನೊಮ್ಮೆ ಹೀಗೆ ಮಾಡು, ನಿನ್ನನ್ನು ಸೀಳಿ ತೋರಣ ಕಟ್ತೀನಿ!' ಎಂದಾಗ ಆ ಭಾಷೆ ಬರಿಯ ಭಾವೋಪಯೋಗಿ. ತಂದೆಯ ಅಸಮಾಧಾನದ ಪ್ರಮಾಣವನ್ನೂ ತೀಕ್ಷ್ಣತೆಯನ್ನೂ ಭಾವೋದ್ರೇಕವನ್ನೂ ವೇದ್ಯವಾಗುವಂತೆ ಮಾಡುವ ಒಂದು 'ಪ್ರತಿಮೆ'ಯಾಗುತ್ತದೆ. ತಂದೆಯಾಗಲಿ ಮಗುವಾಗಲಿ ಅದನ್ನು ಆಲಿಸಿದವರಾಗಲಿ ಅದಕ್ಕೆ ಲೋಕಸಂವಾದ ಒದಗುತ್ತದೆ ಎಂದು ಕನಸಿನಲ್ಲಿಯೂ ನಂಬುವುದಿಲ್ಲ. ಜನರು ಒಬ್ಬರನ್ನೊಬ್ಬರು ಬೈದಾಡುವಾಗಲೂ ಭಾಷೆ ಬಹುಮಟ್ಟಿಗೆ ಭಾವೋಪಯೋಗಿಯಾಗಿರುವುದನ್ನು ಕಾಣುತ್ತೇವೆ. 'ಸೂಳೆಯ ಮಗನೆ' ಎಂದು ಬಯ್ಯುವವನಿಗೆ ಚೆನ್ನಾಗಿ ಗೊತ್ತು, ಎದುರಾಳಿ ನಿಜವಾಗಿಯೂ ಸೂಳೆಯ ಮಗನಲ್ಲ ಎಂದು. ಬಯ್ಯಿಸಿಕೊಳ್ಳುವವನಿಗೂ ಅದು ಗೊತ್ತು. ಅವನು ತನ್ನನ್ನು ಬಯ್ದವನಿಗೆ ತಣ್ಣಗೆ 'ನೀನು ಹೇಳುತ್ತಿರುವುದು ಅಜ್ಞಾನಜನ್ಯವಾದದ್ದು. ಅದಕ್ಕೆ ಲೋಕಸಂವಾದವಿಲ್ಲ; ಆದ್ದರಿಂದ ಸುಳ್ಳು! ನಿನಗೆ ಯಾರೋ ತಪ್ಪುಸುದ್ದಿ ಕೊಟ್ಟಿರಬೇಕು. ನಾನು ವಾಸ್ತವವಾಗಿಯೂ ಇಂಥವರ ಮಗ, ನನ್ನ ತಾಯಿ ಸದ್‌ಗೃಹಿಣಿಯಾದ ಇಂಥವರು" ಎಂದು ತಿದ್ದಲು ಹೋಗುವುದಿಲ್ಲ. ಹಾಗೇನಾದರೂ ಮಾಡಿಬಿಟ್ಟರೆ ಬಯ್ದವನ ಭಾಷೆಯ ಉಪಯೋಗವೆ ನಿರರ್ಥಕವಾಗಿ, ಅವನ ಉದ್ದೇಶ ವಿಫಲವಾಗುತ್ತದೆ. ಅವನ ಆ ಭಾಷೆಯ ಉದ್ದೇಶ, ಎದುರಾಳಿಯಲ್ಲಿ ಉಂಟಾಗಬೇಕಾದ ಒಂದು 'ಭಾವಸಂವಾದ'. ಎದುರಾಳಿ ಆ ಭಾವಕ್ಕೆ ಅವಕಾಶ ಕೊಡದಿದ್ದರೆ ಅವನ ಬೈಮಾತಿಗೆ ಪ್ರಯೋಜನವೆ ಇರುವುದಿಲ್ಲ. ಆದರೆ ಸಾಧಾರಣವಾಗಿ ನಮ್ಮ ಜನ ತುಂಬ ಸಹೃದಯರಾದುದರಿಂದ ಭಾಷೆಯ ಭಾವೋಪಯೋಗ ನಿರರ್ಥಕವಾಗಬಿಡುವುದಿಲ್ಲ. ಬೈದವನ ಉದ್ದೇಶ ಒಂದಿನಿತೂ ವಿಫಲವಾಗದಂತೆ ಭಾವವನ್ನು ಅನುಭವಿಸಿ, ಭಾವಸಂವಾದವನ್ನು ಒದಗಿಸಿ, ಅದಕ್ಕೆ ಪ್ರತಿಯಾಗಿ ತಾನೂ ಭಾವೋಪಯೋಗಿಯಾದ ಭಾಷೆಯನ್ನೆ, ಅದಕ್ಕೆ ಲೋಕಸಂವಾದವಿನಿತೂ ಇಲ್ಲ ಎಂದು ತಿಳಿದೂ ತಿಳಿದೂ, ಎದುರಾಳಿಯ ಸಹೃದಯತೆಯಲ್ಲಿ

ಸಂಪೂರ್ಣವಾಗಿ ಶ್ರದ್ಧೆಯಿಟ್ಟು, ದ್ವಿಗುಣ ಪರಿಣಾಮಕಾರಿಯಾಗುವಂತೆ ಪ್ರಯೋಗಿಸುತ್ತಾನೆ: "ಮುಂಡೆಮಗನೆ, ನಾನಲ್ಲ, ನಿನ್ನಪ್ಪ!"

ಶೃಂಗಾರ ರಸಪ್ರಮುಖವಾದ ಪ್ರಣಯಸಂದರ್ಭಗಳಲ್ಲಿಯೂ ಭಾಷೆಯ ಈ ಭಾವೋಪಯೋಗ ತನ್ನ ಪರಾಕಾಷ್ಠೆಯನ್ನು ಮುಟ್ಟುತ್ತದೆ. ಪ್ರಣಯಿ ಪ್ರೇಯಸಿಯ ಕಿವಿಯಲ್ಲಿ ಉಸುರುವ ಮಾತುಗಳಿಗೆ ಲೋಕಸಂವಾದವಿರುವುದು ಅಪೂರ್ವ. ಇರಬೇಕೆಂಬ ವಿಚಾರಪೂರ್ವಕ ವಿವಕ್ಷೆಯಂತೂ ಸ್ವಲ್ಪವೂ ಇರುವುದಿಲ್ಲ. ಆದರೆ ಕಾಪಟ್ಯ, ಪಶುತ್ವ ಮತ್ತು ಇಚ್ಛಾಪೂರ್ವಕ ವಂಚನೆ ಇವು ಇರದಿರುವ ಪಕ್ಷದಲ್ಲಿ ಪ್ರಣಯಿಯ ಭಾಷೆಗೆ ಅನುಗುಣವಾದ ಚಿತ್ತಸಂವಾದ ಹೃದಯಸಂವಾದಗಳು ತತ್ಕಾಲದಲ್ಲಿಯಾದರೂ ಅವನಲ್ಲಿ ಇದ್ದೇ ಇರುತ್ತವೆ.

ಹೀಗೆ ಮಹಾಜನರಿಂದ ಪ್ರಾರಂಭವಾಗಿ ಭಾಷೆಯ ಈ ಭಾವೋಪಯೋಗ ಮಹಾ ಕವಿಪ್ರಯೋಗದ ವರೆಗೂ ವ್ಯಾಪಿಸುತ್ತದೆ. ಅಭಿಮನ್ಯುವಿನ ನಿಧನಾನಂತರ ಸಮುಸಪ್ತಕರೊಡನೆ ಯುದ್ಧಕ್ಕೆ ಹೋಗಿದ್ದ ಅರ್ಜುನನು ಪಾಂಡವರ ಬೀಡಿಗೆ ಹಿಂತಿರುಗಿ ಬಂದ ಸಂದರ್ಭದಲ್ಲಿ, ಪಾಳೆಯದಲ್ಲಿದ್ದವರ ಮನಃಸ್ಥಿತಿಯನ್ನೂ ಭಯದ ವಾತಾವರಣವನ್ನೂ ನಿಜವಾರ್ತೆ ತಿಳಿದೊಡನೆ ಪಾರ್ಥನಿಗೊದಗಲಿರುವ ದುಃಖ ಸಂಕಟ ಕ್ರೋಧ ರೋಷಾದಿಗಳ ಉನ್ಮತ್ತಪ್ರಮಾಣವನ್ನೂ ಕುಪಿತ ಗಾಂಡೀವಿಯ ಭಯಂಕರ ಬಲದ ರೌದ್ರಭೀಷಣತೆಯನ್ನೂ ಏಕಕಾಲದಲ್ಲಿ ಸಹೃದಯಸಂವೇದ್ಯವಾಗುವಂತೆ ಮಾಡುತ್ತದೆ ಕವಿವಾಣಿ:

ಸುರನಗರಿ ನಡುಗಿತ್ತು; ಸುರಪತಿ ಹರನ ನೆನೆದನು; ಯಮನ ಪಟ್ಟಣ
ಸರಕುದೆಗೆಯಿತು; ಮೃತ್ಯು ಮರೆಹೊಕ್ಕಳು ಮಹೇಶ್ವರನ!

ಕರ್ಣನ ರಣರೌದ್ರಕ್ಕೆ ತತ್ತರಿಸಿದ ಪಾಂಡವರ ಸೇನೆ ಮತ್ತೆ ಮೇಲ್ವಾಯ್ದು ಅವನ ರಥವನ್ನು ಮುತ್ತಿ ತರುಬಿದುದನ್ನು ಹೀಗೆ ವರ್ಣಿಸುತ್ತಾನೆ ಕವಿ:

ಒದೆವ ಮಂದರವನು ತರಂಗದಲುದಧಿ ಹೊಯ್ವಂದದಲಿ
ಹೊಕ್ಕವು ಕುದುರೆ, ತೂಳಿದವಾನೆ, ಕವಿದರು ರಥಿಕರೊಳಬಿದ್ದು!

ಹಾಗೆಯೆ, ಕರ್ಣನನ್ನು ಕೊಲ್ಲಲಾರದೆ ಸಂಕಟಕ್ಕೆ ಸಿಕ್ಕಿದ ಅರ್ಜುನನನ್ನು ಮೂದಲಿಸುತ್ತಾ ಅವನ ಪೌರುಷವನ್ನು ಕೆರಳಿಸುವುದಕ್ಕಾಗಿ ಶ್ರೀ ಕೃಷ್ಣ ಹೀಯಾಳಿಸುತ್ತಾನೆ:

"ಕಲಿತನಕೀಸು ವೊಲೆಗಳು ಮೂಡಿದವಲಾ ಪಾರ್ಥ ಸಮರದಲಿ!"

ಇಲ್ಲಿ ಎಲ್ಲೆಡೆಗಳಲ್ಲಿಯೂ ಭಾವೋಪಯೋಗಿ ಭಾಷೆ ವಿವಿಧಪ್ರಕಾರಗಳಿಂದ ತನ್ನ ಉದ್ದೇಶಸಾಧನೆಯಲ್ಲಿ ಹೇಗೆ ಜಯಹೊಂದಿದೆ ಎಂಬುದನ್ನು ಕಾಣುತ್ತೇವೆ. ಸುರನಗರಿ

ಇದೆಯೊ ಇಲ್ಲವೊ ? ಒಂದು ವೇಳೆ ಇದ್ದರೂ ಅದು ಹೆದರಿ ನಡುಗಿತೊ ಇಲ್ಲವೊ ? ಸುರಪತಿಹರರಾಗಲಿ ಯಮುನ ಪಟ್ಟಣವಾಗಲಿ ಯಾವ ಭೂಪಟ ಖಪಟಗಳಲ್ಲಿಯೂ ಜನಗಣತಿಯಲ್ಲಿಯೂ ಸೇರಿರದಿರಬಹುದು. ಮೃತ್ಯು ಎಂಬುವಳು ಒಬ್ಬಳು ಇದ್ದು, ಮಹೇಶ್ವರ ಎಂಬುವನೊಬ್ಬನಿದ್ದು, ಇವಳು ಓಡಿಹೋಗಿ ಅವನನ್ನು ಮರೆಹೊಕ್ಕಳೆ ? ವಾಸ್ತವವಾಗಿ ? ಎಂಬೆಲ್ಲ ಲೋಕಸಂವಾದಾಪೇಕ್ಷೆ ಇಲ್ಲಿ ನಿರರ್ಥಕ. 'ಮೃತ್ಯು ಮರೆ ಹೊಕ್ಕಳು ಮಹೇಶ್ವರನ' ಎಂದು ಹೇಳುವಲ್ಲಿ ಕವಿಯ ವಿವಕ್ಷೆ ಸಹೃದಯನಲ್ಲಿ ಒಂದು 'ಚಿತ್ತಭಂಗಿ'ಯನ್ನು ಪ್ರಚೋದಿಸಿ ಅವನಲ್ಲೊಂದು ಸಮರ್ಪಕ ಪ್ರಮಾಣದ ಭಾವ ಸಂಚಾರವನ್ನುಂಟುಮಾಡುವುದೆ ಆಗಿದೆ; ಯಾವ ಐತಿಹಾಸಿಕ ಘಟನೆಯನ್ನೂ ಅದು ನಿರ್ದೇಶಿಸುವುದಿಲ್ಲ.

ಹಾಗೆಯೆ ತನ್ನನ್ನು ಕಡೆದ ಮಂದರ ಮಹಾ ಪರ್ವತವನ್ನು ಸಂಕ್ಷುಬ್ಧ ಮಹಾ ಸಾಗರವೊಂದು ತನ್ನ ಕ್ರುದ್ಧ ಮಹಾ ತರಂಗಗಳಿಂದ ಅಪ್ಪಳಿಸಿತು ಎಂಬುದಾಗಲಿ, ಮಂದರ ಎಂಬ ಪರ್ವತ ವಾಸ್ತವವಾಗಿ ಇದೆಯೊ ಇಲ್ಲವೊ ಎಂಬ ವಿಚಾರವಾಗಲಿ ಭಾಷೆಯ ಭಾವೋಪಯೋಗಕ್ಕೆ ಅಪ್ರಕೃತ. ಒಂದು ಗಿರಿ ಒಂದು ಸಮುದ್ರವನ್ನು ಕಡೆದರೆ ಎಂತಹ ಹೇರಲೆಗಳು ಏಳಬಹುದು ! ಆ ಅಲೆಗಳು ಅದನ್ನು ಅಪ್ಪಳಿಸಿದರೆ ಎಂತಹ ಪರಿಣಾಮವಾಗಬಹುದು ! ಆ ಮಹಾ ದೃಶ್ಯವನ್ನು ಕಲ್ಪನೆಯಲ್ಲಿ ಕಟ್ಟಿಕೊಂಡು ಅನುಭವಿಸಿದಾಗ ಎಂತಹ ಭವ್ಯಭಾವಸಂಚಾರವಾಗಬಹುದು, ಎಂತಹ ರಸಾನುಭವ ವಾಗಬಹುದು! ಅಂತಹ ವಿರಾಟ್‌ಸ್ಪರ್ಶಿಯಾದ ವೀರರೌದ್ರಾದಿ ರಸಾನುಭವ ಸಹೃದಯ ಹೃದಯದಲ್ಲಿ ಧ್ವನಿಸುವಂತೆ ಮಾಡುವ 'ಭಣಿತಿಪ್ರತಿಮೆ' ಮತ್ತು 'ರಸಬೀಜಸೂತ್ರ' ವಾಗುತ್ತದೆ ಕವಿವಕ್ರೋಕ್ತಿ. ಆ ರಸಾನುಭವದ ಸೌಂದರ್ಯವೆ ಆ ಉಕ್ತಿ ಸಾಧಿಸ ಬೇಕಾಗಿರುವ ಸತ್ಯ. ಆ ಸೌಂದರ್ಯಸಿದ್ಧಿಯೆ ಅದರ ಸತ್ಯಸಂಸ್ಥಾಪನೆ.

ಭಾವೋಪಯೋಗಿ ಭಾಷೆಯ ಸತ್ಯ 'ಭಾವಸಂವಾದ' ಇಲ್ಲವೆ 'ಚಿತ್ತಭಂಗಿ ಪ್ರಚೋದನೆ'ಯಲ್ಲಿ ಮಾತ್ರವೆ ಯಾವಾಗಲೂ ಅನಿವಾರ್ಯವಾಗಿ ಪರ್ಯವಸಾನ ಹೊಂದುತ್ತದೆಯೆ ಅಥವಾ ಅಂತಹ ಭಾವಸಂವಾದಕ್ಕೂ ಚಿತ್ತಭಂಗಿಗೂ, ಈ ಲೋಕ ದಲ್ಲದಿದ್ದರೆ ಅನ್ಯಲೋಕಕ್ಕೆ ಅಥವಾ ಬೇರೆ ಭೂಮಿಕೆಗೆ ಸಂಬಂಧಪಟ್ಟ, ವಸ್ತುಸಂವಾದ ವೇನಾದರೂ ಇರುತ್ತದೆಯೆ ಇರಬಹುದೆ ವಿಚಾರಿಸಬೇಕಾಗುತ್ತದೆ. ಏಕೆಂದರೆ ಅಂತಹ ವಸ್ತುಸಂವಾದವೇನೂ ಯಾವ ಸಂದರ್ಭದಲ್ಲಿಯೂ ಇಲ್ಲವೆ ಇಲ್ಲ; ಬರಿಯ ಭಾವ ವಿಲಾಸವೆ ಮತ್ತು ರಸಾನುಭವವೆ ಪರಮಪ್ರಯೋಜನ ಮತ್ತು ಕಾವ್ಯದ ಪರಮ ಪುರುಷಾರ್ಥ ; ಭಾವವನ್ನು ಅನುಭವಿಸಿ, ಅದರ ಸ್ವಾರಸ್ಯದಿಂದ ಮೋಹಿತರಾಗಿ, ಅದನ್ನು ಒಂದು ರೀತಿಯಿಂದ ಸತ್ಯಗೈಯಲೂ ಶಾಶ್ವತಗೊಳಿಸಲೂ ಪ್ರಯತ್ನಿಸಿ,

ಅದಕ್ಕೆ ಇಲ್ಲಿ ಅಲ್ಲದಿದ್ದರೆ ಎಲ್ಲಿಯೋ ವಸ್ತುಸಂವಾದವಿರಬೇಕೆಂದು ಬಾಲಿಶಕಲ್ಪನೆ ಮಾಡಿ ಊಹಿಸಿದರೆ, ಅದು ವೈಜ್ಞಾನಿಕ ವಿಚಾರವಾಗುವುದಿಲ್ಲ, ಆಶಾನುವರ್ತಿ ಚಿಂತನ ಮಾತ್ರವಾದ ಒಂದು ಮಧುಭ್ರಮೆಯಾಗುತ್ತದೆ.—ಎಂದು ಸಿದ್ಧಾಂತಮಾಡಿದರೆ ಕಾವ್ಯದ ಸ್ಥಾನ ಬದುಕಿಗೆ ಆವಶ್ಯಕವಾಗಿ ಪರಿಣಮಿಸಿರುವ ಇತರ ಮನರಂಜನೆಯ ಅಥವಾ ಹೃದ್ವಿಲಾಸಮಾತ್ರದ ಸಾಮಗ್ರಿ ಸಲಕರಣೆಗಳ ಮಟ್ಟಕ್ಕೆ ಇಳಿಯಬೇಕಾಗುತ್ತದೆ; ಅದಕ್ಕಿಂತಲೂ ಹೆಚ್ಚಿನ ಬೆಲೆಕಟ್ಟಲು ಸಾಧ್ಯವಾಗುವುದಿಲ್ಲ.

ಇಲ್ಲಿ ಒಂದು ಸಂದೇಹ ತಲೆಹಾಕುತ್ತದೆ. ಭಾವೋಪಯೋಗಿಯಾದ ಈ ಭಾಷೆಯ ಪ್ರಯೋಜನ ನಮ್ಮಲ್ಲಿ ಒಂದು ಭಾವವನ್ನೊ ಚಿತ್ತಭಂಗಿಯನ್ನೊ ಪ್ರಚೋದಿಸುವುದು ಮಾತ್ರವಾಗಿದ್ದರೆ, ಅದಕ್ಕಿಂತಲೂ ಹೆಚ್ಚಿನದೇನನ್ನೂ ಅದು ನೀಡಲಾರದುದಾಗಿದ್ದರೆ, ಎಲ್ಲ ಕಾವ್ಯದ ಪ್ರಯೋಜನವೂ ಒಂದು ಹೃದಯವಿಲಾಸ ಅಥವ ಚಿತ್ತೋಲ್ಲಾಸದಲ್ಲಿ ಮಾತ್ರ ಕೊನೆಗೊಳ್ಳುತ್ತದೆ ಎಂದು ಒಪ್ಪಿಕೊಳ್ಳಬೇಕಾಗುತ್ತದೆ. ಬರಿಯ ಭಾವವಿಲಾಸದಿಂದ ಸಮಗೊದಗುವ ತೃಪ್ತಿಯೆ ಅದರ ಪರಮಪ್ರಯೋಜನ ಮತ್ತು ಪುರುಷಾರ್ಥ. ನಮ್ಮ ನಮ್ಮ ಭಾವವಿಲಾಸವಲ್ಲದೆ ಇನ್ನಾವ ವಿಧವಾದ ವಸ್ತುಸಂವಾದವೂ ಅದಕ್ಕಿರುವುದೂ ಇಲ್ಲ, ಅದರಿಂದೊದಗುವುದೂ ಇಲ್ಲ, ಸಾಧ್ಯವಾಗುವುದೂ ಇಲ್ಲ.

ಪ್ರಾಯೋಗಿಕ ಮನಃಶಾಸ್ತ್ರಜ್ಞರಾಗಿರುವ ಇತ್ತೀಚಿನ ಪಾಶ್ಚಾತ್ಯ ಸಾಹಿತ್ಯ ಮೀಮಾಂಸಕರಲ್ಲಿ ಕೆಲವರು ಇದನ್ನೆ ಸಿದ್ಧಾಂತವಾಗಿ ಪ್ರತಿಪಾದಿಸಿದ್ದಾರೆ. ಅದರ ಜಿಜ್ಞಾಸೆ ಇನ್ನೂ ಅನೇಕ ತಾತ್ತ್ವಿಕವಾದ ಪ್ರಶ್ನೆಗಳಿಗೆ ಎಡೆಗೊಡುವುದರಿಂದ ಅದರ ಕೂಲಂಕಷ ವಿಮರ್ಶೆಗೆ ಮತ್ತೊಂದು ಪ್ರತ್ಯೇಕ ಪ್ರಬಂಧವೆ ಮೀಸಲಾಗಬೇಕಾಗುತ್ತದೆ.

ಕುವೆಂಪು.

ಪ್ರಾಣಿಗಳ ವರ್ಣರಹಸ್ಯ

ಜಗತ್ತಿನಲ್ಲಿ ಜೀವನ ಸಂಗ್ರಾಮವು ಎಡೆಬಿಡದೆ ನಡೆಯುವುದು ಸ್ವಾಭಾವಿಕ ಸಂಗತಿ. ಈ ವಾತಾವರಣದಲ್ಲಿ ಬೆಳೆಯುವ ಪ್ರಾಣಿಗಳು ತಮ್ಮ ಪ್ರಾಣ ಮತ್ತು ಸಂತಾನವನ್ನು ಕಾಪಾಡಿಕೊಳ್ಳಲು ತಮ್ಮ ಜೀವನವನ್ನು ಸುವ್ಯವಸ್ಥಿಗೊಳಿಸಿಕೊಳ್ಳ ಬೇಕಾಗಿದೆ. ತಮ್ಮ ಶತ್ರುಗಳೊಡನೆಯೂ ಮತ್ತು ಕಠಿಣವಾದ ಬಾಹ್ಯಪರಿಸ್ಥಿತಿಯೊಡನೆಯೂ ಹೋರಾಡಿ ಆತ್ಮರಕ್ಷಣೆ ಮಾಡಿಕೊಳ್ಳಲು ದೇಹಬಲವೂ ಪ್ರಾಣಿಗಳಿಗೆ ರಕ್ಷಣಸಾಧನಗಳೂ ಅತ್ಯಾವಶ್ಯಕ. ರಕ್ಷಣಸಾಧನಗಳಲ್ಲಿ ವರ್ಣವಿನ್ಯಾಸವೂ ಒಂದು. ಇದರ ಜತೆಗೆ ದೇಹರಚನೆಯೂ ಪಾತ್ರವಹಿಸಿ ಉದ್ದೇಶವು ಪೂರ್ಣಗೊಳ್ಳುತ್ತದೆ.

ವೈಜ್ಞಾನಿಕರು ವರ್ಣೋತ್ಪತ್ತಿಯನ್ನು ಅನೇಕ ಬಗೆಗಳಲ್ಲಿ ಸ್ಪಷ್ಟವಾಗಿ ನಿರೂಪಿಸಿದ್ದಾರೆ. ಬಣ್ಣವನ್ನು ಹೊರಚೆಲ್ಲುವ ವಸ್ತುವಿಗಿರುವುದು ಕೇವಲ ಆಕಾರ; ಆದರೆ ಬಣ್ಣವಲ್ಲ. ಬಣ್ಣಗಳು ಸೂರ್ಯಕಿರಣಗಳ ದೊಂಬರ ಆಟದ ಫಲ. ಸೂರ್ಯರಶ್ಮಿಯು ಕಾಮನಬಿಲ್ಲಿನ ಬಣ್ಣಗಳಾಗಿ ವಿಭಜಿಸಲ್ಪಡುತ್ತದೆಯೆಂಬುದು ತಿಳಿದ ಸಂಗತಿ. ಪ್ರಾಣಿಗಳ ಚರ್ಮದಲ್ಲಿರುವ ವರ್ಣಕಗಳು (Pigments) ಈ ಬಣ್ಣಗಳನ್ನು ಹೀರುತ್ತವೆ. ಹಾಗೆ ಹೀರದೇ ಹೊರಹೊರಟ ಬಣ್ಣಗಳು ನೋಟಕನ ಕಣ್ಣಿಗೆ ಬಿದ್ದು ವರ್ಣಕಗಳು ಆ ಬಣ್ಣವನ್ನೇ ಅನುಸರಿಸುತ್ತವೆ. ಈ ವರ್ಣಕಗಳ ಬಣ್ಣಗಳೇ ಚೇತನ ವಸ್ತುಗಳ ಬಣ್ಣ. ಎಲ್ಲಾ ಬಿಲ್ಲು ಬಣ್ಣಗಳನ್ನೂ ಹೀರುವ ವರ್ಣಕಗಳು ಕಪ್ಪಾಗಿ ಕಾಣುತ್ತವೆ. ನೀಲವರ್ಣದ ಹೂವಿಗೆ ನೀಲಿಬಣ್ಣ ಹೇಗೆ ಬಂತೆಂಬುದನ್ನು ಊಹಿಸುವುದು ಸುಲಭ. ಆ ಹೂವಿನ ಪ್ರತಿಯೊಂದು ಅಣುಕೋಶದಲ್ಲಿಯೂ ಮನೆಮಾಡಿಕೊಂಡಿರುವ ವರ್ಣಕಗಳಿಗೆ ನೀಲಿಬಣ್ಣವನ್ನು ಹೀರುವ ಸಾಮರ್ಥ್ಯವಿಲ್ಲದಿರುವುದೇ ಕಾರಣ. ಕೆಲವು ವೇಳೆ ವರ್ಣಕಗಳ ಸಹಾಯವಿಲ್ಲದೆಯೇ ರಚನೆ ಮತ್ತು ಆಕಾರಗಳಿಂದ ಬಣ್ಣಗಳು ಉತ್ಪತ್ತಿಯಾಗುತ್ತವೆ. ಸೂರ್ಯರಶ್ಮಿಯು ಅಶ್ರಗ(Prism)ದ ಮೂಲಕ ಹಾದು ಹೊರಗೆ ಬರುವುದರಲ್ಲಿಯೇ ವರ್ಣವಿಭಜನೆಯನ್ನು ಹೊಂದುತ್ತವೆ. ವಜ್ರದ ಥಳಥಳಿಸುವ ಬಣ್ಣಗಳೂ ಮತ್ತು ಪಕ್ಷಿಗಳ ಮಿರುಮಿರುಗುವ ವರ್ಣಗಳೂ ಅಶ್ರಗೀಯ ವರ್ಣಗಳು.

ಪ್ರಾಣಿಜೀವನದ ಹೋರಾಟದಲ್ಲಿ ಮುಖ್ಯಪಾತ್ರವನ್ನು ವಹಿಸುವ ವರ್ಣಕಗಳ ಉಗಮವನ್ನು ತಿಳಿಯುವುದು ಪ್ರಕೃತ. ಪ್ರತಿಯೊಂದು ದೈವಿಕ ವಸ್ತುವಿಗೂ

ರಾಸಾಯನಿಕ ಮತ್ತು ಭೌತಿಕ ರಚನೆಗಳಿವೆ. ಈ ರಚನೆಗಳೇ ಬೆಳಕಿನ ಅಲೆಗಳನ್ನು ಹೀರಿ ಬಣ್ಣದ ಉತ್ಪತ್ತಿಗೆ ಕಾರಣವಾಗುತ್ತವೆ. ಇದಕ್ಕೋಸ್ಕರವೇ ನೆತ್ತರಿನ ಬಣ್ಣ ಕೆಂಪು; ಕೊಬ್ಬಿನ ಬಣ್ಣ ಬಿಳುಪು ಮತ್ತು ಮೀನಿನ ದೇಹದೊಳಗಿರುವ ಗಾಳಿಚೀಲದ ಹೊರಮೈ ಬೆಳ್ಳಿಯಂತೆ ಮಿರುಗುತ್ತದೆ. ಅಂದರೆ ಈ ಬಣ್ಣಗಳು ಕೇವಲ ಆಕಸ್ಮಿಕವಾಗಿ ಬಂದವುಗಳೇ ಹೊರತು, ಮತ್ತೆ ಬೇರಲ್ಲ; ಅಲ್ಲದೆ ಇವುಗಳಿಗೆ ಅರ್ಥವೂ ಇಲ್ಲ. ಆದುದರಿಂದ ಈ ತೆರದ ವರ್ಣಗಳನ್ನು ಅರ್ಥವಿರಹ ಅಥವಾ ಅಪ್ರಯೋಜಕ ವರ್ಣಗಳೆಂದು ಕರೆಯುವುದುಂಟು.

ಈ ಅಪ್ರಯೋಜಕ ವರ್ಣಗಳೇ ಜೀವನದ ಹೋರಾಟಕ್ಕೆ ನೆರವು ನೀಡುವುದೆಂಬ ಸಿದ್ಧಾಂತವನ್ನು ಚಾರ್ಲ್ಸ್ ಡಾರ್ವಿನ್ನನು ಸಾಧಿಸಿದ್ದಾನೆ. ಪ್ರಕೃತಿಯ ಆಯ್ಕೆ (Natural Selection) ಯಿಂದಾಗಲೀ ಅಲ್ಲವೇ ಲೈಂಗಿಕ ಆಯ್ಕೆ (Sexual Selection) ಯಿಂದಾಗಲೀ ಈ ವರ್ಣಗಳು ಯೋಗ್ಯರೀತಿಯಲ್ಲಿ ಉಪಯೋಗಿಸಲ್ಪಟ್ಟು ಜೀವನದ ಹೋರಾಟದಲ್ಲಿ ಸಹಾಯ ನೀಡುತ್ತದೆಯೆಂಬುದೇ ಆ ಸಿದ್ಧಾಂತದ ತಿರುಳು. ರಕ್ತದ ಬಣ್ಣವು ಕಾಂತಿಗೆ ನೆರವಾಗಬಹುದು; ಕೊಬ್ಬಿನ ಬಿಳುಪು ಕ್ರಿಮಿಕೀಟಗಳ ಬಿಳುಪು ಮಚ್ಚೆಗಳಿಗೆ ಸಹಾಯಕವಾಗಬಹುದು. ಆಗ ಮಾತ್ರ ಜೀವನದ ಘರ್ಷಣೆಯಲ್ಲಿ ಬಣ್ಣಗಳು ಮುಖ್ಯಪಾತ್ರವಹಿಸಿ ಜೀವಿಗಳು ಜಗತ್ತಿನಲ್ಲಿ ಉಳಿಯಲು ನೆರವಾಗುತ್ತವೆ. ಹೀಗೆ ವರ್ಣಗಳು ರಕ್ತಗತವಾಗಿ ವಂಶಪಾರಂಪರ್ಯವಾಗಿ ಬರಬೇಕಾದರೆ ಅನೇಕ ಸಂತತಿಗಳು ಕಳೆಯಬೇಕು. ಆಗ ಮಾತ್ರವೇ ವರ್ಣಗಳು ವಿಕಾಸಹೊಂದಿ ಪೂರ್ಣವಾಗುತ್ತವೆ; ಅರ್ಥಗರ್ಭಿತ ಅಥವಾ ಪ್ರಯೋಜಕ ವರ್ಣಗಳಾಗುತ್ತವೆ.

ಒಂದು ಪಕ್ಷ ವರ್ಣಗಳೇ ಬಾಳ್ವೆಯ ಹಿತಕ್ಕೆ ಧಕ್ಕೆತರುವ ಪಕ್ಷದಲ್ಲಿ ಪ್ರಕೃತಿಯ ಆಯ್ಕೆಯ ಕೈವಾಡದಿಂದಲೇ ಅರ್ಥರಹಿತವರ್ಣಗಳೂ ಕೂಡ ನಶಿಸಿಹೋಗುತ್ತವೆ. ಉದಾಹರಣೆಗೆ ಪ್ರಕೃತಿಯಲ್ಲಿರುವ ಪಾರದರ್ಶಕ ಮೀನುಗಳನ್ನು (Transparent Fishes) ಹೆಸರಿಸಬಹುದು. ಇವು ರಕ್ತದ ಕೆಂಪು ಬಣ್ಣವನ್ನು ಕಳೆದುಕೊಂಡು ಶತ್ರುಗಳ ನೋಟಕ್ಕೆ ಬೀಳುವುದಿಲ್ಲ.

ಆಯಾಯ ವರ್ಣಗಳ ಉಪಯುಕ್ತತೆಯನ್ನರಿತು ಪ್ರಯೋಜಕ ವರ್ಣಗಳನ್ನು ವರ್ಗೀಕರಣ ಮಾಡಬಹುದು. ಬಣ್ಣಗಳು ದೈಹಿಕ ವ್ಯಾಪಾರ ಮತ್ತು ಗುಣಧರ್ಮಗಳಿಗೆ ಸಹಾಯ ನೀಡಬಹುದು. ಜೀವನದ ಹೋರಾಟದಲ್ಲಿ ಮುಖ್ಯಪಾತ್ರವನ್ನು ವಹಿಸುವ ವರ್ಣವಿನ್ಯಾಸವನ್ನು ರಕ್ಷಣೆಯ ಮತ್ತು ಆಕ್ರಮಣದ ಸಾದೃಶ್ಯ (Protective and Aggressive Resemblences); ಮೋಹಕ ವರ್ಣವಿನ್ಯಾಸ (Alluring Colouration) ಭಯೋತ್ಪಾದಕ ವರ್ಣವಿನ್ಯಾಸ (Warning

Colouration); ರಕ್ಷಣೆಯ ಮತ್ತು ಆಕ್ರಮಣದ ಅನುಕರಣ (Protective and Aggressive Mimicry) ಗಳಾಗಿ ವಿಂಗಡಿಸಬಹುದು. ಇದಲ್ಲದೆ ಪ್ರಿಯನ ಅಥವಾ ಪ್ರೇಯಸಿಯ ಮನವನ್ನು ಒಲಿಸಿಕೊಳ್ಳುವ ಕಾರ್ಯದಲ್ಲಿ ನೆರವಾಗುವ ಬಣ್ಣಗಳಿಗೆ ಲೈಂಗಿಕ ವರ್ಣವಿನ್ಯಾಸ (Sexual Colouration) ವೆಂದು ಕರೆಯುವುದುಂಟು.

ಪ್ರಕೃತಿಯ ಬಾಳ್ವೆಯಲ್ಲುಳಿಯುವ ಹೋರಾಟ (Struggle for Existence) ಕ್ಕೆ ಅನೇಕ ಮಾರ್ಗಗಳನ್ನು ಒದಗಿಸಿಕೊಟ್ಟಿದೆ. ಇದರಲ್ಲಿ ವೈಚಿತ್ರ್ಯ ವೈವಿಧ್ಯತೆಗಳು ಬಹಳ. ಒಂದು ಕಡೆ ಮಾಂಸಾಹಾರಿ ಪ್ರಾಣಿಗಳು ಆಹಾರವನ್ನು ಒದಗಿಸಿಕೊಳ್ಳಬೇಕಾದರೆ ಮತ್ತೊಂದು ಕಡೆ ಸಸ್ಯಾಹಾರಿ ಪ್ರಾಣಿಗಳು ಬಲವಾದ ಪ್ರಾಣಿಗಳ ಘರ್ಷಣೆಗಳ ಮಧ್ಯೆ ತಮ್ಮ ಬಾಳ್ವೆಯನ್ನು ಸಾಗಿಸಬೇಕಾಗಿದೆ. ಮೊದಲಗುಂಪಿಗೆ ಸೇರಿದ ಹಿಂಸ್ರ ಜಂತುಗಳು ತಮ್ಮ ಬೇಟೆಯ ಪ್ರಾಣಿಗಳಿಗೆ ಗೋಚರವಾಗದಂತೆ ಅವುಗಳನ್ನು ಸಂಧಿಸುವುವು. ಎರಡನೇ ಗುಂಪಿನ ಅಬಲ ಜಂತುಗಳು ಹಿಂಸ್ರ ಜಂತುಗಳ ನೋಟಕ್ಕೆ ಬೀಳದಂತೆ ಮರೆಮಾಚಿಕೊಳ್ಳುವುವು. ಈ ಕಾರ್ಯ ಜಯವಾಗಬೇಕಾದರೆ, ತಮ್ಮ ಶತ್ರುಗಳ ಗಮನಕ್ಕೆ ಬೀಳದ ವಸ್ತುಗಳ ಆಕಾರ ಮತ್ತು ಬಣ್ಣಗಳನ್ನು ಅವಲಂಬಿಸಬೇಕು. ಇಲ್ಲವೇ ತಾವಿರುವ ವಾತಾವರಣಕ್ಕೆ ತಕ್ಕಂತೆ ಪೂರ್ಣವಾಗಿ ಹೊಂದಿಕೊಂಡು ಐಕ್ಯವಾಗಬೇಕು. ಈ ಅವಲಂಬನೆಗೆ ರಕ್ಷಣೆಯ ಸಾದೃಶ್ಯವೆಂದು ಹೆಸರು. ಸಮುದ್ರತೀರದ ಏಡಿಗಳು ಜೊಂಡು ಮತ್ತು ಪಾಚಿಯನ್ನು ಮೈಗಂಟಿಸಿಕೊಂಡು ಸುತ್ತಮುತ್ತಣ ಪ್ರದೇಶದಲ್ಲಿಯೇ ಐಕ್ಯವಾಗಿರುತ್ತವೆ. ಅಲುಗಾಡದೇ ಇರುವಾಗ ಇವು ಜೊಂಡು ಅಥವಾ ಕಲ್ಲುಗಳಂತೆ ಭಾಸವಾಗುತ್ತವೆ. ಹಸುರು ಗಿಡದ ಮೇಲೆ ಹಸುರು ಹಾವನ್ನೂ, ಮರದ ತೊಗಟೆಯ ಮೇಲೆ ಅಪ್ಪಿರುವ ಉಡ ಇಲ್ಲವೇ ಜೀರುದುಂಬಿಗಳನ್ನೂ ಗುರುತಿಸುವುದು ಕಷ್ಟ. ಅನೇಕ ಕ್ರಿಮಿಕೀಟಗಳು ಗಿಡದ ರೆಂಬೆಯ, ಎಲೆಯ ಅಥವಾ ಮೊಗ್ಗಿನ ಆಕಾರವನ್ನು ಹೊಂದಿ ನೋಟಕನ ಕಣ್ಣಿಗೆ ಅಗೋಚರವಾಗಿರುತ್ತವೆ. ಅನೇಕರಿಗೆ ಹಸುರು ಮಿಡಿತೆಯನ್ನು ಹಸುರು ಹುಲ್ಲಿನಲ್ಲಿಯೂ, ಬೂದುಬಣ್ಣದ ಮಿಡಿತೆಯನ್ನು ಕಂದು ಮಣ್ಣಿನಲ್ಲಿಯೂ ಗುರುತುಹಚ್ಚುವ ಕಷ್ಟ ಅನುಭವದ ಮಾತು. ನಮ್ಮ ದೇಶದ ಕ್ಯಾಲಿಮಾ (*Kallima*) ಎಂಬ ಜಾತಿಯ ಚಿಟ್ಟೆಗೆ ಮುಂದಿನ ರೆಕ್ಕೆಯ ತುದಿಯು ಎಲೆಯ ತುದಿಯನ್ನೂ, ಹಿಂದಿನ ರೆಕ್ಕೆಯು ಬಾಲದಂತೆ ಬೆಳೆದು ಎಲೆಯ ತೊಟ್ಟನ್ನೂ ಹೋಲುತ್ತದೆ. ಇದು ಗಿಡದ ಮೇಲೆ ಕುಳಿತಾಗ ತರಗೆಲೆಯೆಂದೇ ಭಾಸವಾಗುತ್ತದೆ.

ಮೇಲೆ ಹೇಳಿದ ಪ್ರಾಣಿಗಳಿಗೆ ಬಣ್ಣ ಬದಲಾಯಿಸಿಕೊಳ್ಳುವ ಚೈತನ್ಯವಿಲ್ಲ. ಅನೇಕ ಪ್ರಾಣಿಗಳು ಋತುಧರ್ಮಕ್ಕೆ ತಕ್ಕಂತೆ ಪರಿಸ್ಥಿತಿ ಬದಲಾಯಿಸಿದಂತೆಲ್ಲಾ

ತಾವೂ ಬಣ್ಣ ಬದಲಾಯಿಸಿಕೊಳ್ಳುವ ವೈಶಿಷ್ಟ್ಯವನ್ನು ಪಡೆದಿವೆ. ಉತ್ತರ ಶೀತವಲಯದ ವೋಲ್ ಎಂಬ ಜಾತಿಯ ಪ್ರಾಣಿಯು ವರ್ಷಕ್ಕೆರಡುಮೂರಾವರ್ತಿ ತನ್ನ ಬಣ್ಣ ಬದಲಾಯಿಸಿಕೊಳ್ಳುತ್ತದೆ. ಸ್ಕ್ಯಾಂಡಿನೇವಿಯಾದ ನರಿ, ಮೊಲ ಮೊದಲಾದ ಪ್ರಾಣಿಗಳು ಚಳಿಗಾಲದಲ್ಲಿ ಬಿಳಿಯ ಬಣ್ಣವನ್ನೂ, ಬೇಸಿಗೆಯಲ್ಲಿ ಕಂದು ಬಣ್ಣವನ್ನೂ ವಾತಾವರಣಕ್ಕೆ ತಕ್ಕಂತೆ ಬದಲಾಯಿಸಿಕೊಳ್ಳುತ್ತವೆ.

ಬಣ್ಣ ಬದಲಾಯಿಸುವ ವಿಶಿಷ್ಟ ಗುಣ ನಮ್ಮ ದೇಶದ ಗೋಸುಂಬೆಯಲ್ಲಿ ಶಿಖರವನ್ನು ಮುಟ್ಟಿದೆ. ಇದು ನಿಮಿಷನಿಮಿಷಕ್ಕೂ ಬಣ್ಣ ಬದಲಾಯಿಸಿಕೊಳ್ಳುವ ಪ್ರಾಣಿ. ಚರ್ಮದ ಅಣುಕೋಶಗಳಲ್ಲಿರುವ ವರ್ಣಕಗಳ ಸ್ಥಳಪಲ್ಲಟವೇ ವಿವಿಧ ವರ್ಣೋತ್ಪತ್ತಿಗೆ ಕಾರಣ. ಹಿಂದಿನ ಪ್ರಾಣಿಶಾಸ್ತ್ರಜ್ಞರೆಲ್ಲರೂ ಈ ಬಣ್ಣ ಬದಲಾವಣೆಗೆ ಪ್ರಾಶಸ್ತ್ಯ ಕೊಟ್ಟು ರಕ್ಷಣೆಯ ಸಾದೃಶ್ಯದ ಗುಂಪಿಗೆ ಸೇರಿಸಿದ್ದರು. ಆದರೆ ನವೀನ ಪರಿಶೋಧನೆಗಳಿಂದ ಈ ಬಣ್ಣದ ಬದಲಾವಣೆಗೂ ಮತ್ತು ಪರಿಸ್ಥಿತಿಯ ಬಣ್ಣಕ್ಕೂ ಯಾವ ಸಂಬಂಧವೂ ಇಲ್ಲವೆಂದು ಗೊತ್ತಾಗಿದೆ. ಈ ಬಣ್ಣದ ಬದಲಾವಣೆ ಕೇವಲ ಅನೈಚ್ಛಿಕವಾದುದು. ಆದರೆ ರಾಂಬಾಯ್‌ಡಿಕ್‌ತ್ತಿಸ್ (*Rhomboidichthys*) ಎಂಬ ಜಾತಿಯ ಮೀನು ತನ್ನ ಬಣ್ಣವನ್ನು ತನ್ನ ವಾತಾವರಣದ ಬಣ್ಣಕ್ಕೆ ತಕ್ಕಂತೆ ಬದಲಾಯಿಸಿಕೊಳ್ಳುವ ನಿಜಾಂಶವನ್ನು ಇತ್ತೀಚಿನ ಪರಿಶೋಧನೆಗಳು ಸಾಧಿಸಿವೆ.

ಇದುವರೆಗೂ ನಿರೂಪಿಸಿದ ಉದಾಹರಣೆಗಳು ಶತ್ರುಗಳಿಂದ ತಪ್ಪಿಸಿಕೊಳ್ಳಲು ಕೈಕೊಂಡ ಉಪಾಯಗಳಾದರೆ, ಬೇಟೆಯಾಡುವ ಹಿಂಸ್ರ ಜಂತುಗಳು ಹೀಗೆಯೇ ವಾತಾವರಣವನ್ನು ಅಥವಾ ತಮ್ಮ ನೆರೆಹೊರೆಯ ವಸ್ತುಗಳ ಆಕಾರ ಮತ್ತು ಬಣ್ಣಗಳನ್ನು ಅವಲಂಬಿಸಿ ಇತರ ಪ್ರಾಣಿಗಳ ಮೇಲೆ ಧಾಳಿ ನಡೆಸುವುದಕ್ಕೂ ಶಕ್ತವಾಗಿವೆ. ಹುಲಿ, ಚಿರತೆ ಮೊದಲಾದ ದುಷ್ಟ ಜಂತುಗಳು ಬಿದಿರು ಮೆಳೆಗಳಲ್ಲಿಯೂ, ಬಿಸಿಲು ನೆರಳಿರುವ ಪ್ರದೇಶದ ಪೊದೆಗಳಲ್ಲಿಯೂ ಇದ್ದು ನೋಟಕನ ಕಣ್ಣಿಗೆ ಬೀಳುವುದು ಅತಿ ವಿರಳ. ಉತ್ತರಧ್ರುವದ ಕರಡಿಗಳು ಹಿಮದ ಸಾದೃಶ್ಯವನ್ನು ಅವಲಂಬಿಸಿದರೇನೇ ಬೇಟೆಗೆ ಅನುಕೂಲ.

ಕೆಲವು ದುಷ್ಟಪ್ರಾಣಿಗಳು ಶ್ರಮವಹಿಸದೆ ತಮ್ಮ ಆಹಾರ ಜಂತುಗಳನ್ನು ತಮ್ಮ ಆಕಾರ ಮತ್ತು ಮೋಹಕ ಬಣ್ಣಗಳಿಂದ ಭ್ರಮೆಗೊಳಿಸಿ ಆಕರ್ಷಿಸುತ್ತವೆ. ಫ್ರೈನೋಕೆಫ್ಯಾಲಸ್ (*Phrynocephalus*) ಎಂಬ ಜಾತಿಯ ಏಷ್ಯಾಖಂಡದ ಹಲ್ಲಿಯು ಮರಳುಕಾಡಿನ ನಿವಾಸಿ. ಇದರ ಕಟವಾಯಿಯ ಚರ್ಮದ ಮಡಿಕೆಯು ಕೆಂಬಣ್ಣ. ಬಾಯಿಯ ರಚನೆಯು ಮರಳುಕಾಡಿನ ಗಿಡದ ಹೂವನ್ನು ಹೋಲುತ್ತದೆ. ಕ್ರಿಮಿಕೀಟಗಳು ಈ ರಚನೆಯನ್ನು ಹೂವೆಂದು ಮೋಸಹೋಗಿ ಹಲ್ಲಿಯ ಬಾಯಿಗೆ

ತುತ್ತಾಗುತ್ತವೆ. ಕ್ರಿಮಿಕೀಟಗಳನ್ನೇ ತಿಂದು ಜೀವಿಸುವ ನಮ್ಮ ದೇಶದ ಹೈಮೆನೋಪಸ್ (*Hymenopus*) ಎಂಬ ಜಾತಿಯ ಮಿಳ್ಳಿ (Mantid)ಯ ಕಾಲುಗಳು ಪಾಟಲವರ್ಣದ ಹೂದಳಗಳನ್ನು ಹೋಲುತ್ತವೆ. ಇದು ಬಳ್ಳಿಯ ಮೇಲೆ ಕುಳಿತಾಗ ಹೂವಿನ ಆಕಾರವನ್ನು ಹೋಲುವುದರಿಂದ ಕ್ರಿಮಿಕೀಟಗಳು ಇದರ ರಚನೆಗೆ ಮೋಸ ಹೋಗದಿರುತ್ತವೆಯೇ ?

ಇದುವರೆಗೂ ವಿವರಿಸಿದ ವರ್ಣವಿನ್ಯಾಸಗಳು ಶತ್ರುಗಳಿಗೆ ಕಾಣದಂತೆ ಪ್ರಾಣಿಗಳು ತೊಟ್ಟ ರಕ್ಷಣ ಕವಚ ಅಲ್ಲವೇ ಮೋಹಕ ಕವಚ. ಇವಕ್ಕೆ ಅವ್ಯಕ್ತ ಕವಚಗಳೆಂದೂ ಕರೆಯುವುದುಂಟು. ಇವಲ್ಲದೆ ಅನೇಕ ಪ್ರಾಣಿಗಳು ತಮ್ಮ ಗುಣವಿಶೇಷಗಳನ್ನೇ ಎದ್ದು ಕಾಣುವಂತೆ ಪ್ರದರ್ಶಿಸಿ, ಶತ್ರುಗಳು ತಮ್ಮ ಬಳಿಗೆ ಬಾರದಂತೆ ವರ್ಣವಿನ್ಯಾಸವನ್ನು ಪಡೆದಿರುತ್ತವೆ. ಇವುಗಳನ್ನು ಭಯೋತ್ಪಾದಕ ವರ್ಣವಿನ್ಯಾಸ ಮತ್ತು ಅನುಕರಣಗಳೆಂದು ಎರಡು ಗುಂಪುಗಳನ್ನಾಗಿ ವರ್ಗೀಕರಣ ಮಾಡಬಹುದು.

ಭಯೋತ್ಪಾದಕ ಸುವ್ಯಕ್ತಕವಚಗಳು ಭಾವೀ ಶತ್ರುಗಳಿಗೇ ಅನುಕೂಲ ; ಅಲ್ಲದೆ ಎಚ್ಚರಿಕೆ ಕೊಡುವ ಸಾಧನಗಳು. ಶತ್ರುಗಳು ಒಂದು ವೇಳೆ ಧಾಳಿ ನಡೆಸಲಿಚ್ಛಿಸಿದರೆ ಮುಂದೆ ಒದಗುವ ಕಷ್ಟಗಳನ್ನು ಮೊದಲೇ ತಮ್ಮ ಗುಣವಿಶೇಷಗಳಿಂದ ಸ್ಪಷ್ಟವಾಗಿ ಸೂಚಿಸಿ ಎಚ್ಚರಿಕೆ ಕೊಡುತ್ತವೆ. ಅಮೇರಿಕಾದ ಸ್ಕಂಕ್ ಎಂಬ ಸಸ್ತನಿ ವರ್ಗದ ಪ್ರಾಣಿಯು ದುರ್ಗಂಧವನ್ನು ಹೊರಚೆಲ್ಲುವುದರಲ್ಲಿ ಪ್ರಸಿದ್ಧಿ. ಆ ಪ್ರಾಣಿಯ ಆಸನದ ಬಳಿಯಿರುವ ಗ್ರಂಥಿಯೇ ದುರ್ಗಂಧದ ತೌರುಮನೆ. ಈ ದ್ರವ ಕಣ್ಣಿಗೆ ಬಿದ್ದರೆ ಕುರುಡಾಗುತ್ತದೆ; ಮೈ ಮೇಲೆ ಬಿದ್ದರೆ ಉರಿಯುಂಟುಮಾಡುತ್ತದೆ. ಈ ಪ್ರಾಣಿಯು ಸದಾ ಬಿಳುಪಾದ ಪೊದೆಯುಳ್ಳ ಬಾಲವನ್ನೇ ಅಪಾಯಸೂಚಿ ಧ್ವಜದಂತೆ ಎತ್ತಿಹಿಡಿದು ಅಲೆದಾಡುತ್ತಿರುತ್ತದೆ. ಇದನ್ನು ನೋಡಿದೊಡನೆಯೇ ದೂರದಲ್ಲಿರುವ ಶತ್ರುಗಳಿಗೆ ದ್ರವದ ವಿಶೇಷಗುಣದ ನೆನಪು ಬಂದು ಬಳಿ ಸಾಗುವುದಿಲ್ಲ. ಅಮೇರಿಕಾ ಖಂಡದ ಉಷ್ಣವಲಯದ ಎಲಾಪ್ಸ್ (*Elaps*) ಎಂಬ ಜಾತಿಯ ಹವಳದ ಹಾವು ಕಡುವಿಷದ ಸರ್ಪ. ಕೆಂಪು ಮತ್ತು ಕಪ್ಪು ಅಥವಾ ಹಳದಿ ಬಣ್ಣದ, ಕಣ್ಣು ಕೋರೈಸುವ ಪಟ್ಟೆಪಟ್ಟೆಯ ರಚನೆಯೇ ಶತ್ರುಗಳನ್ನು ಹೆದರಿಸಲು ಸಾಕು. ಮಿರುಮಿರುಗುವ ಬಣ್ಣವುಳ್ಳ ನಾಗರಹಾವು ಕಣ್ಣು ಮಚ್ಚೆಯ ಹೆಡೆಯನ್ನು ಎತ್ತಿ ನೋಡಿದರೆ ಭಯಪಟ್ಟು ಯಾರು ತಾನೆ ಪಲಾಯನ ಮಾಡುವುದಿಲ್ಲ ! ಕ್ರೋಟಾಲಸ್ (*Crotalus*) ಎಂಬ ಬುಡುಬುಡಿಕೆ ಹಾವು (Rattle Snake) ಮಾಡುವ ಸಪ್ಪಳ ಕೇಳಿ ಯಾರು ತಾನೆ ಹತ್ತಿರ ಹೋದಾರು ? ಕ್ರಿಮಿಕೀಟಗಳಲ್ಲಂತೂ ಭಯೋತ್ಪಾದಕ ವರ್ಣಗಳನ್ನು ಯಥೇಚ್ಛವಾಗಿ ಕಾಣಬಹುದು ; ಪ್ರತಿಯೊಂದು ಬೆಳವಣಿಗೆಯ

ಅವಸ್ಥೆಯಲ್ಲಿಯೂ ಶತ್ರುಗಳಿಂದ ಪಾರಾಗಲು ಕೆಲವು ಚಿಟ್ಟೆಯ ಮರಿಗಳು ಭಯಂಕ ರಾಕೃತಿಯ ಕಂಬಳಿ ಹುಳುಗಳನ್ನು ಹೋಲುತ್ತವೆ. ಕೆಲವು ಶತ್ರುಗಳ ಮೇಲೆ ದ್ರವ ಸುರಿಸಿ ಉರಿಯುಂಟುಮಾಡುತ್ತವೆ; ಮತ್ತೆ ಕೆಲವು ಉರಿಯುಂಟುಮಾಡುವ ಕೂದಲುಗಳಿಂದ ಶತ್ರುಗಳನ್ನು ಓಡಿಸುತ್ತವೆ.

ಪ್ರಾಣಿಗಳ ಅನುಕರಣೆಯು (Mimicry) ಬಲು ಸ್ವಾರಸ್ಯವಾದ ರಕ್ಷಣೆಯ ಸಾಧನೆ. ವಿಷಯ ದೊಡ್ಡದು; ಸ್ಥಳಸಂಕೋಚದಿಂದ ಸೂಕ್ಷ್ಮವಾಗಿ ವಿವರಿಸಲು ಯತ್ನಿಸಿದೆ. ಬಲಿಷ್ಠವಾದ ಪ್ರಾಣಿಗಳಿಗೇ ಬಾಳ್ವೆಯ ಹೋರಾಟದಲ್ಲಿ ಉಳಿವು ಮತ್ತು ಜಯವೆಂದು ಚಾರ್ಲ್ಸ್ ಡಾರ್ವಿನ್ನನು ಸಾರಿದ್ದಾನೆ ಮತ್ತು ವಾದಿಸಿದ್ದಾನೆ. ಹಾಗಾದರೆ ಅಚಲ ಪ್ರಾಣಿಗಳು ಬದುಕುವ ಬಗೆ ಹೇಗೆ? ಹೋರಾಟದಲ್ಲಿ ಜಯ ಲಭಿಸಬೇಕಾದರೆ ಬಲಿಷ್ಠ ಪ್ರಾಣಿಗಳಂತೆ ಕಾಣಿಸಿಕೊಳ್ಳಬೇಕು—ಕಬ್ಬಿನ ಗದ್ದೆಯಲ್ಲಿ ಹುಲಿವೇಷದ ಚರ್ಮವನ್ನು ಹೊದ್ದು ನಿರ್ಭಯವಾಗಿ ಮೇಯುತ್ತಿದ್ದ ಕತ್ತೆಯಂತೆ. ಜ್ಞಾನಶಿಖರವನ್ನೇ ಮುಟ್ಟಿದ ಮಾನವನಿಗೆ ಹುಲಿಯು ಕಬ್ಬು ತಿನ್ನಬಲ್ಲುದೇ ಎಂಬ ಸಂಶಯ ದೂರ ಸರಿಯಲು ಅನೇಕ ದಿನಗಳು ಬೇಕಾದುವೆಂದು ನಾವು ಪ್ರಾಥಮಿಕ ಶಾಲೆಯಲ್ಲಿ ಓದಿದ್ದೇವೆ. ಮೆದಳು ವಿಕಾಸಹೊಂದದಿರುವ ಪ್ರಾಣಿಗಳು ಆಕಾರ ಮತ್ತು ಬಣ್ಣಗಳಿಗೆ ಮರುಳಾಗುವುದರಲ್ಲೇನು ಆಶ್ಚರ್ಯ?

ಅನುಕರಣ ಮಾಡುವ ಪ್ರಾಣಿಗಳಿಗೆ ಕೈಕೊಂಡ ಕಾರ್ಯ ಕೈಗೂಡಬೇಕಾದರೆ ಕೆಲವು ನಿಯಮಗಳಿಗೆ ಒಳಪಟ್ಟಿರಬೇಕೆಂದು ವ್ಯಾಲೇಸನು ಹೇಳಿದ್ದಾನೆ. ಮೊದಲನೆಯ ದಾಗಿ ಅನುಕರಣೆಮಾಡುವ ಪ್ರಾಣಿಗಳು ಸಾಧಾರಣವಾಗಿ ರಕ್ಷಣರಹಿತವಾದುವುಗಳು. ಎರಡನೆಯದಾಗಿ, ಇವು ಸಂಖ್ಯೆಗಳಲ್ಲಿ ಕಡಮೆಯಾಗಿರಬೇಕು. ಈ ಅಖಿಲ ನಕಲು ಮಾಡುವ ಜಂತುಗಳು (Imitator) ನಕಲು ಕೊಡುವ ಬಲಿಷ್ಠ ಪ್ರಾಣಿಗಳ ಆಕಾರ ಸಾದೃಶ್ಯ ಮತ್ತು ವರ್ಣವಿನ್ಯಾಸಗಳನ್ನೇ ಹೊಂದಿದ್ದು ಅವುಗಳ ಮಧ್ಯೆಯೇ ಜೀವಿಸ ಬೇಕು. ಕೊನೆಯದಾಗಿ ಈ ಅನುಕರಣೆ ಕೇವಲ ಬಾಹ್ಯಾಂಗಗಳಿಗೇ ಸಂಭವಿಸಿದ್ದು, ಅಲ್ಲದೆ ಸ್ಪಷ್ಟವಾಗಿ ಕಾಣತಕ್ಕದ್ದು.

ಅನುಕರಣ ಮಾಡುವ ಪ್ರಾಣಿಗಳಲ್ಲಿ ಎರಡು ಪಂಗಡಗಳನ್ನು ಕಾಣಬಹುದು. ಅಬಲಪ್ರಾಣಿಗಳು ಬಲಿಷ್ಠರಾಗಿರುವ ಪ್ರಾಣಿಗಳ ವಿಶೇಷ ಗುಣಗಳನ್ನು ಅನುಕರಣೆ ಮಾಡುವುದು, ಮೊದಲನೆಯದು. ಈ ಗುಣಗಳಿಗೆ ರಕ್ಷಣಾನುಕರಣವೆಂದು ಕರೆಯು ವುದುಂಟು. ಶತ್ರುಗಳಿಗೆ ಭಯವನ್ನುಂಟುಮಾಡುವ ಅಲ್ಲವೇ ಅಸಹ್ಯವನ್ನು ಪ್ರಚೋ ದಿಸುವ ಆಕಾರ ಮತ್ತು ಬಣ್ಣಗಳನ್ನು ಕೀಟಗಳು ಹೊಂದಿರುವ ಅನೇಕ ಉದಾಹರಣೆ ಗಳಿವೆ. ಜೇನುಹುಳುವಿನ ಆಕಾರ ಮತ್ತು ಬಣ್ಣಗಳನ್ನು ಅನುಕರಣೆಮಾಡುವ

ನೊಣಗಳನ್ನೂ ಮತ್ತು ಕಣಜದ ಹುಳುವನ್ನೇ ಹೋಲುವ ಚಿಟ್ಟೆಗಳನ್ನೂ ನೋಡಿದರೆ ಸಾಕು; ಭಯಹುಟ್ಟಿ ಅವುಗಳ ಬಳಿ ಸಾಗುವುದೇ ಇಲ್ಲ.

ರಕ್ಷಣಾನುಕರಣವು ಶತ್ರುಗಳಿಂದ ಪಾರಾಗಲು ಸಹಾಯಕವಾಗಿದ್ದರೆ ಮತ್ತೆ ಕೆಲವು ಪ್ರಾಣಿಗಳು ಶತ್ರುಗಳಿಗೆ ಸಂದೇಹಬರದಂತೆಯೇ ಅವುಗಳ ಬಳಿ ಹೋಗಿ ಧಾಳಿ ನಡೆಸುವ ರೀತಿಗೆ ಆಕ್ರಮಾನುಕರಣವೆಂದು ಹೆಸರು. ಕೆಲವು ಜಾತಿಯ ನೆಗೆದಾಡುವ ಮಿರ್ಮಿರ್ಯಾಕ್ನಿ (*Myrmirachne*) ಎಂಬ ಜಾತಿಯ ಜೇಡರ ಹುಳುಗಳು ತಮ್ಮ ಆಕಾರ, ಬಣ್ಣ, ರಚನೆ ಮತ್ತು ನಡಿಗೆ ಅಲ್ಲದೆ ನಡತೆಗಳಲ್ಲಿ ಇರುವೆಗಳಂತೆಯೇ ಮಾರ್ಪಾಟು ಹೊಂದಿ ಆ ಇರುವೆಗಳೊಡನೆಯೇ ಬೆರೆದು ಜೀವಿಸಿ ತಮಗೆ ಬೇಕಾದಾಗ ಆ ಇರುವೆಗಳನ್ನೇ ತಿಂದು ಜೀವಿಸುವ ಬಗೆ ಒಂದು ಉದಾಹರಣೆ. ಗೆದ್ದಲು ಹುಳುಗಳ (White-ants) ನ್ನೇ ತಿಂದು ಜೀವಿಸುವ ಕೆಲವು ಜಾತಿಯ ಮಿಳ್ಳಿಗಳು (Mantids) ಬಣ್ಣ ಮತ್ತು ದೇಹರಚನೆಯಲ್ಲಿ ತಮ್ಮ ಆಹಾರದ ಜೀವಿಗಳನ್ನೇ ಹೋಲುವ ಉದಾಹರಣೆ ಮತ್ತೊಂದು. ಮತ್ತೆ ಕೆಲವು ಆಕ್ರಮಾನುಕರಣೆ ಮಾಡಿದ ಕೀಟಗಳು ತಮ್ಮ ಮೊಟ್ಟೆಗಳನ್ನು ಅನುಕರಣೆ ಮಾಡಲ್ಪಟ್ಟ ಪ್ರಾಣಿಗಳ ಗೂಡುಗಳಲ್ಲಿಡುತ್ತವೆ; ಈ ತತ್ತಿಗಳನ್ನೊಡೆದು ಬಂದ ಹೂಮರಿಗಳು ಅವು ಶೇಖರಿಸಿದ ಆಹಾರವನ್ನೂ ಅಲ್ಲದೇ ಅವುಗಳ ಮರಿಗಳನ್ನೂ ತಿಂದು ಬೆಳೆಯುತ್ತವೆ.

ಲೈಂಗಿಕ ವರ್ಣವಿನ್ಯಾಸವು ಅರ್ಥವಿಶಿಷ್ಟವಾದದ್ದು. ಈ ವರ್ಣವಿನ್ಯಾಸದ ಬಗ್ಗೆ ಅನೇಕ ಸಿದ್ಧಾಂತಗಳು ಹೊರಬಿದ್ದಿವೆ. ಸಾಧಾರಣವಾಗಿ ಈ ಬಣ್ಣಗಳು ಯೌವನ ಕಾಲದಲ್ಲಿ ಕಾಣಿಸಿಕೊಳ್ಳುತ್ತವೆ; ಅಲ್ಲದೆ ಕೆಲವು ಪ್ರಾಣಿಗಳಲ್ಲಿ ಕೇವಲ ಉತ್ಪಾದನೆ ಋತು (ಸಂತಾನೋತ್ಪತ್ತಿ) ಕಾಲಗಳಲ್ಲಿ ಬರುವ ಬಣ್ಣಗಳಾಗಿರುತ್ತವೆ. ಡಾರ್ವಿನ್ನನು ಇದಕ್ಕೆ ಲೈಂಗಿಕ ಆಯ್ಕೆಯ ಸಿದ್ಧಾಂತದಿಂದ ವರ್ಣವಿನ್ಯಾಸವನ್ನು ವಿವರಿಸಿದ್ದಾನೆ. ಗಂಡು ಹೆಣ್ಣನ್ನು ಆಕರ್ಷಿಸಲು ಉಪಯೋಗಿಸುವ ಸಾಧನವೇ ಆ ಸಿದ್ಧಾಂತದ ತಿರುಳು. ವರ್ಣವೈಖರಿಯು ಹೆಣ್ಣಿಗಿಂತ ಗಂಡಿನಲ್ಲಿಯೇ ಹೆಚ್ಚು. ಗಂಡಿನ ಬಣ್ಣಕ್ಕೆ ಬೆರಗಾಗಿ ಮೋಹಗೊಂಡು, ಹೆಣ್ಣು ಗಂಡಿನ ಬಲೆಗೆ ಬೀಳುವುದೆಂದು ಡಾರ್ವಿನ್ನನು ನಂಬಿದ್ದಾನೆ. ಹೆಣ್ಣಿಗಾಗಿ ಸ್ಪರ್ಧಿಸುವ ಗಂಡುಪ್ರಾಣಿಗಳಲ್ಲಿ ಉಜ್ಜ್ವಲ ಮತ್ತು ವಿವಿಧ ವರ್ಣಗಳಿಂದ ಕೂಡಿದ ಗಂಡಿಗೇ ಜಯ ಸಿದ್ಧ. ಗಂಡುನವಿಲು ಹೆಣ್ಣನ್ನು ಆಕರ್ಷಿಸಿ ಒಲಿಸಿಕೊಳ್ಳಲು ತನ್ನ ವಿವಿಧ ವರ್ಣಖಚಿತವೂ ಮೋಹಕವೂ ಆದ ಗರಿಗಳನ್ನು ಹರಡಿಕೊಂಡು ಸೌಂದರ್ಯವನ್ನು ಸೂಸುತ್ತಾ ನಲಿದಾಡುವ ಸುಂದರ ಸೊಬಗಿನ ದೃಶ್ಯವೇ ಒಂದು ಉದಾಹರಣೆ. ಆದರೆ ಈ ಲೈಂಗಿಕ ಆಯ್ಕೆಯ ಸಿದ್ಧಾಂತವನ್ನು ವ್ಯಾಲೇಸನೇ ಮೊದಲಾದವರು ಖಂಡಿಸಿದ್ದಾರೆ. ವ್ಯಾಲೇಸನು ಗಂಡಿಗಿಂತಲೂ ಮಿಗಿಲಾಗಿ ಆಕರ್ಷಿ

ಸುವ ಮೋಹಕ ವರ್ಣಗಳನ್ನುಳ್ಳ ಸುಂದರವಾದ ಹೆಣ್ಣುಪತಂಗದ ಹುಳುಗಳನ್ನು ನೋಡಿದ್ದಾನೆ. ಆದರೆ ಈ ವಾದವಿವಾದಗಳಿಗೆ ಹೋಗುವುದು ಬೇಡ. ಒಟ್ಟಿನಲ್ಲಿ ಹೇಳುವುದಾದರೆ ಸಜಾತಿಯ ಪ್ರಾಣಿಗಳು ಪರಸ್ಪರ ಬೆರೆತು ಒಳ್ಳೆಯ ತಳಿಯುಳ್ಳ ಪೀಳಿಗೆಯನ್ನು ಬೆಳೆಸಲು ಉಚಿತವಾದ ಈ ವರ್ಣವಿನ್ಯಾಸ ಹೆಚ್ಚು ಸಹಾಯಮಾಡುವುದರಲ್ಲಿ ಏನೂ ಸಂಶಯವಿಲ್ಲ.

ಅನುಕರಣೆ ಮತ್ತು ಸಾದೃಶ್ಯಗಳು ಒಂದೇ ರೀತಿ ನೀತಿಯ ಎರಡು ಬಾಹುಗಳು. ಅನೇಕ ವೇಳೆ ಸಾದೃಶ್ಯಗಳು ಅನುಕರಣೆಯಂತೆ ಕಾಣಿಸಿಕೊಳ್ಳುವುದರಿಂದ ಇವುಗಳ ಮೇರೆಯನ್ನು ಸರಿಯಾಗಿ ಅಳೆಯಲು ಕಷ್ಟವಾಗುತ್ತದೆ. ಆದುದರಿಂದ ಅನೇಕ ಸಾದೃಶ್ಯಗಳನ್ನು ಉದಾಹರಣೆಗಳನ್ನು ಗ್ರಂಥಕರ್ತರನೇಕರು ಅನುಕರಣೆಗೆ ಕೊಟ್ಟಿರುವುದನ್ನು ನಾವು ಕಾಣಬಹುದು. ಉದಾಹರಣೆಗೆ ಗಿಡದ ರೆಂಬೆಯನ್ನೇ ಹೋಲುವಂತೆ ದೇಹದ ಮಾರ್ಪಾಟುಹೊಂದಿದ ಕಡ್ಡಿ ಕೀಟಗಳೂ (Stick Insects) ತರಗೆಲೆಯಂತೆ ದೇಹರಚನೆಹೊಂದಿದ ಕ್ಯಾಲಿಮಾ ಚಿಟ್ಟೆಗಳೂ ಸಾದೃಶ್ಯವನ್ನಲ್ಲದೆ ಅನುಕರಣೆಯನ್ನೂ ಹೊಂದಿರುತ್ತವೆ.

ಬಾಳ್ವೆಯಲ್ಲಿ ಉಳಿಯಲು ಜೀವಿ ಅನೇಕ ರೀತಿ ತನ್ನ ಜೀವನವನ್ನು ಮಾರ್ಪಾಟು ಮಾಡಿಕೊಂಡರೇನೇ ಜಯ, ಇಲ್ಲದಿದ್ದರೆ ಅಳಿವು. ಕೆಲವು ವೇಳೆ ಬಣ್ಣ ದೇಹರಚನೆ ಇಲ್ಲವೇ ತಮ್ಮ ನಡಗೆಯ ವೈಖರಿಯನ್ನು ಕೂಡ ಸಮಯೋಚಿತವಾಗಿ ಮಾರ್ಪಾಟು ಮಾಡಿಕೊಳ್ಳಬೇಕು. ಇವುಗಳಲ್ಲದೆ, ಇನ್ನೆಷ್ಟರಮಟ್ಟಿಗೆ ಪ್ರಕೃತಿಯ ಕೈವಾಡ, ಜೀವಿಗಳ ಸುಗಮವಾದ ಬಾಳ್ವೆಗೆ, ನೆರವಾದೀತೆಂಬ ಕುತೂಹಲ ಪ್ರತಿಯೊಬ್ಬ ಜೀವಶಾಸ್ತ್ರಜ್ಞನಿಗೂ ಇರತಕ್ಕದ್ದು ಸ್ವಾಭಾವಿಕ. ಈ ಕೈವಾಡವನ್ನು ಭೇದಿಸಿ ಅರ್ಥಮಾಡಿಕೊಳ್ಳುವುದೇ ಪ್ರತಿಯೊಬ್ಬ ಪ್ರಕೃತಿವಾದಿಯ ಗುರಿ!

ಜಿ. ವಿ. ನೀರಜಾಕ್ಷಿ

ಆಹುತಿ

(ಕಥನಕವನ)

೧. ಒಲುಮೆಗಾಹುತಿ ಹೊನ್ನಿ ಜೀವವಾಯ್ತು !

ಕನಸ ಕಾಳಿಕೆ ಕಳೆದು ಹೊನ್ನಿ ಜೋಲುತಲೆದ್ದು
ಕೆಳಗೊಮ್ಮೆ ನೋಡಿದಳು ಕರಿಯ ಕಲ್ಲ
"ಕಲ್ಲಲ್ಲ ! ಜಗದ ಕಟುನಿಯಮಕ್ಕೆ ಪಕ್ಕಾಗಿ,
ಕುಳಿತಿಹನು ನನಗಾಗಿ ಮಾರಸಲ್ಲಿ !"

ಮಸಣವೇ ಮನೆಯಾಯ್ತು, ಮನೆ ಮಸಣವಾಗಿಹುದು
ಹೊನ್ನಿ ನಡೆಯುವ ಜಗದ ಬಾಳಿನಲ್ಲಿ
ಮಸಣಕ್ಕೆ ನಡೆವಾಗಳಿದ್ದಾತ್ಮದುದ್ವೇಗ
ಕರಗಿಹುದು ನಡೆಯುವಳು ಜೋಲುತಲ್ಲಿ.

ಅಡಿಗಡಿಗೆ ಬಿಕ್ಕುವಳು ಕಲ್ಲೆಡವಿ ಬೀಳುವಳು
ಮೈತಿರುಗಿ ಮಲಗುವಳು ಮಾರ್ಗದಲ್ಲಿ
ನೆಗೆದೆದ್ದು ಹಿಂದೋಡಿ ಚಾಚುವಳು ಬಾಚುವಳು
ತನ್ನ ಕೈಯಿಂ ಕರಿಯ ಗೋರಿಕಲ್ಲ !

*   *   *   *

ಗೌಡನುಗ್ರತೆ ಬಲಿತು ವ್ಯಾಘ್ರರೂಪವನಾಂತು
ಹೀರಿ ತಣಿಯಲು ಬಂತು ಹೊನ್ನಿಯನ್ನು
ನೀರವದ ಕಡಲಿನಲಿ ತೇಲುತಿಹ ಮನೆಯಲ್ಲಿ
ಕಂಡನೊರಗಿದ 'ರಾಣಿ' ಚೆನ್ನಿಯನ್ನು.

ಕಣ್ಣು ಕೆಂಡವ ಕಡೆಯೆ ಕೆಮ್ಮೊಗದಿ ಕೇಸುರಿಯು !
ಊರೊಡೆಯ ಸಿಡಿಮಿಡಿದು ಸಿಂಗದವೊಲು
'ಎಲ್ಲಿ ಎಲ್ಲಿಹಳೆನ್ನ ಹೊನ್ನಿ, ಪಾಪಿಯೆ ಹೇಳು'
ಎಂದನೊಯ್ಯನೆ ವಿಸ್ಫುಲಿಂಗವುಗುಳಿ !

*   *   *   *

ತನ್ನ ನಿಜ ಮನೆಯಿಂದ ಸೋಲು ಕೈತರುತಿರುವ
ಹೊನ್ನಿ ತಡೆದಳು ಗೌಡನಾರ್ಭಟಕ್ಕೆ
ತತ್ತರಿಸುತವಳಲ್ಲಿ ಮರೆಯಾಗಿ ನಿಂದಿರ್ದು
ನೋಡಿದಳು ಕಿಂಡಿಯಲಿ ಕಣ್ಣನಿಕ್ಕಿ.

ತೇಂಕುತಿಹ ಚೆನ್ನಿ ತಾ ನೆಗಹಿದಳು ಕಿಡಿಯಾಗಿ
ಕಬ್ಬುನವ ಕರಗಿಸುವ ಬೆಂಕಿಯಂತೆ
ಹಿಂದೆ ಸರಿದನು ಗೌಡ ಪ್ರೇತ ಸದೃಶವ ನೋಡಿ
ಪುಲ್ಲೆವರಿ ಪುಲಿಗಂಡು ಬೆದರುವಂತೆ.

"ಪಾಪಿ ನಾನೆಂತಹೆನು ಕಾಮಿಗಳ ದೊರೆಯಾಗಿ
ಪಾಪಾತ್ಮನಾಗಿರುವ ಪಾಪ ಪುಂಜ?
ನನ್ನ ದೇಹದ ಸವಿಗೆ ಸಾದರದಿನೈತಂದು
ಹುಸಿಯ ಪ್ರೇಮದಿನೆನ್ನ ಬಾಳ ಕೊಂದೆ!

ಎನ್ನರಸಿ ಚೆನ್ನರಸಿ ರನ್ನದೊಡವೆಯು ನೀನೆ,
ಪಡಿಯಿಹರು ನಿನಗಾರು ಲೋಕದಲ್ಲಿ?
ಎನ್ನಧರದೊಳು ಬೆರೆತ ತನಿ ಅಮೃತ ನೀನಹುದು;
ಎದೆಯುವಳೆ, ನೀನೆಲ್ಲ ನನ್ನ ಬೆಲ್ಲ!'

ಎಂದೆನಿತೊ ವಿಷಬೆರೆದ ಸಕ್ಕರೆಯ ಮಾತಿನಲಿ
ನನ್ನ ಕೆಡಹಿದೆ ನೀನು ಕೂಪದಲ್ಲಿ;
ಪತಿಯುಳಿದ ನನಗೊಂದು ಹಿರಿಯ ನೆರೆಯಿಹುದೆಂದು
ನೆರೆನಂಬಿ ಮೈಗೊಟ್ಟೆ ಮೋಹದಲ್ಲಿ.

ಬಸಿರೊಳಗೆ ಬಯಕೆಯಲಿ ಬಯಸಿರ್ದ ಬಯಕೆಗಳ
ನಲವಿನಲಿ ಪೂರೈಸಿ ಪೂಜೆಗೆಯ್ದೆ;
ಮತ್ತೊಮ್ಮೆ ಮೈದೋರಿ ಮೂರ್ತಿಯಂ ಕಾಡುತಿರೆ
ಮುತ್ತಿಟ್ಟು ಮುಂಡಾಡಿ ಕೂಗಿ ನಲಿದೆ.

ಮಗುವೆ ಮೂಜಗ ಸೆಳೆವ ಮಾರನೊಡತಿಯ ರೂಪು
ತಳೆದು ತುಂಬಿರಲೀಗ ಏಗೈಯುವೆ?

ಮಗಳ ಮೋಹಿಪ ಮೊಸಳೆ ಮಾಯದಾಟದ ದಸ್ಯು
ನಿನಗಿಹುದೆ ನೇಮಿಯಾ ಸತ್ಯನಿಯಮ?

ನಿನ್ನ ಕೆಡು ನುಡಿಗಳನು ಸವಿಯೆಂಬ ಬೆಮೆಯಿಂದ
ನನ್ನ ಹೊನ್ನಿಯ ಕೊರಳ ನಾನೆ ಕೊಯ್ದೆ!
ಪ್ರೇಮದಾಕಾಶದಲಿ ಸಂಚರಿಪ ಪಕ್ಕಿಗಳ
ಸೆರೆಹಿಡಿದೆ ಬಿಯದನೇ ಬಲೆಯ ನೆಯ್ದು?

ತಲ್ಲಣಿಸಿ ತತ್ತರಂಗೊಂಡನಾಗಲೆ ಗೌಡ
ಮರಳಿದನು ಮನೆಯೆಡೆಗೆ ಮೂಗನಂತೆ.
ನಸುಧೈರ್ಯದಿಂದಾಗ ಹೊನ್ನಿ ಪಡಿಯನು ಸಾರಿ
ಚೆನ್ನಿಯನು ದಿಟ್ಟಿಸಳು ಮೂಗಿಯಂತೆ.

ದುಃಖದಿಂ ಕೆಡೆದೊರಗಿ ಹರಿದ ಹಾಸುಗೆಯಲ್ಲಿ
ಹೊರಳುವಳು ಒಡಲಿರದೆ ಒಡೆಯುವಂತೆ
ಅಳಿದ ಬಾಳಿನ ಗೋಳು ಬೆಂಕಿಯುಂಡದಿ ಸುಳಿದು,
ಸುಟ್ಟುರಿವುದವಳೆದೆಯ ಸೀಯುವಂತೆ.

“ಅಂಚೆಪುಚ್ಛದ ಪರಿಯ ಜರಿಯ ಹಾಸುಗೆಯಲ್ಲಿ
ಬಳೆದು ಬಾಲ್ಯವ ಕಳೆದು ನಲವಿನಲ್ಲಿ
ಒಲ್ಲದಿಹ ಗಂಡನಲಿ ಬಾಳಲ್ಕೆ ಶಿರವಿಟ್ಟೆ
ತಂದೆತಾಂಖಿಯ ಮೌಢ್ಯ ಪಾಶದಲ್ಲಿ.

ನನ್ನನರಿಯದ ಪತಿಯು ಕಾಣಿಸಿದ ಕಲ್ಲಾಗಿ
ನನ್ನ ಕಾಯವು ಒಡೆವ ಕಾಯಿಯಾಗಿ
ಹೆಣ್ಣು ಫಣಿ ರೋಷದಲಿ ಎದೆಯೊಳಗೆ ಸುಳಿದಿತ್ತು
ಪುರುಷಲೋಕದ ಹೃದಯ ನಾಶಕಾಗಿ.

ಪತಿಯೊಮ್ಮೆ ಮರೆಯಾದನೆನ್ನ ವಿಷದೌತಣಕೆ
ನಕ್ಕು ನಲಿದೆನು ನಾನು ಕಾಳಿಯಂತೆ;
ಅಡಿಯಾಗೆನೆಂದೆಂದು ಪುರುಷತನಕಾನೆಂದು,
ಹೆಮ್ಮೆಯಲಿ ಬೀಗಿದೆನು ಚಂಡಿಯಂತೆ!

ಸುಂದರದ ಸೌಧವನು ಸುಖವೀವ ಸುರಬನವ
ನೆರೆತೊರೆದು, ಪರದೇಶಿಯಾಟದಲ್ಲಿ
ಅಲೆದಲೆದೆನಿಳೆ ತಳವ ಸುತ್ತುತಿಹ ಗಾಳಿಯೊಲು
ಕಂಡೆನಿತೊ ಕೊಳೆಯನ್ನು ಲೋಕದಲ್ಲಿ.

ಹೃದಯ ಕಠಿಣತೆಯುಳಿದು ಕೋಮಲತೆ ಸುಳಿಯಿತೇ
ಮಾಣಿಕವು ಮಲರಾಗಿ ತೊಳಗುವಂತೆ
ಪಂಚಬಾಣನ ಶರಕೆ ಬಯಕೆಯಲಿ ಗುರಿಯಾದೆ
ಎಂಜಲಿಗೆ ಬಾಯ್ಬಿಡುವ ಸೊಣಗನಂತೆ.

ಹೇಸಿ ಲೋಕವ ಕಂಡು ಕುದಿದ ನನ್ನೆದೆ ಕೂಡ
ಹೇಸಿ ಕುಂಡವ ಹಾರಿ ದಗ್ಧವಾಯ್ತು!
ಕಾಮ ಜೀವನ ನನಗೆ ಪಾವನದ ನದಿಯಾಯ್ತು
ಕಡೆಗೀಗ ಹುದುಗಿಡುವ ಕೂಪವಾಯ್ತು.

ನನ್ನ ಹೆಮ್ಮೆಯುಸಳಿದೆ, ಪುರುಷತನಕಡಿಯಾದೆ
ಚಣದ ಕಾಮದ ತೃಪ್ತಿಯಾಟಕಾಗಿ
ಗೈದ ಪಾಪದ ಫಲವು ನನ್ನ ಹೊನ್ನಿಯ ಹಿಂಡಿ
ಹೀರಿ ಕೊಲ್ಲುವುದೇನೊ ಹಿಪ್ಪೆಯಾಗಿ!"

ಕಡೆದವೊಲು ನಿಂತಿದ್ದ ಹೊನ್ನಿ ಹಿಂತಿರುಗಿದಳು
ಓಡಿದಳು ನಿಲ್ಲದೆಯೆ ಮಸಣಕಾಗಿ
"ಪಾಪ ಕೂಪದ ತವರು ಈ ಜಗದ ಬಾಳುವೆಯು"
ಎಂದೊರಲಿ ಹೊರಳಿದಳು ಕೂಗಿ ಕೂಗಿ.

"ಪತಿಯು ಕೊಂದಳೆ ಚೆನ್ನಿ ನನ್ನ ಪಡೆದಿಹ ಚೆನ್ನಿ
ಪುರುಷ ಹೃದಯಕೆ ಹೇಸಿ ರೋಷದಿಂದ?
ಮತ್ತೊಮ್ಮೆ ಕೀಳಾಗಿ ಪುರುಷನಿಗೆ ತನುವಿತ್ತು
ತೃಪ್ತಳಾದಳೆ ಕಾಮ ತಾಪದಿಂದ?

ಪಾಪಿ ಚೆನ್ನಿಯ ಪತಿಯು ನನ್ನ ಪಿತನಲ್ಲಲ್ಲ
ಊರಗೌಡನು ನನ್ನ ತಂದೆಯುಹುದು.

ನನ್ನ ಪಿತ ನನಗಾಗಿ ಸುಳಿಯುತಿಹ ಪತಿಯಾಗಿ !
ಪಾಪವಿದು ಲೋಕದಲಿ ಕುಣಿಯುತಿಹುದು.

ಮಾರನಿಗೆ ಎದೆಯಿತ್ತೆ, ಕರಿಯನಿಗೆ ಕೊರಳಿತ್ತೆ
ಗೌಡನಿಗೆ ತನುವಿತ್ತು ಮೆರೆಯಲೇನು ?
ಬಡತನದ ಬಾಳುವೆಯು ಇನಿತೆಲ್ಲ ಗೈಸುವುದೆ ?
ಇದನೋಡಿ ಈಶ ತಾಂ ನಲಿಯುತಿಹನೆ ? "

ತಾಯಿ ಜೀವನ ಕಂಡು ಹೊನ್ನಿ ಹೇಸಿದಳಾಗ
ಮಾತೆ ಕಂಡಳು ತನಗೆ ಪಾಪಿಯಂತೆ.
ತನ್ನ ತನುವನು ಬಯಸಿ ಮದದಿಂದ ಬರುತಲಿಹ
ಗೌಡ ಕಂಡನು ಕಾಡು ನೀಚನಂತೆ.

ಬಾನಾಡಿ ಬಸವಳಿದು ಭಾನು ಕಡಲೊಳಗಿಳಿದ
ಹೊನ್ನಿ ಸುಳಿವಳು ತನ್ನ ' ಮನೆ 'ಯೊಳಲ್ಲಿ ;
ಕರಿಯ, ಗಂಡನು ತನ್ನ ಹೊಡೆಯೊಡೆವ ತೆರದಲ್ಲಿ
ಕುಡಿದು ಕೂಗುತಲಿರುವ ದಾರಿಯಲ್ಲಿ.

* * * *

ಕೆಂಪಳಿದು ಇರುಳಿಳಿದು ಕತ್ತಲೆಯೆ ತೊರೆಯಾಗಿ
ಮೌನವಾರಿಧಿಯನ್ನು ಕೂಡಿರುವುದು
ಚಂದ್ರನಿಲ್ಲದ ಭಾನು ಮೇಘವಾವೃತವಾಗೆ
ಕತ್ತಲೆಯ ಮೊತ್ತವದು ಹೆಚ್ಚುತಿಹುದು.

ಕರಿಯಿರುಳ ಕತ್ತಲದು ಕತ್ತೆತ್ತೆ ಭಯವಹುದು
ಮೆತ್ತುತಿದೆ ಕತ್ತಲೆಗೆ ಕರಿಯ ಮೇಣ
ಮುತ್ತುತಿದೆ ಮೃತ್ಯುಮಯ ಶಾಂತಿ ತಾನೆಲ್ಲೆಲ್ಲು
ಹೊರಳುತಿದೆ ಕೆಸರಿನಲಿ ಜವನ ಕೋಣ.

* * * *

ಹೊನ್ನಿಯೆನ್ನುವ ಒರಟು ಸರದ ಸಿಡಿಲೊಂದರಸಿ
ಚೆನ್ನಿಯಾತ್ಮವ ತೂರಿತಂತರಕ್ಕೆ
ತಪ್ಪ ತಪ್ಪನೆ ಹೆಜ್ಜೆಯಿಟ್ಟು ಮಾಲುತ ನುಗ್ಗಿ
ಒದರಿದನು ಹೊನ್ನಿ-ಪತಿ ಹುಚ್ಚುನಕ್ಕು.

ಎದುರುಗೊಳ್ಳುವ ಮಧುರ ಮರುಸರವದಿಲ್ಲದಿರೆ
ಕೆರಳಿ ಕಾಲಸು ಎತ್ತಿ ಅಪ್ಪಳಿಸಿದ
ಕಾಲ ತುಳಿತಕೆ ಸಿಕ್ಕಿ, ಕಾಲನೂರನು ಕುರಿತು
ಚೆನ್ನಿ ಹೋದಳು ಇಳೆಯ ತನುವನುಳಿದು.

ಚೆನ್ನಿಯಾತ್ಮದ ಭೂತ ಹೊನ್ನಿಯಾಗಿಹುದೆನಲು
ಹೊನ್ನಿ ನುಗ್ಗಿದಳೊಯ್ಯನೆರಗುವಂತೆ,
ಅವಳ ತಾಯಿಯ ಉಸಿರು ಕೊನೆಗೊಂಡ ಗಳಿಗೆಯಲಿ
ಒರಲಿದುದ ಒಳಗಿಂದ ಕೇಳಲಂತು.

ಮಬ್ಬೇರ್ದ ನೆತ್ತಿಯದು ಜಾಗೃತಿಯನೈದಲ್ಕೆ
ನಸುಬೆದರಿ ಹಿಂಜರಿದು ನಿಂತಳಾಗ
ಹೊನ್ನಿ ಎತ್ತುತಲವಳ, ತಾಯ ಶವ ಕೈಸವರಿ,
ಹೊರತಂದು ಅದಚೆಲ್ಲಿ ನಿಂತಳಾಗ.

ಉನ್ಮಾದದುದ್ವೇಗದುರಿಯ ಆವೇಗದಲಿ
ಭೋಂಕನೆಯೆ ಕೂಗಿದಳು ಕೊರಳನೆತ್ತಿ
ನಿಶ್ಶಬ್ದ ವೈವೆತ್ತು ವೈಕುಣಿಸಿ ಮೆರೆದಿತ್ತು ;
ನಿಶೆಯ ತಾಂಡವ ನೃತ್ಯ ಧೀಂಕಿಟ್ಟಿತು.

ತಾಯ ತೆಕ್ಕೆಗೆ ಸಿಕ್ಕಿ ಸಕ್ಕರೆಯ ನಿದ್ದೆಯಲಿ
ಪಟ್ಟಿರುವ ಎಳೆ ಮಕ್ಕಳೆದ್ದುವಾಗ ;
ಗೂಡು ಗುಡಿಸಲಿನಿಂದ ನಿದ್ದೆ ಮಾಡುವರೆದ್ದು
ಚಡಪಡಿಸಿ ಓಡಿಯೈತಂದರಾಗ.

ಕಣ್ಣೀರ ಕಡಲಲ್ಲಿ ತನ್ನ ದುಃಖದ ನಾವೆ
ತಾಯ ಶವವಾಗಲ್ಲಿ ತೇಲುತಿಹುದು
ಹುಟ್ಟು ಹಾಕುವರಿಲ್ಲ, ಮಾರ್ಗದರ್ಶಕರಿಲ್ಲ
ಎದ್ದಿಳಿವ ತೆರೆಗಳಲಿ ಸಾಗುತಿಹುದು.

ದೂರದೂರದ ಮಸಣ-ಸೂಡು ಬೆಂಕಿಯ ನಡುವೆ
ಮಾರನೆದೆಯನ್ನ ನಗೊ ಕಾಣುತಿಹನು.

ನೆರೆದಿದ್ದ ನೆರೆಜನರ ನೋಡದೆಯೆ ನಿಂದಿಹಳು
ಕೈವೀಸಿಯವಳಿನಿಯ ಕರೆಯುತಿಹನು.

"ಓ ಪಾಪಿ ಬಾ ಸಾಯಿ ಊರಿನೀ ಮಸಣದಲಿ ;
ನಾನು ಹೋಗುವೆನೆನ್ನ ಎದೆಯ ಮನೆಗೆ
ನನ್ನ ವನನಗಲಿಸಿದ ಪಾಪಾತ್ಮೆ ಕೊರಗಿಲ್ಲಿ
ನನ್ನ ವನ ಪಡೆದೆಳೆವೆನೆನ್ನ ಎದೆಗೆ!"

ಚಲ್ಲುವರಿದಿಹ ಕುರುಳ ರಾಶಿ ಕತ್ತಲೆಯಲ್ಲು
ಚವರಿ ಬೀಸಿದುದಾಗ ಕಾಣುತಿತ್ತು ;
ಹುಚ್ಚು ಹೊನ್ನಿಯು ಕಿರಿವ ಹಲ್ಲು ಕಾಣುತಲಿತ್ತು
ಮಿಂಚು ಕಾರ್ಮೋಡದಲಿ ಸೆಳೆಯುವಂತೆ.

ನಿಂತು ನೋಡುವಳೊಮ್ಮೆ ಕುಣಿದು ಕೂಗುವಳೊಮ್ಮೆ
ತನ್ನ ತನುವಿನ ಪರಿವೆ ಇಲ್ಲದಂತೆ!
ಮರವಟ್ಟು ಭಯಪಟ್ಟು ಹೇಯಪತಿ ನೋಡುತಿಹ
ಬಾಯಕಟ್ಟಿದ ಹೇಡಿ ಸೊಣಗನಂತೆ.

ಏನು ನೆನೆದಳೊ ಹೊನ್ನಿ, ತಾಯನೆತ್ತಿದಳಾಗ
ಹಸುಗೂಸ ಪಡೆದಮ್ಮನೆತ್ತುವಂತೆ.
ಶವಕೆ ಮುತ್ತಿಟ್ಟಳೆನಿತೆನಿತೊ ತೆರಪಿರದೆ,
ಗಹಗಹಿಸಿ ನಕ್ಕಳಹ ಗುಡುಗುವಂತೆ.

ಮನೆಯೊಳಗ ನೋಡಿದಳು ಕಣ್ಣು ಕೆಂಪಾಗಿರಲು
ಅಡಿಗಿಹೋದನು ಕರಿಯ ಭೂಮಿಯಲ್ಲಿ
ಮುಂದಿಟ್ಟಳಡಿಯನ್ನು ತನ್ನ ಮೊಗವನು ತಿರುಹಿ,
ಮಸಣದೆಡೆ ಶವವಿಡಿದು ಕೈಗಳಲ್ಲಿ.

ಎತ್ತಲ್ಕೆ ಕಾಲಿಲ್ಲ, ಕೂಗಲ್ಕೆ ಕೊರಳಿಲ್ಲ
ಕಂಪಿಸುವ ಬಾಳೆಯೊಲು ನಡುಗುತಿಹನು.
ಹಿಂದಿರುಗಿ ನೋಡಲ್ಕೆ ಏನೊ ಭಯವಾಗುವುದು
ಕಾರ್ಮೊಗದ ಕತ್ತಲೆಯು ಹೆಚ್ಚುತಿಹುದು.

ನೆರೆದ ಜನವೆದೆಯೊಡೆದು ಚಿತ್ರದೊಲು ತುರುಗಿಹರು
ಕಾಣದಿಹ ಕಾಣುತಿಹ ನೋಟ ನೋಡಿ
ಗುಳ್ಳೆನರಿಯೊರಲುತಿವೆ, ಗೂಗೆಗಳು ಗೂಗುತಿವೆ
ಚೀರುತಿವೆ ಬೆಂತರಗಳಾಟವಾಡಿ.

ತೇಂಕುತ್ತಲೋಡುವಳು ಬೆಂತರನೊಲೊರಲುವಳು
ಶವತೂರಿ ಹಿಡಿಯುವಳು ಮೇಲೆ ಮೇಲೆ;
ಕಲ್ಲು ಮುಳ್ಳನು ತುಳಿಯುತೆಲ್ಲ ದಾಂಟುತಲಿಹಳು.
ತಗ್ಗು ದಿನ್ನೆಯನೇರಿ ಸಾಗುತಿಹಳು.

ದಿನದ ಬದುಕಿಗೆ ಬಳಲಿ ವಿಶ್ರಾಂತಿ ಬಯಸುತಲಿ
ಜಗವೆಲ್ಲ ಸೊಗದಲ್ಲಿ ಮಲಗಿರುವುದು
ನಿದ್ದೆಯಾಳುವ ರಾಣಿ ಕನಸ ಸೆರಗನು ಬೀಸಿ
ಮೌನ ಗೀತೆಯ ಹಾಡಿ ತಟ್ಟುತಿಹಳು.

ಊರು ಉಳಿಯಿತು ದೂರ; ಮಸಣ ಸಾರಿಹುದೀಗ
ಶಾಂತಿಯಲಿ ತಂಪುನೆಲ ಹಾಸಿರುವುದು
ಕಾಲ-ದೇಶದ, ಧರ್ಮ-ಕರ್ಮ, ಕತ್ತಲೆ-ಬೆಳಕು
ಹೊಡಕರಸಿ ಹುರಿಯಾಗಿ ನೆಯ್ದಿರುವುದು.

ಅಧಿಕಾರ, ದುರ್ದರ್ಪ, ದೌರ್ಜನ್ಯ ದುಷ್ಟತನ
ಮೆರೆಯುದಡಗಿಹುದಿಲ್ಲಿ ಸುಪ್ತಿಯಲ್ಲಿ,
ದೀನತೆಯು ಹೀನತೆಯು, ಬಡತನವು ಆಳುತನ—
ಕೊರಗದೆಯೆ ಸುಖಿಸುವುದು ತೃಪ್ತಿಯಲ್ಲಿ.

ನೀರವ ಸಮುದ್ರದಲಿ ಕಲ್ಲೊಗೆದ ತೆರನಂತೆ
ಮಸಣಬಾಲೆಯು ಹೊನ್ನಿ ಕೂಗುತಿಹಳು
ತಾನು ನಿತ್ಯವು ಬರುವ ಕಲ್ಲು ತಾಣದಿ ಬಂದು
ಹೆಣವನೊಗೆಯುತಲಲ್ಲಿ ಉರುಳುತಿಹಳು.

"ಪಾಪಿಯನು ತಂದಿಹೆನು ಓ ಇನಿಯ ಬಾ ಎದೆಗೆ;
ನಮಗಡ್ಡ ಬಹ ಕಂಟಿ ಇರುವುದೆಲ್ಲಿ?

ಯಾರ ಅಂಜಿಕೆ ನಮಗೆ ಯಾಕೆ ಈ ಲೋಕದಲಿ
ಬಾ ನಲಿವ ಬೆರೆದಿರ್ವರಾತ್ಮದಲ್ಲಿ.

ಜಗದ ಪಾಪಿಯು ಕಣ್ಣು ನನ್ನ ದೇಹವನೀಂಟಿ
ಮದವೇರಿ ಬರುತಿಹುದು ಪ್ರೇಮಕಂತೆ!
ಪ್ರೇಮದಾಟವದಲ್ಲ, ನಾಸು ಬಲ್ಲೆನು ನಲ್ಲ,
ಕಾಮದಾಟದ ಸೋಗು ಬಾಳ-ಸಂತೆ!

ಮೋಹ ಮಾಯೆಯು ರಾಣಿ ತನ್ನ ಚತುರತೆಯಿಂದ
ಬಲೆ ಬೀಸಿ ಲೋಕವನೆ ಸೆಳೆಯುತಿಹಳು
ಪಂಕದಂತರದಲ್ಲಿ ಸೊಗದ ಸೆಲೆಯಿಹುದೆಂದು
ಬೀಳುವರು ಮಾನವರು ಕೂಪದಲ್ಲಿ.

ಪರರ ಮಾನವ ಕೆಡಿಸಿ, ತಮ್ಮೊಡಲ ತಣಿಸಲ್ಕೆ,
ಎನಿತಾತ್ಮಕಿಕ್ಕುವರು ಕಿಚ್ಚಿನುರಿಯು
ಆ ಕಿಚ್ಚು ತಾನೊಮ್ಮೆ ಹೊಮ್ಮಿ ಕೇಸುರಿಯಾಗಿ
ತಮ್ಮನದು ಸುಡುವುದೆಂದರಿಯರಯ್ಯೋ!"

ನೆಗೆದೆದ್ದು ಹುಚ್ಚೆದ್ದು ಕುಣಿದಾಡಲತಿಯಾಗಿ
ಮಸಣವದು ವಿಸ್ಮಯದಿ ದಿಟ್ಟಿಸುವುದು.
ಕೆಲಬದ ಚಟ್ಟಗಳನೊಟ್ಟಿದಳು ಗುಂಪಾಗಿ
ತಾಯ ಶವವಿಟ್ಟಳದೊ ಕಾಣುತಿಹುದು.

ಬಡಗಲಿಗೆ ಓಡಿದಳು ಬೆಂಕಿಯೆಡೆ ಸಾರಿದಳು
ಹೆಣವೊಂದು ಸುಟ್ಟಿರಿದ ತಾಣದಲ್ಲಿ,
ಬೆಂಕಿಯನು ಸೂಡಿನಲಿ ಸೆರೆವಿಡಿದು ಮರಳಿದಳು
ಕೊಳ್ಳಿ ದೆವ್ವದ ರೂಪದಾಟದಲ್ಲಿ.

ಸಿರಿಜನರ ಕಣಜಕ್ಕೆ, ಕಾಮಿಗಳ ಹೃದಯಕ್ಕೆ
ಕಿಚ್ಚಿಕ್ಕಲಂತವಳು ಓಡುತಿಹಳೊ!
ಪತಿತತ್ವ ಪಾವನೆಯ ಹೃದಯವನು ಹರಿವವೊಲು
ಹೊನ್ನಿ ರಭಸದಿ ಬೀಸಿಯೋಡುತಿಹಳೊ!

ಹರಿದ ಸೆರಗಾಡುತಿದೆ ಗಾಳಿಯುಲೆಯೋಟದಲಿ
ಕೆದರಿರ್ದ ಕರಿಕರುಳು ಬೀಸುತಿಹುದು.
ರವಿಕೆಯನು ಹರಿದೊಗೆದು ಬೆಂಕಿಯನು ಸೂಡಿದಳು ;
ಚೆನ್ನಿ ದೇಹಕೆ ಉರಿಯು ತಾಗುತಿಹುದು.

ಉರಿಯೆದ್ದು ಉಜ್ವಲದಿ ಉರಿಯುತಿದೆ ಚಟ್ಟಗಳ
ಕೆಂಬಣ್ಣ ಮಸಣದಲಿ ಹರಡುತಿಹುದು
ಹಿಡಿಕುರುಳ ತಾಕಿತ್ತು ಬೆಂಕಿಯೊಳು ಕೊಡಹಿದಳು,
ಸಿಮಿಸಿಮಿಸಿ ಚೆನ್ನಿಮೈ ಬೇಯುತಿಹುದು.

ಚಟಚಟನೆ ಸಿಡಿಸಿಡಿದು ಪಟಪಟನೆ ಒಡೆದೊಡೆದು
ಚಟ್ಟಗಳ ಕಿರಿಗೆಂಡ ಹಾರುತಿಹವು
ಸಗ್ಗಕೀಸುದ್ದಿಯನು ಮುಟ್ಟಿಸುವೆವೆಂಬಂತೆ
ಸಿಡಿದು, ಸೇದೆಯೊಳಲ್ಲಿ ಕರಗುತಿಹವು.

ಕೆಲವು ಕಿಡಿ ಹಾರಿದವು ಒಣರವದೆ ಗುಂಪಿಂಗೆ
ಉರಿಹತ್ತಿ ಧಗಧಗಿಸುತುರಿಯುತಿಹುದು
ಹಗಲೆಲ್ಲ ಸುಡುವಿನನ ಬಿಸಿಲಿಂಗೆ ಬಳಲಿರ್ದ
ಮಸಣವೀಗದು ಉರಿಗೆ ಸುಯ್ಯುತಿಹುದು.

"ಸುಡು, ಸುಡು, ಸುಟ್ಟು ಬಿಡು
ಪತಿಯ ಕೊಂದ ಪಾಪಿಯ !
ಅನಲದೇವ ಅನಿಲ ಮಿತ್ರ
ಸುಟ್ಟು ಬಿಡುಕಾಮಿಯ !

ಮಾರನೊಲುಮೆ ಹೊನ್ನಿಯೊಲುಮೆ—
ಕೂಡಿಕೊಂಡು ಚಿಮ್ಮಿದೆ ;
ಅದನು ತಡೆಯೆ ಬಂದ ನಾಯ
ದಹಿಸಿ ಬಿಡು ನಿಲ್ಲದೆ !

ಸಿಮಿಸಿಮಿ ಸುಟ್ಟು ಬಿಡು
ಇವಳ ಕರುಳ ರಾಶಿಯ !

ಹಿಡಿಯು ಬೂದಿ ಮಾಡಿಬಿಡೂ
  ಕೂಪದಾತ್ಮ ಪಾಪಿಯೂ!

ಇವಳ ಆತ್ಮ ಭೂತವಾಗಿ
  ಧನಿಕರನ್ನು ತುಳಿಯಲಿ!
ಅವರ ಸುಟ್ಟು ಕರಿಯಲೆಂದು
  ಇವಳ ತೂರು ಧರೆಯಲಿ!

ನೂರು ಯೋನಿ ಕೊಟ್ಟುಬಿಡೂ
  ಕಾಮಿ ತೃಪ್ತಿ ಹೊಂದಲಿ;
ಕಾಮಿಗಳನು ಹೀರಿ ಕೊಲುವ
  ವಿಷದ ಕನ್ನೆಯಾಗಲಿ!”

ಧೀಂಕಿಟ ಕುಣಿದಳು ಧೀಂ ಥಥ ಕುಣಿದಳು
  ನಕ್ಕಳು ಗಹಗಹ ಹ್ಹ! ಹ್ಹ! ಹ್ಹ!
ಚೆನ್ನಿಯು ಭಸ್ಮವ ಕೈಯಲಿ ಹಿಡಿದು
  ನಕ್ಕಳು ತೂರುತ ಹ್ಹ! ಹ್ಹ! ಹ್ಹ!

ಲರಿಲರಿ ಕಡಿದಳು ಮೈಕೈ ಮುರಿದಳು
  ಗುಡುಗನೆ ನಕ್ಕಳು ಹ್ಹ! ಹ್ಹ! ಹ್ಹ!
ಪಿಸಿಪಿಸಿ ನುಡಿದಳು ಬುಸುಬುಸು ಅತ್ತಳು
  ಸಿಡಿಲನೆ ನಕ್ಕಳು ಹಹ್ಹಾ! ಹಹ್ಹಾ! ಹ್ಹಹ್ಹಹ್ಹ!

*   *   *   *

ಉರಿಯುಡಗಿ ಕೆಂಡಗಳು ಉರಿಯುತಿರೆ ಕಣ್ಣಾಗಿ
  ಸುಳಿಗಾಳಿ ರಭಸದಲಿ ಬೀಸಿ ಬಂತು
ಬೂದಿಯೊಡನಿಹ ಬೆಂಕಿ ಭೂತವಾಗುತ ಮೂಡಿ
  ಹೊನ್ನಿಯೆಡೆ ನುಗ್ಗಿತಹ ನುಂಗುವಂತೆ!

“ನಮ್ಮೊಲವ ತಿನಲೆಂದು ಭೂತವಾದೆಯ ಚೆನ್ನಿ?”
  ಎನುತ ಹೊನ್ನಿಯು ನಕ್ಕು ನುಡಿದು ಬೇಗ
ಬಿಸಿರಕುತ ಮೈಯೆಲ್ಲ ಬಿರುಸಾಗಿ ಸಂಚರಿಸೆ,
  ಕರಿಯ ಕಲ್ಲಿಗೆ ತಲೆಯ ಬಡಿದಳಾಗ!

" ಒಲವಿಂದ ಬಾಳಲ್ಕೆ ಜಗದಲ್ಲಿ ತಳವಿಲ್ಲ
ಕಲ್ಲೆದೆಯ ಗಾವಿಲರು ಕಲ್ಲೊಗೆವರು
ನಮ್ಮ ನಮ್ಮೊಳಗೀಗ ಲೀನವಾಗುವ ಗೆಳೆಯ
ಒಲವಿಂಗೆ ಸೊಗಮಿಹುದು ಮಸಣ-ತವರು ! "

ಚಿಮ್ಮಿದುದು ಬಿಸಿನೆತ್ತರೋಕುಳಿಯ ತೆರದಲ್ಲಿ
ನೆಲನೆಸೆದು ಗೋರಿಯುದು ಕೆಂಪಗಾಯ್ತು
ಕಣ್ಣ ಕಣ್ಣಿಯ ಬೆಣ್ಣೆ ಮಿದುಳು ಹೊರಚೆಲ್ಲಿತಹ
ಒಲುಮೆಗಾಹುತಿ ಹೊನ್ನಿ ಜೀವಮಾಯ್ತು.

* * * *

ನಮ್ಮೂರ ಮಸಣದಲಿ ಮಾರ-ಹೊನ್ನಿಯ ಬಾಳು
ಇರುಳಲ್ಲಿ ಎದೆಯೊರಗಿ ಸಾಗುತಿಹುದು.
ಚೆನ್ನಿ ಭೂತವು ತಾನು ಹಿಡಿದು ಗೌಡನ ಕೊಂದು
ಅವನೆದೆಯ ರೋಷದಲಿ ತಿವಿಯುತಿಹುದು.

—" ಮರುಳಸಿದ್ಧ "

ನ್ಯಾಯದ ಪ್ರತಾಪ

' ಛಲೋ, ಛಲೋ ' ' ಛಲೋರೆ ಬಾಬಾ ' ಎಂದು ಪೋಲೀಸಿನವನು ಜಟಕಾ ಗಾಡಿಯವನಿಗೆ ಕೂಗಿ ಹೇಳುತ್ತಿದ್ದನು. ಬೆಂಗಳೂರು ಪೇಟೆಯ ಗಲಾಟೆ ಎಲ್ಲರಿಗೂ ಗೊತ್ತೇ ಇದೆ. ಸಾಲದ್ದಕ್ಕೆ ಈಗ ತಾನೆ ನವರಾತ್ರಿ ಕಳೆದು, ದೀಪಾವಳಿ ಬರುತ್ತಿದೆ. ನಗರ್ತಪೇಟೆಯಲ್ಲಿ ಇಂಡಿಯನ್ ಜ್ಯೂಯಲರಿ ಮಾರ್ಟಿಗೂ ಮತ್ತು ಇತರ ಚಿನ್ನ, ಬೆಳ್ಳಿ ವ್ಯಾಪಾರದ ಅಂಗಡಿಗಳಿಗೂ ಹೋಗಿಬರುವ ಮೋಟಾರುಗಳಿಗೂ, ಗಾಡಿಗಳಿಗೂ ಮಿತಿಯೇ ಇಲ್ಲ. ೧೯೨೨—ಇಸವಿ ಅಕ್ಟೋಬರ್ ೨೩ ನೇ ತಾರೀಖು ಮಧ್ಯಾಹ್ನ ಜ್ಯೂಯಲರಿ ಮಾರ್ಟಿನ ಮುಂದೆ ಪೋಲೀಸು ಇನ್‌ಸ್ಪೆಕ್ಟರ್—ನವರ ಮೋಟಾರು ನಿಂತಿದೆ. ಕಾನ್ಸ್ಟೆಬಲ್ ನಂ.—ನೆಯವನು ಜಟಕಾ ಗಾಡಿಗಳೆಲ್ಲವನ್ನೂ ನಿಲ್ಲಲು ದಾರಿ ಕೊಡದೆ ಅಲಸೂರುಪೇಟೆಯ ಚೌಕಕ್ಕೆ ಓಡಿಸುತ್ತಿದ್ದಾನೆ. ವೆಂಕಟಪ್ಪ ಜಟಕಾ ಗಾಡಿಯಲ್ಲಿ ನಾಲ್ಕು ಜನರನ್ನು ಕೂರಿಸಿಕೊಂಡು ಬಂದು ಬೊಂಬಾಯಿ ಆರ್ಯಭವನದ ಮುಂದೆ ನಿಲ್ಲಿಸಿದನು. ಒಳಗಿದ್ದವರು ಇಳಿದು ಹೋಟಲಿನ ಒಳಕ್ಕೆ ಹೋದರು.

ಬಾಡಿಗೆಗೋಸ್ಕರ ಕಾದುಕೊಂಡು ನಿಂತಿದ್ದ ವೆಂಕಟಪ್ಪನ ಮೇಲೆ ಪೋಲೀಸಿನವನ ದೃಷ್ಟಿ ಬಿದ್ದಿತು. ಎರಡುಬಾರಿ ಪೋಲೀಸಿನವನು ಹೇಳಿದರೂ ಬಾಡಿಗೆ ಬರದೇ ಇದ್ದುದರಿಂದ ಗಾಡಿ ಚೌಕದ ಕಡೆಗೆ ಹೊರಡಲಿಲ್ಲ. ಇಷ್ಟರಲ್ಲೇ ವೆಂಕಟಪ್ಪ ಒಂದೆರಡು ಗಿರಾಕಿಗಳನ್ನು ಹಿಡಿದು, ಗಾಡಿಯನ್ನು ಪೂರ್ವಾಭಿಮುಖ ತಿರುಗಿಸಿ ಬೊಂಬೆಯ ಪೆಟ್ಟಿಗೆಗಳನ್ನೂ, ಸೇಟಿನ ಮಗನನ್ನೂ ಗಾಡಿಯೊಳಗೆ ಸೇರಿಸಿದನು. ಪೋಲೀಸಿನವನು ಮೂರನೆ ಆವರ್ತಿ ' ಛಲೋ, ಛಲೋ ' ಎಂದು ಕೂಗಿ ಕೈಯಲ್ಲಿದ್ದ ಬೆತ್ತವನ್ನು ಜಳಪಿಸುತ್ತಾ ಬರುತಿದ್ದುದನ್ನು ನೋಡಿ ಗಾಡಿಯೊಳಗೆ ಕುಳಿತಿದ್ದವರು ಹೊರಕ್ಕೆ ಇಳಿದರು. ಈ ಹೊತ್ತಿಗೆ ಸರಿಯಾಗಿ ಇನ್‌ಸ್ಪೆಕ್ಟರು ಮೋಟಾರಿನಲ್ಲಿ ಕುಳಿತು ದೊಡ್ಡ ಪೇಟೆಯ ಕಡೆಗೆ ತಿರುಗುತ್ತಿದ್ದರು. ಆಗಲೇ ಜವಳಿ ಅಂಗಡಿಯ ಮುಂದೆ ನಿಂತಿದ್ದ ದೊಡ್ಡ ಬಸ್ಸು ಹೊರಟಿತು. ಸ್ಥಳಸಂಕೋಚದಿಂದಲೂ, ಈ ಗಲಾಟೆಯಿಂದಲೂ, ಕುದುರೆ ಬೆದರಿ ಇನ್ಸ್ಪೆಕ್ಟರ ಮೋಟಾರಿಗೂ ಜಟಾಕಾಗಾಡಿಗೂ ಡಿಕ್ಕಿಯಾಯಿತು. ತಪ್ಪಾರದು? ಗಾಡಿಯವನದೇ. ಗಾಡಿಯನ್ನು ನಿಲ್ಲಿಸಿದುದು ಮೊದಲನೆಯ ತಪ್ಪು. ರಸ್ತೆಯ ಬಲಗಡೆಯಲ್ಲಿ ಗಾಡಿ ಹೋಗಲನುವಾಗಿದ್ದುದು ಎರಡನೆಯ ತಪ್ಪು. ಆಕ್ಷಣವೇ ಗಾಡಿಯನ್ನೂ, ವೆಂಕಟಪ್ಪನನ್ನೂ ಎಳೆದುಕೊಂಡು—ನೇ ನಂಬರು

ಪೋಲೀಸಿನವನು ಮಾರ್ಕೆಟ್ಟಿನ ಸ್ಟೇಷನ್ಕಡೆ ಹೊರಡಬೇಕೆಂದು ಇನ್ಸ್ಪೆಕ್ಟರ ಆರ್ಡ ರಾಯಿತು. ಪೋಲೀಸಿನವನು ತನ್ನ ಜೇಬಿನಿಂದ ಡೈರಿಯನ್ನು ತೆಗೆದು ಗಾಡಿಯ ನಂಬರನ್ನು ಗುರುತುಹಾಕುತ್ತಿದ್ದನು.

ಈ ಸಂದರ್ಭಗಳನ್ನೆಲ್ಲಾ ನೋಡುತ್ತಿದ್ದ ಉಪಾಧ್ಯಾಯರೊಬ್ಬರು ತಾವು ಕುಳಿತಿದ್ದ ಕಡೆಯಿಂದ ಬಂದು, ತಾವು ಎದುರಂಗಡಿಯಲ್ಲಿದ್ದು ಮೊದಲಿನಿಂದ ಎಲ್ಲವನ್ನೂ ನೋಡುತ್ತಿದ್ದರೆಂದೂ ಗಾಡಿಯವನು ಅಪರಾಧಿಯಲ್ಲವೆಂದೂ ತಾವು ಉಪಾಧ್ಯಾಯ ರೆಂದೂ ಹೇಳಿದರು. 'ಎಲ್ಲಾ ಉಪಾಧ್ಯಾಯರೂ ಒಂದೇ. ನಿಮ್ಮ ವಿಚಾರವೆಲ್ಲಾ ಗೊತ್ತು. ಬೇಕಿದ್ದರೆ ಪೋಲೀಸ್ ಸ್ಟೇಷನ್ನಿಗೆ ಹೋಗಿ ಸೂಪರಿಂಟೆಂಡೆಂಟರ ಹತ್ತಿರ ಮಾತನಾಡಬಹುದು ಎಂದು ಉತ್ತರ ಬಂತು. ಉಪಾಧ್ಯಾಯರೆಂದರೆ ಎಲ್ಲೂ ಗೌರವ ಕಮ್ಮಿ. ಗೌರವ ಕಮ್ಮಿಯಾದರೂ ಸಹನೆ, ಧಾರ್ಮಿಕಬುದ್ಧಿ, ಸತ್ಯಪರಿಪಾಲನೆ ಇವುಗಳು ಇವರನ್ನು ಬಿಟ್ಟುಹೋಗುವುದಿಲ್ಲ. ಇವು ಹಣವಿಲ್ಲದವರ ಸಂಪತ್ತುಗಳು. ಪೋಲೀಸು ಸ್ಟೇಷನ್ನಿನಲ್ಲಿಯೂ ಇವರ ಮಾತು ನಡೆಯಲಿಲ್ಲ. ನಿಮ್ಮನ್ನು ಸಾಕ್ಷಿ ಯಾಗಿ ತೆಗೆದುಕೊಳ್ಳುತ್ತೇವೆ. ನೀವು ಕೋರ್ಟಿನಲ್ಲಿ ಬಂದು ಸಾಕ್ಷಿ ಹೇಳಬಹು ದೆಂದರು.

ವೆಂಕಟಪ್ಪನು ಚಿಕ್ಕವನಲ್ಲ. ವಯಸ್ಸು ೫೫ರ ಮೇಲೆ ಆಗಿದೆ. ನಲವತ್ತು ವರ್ಷಗಳಿಂದಲೂ ಗಾಡಿ ಹೊಡದೇ ಜೀವನ ಮಾಡುತ್ತಿದ್ದವನಿಗೆ 'ಛಲೋ, ಛಲೋ' ಎನ್ನುವುದೇನು ಹೊಸದಲ್ಲ. ತಾನು ತನ್ನ ಕುದುರೆಗೆ ಪ್ರತಿ ಕ್ಷಣದಲ್ಲಿಯೂ ಹೇಳುತಿದ್ದ ಮಾತೇ ಇದು. ಕುದುರೆಯು ನಿಧಾನಮಾಡಿದರೂ 'ಅಯ್ಯೋ' ಎಂದು ವೆಂಕಟಪ್ಪನು ಸ್ವಲ್ಪ ಸುಮ್ಮನಿದ್ದರೆ ಗಾಡಿಯೊಳಗೆ ಕೂತಿದ್ದವರು ಇವನಿಗೆ ಹೇಳು ತ್ತಿದ್ದುದೂ ಇದೇ ಮಾತೇ: "ಛಲೋಬಾ, ರೈಲ್ಕು ಲೇಟ್ ಹೋಗಯ"! ಈಗ ಪೋಲೀಸಿನವರೂ ಹೇಳುವುದೂ ಇದೇ. ನಲವತ್ತು ವರ್ಷಗಳಿಂದ ಗಾಡಿ ಹೊಡೆದರೂ ವೆಂಕಟಪ್ಪನು ಹಣವಂತನಾಗಿರಲಿಲ್ಲ. ಗಾಡಿಯನ್ನೂ ಕುದುರೆಯನ್ನೂ ನಿರಕಾದ ಬಾಡಿಗೆಗೆ ಮತ್ತೊಬ್ಬರಿಂದ ತಂದು ಮೇಲೆ ಬಂದ ಲಾಭದಲ್ಲಿ ಜೀವನ ಮಾಡಬೇಕಾ ಗಿದ್ದಿತು. ಇವನಿಗೆ ಸದ್ಯಃ ಇದ್ದವಳೆಲ್ಲಾ ಒಬ್ಬಳೇ ಮಗಳು. ಅಪ್ಪನೂ ಮಗಳೂ ಗಾಣಿಗರ ಪೇಟೆಯಲ್ಲಿ ಒಂದು ಹಳೇ ಗಾಡಿಯ ಲಾಯದಲ್ಲಿದ್ದರು. ಈ ದುಷ್ಕಾಲಕ್ಕೆ ಸರಿಯಾಗಿ ಮಗಳು ಕೂಡುವಳಿ ಮಾಡಿಕೊಂಡು ಹಳ್ಳಿಗೆ ಹೋಗಿದ್ದಳು. ಗಾಡಿಯ ಮಾಲೀಕನು ಬಂದು ಗಾಡಿಯನ್ನು ತೆಗೆದುಕೊಂಡು ಹೋದನು. ಲಾಕಪ್ಪಿನಲ್ಲಿದ್ದ ವೆಂಕಟಪ್ಪನಿಗೆ ಈ ವಿಷಯವೂ ತಿಳಿಯದೇಹೋಯಿತು.

ಹಿಂದುಳಿದವರನ್ನು ದ್ಧಾರಮಾಡಿ ಮುಂದುವರಿದಿರುವವರ ಸಂಗಡ ಹೋರಾಡು

ತ್ತಿದ್ದ—ರಾಯರು ಮೈಸೂರಿನಿಂದ ಬೆಂಗಳೂರಿಗೆ ಯಾವುದೋ ಕೆಲಸಕ್ಕಾಗಿ ಬಂದಿದ್ದರು. ಮಾರ್ಕೆಟ್ಟಿನ ಬಳಿ ಸ್ನೇಹಿತರ ಸಂಗಡ ಮಾತನಾಡುತ್ತಿದ್ದಾಗ ಈ ಸಮಾಚಾರವು ತಿಳಿಯಿತು. ಮುದುಕನ ಮುಖವನ್ನು ನೋಡುತ್ತಲೇ ಮನಸ್ಸು ಕರಗಿತು. ಉಚಿತವಾಗಿ ಕೆಲಸಮಾಡಿ ಧರ್ಮಾರ್ಜನೆ ಮಾಡಬೇಕೆಂದು ನಿರ್ಧರಿಸಿ, ವೆಂಕಟಪ್ಪನ ಪರವಾಗಿ ಲಾಯರಾಗುತ್ತೇನೆಂದು ಸ್ಟೇಷನ್ನಿಗೆ ಹೋಗಿ ಹೇಳಿದರು. ಮಾರನೆಯ ದಿನ ಬೆಳಿಗ್ಗೆ ಬಂದು ಅಪರಾಧಿಯನ್ನು ನೋಡುವುದಾಗಿ ತಿಳಿಯಪಡಿಸಿ ಮಾಡರನ್ ಹೋಟಲಿಗೆ ಹೊರಟುಹೋದರು.

ಗಾಡಿಖಾನೆಯ ಕೊಳಕಿನಲ್ಲಿದ್ದ ವೆಂಕಟಪ್ಪನಿಗೆ ಲಾಕಪ್ಪಿನಲ್ಲಿದ್ದುದರಿಂದ ತೊಂದರೆಯೂ, ಅಪಮಾನವೂ ಏನೂ ತೋರಲಿಲ್ಲ. ತನ್ನ ಮನೆಗಿಂತ ಚೊಕ್ಕಟವಾಗಿಯೂ, ಹೆಚ್ಚು ಬೆಳಕುಗಾಳಿಗಳಿಂದ ತುಂಬಿದ್ದಾಗಿಯೂ ಇದ್ದಿತು. ಆಹಾರಕ್ಕೂ ಯಾವ ತೊಂದರೆಯುಂಟಾಗಲಿಲ್ಲ. ಆದರೆ ಗಾಡಿಯ ಸ್ಥಿತಿ ಏನೋ, ಆ ಯಜಮಾನನು ಇನ್ನೇನು ಮಾಡುವನೋ, ಪುನಃ ಗಾಡಿಯು ಸಿಕ್ಕುವುದೋ ಇಲ್ಲವೋ ಎಂಬ ಯೋಚನೆಯು ಆಗಾಗ್ಗೆ ಬಂದು ಮನಸ್ಥೈರ್ಯವನ್ನು ಹಾಳುಮಾಡಿತು.

ಮಾರನೆಯ ದಿನ ಬೆಳಿಗ್ಗೆ ರಾಯರು ಬಂದು ತಮ್ಮ ಕಕ್ಷಿಯನ್ನು ಕಂಡು ಅವನಿಂದ ಕಥೆ ಎಲ್ಲವನ್ನೂ ಕೇಳಿದರು. ವೆಂಕಟಪ್ಪನು ಅಕ್ಷರಸ್ಥನಲ್ಲ. ಈಗ ಮನಸ್ಸು ಬೇರೆ ಗಾಬರಿಯಿಂದ ಚಲಿಸಿಹೋಗಿ, ಯಾವುದನ್ನೂ ಸರಿಯಾಗಿ ಹೇಳಲಾಗಲಿಲ್ಲ. ಲಾಯರಾದರೂ ಪ್ರಶ್ನೆಗಳನ್ನು ಹಾಕಿ ಕಥೆಯು ಮುಂದುವರಿಯುವಂತೆ ಮಾಡಿದ್ದರೆ ಅನುಕೂಲವಾಗಬಹುದಾಗಿದ್ದಿತು. ಇವರು ಸುಮ್ಮನೆ ಕೂಡ ಇರದೆ ಅವನ ಹೇಳಿಕೆಗಳಿಗೆಲ್ಲಾ ತಲೆಯಲ್ಲಾಡಿಸುತ್ತ ಸಪ್ಪೆ ಮೋರೆಯನ್ನು ಮಾಡಿದರು. "ನೀನು ಹೇಳುವುದೊಂದೂ ಈ ಕಾಗದಪತ್ರಗಳಲ್ಲಿಲ್ಲ. ನೀನು "ಪೋಲೀಸಿನವರ ಮನೆ ಹಾಳಾಗ. ಇವರನ್ನು ಮಟ್ಟಹಾಕಿಬಿಡಬೇಕೆಂದು" ಬಯ್ದಿದ್ದೀಯೆ ಅಂದರು. ವೆಂಕಟಪ್ಪನು ಬೆಚ್ಚಿದನು. ಎಷ್ಟು ಜ್ಞಾಪಿಸಿಕೊಂಡರೂ ತಾನು ಹಾಗೆ ಹೇಳಿದಂತೆ ತೋರಲಿಲ್ಲ. ಈ ದೊಡ್ಡ ಮನುಷ್ಯರು ಸುಳ್ಳು ಹೇಳುವರೇ ? ಆ ಹಿಂಸೆಯಲ್ಲಿ ಹೇಳಿದ್ದರೂ ಹೇಳಿರಬಹುದೆಂದುಕೊಂಡನು. ಕಡೆಗೆ ರಾಯರು "ತಪ್ಪಿಲ್ಲವೆಂದು ಸಾಧಿಸುವದರಲ್ಲಿ ಏನೂ ಫಲವಿಲ್ಲ. ಅದು ಶುದ್ಧ ಮೂರ್ಖತನ. ತಪ್ಪನ್ನು ಒಪ್ಪಿಕೊಳ್ಳುವುದೇ ಮೇಲೆ"ಂದು ಹೇಳಿಹೋದರು. ವೆಂಕಟಪ್ಪನಿಗೆ ತನ್ನ ತಪ್ಪೇನೆಂದು ತಿಳಿದಿದ್ದರೆ ಒಪ್ಪಿಕೊಳ್ಳುವವನೇ ಅವನು. ಏನೂ ತಿಳಿಯದಿದ್ದರೆ ಹೇಳುವುದೇನು ? ಒಪ್ಪಿಕೊಳ್ಳುವುದೇನನ್ನು ? ಕೋರ್ಟುಗಳಲ್ಲಿ ನ್ಯಾಯವು ಓಡಾಡುತ್ತಿರುವಂತೆ ಇನ್ನೆಲ್ಲಿಯೂ ಕಾಣುವುದಿಲ್ಲ. ಒಂದು ಕೇಸಿಗೆ ಒಂದು ನಿಮಿಷವೂ ಬೇಕಾಗುವುದಿಲ್ಲ. ಅಪರಾಧಿಯು ಬಂದು

ಸ್ಥಾನದಲ್ಲಿ ನಿಂತು ಸುತ್ತಮುತ್ತಲೂ ನೋಡುವಷ್ಟರೊಳಗೆ ಪ್ರಶ್ನೆಯೊಂದು ಬಂದು ಮುಖದ ಮೇಲೆ ಬೀಳುತ್ತದೆ. ಉತ್ತರವನ್ನು ತಯಾರುಮಾಡಿ ಒಂದು ಸಲ ಪಿಟಿಪಿಟಿ ತನ್ನಲ್ಲಿ ತಾನೇ ಹೇಳಿಕೊಂಡು ಕೋರ್ಟಿನ ಮುಂದೆ ಹೇಳುವುದರೊಳಗಾಗಿಯೇ, ಅಪರಾಧಿಯು ಉತ್ತರ ತಯಾರುಮಾಡುವ ಹಿಂಸೆಯನ್ನು ತೋರಿಸುತ್ತಿರುವ ಮುಖ ಭಾವದಿಂದಲೇ ಅಪರಾಧವು ನಿಶ್ಚಯವೆಂದೂಹಿಸಿ, ಗುಮಾಸ್ತನು "ನಿನಗೆ ಎರಡು ರೂಪಾಯಿ ಜುಲ್ಮಾನೆ." "ನಿನಗೆ ಐದು ರೂಪಾಯಿ ಜುಲ್ಮಾನೆ" ಈ ವಿಧವಾಗಿ ತೀರ್ಮಾನವನ್ನು ಹೇಳಿಬಿಡುತ್ತಾನೆ. ವೆಂಕಟಪ್ಪನ ಸ್ಥಿತಿಯೂ ಹೀಗೆಯೇ ಆಯಿತು. ಕೇಳಿದ ಪ್ರಶ್ನೆಗಳಿಗೆ ಜಾಗ್ರತೆ ಉತ್ತರ ಕೊಡಲು ಅವನಿಗೆ ಯಾವ ವಿಧವಾದ ಅಭ್ಯಾಸವೂ ಆಗಿರಲಿಲ್ಲ. ಕೋರ್ಟಿನಲ್ಲಿ ಅಪರಾಧಿಸ್ಥಾನದಲ್ಲಿ ನಿಂತರೆ ಯಾರಿಗೂ ಬಾಯಿ ಬಿಗಿಯಾಗಿರುವುದು ಸ್ವಭಾವ. ಅನಕ್ಷರಸ್ಥರ ವಿಷಯ ಹೇಳಬೇಕಾದುದೇ ಇಲ್ಲ. ವೆಂಕಟಪ್ಪನು ಸುಮ್ಮನೆ ನಿಂತಿದ್ದನು. ಮ್ಯಾಜಿಸ್ಟ್ರೇಟರು ಗಡಿಯಾರದ ಚಿನ್ನದ ಸರಪಣಿಯನ್ನು ಬೆರಳಿನಲ್ಲಿ ಸುತ್ತುತ್ತಾ ತನ್ನ ಪ್ರಶ್ನೆಗಳಿಗೆ ತಾನೇ ಉತ್ತರ ಗಳನ್ನು ಹೇಳಿಕೊಂಡು, ಕಡೆಗೆ "ಏನು ಗೋಳು! ಇವರನ್ನು ನಾಶಮಾಡಬೇಕು" ಎಂದು ಪೋಲೀಸಿನವರನ್ನು ಏಕೆ ಬಯ್ದೆ ಎಂದು ಕೇಳಿದರು.

'ಏನುಗೋಳು' ಎಂದೆ. 'ಪೋಲೀಸಿನವನೂ ಈ ಮಾತನ್ನೇ ಮೊದಲು ಹೇಳಿದನು. ಆದರೆ ನಾನು . . .'

ಇಷ್ಟರಲ್ಲಿ ಮ್ಯಾಜಿಸ್ಟ್ರೇಟರು ಪುನಃ ಪ್ರಶ್ನೆಯನ್ನು ಹಾಕಿದರು. ವೆಂಕಟಪ್ಪನು ಹೇಳಬೇಕೆಂದಿದ್ದುದು ಇದು: ನನ್ನ ಬಾಡಿಗೆ ಬಂದಿರಲಿಲ್ಲ. ಪೋಲೀಸಿನವನ ಗಲಾಟೆ ಹೆಚ್ಚಾಯಿತು. ನನಗೆ ಏನೂ ತೋರಲಿಲ್ಲ. ಬಾಡಿಗೆ ಬಿಟ್ಟುಹೋಗಲು ಬಹಳ ಸಂಕಟವಾಯಿತು. ನಿಲ್ಲುವುದಕ್ಕೂ ಅವಕಾಶವಿರಲಿಲ್ಲ 'ಏನು ಗೋಳು' ಎಂದು ನನ್ನ ಸ್ಥಿತಿಯನ್ನು ನಾನೇ ಆಡಿಕೊಂಡೆ. "ಹಾಗಾದರೆ ನೀನು ಪೋಲೀಸಿನವರನ್ನು ಮಟ್ಟ ಹಾಕಬೇಕೆಂದು ಹೇಳಿದೆಯೋ?" ವೆಂಕಟಪ್ಪನಿಗೆ ಇದ್ದ ಅಲ್ಪಸ್ವಲ್ಪ ಧೈರ್ಯವೂ ಹೋಗಿ ಕಲ್ಲುಕಂಬದಂತೆ ಸಪ್ಪೆಮುಖ ಹಾಕಿ ನಿಂತನು.

"ಸರಿ, ನೀನು ಸುಮ್ಮನಿರುವುದೇ ಸಾಕು. ನೀನು ಪಿತೂರಿಗಾರರಲ್ಲಿ ಸೇರಿದ್ದೀಯೆ. ನೀನು ದಂಗೆಕೋರ" ಎಂದು ಹೇಳಿ ನಂ.—ಪೋಲೀಸಿನವನನ್ನು ಕರೆ ಸಿದರು. ಸತ್ಯವನ್ನೇ ಹೇಳುತ್ತೇನೆಂದು ಪ್ರಮಾಣಮಾಡಿ ಪೋಲೀಸಿನವನು ತನ್ನ ಹೇಳಿಕೆಯನ್ನು ಆರಂಭಿಸಿದನು.

"ನಾನು ನೆನ್ನೆಯ ದಿನ ಮಧ್ಯಾಹ್ನ ಸಗರ್ತಪೇಟೆಯಲ್ಲಿ ಸ್ಪೆಷಲ್ ಬೀಟಿನಲ್ಲಿದ್ದೆ. ಈ ಜಟಕವು ಆರ್ಯಭವನದ ಮುಂದೆ ಬಂದು ನಿಂತಿತು. ಜನಗಳು ಇಳಿದಕೂಡಲೆ

ಜಟಕವನ್ನು ವಾಪಸ್ಸು ತೆಗೆದುಕೊಂಡು ಚೌಕಕ್ಕೆ ಹೋಗುವಂತೆ ಕೂಗಿ ಹೇಳಿದೆನು. ಆದರೂ ಇವನು ನನ್ನ ಮಾತನ್ನು ಕೇಳದೆ ಅಲ್ಲಿಯೇ ಗಾಡಿ ಭರ್ತಿಮಾಡಲು ನಿಂತನು. ಇಷ್ಟರಲ್ಲಿ ಅಲ್ಲಿ ಗಲಾಟೆ ಹೆಚ್ಚಾಯಿತು. ಎರಡನೆಯ ಬಾರಿ ಕೂಗಿ ಹೇಳಿದೆ. ಆದರೂ ಹೋಗಲಿಲ್ಲ. ಮೂರನೆಯಾವರ್ತಿ ಕೂಗಿ ಹೇಳುತ್ತಾ ಗಾಡಿಯ ಹತ್ತಿರ ಹೋಗುತ್ತಿರಲು ಇವನು ಪೋಲೀಸಿನವರನ್ನೇ ಒಟ್ಟುಗೂಡಿ ಬಯ್ದನು. ಇದು ನಿಶ್ಚಯ. ಬಯ್ಯುವುದರಲ್ಲಿ ಕುದುರೆಯನ್ನೂ ಗಾಡಿಯನ್ನೂ ನೋಡಿಕೊಳ್ಳದೆ ಹೋದುದರಿಂದ ಕುದುರೆಯು ಬೆಚ್ಚಿತು. ಮೋಟಾರಿಗೂ ಡಿಕ್ಕಿ ಹೊಡೆಯಿತು. ಇವನು ಪಿತೂರಿಗಾರ."

ಪೋಲೀಸಿನವರು ಸರ್ಕಾರಿ ನೌಕರರಲ್ಲವೇ! ಸರ್ಕಾರವೆಂದರೇನು? ಸತ್ಯಮೇವೋದ್ಧರಾಮ್ಯಹಂ ಎಂದು ಘೋಷಿಸುವುದಿಲ್ಲವೆ! ಒಬ್ಬೊಬ್ಬ ಸರ್ಕಾರಿ ನೌಕರನೂ ಮಾಡುತ್ತಿರುವುದೇ ಸತ್ಯಪರಿಪಾಲನೆಯ ಕಾರ್ಯ. ಈ ಸಾಕ್ಷಿಯಲ್ಲಿ ಸುಳ್ಳೆಂದರೇನು? ಅಪರಾಧಿಯಂತೆ ತೊದಲಲಿಲ್ಲ. ಕಣ್ಣುಬಾಯ್ಬಿಡಲಿಲ್ಲ. ಅಸತ್ಯವು ಇಷ್ಟು ಧಾಟಿಯಾಗಿ ಹೊರಡಬಲ್ಲುದೇ? ಸರ್ಕಾರಿ ನೌಕರರನ್ನು ಸರ್ಕಾರಿ ನೌಕರರೇ ಗೌರವಿಸದಿದ್ದರೆ ಇನ್ನಾರು ಗೌರವಿಸಬೇಕು? ಮ್ಯಾಜಿಸ್ಟ್ರೇಟರು ಈ ರೀತಿಯೋಚನೆಮಾಡಿ ಇತರ ಸಾಕ್ಷಿಗಳನ್ನು ಕರೆದರು. ವೆಂಕಟಪ್ಪನು ದುರ್ವಾರ್ತೆ ಏನನ್ನೂ ಹೇಳಲಿಲ್ಲವೆಂದೂ, ಅವನು ಪಿತೂರಿಗಾರನಲ್ಲವೆಂದೂ ಉಪಾಧ್ಯಾಯರು ಅಭಿಪ್ರಾಯಪಟ್ಟರು. ಮ್ಯಾಜಿಸ್ಟ್ರೇಟರು ಪುನಃ ಪೋಲೀಸಿನವನನ್ನು ಕರೆಯಿಸಿ ಕೇಳಿದನು. ಈಗಲೂ ಮೊದಲ ಹೇಳಿಕೆಯೇ.

ರಾಯರು ಎದ್ದು ಅಪರಾಧಿಯ ಪರವಾಗಿ ವಾದಿಸುವುದಕ್ಕೆ ಸಿದ್ಧವಾದರು. ಇವರ ಉಡುಪು, ಆಡಂಬರಗಳನ್ನು ನೋಡಿದವರಿಗೆ ವೆಂಕಟಪ್ಪನ ಬಿಡುಗಡೆಯಾಗುವುದೆಂಬ ಭರವಸೆಯೂ ಹುಟ್ಟಿತು. ರಾಯರು ಆರಂಭಿಸಿದರು. "ಪೋಲೀಸಿನವರು ಕಡಿಮೆ ಸಂಬಳದ ನೌಕರರಾದರೂ ಇತರ ನ್ಯಾಯಾಧೀಶರಂತೆಯೇ ಸತ್ಯಪರಿಪಾಲಕರು. ಪುಣ್ಯಾದರಸಿನ ಧರ್ಮದಾಳುಗಳವರು. ಅವರ ಸಂಬಳವೆಲ್ಲಿ? ಅವರು ನಿತ್ಯವೂ ಮಾಡುವ ಮಹತ್ತರವಾದ ಕಾರ್ಯವೆಲ್ಲಿ? ಧರ್ಮಸ್ಥಾಪನೆ, ಶಾಂತಿಸ್ಥಾಪನೆಯ ಕಾರ್ಯಗಳು ಸಾಮಾನ್ಯವಾದುವಲ್ಲ. ಪೋಲೀಸಿನವರು ಇಲ್ಲದಿದ್ದರೆ ನಮ್ಮ ಜನಾಂಗವು ತಮ್ಮ ಕೆಲಸಕಾರ್ಯಗಳನ್ನೂ ವ್ಯಾಪಾರವನ್ನೂ ಇಷ್ಟು ನಯವಾಗಿ ನಡೆಸಲಾಗುತ್ತಿದ್ದಿತೆ? ಪೋಲೀಸಿನವರೆ ಧರ್ಮೋದ್ಧಾರಕರು, ಶಾಂತಿಸ್ಥಾಪಕರು ಅವರಿಂದ ಜನಾಂಗಕ್ಕಾಗುವ ಉಪಕಾರವು ಅಷ್ಟಿಷ್ಟಲ್ಲ.

"ಇಂತಹ ಧರ್ಮಯೋಧರನ್ನು ವೆಂಕಟಪ್ಪನು ನಾಶಮಾಡುವವನೆಂದೂ ಆ ರೀತಿಯವನೆಂದೂ ಅವನ ಮೇಲೆ ಅಪರಾಧವು ಹೊರಿಸಲ್ಪಟ್ಟಿದೆ. ಅವನು ಅಂತಹ ಅಪರಾಧಿಯಾಗಿದ್ದಲ್ಲಿ ನಾನು ಎಂದಿಗೂ ಅವನ ಪರವಾಗಿ ವಾದಿಸಲು ಬರುತ್ತಲೇ

ಇರಲಿಲ್ಲ. ವೆಂಕಟಪ್ಪನು ಇಂತಹ ಮಾತುಗಳನ್ನು ಹೇಳಿರಬಹುದೇ ಎನ್ನುವುದು ಮೊದಲನೆಯ ಪ್ರಶ್ನೆ. ಎರಡನೆಯದು ಅವನು ಈ ಮಾತುಗಳನ್ನು ಹೇಳಿದನೇ ಎಂದು. ನನಗೆ ಪೋಲೀಸು . . . ನೇ ನಂಬದು ಮನುಷ್ಯನ ಮೇಲೆ ಯಾವ ವಿಧವಾದ ದುರಭಿಪ್ರಾಯವೂ ಇಲ್ಲ. ಆತನ ಕೆಲಸವು ಕಷ್ಟವಾದುದು. ಯಾವಾಗಲೂ ಗಲಾಟೆಯ ಮಧ್ಯದಲ್ಲಿದ್ದು, ಎಷ್ಟು ಗಲಾಟೆಯಾದರೂ ಯಾವ ತೊಂದರೆಯೂ ಸಂಭವಿಸದಂತೆ ನೋಡಿಕೊಳ್ಳುವುದು ಅವನ ಕೆಲಸ. ವೆಂಕಟಪ್ಪನು ಎರಡು ಮೂರಾವರ್ತಿ ಹೇಳಿದರೂ ಕೇಳದೆ ಇದ್ದುದರಿಂದ ಸ್ವಲ್ಪ ಕೋಪಗೊಂಡು ಇದರಿಂದ ಮುಂದಕ್ಕೆ ತೊಂದರೆಯುಂಟಾಗಬಹುದೆಂದು ಪೋಲೀಸಿನವರು "ಇದೊಂದು ಗೋಳು" ಎಂದಿರಬಹುದು. ಅಪರಾಧಿಯೂ ಸಹ ಇದೇ ಮಾತನ್ನು ಹೇಳಿದನೆಂದೇ ಇಟ್ಟುಕೊಳ್ಳೋಣ. ಹೇಳಿದ ಮಾತ್ರಕ್ಕೇ ಇದು ದೊಡ್ಡ ಅಪರಾಧವೇ? ವೆಂಕಟಪ್ಪನು ಅಕ್ಷರಸ್ಥನಲ್ಲ. ೫೫ ವರ್ಷಗಳಿಂದಲೂ ಬಡತನಕ್ಕೆ ತುತ್ತಾಗಿ ಕಷ್ಟಪರಂಪರೆಗಳನ್ನನುಭವಿಸಿದವನು. ಮದ್ಯಪಾನಾದಿ ಇತರ ಕೃತ್ಯಗಳಿಂದಲೂ ಬುದ್ಧಿವಿಹೀನನಾಗಿರುವನು. ಇಂತಹವನ ಬಾಯಲ್ಲಿ ಬರುವ ಮಾತುಗಳಿಗೆ ಬೆಲೆಯೇನೂ ಇಲ್ಲ. ವೆಂಕಟಪ್ಪನಿಗೆ ಯಾವ ಜವಾಬ್ದಾರಿಯೂ ಇಲ್ಲ."

ಈ ಮೊಕದ್ದಮೆಗೆ ಇಷ್ಟು ಹೊತ್ತು ಕೊಟ್ಟುದೇ ಹೆಚ್ಚು. ರಾಯರು ಕುಳಿತೊಡನೆಯೇ ಮ್ಯಾಜಿಸ್ಟ್ರೇಟರು ತಮ್ಮ ತೀರ್ಪನ್ನು ಹೇಳಿದರು. "ಮೊದಲನೆಯ ಎರಡು ತಪ್ಪಿಗಾಗಿ ೫ ರೂಪಾಯಿ ಜುಲ್ಮಾನೆ. ಮೂರನೆಯ ರಾಜದ್ರೋಹಕ್ಕೆ ೧೫ ದಿವಸ ಸಜಾ" ಕೂಡಲೆ ವೆಂಕಟಪ್ಪನನ್ನು ಕರೆದುಕೊಂಡು ಪೋಲೀಸಿನವರು ಸೆಂಟ್ರಲ್ ಜೈಲಿನ ಕಡೆಗೆ ಹೊರಟರು. ದಾರಿಯಲ್ಲಿ ಹೋಗುತ್ತಾ ಅಪರಾಧಿಯು ತನ್ನಲ್ಲಿ ತಾನೇ ಈ ರೀತಿ ಮಾತನಾಡಿಕೊಂಡನು: 'ಈಗ ಎಂಟು ದಿನ ಹಿಂದೆಯೇ ಹೀಗಾಗುವುದೆಂದು ತಿಳಿದಿದ್ದರೇ ಏನಾದರೂ ಮಾಡಬಹುದಾಗಿದ್ದಿತು. ಊಃ, ಆದದ್ದಾಗಿಹೋಯಿತು. . . ಈ ದೊಡ್ಡ ಮನುಷ್ಯರೆಲ್ಲಾ ಮಾತನ್ನೇನೋ ಚೆನ್ನಾಗಿ ಆಡುತ್ತಾರೆ. ಆದರೆ ಮಾತುಗಳು ಹೊರಡುವುದು ಬಲು ಜಾಗ್ರತೆ. ನಾವು ಹೇಳುವುದನ್ನು ಕೇಳುವುದೇ ಇಲ್ಲ . . . . ಅಲ್ಲವೇನಪ್ಪ?" ಎಂದು ಪೋಲೀಸಿನವನನ್ನು ಕೇಳಿದನು. ಅವನು ಏನೂ ಮಾತನಾಡಲಿಲ್ಲ.

"ಯಾಕಪ್ಪ ಮಾತನಾಡೊಲ್ಲ . . . . ನಾಯಿ ಬೊಗಳಿದರೂ ಮಾತನಾಡುತ್ತೀಯೆ; ನನ್ನ ಸಂಗಡ ಮಾತನಾಡುವುದಿಲ್ಲ. ನಿನ್ನ ನಾಲಿಗೆಯೇನು ಹುಳಬಿದ್ದಿದೆಯೋ?"

ಜೈಲಿನಲ್ಲಿ ಒಂಟಿಯಾಗಿದ್ದಾಗ ವೆಂಕಟಪ್ಪನು ಯೋಚನೆ ಮಾಡುವನು.

ನ್ಯಾಯಾಧಿಕಾರಿಗಳೂ ತಪ್ಪುಮಾಡುವರೇ ? ಅವರಲ್ಲೂ ಇತರರಂತೆ ಕುಂದುಕೊರತೆಗಳುಂಟೆ ? ಏನಿದ್ದರೂ ಎಲ್ಲಾ ಅವರ ಉಡುಪಿನಲ್ಲಿಯೂ ಆಡಂಬರದಲ್ಲಿಯೂ, ಅಧಿಕಾರ ಬಲದಿಂದಲೂ, ಜರ್ಬಿನಲ್ಲಿಯೂ ಲೀನವಾಗಿ ಹೋಗುವುವು. ತಾನು ತಪ್ಪಿತಸ್ಥನಲ್ಲವೆಂದು ಅವನಿಗೆ ಬಹಳ ಚೆನ್ನಾಗಿಯೂ ತಿಳಿವಳಿಕೆ. ಆದರೆ ಅಷ್ಟು ಹಣ ಮುಟ್ಟಿಸಿ ಕಟ್ಟಿರುವ ಆ ಸ್ಥಳದಲ್ಲಿ 'ಸತ್ಯಮೇವೋದ್ಧರಾಮ್ಯಹಂ' ಎಂದು ಸಾರುತ್ತಿರುವ ಧ್ವಜದ ಕೆಳಗೆ ಕುಳಿತು ನೂರಾರು ರೂಪಾಯಿ ಸಂಬಳಗಳನ್ನು ತೆಗೆಯುತ್ತಿರುವ ಜನಗಳು ಮಾಡುವ ಚಚ್ಚೌಕದ, ತುಂಬುಗಾಂಭೀರ್ಯದ, ಧರ್ಮಪರಿಪಾಲನಕಾರ್ಯದಲ್ಲಿ ತಪ್ಪು ಆಗುವುದೆಂದರೇನು ? ಪೋಲೀಸಿನವರನ್ನು ಮಟ್ಟಹಾಕಬೇಕೆಂಬ ಮಾತು ತನ್ನ ಬಾಯಲ್ಲಿ ಬರಲಿಲ್ಲವೆಂದು ಸಂಪೂರ್ಣವಾದ ನಂಬಿಕೆ. ಆದರೂ ೧೫ ದಿನಗಳ ಕಾಲ ಜೈಲಿನಲ್ಲಿರಬೇಕು. ತಾನು ಯಾವುದೋ ತನಗೆ ತಿಳಿಯದ ರೀತಿಯಲ್ಲಿ ತಪ್ಪುಮಾಡಿರಬೇಕೆಂದು ಮನಸ್ಸಿನಲ್ಲಿ ನಿಶ್ಚಯಿಸಿದನು.

ಮಾರನೆಯ ದಿನ ಬೆಳಿಗ್ಗೆ ದೀನಬಾಂಧವರಾದ ರಾಯರು ಬಂದು ತಮ್ಮ ಕಕ್ಷಿಯನ್ನು ಕಂಡರು.

"ವೆಂಕಟಪ್ಪ ! ಶಿಕ್ಷೆಯು ಮಹತ್ತರವಾದುದಲ್ಲ. ಮನಸ್ಸಿನಲ್ಲಿ ಇಲ್ಲದ ಸಂಕಟವನ್ನುಂಟುಮಾಡಿಕೊಂಡು ಧೈರ್ಯಗುಂದಬೇಡ. ೧೫ ದಿವಸವೆಂದರೇನು, ಎರಡು ವಾರ ಜಾಗ್ರತೆಯಲ್ಲಿಯೆ ಇಂದು, ನಾಳೆಯೆಂದು ಕಳೆದುಹೋಗುತ್ತೆ. ಇಲ್ಲೂ ನಿನಗೆ ಎಲ್ಲಾ ಅನುಕೂಲವಾಗಿರುತ್ತೆ."

"ಅದಕ್ಕೇನಪ್ಪಯ್ಯ, ಎಲ್ಲಾ ಒಳ್ಳೆಯವರು. ಯಾರೂ ಕಷ್ಟಕೊಡೋದಿಲ್ಲ. ಒಂದು ಕೆಟ್ಟಮಾತೂ ಆಡುವುದಿಲ್ಲ. ಜೈಲೆಂದರೆ ಏನೋಂತಿದ್ದೆ. ಇಲ್ಲೇನೂ ತೊಂದರೆ ಇಲ್ಲ !"

"ಎಲ್ಲಾ ಯೋಚನೆ ಮಾಡಿ ನೋಡಿದರೆ ತಪ್ಪನ್ನು ಒಪ್ಪಿಕೊಂಡುದೇ ಒಳ್ಳೆಯುದಾಯಿತಲ್ಲವೆ !"

"ಇರಬಹುದು."

"ಇನ್ನೊಂದು ಒಳ್ಳೆಯ ಸಮಾಚಾರ. ಶೆಟ್ಟರು ನಿನ್ನ ಜುಲ್ಮಾನೆಯ ಐದು ರೂಪಾಯಿಗಳನ್ನು ಕೊಟ್ಟರು. ನಾನು ಅವರಿಗೆ ನಿನ್ನ ವಿಚಾರವೆಲ್ಲಾ ಹೇಳಲು ಬಹಳ ಮರುಕಪಟ್ಟರು."

"ಆ ಹಣವನ್ನು ಯಾವಾಗ ನನಗೆ ಕೊಡುತ್ತೀರಿ."

"ನಿನಗೂ ಆ ಹಣಕ್ಕೂ ಏನೂ ಸಂಬಂಧವಿಲ್ಲ. ನಾನು ಆಫೀಸಿನಲ್ಲಿ ಕೊಟ್ಟು ಹೋಗುತ್ತೇನೆ. ನೀನೇನೂ ಯೋಚನೆ ಮಾಡಬೇಕಾದುದಿಲ್ಲ."

"ಹೇಗಾದರೇನು. ಆ ಶೆಟ್ಟರಿಗೆ ನನ್ನ ನಮಸ್ಕಾರಗಳನ್ನು ಹೇಳಿಬಿಡಿ . . . . ಇದೆಲ್ಲಾ ನೋಡಿದರೆ ಏನೋ ವಿಚಿತ್ರವಾದ ಸಂಗತಿಗಳು ನಡೆಯುವಂತಿದೆ."

"ವಿಚಿತ್ರವೇನೂ ಇಲ್ಲ ವೆಂಕಟಪ್ಪ. ಇದೆಲ್ಲಾ ಶುದ್ಧ ಸಾಮಾನ್ಯ ವಿಷಯ. ತಪ್ಪು ಮಾಡುವುದು, ಶಿಕ್ಷೆಯನ್ನನುಭವಿಸುವುದು ಕೇವಲ ಸಾಧಾರಣ. ಅಲ್ಲಿ ನೋಡು" ಎಂದು ಬಂದಿವಾನರ ದೊಡ್ಡ ಹಿಂಡೊಂದನ್ನು ತೋರಿಸಿ ರಾಯರು ಹೊರಟು ಹೋದರು.

ಜೈಲಿನಿಂದ ಬಿಡುಗಡೆಯಾದ ಕೂಡಲೆ ವೆಂಕಟಪ್ಪನು ತಾನು ವಾಸಮಾಡು ತ್ತಿದ್ದ ಲಾಯದ ಕಡೆಗೆ ಹೊರಟನು. ತನ್ನ ಗಾಡಿಯ ಸ್ಥಿತಿಯೇನಾಯಿತೋ, ಇನ್ನು ಆ ಯಜಮಾನನೇನು ಮಾಡುವನೋ ಎನ್ನುವ ಯೋಚನೆಯಲ್ಲಿ ಮುಳುಗಿ ಹೋಗಿದ್ದುದರಿಂದ ದಾರಿಯಲ್ಲಿ ಜನಗಳು ತನ್ನ ವಿಚಾರವಾಗಿ ಮಾತನಾಡುತ್ತಿದ್ದುದೂ, ಅವರ ನಗುವೂ, ಪರಿತಾಪವೂ ಏನೂ ಗೋಚರವಾಗಲಿಲ್ಲ. ತನ್ನ ಲಾಯದ ಹತ್ತಿರ ಬರುವಾಗ ಹಿಂದಿರುಗಿ ನೋಡಲು ಒಂದು ಹುಡುಗರ ಗುಂಪು ತನ್ನ ಹಿಂದೆ ಬರುತ್ತಿದ್ದಿತು. ಎಷ್ಟು ಗದರಿಸಿಕೊಂಡರೂ ಹೋಗಲಿಲ್ಲ. ತನ್ನಲ್ಲಿ ಏನೋ ವಿಚಿತ್ರ ವಾದ ಮಾರ್ಪಾಟಾಗಿರಬೇಕೆಂದು ಊಹಿಸಿದವನು, ಆ ದಿನವೆಲ್ಲಾ ಲಾಯದಿಂದ ಹೊರಕ್ಕೆ ಹೊರಡಲೇ ಇಲ್ಲ. ಸಾಯಂಕಾಲವಾಗುತ್ತಲೆ ಹೋಗಿ ಗಾಡಿ ಯಜಮಾನ ನನ್ನು ಕೇಳಲು ಅವನು ಮಾತನಾಡಿಸಲೇ ಇಲ್ಲ. ಬಲವಂತದಿಂದ ಮಾತನಾಡಿಸಲು ವೆಂಕಟಪ್ಪನು ಪ್ರಯತ್ನಪಟ್ಟ. ಕಡೆಗಾದುದು ಅರ್ಧಚಂದ್ರಪ್ರಯೋಗ. ಆದಿನ ಸಂಪಾದನೆಯಿಲ್ಲ. ಜೈಲಿನ ಹಿಟ್ಟೂ ಇಲ್ಲ. ದುಃಖ, ಸಂಕಟಗಳಿಂದ ಹಸಿವು ಇಮ್ಮಡಿ ಯಾಗಿದ್ದಂತೆ ತೋರಿತು. ಮನೆಯಲ್ಲಿದ್ದ ಒಂದು ಸಣ್ಣ ಹಿತ್ತಾಳೆಯ ಪಾತ್ರೆಯನ್ನು ಮಾರಿ ಹೆಂಡವನ್ನು ಕುಡಿದು ಮಲಗಿಬಿಟ್ಟನು.

ಬೆಳಿಗ್ಗೆ ಹೊತ್ತಾದ ಮೇಲೆದ್ದು ಗಾಡಿಯ ಚೌಕಕ್ಕೆ ಬಂದು ತನ್ನ ಗೆಳೆಯರನ್ನು ಮಾತನಾಡಿಸಲು ಹತ್ತಿರ ಹೋದನು. ಎಲ್ಲರೂ ಇವನನ್ನು ಅಪರಿಚಿತನಂತೆ ಕಂಡರು. ಯಾರೂ ಇವನ ಸಂಗಡ ಮಾತೇ ಆಡಲಿಲ್ಲ. ಹತ್ತಿರ ಹೋದರೂ ಕೂಡ ದೃಷ್ಟಿಯನ್ನು ಎಲ್ಲೋ ತಿರುಗಿಸಿ ಇವನ ಬರವನ್ನು ಕಾಣದವರಂತೆ ನಟಿಸಿದರು. ಗೆಳೆಯರ ಸಹಾಯ ದಿಂದ ಇನ್ನೊಬ್ಬ ಗಾಡಿ ಯಜಮಾನನನ್ನು ಹುಡುಕಿ ಜೀವನವನ್ನು ಸಂಪಾದಿಸ ಬೇಕೆಂದಿದ್ದ ಆಸೆಯು ತೊಲಗಿಹೋಯಿತು. ಜೈಲಿನಿಂದ ಬಂದವನನ್ನು ನಂಬುವರು ಯಾರು? ಮಣ್ಣು ಕಲ್ಲು ಹೊತ್ತು ಕೂಲಿ ಕೆಲಸ ಮಾಡಲು ತ್ರಾಣವಿಲ್ಲ. ಮೊದಲಿ ನಿಂದಲೂ ಗಾಡಿ ಹೊಡೆಯುತ್ತಿದ್ದ ಮನುಷ್ಯನಿಗೆ ಮುದುಕನಾದ ಮೇಲೆ ಕಷ್ಟದ ಜೀವನವು ಸಾಧ್ಯವಲ್ಲ. ರೈಲ್ವೆ ಸ್ಟೇಷನ್ನಿನಲ್ಲಿ ಮೂಟೆ ಹೊರೋಣವೆಂದರೆ ಲೈಸೆನ್ಸು

ಬೇಕು. ಪೋಲೀಸಿನವರ ದಯ ಬೇಕು. ಪೋಲೀಸೆಂದರೆ ವೆಂಕಟಪ್ಪನ ಮೈ ಜುಂ ಎನ್ನುತ್ತದೆ.

ಹುಚ್ಚು ಹಿಡಿದವನಂತೆ ಅಲೆಯುತ್ತಾ ಮಧ್ಯಾಹ್ನ ನಾಲ್ಕು ಗಂಟೆ ಹೊತ್ತಿಗೆ ಚಿನ್ನಪ್ಪನವರ ಮನೆ ಮುಂದೆ ಬಂದವನು ಹುಡುಗರ ಆಟವನ್ನು ನೋಡುತ್ತಾ ನಿಂತನು. ಇವರು ಮೋಟಾರು ಇಡುವುದಕ್ಕೆ ಮುಂಚೆ ವೆಂಕಟಪ್ಪನ ಜಟಕವನ್ನೇ ವರ್ತನೆ ಮಾಡಿಕೊಂಡಿದ್ದರು. ಅವರ ಮನೆಗೆ ಹೋಗಿ ಅಮ್ಮಾವರನ್ನು ಕಂಡು "ಗಿಡಗಳಿಗೆ ನೀರು ಹಾಯಿಸುತ್ತೇನೆ. ಕೈತೋಟವನ್ನು ಅಂದವಾಗಿಟ್ಟುಕೊಳ್ಳುತ್ತೇನೆ. ಹುಡುಗರನ್ನು ಆಟವಾಡಿಸುತ್ತೇನೆ. ಮುದುಕನಾದೆ ತಾಯಿ. ಈಗ ಬೇರೆ ಯಾವ ಕೆಲಸವೂ ಆಗುವುದಿಲ್ಲ. ನೀವು ಏನಾದರೂ ಕೊಡಿ ನಿಮ್ಮಾಳಾಗಿರುತ್ತೇನೆ" ಎಂದ. ಅಮ್ಮಾವರು ಅಟ್ಟಹಾಸದಿಂದ ಬಂದು ತಿಮ್ಮನನ್ನು ಸ್ಕೂಲಿಗೆ ಹೋಗಿ ಹುಡುಗರನ್ನು ಕರೆತರುವಂತೆ ಹೇಳಿ, ಬೋರನನ್ನು ಯಜಮಾನರ ಸಾಯಂಕಾಲದ ಉಡಿಗೆಗಳನ್ನು ಸಿದ್ಧಮಾಡೆಂದು ಹೇಳಿ ವೆಂಕಟಪ್ಪನ ಬಳಿ ಬಂದು "ಮುದುಕಯ್ಯ, ನೋಡು, ಆಫೀಸಿನ ಆಳುಗಳು ಇಬ್ಬರು ಯಾವಾಗಲೂ ಹಾಜರಿದ್ದಾರೆ. ಅವರಿಗೇ ಏನೂ ಕೆಲಸವಿಲ್ಲ. ಇನ್ನು ಯಾಕಪ್ಪಾ ಬೇರೆಯಾಳುಗಳು. ಈ ಪುರಿ ಉಂಡೆ ತಕ್ಕೊ ತಿನ್ನುಹೋಗು" ಎಂದು ಹೇಳಿಕಳುಹಿಸಿದರು. ಪುರಿ ಉಂಡೆಯನ್ನು ತಿನ್ನುತ್ತಾ ತನ್ನ ಲಾಯದ ಕಡೆ ಹೊರಟನು. ಅರ್ಧದಾರಿಯಾದಾಗ್ಯೆ ಉಂಡೆ ಮುಗಿಯಲು ಹೊಟ್ಟೆತುಂಬಾ ನೀರುಕುಡಿದು, ಲಾಯದಲ್ಲಿ ಬಿದ್ದು ಹೊರಳಾಡುತ್ತಾ ಇರಲು ಒಂದು ಒಳ್ಳೆ ಯೋಚನೆ ತಲೆದೋರಿತು.

ಮನೆಯಲ್ಲಿಟ್ಟುಕೊಳ್ಳದಿದ್ದರೆ ಬೇಡ ನಾರಾಯಣಶೆಟ್ಟರು ದೊಡ್ಡ ಸಾಹುಕಾರರು. ಸಿಟಿಯಲ್ಲಿ ಒಂದು ಅಂಗಡಿ ಲಷ್ಕರಿನಲ್ಲಿ ಒಂದು ಅಂಗಡಿ ಎರಡರಲ್ಲೂ ವ್ಯಾಪಾರ. ಅಂಚೆಗೆ ಹಾಕುವ ಕಾಗದಗಳೇ ನೂರಾರು, ತರುವುದೂ ಅಷ್ಟೆ. ರೈಲ್ವೆಸ್ಟೇಷನ್ನಿಗೆ ಹೋಗುವ ಮೂಟೆಗಳಿಗೂ ಬರುವುದಕ್ಕೂ ಮಿತಿಯೇ ಇಲ್ಲ. ಯಾವ ಜವಾಬ್ದಾರಿ ಕೆಲಸವೂ ಬೇಡ. "ಅಂಚೆಯ ಆಫೀಸಿಗೆ ಹೋಗಿ ಕಾಗದಗಳನ್ನು ತರುತ್ತೇನೆ. ಕಾಗದಗಳನ್ನೂ ಹಾಕುತ್ತೇನೆ. ಮೂಟೆಯ ಗಾಡಿಗಳಲ್ಲಿ ಯಾವುದೂ ಪೋಲಾಗದಂತೆ ಕಾವಲಿರುತ್ತೇನೆ. ಸಿಟಿಯಿಂದ ಲಷ್ಕರಿಗೆ ಸಮಾಚಾರವನ್ನು ತಲುಪಿಸುತ್ತೇನೆ. ಏನನ್ನಾದರೂ ಕೊಡಿ, ಯಾವ ಕೆಲವಾದರೂ ಮಾಡುತ್ತೇನೆ" ಎಂದು ಹೇಳಿದರೆ ಇಟ್ಟುಕೊಳ್ಳಲಾರರೆ ಎಂದು ಯೋಚನೆ ಮಾಡುತ್ತಿದ್ದ ಹಾಗೆಯೇ ಮಗಳನ್ನು ಕೊಡು ವಳಿಯಾಗಿದ್ದ ರಾಮಪ್ಪನು ಬಂದನು. ವೆಂಕಟಪ್ಪನು ಕಥೆಯನ್ನೆಲ್ಲಾ ಹೇಳಿದನು. ರಾಮಪ್ಪನ ಸಂಗಡ ಹಳ್ಳಿಗೆ ಹೋದರೆ ಯಾವ ತೊಂದರೆಯೂ ಇಲ್ಲ, ದನಕಾಯ

ಬಹುದು, ಹೊಲ ಉಳಬಹುದು, ನೇರಳೆ ಎಲೆ ಕಿತ್ತುಕೊಂಡು ಬರಬಹುದು, ಹಳ್ಳಿಯಲ್ಲಿ ಹಿಟ್ಟಿಗೆ ದರಿದ್ರವೆ? ರಾಮಪ್ಪನಿಗೆ ನಾನೇನು ಭಾರವೇ ಎಂದುಕೊಂಡ. ರಾಮಪ್ಪನಿಗೆ ಕಥೆಯನ್ನು ಕೇಳಿ ಹೆದರಿಕೆಯಾಯಿತು. ಜೈಲಿನಿಂದ ಬಂದ ಮುದುಕನನ್ನು ಮನೆಗೆ ಸೇರಿಸಿದರೆ ಹಳ್ಳಿಯವರು ಕಿರುಕುಳ ಮಾಡಿಯಾರೆಂದು ಹೆದರಿ, ಅಂಗಡಿಯಿಂದ ಬೀಡಿ ತರುವನೆಂದು ಹೋದವನು ಊರಿಗೇ ನಡೆದುಬಿಟ್ಟನು.

ಮಾರನೆಯ ದಿನ ಶೆಟ್ಟರನ್ನು ಕೇಳಿದ್ದಾಯಿತು, ಹಿಂದಿನ ದಿನ ಯೋಚನೆ ಮಾಡಿದಂತೆ ಹೇಳಿದ್ದೂ ಆಯಿತು. "ಈಗ ಟೆಲಿಫೋನು ಇಟ್ಟಿದ್ದೇನೆ. ನೀನು ಮುದುಕ, ಕಷ್ಟಬಿದ್ದು ಕೆಲಸಮಾಡಲಾರೆ. ಮೇಲ್ವಿಚಾರಣೆಯ ಕೆಲಸಕ್ಕೆಲ್ಲಾ ಹಳ್ಳಿಯಿಂದ ನನ್ನ ಭಾವಮೈದುನರನ್ನು ಕರೆತಂದಿದ್ದೇನೆ. ಇಲ್ಲಿ ನಿನಗೆ ಯಾವ ಕೆಲಸವೂ ಇಲ್ಲ. ತಿಂಡಿಯನ್ನು ಕೊಡೋಣವೆಂದರೆ ಇದು ಮಂಡಿ, ಕಳ್ಳೆಪುರಿ ಸಹಿತ ಇಲ್ಲ. ಈ ಆರು ಕಾಸು ತೆಗೆದುಕೋ ಹೋಗು" ಎಂದು ಹೇಳಿ ಕಳುಹಿದರು. ಅದೇ ದಿನ ಮಧ್ಯಾಹ್ನ ಲಾಯದ ಯಜಮಾನನು "ಎದುರು ಮನೆಗೆ ಸಿಟಿ ಪೋಲೀಸ್ ಸೂಪರಿಂಡೆಂಟ್ ಸಾಹೇಬರು ಬಾಡಿಗೆಗೆ ಬರುತ್ತಾರೆ. ಈ ಲಾಯವನ್ನು ಮೋಟಾರಿಡುವುದಕ್ಕೆ ಬಾಡಿಗೆಗೆ ಕೊಟ್ಟಿದ್ದೇನೆ. ಸಾಯಂಕಾಲ ಐದು ಘಂಟೆಯೊಳಗೆ ನಿನ್ನ ಸಾಮಾನ್ನೆಲ್ಲಾ ತೆಗೆದುಕೊಂಡು ಹೋಗಬೇಕು" ಎಂದು ಹೇಳಿದನು. ಹೊಟ್ಟೆಗಂತೂ ಇಲ್ಲ. ಈಗ ಇರುವ ನೆರಳೂ ಹೋಯಿತು. ಇದ್ದ ಮಡಕೆಗಳನ್ನೂ ಹಳೆಯ ಚಿಂದಿಗಳನ್ನೂ ತಿಪ್ಪೆಗುಂಡಿಯಲ್ಲಿ ಎಸೆದು ಹೋದ ವರುಷ ಗಾಡಿಗೆ ಹಾಕುತ್ತಿದ್ದ ಎರಡು ಮುರುಕು ಲಾಂದ್ರಗಳನ್ನೂ, ಎಣ್ಣೆಯನ್ನಿಡುತ್ತಿದ್ದ ಎರಡು ಸೀಸೆಗಳನ್ನೂ, ಹಿತ್ತಾಳೆಯ ಒಡಕು ಚೆಂಬನ್ನೂ ತೆಗೆದುಕೊಂಡುಹೋಗಿ ಗುಜರಿಯಲ್ಲಿ ಎಲ್ಲವನ್ನೂ ಹದಿಮೂರಾಣೆಗೆ ಮಾರಿದನು. ಇದ್ದಕ್ಕಿದ್ದಂತೆ ಜೋರಾಗಿ ಮಳೆ ಬರಲು ಒಂದಾಣೆಗೆ ರೊಟ್ಟಿಯನ್ನು ಕೊಂಡು ತಿಂದನು. ಕತ್ತಲೂ ಆಯಿತು. ಮಳೆಯೂ ನಿಂತಿತು. ಬಳೇಪೇಟೆಯಲ್ಲಿರುವ ಸಾರಾಯಿ ಅಂಗಡಿಗೆ ಬಂದು ಸಾಕೆನ್ನುವಷ್ಟು ಹೀರಿ ಹಿಂದಿರುವ ಕೆರೆಯ ಏರಿಯ ಮೇಲೆ ನಿಂತು ಏನೇನೋ ಕನಲುತ್ತಿದ್ದನು.

ಪುನಃ ಮಳೆಯು ಸುರಿಯಲಾರಂಭವಾಯಿತು. ಮಳೆಯಲ್ಲಿ ನೆನೆದಮೇಲೆ ಸ್ಮೃತಿಯು ಬಂದು ಹತ್ತಿರದಲ್ಲೇ ಇದ್ದ ಪೂರ್ಣಯ್ಯನ ಛತ್ರದ ಜಗುಲಿಯ ಮೇಲೆ ಹೋಗಿ, ಅಲ್ಲಿದ್ದ ಭಿಕ್ಷುಕರಿಂದಲೇ ಎರಡು ಹರಕು ಗೋಣೀಚೀಲಗಳನ್ನು ಬೇಡಿ ಆ ರಾತ್ರಿಯನ್ನು ಅಲ್ಲೇ ಕಳೆದನು. ಬೆಳಗಾಗುತ್ತಲೇ ಅರ್ಧ ಒಣಗಿದ್ದ ತನ್ನ ಬಟ್ಟೆಗಳನ್ನು ಹಾಕಿಕೊಂಡನು. ಏನುಮಾಡಲೂ ತೋಚದೆ ಮಂಕುಹಿಡಿದವನಂತೆ ಕೂತಿದ್ದನು. ಭಿಕ್ಷುಕರು, ಬೈರಾಗಿಗಳು ಎಲ್ಲರೂ ತಟತಟನೆ ಎದ್ದು ಮುಖವನ್ನು

ತೊಳೆದು ವಿಭೂತಿ ಬಳಿದುಕೊಳ್ಳುವರು, ನಾಮಹಾಕಿಕೊಳ್ಳುವರು. ಎಲ್ಲರನ್ನೂ ನೋಡಿದನು. ಮನಸ್ಸಿನಲ್ಲಿ ಇವನಿಗೆ ಹೀಗೆ ಹೊಳೆಯಿತು. ಭಿಕ್ಷುಕರ ಜೀವನವು ಸುಲಭ. ಹತ್ತು ಮನೆಯಲ್ಲಿ ಸಿಕ್ಕಿದರೂ ಸರಿಯೆ; ಒಂದು ದಿನದ ಊಟವು ಕಳೆದು ಹೋಗುತ್ತೆ. ಪ್ರಪಂಚದಲ್ಲಿ ನಾನೊಬ್ಬನೇ ದುಃಖಿ. ಭಿಕ್ಷುಕರಾದರೂ ಎಲ್ಲರೂ ಸರದಾರರಂತಿದ್ದಾರೆ. ಅವರ ಸಡಗರವನ್ನೂ, ಅಲಂಕಾರಗಳನ್ನೂ ನೋಡುತ್ತಿರುವ ವೇಳೆಗೆ ಹತ್ತು ಘಂಟೆಯಾಗಿಹೋಯಿತು. ಜೇಬಿನಲ್ಲಿದ್ದ ಆಣೆಗಳ ಜ್ಞಾಪಕವೂ, ಅದರೊಡನೆ ಜೀವವೂ, ಧೈರ್ಯವೂ ಬಂದು ತಾನೂ ಸರದಾರನಂತೆ ಎದ್ದು ನೆಟ್ಟಗೆ ಸಾರಾಯಿ ಅಂಗಡಿಗೆ ಹೋಗಿ ಇದ್ದ ಕಾಸಿಗೆಲ್ಲಾ ಹೆಂಡವನ್ನು ಹೀರಿ ಅದೇ ಜಗುಲಿಗೆ ವಾಪಸ್ಸು ಬಂದು ಮಲಗಿದನು. ಎಚ್ಚರವಾಗುವ ಹೊತ್ತಿಗೆ ಮಧ್ಯಾಹ್ನ ನಾಲ್ಕು ಘಂಟೆಯಾಗಿದ್ದಿತು.

ಬೆಳಿಗ್ಗೆ ಸರದಾರರಂತೆ ಹೋದ ಭಿಕ್ಷುಕರು ತಮ್ಮ ಯಾತ್ರೆಯನ್ನು ಪೂರೈಸಿಕೊಂಡು ಬಂದು ತಮ್ಮ ಸಂಪಾದನೆಯನ್ನು ವಿಂಗಡಿಸಿ ಅಡಿಗೆ ಮಾಡುತ್ತಿದ್ದರು. ಕೆಲವರು ರೊಟ್ಟಿಗಳನ್ನು ತಟ್ಟುತ್ತಿದ್ದರು. ಮತ್ತೆ ಕೆಲವರು ಹಿಟ್ಟನ್ನೋ, ಅನ್ನವನ್ನೋ ಮಾಡುತ್ತಿದ್ದರು. ಇನ್ನೂ ಕೆಲವರು ಭಂಗಿಯನ್ನು ಹೊಡೆಯುತ್ತಿದ್ದರು.

ವೆಂಕಟಪ್ಪನಿಗೆ ಹಸಿವು ಕರುಳನ್ನೇ ತಿನ್ನುವುದೊ ಎನ್ನುವಂತೆ ದಹಿಸುತ್ತಿದ್ದಿತು. ಅವರನ್ನು ಕೇಳುವುದು ಹೇಗೆ? ಭಿಕ್ಷುಕರನ್ನೇ ಬೇಡುವುದೇ? ಸಾಹುಕಾರರನ್ನೂ, ದೊಡ್ಡ ನೌಕರರನ್ನೂ ಬೇಡಿಬಂದ ಫಲವು ಜ್ಞಾಪಕಕ್ಕೆ ಬಂದಿತು. ಭಿಕ್ಷೆ ಎತ್ತುವದು ಬಹಳ ಹೀನವೃತ್ತಿಯೆಂದು ತೋರಿತು. ಭಿಕ್ಷುಕನು ಒಬ್ಬೊಬ್ಬನೂ ತನ್ನ ಪಾಡನ್ನೂ, ತನ್ನ ಸಂಸಾರದ ಹಿತವನ್ನೂ ನೋಡುತ್ತಿದ್ದನು. ಈ ಸೋಮಾರಿಯನ್ನು ಯಾರೂ ಮಾತನಾಡಿಸಲಿಲ್ಲ. ತನ್ನ ಹಿಂದಿನ ಕಥೆಯನ್ನೆಲ್ಲಾ ಜ್ಞಾಪಿಸಿಕೊಂಡು ತನ್ನಲ್ಲಿ ತಾನೆ ಹೀಗೆಂದುಕೊಂಡನು: "ಅಲ್ಲ, ನಾನು ಮೊದಲಿನ ಮನುಷ್ಯನಲ್ಲ. ಇನ್ನು ನನ್ನ ಕಥೆ ಇಲ್ಲಿಗೆ ಮುಗಿಯಿತು. ವಯಸ್ಸೂ ಆಯಿತು, ಶರೀರವೂ ನಶಿಸಿಹೋಗುತ್ತಾಬಂದಿತು. ಪುನಃ ಆ ಶಕ್ತಿ ಎಲ್ಲಿ ಬರುತ್ತೆ! ಇಷ್ಟರ ಮೇಲೆ ಕೋರ್ಟು ಜೈಲು ನೋಡಿ ಬಂದ ಮೇಲಂತೂ ನಾನು ಪೂರಾ ಬದಲಾಯಿಸಿದ್ದೇನೆ. ಖಂಡಿತ ನಾನು ಮೊದಲಿನ ಮನುಷ್ಯನಲ್ಲ." ಯಾವ ಮನುಷ್ಯನಿಗೆ ಈ ಮನಸ್ಸಿನ ಸ್ಥಿತಿಯು ಬರುವುದೋ ಅವನು ನೆಲಕ್ಕೆ ಕುಗ್ಗಿಹೋಗಿ ಮಣ್ಣೊಳಗೆ ಮಣ್ಣಾಗುವುದು, ಎಲ್ಲರ ಕಾಲಿನಿಂದಲೂ ತುಳಿಸಿಕೊಳ್ಳುವುದೇ ಹೊರತು ಪುನಃ ಏಳುವಹಾಗಿಲ್ಲ. ಮನುಷ್ಯವರ್ಗಕ್ಕೆ ಬರುವಹಾಗೇ ಇಲ್ಲ.

ಹೀಗೆ ಯೋಚಿಸುತ್ತಿರುವಾಗಲೆ ಕತ್ತಲಾಯಿತು. ಹಸಿವು ಉರಿಯುತ್ತಿತ್ತು. ತಾನು ಜೈಲಿನಲ್ಲಿದ್ದ ಕಥೆಯೂ ಮನಸ್ಸಿನ ಮುಂದೆ ನಿಂದಿತು. ತನ್ನ ಈಗಿನ ಸ್ಥಿತಿಗಿಂತ

ಜೈಲಿನಲ್ಲಿರುವ ಬಂದಿವಾಸರ ಸ್ಥಿತಿಯೇ ಮೇಲೆಂದು ತೋರಿತು. ಅಲ್ಲಿರುವವರಿಗೆ ಹಸಿವಿನ ಪೀಡೆಯಿಲ್ಲ. ಚಳಿಯ ಬಾಧೆಯಿಲ್ಲ. ಅಲ್ಲಿ ಹೋಗಿ ಸೇರುವ ಉಪಾಯವು ನನಗೆ ಗೊತ್ತೇ ಇದೆ. ಈಗ ಏತಕ್ಕೆ ಉಪಯೋಗಿಸಬಾರದು ? ಎಂದು ಕೂಡಲೆ ಜಗುಲಿಯಿಂದ ಕೆಳಕ್ಕೆ ಧುಮುಕಿದನು. ಕತ್ತಲು ಕವಿದಿದ್ದಿತು. ಮಳೆಯ ಗಾಳಿಯು ತಣ್ಣಗೆ ಬೀಸುತ್ತಿದ್ದಿತು. ಇವನು ಹತ್ತು ಹೆಜ್ಜೆ ಇಡುವುದರೊಳಗಾಗಿಯೇ ಮಳೆಯು ಸುರಿಯಲಾರಂಭವಾಯಿತು. ಆದರೂ ಮುಂದೆ ಬರುವ ಸುಖದಾಸೆಯಲ್ಲಿ ಮಳೆಯನ್ನು ಲೆಕ್ಕಿಸದೆ ಕೆರೆಯ ಏರಿಯ ಮೇಲೆ ನಡೆದು ಬಲಕ್ಕೆ ತಿರುಗಿ ಎಲೆಕ್ಟ್ರಿಕ್ ಆಫೀಸಿನ ಚೌಕಕ್ಕೆ ಬಂದನು.

ಪೋಲೀಸಿನವನು ಮಳೆಯ ಹೊಡೆತವನ್ನು ತಡೆಯಲಾರದೆ, ರಸ್ತೆಯ ಮಗ್ಗುಲಲ್ಲಿದ್ದ ಸಣ್ಣ ಮಾಳಿಗೆ ಮಂಟಪದ ಮುಂದೆ ನಿಂತಿದ್ದನು. ದಾರಿಯಲ್ಲಿ ಜನರೂ ಬಹಳವಾಗಿರಲಿಲ್ಲ. ಯಾರೋ ಒಬ್ಬರಿಬ್ಬರು ತಿರುಗಾಡುತ್ತಿದ್ದರು. ದೂರದಿಂದ ನೋಡುವವರಿಗೆ ಪೋಲೀಸಿನವನ ಆ ರುಮಾಲೂ, ದೊಡ್ಡ ಬೂದುಬಣ್ಣದ ನಿಲುವಂಗಿಯೂ, ದೊಡ್ಡ ಬೂಟ್ಸುಗಳೂ ಎಲ್ಲವೂ ಹೆದರಿಕೆಯನ್ನುಂಟುಮಾಡುತ್ತಿದ್ದವು. ಬಟ್ಟೆಯ ಜರ್ಬು, ಆಡಂಬರವೇ ಹೊರತು ಮುಖದಲ್ಲಿ ಯಾವ ವಿಧವಾದ ಬಲವೂ ಕಾಣಬರಲಿಲ್ಲ. ಹುಬ್ಬುಗಳೂ, ಕೆನ್ನೆಯ ಮೇಲಿನ ಮೂಳೆಗಳೂ ಬೆಟ್ಟಗುಡ್ಡಗಳಂತೆ ಹೊರಚಾಚಿದ್ದುವು. ಕಣ್ಣುಗಳು ಈ ಬೆಟ್ಟಗಳ ನಡುವಿನ ಕಣಿವೆಯಂತಿದ್ದವು. ಅನ್ನ, ಆಹಾರಗಳನ್ನು ಬಿಟ್ಟ ರೋಗಿಯಂತೆ ಮುಖವು ಬಾಡಿ ಬಿಳುಪೇರಿದ್ದಿತು. ನಿರಾಳವಾಗಿದ್ದುದು ಮೀಸೆಯೊಂದೇ. ವೆಂಕಟಪ್ಪನು ಹತ್ತಿರ ಹೋಗಿ "ಏ ! ಪೋಲೀಸ್, ನಿಮ್ಮನ್ನೆಲ್ಲಾ ಹೂತುಬಿಡುತ್ತೇನೆ" ಎಂದು ಸಣ್ಣ ಧ್ವನಿಯಲ್ಲಿ ಹೇಳಿ ಉತ್ತರವೇನು ಬರುವುದೋ ಎಂದು ಆತುರನಾಗಿ ನಿಂತಿದ್ದನು. ಉತ್ತರವೇನೂ ಬರಲಿಲ್ಲ. ಪೋಲೀಸಿನವನು ಚಳಿಗೋಸ್ಕರ ಎರಡು ಕೈಗಳನ್ನೂ ಕಟ್ಟಿದ್ದವನು ಸ್ವಲ್ಪವೂ ಅಲುಗದೆ ಹಾಗೆಯೇ ನಿಂತು, ಕಣ್ಣುಗಳನ್ನು ಮಾತ್ರ ತೆರೆದು ವೆಂಕಟಪ್ಪನನ್ನು ನೋಡಿದನು. ಆ ದೃಷ್ಟಿಯಲ್ಲಿ ಕೋಪ, ರೋಷಕ್ಕೆ ಬದಲಾಗಿ ಸಂಕಟವೂ ಅಲಕ್ಷ್ಯವೂ, ಬೇಸರವೂ ಇದ್ದುವು. ವೆಂಕಟಪ್ಪನಿಗೆ ಆಶ್ಚರ್ಯವಾಯಿತು. ಗಂಟಲು ಸರಿಮಾಡಿಕೊಂಡು, ದಪ್ಪ ಧ್ವನಿಯಿಂದ ಪುನಃ "ಏ ಪೋಲೀಸ್ ನಿಮ್ಮನ್ನೆಲ್ಲಾ ಕೊಂದುಹಾಕಿಬಿಡುತ್ತೇನೆ, ತಿಳಿಯಿತೋ" ಎಂದು ಕೂಗಿದನು. ಇದಕ್ಕೆ ಉತ್ತರವು ಮಳೆಯ ಪಟಪಟ, ಕಪ್ಪೆಯ ವಟವಟ ಇಷ್ಟೆ, ವೆಂಕಟಪ್ಪನು ಇನ್ನೂ ನಿಂತಿರುವುದನ್ನು ಕಂಡು ಪೋಲೀಸಿನವನೆಂದನು. "ಅಯ್ಯಾ ಮುದುಕ, ಹೀಗೆಲ್ಲಾ ಅನ್ನಬಾರದು . . . ಖಂಡಿತ ಹೀಗೆಲ್ಲಾ ಹೇಳಬಾರದು. ನಿನ್ನ ವಯಸ್ಸಿನವರಿಗೆ ತಿಳಿವಳಿಕೆಯಿರಬೇಕು. ಮನೆಕಡೆ ಸುಮ್ಮನೆ ಹೋಗು."

"ನನ್ನನ್ನೇತಕ್ಕೆ ಜೈಲಿಗೆ ಕರೆದುಕೊಂಡು ಹೋಗುವುದಿಲ್ಲ ?"

"ನಿನ್ನಂತಹ ಅರಳು ಮರಳು ಮುದುಕರು ಹೇಳಬಾರದುದನ್ನು ಹೇಳಿದರೆಂದು ಹಿಡಿದುಕೊಂಡು ಹೋದರೆ ನಮ್ಮ ಕೆಲಸಕ್ಕೆ ಕಲ್ಲು ಬೀಳುತ್ತೆ . . . . ಇದರಿಂದ ಪ್ರಯೋಜನವು ತಾನೆ ಏನು?"

ವೆಂಕಟಪ್ಪನು ಈ ಉದಾರವಾದ ಅಲಕ್ಷ್ಯವನ್ನು ನೋಡಿ ಬೆರಗಾಗಿ ನಿಂತನು. ಅಲ್ಲಿಂದ ಹೊರಟುಹೋಗುವುದಕ್ಕೆ ಮುಂಚೆ ಪೋಲೀಸಿನವನಿಗೆ ಒಂದೆರಡು ಮಾತು ಹೇಳಬೇಕೆಂದು ಪ್ರಯತ್ನಮಾಡಿದನು. "ನಾನು ಹೇಳಿದ್ದು ನಿನ್ನನ್ನು ಕೊಲ್ಲುವೆನೆಂದಲ್ಲ. ಅಥವಾ ಇನ್ನೊಬ್ಬರನ್ನು ಬಡಿದುಹಾಕುವೆನೆಂದೂ ಅಲ್ಲ. ಅದೊಂದು ಬರಿಯ ಮಾತು."

ಈಗಲೀಗ ಪೋಲೀಸಿನವನು ಸ್ವಲ್ಪ ಕಠಿಣಸ್ವರದಿಂದಲೂ ಕನಿಕರದಿಂದಲೂ ಹೇಳಿದನು. "ಬರಿಯ ಮಾತೋ, ಮುಂದೆ ಆಗುವ ಕೆಲಸದ ಹೇಳಿಕೆಯೋ, ಇಂತಹ ಮಾತುಗಳನ್ನು ಹೇಳಬಾರದು. ನಾನು ಮಳೆಯಲ್ಲಿ ನೆನೆದು, ಬಿಸಿಲಿನಲ್ಲಿ ಒಣಗಿ ನನ್ನ ಕೆಲಸವನ್ನು ಮಾಡಿ ಹಾಗೂ ಹೊಟ್ಟೆತುಂಬದೆ ಸಂಕಟಪಟ್ಟು ಸಾಕಾಗಿ ನಿಂತಿರುವಾಗ, ಇಲ್ಲಿ ಬಂದು ಈ ರೀತಿ ನನ್ನನ್ನು ಬಯ್ಯುವುದೂ, ಹೀಯ್ಯಾಳಿಸುವುದೂ ತರವಲ್ಲ. . . . ನಿನ್ನ ದಾರಿ ಹಿಡಿದುಕೊಂಡು ಹೋಗು"

ಮಳೆಯು ಇನ್ನೂ ಸುರಿಯುತ್ತಲೇ ಇದ್ದಿತು. ಆಕಾಶದಲ್ಲಿ ಕಪ್ಪುಮೋಡಗಳಾವರಿಸಿಕೊಂಡು ಕತ್ತಲೆಯು ಹೆಚ್ಚಾಯಿತು. ದೂರದಲ್ಲಿ ಸಿಡಿಲು ಹೊಡೆದ ಶಬ್ದವು ಕೇಳಿಸಿತು. ಬೀದಿಯ ದೀಪಗಳು ಆರಿಹೋದುವು. ಮಳೆಯ ಆರ್ಭಟವು ಇಮ್ಮಡಿಯಾಯಿತು. ವೆಂಕಟಪ್ಪನು ತಲೆಯನ್ನು ಬಗ್ಗಿಸಿಕೊಂಡು, ಕೈಗಳೆರಡನ್ನೂ ಹಿಂದಕ್ಕೆ ಜೋಡಿಸಿಕೊಂಡು ಆ ಮಳೆಯಲ್ಲಿಯೇ ಜೈಲುರಸ್ತೆಯ ಕಡೆ ನುಗ್ಗಿದನು.

"ಮಂ"

ಗಾಥಾಸಪ್ತಶತಿಯಿಂದ

೧

ನೋಡು ಗೌಡರ ಸೊಸೆ ಎಂತೆಂತೊ ಕೊನೆಗೊಮ್ಮೆ
  ಬಣ್ಣದ ಹೊಸಸೀರೆವುಟ್ಟು,
ಮೈ ತೆಳ್ಳಗಿದ್ದರು ಓಡಾಡುತಿರುವಳು
  ಬೀದಿಯೆ ಸಾಲದೆನುವಂತೆ.

೨

ಚಂದದ ರೂಪವು, ತುಂಬಿದ ಹರಯವು
  ಊರೊಳು ಆಕೆಯು ಸಲ್ಲನಿಲ್ಲ ;
ಪಕ್ಕದ ಹೆಂಗಸು ತೀರ ಕೆಟ್ಟಿದ್ದರು
  ಚೌಕದ ಬಡಹೆಣ್ಣು ಹೊಲ್ಲಳಲ್ಲ.

೩

ಸೂರ್ಯನ ನೆವದೊಳು ಬಾಲಕ ಆರನು
  ನಮಿಸುವೆ ಬೊಗಸೆಗೈಮುಗಿದು
ಹಾಸ್ಯಕಟಾಕ್ಷದೊಳೊಲಿಸುವುದುಂಟೇನು
  ದೇವರ ಜಯಕಾರಗೈದು.

೪

ನನ್ನೊಡನೆ ನೀ ಹೇಳಿಕಳುಹಿದ ಮಾತನು
  ಆಕೆಗೆ ಹೇಳಿದೆ ಹಲವು ಸಲ ;
ತಿಳಿಯಲಿಲ್ಲೆನಗೆಂದು ಮತ್ತೊಮ್ಮೆ ಹೇಳೆಂದು
  ಕೇಳಿದಳಾಮಾತ ನೂರು ಸಲ !

ಎಸ್. ವಿ. ಪರಮೇಶ್ವರಭಟ್ಟ.

ಮಲುಹಣನ ರಗಳೆ

ಮಹಾಕವಿ ಹರಿಹರನ ಪ್ರಾಸಾದಿಕವಾಣಿಯಿಂದ ಹೊರಹೊಮ್ಮಿದ ಅನೇಕ ಸುಂದರವಾದ ರಗಳೆಗಳಲ್ಲಿ 'ಮಲುಹಣನ ರಗಳೆ' ಅತ್ಯಂತ ರಮಣೀಯವಾಗಿದೆ. ಇದರಲ್ಲಿ ಹರಿಹರನ ಅನೇಕ ಸಾಧನೆಗಳನ್ನು ನೋಡಬಹುದು. ಇಲ್ಲಿ ಸಂಪ್ರದಾಯ ಶರಣತೆಯ ಶಬ್ದಾಲಂಕಾರ ಅರ್ಥಾಲಂಕಾರಗಳ ವರ್ಣನೆಗಳಿವೆ. ಅವುಗಳಲ್ಲಿಯೂ ಈತ ನೂತನ ಸಾಧನೆಗಳನ್ನು ತೋರಿರುವನು. ವ್ಯಕ್ತವಾದ ಸೌಂದರ್ಯದ ವರ್ಣನೆಯನ್ನು ಮಾಡಿ ಮನೋಹರ ಚಿತ್ರಗಳನ್ನು ಸೂರೆ ಮಾಡಿರುವಂತೆಯೇ-ಅವ್ಯಕ್ತವಾದ ಭಾವನೆಯ ವರ್ಣನೆಯನ್ನು ವ್ಯಕ್ತವಾದ ಭಂಗಿಯಲ್ಲಿ ವರ್ಣಿಸಿ ಅನುಪಮ ಕಲಾ ಕೌಶಲ್ಯವನ್ನೂ ಸಾಧಿಸಿದ್ದಾನೆ. ಚಿತ್ರತರವಾದ ರೀತಿಯಲ್ಲಿ ಸನ್ನಿವೇಶಗಳ ವಿವರವಾದ ವರ್ಣನೆಯನ್ನು ಮಾಡಿ ಶೃಂಗಾರದ ಪರಿಕರಗಳ ಮೇಲೆ ಪರಿಕರಗಳನ್ನು ಸುರಿದು ಶೃಂಗಾರಪೂಜೆಯನ್ನು ನಡೆಸಿದ್ದಾನೆ ಇಲ್ಲಿ. ಆ ಶೃಂಗಾರಪೂಜೆ ಶಂಕರಪೂಜೆಯಾಗಿ ಪರ್ಯವಸಾನವಾಗುವ ರೀತಿಯಲ್ಲಂತೂ ಬಹಳ ಚಮತ್ಕಾರವಾದ ನಾಟಕೀಯ ಮುಕ್ತಾಯದ ಪರಿಣಾಮವನ್ನು ಸಾಧಿಸಿದ್ದಾನೆ.

ವರ್ಣನೆಯನ್ನು ಹದನರಿತು ಆಯಾ ಸಂದರ್ಭಕ್ಕೆ ಉಚಿತವಾಗಿ ಮಾಡುವ ಹರಿಹರನ ಜಾಣ್ಮೆ ಕಾಶ್ಮೀರ ದೇಶದ ವರ್ಣನೆಯಲ್ಲಿ ಪ್ರಾರಂಭದಲ್ಲಿಯೇ ವ್ಯಕ್ತವಾಗಿದೆ.

ಊರೂರ್ಗೆ ತೀವಿದ ತಟಾಕನಿಕರಂಗಳಿಂ
ಊರೂರ್ಗೆ ಕಿಕ್ಕಿರಿದು ಕೊರ್ವಿದ ಬನಂಗಳಿಂ
ಬನದೊಳಗೆ ಸುಳಿತರ್ಪ ಕಸ್ತುರಿ ಮೃಗಂಗಳಿಂ
ಬಿನದದಿಂ ಪರಿತರ್ಪ ಚಮರೀಮೃಗಂಗಳಿಂ

ಹೀಗೆ ನಾಲ್ಕಾರು ಮಾತುಗಳಲ್ಲಿ ಕಾಶ್ಮೀರದ ವಾತಾವರಣವನ್ನು ನಮ್ಮ ಕಣ್ಮುಂದೆ ತರುತ್ತಾನೆ ಕವಿ. ಆದರೆ ಮುಂದಿನ ಶಬ್ದಗಳ ಶ್ಲೇಷೆಯ ಮೂಲಕ ಅಲ್ಲಿಯ ಸುಸ್ಥಿತಿಯನ್ನು ಸ್ಥಾಪಿಸುವ ರೀತಿಯಲ್ಲಿ ಹೀಗೆಯೇ ಔಚಿತ್ಯವನ್ನು ಸಾಧಿಸ ಲಾಗುವುದಿಲ್ಲ.

ಕೊಯ್ವ ನುಡಿ ಕೆಯ್ಗಳೊಳ್ ಮಾನಿನಿಯರಳಕದೊಳ್
ಬಯ್ವ ನುಡಿ ಗಿಳಿಗಳೊಳ್ ನಲ್ಲರೊಳ್ ಸರಸದೊಳ್
ಬಡತನಂ ಲತೆಗಳೊಳ್ ಲಲನೆಯರ ನಡುವಿನೊಳ್

ಹೀಗೆ ಚಮತ್ಕಾರದ ರೀತಿ ಸಾಗಿದೆ. ಮುಂದೆ ಬಂದ ಪಟ್ಟಣವರ್ಣನೆಯೂ "ಅಲ್ಲಲ್ಲಿ ದ್ರಾಕ್ಷಾಲತಾ ಮಂಟಪಂಗಳಿಂ" ಎಂಬ ಒಂದೆರಡು ಸಾಲುಗಳನ್ನು ಬಿಟ್ಟರೆ ಸಾಂಪ್ರದಾಯಿಕ ನಗರವರ್ಣನೆಯೇ ಆಗಿದೆ. ಆದರೆ ವಿಸ್ತಾರಕ್ಕೆ ಹೋಗದೆ ಏಳೆಂಟು ಸಾಲುಗಳಲ್ಲಿಯೇ ಮುಗಿಸಿದ್ದಾನೆ.

ಅಲ್ಲಿಯ ಸುವರ್ಣಭಟ್ಟ ಎಂಬ ಶ್ರೀಮಂತನ ಔದಾರ್ಯದ ವರ್ಣನೆಯಲ್ಲಿ ಕನ್ನಡ ಸಂಸ್ಕೃತಿಯ ಆದರ್ಶವನ್ನು ಕಾಣಬಹುದು.

ಹೆಸರ ಸತ್ರಂ ಹೆಸರ ಪುರವರ್ಗವಲ್ಲಲ್ಲಿ
ಹೆಸರ ಕೆರೆಯರವಟಿಗೆಯಾರವೆಗಳಲ್ಲಲ್ಲಿ
ಹೆಸರಗ್ರಹಾರಂ ಶಿವಾಲಯಗಳಲ್ಲಲ್ಲಿ

ಮಗನಿಗೆ ಅಪಾರ ಧನರಾಶಿಯನ್ನು ಬಿಟ್ಟು ಜ್ವರದಿಂದ ಆತ ತೀರುತ್ತಾನೆ. ಅವನ ಮಗ ಮಲುಹಣನಿಗೆ ಯೌವನೋದಯವಾದ ಸನ್ನಿವೇಶವನ್ನು ಹರಿಹರ ಬಹು ಮನೋಜ್ಞವಾಗಿ ವರ್ಣಿಸಿದ್ದಾನೆ.

ಸವಿನುಡಿಗಳಂ ಕಿವಿಗಳಾಲಿಸಲ್ತೊಡಗಿದವು
ಅವಯವಂ ಮೃದುವಸನದಿಚ್ಛೆಯನೊಡರ್ಚಿದವು
ನೋಟವೊಪ್ಪುವ ರೂಪನೆಚ್ಚರಿಸಲೆಳಸಿದವು
ತೋಟಿಗೆಳಸುವ ಪುರ್ಬು ಗಂಟಿಕ್ಕತೊಡಗಿದವು
ನವ ಮಧುರಮಂ ಜಿಹ್ವೆ ಬಯಸಲನುಗೈಯಿತ್ತು
ನವ ಗಂಧಮಂ ಘ್ರಾಣವರಿಯಲನುಗೈಯಿತ್ತು

ಯೌವನದ ಮೂಲಕ ಮಲುಹಣನ ಪಂಚೇಂದ್ರಿಯ ಪ್ರೀತಿ ಹೆಣ್ಣಿನಾಸೆಯಾಗಿ ತಿರುಗಿತೆಂಬ ಭಾವನೆ ಈ ಸಾಲುಗಳಲ್ಲಿ ಅಡಗಿದೆ.

ಅಂಗರುಚಿ ಮುಗ್ಧೆಯರ ಕಣ್ಗೆ ಕನ್ನಡಿಯಾಗೆ

ಈ ರೂಪಕದ ಸೊಗಸು ಹರಿಹರನ ಶ್ರೇಷ್ಠ ಕಲ್ಪನಾಶಕ್ತಿಗೆ ಕನ್ನಡಿಯಾಗಿದೆ. ವಿಳಾಸಿನಿಯಾದ ಪದ್ಮಾವತಿ ಎಂಬವಳ ಮಗಳು ಮಲುಹಣೆಯ ಸೌಂದರ್ಯವರ್ಣನೆ ಸಾಂಪ್ರದಾಯಿಕತೆಯಲ್ಲಿಯೂ ಹೊಸ ಚಮತ್ಕಾರವನ್ನು ಉಂಟುಮಾಡಿದೆ.

ಮನವನೆಡೆಗೊಂಡನಾ ಮನಸಿಜಂ ಪರಿತಂದು
ತನುವನೆಡೆಗೊಂಡುದಾ ಸೌಭಾಗ್ಯವೆಯ್ತಂದು
. . . .
ಭ್ರೂಲತೆಯನಾಶ್ರಯಿಸಿತಿಕ್ಷುಚಾಪಂ ನೋಡ
ಆಲೋಕನವನೊತ್ತಗೊಂಡವಲರ್ಗಣೆ ನೋಡ

ಎಲ್ಲಾ ಅವಯುವಗಳಿಗೆ ಹೋಲಿಸಿದ ವಸ್ತುಗಳು ಸಾಮಾನ್ಯವಾಗಿ ಸಾಂಪ್ರದಾಯಿಕವಾದರೂ ಅವುಗಳೆಲ್ಲ ಮನ್ಮಥ; ಅವನ ಪರಿವಾರದ ವಸ್ತು ಹಾಗು ಪ್ರಾಣಿಗಳ ಸಾಹಚರ್ಯವನ್ನು ಸಮಗ್ರವಾಗಿ ತಂದಿರುವಲ್ಲಿ ಕಥಾನಕದ ಔಚಿತ್ಯವಾದ ಮಲುಹಣ ಮಲುಹಣಿಯರ ಕಾಮಸೂತ್ರದ ಬಂಧನದಲ್ಲಿ ಸಾರ್ಥಕತೆಯನ್ನು ಪಡೆದಿವೆ. ಆಕೆಯ ಮೀಸಲಳಿಯದ ಹೊಚ್ಚ ಹೊಸ ಯೌವನದ ವರ್ಣನೆಯ ಉಪಮೆಗಳ ಸಾಲಿನಲ್ಲಿ ಮೊದಲನೆಯದು ಹಾಗು ಮೂರನೆಯದು ವಿಶೇಷವಾಗಿ ನಮ್ಮ ಮನಸ್ಸನ್ನು ಸೆರೆ ಹಿಡಿಯುತ್ತವೆ.

ಅಳಿ ತುಡುಂಕದ ಮಘಮಘಿಪ ಬಿರಿಮುಗುಳಂತೆ
ಎಳಸುವ ಚಕೋರ ಮೊಗವಿಡದ ಚಂದ್ರಿಕೆಯಂತೆ
ಪಿಕಚಂಚು ಸಂಚಾರವಿಲ್ಲದೆಳೆದಳಿರಂತೆ
ಶುಕಮುಖದ ಅಣ್ಣೆವಳಿಯದ ಪಕ್ವಫಳದಂತೆ

ಇವುಗಳಲ್ಲಿ ಎಲ್ಲ ಉಪಮೆಗಳೂ ಸಾರ್ಥಕವಾದರೂ ಮೂರನೆಯದು ನಲ್ಲಳ ಕೆಂಪು ತುಟಿಯನ್ನು ಕಚ್ಚುವ ನಲ್ಲನ ಮುಖದ ಹಾಗು ಮುಂದೆ ನಾಚಿಕೆಯಿಂದ ಓರೆಯಾಗುವ ನಲ್ಲಳ ಮುಖದ ಇಂಗಿತವನ್ನು ಸೂಚಿಸುವುದರ ಮೂಲಕ ರಸಿಕಜನಕ್ಕೆ ವಿಶೇಷವಾಗಿ ಪ್ರಿಯವಾಗುವುದು. ಆಕೆಯ ಸರ್ವಾಂಗ ಸೌಂದರ್ಯದ ವರ್ಣನೆಯಲ್ಲಿ ಶಬ್ದಗಳ ಆಯ್ಕೆ ಹಾಗು ಶೈಲಿಯ ಸೊಬಗು ಬಹಳ ರಮಣೀಯವಾಗಿದೆ.

ಮಗಳ ಸುಮನೋಹರ ರೂಪನ್ನು ನೋಡಿ ಸುಖರಸದೊಳೋಲಾಡಿ ಪದ್ಮಾವತಿ,

ನವಯೌವನದ ನೆಲೆಗೆ ಮನದೊಳಗೆ ತೂಪಿರಿದು
ಅವಯವದ ಚೆಲ್ವಿಂಗೆ ಕಣ್ಗಳೊಳ್ ತೂಪಿರಿದು
ಕಡು ನೇಹದಿಂದೆ ನವಲಾಸ್ಯಮಂ ಮೈಗೊಳಿಸಿ
ಮೃಡನೊಲ್ವ ರಸಗಾನಮಂ ನೆರೆ ಕೊರಳ್ಗೊಳಿಸಿ
ಮಗಳ ನಿಟ್ಟಿಸುತ ಕಣ್ಗೊಳಗಿಕ್ಕಿ ಮುಚ್ಚುತಿರೆ
ಮಿಗೆ ವಿಳಾಸಿನಿಯರಿಂ ಸಿಂಗರಿಸುತಿರುತಮಿರೆ

ಮಗಳ ರೂಪನ್ನು ಕಣ್ಣೊಳಗೆ ತುಂಬಿಕೊಂಡು ಅದು ಹಾರಿಹೋದೀತೆಂದು ಧ್ಯಾನಿಸುತ್ತಾ ಕಣ್ಣು ಮುಚ್ಚಿದಳಂತೆ ತಾಯಿ! ಹೆಣ್ಣಿನ ಮನಸ್ಸನ್ನೂ ಆಕರ್ಷಣೆ ಮಾಡುವ ಹೆಣ್ಣಿನ ಸೊಬಗೂ ತಾಯ್ತನದ ವಾತ್ಸಲ್ಯವೂ ಈ ರೂಪಸಮಾಧಿಗೆ ಕಾರಣವಾಗಿವೆ.

ದ್ವಿತೀಯ ಸ್ಥಲದ ಗದ್ಯವಾದರೂ ಈ ಕಾವ್ಯದ ಯೋಗ್ಯತೆಯನ್ನು ಅದ್ವಿತೀಯವಾಗಿ ಸಾರುತ್ತದೆ. ಇಂದ್ರಿಯವೇದ್ಯವಾದ ವರ್ಣನೆಗಳ ಸೊಗಸು ಸೂರೆಯಾಗಿದೆ ಈ ಸ್ಥಲದಲ್ಲಿ. ಮನೋಹರವಾದ ಅಕ್ಷರಶಿಲ್ಪದಲ್ಲಿ ಮಲುಹಣ-

ಮಲುಹಣಿ ಇವರ ಸುರಮ್ಯಪ್ರಣಯದ ದೃಶ್ಯದ ಕಂಡರಣೆಯಾಗಿದೆ. ಮಧುರ ಭಾವದ ವರ್ಣನೆಯು ವಾತಾವರಣಕ್ಕೆ ಪೋಷಕವಾದ ಮಾಧುರ್ಯವ್ಯಂಜಕವಾದ ಹರಿಹರನ ಇಲ್ಲಿಯ ಶೈಲಿಯು ಸೊಗಸು ಸಹಜವಾದ ವಡಿ ಅಲಂಕಾರದಿಂದ ಇನ್ನೂ ರಮಣೀಯವಾಗಿದೆ.

"... ಶಶಿಬಿಂಬಕ್ಕೆ ಶುಕ್ರನಂ ಸೇರಿಸುವಂತೆ ಮುಖಬಿಂಬದೊಳ್ ಮುತ್ತಿನ ಮೂಕುತಿಯುಂ ಮೇಳೈಸಿ ಕಾವನನಂಬಂ ಕಸ್ತೂರಿಯ ಸಾಣೆಯಿಕ್ಕುವಂತೆ ಕಜ್ಜಳಮನೆಚ್ಚಿ ಎಳಲತೆಯುಂ ಬೆಳ್ದಿಂಗಳಿಂ ಬಾಸಣಿಸುವಂತೆ ನವದುಕೂಲಮುಂ ಸಿರಿವಿಡಿದುಡಿಸಿ..."

ವಿಜಯೇಶ್ವರ ದೇವರ ರಂಗಮಂಟಪಕ್ಕೆ ಸಖೀಜನಸಹಿತಳಾಗಿ ಮಲುಹಣಿ ಅಲಂಕೃತಳಾಗಿ ಬರುವಾಗ "ಮಲುಹಣಿಯ ಮರೆಗೊಂಡು ಕರ್ಬಿನ ಬಿಲ್ಲ ಗೊಲೆ ಗೇರಿಸುತ್ತ ಎಲರಂಬಂ ನಡೆತರೆ" ಈ ವಾಕ್ಯವು ಗಿರಿಜಾಕಲ್ಯಾಣದಲ್ಲಿ ಪಾರ್ವತಿ ಯನ್ನು ಮುಂದಿಟ್ಟು ಬರುವ ಮನ್ಮಥನ ಸುಂದರ ಚಿತ್ರದ ಜ್ಞಾಪಕವನ್ನು ತರುತ್ತದೆ. "ಪೂಸಿದ ಚಂದನದ ಜವಾಜಿಯ ಯಕ್ಷಕರ್ದಮದ ಸೌರಭ್ಯದೊಡನೊಡನೆ ದೆಸೆ ದೆಸೆಗೆ ಪಸರಿಸಿ ತೀಡುವ ಹೊಸ ಜವ್ವನದ ಪಸಿಯ ಕಂಪಿನ ಬಳಿವಿಡಿದು ಸುವಿಟರ್ಕವಿದು ಬರೆ" ಇಲ್ಲಿ ಹೇಳದೆ ಇದ್ದರೂ ವಿಟರಿಗೂ ಭ್ರಮರಗಳಿಗೂ ಹೋಲಿಕೆ ಗಮ್ಯವಾಗುತ್ತದೆ. "ತುಂಬಿಗಳ ಝೇಂಕಾರಂ, ಕಂಕಣದ ಝಣತ್ಕಾರಂ, ನೂಪುರದ ಕ್ರೇಂಕಾರಂ, ಪಾದಮುದ್ರಿಕೆಯ ಠಣತ್ಕಾರಂ, ಮದನನ ಬಿಲ್ಲ ಟೇಂಕಾರಂ, ಬೆರಸಿ ಬೆಳೆದು ಪುರಜನದ ಕಿವಿಗಳ್ಗೆ ಹೊಸ ಸವಿಗಳಂ ಸಾಲಿಡೆ" ಇಲ್ಲಿ ಪಂಚೇಂದ್ರಿಯ ಪ್ರೀತಿಯನ್ನು ಉಂಟುಮಾಡುವ ಹರಿಹರನ ವರ್ಣನಾಶಕ್ತಿಯು ಕಿವಿ, ಕಣ್ಣುಗಳ ಆಕರ್ಷಣೆ ಸ್ಪಷ್ಟವಾಗಿದೆ.

ಶಿವಾಲಯಕ್ಕೆ ಬಂದ ಮಲುಹಣ "ಜವನಿಕೆಯೋಡೆ ದೊಣೆಯನಗಲ್ದ ಕಾಮನಂಬಿನಂತಿರ್ದ ಮಲುಹಣಿಯ ರೂಪಿನೊಳ್ನೋಟಂ ಸಿಲ್ಕಿ ಎವೆ ಬೆರಗಾಗಿ ಕಣ್ಗಳ್ ಧಾರೆಯಿಂದೊಳಪೊಕ್ಕು ರೂಪು ಕರಣವನೊಕ್ಕಲಿಕ್ಕಿ ಭಾವಮುಂ ಬರಿಕೈದು ಚಿತ್ತಮುಂ ತೊಳ್ತಳದುಳಿದು ಜೋಲ್ದು ಝೊಂಪಿಸಿ," ಮದನಮೋಹನ ಬಾಣಕ್ಕೆ ಗುರಿಯಾಗುತ್ತಾನೆ. ಈತನನ್ನು ನೋಡಿ ಮಲುಹಣಿ ಶೋಕಮೂರ್ಛಿತೆಯಾಗಲು ತಾಯಿ "ಇದೇನಿದೇನು ರಂಗಮಂಟಪಂ ವಿರಹಮಂಟಪವಾದುದು, ಈಶ್ವರ ಕೇಳಿಕೆ ರತೀಶ್ವರ ಕೇಳಿಕೆಯಾದುದು" ಎಂದು ಅಚ್ಚರಿಪಟ್ಟು ನಂತರ ನಲ್ಲರನ್ನು ಜೊತೆಗೂಡಿ ಸುವಳು.

ಏಳಾಸಿನಿಯ ರೂಪಕ್ಕೆ ಆಕರ್ಷಿತನಾಗಿ ಆಕೆಯನ್ನು ಕೂಡುವ ಅದೊಂದು

ಜಾತಿಯ ಗಾಂಧರ್ವವಿವಾಹಕ್ಕೆ ಸಮಾಜದಲ್ಲಿ ಆಗ ವಿಶೇಷ ಅಗೌರವವಿರಲಿಲ್ಲವೆಂದು ಕಾಣುತ್ತದೆ. ಹರಿಹರನ ಕೆಲ ರಗಳೆಗಳಲ್ಲಿ ಅದು ಅಷ್ಟು ಸಹಜವಾಗಿ ಚಿತ್ರಿತವಾಗಿದೆ. ಯಾವ ಇತರ ಬಂಧನವೂ ಇಲ್ಲದ ಹೆಣ್ಣುಗಂಡಿನ ಸಹಜಶೃಂಗಾರ ಅದು. ಸಾಮಾನ್ಯವಾದ ತರುಣತರುಣಿಯರ ಚಂಚಲವ್ಯಾಪಾರದಲ್ಲಿ ಹೀನತೆಯಿದ್ದರೂ ಗಾಢವಾದ ಹಾಗು ನಿರ್ವ್ಯಾಜವಾದ ಪ್ರೇಮಬಂಧುರತೆಯು ಅಲೌಕಿಕಗುಣ ಅವಿವಾಹಿತ ಪ್ರೇಮಿಗಳನ್ನು ದಾಂಪತ್ಯದ ಮಟ್ಟಕ್ಕೇರಿಸುವಲ್ಲಿ ಸಂಪೂರ್ಣ ಯಶಸ್ವಿಯಾಗದಿದ್ದರೂ ಅದಕ್ಕೆ ಹತ್ತಿರ ಹತ್ತಿರ ಬರುವದೆಂದು ಅನಿಸುತ್ತದೆ. ಸಾಮಾನ್ಯವಾಗಿ ಕನ್ನಡ ಕವಿಗಳು ದಾಂಪತ್ಯದ ಚಿತ್ರಣದಲ್ಲೂ ಎಲ್ಲೆ ಮೀರುವದು ಕಂಡುಬರುತ್ತದೆ. ಇಲ್ಲಿಯ ವಿಲಾಸದ ಚಿತ್ರಣದಲ್ಲಿ ಅವರಿಬ್ಬರ ಮೇರೆಮೀರಿದ ಶೃಂಗಾರದ ಆನಂದವನ್ನು ಚಿತ್ರಿಸುವಲ್ಲಿ ಎಲ್ಲೆ ಮೀರದೆ, ಕ್ರಿಯೆಯನ್ನು ಭಾವವಾಗಿ ರೂಪುಗೊಳಿಸಿ ಭಾವಗಳನ್ನು ಗಮ್ಯಮಾಡುವಲ್ಲಿ ಅನೇಕ ಸೊಗಸಾದ ರೂಪಕಗಳನ್ನು ಬಳಸಿ ರಸಮಯವಾದ ಶೃಂಗಾರಚಿತ್ರಣವನ್ನು ಕೊಡುವಲ್ಲಿ ನಿಜವಾದ ಮಹಾಕವಿಯ ಶಕ್ತಿಯನ್ನು ಮೆರೆದಿದ್ದಾನೆ ಹರಿಹರ. ಅದಕ್ಕೆ ಒಂದೆರಡು ಉದಾಹರಣೆ.

"ಮಲುಹಣಿಯ ತನುವಿನ ಕಾದಂಬಾಮೋದಂ ತೀಡೆ ಮನೋಮೇಘಂ ತೊರೆಯೆ ನೋಟದ ಮಿಂಚಡರೆ ಬಳಲ್ಕುಡಿಯೆಂಬ ನವಿಲಾಡೆ . . . ಹಿಗ್ಗಿ ಸುಖದ ಸೋಂಕು ಮಿಕ್ಕುಮೀರಿ ನಲಿವು ತಲೆಗೆತ್ತಿ ಸುಖಮುಖದಿಂ ಸೋಂಕಿ ಸೆಳೆಯಲನುಗೈವಲ್ಲಿಂ ಮುನ್ನಂ ರೋಮಾಂಚದ ಬಾಸುಳೆಳ್ವ ಸುಕುಮಾರಾಂಗಿಯೊಳೊಲ್ದು ನೆರೆವ ಸುಖಸಮಯದೊಳ್ ಕರುಣವೆಲ್ಲಂ ನೋಟ, ನೋಟವೆಲ್ಲಂ ನುಡಿ, ನುಡಿಯೆಲ್ಲಂ ವಿರಹ, ವಿರಹವೆಲ್ಲಂ ದೈನ್ಯ . . ." ಇತ್ಯಾದಿ.

"ಸಂವತ್ಸರಂಗಳುಂ ದಿನಂಗಳಾಗಿ ದಿನಂಗಳುಂ ನಿಮಿಷಂಗಳಾಗಿ ಪದ್ಮಾವತಿ ಸಂಪನ್ನೆಯಾಗಿ, ನಿಚ್ಚಂ ಸಾಸಿರ ಹೊನ್ನೆಂದು ನೂರುಂಬರಿಸಕ್ಕೆ (ಮಲುಹಣನ) ತಂದೆ ಮಡಗಿದ ಧನಂ ಹತ್ತು ಬರಿಸಕ್ಕೈದದಿರೆ ಧನಂ ತೀರೆ ಮನಂ ತೀರದಿರೆ **ಮುಡಿದ ಹೂವಗಲ್ದೊಡಂ ಹಿಡಿದ ಪರಿಮಳವಗಲದಿರ್ಪಂತೆ** ಮೋಹರಸವಾರದೆ." ಮಲುಹಣ ಮಲುಹಣಿ ಪರಮಾನುರಾಗದೊಳಗಲದಿರೆ ಮಲುಹಣನ ಹಣವೆಲ್ಲ ವ್ಯಯವಾಗಲು "ಅರ್ಥದ ಸವಿಗೆ ಮನಮುಂ ನಾಲಗೆಯುಂ ಲವಲವಿಸಿ ಮಿಕ್ಕುಮೀರಿದ ರಕ್ಕಸಿಗುಂಟಣಿ !" ಪದ್ಮಾವತಿ, "ಚೂತಮನಪ್ಪಿದ ಮಲ್ಲಿಕಾಲತೆಯನಗಲ್ಚುವ ಬಿರುಗಾಳಿಯಂತೆ ಭೇರುಂಡವಕ್ಕಿಯ ನಡುವಂ ಸೀಳಲೊಯ್ವ ಲುಬ್ಧಕನಂತೆ ಮಗಳನಗಲ್ಚಲ್ ಬಗೆದು." ಈ ಹೋಲಿಕೆಗಳಲ್ಲಿ ಮೊದಲನೆಯ ಹೋಲಿಕೆ ಸಾಮಾನ್ಯವಾದರೂ ಭೇರುಂಡವಕ್ಕಿಯ ಚಿತ್ರಣದಲ್ಲಿ ಪ್ರಣಯಿಗಳ ಜೊತೆಯ ಗಾಢತೆ ಲುಬ್ಧಕ

ವ್ಯಾಪಾರ ಚಿತ್ರಣದಲ್ಲಿ ಅಗಲಿಕೆಯ ದಾರುಣತೆಯ ಚಿತ್ರಣ ಹೊಸ ವೈಶಿಷ್ಟ್ಯವನ್ನು ಪಡೆಯುತ್ತದೆ. ಮಗಳನ್ನು ನಲ್ಲನಿಂದ ಅಗಲ್ಚಲು, ನಿನ್ನ ಮಾವನು ವಸ್ತ್ರಾಭರಣವನ್ನು ತಂದಿದ್ದಾನೆ ಬಾ ಎಂದು ತಾಯಿ ಹೇಳಿಕಳಿಸಲು ಕೋಪ ಮತ್ತು ದುಃಖದಿಂದ "... ನೊಸಲಕಣ್ಣ ಹೊಗೆಸುತ್ತಿದ ಪೂಸರದಂತೆ ಕೆಳದಿಯರ ಕೆಯ್ಯೊಳ್ಮೈಯ್ಯನೀಡಾಡೆ" ಇಲ್ಲಿ ಮತ್ತೊಮ್ಮೆ ಕಾಮದಹನ, ಹಾಗು ರತಿಯ ಮೂರ್ಛೆಯ ಛಾಯೆಯಿದೆ. ಇದನ್ನೂ ಈ ಕಥೆಯ ಸಂಕೇತವನ್ನೂ ನೋಡಿದರೆ ಗಿರಿಜಾಕಲ್ಯಾಣದ ಸಾದೃಶ್ಯದ ಅನುಭವವಾಗಿ ಅದನ್ನು ಬರೆದ ಕಾಲದಲ್ಲಿಯೇ ಹರಿಹರನು ಈ ರಗಳೆಯನ್ನೂ ಬರೆದನೋ ಎಂಬ ಅನುಮಾನವಾಗದಿರದು.

"ಎಲೆ ಮರುಳ್ಮಗಳೆ, ಅರ್ಥಂ ತೀರ್ದುದು ಜವ್ವನಂ ಸೋರ್ದುದು, ಇನ್ನೀ ಮಲುಹಣನಂ ಬಿಡುಬಿಡೆಂದು ನುಡಿಯೆ ಸಿಡಿಲ ದನಿಗೇಳ್ದ ಹಂಸೆಯಂತೆ ನಡನಡನೆ ನಡುಗಿ ... "ಪರಿಮಳಮನುಣ್ಬ ತುಂಬಿಗೆ ಹೊಗೆಯನಿಕ್ಕುವರೆ? ಫಳರಸಮನೀಂಟು ವರಗಿಳಿಗೆ ಕಾದ ನೀರೆರೆವರೆ? ಮಲುಹಣನೊಳಭೇದ ಸುಖದೊಳಿರ್ಪೆನ್ನೊಡನಿಂತು ಮಾತಂ ನುಡಿವರೆ? **ಲೋಭ ಮುಂತಾಗಿ ಹುಟ್ಟಿದ ದೀನ್ಮೆ ಮುಪ್ಪು ಮುಂತಾಗಿ ಹುಟ್ಟಿದ ನೀರಸ ಸುಖಮಂ ಕೊಯ್ವ ಮಾನಸಗರಗಸವೆ"** ಹೀಗೆ ಮಗಳು ಉದ್ಗರಿಸುತ್ತಾಳೆ. ಭಾವದ ಪರಾಕಾಷ್ಠೆಯನ್ನು ತೋರುವ ಹರಿಹರನ ಶೈಲಿಯ ತೀವ್ರತೆಯನ್ನು ಇಂಥ ಅನೇಕ ಕಡೆಗಳಲ್ಲಿ ಕಾಣಬಹುದು. ಇವೆರಡು ಮಾತುಗಳಲ್ಲಲ್ಲದೆ ಮುಂದಿನ ಪದ್ಮಾವತಿಯ ಯುಕ್ತಿಯ ವರ್ಣನೆಯಲ್ಲಿ ಸಹ ಒಂದು ಜೀವಂತ ವೈಶಿಷ್ಟ್ಯ ಪೂರ್ಣಪಾತ್ರದ ಚಿತ್ರಣವೆಂದು ಪದ್ಮಾವತಿಯನ್ನು ಕಾಣಬಹುದು.

"ಮಗಳ ಮೋಹಕ್ಕೆ ಪದ್ಮಾವತಿ ಬೆರಗಾಗಿ ಕೈಯರ್ಥಮಂ ಸೆಳೆದುಕೊಂಡಂತೆ ಮಮ್ಮಲಂ ಮರುಗಿ (!) ಮಗಳ ದಾಕ್ಷಿಣ್ಯಕ್ಕೆ ಮತ್ತಂ ಕೆಲವು ದಿನಮಿರಿಸಿ ಸೈರಿಸಲಾರದೆ" ಪದ್ಮಾವತಿಗೆ ಮಗಳ ಮೇಲಿನ ಮೋಹ ತುಂಬಾ ಇರುವುದರಿಂದ ಈ ವಾಕ್ಯ ಆಕೆಯ ಸ್ವಭಾವದ ಸಹಜಚಿತ್ರಣಕ್ಕೆ ಪುಟಕೊಡುತ್ತದೆ. ಆದರೆ ಅವಳು ಜೀವಮಾನದಲ್ಲೆಲ್ಲಾ ಅರ್ಥದಾಸಿ. ಲೋಭಿ. ಆದ್ದರಿಂದ ಹಣ ಬರುವದು ತಪ್ಪಿದರೆ ಕೈಯಿಂದ ಹೋದಂತೆಯೇ ಲೆಕ್ಕ. ಸೈರಿಸಲಾರಳು. "ಮಲುಹಣೆಯನಂದಂದಿಂಗೆ ಕರೆಕರೆದ ಗಳ್ಕೆಯನಭ್ಯಾಸಂಮಾಡಿ (ಎಷ್ಟಾದರೂ ಮಾತೃವಾತ್ಸಲ್ಯ! ವೇಶ್ಯೆಯ ತಂತ್ರ!) ಮಲುಹಣನಂ ಸೆಜ್ಜೆಯೊಳ್ಮೊದಲಿಸಿ ಕುಳ್ಳಿರ್ದೆಡೆಯೊಳ್ ಕುಸುರಿದರಿದು ಮಾನಸಗರಗಸೆಯಲ್ಲವೇ ಅವಳು!) ನಿಂದಿರ್ದೆಡೆಯೊಳ್ನೀರಂ ಚೆಲ್ಲಿ (ಮಲುಹಣನ ಈ ಅವಸ್ಥೆ ಯಾರಿಗೂ ಬೇಡ.) ಮನೆಯ ಮುಂದೆ ಸುಳಿವ ಹೊಸ ಹರೆಯದ ಸಂಪನ್ನರಪ್ಪ ರಾಜಪುತ್ರರುಟ್ಟುಡುಗೆಯಂ ತೊಟ್ಟ ತೊಡಿಗೆಯಂ ಕಂಡು ಸೈರಿಸಲಾರದೆ ಮನಂ ಮರುಗಿ

ಔಡಂ ಕಚ್ಚಿ ವಿಳಾಸಿನಿಯುರಂ ನಿಃಕಾರಣಂ ಬಡಿದು ಕಾಳ್ಗಗಳವಂ ತೆಗೆದು ಬೇಸೆ ಇಲ್ಲದೆ ಸರಳ್ದು (ಸಟಸೆ ಹುಟ್ಟುಗುಣ.) ಸಾವಿಲ್ಲದೆ ಶೋಕಂಗೆಯ್ದು ಬರಿಸಾಲಕೆ ಪುಸಿದ ಗಹಂ ಕೊಟ್ಟು (ಸಾಲ ತಕ್ಕೊಳ್ಳಲೂ ಸುಳ್ಳುಸುಳ್ಳೇ ತೊಂದರೆ ಮಾಡಿ? ಅಥವಾ ಸುಳ್ಳೇ ಸಾಲಕೊಟ್ಟಂತೆ ಮಾಡಿ ಸುಳ್ಳುಸುಳ್ಳೇ ವಸೂಲಿಗೆ ತಗಾದೆ ಮಾಡಿ, ಗಂಟುಬಿದ್ದು ಮಲ ಹಣನಿಗೆ ಬೇಸರುತಂದು? ತಗಹು, ಗಂಟುಬೀಳುವಿಕೆ ಎಂದರ್ಥವಾಗುತ್ತದೆ. ಈ ಎರಡನೆ ಅರ್ಥವೇ ಇಲ್ಲಿ ಪಾತ್ರಚಿತ್ರಣದಲ್ಲಿ ಹೆಚ್ಚು ಆಕರ್ಷಕವಾಗಿದೆ). ಮಲುಹಣನಂ ಮನೆಯಿಂ ಪೊರಮಡಿಸಿ." ವಿಮರ್ಶಕರಲ್ಲಿ ರಾಘವಾಂಕನ ನಕ್ಷತ್ರಕ, ಕಾಶಿಯ ಬ್ರಾಹ್ಮಣ, ವೀರಬಾಹುಕರ ಪ್ರಸಿದ್ಧಿ ಹೆಚ್ಚು. ಆದರೆ ಹರಿಹರನ ಪದ್ಮಾವತಿ ಈ ಮೂವರಿಗೂ ಮಾತೃಸ್ಥಾನದಲ್ಲಿದ್ದಾಳೆ. ಕನ್ನಡಸಾಹಿತ್ಯದಲ್ಲಿ ಈಕೆ ಚಿರಸ್ಥಾಯಿಯಾದ ಪಾತ್ರ.

ತೃತೀಯ ಸ್ಥಲದಲ್ಲಿ ಮಲುಹಣನ ವಿರಹತಾಪದ ವರ್ಣನೆಗೆ ಹೆಚ್ಚಿನ ಸ್ಥಾನವಿದೆ. ಕನ್ನಡ ಮಹಾಕಾವ್ಯಗಳಲ್ಲಿ ವಿರಹವರ್ಣನೆ ಬಿಡಲಾರದ ಕರ್ಮ ಎಂಬಂತೆ ಬಹಳ ಕಡೆ ಸಾಂಪ್ರದಾಯಿಕವಾಗಿದೆ. ಆದರೆ ಹರಿಹರನ ಶೃಂಗಾರಸರೋವರದಲ್ಲಿನ ಈ ವಿರಹದ ರಸದ ಸುಳಿಮಡುವಿನ ಸೆಳೆತದ ತೀವ್ರ ಅನುಭವವುಳ್ಳ ರಸಿಕರಿಗೆ ಮಹಾದೇವಿಯಕ್ಕನ ಆತ್ಮದ ವಿರಹ, ಬಸವಣ್ಣನವರ ಭಕ್ತಿಯ ವಿರಹ, ಇವುಗಳ ಜೊತೆಗೆ ನಿಲ್ಲಬಲ್ಲ ಸನ್ನಿವೇಶ ಇದೊಂದೇ ಎಂದು ಮನವರಿಕೆಯಾಗದೆ ಇರದು. ವರ್ಣನಾಶಕ್ತಿಗೆ ಮಲುಹಣನ ರಗಳೆ ಉತ್ತಮ ಉದಾಹರಣೆಯಾಗಿದೆಯೆಂದು ಶ್ರೀಮಾನ್ ಫ. ಗು. ಹಳಕಟ್ಟಿಯವ ರೆಂದದ್ದು ಸಾರ್ಥಕವಾಗಿದೆ.

ಪೊರಮಡಿಸಿ ಪೋಗಲಾರದೆ ಮನೆಯ ಮುಂದಿರ್ದು
ಮರುಗಿ ಮನವುಕ್ಕಿ ತಲೆಗರೆದು ತಾಪಿಸುತಿರ್ದು
ನಡೆದು ಗಳಗಳನೆ ಪೋಪಂ ಕಾರ್ಯವಿನಿತಿಲ್ಲ.

. . . .

ನಿಂದರಂ ಕಂಡು ಮಲುಹಣಿ ಎನುತೆ ಸೋಂಕುವಂ
ಬಂದರಂ ಕಂಡು ಮಲುಹಣಿ ಎನುತ್ತಪ್ಪುವಂ

. . . .

ಭಾವರತಿಯೊಳ್ಕೂಡಿ ಕಣ್ಮುಚ್ಚಿ ಕರಗುವಂ
ಭಾವದಚ್ಚಳಿಯೆ ಕಣ್ದೆರೆದರಸಿ ತಿರುಗುವಂ.

ಇನ್ನು ಮುಂದೆ ಅಭಿನವಪಂಪನ "ಕಳಹಂಸಾಲಸೆಯಾನೆಯುಂ" ಪದ್ಯದ ಪ್ರೇರಣೆ ಯಿರಬಹುದು.

ಕಮಳಮಂ ಮಲುಹಣಿಯ ಮೊಗವೆಂದು ಮುಟ್ಟುವಂ
ಕುಮುದಮಂ ಕಣ್ಗಳೆಂದಕ್ಷಿಯೊಳಗೊತ್ತುವಂ

ಇನ್ನೂ ಹೀಗೆಯೇ ಅನೇಕ ಸಾಲುಗಳಲ್ಲಿ ವಿರಹ ಹರಿಯುತ್ತದೆ. ಇಲ್ಲಿಯ ಭಾವದ ಸ್ಫುಟತೆ ಹೃದಯಂಗಮವಾಗಿದೆ. ಮುಂದೆ ಸ್ವಲ್ಪ ಅತಿರೇಕವೂ ಇದೆ.

ಮಲುಹಣಿಯನ್ನು ಅಗಲಲಾರದೆ ರಾತ್ರಿ ಎಂಜಲು ಚೆಲ್ಲುವ ಕುಣಿಯಲ್ಲಿ ನಿಂತು ಮಲುಹಣಿ ಸೇವಿಸಿದ ಉದಕವನ್ನು ಸೇವಕಿ ತಂದು ಚಲ್ಲಿದರೂ ಸ್ವೀಕರಿಸಿ ಪ್ರಿಯೆಯ ಹಂಬಲದಲ್ಲಿದ್ದ ಮಲುಹಣನನ್ನು ಹಿಮದ ಘಟ್ಟಿಗಳು ಬಿದ್ದು ಮುಚ್ಚಿದವು. ಆದರೆ ವಿರಹದುರಿಯಿಂದ ಅದೂ ಶಿಶಿರೋಪಚಾರವಾಯಿತು.

ಎಳೆಯ ಬೆಳ್ಮುಗಿಲೊಳಗೆ ಹೊಳೆವ ಪಾವಕನಂತೆ
ಹೊಳೆವಾಲಿಕಲ್ಲ ಮನೆಯೊಳಗಿರ್ಪ ರವಿಯಂತೆ
ದಿಟ್ಟಿಸಲ್ ಕಣ್ಮುಚ್ಚಿ ಹೊಯ್ವ ಸೀತದ ನಡುವೆ
ಮುಟ್ಟಿದೊಡೆ ಕೈಕಡಿದು ಬೀಳ್ವ ತುಹಿನದ ನಡುವೆ
ನೆನೆದೊಡೆ ಮನಂ ಮುರುಂಟುವ ಸೀತಳದ ನಡುವೆ

ಶೀತದ ವರ್ಣನೆ ಜೋರಾಗಿರುವದಾದರೂ ಇಲ್ಲಿ ಕವಿ ಮಲುಹಣನ ವಿರಹದ ಬೆಂಕಿಯ ವಿಶೇಷಗುಣಕ್ಕಿಂತ ಮಲುಹಣನು ಪ್ರೀತಿಗಾಗಿ ದೇಹಭಾವ ಮರೆತು ಕಷ್ಟ ಸಹಿಸಿದ ಎಂಬ ಅರ್ಥದಿಂದ ವರ್ಣನೆ ಬೆಳೆಸಿದ್ದರೆ ಕಾವ್ಯದ ಶ್ರೇಷ್ಠತೆ ಈಗಿರುವುದಕ್ಕಿಂತ ಮಿಗಿಲಾಗುತ್ತಿತ್ತು. ಹಿಮಪಾತದಿಂದ ಜೀವಚ್ಛವವಾಗಿ ಸೆಟೆದುಬಿದ್ದಿದ್ದನೆಂದು ಚಿತ್ರಣವಾಗಿದ್ದರೆ ನಂತರ ಆತನ ಪ್ರಣಯದೇವತೆಯ ಬಿಸಿ ಉಪಚಾರದಿಂದ ಎಚ್ಚತ್ತನೆಂಬ ವರ್ಣನೆ ಮಾಡಿದ್ದರೆ ಪ್ರಣಯಿಗಳ ಏಕನಿಷ್ಠೆಯ ಉಜ್ವಲ ಚಿತ್ರಣವಾಗುತ್ತಿತ್ತು. ಪ್ರಣಯಭಕ್ತನ ಪವಾಡ ಮೆರೆಸುವ ಉದ್ದೇಶದ ಮೂಲಕ ಕಲೆಗಾರನ ಪವಾಡರಚನೆ ಮರೆತುಹೋಯಿತು. ಹೀಗೆಂದ ಮಾತ್ರಕ್ಕೆ ರಾತ್ರಿಯಲ್ಲಿ ಮಲುಹಣ ಹಿಮರಾಶಿ ಮುಚ್ಚಿರುವಾಗ ತೊಂದರೆ ಪಡಲಿಲ್ಲ ಎಂದರ್ಥವಲ್ಲ. ಆಕೆಯ ತಾಯಿಯಿಂದ ಅಷ್ಟೊಂದು ಅಪಮಾನವಾದರೂ ಮಲುಹಣಿಯನ್ನು ಬಿಟ್ಟಗಲಲಾರದೆ ಎಂಜಲ ಕುಣಿಯಲ್ಲಾದರೂ ಹೋಗಿ ಮಲುಹಣಿಯ ಎಂಜಲುನೀರನ್ನು ಧರಿಸಿದ ಎನ್ನುವದು ಆತನ ಏಕನಿಷ್ಠ ಪ್ರೇಮ, ಕಷ್ಟಸಹಿಷ್ಣುವಾದ ಮನಸ್ಸಿಗೆ ಸಾಕ್ಷಿಯಾಗಿದೆ. ಆದರೆ ವಿರಹದ ವಿರಾಡ್ರೂಪ ಮೆರೆಸುವ ಭರದಲ್ಲಿ ಚಮತ್ಕಾರದ ಆಕರ್ಷಣದಲ್ಲಿ ಭಾವನೆಯ ಉದ್ವೇಗ, ಅಥವಾ ಕಷ್ಟದ ಅವಸ್ಥೆ ತೋರುವ ಬದಲು ಮಲುಹಣನಿಗೆ ಶೀತವೂ ಅನುಕೂಲವಾಯ್ತೆಂದು ವರ್ಣಿಸಿರುವದು ಭಾವಪರಿಣಾಮದಲ್ಲಿ ಒಂದು ಕುಂದು ಎಂದು ಹೇಳಬೇಕಾಗುತ್ತದೆ. ಮಲುಹಣಿ ಬೆಳಿಗ್ಗೆ ಮಲುಹಣನ ಅವಸ್ಥೆ ತಿಳಿದು ಹಿಮವನ್ನು ಮರವುಟ್ಟಿನಿಂದ ತೆಗೆಸಲು,

ಕಪಟವಳಿದೊಳಗೊಪ್ಪುವನುರಾಗವಿರ್ಪಂತೆ
ಯುಪಚಾರವಳಿದು ಸತ್ಯಸ್ನೇಹವಿರ್ಪಂತೆ

ತಾಪಕ್ಕೆ ತೆರವಾಗಿ ಮಲುಹಣನಿದ್ದಂತೆ. ಮಲುಹಣಿಯ ಉಪಚಾರ ಆಕೆಯ ತಾಯ ಮೂಲಕ ಕಟ್ಟಾದರೂ ಈತನ ಹಾಗು ಆಕೆಯ ಸತ್ಯಸ್ನೇಹ ಕಟ್ಟಾಗಲಿಲ್ಲ. ಈ ಸಂದರ್ಭದಲ್ಲಿ ಭವಭೂತಿಯ "ಅದ್ವೈತಂ ಸುಖದುಃಖಯೋರನುಗತಂ ಸರ್ವಾಸ್ವವಸ್ಥಾಸು . . ." ಎಂಬ ಶ್ಲೋಕದ ಉದಾತ್ತ ಪ್ರೇಮದ ವರ್ಣನೆಯ ನೆನಪಾಗದಿರದು. ಪಾಶ್ಚಿಮಾತ್ಯರಲ್ಲಿ Chivelry ಎಂಬ ಒಂದು ತರದ ಪ್ರಿಯಾರಾಧನೆ ಪ್ರಚಾರದಲ್ಲಿತ್ತು. ತನ್ನ ಪ್ರೇಯಸಿಯ ಸಂತೋಷದ ಸಲುವಾಗಿ, ಅವಳ ಇಚ್ಛೆಯನ್ನು ಪೂರೈಸುವುದಕ್ಕಾಗಿ ತನ್ನ ಪ್ರಾಣವನ್ನೂ ಅರ್ಪಣೆ ಮಾಡುವ ಶೃಂಗಾರವೀರರ ಪರಂಪರೆ ಮಧ್ಯಕಾಲದಲ್ಲಿ ಯುರೋಪದಲ್ಲಿ ಪ್ರಚಾರದಲ್ಲಿತ್ತು. ಈ ಮೊದಲು ಹೇಳಿದಂತೆ ಪ್ರಿಯೆಯ ಆಸೆಯಿಂದ ಹಿಮದಲ್ಲಿ ಚೇತನಶೂನ್ಯನಾಗಿ ಬಿದ್ದ ಪ್ರಿಯಕರನ ಚಿತ್ರ ಬಂದಿದ್ದರೆ ಪ್ರಿಯಾರಾಧನದ ಬಹು ಸುಂದರ ಚಿತ್ರ ಕನ್ನಡಸಾಹಿತ್ಯದಲ್ಲಿ ದೊರಕಬಹುದಿತ್ತು. ಹರಿಹರನ ವರ್ಣನೆಯಲ್ಲಿ ಅಷ್ಟು ಪರಿಣಾಮಕಾರಿಯಲ್ಲದಿದ್ದರೂ ಪ್ರಿಯಾರಾಧನದ ಮತ್ತೊಂದು ರೀತಿಯನ್ನು ನೋಡಬಹುದು.

ಮಲುಹಣನನಕ್ಕರಿಂ ಕರುಣದಿಂದಂ ನೋಡಿ
ಮಲುಹಣಿ ಮನೋದುಃಖದಿಂದೆ ನುಡಿದಳ್ಬಾಡಿ.

ತನಗಾಗಿ ಪ್ರೇಮಿಯು ಹೆಚ್ಚು ಕಷ್ಟವನ್ನು ಸಹಿಸಿದರೆ ತನಗೆ ಹೆಚ್ಚು ಗೌರವ ಎಂದು ತಿಳಿಯುವ ಯುರೋಪಿನ ರಮ್ಯಾಂತಿಕ ಸಂಪ್ರದಾಯದ ಮಹಿಳೆಯರಂತಲ್ಲ ಮಲುಹಣಿ.

ಎನ್ನ ಮೇಲಿಕ್ಕುವೀ ಚಿತ್ತದಾತುರತೆಯಂ
ಪನ್ನಗಾಭರಣನೊಳ್ಮಾಳ್ಪ ದೆನ್ನೊಲ್ಮೆಯಂ

ಎನ್ನುವಳು. ತನ್ನಂಥವಳಿಗಾಗಿ ಇಷ್ಟು ಕಷ್ಟ ಸಹಿಸಿದವನು ಪರಮಾತ್ಮನನ್ನು ಇಷ್ಟೇ ನಿಷ್ಠೆಯಿಂದ ಪ್ರೀತಿಸಿದ್ದರೆ ಎಂಥ ಫಲ ಸಿಗಬಹುದಾಗಿತ್ತೆಂದು ಅವಳ ಬುದ್ಧಿಗೆ ಮಿಂಚು ಹೊಳೆದಂತಾಗುತ್ತದೆ. ಇಂಥ ಏಕನಿಷ್ಠೆಗೆ ಪರಮಾತ್ಮನೊಬ್ಬನೇ ಪಾತ್ರನು ; ತಾನಲ್ಲ, ಮತ್ತಾರೂ ಅಲ್ಲ ಎಂಬ ಭಾವವೂ ಇದೆ. ಇದು ಕಾಮ ಪ್ರೇಮವಾದಾಗ ಬಂದ ಮಾತು, ಎಂದರೆ ಕಾಮವಿಕಾರಕ್ಕೆ ಪ್ರೇಮದ ಸಂಸ್ಕಾರ ಬಂದಾಗಿನ ಮಾತು. ಕುರುಡುಕಾಮದ ಆಶೆಯಿಂದಲೇ ಮಲುಹಣ ನಾಯಿಯಂತೆ ತಿಪ್ಪೆಯಲ್ಲುಳಿದ ಎಂದು ತಿಳಿದರೂ ಇಂಥ ಕೀಳು ಆಸೆಗಾಗಿ ತನ್ನ ಅಮೂಲ್ಯವಾದ ಮಾನವೀಜೀವನವನ್ನೇ ವ್ಯರ್ಥಮಾಡುವನಲ್ಲಾ ಎಂಬ ಅನುಕಂಪೆ, ಮತ್ತು ಬಹುಕಾಲದ ಸಾಹಚರ್ಯದಿಂದ

ಹೆಣ್ಣಿನಲ್ಲಿ ಉಂಟಾದ ಪ್ರೇಮ ಇವೂ ಆಕೆಯಿಂದ ಹೀಗೆ ನುಡಿಸಿದುವೆಂದು ಹೇಳ ಬಹುದು. ಅದೇನೇ ಇದ್ದರೂ ಇಂಥ ಸೂಕ್ಷ್ಮ ಸನ್ನಿವೇಶದಲ್ಲಿ ಮಾನವೀಪ್ರೇಮಕ್ಕೆ ದೈವೀಪ್ರೇಮದ ಉದಾತ್ತತೆಯನ್ನು ತಂದುಕೊಡುವಲ್ಲಿನ ಈ ಮಾರ್ಮಿಕವಮಾತುಗಳು, ಈ ರಮ್ಯಾದ್ಭುತಭಾವದ ನಿರೂಪಣೆಯ ಸೊಗಸು ಕನ್ನಡ ಸಾಹಿತ್ಯದಲ್ಲಿ ಅಪೂರ್ವ ವೆಂದೇ ಹೇಳಬೇಕು. ಆದರೆ ಮಲುಹಣ ಆಕೆಯ ಆಸೆಯನ್ನು ಬಿಡುವ ಅವಸ್ಥೆಯಲ್ಲಿಲ್ಲ. ಹೀಗೆಂದ ಮಾತನ್ನು ಕೇಳಿ "ಬಳಿಕ ನೀನೆನಗಪ್ಪೆ ?" ಎಂದು ಕೇಳುತ್ತಾನೆ.

ಇಂದುಧರನಂ ಬೇಡು ನಿನ್ನತ್ತ ನಾ ಬಪ್ಪೆ.
ಎನ್ನ ಹವಣೇ ? ಕೋಟಿ ಮಲುಹಣೆಯರಾಗರೇ ?
ಮನಸಿಜಾಮಿಯನರಿದು ದುಃಖಮಂ ನೀಗರೇ ?

ಎಂದು ತನ್ನ ಹೃದಯದ ಬೆಳಕಿನಿಂದ ನುಡಿದಾಗ ಮಲುಹಣನ ಮನಸ್ಸು ಸ್ವಲ್ಪ ಸ್ತಿಮಿ ತಕ್ಕೆ ಬಂದು

ಎನೆ ವಿರಹಮಂ ತೆಗೆದು ಹರನ ಮೇಲಿಕ್ಕಿದಂ
ತನಿನೇಹಮಂ ಶಿವನ ಮೆಲ್ಲಡಿಗೆ ಸಾರ್ಚಿದಂ.

ಅನಂತರ ಶಿವಾಲಯಕ್ಕೆ ಬಂದು ಅದೇ ನಿಷ್ಠೆಯಿಂದ ಪರಶಿವನ ಸ್ತೋತ್ರಮಾಡುತ್ತಾನೆ. ಈ ಪ್ರಾರ್ಥನೆಯಲ್ಲಿಯೂ ಹರಿಹರನ ಈ ರಗಳೆಯಲ್ಲಿಯ ಅಸಾಮಾನ್ಯ ಪ್ರತಿಭೆಯನ್ನು ಗುರುತಿಸಬಹುದು. ಮಲುಹಣೆಯು ಪ್ರೇಮವನ್ನು ಬಿಡದೆ ತನ್ನ ಸಹಚರಿಯೊಡನೆ ಪರಮಾತ್ಮನ ಸಾಹಚರ್ಯ ಮಾಡಬೇಕೆನ್ನುವ ಗುರಿಯನ್ನಿಟ್ಟುಕೊಂಡು ಭಜಿಸುವ ಸ್ಪಷ್ಟ ಚಿತ್ರವನ್ನು ಹರಿಹರನು ಈ ಪ್ರಾರ್ಥನೆಯಲ್ಲಿ ಕೊಟ್ಟಿದ್ದಾನೆ. ಮಲುಹಣಿಗಾಗಿ ವಿರಹ ಇನ್ನೂ ಇದೆ. ಆದರೆ ಅದು ಕೊನೆಗೊಳ್ಳಬೇಕೆಂಬ ಆಶೆಯೂ ಇದೆ. ಇಂಥ ಮನೋಭೂಮಿಕೆಯಲ್ಲಿ ಹೊರಟುಬಂದ ಪ್ರಾರ್ಥನೆ ಅದು. "ಎಂದು ಕುದಿಕುದಿವ ಕರಣಂಗಳೊಳ್ ಪ್ರಾರ್ಥಿಸಲ್" ಎಂಬಲ್ಲಿ ಕವಿಯೇ ಅದನ್ನು ಸ್ಪಷ್ಟವಾಗಿ ಇಟ್ಟಿ ದ್ದಾನೆ.

ದೇವ ಶಂಕರ ಭಕ್ತಜನ ಮನೋರಥರೂಪ
ದೇವ ಶಶಿಧರ ಶರಣಹೃದಯ ಸದಮಳ ದೀಪ

ಈ ಭಕ್ತನ ಮನೋರಥ ಮಲುಹಣೆ. ಆಕೆಯ ರೂಪದಲ್ಲಿಯೇ ಶಂಕರನನ್ನು ಕಾಣುವ ನೆಂಬ ಧ್ವನಿ ಬಹು ಸೊಗಸಾಗಿದೆ.

ಗೌರೀಕಚಪ್ರಚಯ ಪುಷ್ಪಗಂಧಕ್ಕೆಳಸಿ
ಭೋರೆನುತ್ತೆರಗಿ ಮಧುಕರವ್ರಜಮನನುಕರಿಸಿ
ಮೆರೆವ ಗರಳಧಗರುವ ಕರುಣಿಪುದು, ಕರುಣಿಪುದು.

ಇಲ್ಲಿ ಶಂಕರನ ಗೌರೀಪ್ರೇಮದ ಸೂಚನೆಯಿಂದ ತನ್ನ ಮಲುಹಣಿಯ ಪುನರ್ಮಿಲನದ ಸೂಚನೆಯನ್ನು ಸೂಕ್ಷ್ಮವಾಗಿ ಇಟ್ಟಿದ್ದಾನೆ. ಗಿರಿಜೆಯ ತಲೆಯನ್ನು ಕತ್ತಿನ ಹತ್ತರ ಇರಿಸಿ ಆಕೆಯ ಹೂಮುಡಿಯ ಆಮೋದವನ್ನು ಸಂತೋಷದಿಂದ ತಾನು ಸವಿವ ಮಧುರ ವಾದ ಚಿತ್ರಣದ ನೆನಪು ಈ ಸಂದರ್ಭದಲ್ಲಿ ಶಂಕರನಿಗಾಗುವಂತೆ ತಂದಿರುವದು ಬಹಳ ಮಾರ್ಮಿಕವಾಗಿದೆ. ಬಳಿಕ ದೇವನು ಪ್ರತ್ಯಕ್ಷನಾಗಲು ಮಲುಹಣಿಯೊಡನೆ ನೂರು ವರುಷವಿದ್ದು ಅನಂತರ ನಿಮ್ಮ ಪಾದಸೇರಲು ತನುಸಹಿತ ಈರ್ವರೂ ಬರುವಂತೆ ಕರುಣಿ ಸೆಂದು ವರ ಬೇಡುತ್ತಾನೆ. ಮಲುಹಣಿಯ ತಾಯಿ ಲಿಂಗದ ಸಮಕ್ಷದಲ್ಲಿ ಮಗಳನ್ನು ಮಲುಹಣನಿಗೆ ಅರ್ಪಿಸುತ್ತಾಳೆ. ನಂತರ ನಲ್ಲ-ನಲ್ಲೆಯರು ಎಲ್ಲವನ್ನೂ ಶಿವಾರ್ಪಿತವಾಗಿ ಸ್ವೀಕರಿಸುತ್ತಾರೆ. ನೂರು ವರ್ಷದ ಅನಂತರ ಇಲ್ಲಿಯ ಇರವು ಸಾಕೆಂದು ಶಿವನಲ್ಲಿಗೈದು ತ್ತಾರೆ.

ಲೌಕಿಕವಾದ ವ್ಯಾಪಾರಕ್ಕೆ ಅಲೌಕಿಕತೆಯನ್ನು ಕೊಡುವಲ್ಲಿ ಹರಿಹರ ಈ ಕಾವ್ಯ ದಲ್ಲಿ ಬಹಳಮಟ್ಟಿಗೆ ಯಶಸ್ವಿಯಾಗಿದ್ದಾನೆ. ಕುಮಾರಸಂಭವ, ಗಿರಿಜಾಕಲ್ಯಾಣಗಳಲ್ಲಿ ತಪಸ್ಸಿನಿಂದ ಕಾಮದ ಕಾಳಿಕೆ ಕಳೆದು ದಿವ್ಯಪ್ರೇಮ ಉದಯವಾದಂತೆ ಇಲ್ಲಿಯೂ ಒಂದು ತಾತ್ತ್ವಿಕರೂಪಕದ ಭಾವನೆಯು ಉದಯವಾಗುತ್ತದೆ. ಇಹವನ್ನು ಬಿಟ್ಟು ಪರವಿಲ್ಲ. ಪರವನ್ನು ಬಿಟ್ಟು ಇಹವಿಲ್ಲ. ಕಾಮವೇ ಇಹಜೀವನದ ಪುರುಷಾರ್ಥ ಎಂದು ತಿಳಿದು ಜಗತ್ತನ್ನೇ ಮರೆತು ತಮ್ಮ ಸೌಖ್ಯದಲ್ಲಿ ಮುಳುಗಿರುವ ತರುಣ-ತರುಣಿಯರಿಗೆ ಜಗತ್ತಿನ ಅರಿವು ಮಾಡಿಕೊಡಲಿಕ್ಕೆ ಬಂದ ಕಷ್ಟವೇ ಮಲುಹಣ-ಮಲುಹಣಿ ಇವರ ಕಷ್ಟ. ಇನ್ನು ಮೇಲೆ ಅವರ ಕಾಮ ಜಗತ್ತಿಗೆ ಮಂಗಲಕರನಾದ ಪರಮಾತ್ಮನ ಪ್ರೇಮಕ್ಕೆ ಅವಿರೋಧವಾಗಿ ಸಾಗತಕ್ಕದ್ದು. ಇಹಪರ ಸೌಖ್ಯವನ್ನು ಸಾಧಿಸತಕ್ಕದ್ದು. ವೈವಾಹಿಕ ಬಂಧನವಿಲ್ಲದೆ ಸ್ವೇಚ್ಛೆಯಾಗಿ ಸಾಗಿದ ಇವರ ಜೊತೆಗೆ ಪರಮಾತ್ಮನ ಪೌರೋಹಿತ್ಯದಲ್ಲಿ ಮದುವೆಯಾಗುತ್ತದೆ. ರಾಜಪ್ರವರಸೇನನೂ ಅದನ್ನು ಒಪ್ಪಿಕೊಳ್ಳುತ್ತಾನೆ. ಮಲು ಹಣಿಯ ಮಾಂಗಲ್ಯವು ಸಮಾಜಕ್ಕೆ ಮಂಗಲಕರವಾಗುತ್ತದೆ.

ಹರಿಹರನ ಈ ರಗಳೆಯ ಸೊಗಸನ್ನು ಪೂರ್ಣ ಓದಿಯೇ ಅನುಭವಿಸಬೇಕು. **"ಮುಡಿದ ಹೂವಗಲ್ದೊಡಂ ಹಿಡಿದ ಪರಿಮಳ ವಗಲದಿರ್ಪಂತೆ"** ಈ ಕಾವ್ಯದ ಆಮೋದ ಮನದಲ್ಲಿ ಬಹುಕಾಲ ನಿಲ್ಲತಕ್ಕುದು.

—ಎಲ್. ಆರ್. ಹೆಗಡೆ

ಶಿಶಿರಾಂತ್ಯದೊಳೇನಿದು ಸಂಭ್ರಮವು

ವಿವಿಧ ವಿಹಂಗಮಗಳುಲಿಯು ತೊಡಗಿವೆ
ಗಿಡುಮರಲತೆಗಳು ಹೂಕುಡಿಯಿಡುತಿವೆ.
ಶಿಶಿರಾಂತ್ಯದೊಳೇನಿದು ಸಂಭ್ರಮವು !
ಪವನವಿಲಾಸವೊ ? ವೃಕ್ಷೋಲ್ಲಾಸವೊ ?
ಅರಳಿದರಳುಗಳ ಅಟ್ಟಹಾಸವೊ ?
ನವಋತು ಹುಟ್ಟುವ ಸಂಭ್ರಮವೋ ?
ಗಂಧರ್ವರ ಗಾನವೆ ಭುವಿಗಿಳಿಯಿತೊ ಎನೆ
ಹಕ್ಕಿಗೆ ಹಿಡಿದಿದೆ ಹಾಡಿನ ಗುಂಗು.

ಸಪ್ತರಾಗದಾ ಕಾಮನಬಿಲ್ಲಿನ
ವರ್ಣಗಳಿಳಿದುವೊ ಗಿಡಗಿಡಕೆನಲು
ಸೃಷ್ಟಿಯೊಳೆಸೆದಿದೆ ಹೊಸಹೊಸ ರಂಗು
ಕಿಸಲಯ ಸುಮಸೊಂಪಮರುತಿದೆ,
ಪಕ್ಷಿಪಕ್ಷಿಗಳ ಕಲಕಲನಾದದಿ
ಉಲಿವುಚೆಲುವುಗಳ ಭಾವೋನ್ಮಾದದಿ
ಸೃಷ್ಟಿಯೆ ಸ್ವರವಶವಾಗುತಿದೆ !
ಷಡ್‌ಋತುರಾಜನ ಕಲಾವಿವೇಕವೆ
ಉಕ್ಕಿತೆನಲು ತಾನೆಲ್ಲೆಲ್ಲೂ.

ಗಂಧದೆಲರು ತಾ ಮೆಲ್ಲಗೆ ಬೀಸೆ
ತಳಿರು ಅಲರುಗಳೊ ಕಿರುನಗೆ ಸೂಸೆ
ಹಿಡಿಯಲಿಹುದೊ ಎನೆ ಚೈತ್ರಾವೇಶ
ಏನಿದೇನಿದೀ ಸೃಷ್ಟಿಯ ತೋಷ !
ಶಿಶಿರಜಡತೆಗೇ ಪ್ರಾಣ ಬಂದಿತೋ ?
ಸೃಷ್ಟಿಗೆ ನವಋತು ಬಯಕೆಯಾಯಿತೋ ?
ಶಿಶಿರಾಂತ್ಯದೊಳೇನಿದು ಸಂಭ್ರಮವು ?

—ಜಿ. ಎಸ್. ಸಿದ್ಧಲಿಂಗಯ್ಯ

ಆನಂದಲಹರೀ

ಉಪೋದ್ಘಾತ

ಆದಿಶಂಕರರು ಅದ್ವೈತಸಿದ್ಧಾಂತ ಪ್ರವರ್ತಕರಾಗಿ, ಬಾದರಾಯಣನ ವೇದಾಂತ ಸೂತ್ರಗಳಿಗೂ, ಉಪನಿಷತ್ತುಗಳಿಗೂ, ಭಗವದ್ಗೀತೆಗೂ ಭಾಷ್ಯಗಳನ್ನು ರಚಿಸಿರುವುದು ಸರ್ವವಿದಿತವಾಗಿದೆ. ಶ್ರೀಮದಾಚಾರ್ಯರು ಮಹಾವೇದಾಂತಿಗಳು ಮಾತ್ರವಲ್ಲದೆ ಮಹಾಮನ್ತ್ರಜ್ಞರೂ ಆಗಿದ್ದರು. 'ಪ್ರಪಂಚಸಾರತಂತ್ರ' ಮತ್ತು 'ಆನಂದಲಹರಿ' ಎಂಬುವು ಅವರ ತಾಂತ್ರಿಕ ಕೃತಿರತ್ನಗಳು.

ಶ್ರೀ ಶಂಕರರು ತಾಂತ್ರಿಕ ಗ್ರಂಥಗಳನ್ನು ರಚಿಸಿದರೇ ಎಂಬ ವಿಚಾರದಲ್ಲಿ ಪಂಡಿತರಲ್ಲಿ ಭಿನ್ನಾಭಿಪ್ರಾಯಗಳಿವೆ. ಮಹಾಮಹೋಪಾಧ್ಯಾಯ ಸತೀಶಚಂದ್ರ ವಿದ್ಯಾಭೂಷಣರು ಇದನ್ನು ಕುರಿತು ವಿದ್ವತ್ಪೂರ್ಣವಾದ ಲೇಖನವೊಂದನ್ನು ಬರೆದಿದ್ದಾರೆ (*Calcutta Review*, July, 1915).

ಪೂರ್ವೋಕ್ತ ಎರಡು ಕೃತಿಗಳ ಪೈಕಿ, 'ಆನಂದಲಹರಿ'ಯು ಶಂಕರಾಚಾರ್ಯ ಕೃತವೆಂದು ಅನೇಕ ಪಂಡಿತರಿಂದ ಅಂಗೀಕೃತವಾಗಿದೆ. ಇದಕ್ಕೆ ಸಂಬಂಧಪಟ್ಟ ಆಧಾರಗಳನ್ನು ದಿನೇಶಚಂದ್ರಭಟ್ಟಾಚಾರ್ಯರು ತಮ್ಮ ಲೇಖನದಲ್ಲಿ ಸಂಗ್ರಹಿಸಿದ್ದಾರೆ. ಇದನ್ನು ಆರ್ಥರ್ ಅವೆಲಾನ್‌ರವರು ತಮ್ಮ 'ಆನಂದಲಹರಿ'ಯ ಭಾಷಾಂತರದ 'ಮುನ್ನುಡಿ'ಯಲ್ಲಿ ಉದ್ಧರಿಸಿದ್ದಾರೆ (Avalon: *Wave of Bliss: Introduction*, pp. 1-4); ಈ ಲೇಖನವು ಅನೇಕ ದೃಷ್ಟಿಗಳಿಂದ ಅತ್ಯಮೂಲ್ಯವಾಗಿರುವ ಕಾರಣ, ಅದರ ಅನುವಾದವನ್ನು ಇಲ್ಲಿ ಕೊಡಲಾಗಿದೆ:

ಸೌಂದರ್ಯಲಹರಿಯಿಂದ ಶ್ಲೋಕಗಳು ಯಾವ ಪ್ರಾಚೀನ ಗ್ರಂಥದಲ್ಲಿಯೂ ಉದ್ಧೃತವಾಗಿಲ್ಲ. ಪ್ರಸಿದ್ಧ ಗ್ರಂಥಗಳಿಂದ ವಿನಾ, ಗ್ರಂಥಸ್ಥವಲ್ಲದ 'ಸ್ತೋತ್ರ'ಗಳಿಂದ ಉದಾಹರಿಸುವುದು ಆಗ ಪದ್ಧತಿಯಾಗಿರಲಿಲ್ಲವೆಂದು ತೋರುತ್ತದೆ. ಆದರೂ 'ಸೌಂದರ್ಯಲಹರಿ'ಯಿಂದ ಒಂದು ಶ್ಲೋಕವು ಶಂಕರಾಚಾರ್ಯಕೃತವೆಂದು ವಲ್ಲಭದೇವನ 'ಸುಭಾಷಿತಾವಳಿ'ಯಲ್ಲಿ (no: 3525—ಜಪೋ| ಜಲ್ಪ: ಶಿಲ್ಪಮ್ . . .) ಉದ್ಧರಿಸಲ್ಪಟ್ಟಿದೆ. ಸ್ತೋತ್ರಸಾಹಿತ್ಯದಲ್ಲಿ ಮತ್ತಾವ ಕೃತಿಗೂ ಇಷ್ಟು 'ವ್ಯಾಖ್ಯಾನ'ಗಳು ರಚಿಸಲ್ಪಟ್ಟಿಲ್ಲ. ಇದಕ್ಕೆ ಭರತಖಂಡದ ನಾನಾ ಭಾಗಗಳಲ್ಲಿ ಸುಮಾರು ೨೨೧ ವ್ಯಾಖ್ಯಾನಗಳು ಉಪಲಬ್ಧವಿವೆ. ಇದರಿಂದ 'ಸೌಂದರ್ಯಲಹರಿ'ಯು ಪ್ರಾಚೀನ ಕೃತಿಯೆಂದೂ, ಅದು ಶಂಕರಾಚಾರ್ಯಕೃತವೆಂದೂ ಸಿದ್ಧವಾಗುತ್ತದೆ.

ಆಚಾರ್ಯರು ಅಜರಾಮರವಾದ ವೇದಾಂತ ಗ್ರಂಥಗಳನ್ನು ಮಾತ್ರವಲ್ಲದೆ ಇತರ ಅನೇಕ ಕೃತಿಗಳನ್ನು ರಚಿಸಿದರೆಂದು ಜಲ್ಹಣನ 'ಸೂಕ್ತಿಮುಕ್ತಾವಳಿ'ಯಲ್ಲಿ ಉದಾಹೃತವಾಗಿರುವ ರಾಜಶೇಖರನ (ಸು. ಕ್ರಿ.ಶ. ೯೦೩) ಈ ಶ್ಲೋಕದಿಂದ ವಿಶದವಾಗುತ್ತದೆ:

ಸ್ಥಿತಾ ಮಾಧ್ವೀಕಪಾಕತ್ವಾತ್ ನಿಸರ್ಗ ಮಧುರಾಪಿ ಹಿ |
ಕಿಮುಪಿ ಸ್ವದತೇ ವಾಣೀ ಕೇಷಾಂ ಚಿದ್ಯದಿ ಶಾಂಕರೀ ||

[ಇಲ್ಲಿ "ಶಾಂಕರೀ" ಎಂಬ ಪದವು 'ಶಿವನ' ಪರವಾಗಿಯೂ, ಶಂಕರಾಚಾರ್ಯರ ಪರವಾಗಿಯೂ ಉಪಯೋಗಿಸಲ್ಪಟ್ಟಿದೆ. 'ಮಾಧ್ವೀಕಪಾಕ'ವೆಂಬ ಕವಿತಾಶೈಲಿಯಲ್ಲಿ ರಚಿಸಲ್ಪಟ್ಟು ನಿಸರ್ಗ ಮಾಧುರ್ಯದಿಂದ ಯುಕ್ತವಾದ ಶಂಕರನ ವಾಕ್ಕುಗಳು, ಅವನಲ್ಲೇ ನ್ಯಸ್ತಚಿತ್ತರಾದವರಿಗೆ ಅಪೂರ್ವ ಆನಂದವನ್ನೀಯುತ್ತವೆ.]

ಅನೇಕ ಮಂದಿ ವ್ಯಾಖ್ಯಾನಕಾರರು 'ಶಂಕರಭಗವತ್ಪಾದ'ರೇ ಇದರ ಕರ್ತೃಗಳೆಂದೂ, ಅವರು ತಮ್ಮನ್ನು ೭೫ನೆಯ ಶ್ಲೋಕದಲ್ಲಿ 'ದ್ರವಿಡ ಶಿಶು'ವೆಂದು ನಿರ್ದೇಶಿಸಿಕೊಂಡಿರುವರೆಂದೂ ಹೇಳಿದ್ದಾರೆ. ಆದರೆ ಪರಂಧಾಮವನ್ನೈದಿದ ಶೇಷಗಿರಿ ಶಾಸ್ತ್ರಿಗಳವರು, ಇದು ಅರವತ್ತು ಮೂವರು ಪುರಾತನರಲ್ಲಿ ಓರ್ವರಾದ ತಿರುಜ್ಞಾನ ಸಂಬಂಧರ ಜೀವನ ಘಟನೆಗೆ ಸಂಬಂಧಪಟ್ಟಿದ್ದೆಂದು ತೋರಿಸಿದ್ದಾರೆ. ಮೊದಲಿನ ವ್ಯಾಖ್ಯಾನಕರ್ತರ ವಿವರಗಳಿಂದ 'ಸೌಂದರ್ಯಲಹರಿ'ಯ ಕರ್ತೃಗಳು ಶಂಕರರೆಂಬುದು ವಿಶದವಾಗುತ್ತದೆ. ಕೈವಲ್ಯಾಶ್ರಮನೆಂಬ ವ್ಯಾಖ್ಯಾನಕಾರನು ತನ್ನ 'ಟೀಕೆ'ಯನ್ನು ಹೀಗೆ ಪ್ರಾರಂಭಿಸುತ್ತಾನೆ 'ಭಗವಾನ್ ಪರಮಕಾರುಣಿಕಃ ಶಂಕರಾವತಾರಃ ಶ್ರೀಶಂಕರಾಚಾರ್ಯಃ ಶಿವಶಕ್ತ್ಯೋರಭೇದಂ ಜ್ಞಾಪಯಿತುಂ ಸಕಲ ಪ್ರಪಂಚ ಸಾಕ್ಷಿಣ್ಯಾಃ ಬ್ರಹ್ಮಾವಿನಾ ಭೂತ ಚಿಚ್ಛಕ್ತೇಃ ಸ್ತುತಿದ್ವಾರಾ . . .' ಮುಂದೆ ಕೊಟ್ಟಿರುವ ಕೈವಲ್ಯಾಶ್ರಮನ ಆನುಷಂಗಿಕ ಉಕ್ತಿಯಿಂದ ಈ ಸ್ತೋತ್ರವು ರಚಿಸಲ್ಪಟ್ಟ ಮೂಲಪ್ರದೇಶವನ್ನು ಅರಿಯಲು ಸಹಾಯವಾಗಬಹುದು. ಅವನು 'ಸಮಾನೀತ ಪದ್ಭ್ಯಾಂ . . .' ಎಂಬ ಶ್ಲೋಕವು ಪ್ರಕ್ಷಿಪ್ತವೆಂದು ಹೇಳಿ ಹೀಗೆ ನುಡಿದಿದ್ದಾನೆ: 'ನ್ಯಾಯಂ ಶ್ಲೋಕಃ ಶಂಕರಾಚಾರ್ಯಾಣಾಂ ಸಾಂಪ್ರದಾಯಿಕಃ ಮಲಪ್ರಾಲ ದೇಶೀಯಾನಾಂ (ಮಲಬಾರ್ ?) ಪುಸ್ತಕೇಷು ಯತೋ ನಾಸ್ತಿನಾಪಿ ದಾಕ್ಷಿಣಾತ್ಯ ಪುಸ್ತಕೇಷು' (Vide, Aufricht's Oxford Cat). ಕೈವಲ್ಯಾಶ್ರಮ ಮತ್ತು ಲಕ್ಷ್ಮೀಧರರು, ಸಚ್ಚಿದಾನಂದ ಭಾರತಿಗಳ ಶಿಷ್ಯರಾದ ಸಹಜಾನಂದನಾಥ ಪ್ರಣೀತವಾದ 'ಮನೋರಮಾ' ಎಂಬ ವ್ಯಾಖ್ಯಾನದ ಹೆಸರು ಹೇಳಿದ್ದಾರೆ. ಸಹಜಾನಂದರ ಗುರುಗಳು 'ಶ್ರೀ ಶಿವಾದಿ ಗುರುಪಾರಂಪರ್ಯ ಸತ್ಸಂಪ್ರದಾಯಾನುಸಾರಿ ಮುನೀಂದ್ರ

ಶ್ರೀ ಸಚ್ಚಿದಾನಂದರು'. ಶೃಂಗೇರಿಯ ಗುರುಪರಂಪರೆಯಲ್ಲಿ ಸಚ್ಚಿದಾನಂದರ ಹೆಸರು ದೊರಕುತ್ತದೆ (*Vide*, *Descriptive Catalogue of Madaras mss*, vol *xix*, p. 706; also *M. A. R. 1916*). ಶಂಕರಾಚಾರ್ಯರ ಸಂಪ್ರದಾಯಕ್ಕೆ ಸೇರಿದ ಇವರ ವ್ಯಾಖ್ಯಾನವು ಆಚಾರ್ಯರ ಕರ್ತೃತ್ವಕ್ಕೆ ಉಪಷ್ಟಂಭಕವಾಗಿದೆ.

ಲಕ್ಷ್ಮೀಧರ ಪಂಡಿತನು 'ಸುಭಗೋದಯ' ಎಂಬ ಶೈವಾಗಮವು ಶಂಕರಾಚಾರ್ಯ ಪ್ರಣೀತವೆಂದು ಹೇಳಿದ್ದಾನೆ (೧೨೬ ನೇ ಪುಟದಲ್ಲಿ ಕೊಟ್ಟಿರುವ ವಿಸ್ತರಸ್ತು ಶುಭಗೋದಯೇ ಶಾರೀರಕೇ ಜ್ಞಾತವ್ಯಃ)—

'ತ್ರಿಪುರೋಪನಿಷದ್ಭಾಷ್ಯ'ದ ಕರ್ತೃಗಳಾದ ರಾಮಾನಂದರು ಇದನ್ನು ಹೀಗೆ ಹೇಳಿದ್ದಾರೆ:

ಶ್ರೀ ಶಂಕರಾಚಾರ್ಯ ಕೃತಾನ್ ಪ್ರಬಂಧಾನ್ ಸೌಭಾಗ್ಯವಿದ್ಯಾಸುಭಗೋದಯಾದೀನ್ |
ಪುನಃ ಪುನಃ ಸಾಧು ವಿಚಿಂತ್ಯ ಬುದ್ಧ್ಯಾ ತದಧ್ವನಾ ಭಾಷ್ಯಮಿದಂ ಕರೋಮಿ ||

ಲಕ್ಷ್ಮೀಧರನು ೧೨೩ ನೆಯ ಪುಟದಲ್ಲಿ ಶಂಕರಾಚಾರ್ಯ (?) ಪ್ರಣೀತ 'ಸುಭಗೋದಯ ವ್ಯಾಖ್ಯಾನ'ದಿಂದ ಒಂದು ಅರ್ಧಶ್ಲೋಕವನ್ನು ಉದ್ಧರಿಸಿದ್ದಾನೆ. ಇದು ನಮ್ಮ ಅಭಿಪ್ರಾಯದಲ್ಲಿ ಗೌಡಪಾದಾಚಾರ್ಯರ 'ಸುಭಗೋದಯ ಸ್ತೋತ್ರ'ವೇ ಆಗಿರಬೇಕು. ತತ್ಕಾರಣದಿಂದ ಶಂಕರಾಚಾರ್ಯರ ಕಾಲದಲ್ಲಿ ಅನೇಕ ಶೈವಾಗಮಗಳು ರಚಿತವಾಗಿದ್ದಿರಬೇಕೆಂದೂ ಅವುಗಳ ಪೈಕಿ 'ಪ್ರಪಂಚಸಾರ ತಂತ್ರ'ವು ಒಂದೆಂದೂ ಹೇಳಬಹುದು. ಇದಕ್ಕೆ ಶಂಕರರ ಪ್ರಸಿದ್ಧ ಶಿಷ್ಯರಾದ ಪದ್ಮಪಾದಾಚಾರ್ಯರು ಭಾಷ್ಯವನ್ನು ರಚಿಸಿದ್ದಾರೆ. ಇದರಿಂದ ಶ್ಲೋಕಗಳನ್ನು ರಾಘವಭಟ್ಟನು (೧೪೯೩) ತನ್ನ 'ಶಾರದಾತಿಲಕ'ದ ಮೇಲಣ 'ಬಿಂದುಸೂತ್ರ'ವೆಂಬ ವ್ಯಾಖ್ಯಾನದಲ್ಲಿ ಉದ್ಧರಿಸಿದ್ದಾನೆ. ಈ ವ್ಯಾಖ್ಯಾನದ ಮೇಲೆ ಪದ್ಮಪಾದಾಚಾರ್ಯರು[1] ಬರೆದಿರುವ 'ಭಾಷ್ಯ'ದಿಂದ ಶ್ಲೋಕಗಳನ್ನು ಭಾಸ್ಕರಾಚಾರ್ಯರು ತಮ್ಮ 'ಭಾವನೋಪನಿಷತ್' ಟೀಕೆಯಲ್ಲಿ ಉದ್ಧರಿಸಿದ್ದಾರೆ. ಪೂರ್ವೋಕ್ತ ಆಧಾರಗಳಿಂದ 'ಸೌಂದರ್ಯಲಹರಿ'ಯು ಶಂಕರಾಚಾರ್ಯ ಪ್ರಣೀತವೇ ಎಂಬುದು ನಿರ್ವಿವಾದವಾಗಿ ಸಿದ್ಧವಾಗುತ್ತದೆ.

ಆನಂದಲಹರಿಯು ತಾಂತ್ರಿಕ ಸಾಹಿತ್ಯದಲ್ಲಿ ಅಪೂರ್ವವಾದ ಸ್ಥಾನವನ್ನು ಪಡೆದಿದೆ. ಇದರಲ್ಲಿ 'ಶ್ರೀ ವಿದ್ಯೆ'ಯ ಮೂಲತತ್ತ್ವಗಳನ್ನು ಶಂಕರಾಚಾರ್ಯರು ಕವಿಸಹಜವಾದ ಶೈಲಿಯಲ್ಲಿ ಪ್ರತಿಪಾದಿಸಿದ್ದಾರೆ. ಭಾಷಾಮಾಧುರ್ಯ, ಅರ್ಥಗಾಂಭೀರ್ಯ, ತತ್ತ್ವಾರ್ಥಗುಂಫನ, ಇವು ಈ ಸ್ತೋತ್ರರತ್ನವನ್ನು ಆಚಂದ್ರಾರ್ಕಸ್ಥಾಯಿಯನ್ನಾಗಿ ಮಾಡಿವೆ. ಇಲ್ಲಿ ಅದರ ಕನ್ನಡ ಅನುವಾದವನ್ನು ಕೊಡಲು

[1] ಈ ಪದ್ಮಪಾದರು ಶಂಕರರ ಶಿಷ್ಯರಿಂದ ಭಿನ್ನರು.

ಪ್ರಯತ್ನಪಟ್ಟಿದೆ. ಭಾಷ್ಯವಿತ್ತವರಾದ ಸ್ವಾಮಿ ಅಚ್ಯುತಾನಂದರ (*Shankaracharya's Granthavali Edition* by Prasanna Kumara Sastry, Calcutta, 1316, B. S, 1908) ಮತ್ತು ಲಕ್ಷ್ಮೀಧರಭಟ್ಟರ (Bib. Sans no: 11 M. O. L, 1896) ವ್ಯಾಖ್ಯಾನಗಳ ಆಧಾರದ ಮೇಲೆ 'ಟೀಕೆ'ಯನ್ನು ಬರೆಯಲಾಗಿದೆ. ಪ್ರಸಕ್ತ ಸಂದರ್ಭಗಳಲ್ಲಿ ಕಾಮೇಶ್ವರ ಸೂರಿಯ 'ಭಾಷ್ಯ' (*Saundarya Lahari*—Adyar, 1937) ವನ್ನು, ಭಾಸ್ಕರರಾಜರ 'ಲಲಿತಾ ಸಹಸ್ರನಾಮ ಭಾಷ್ಯ' (Nirnayasagar Press—Bombay, 1935) ವನ್ನೂ ಉಪಯೋಗಿಸಿಕೊಳ್ಳಲಾಗಿದೆ.

ಪ್ರಾರಂಭ

ಶ್ರುತಿ ಸ್ಮೃತಿ ಪುರಾಣಾನಾಮಾಲಯಂ ಕರುಣಾಲಯಮ್ |
ನಮಾಮಿ ಭಗವತ್ಪಾದ ಶಂಕರಂ ಲೋಕಶಂಕರಂ ||

ಶಿವಃ ಶಕ್ತ್ಯಾ ಯುಕ್ತೋ ಯದಿ ಭವತಿ ಶಕ್ತಃ ಪ್ರಭವಿತುಂ
ನ ಚೇದೇವಂ ದೇವೋ ನಖಲು ಕುಶಲಃ ಸ್ಪಂದಿತುಮಪಿ |
ಅತಸ್ತ್ವಾಮಾರಾಧ್ಯಾಂ ಹರಿಹರವಿರಿಂಚ್ಯಾದಿಭಿರಪಿ
ಪ್ರಣನ್ತುಂ ಸ್ತೋತುಂ ವಾ ಕಥಮಕೃತಪುಣ್ಯಃ ಪ್ರಭವತಿ || ೧ ||

ಶಿವನು ಶಕ್ತಿಸಮೇತನಾಗಿದ್ದಾಗ ಮಾತ್ರ ಸೃಷ್ಟಿಸಬಲ್ಲನು. ಅವನು ಶಕ್ತಿರಹಿತನಾಗಿ ಚಲಿಸಲು ಸಹಾ ಸಮರ್ಥನಲ್ಲ. ಹೀಗಿರಲು, ಹರಿಹರಬ್ರಹ್ಮಾದಿಗಳಿಂದ ಪ್ರಶಂಸಿತಳಾಗಿ, ಅಗಾಧ ಮಹಿಮಾನ್ವಿತಳಾದ ನಿನ್ನನ್ನು ನಮಿಸಲು ಅಥವಾ ಸ್ತುತಿಸಲು ನನ್ನಂತಹ ಮಂದಭಾಗ್ಯನು ಹೇಗೆ ಶಕ್ತನಾಗುವೆನು ?

ಟೀಕೆ: ಶಿವಶಕ್ತಿಯರು ಅಭಿನ್ನರು. ಅಗ್ನಿ ಮತ್ತು ಅದರ ಜ್ವಾಲೆಯಂತೆ ಚಂದ್ರ ಮತ್ತು ಚಂದ್ರಿಕೆಯಂತೆ, ಹಿಮ ಮತ್ತು ಅದರ ಶೀತಳದಂತೆ, ಶಿವಶಕ್ತಿಯರು 'ಅವಿನಾಭಾವದಿಂದ ಯುಕ್ತರಾಗಿದ್ದಾರೆ.' ತತ್ಕಾರಣವಾಗಿಯೇ 'ಲಿಂಗಪುರಾಣ'ದಲ್ಲಿ ಹೀಗೆ ಉಕ್ತವಾಗಿದೆ: 'ಯಥಾ ಶಿವಾಸ್ತಥಾ ದೇವೀ ಯಥಾ ದೇವೀ ತಥಾ ಶಿವಃ 'ಪರಮಾತ್ಮಾ ಶಿವಃ ಪ್ರೋಕ್ತಃ ಶಿವಾಶ್ಚೈವ ಪ್ರಕೀರ್ತಿತೆ.' ಬೃಹದಾರಣ್ಯಕ ಉಪನಿಷತ್ತಿನಲ್ಲಿ ಹೀಗೆ ಹೇಳಲ್ಪಟ್ಟಿದೆ: 'ಶಿವಶಕ್ತಿಯರ ಭೋಗವು ಅಖಂಡವಾದುದು. ಏಕೆಂದರೆ ಅವರು ಅಭಿನ್ನರು. ಇದರಿಂದಲೇ ಶಕ್ತಿಯು 'ಏಕಭೋಗ' (ಏಕ= ಈಶ್ವರ, ಭೋಗ= ಸ್ವಸ್ವರೂಪಾನಂದ) ಎಂದು ಸಂಬೋಧಿಸಲ್ಪಡುತ್ತಾಳೆ.

ಶ್ರೀಚಕ್ರವು ಈ 'ಅವಿನಾಭಾವ'ದ ಪ್ರತೀಕವಾಗಿದೆ. ಆದರೆ ಒಂಬತ್ತು ತ್ರಿಕೋಣಗಳ ಪೈಕಿ, ಊರ್ಧ್ವಮುಖವಾಗಿರುವ ನಾಲ್ಕು ತ್ರಿಕೋಣಗಳು 'ಶಿವ'ನನ್ನೂ, ಅಧೋಮುಖವಾಗಿರುವ ಐದು ತ್ರಿಕೋಣಗಳು 'ಶಕ್ತಿ'ಯನ್ನೂ ನಿರ್ದೇಶಿಸುತ್ತವೆ. ಬೀಜ 'ಕ್ಲೀಮ್'.

ಶಿವನು ಕೇವಲ ಸಾಕ್ಷೀಭೂತನು. ಅವನು ' ಶಕ್ತಿ ' ಅಥವಾ ' ಶಿವಮಾಯೆ ' ಯನ್ನು ವೀಕ್ಷಿಸುತ್ತಾನೆ. ಮಾಯೆಯು ಸತ್ವ, ರಜಸ್ಸು, ತಮಸ್ಸುಗಳೆಂಬ ' ಗುಣ ತ್ರಯ 'ಗಳಿಂದ ಜಗಚ್ಚಕ್ರವನ್ನು ಚಾಲಿಸುತ್ತಾಳೆ. ಶಿವನು ಅಕರ್ತ, ಶಕ್ತಿಯು ಸರ್ವಕರ್ತಳು. ಅವಳು ಆನಂದೋನ್ಮತ್ತಳಾಗಿ ನರ್ತಿಸುತ್ತಿದ್ದಾಳೆ. ಶಿವನು ಶವ ಸದೃಶನಾಗಿ ಶಯನಿಸಿದ್ದಾನೆ. ಶಕ್ತಿಯು ಅವನ ಶರೀರದ ಮೇಲೆ ನಿಂತಿದ್ದಾಳೆ.

' ಲಲಿತಾ ಸಹಸ್ರನಾಮ ಭಾಷ್ಯ 'ದಲ್ಲಿ ಹೀಗೆ ಹೇಳಲ್ಪಟ್ಟಿದೆ: ' ದೇವಿಯು ಇಚ್ಛಾ ಶಕ್ತಿ ಮತ್ತು ಇತರ ಗುಣಗಳ ಆಗರ. ಆದರೆ ಈ ಗುಣಗಳಿಂದ ಸಹಿತನಾದ ತನ್ನ ಭರ್ತ ಕಾಮೇಶ್ವರನಿಗೆ ಅಧೀನಳಾಗಿಲ್ಲ.' ' ಶಿವನು ದೇವಿಯೊಡನೆ ಕ್ರೀಡಿಸಲು ಅಲ್ಲಿ ನಿತ್ಯ ವಾಸಿಸುತ್ತಾನೆ. ಮಧ್ಯದಲ್ಲಿ ದೇವಿಯ ಗೃಹ; ಶಂಕರನು ಅದರ ಅಧೀನ ' (ಕಾಳಿಕಾ ಪುರಾಣ). ' ಯಾವಳ ಮುಖೇನ ಶಿವನು ಪಶುಗಣ (ಮಾನವರು)ಗಳಿಗೆ ಭುಕ್ತಿಮುಕ್ತಿಪ್ರದಾಯಕನಾಗಿರುವನೋ, ಆ ಚಿದ್ರೂಪಿಣಿಯೂ ಆದ್ಯೆಯೂ ಆದ ದೇವಿಗೆ ನಮಿಸುವೆನು ' (ಆಗಮ). ಶಿವನು ಜಗತ್ಸೃಷ್ಟಿಕರ್ತ. ಅವಳ ವಿನಾ ಶಿವನು ಅಶಕ್ತನು (ಸೂತಸಂಹಿತೆ, ೪-೧೩-೨೪).

ದೇವಿಯು ' ಸ್ವಾಧೀನವಲ್ಲಭೆ '. ಶರ್ಯಾತಿಯ ಪುತ್ರಿಯಾದ ಸುಕನ್ಯೆಯ ಪತಿಯನ್ನು ಅಶ್ವಿನೀ ದೇವತೆಗಳು ತಮ್ಮ ಸಮಾನರೂಪಿಯನ್ನಾಗಿಮಾಡಿ, ಅವನನ್ನು ಗುರುತಿಸುವಂತೆ ಹೇಳಿದರು. ಅವಳು ತ್ರಿಪುರಸುಂದರಿಗೆ ಶರಣಾಗತಳಾದಳು. ' ಎಲೈ ಜಗನ್ಮಾತೆ, ನನ್ನ ಸತೀ ಧರ್ಮವನ್ನು ರಕ್ಷಿಸು. ನಿನ್ನ ಚರಣಗಳಲ್ಲಿ ವಿನೀತಳಾಗಿ ದ್ದೇನೆ.' ' ದೇವಿಯು ಇತ್ತ ದಿವ್ಯಜ್ಞಾನದಿಂದ ತನ್ನ ವಲ್ಲಭನನ್ನು ಸ್ವಾಧೀನಪಡಿಸಿ ಕೊಂಡಳು ' (ದೇವೀ ಭಾಗವತ—ಸಪ್ತಮಸ್ಕಂಧ).

' ಶಿವನು ಶಕ್ತಿಸಮೇತನಾಗಿದ್ದಾಗ ಮಾತ್ರ ಅವನಿಂದ ಭವ (ಸೃಷ್ಟಿ)ಮೃಡ (ಸ್ಥಿತ), ಹರ (ಲಯ)ರು ಉದ್ಭವಿಸುತ್ತಾರೆ. ಶಿವನು ಸ್ವಯಂಜ್ಯೋತಿಯಾದರೂ ಶಕ್ತಿವಿನಾ ಚಲಿಸಲು ಸಹಾ ಸಮರ್ಥನಲ್ಲ ' (ಕಾಮೇಶ್ವರ ಸೂರಿ).

ಶಿವನು (ಉ ಮತ್ತು ಮ) ಶಕ್ತಿ (ಅ—ँ ಸಮೇತ)ಯೊಂದಿಗೆ ಮಿಲನವಾದಾಗ ಮಾತ್ರ ನಾದರೂಪಿಯಾದ ' ಪ್ರಣವ 'ವು ಉದ್ಭವಿಸುತ್ತದೆ. ' ಶಿವನು ' ಇಚ್ಛಾಶಕ್ತಿ ' ಸಮೇತನಾಗಿ ಆದಿನಾಥ ಅಥವಾ ಪ್ರಥಮಗುರು ಅಥವಾ ಆದಿಗುರುವೆಂದು ಸಂಬೋಧಿಸಲ್ಪಡುತ್ತಾನೆ.

ಹಂ (ಶಿವಬೀಜ) ; ಸಃ (ಶಕ್ತಿಬೀಜ). ಇವು ಸೇರಿ ' ಹಂಸಮಂತ್ರ 'ವಾಗಿದೆ. ಇದರ ಸಹಾಯದಿಂದ ವೇದಾಂತ ಮಹಾವಾಕ್ಯಗಳಾದ ' ಅಹಂ ಬ್ರಹ್ಮಾಸ್ಮಿ ' ' ತತ್ ತ್ವಂ ಅಸಿ ' ಎಂಬುದರ ಯಥಾರ್ಥಗ್ರಹಣವು ಸಾಧ್ಯವಾಗುತ್ತದೆ. ' ಹಂ ' (ನಿಶ್ವಾಸ), ಸಃ (ಉಛ್ವಾಸ)—ಅಜಪಗಾಯತ್ರಿ (ಅಚ್ಯುತಾನಂದ).

ತನೀಯಾಂಸಂ ಪಾಂಸುಂ ತವ ಚರಣಪಂಕೇರುಹಭವಂ
ವಿರಿಂಚಿಃ ಸಂಚಿನ್ವನ್ವಿರಚಯತಿ ಲೋಕಾನವಿಕಲಮ್ |
ವಹತ್ಯೇನಂ ಶೌರಿಃ ಕಥಮಪಿ ಸಹಸ್ರೇಣ ಶಿರಸಾಮ್
ಹರಃ ಸಂಕ್ಷುದ್ಯೈನಂ ಭಜತಿ ಭಸಿತೋದ್ಧೂಳನವಿಧಿಮ್ || ೨ ||

ವಿರಂಚಿಯು ಕಮಲಸದೃಶವಾದ ನಿನ್ನ ಚರಣರೇಣುವಿನ ಸಂಚಯದಿಂದ ಪ್ರಪಂಚ ಸಮುದಾಯವನ್ನು ಸೃಷ್ಟಿಸಿದನು. ಸಹಸ್ರಶೀರ್ಷಯುಕ್ತನಾದ ಶೌರಿಯು ಮಹಾ ಬಲಿಷ್ಠನಾಗಿ ಅವುಗಳನ್ನು ಎತ್ತಿಹಿಡಿದಿರುವನು. ಹರನು ಅವುಗಳನ್ನು ಲಯಗೊಳಿಸಿ, ಅವುಗಳ ಭಸ್ಮದಿಂದ ತನ್ನ ದೇಹವನ್ನು ಲೇಪಿಸಿಕೊಳ್ಳುವನು.

ಟೀಕೆ: ಶಕ್ತಿಯು ಅಸಂಖ್ಯಾತ ಪ್ರಪಂಚಗಳ ಸೃಷ್ಟಿಗೆ ಕಾರಣಕರ್ತಳು. ಈ ಪ್ರಪಂಚಗಳು ಅಸಂಖ್ಯಾತವಾಗಿದ್ದರೂ, ಶಕ್ತಿಯ ಚರಣಧೂಳಿಯ ರೂಪಾಂತರಗಳೇ ಆಗಿವೆ. ಹರಿಹರಬ್ರಹ್ಮಾದಿಗಳೂ, ಇತರ ದೇವತೆಗಳೂ ಆಕೆಯಿಂದಲೇ ತಮ್ಮ ಶಕ್ತಿಯನ್ನು ಆರ್ಜಿಸಿದರು. ಶಕ್ತಿಯು ಗುಣತ್ರಯಗಳ ಸಹಾಯದಿಂದ ಬ್ರಹ್ಮಾಂಡವನ್ನು 'ವ್ಯಕ್ತ'ಗೊಳಿಸುವಳು. 'ಏಕಾಂತಃ' (ಅ+ಇ)= ಶಿವಕಾಮ. ಏಕ= ಶಿವಪತ್ನಿ.

ಬ್ರಹ್ಮನು ಪ್ರಥಮತಃ ನಿಶ್ಚೇತನನಾಗಿದ್ದನು. ತ್ರಿಪುರಸುಂದರಿಯನ್ನು ಆರಾಧಿಸಿ ಸೃಷ್ಟಿಶಕ್ತಿಯನ್ನು ಪಡೆದನು. ಮಹಾಯೋಗಿಯಾದ ಶಿವನು ಭಸ್ಮಲೇಪಿತ ಶರೀರಿಯಾಗಿ ರಾಜಿಸುತ್ತಾನೆ. ಪ್ರಪಂಚಗಳನ್ನು ಲಯಗೊಳಿಸಿ ಈ ಭಸ್ಮವನ್ನು ಪಡೆಯುತ್ತಾನೆ. ಶೌರಿಯು 'ನಾರಾಯಣ' ಅಥವಾ 'ವಿಷ್ಣು'.

ಶಕ್ತಿಯು ತ್ರಿವಿಧವಾದದ್ದು: ಇಚ್ಛಾಶಕ್ತಿ, ಕ್ರಿಯಾಶಕ್ತಿ, ಜ್ಞಾನಶಕ್ತಿ. ಮನಸ್ಸು 'ಇಚ್ಛಾಶಕ್ತಿ', ಪ್ರಾಣ 'ಕ್ರಿಯಾಶಕ್ತಿ', ಬುದ್ಧಿ 'ಜ್ಞಾನಶಕ್ತಿ'. ಮಾನವನು ಜ್ಞಾನಶಕ್ತಿಯ ಮೂಲಕ ಒಂದು ವಸ್ತುವಿನ ಜ್ಞಾನವನ್ನು ಪಡೆಯುತ್ತಾನೆ. ಆಗ ಅದನ್ನು ಪಡೆಯಬೇಕೆಂಬ ಇಚ್ಛೆಯು ಉದ್ಭವಿಸುತ್ತದೆ. ಪ್ರಾಣಶಕ್ತಿಯ ಸಹಾಯದಿಂದ ಪ್ರಯತ್ನಿಸಿ ಅದನ್ನು ಹೊಂದುತ್ತಾನೆ. 'ಸಾಂಕೇತ ಪದ್ಧತಿ'ಯ ಪ್ರಕಾರ 'ಇಚ್ಛೆ'ಯು ಶಕ್ತಿಯ ಶಿರಸ್ಸು, 'ಜ್ಞಾನ'ವು ಆಕೆಯ ದೇಹ, 'ಕ್ರಿಯೆ' ಆಕೆಯ ಪಾದಗಳು. ಇಚ್ಛೆಯಿಂದ ಜ್ಞಾನವೂ, ಜ್ಞಾನದಿಂದ ಕರ್ಮವೂ ಸಂಭವಿಸುತ್ತವೆ. ಬ್ರಹ್ಮನು ಸೃಷ್ಟಿಸುವಾಗ 'ಇಚ್ಛಾಶಕ್ತಿ'; ಆಕೆಯು ಬ್ರಹ್ಮನಿಗೆ ಈಯುವ ವಿವೇಚನೆಯು 'ಜ್ಞಾನಶಕ್ತಿ'. ಈ ಜ್ಞಾನದಿಂದ ಬ್ರಹ್ಮನು ಮಾಡುವ ಕಾರ್ಯಗಳು 'ಕ್ರಿಯಾಶಕ್ತಿ' ಸ್ವರೂಪವಾದುವು. 'ಕ್ರಿಯೆ'ಯು ಪಂಚವಿಧವಾದದ್ದೆಂದು 'ಸೂತಸಂಹಿತೆ'ಯಲ್ಲಿ ಉಕ್ತವಾಗಿದೆ.

ಸ್ಪಂದಶ್ಚೈವ ಪರಿಸ್ಪಂದಃ ಪ್ರಕ್ರಮಃ ಪರಿಶೀಲನಃ |
ಪ್ರಚಾರ ಇತಿ ವಿದ್ವದ್ಭಿಃ ಕಥಿತಾ ಪಂಚ ಚ ಕ್ರಿಯಾಃ ||
(ಸೂತಸಂಹಿತಾಃ ೧೪, ೨೮—೨೯)

'ಸೀತೋಪನಿಷತ್ತಿ'ನಲ್ಲಿ ಸೀತೆಯನ್ನು ಕುರಿತು ಹೀಗೆ ಹೇಳಿದೆ: 'ಸಾ ದೇವೀ ತ್ರಿವಿಧಾ ಭವತಿ ಶಕ್ತ್ಯಾತ್ಮನಾ ಇಚ್ಛಾಶಕ್ತಿಃ ಕ್ರಿಯಾಶಕ್ತಿಃ ಸಾಕ್ಷಾಚ್ಛಕ್ತಿರಿತಿ'. ವ್ಯಾಖ್ಯಾನ ಕರ್ತನು 'ಸಾಕ್ಷಾಚ್ಛಕ್ತಿ'ಯನ್ನು 'ಜ್ಞಾನಶಕ್ತಿ'ಯೆಂದು ವಿವರಿಸಿದ್ದಾನೆ.

ಅವಿದ್ಯಾನಾಮಂತಸ್ತಿಮಿರ ಮಿಹಿರೋದ್ದೀಪನಕರೀ
ಜಡಾನಾಂ ಚೈತನ್ಯಸ್ತಬಕ ಮಕರಂದ ಸ್ರುತಿ ಝರೀ |
ದರಿದ್ರಾಣಾಂ ಚಿಂತಾಮಣಿಗುಣನಿಕಾ ಜನ್ಮಜಲಧೌ
ನಿಮಗ್ನಾನಾಂ ದಂಷ್ಟ್ರಾ ಮುರರಿಪುವರಾಹಸ್ಯ ಭವತೀ || ೩ ||

ಅಜ್ಞಾನಿಗಳ ಅಜ್ಞಾನಾಂಧಕಾರವನ್ನು ತೊಲಗಿಸುವ ಸೂರ್ಯ ನೀನು. ಜಡರಿಗೆ ಚೈತನ್ಯಮಕರಂದದಿಂದ ಪೂರ್ಣವಾಗಿ ಪ್ರವಹಿಸುತ್ತಿರುವ ಪ್ರಣಾಳ ನೀನು. ದರಿದ್ರರಿಗೆ ಚಿಂತಾಮಣಿ ಸದೃಶವಾದ ಅಕ್ಷಮಾಲೆ; ಭವಜಲಧಿಯಲ್ಲಿ ಮುಳುಗಿದವರಿಗೆ ಮುರರಿಪುವಾದ ವರಾಹಮೂರ್ತಿಯ ದಂಷ್ಟ್ರ.

ಟೀಕೆ: ಸೂರ್ಯನು ಅಂಧಕಾರವನ್ನು ತೊಲಗಿಸುವಂತೆ, ಶಕ್ತಿಯ ಉಪಾಸನೆಯು ಅಜ್ಞಾನವೆಂಬ ಆಂತರ್ಯದ ಅಂಧಕಾರವನ್ನು ಪರಿಹರಿಸುತ್ತದೆ. ಅಭೀಷ್ಟಗಳು ಸಿದ್ಧಿಸುತ್ತವೆ; ಆನಂದವು ದೊರಕುತ್ತದೆ; ಮುಕ್ತಿಯು ಲಭಿಸುತ್ತದೆ. ದೇವಿಯು ಅಜ್ಞಾನಿಗಳಿಗೆ 'ವಿಶೇಷಜ್ಞಾನ'ವನ್ನೀಯುವಳು. ಆಕೆಯಿಂದ ತಮ್ಮ ಕಾಮನೆಗಳನ್ನು ಪಡೆಯುವ ದರಿದ್ರರಿಗೆ ದೇವಿಯು 'ಅಕ್ಷಮಾಲಾ' ಸದೃಶಳಾಗಿರುವಳು. ಮುರಾರಿಯಾದ ವಿಷ್ಣುವು ವರಾಹಮೂರ್ತಿಯಾಗಿ ಅವತರಿಸಿದನು. ಮಹಾಸಾಗರದಲ್ಲಿ ನಿಮಗ್ನವಾದ ಭೂಮಿಯನ್ನು ವರಾಹರೂಪೀ ವಿಷ್ಣುವು ತನ್ನ ದಂಷ್ಟ್ರದಿಂದ ಉದ್ಧರಿಸಿ ಸಂರಕ್ಷಿಸಿದಂತೆ, ಶಕ್ತಿಯು ಪ್ರಾಪಂಚಿಕ ವಿಷಯಗಳಲ್ಲಿ ಮಗ್ನರಾದವರನ್ನು ಉದ್ಧರಿಸಿ ಮೋಕ್ಷವನ್ನೀಯುವಳು.

ಅವಿದ್ಯೆಯು ಮಾನವನ ಮಹಾಶತ್ರು. ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯಗಳೆಲ್ಲವೂ ಅವಿದ್ಯೆಯ ರೂಪಾಂತರಗಳು. ಜೀವನ ಕಾರಣ ಶರೀರವು ಅವಿದ್ಯೆಯ ಫಲ. ಅನ್ನಮಯಕೋಶವು ಅವಿದ್ಯೆಯ ಪ್ರತೀಕ. ಅವಿದ್ಯೆಯೇ ಸ್ಥೂಲ ಸೂಕ್ಷ್ಮ ಶರೀರಗಳಿಗೆ ಕಾರಣಭೂತವಾದದ್ದು. ಇದು ಅನಾದಿಯಾದದ್ದು. ಅವಿದ್ಯೆಯು 'ಮಲಿನಸತ್ವ,' ಮಾಯೆಯು 'ಶುದ್ಧಸತ್ವ.' ಅವಿದ್ಯಾ, ಕಾಮ, ಕರ್ಮಗಳು ಸೇರಿ 'ಹೃದ್ಗ್ರಂಥಿ'ಯೆನ್ನಿಸಿಕೊಳ್ಳುವುದು. 'ಇಚ್ಛೆ'ಯು ಅವಿದ್ಯಾಜನ್ಯವಾದದ್ದು. ಮಾನವನು ತನ್ನ ಕಾಮನೆಗಳನ್ನು ಪಡೆಯಲು ಕರ್ಮಮಾಡುತ್ತಾನೆ. ಈ ಕರ್ಮಾಚರಣೆಯು

ಕಾಲದಲ್ಲಿ ಶುಭಾಶುಭಗಳನ್ನು ಆಚರಿಸುತ್ತಾನೆ. ತನ್ನ ಕರ್ಮಕ್ಕೆ ತಕ್ಕ ಫಲಗಳನ್ನು ನಿರೀಕ್ಷಿಸುತ್ತಾನೆ. ಹೀಗೆ ಜನನಮರಣ ಪ್ರವಾಹಕ್ಕೆ ಸಿಲುಕುತ್ತಾನೆ. ಕಾರ್ಯ ಕಾರಣ ನಿಯಮಬದ್ಧನಾಗುತ್ತಾನೆ. 'ಅವಿವೇಕ'ವು ಅವಿದ್ಯಾಜನ್ಯವಾದದ್ದು. ಅವಿವೇಕದಿಂದ 'ಅಭಿಮಾನ'ವೂ, ಅಭಿಮಾನದಿಂದ 'ಇಷ್ಟಾನಿಷ್ಟ'ಗಳೂ ಇಷ್ಟಾ ನಿಷ್ಟಗಳಿಂದ 'ಕರ್ಮ'ಗಳೂ, ಕರ್ಮಗಳಿಂದ 'ಸ್ಥೂಲಶರೀರ'ವೂ ಜನಿತವಾಗುವುವು. ದೇಹದ ಮೂಲಕಾರಣ 'ಅವಿದ್ಯೆ.' ಅವಿದ್ಯೆಯು ನಾಶವಾದರೆ ಜನನಮರಣ ಪ್ರವಾಹ ದಿಂದ ವಿಮೋಚನೆಯು ಲಭಿಸುತ್ತದೆ. 'ಹೃದ್ಗ್ರಂಥಿ'ಯನ್ನು ಭೇದಿಸಿದರೆ ಅಮರ ತ್ವವೂ ಶಾಶ್ವತವಾದ ಆನಂದವೂ ಸಿದ್ಧಿಸುತ್ತವೆ.

ತ್ವದನ್ಯಃ ಪಾಣಿಭ್ಯಾಮಭಯವರದೋ ದೈವತಗಣಃ
ತ್ವಮೇಕಾ ನೈವಾಸಿ ಪ್ರಕಟಿತವರಾಭೀತ್ಯಭಿನಯಾ |
ಭಯಾತ್ತ್ರಾತುಂ ದಾತುಂ ಫಲಮಪಿ ಚ ವಾಂಛಾಸಮಧಿಕಂ
ಶರಣ್ಯೇ ಲೋಕಾನಾಂ ತವಹಿ ಚರಣಾವೇವ ನಿಪುಣೌ || ೪ ||

ಇತರ ದೇವತೆಗಳೆಲ್ಲರೂ ತಮ್ಮ ಹಸ್ತಗಳಿಂದ ವರಗಳನ್ನೀಯುವರು ಮತ್ತು ಅಭಯಪ್ರದಾನಮಾಡುವರು. ಆದರೆ ನೀನು ಮಾತ್ರ ನಿನ್ನ ಚರಣಗಳಿಂದ ಅಭೀತಿ ಯನ್ನುಂಟುಮಾಡಿ, ಕಾಮಿತಫಲಗಳನ್ನೀಯುವೆ. ಎಲೌ ಲೋಕಶರಣ್ಯೇ, ಭಯಾರ್ತ ರಾದ ನಮ್ಮನ್ನು ರಕ್ಷಿಸಿ, ನಮ್ಮ ವಾಂಛಿತಫಲಗಳಿಗಿಂತ ಅಧಿಕವಾಗೀಯಲು ನೀನು ಸಮರ್ಥಳಾಗಿರುವೆ.

ಟೀಕೆ: ದೇವತೆಗಳು ಯಾವುದನ್ನು ಹಸ್ತಗಳಿಂದ ಮಾಡಬಲ್ಲರೋ ಅದನ್ನು ಶಕ್ತಿಯು ಪಾದಗಳಿಂದಲೇ ಮಾಡಬಲ್ಲಳು. ಇದು ಶಕ್ತಿಯ ಪಾರಮ್ಯದ್ಯೋತಕವಾಗಿದೆ. ಕೆಲವರು ದೇವತೆಗಳು 'ಸ್ವರ್ಗದಾತರು,' ಇತರರು 'ಮೋಕ್ಷದಾತರು'. ಶಕ್ತಿಯು 'ಭುಕ್ತಿಮುಕ್ತಿ' ಪ್ರದಾಯಿನಿ. ಈ ಶ್ಲೋಕದಲ್ಲಿ 'ಐಂ, ಕ್ಲೀಂ, ಸೌಃ' ಎಂಬ 'ಬಾಲಾಮಂತ್ರ'ವು ಅಡಗಿದೆ.

ಹರಿಸ್ತ್ವಾಮಾರಾಧ್ಯ ಪ್ರಣತಜನಸೌಭಾಗ್ಯ ಜನನೀಂ
ಪುರಾ ನಾರೀ ಭೂತ್ವಾ ಪುರರಿಪುಮಪಿ ಕ್ಷೋಭಮನಯತ್ |
ಸ್ಮರೋಽಪಿ ತ್ವಾಂ ನತ್ವಾ ರತಿನಯನಲೇಹ್ಯೇನ ವಪುಷಾ
ಮುನೀನಾಮಪ್ಯಂತಃ ಪ್ರಭವತಿ ಹಿ ಮೋಹಾಯ ಮಹತಾಮ್ || ೫ ||

ಪೂರ್ವದಲ್ಲಿ ಎಲೌ ಭಕ್ತಾಭೀಷ್ಟದಾಯಿನೀ, ಹರಿಯು ನಿನ್ನನ್ನು ಆರಾಧಿಸಿ, ಸುಂದರಳಾದ ಲಲನೆಯ ಆಕಾರವನ್ನು ತಳೆದು, ತ್ರಿಪುರದಾಹಿಯಾದ ಶಿವನ ಮನಸ್ಸನ್ನೂ ಕ್ಷೋಭಿಸಿದನು. ಮನ್ಮಥನೂ ಸಹಾ ನಿನ್ನನ್ನು ಪೂಜಿಸಿ, ರತಿಗೆ

ನಯನಾನಂದಕರವಾದ ತನ್ನ ಶ್ರೀತನುವಿನಿಂದ ಮುನಿಗಳ ಮಾನಸದಲ್ಲಿ ಮೋಹವನ್ನು ಉದ್ದೀಪನಗೊಳಿಸಿದನು.

ಟೀಕೆ: ಪ್ರಥಮ ವಾಕ್ಯವು ವಿಷ್ಣುವಿನ 'ಮೋಹಿನೀ ಅವತಾರ'ವನ್ನು ಕುರಿತದ್ದು. ಶಿವನು ಮಹಾಯೋಗಿಯೂ ತ್ರಿಪುರಸಂಹಾರಿಯೂ ಆಗಿದ್ದರೂ, ಲಾವಣ್ಯಮಯಿಯಾದ ಮೋಹಿನಿಯ ಮೇಲಣ ಕಾಮವನ್ನು ಅಡಗಿಸಲು ಶಕ್ತನಾಗಲಿಲ್ಲ. "ಮಹಾ ಲಕ್ಷ್ಮಿಯ ಪ್ರತೀಕ"ವಾದ ಶ್ರೀಚಕ್ರದ ಆರಾಧನೆಯಿಂದ ವಿಷ್ಣುವು "ಕಾಮಸಮ್ಮೋಹಿನೀ" ರೂಪವನ್ನು ಪಡೆದನು; ಶಿವನು 'ಸರ್ವ ವಿದ್ಯೇಶ್ವರತ್ವ'ವನ್ನು ಹೊಂದಿದನು; ಬ್ರಹ್ಮನು "ಬ್ರಹ್ಮಾಂಡಾಸು"ವಾದನು ಎಂದು 'ಲಲಿತೋಪಾಖ್ಯಾನ'ದಲ್ಲಿ ಉಕ್ತವಾಗಿದೆ. 'ಸ್ಮರನು' ಕಾಮದ ಅಧಿದೇವತೆ; 'ರತಿ' ಅವನ ಪತ್ನಿ. ತ್ರಿಪುರಾದೇವಿಯ ಉಪಾಸನೆಯಲ್ಲಿ ದ್ವಾರದ ಬಳಿ 'ಕಾಮ' ಮತ್ತು 'ರತಿ'ಯರನ್ನು ಪೂಜಿಸುವುದು ಪದ್ಧತಿಯಾಗಿದೆ. ಇದು ಮತ್ತು ಮುಂದಿನ ಎರಡು ಶ್ಲೋಕಗಳಲ್ಲಿ ಕೆಲವು 'ಮಂತ್ರ'ಗಳು ಅಡಗಿರುವುದರಿಂದ, ಅವು ಗೂಢಾರ್ಥವುಳ್ಳವಾಗಿವೆ. ಈ ಶ್ಲೋಕದಲ್ಲಿ 'ಸಾಧ್ಯ' ಮತ್ತು 'ಸಿದ್ಧಾಸನ' ಎಂಬ ಎರಡು ವಿದ್ಯೆಗಳು ಐಕ್ಯವಾಗಿವೆ. 'ಹರಿ' ಎಂಬ ಶಬ್ದದಲ್ಲಿ 'ಹ' ಮತ್ತು 'ರ'; 'ಜನನೀಂ' ಎಂಬ ಪದದಲ್ಲಿ 'ಈ' ಮತ್ತು 'ಅನುಸ್ವಾರ.' ಇವು ಸೇರಿ 'ಹ್ರೀಂ' ಎಂಬ ಬೀಜಮಂತ್ರವಾಗಿದೆ. 'ಸ್ಮರ' (ಕಾಮ) ಶಬ್ದವು ಕಾಮಬೀಜವಾದ 'ಕ್ಲೀಂ' ಎಂಬುದನ್ನು ನಿರ್ದೇಶಿಸುತ್ತದೆ. 'ವಪುಃ' ಎಂಬ ಪದದಲ್ಲಿ 'ವ', 'ಲೇಹ್ಯ' ಎಂಬ ಪದದಲ್ಲಿ 'ಲೇ,' 'ಮುನೀನಾಂ' ಎಂಬ ಪದದಲ್ಲಿ 'ಅನುಸ್ವಾರ,' ಇವು ಸೇರಿ 'ವ್ಲೇಂ' ಎಂಬ ಬೀಜವಾಗಿದೆ. ಆದುದರಿಂದ ವಿದ್ಯೆಯು 'ಹ್ರೀಂ, ಕ್ಲೀಂ, ವ್ಲೇಂ' ಆಗಿದೆ.

ಧನುಃ ಪೌಷ್ಪಂ ಮೌರ್ವೀ ಮಧುಕರಮಯೀ ಪಂಚ ವಿಶಿಖಾ
ವಸನ್ತಃ ಸಾಮಂತೋ ಮಲಯಮರುದಾಯೋಧನರಥಃ |
ತಥಾಪ್ಯೇಕಃ ಸರ್ವಂ ಹಿಮಗಿರಿಸುತೇ ಕಾಮಪಿ ಕೃಪಾ—
ಮಪಾಂಗಾತ್ತೇ ಲಬ್ಧ್ವಾ ಜಗದಿದಮನಂಗೋ ವಿಜಯತೇ || ೬ ||

ಎಲೌ ಗಿರಿಜೇ, ನಿನ್ನ ಅಪಾಂಗದೃಷ್ಟಿಯ ಕೃಪೆಯಿಂದ ಅನಂಗನು ಪುಷ್ಪಚಾಪದಿಂದಲೂ, ಮಧುಕರಕೃತ ನಾರಿ (ಬಿಲ್ಲಿನ ಹಗ್ಗ) ಯಿಂದಲೂ, ಪಂಚಪುಷ್ಪಬಾಣಗಳಿಂದಲೂ, ವಸಂತನನ್ನೇ ಸಾರಥಿಯನ್ನಾಗಿಯೂ, ಮಲಯಮಾರುತವನ್ನೇ ತನ್ನ ಯುದ್ಧದ ರಥವನ್ನಾಗಿಯೂ ಹೊಂದಿ, ಇಡಿ ಜಗತ್ತನ್ನೇ ಜಯಿಸುತ್ತಾನೆ.

ಟೀಕೆ: ಯೋಗನಿರತನಾಗಿದ್ದ ಶಿವನನ್ನು ಪಾರ್ವತಿಯಲ್ಲಿ ಆಸಕ್ತನನ್ನಾಗಿ ಮಾಡಲು ಕಾಮನು ತನ್ನ ಕುಸುಮಶರಗಳನ್ನು ಪ್ರಯೋಗಿಸಲು, ವಿಚಲಿತನಾದ ಈಶ್ವರನು ಮಹಾಕ್ರುದ್ಧನಾಗಿ ತನ್ನ ಫಾಲನೇತ್ರಾಗ್ನಿಯಿಂದ ಅವನನ್ನು ದಹಿಸಿದನು. ದೇವಿಯ ಕೃಪಾವಿಶೇಷಕ್ಕೆ ಪಾತ್ರನಾದ ಕಾಮನಿಗೆ ಮಹತ್ತರವಾದ ಶಾಸ್ತ್ರಗಳ ಅವಶ್ಯಕತೆಯಿಲ್ಲ. ಅವನು ಕೋಮಲವೂ ಸುಂದರವೂ ಆದ ಪುಷ್ಪಗಳು, ಮಧುಕರ (ದುಂಬಿ)ಗಳೆಂಬ ಪ್ರೇಮಾಸ್ತ್ರಗಳನ್ನು ತಳೆದು, ಭುವನಮೋಹಕನಾದ ವಸಂತನೇ ಸಾರಥಿ

ಯಾಗಿ ಅಧಿಷ್ಠಿತವಾದ ಮಲಯಮಾರುತವೆಂಬ ರಥಾರೂಢನಾಗಿ ಅಖಂಡ ಭೂಮಂಡಲವನ್ನೇ ಜಯಿಸುವನು.

ಇಲ್ಲಿ 'ಕ್ಲೀಂ' ಎಂಬ 'ಕಾಮಬೀಜ'ವು ಉಕ್ತವಾಗಿದೆ. 'ಕಾಮಪಿ'ಯಿಂದ 'ಕ', ಮಲಯದಿಂದ 'ಲ', 'ಮೌರ್ವೀ'ಯಿಂದ 'ಈ' ಮತ್ತು 'ಪುಷ್ಪಂ' ಎಂಬುದರಿಂದ 'ಬಿಂದು': ಇವು ಸೇರಿ 'ಕ್ಲೀಂ' ಆಗಿವೆ.

ಭಾಸ್ಕರರಾಜರ 'ಲಲಿತಾ ಸಹಸ್ರನಾಮ ಭಾಷ್ಯ'ದಲ್ಲಿ ಹೀಗೆ ಉಕ್ತವಾಗಿದೆ: 'ಕಾಮ' ಎಂದರೆ 'ಕಾಮಕಲಾ', 'ಶರೀರ ಘಟಕ'ವಾದ 'ಬಿಂದು'. ಅದು 'ಅಗ್ನಿ' ಮತ್ತು 'ಸೋಮ' ಎಂದು ಹೇಳಲ್ಪಡುವ 'ರವಿ'. "ಕಾಮಕಲಾವಿಲಾಸ"ದಲ್ಲಿ ಹೀಗೆ ಹೇಳಲ್ಪಟ್ಟಿದೆ: 'ಬಿಂದು ಅಹಂಕಾರದ ಒಂದು ರೂಪ. ಸೂರ್ಯನು 'ಸಮಾನ ಸಾಕಾರ'ರಾದ 'ಕಾಮಕಲಾ ಮಿಥುನ'. 'ಕಾಮ' ಎಂದರೆ 'ಅಭೀಷ್ಟವಸ್ತು'. ತದ್ರೀತಿಯಲ್ಲಿಯೇ 'ಕಲಾ', 'ಕಾಮ' ಮತ್ತು 'ಕಲಾ' ಎಂಬ ಬಿಂದುದ್ವಯಗಳು 'ಚಂದ್ರ' ಮತ್ತು 'ಅಗ್ನಿ'ಯ ರೂಪದಲ್ಲಿ ವ್ಯಕ್ತಗೊಳ್ಳುತ್ತವೆ.' 'ಈಶ್ವರ' ಎಂದರೆ 'ರಾಜರಾಜೇಶ್ವರ', 'ಮೀಮಾಂಸ'ದ ಪ್ರಕಾರ 'ಮನಸ್ಸು' ವಿಭು. 'ಮನಸ್ಸು ನಿಮಗ್ನವಾಗಿದೆ' ಎಂದರೆ, ಅದು ದೇವಿಯ ನಿರವಧಿಯಾದ ಮಹತ್ತನ್ನು ನಿರ್ದೇಶಿಸುತ್ತದೆ.

'ಕಾಮ' ಎಂದರೆ 'ಕಮನೀಯರೂಪ'; ಅಥವಾ 'ಕಾಮರೂಪ'ವನ್ನು ಧರಿಸಲು ಸಮರ್ಥನಾದವನು; 'ಇಚ್ಛಾರೂಪ'ವನ್ನು ಪಡೆಯಲು ಸಮರ್ಥನಾದ 'ಮನ್ಮಥ'ನಿಗೂ ಈ ವಿಶೇಷಣವು ಅನ್ವಯಿಸುತ್ತದೆ. 'ಕಾಳಿಕಾ ಪುರಾಣ'ದಲ್ಲಿ ಹೀಗೆ ಹೇಳಲ್ಪಟ್ಟಿದೆ: 'ಜಗತ್ತಿನಲ್ಲಿ ನಿನಗೆ ಸಮಾನರಾದ 'ಕಾಮರೂಪಿ'ಗಳಿಲ್ಲ; ತತ್ಕಾರಣವಾಗಿ ಎಲೈ ಮನ್ಮಥನೇ, ನೀನು 'ಕಾಮ'ನೆಂದು ಪ್ರಸಿದ್ಧನಾಗು.

ಅಥವಾ 'ಕಾಮ' ಎಂದರೆ 'ಪ್ರಜ್ಞಾನ'. ಶ್ರುತಿ ತಿಳಿಸುತ್ತದೆ: (ಐತ. ಉಪ—೫-೨) ಯಾವುದು 'ಹೃದಯ' ಮತ್ತು 'ಮನಸ್ಸು' ಎಂದು ಹೇಳಲ್ಪಡುತ್ತದೋ, ಅದು ಸಂಜ್ಞಾನ, ಅಜ್ಞಾನ, ವಿಜ್ಞಾನ, ಪ್ರಜ್ಞಾನ, ಮೇಧಾ, ದೃಷ್ಟಿ, ಧೃತಿ, ಮತಿ, ಮನೀಷಿ, ಜೂತಿ, ಸ್ಮೃತಿ, ಸಂಕಲ್ಪ, ಅಸು, ಕಾಮ, ವಶ; ಇವು 'ಪ್ರಜ್ಞಾನ'ದ ವಿವಿಧ ನಾಮಗಳು. ಪೂರ್ವೋಕ್ತ ಶ್ರುತಿಯಲ್ಲಿ 'ಪ್ರಜ್ಞಾನ' ಎಂದರೆ 'ಶಿವ'ನೆಂದೇ ಅರ್ಥವಾಗುತ್ತದೆ. 'ಶಂಕರ' ಎಂದು ಉಕ್ತವಾಗಿರುವ 'ವಿಜ್ಞಾನ'ವನ್ನು ವಿದ್ವಾಂಸರು ವಿವಿಧನಾಮಗಳಿಂದ ಕರೆದಿದ್ದಾರೆ. ಕೆಲವರು ಅದನ್ನು 'ಹೃದಯ' ಎಂದಿದ್ದಾರೆ. ... ಕೆಲವರು ಆಸ್ತಿಕರು 'ವಶ್ಯ' ಎಂದು ಕರೆದಿದ್ದಾರೆ. ಆದರೆ ಇವೆಲ್ಲವೂ 'ಶಿವ'ನನ್ನೇ ನಿರ್ದೇಶಿಸುತ್ತವೆ.

'ಕಾಮ' ಸಿಸೃಕ್ಷುವಾದ ಈಶ್ವರನನ್ನು ಸೂಚಿಸುವುದು. 'ಬೃಹದಾರಣ್ಯಕ ಉಪನಿಷತ್ತಿ'ನಲ್ಲಿ (ಅ ೧, ೪-೧೭) ಹೀಗೆ ಹೇಳಲ್ಪಟ್ಟಿದೆ: 'ಪ್ರಾರಂಭದಲ್ಲಿ 'ಆತ್ಮ' ಮಾತ್ರವಿತ್ತು. ಅವನು 'ಕಾಮಿಸಿ'ದನು. . . . ಹೀಗೆ 'ಕಾಮ'ವು ಉತ್ಪನ್ನ ವಾಯಿತು.

ಕ್ವಣತ್ಕಾಂಚೀದಾಮಾ ಕರಿಕಲಭಕುಂಭಸ್ತನಭರಾ
ಪರಿಕ್ಷೀಣಾ ಮಧ್ಯೇ ಪರಿಣತಶರಚ್ಚಂದ್ರವದನಾ |
ಧನುರ್ಬಾಣಾನ್ ಪಾಶಂ ಸೃಣಿಮಪಿ ದಧಾನಾ ಕರತಲೈಃ
ಪುರಸ್ತಾದಾಸ್ತಾಂ ನಃ ಪುರಮಥಿತುರಾಹೋ ಪುರುಷಿಕಾ || ೭ ||

ಎಲೌ ಶಿವಾಭಿಮಾನಪಾತ್ರಿಣೀ, ನೀನು ಕರಿಕಲಭಕುಂಭಸದೃಶವಾದ ಘನಕುಚ ಗಳಿಂದಲೂ, ಕಿಂಕಿಣೀರವವನ್ನು ಉಣ್ಮುವ ಗಂಟೆಗಳಿಂದ ಅಲಂಕೃತವಾದ ಸಿಂಹಕಟಿ ಯಿಂದಲೂ, ಶರತ್ಕಾಲದ ಪೂರ್ಣಚಂದ್ರಸದೃಶ ವದನದಿಂದಲೂ, ಧನಸ್ಸು, ಬಾಣ, ಪಾಶ ಮತ್ತು ಅಂಕುಶಗಳು ಶೋಭಿಸುತ್ತಿರುವ ಹಸ್ತಗಳಿಂದಲೂ ಯುಕ್ತಳಾಗಿ ನಮಗೆ ದರ್ಶನವನ್ನು ಅನುಗ್ರಹಿಸುವಳಾಗು.

ಟೀಕೆ: ಶಕ್ತಿಯು ಗುಣತ್ರಯಗಳಿಂದ ಜಗತ್ತನ್ನು ಚಾಲಿಸುವಳು. ಸರ್ವಕರ್ತಳಾದ ದೇವಿಯ ವಿಷಯದಲ್ಲಿ ಅಕರ್ತನಾದ ಶಿವನು ಅಭಿಮಾನವನ್ನು ಹೊಂದುವುದು ಯುಕ್ತವಾಗಿದೆ.

'ಘಂಟೆ'ಯು 'ಶಬ್ದ' ಅಥವಾ 'ನಾದಬ್ರಹ್ಮ'ದ ಪ್ರತೀಕ, ಎಂದರೆ 'ಓಂ' ಕಾರ ಸೂಚಕ. ಜಗತ್ತು ನಾದ ಮತ್ತು ವರ್ಣಮಯವಾಗಿದೆ. ಸಮಸ್ತ ಭಾಷೆ ಗಳೂ ಸಮಸ್ತ ನಾಮಗಳೂ, ಸಪ್ತಸ್ವರಗಳೂ 'ನಾದ' ಅಥವಾ 'ಓಂಕಾರ'ಜನಿತ ವಾದುವು. ಕುಂಡಲಿನಿಯು ಷಡ್ಜ, ಋಷಭ, ಗಾಂಧಾರ, ಮಧ್ಯಮ, ಪಂಚಮ, ಧೈವತ, ನಿಷಾದ ಎಂಬ 'ಸಪ್ತರಾಗ' ಸ್ವರೂಪಿಣಿ. ಈ ಸಪ್ತರಾಗಗಳು 'ವಿಶುದ್ಧಿ ಚಕ್ರ'ದಲ್ಲಿ ಅಧಿಷ್ಠಿತವಾಗಿವೆ. ಶಕ್ತಿಯು 'ನಾದ ಮಾಧುರ್ಯ'ದಿಂದಲೂ, 'ವರ್ಣ ಮಾಧುರ್ಯ'ದಿಂದಲೂ ಜಗತ್ತನ್ನು ಮೋಹಗೊಳಿಸುವಳು. ಸಾಮವೇದ ಮತ್ತು ಗಾಂಧರ್ವ ವೇದಗಳು 'ಓಂ'ಕಾರದಿಂದ ಉದ್ಭವಿಸಿವೆ.

'ಅಂಕುಶ' (ಸೃಣಿ) ವು ಅಧಿಕಾರಸೂಚಕವಾದದ್ದು. ದೇವಿಯು ಇಡೀ ಜಗತ್ತನ್ನು ಪಾಲಿಸುತ್ತಿರುವಳು. ಶಿವನು ಕೇವಲ ಸಾಕ್ಷೀಭೂತನು. 'ಯೋಗಿನೀ ಹೃದಯ'ದ ಪ್ರಕಾರ ಅಂಕುಶವು 'ಜ್ಞಾನಶಕ್ತಿ'ಯ ಸಂಕೇತ. ಜ್ಞಾನಿಯಾದವನು ಜಗತ್ತಿನ ಪ್ರಲೋಭನಗಳಿಗೆ ಸಿಲುಕದೆ ಮೋಕ್ಷಮಾರ್ಗಾವಲಂಬಿಯಾಗುವನು. ಪ್ರಾಪಂಚಕರಿಗೆ 'ಜ್ಞಾನ'ವು ಅಂಕುಶರೂಪದಲ್ಲಿದೆ. 'ತಂತ್ರರಾಜ'ದ ಪ್ರಕಾರ

ಅಂಕುಶವು 'ಕ್ರೋಧ'ದ ಚಿಹ್ನೆ. ಕ್ರೋಧವು 'ಅವಿದ್ಯೆ'ಯ ರೂಪಾಂತರ. ಜ್ಞಾನಿಯಾದವನು ಕ್ರೋಧವನ್ನು ಅಡಗಿಸಬೇಕು.

'ಪಾಶ'ವು 'ಯೋಗಿನೀ ಹೃದಯ'ದ ಪ್ರಕಾರ 'ಇಚ್ಛಾಶಕ್ತಿ'. ಈ ಇಚ್ಛೆಯು ಜೀವಿಗಳನ್ನು ಲೌಕಿಕವ್ಯಾಪಾರಗಳಲ್ಲಿ ನಿಮಗ್ನರನ್ನಾಗಿ ಮಾಡುತ್ತದೆ. ಕಾಮಿನೀ ಕಾಂಚನ ಮೋಹಿತರಾಗಿ, ಪರಶಿವನನ್ನು ಮರೆತು, ಐಹಿಕಸುಖಾಭಿಲಾಷಿಗಳಾದ ಜೀವರನ್ನು ಶಕ್ತಿಯು ತನ್ನ ಪಾಶದಿಂದ ಬಂಧಿಸಿ, ಜನನಮರಣ ಪ್ರವಾಹರೂಪವಾದ ಸಂಸಾರಸಾಗರದಲ್ಲಿ ಕೆಡವುತ್ತಾಳೆ.

'ಯೋಗಿನೀ ಹೃದಯ'ದ ಪ್ರಕಾರ ಧನುಸ್ಸು 'ಕ್ರಿಯಾಶಕ್ತಿ'. 'ತಂತ್ರರಾಜ'ದ ಪ್ರಕಾರ ಚಾಪವು 'ಮನಸ್ಸು'. ವೇದಾಂತರೀತ್ಯಾ ಚಾಪವು 'ಪಂಚಾಕ್ಷರೀ ಮಾತ್ರ'. ಬಾಣವು 'ಜೀವ,' ಬ್ರಹ್ಮನೇ 'ಲಕ್ಷ್ಯ'. ದೇವಿಯು ತನ್ನ ಉಪಾಸಕರಿಗೆ ಉಪದೇಶಿಸುವಳು 'ಎಲೈ, ಪುತ್ರರಿರಾ, ಶಿವನನ್ನು ಕುರಿತು ಧ್ಯಾನಿಸಿ. ಪಂಚಾಕ್ಷರೀ ಪುನಶ್ಚರಣೆಮಾಡಿ. ನನ್ನ ಪತಿಯಾದ ಪರಶಿವನೇ ನಿಮ್ಮ ಲಕ್ಷ್ಯವಾಗಿರಲಿ. ನೀವು ಅವನಲ್ಲಿ ಐಕ್ಯವಾಗಿ ಮೋಕ್ಷವನ್ನು ಪಡೆಯುತ್ತೀರಿ. ನಾನು ನಿಮ್ಮನ್ನು ನನ್ನ ಪತಿಯ ಬಳಿಗೆ ಕರೆದೊಯ್ಯುತ್ತೇನೆ.'

ಈ ಶ್ಲೋಕದಲ್ಲಿ 'ಶಿನೀಬೀಜ'ವಾದ 'ಬ್ಲೂಂ' ಎಂಬುದು ಅಡಗಿದೆ. 'ಬಾಣ'ದಿಂದ 'ಬ', 'ಕರತಲ'ದಿಂದ 'ಲ', 'ಪುರಮಥಿತು:' ಎಂಬುದರಿಂದ 'ಉ', 'ಆಸ್ತಾಂ' ಎಂಬುದರಿಂದ 'ಬಿಂದು.'

ಸುಧಾಸಿಂಧೋರ್ಮಧ್ಯೇ ಸುರವಿಟಪಿವಾಟೀ ಪರಿವೃತೇ
ಮಣಿದ್ವೀಪೇ ನೀಪೋಪವನವತಿ ಚಿಂತಾಮಣಿಗೃಹೇ ||
ಶಿವಾಕಾರೇ ಮಂಚೇ ಪರಮಶಿವಪರ್ಯಂಕನಿಲಯಾಂ
ಭಜಂತಿ ತ್ವಾಂ ಧನ್ಯಾಃ ಕತಿಚನ ಚಿದಾನಂದಲಹರೀಮ್ || ೮ ||

ಎಲೌ ಚಿದಾನಂದಲಹರೀ, ಸುಧಾಸಾಗರದಿಂದ ಪರಿವೃತವಾದ ಮಣಿದ್ವೀಪದಲ್ಲಿ, ನೀಪೋಪವನಗಳಿಂದ ಪರಿವೃತವಾದ ಚಿಂತಾಮಣಿ ಗೃಹದಲ್ಲಿ, ಶಿವಮೂರ್ತಿಗಳನ್ನೇ ಪಾದಗಳಾಗುಳ್ಳ 'ಪರಶಿವ'ನೆಂಬ ದಿವ್ಯಪರ್ಯಂಕದಲ್ಲಿ ಪವಡಿಸಿರುವ ನಿನ್ನನ್ನು ಭಜಿಸುವ ಕೆಲವರು ಧನ್ಯರು.

ಟೀಕೆ: ಇದು 'ಅನಾಹತಚಕ್ರ'ದಲ್ಲಿ 'ಸ್ಥೂಲಶಕ್ತಿ' ಮೂರ್ತಿಯ ಧ್ಯಾನವನ್ನು ಕುರಿತದ್ದಾಗಿದೆ. 'ಪರಮಶಿವ'ನೆಂಬ ಪರ್ಯಂಕವನ್ನೇ 'ಮಂದಿರ'ವಾಗುಳ್ಳವಳೆಂದು ಅರ್ಥಮಾಡಬಹುದು. ಶಕ್ತಿಯು 'ಪ್ರಣವ'ದಲ್ಲಿ ಪರಮಶಿವಯುಕ್ತಳಾಗಿರುವಳು. 'ಪ್ರಣವ'ದ ಉಪರಿ ಭಾಗದಲ್ಲಿರುವ 'ನಾದ'ರೂಪೀ ಪರ್ಯಂಕದ ಮೇಲೆ 'ಬಿಂದು'ರೂಪೀ ಪರಮಶಿವನು ಪವಡಿ

ಸಿದ್ಧಾನೆ. 'ಬಿಂದು'ವು ಶಿವಶಕ್ತಿಮಯವಾದದ್ದು. 'ಅ, ಉ, ಮ, ನಾದ, ಬಿಂದು' ಎಂಬ ಓಂಕಾರದ ಪಂಚಾವಯವಗಳೂ, ಶ್ರೀ ಚಕ್ರಯಂತ್ರದ ಸ್ವರೂಪವೂ ಇಲ್ಲಿ ನಿರ್ದೇಶಿಸಲ್ಪಟ್ಟಿವೆ. ಚಿಂತಾಮಣಿಯು ಸರ್ವಾಭೀಷ್ಟಪ್ರದಾಯಕವಾದದ್ದು. ಇಲ್ಲಿ ಅನಾಹತಚಕ್ರದ ಅಧೋಭಾಗ ದಲ್ಲಿರುವ 'ಇಷ್ಟದೇವತಾ ಕಮಲ'ವು ವರ್ಣಿತವಾಗಿದೆ.

'ಬಹುರೂಪಾಷ್ಟಕ' ಮತ್ತು 'ಭೈರವಯಾಮಳತಂತ್ರ'ಗಳಲ್ಲಿ ಹೀಗೆ ಉಕ್ತ ವಾಗಿದೆ: 'ಬಿಂದುಸ್ಥಾನವೇ ಸುಧಾಸಾಗರ; ಪಂಚಯೋನಿಗಳೇ ಕಲ್ಪವೃಕ್ಷಗಳು. ಈ ವೃಕ್ಷಗಳ ಮಧ್ಯದಲ್ಲಿರುವ ಚಿಂತಾಮಣಿಕೃತವಾದ ದೇವಿಯ ಮಂದಿರವು 'ನೀಪ' ಅಥವಾ 'ಕದಂಬವೃಕ್ಷ'ಗಳಿಂದ ಪರಿವೃತವಾಗಿದೆ. ಪರಮಶಿವನೇ ಮಹಾ ಪರ್ಯಂಕ (ಮಂಚ); ಆ ಪರ್ಯಂಕದ ಮೇಲಣ 'ಕಶಿಪು' (ಶಯ್ಯಾ) ಸದಾಶಿವ; ಉಪಬರ್ಹಣ (ತಲೆದಿಂಬು) ಮಹೇಶಾನ; ಈಶಾನ; ರುದ್ರ, ಹರಿ, ಬ್ರಹ್ಮ ಅದರ ನಾಲ್ಕು ಪಾದಗಳು; ಇಂದ್ರನೇ ಪತದ್ಗ್ರಹ್ಣ (ಎಂಜಲುಶೊಟ್ಟೆ). ಆ ಮಹಾಕಲ್ಪದ ಮೇಲೆ, ಎಲೈ, ಮಹೇಶಾನಿ, ತ್ರಿಪುರಸುಂದರಿಯು ಶಯನಿಸಿರುವಳು.' ತತ್ಕಾರಣ ವಾಗಿ ಲಲಿತಾದೇವಿಯು 'ಸಹಸ್ರನಾಮ'ದಲ್ಲಿ 'ಪಂಚಬ್ರಹ್ಮಾಸನಸ್ಥಿತಾ' ಎಂದು ಸಂಬೋಧಿಸಲ್ಪಟ್ಟಿದ್ದಾಳೆ.

—ಸಿ. ಬಿ. ಸೀತಾರಾಂ.

(ಸಶೇಷ)

ಪ್ರಾಣದೀದೀಪ . . .

ಯುಗಗಳುರುಳಿದುವೆನಿತೊ ಪವಡಿಸಿರೆ ನೀ ದೊರೆಯೆ
ಯುಗವೆನಿತು ಗತಿಸಿದುವು ಹಾಡುತಿರೆ ನಾನರಿಯೆ!
ನಿನ್ನ ಬರವಂ ಬಯಸಿ ಬಂದ ಬಯಕೆ
ಬರಿಯ ಬಯಕೆಯೆ, ಆಯ್ತು, ಚಿಂತೆ, ನೆನಕೆ!

ಉಸಿರ ತಡೆಗಟ್ಟುವೆನು ಬಾರ ಉಸಿರುಸಿರಿನಲಿ
ಕಲ್ಪನೆಯ ಸೆಜ್ಜೆವನೆ ಸಿಂಗರಿಸಿಹೆ!
ಇನ್ನು ತಡೆಯದೆ ಬಾರ ಎನ್ನ ಮಿದು ಎವೆಗಳಲಿ
ಸ್ವಪ್ನಗಳ ಹಾಸುಗೆಯನನುಗೊಳಿಸಿಹೆ!

ಬಂದು ಹೋಗುವೆಯೇಕೆ ಬಾಳಿನೇರಿಳಿತದಲಿ
ನಿಮಿಷದೊಳಗನಿಮಿಷನೆ ವಿಷವದೇಕೆ?
ನಿಲ್ಲು ಸುಕುಮಾರನೇ ಕಣ್ಣೀರ ಮುತ್ತುಗಳ
ಕರಗಿಸುತ ಪಸರಿಸುವೆ ಪಾದ ತಲಕೆ!

ಜೀವಮಾರ್ಗದ ಧೂಲಿಯಲಿ ನಿನ್ನ ಪದ ಚಿಹ್ನೆ
ಮೂಡಿಹುದು, ಕಾಣುವುದು ಕಷ್ಟವಹುದು:
ನೀ ಬಂದೆಬಹೆಯೆಂದು, ನನ್ನ ಬಗೆಯದನಿಂದು
ಕಣ್ಣೆ ಕಾಡಿಗೆಯೆಂದು ಧರಿಸಲಹುದು!

ಎದೆಹಣತೆಯನುಗೊಳಿಸಿ, ಕರ್ಮಸತ್ವವ ಬೆರಸಿ
ದೇಹದಹಮಿಕೆ ಹೊಸೆದು ಬತ್ತಿಯೆನಿಸಿ
ಭಾವತೈಲವ ತೆಗೆದು ಹಗಲಿರುಳು ಹನಿಹನಿಸಿ
ವಿರಹದುರಿ ನರನರದೊಳುರದಿ ಜನಿಸೆ;

ತಿಳಿಬಾನು ಬುವಿಯಂಚಿನಿಂಚು ಇಂಚುಗಳಲ್ಲಿ
ಬಾಳಕಣಕಣದಲ್ಲಿ ಜೀವಜೀವಗಳಲ್ಲಿ
ಸಂಚಲಿಸಿ ಚಿಂತನೆಯುಮಿಂಚುಸಂಚರಿಸುವೊಲು
ಪ್ರಾಣದೀ ದೀಪವನೆ ಹೊತ್ತಿಸುವೆ ಬಾರ!
ತಿಳಿವಿನೊಳಬೆಳಕಾಗಿ ಮಹಿಮೆಯನು ತೋರ!

ದೇವೇಂದ್ರಕುಮಾರ ಹಕಾರಿ 'ರವಿ'



ಎವರೆಸ್ಟ್ ಆರೋಹಣ

ಹಿಮಾಲಯ ಎಂಬ ಮಾತು ಒಂದು ಪವಿತ್ರ ಭಾವನೆಯನ್ನುಂಟುಮಾಡುತ್ತದೆ. ಪ್ರಪಂಚದಲ್ಲೇ ಅತ್ಯಂತ ಎತ್ತರವಾದ ಶಿಖರಗಳನ್ನುಳ್ಳ ಪರ್ವತಶ್ರೇಣಿ ಇದು. ಒಂದು ಸಾವಿರದ ಐದುನೂರು ಮೈಲಿ ಉದ್ದಕ್ಕೆ ಚಾಚಿ ಭಾರತದ ಉತ್ತರದಲ್ಲಿ ಉನ್ನತವಾಗಿ ಹರಡಿ ನಿಂತಿದೆ. ಇಲ್ಲಿ ಪವಿತ್ರವಾದ ಕ್ಷೇತ್ರಗಳೂ ಆಶ್ರಮಗಳೂ ತುಂಬಿವೆ. ಸಿಂಧು ಗಂಗೆ ಯಮುನೆ ಬ್ರಹ್ಮಪುತ್ರ ಮೊದಲಾದ ಮಹಾ ನದಿಗಳ ಮಾತೃಸ್ಥಾನ ಈ ಹಿಮಾಚಲ. ವಿಶಾಲವಾದ ತಿಳಿನೀರಿನ ಸರೋವರಗಳು, ಚಿತ್ರವಿಚಿತ್ರವಾಗಿ ಕೊರೆದು ದಾರಿಮಾಡಿಕೊಂಡು ಹಾಡುತ್ತ ಹರಿಯುತ್ತಿರುವ ನದಿಗಳು, ಮನಮೋಹಕವಾಗಿ ಭೋರೆಂದು ಧುಮುಕುತ್ತಿರುವ ಜಲಪಾತಗಳು, ಭಯಂಕರವಾದ ಪ್ರಪಾತಗಳು, ಆಶ್ಚರ್ಯಕರವಾಗಿ ನಿಂತಿರುವ ಬಂಡೆಗಳು, ತಲೆಯೆತ್ತಿ ತಮ್ಮ ಔನ್ನತ್ಯವನ್ನು ಪ್ರದರ್ಶಿಸುತ್ತಿರುವ ಶಿಖರಗಳು, ದೇವದಾರು ಮೊದಲಾದ ವೃಕ್ಷ ಸಮೂಹಗಳು ಬಗೆಬಗೆಯ ಬಣ್ಣದ ಪಕ್ಷಿ ಸಂಕುಲಗಳು, ಚಮರಿ ಮೊದಲಾದ ಮೃಗವರ್ಗಗಳು ಕೂಡಿದ ಅರಣ್ಯಪ್ರಪಂಚ, ಇಪ್ಪತ್ತು ಸಾವಿರ ಅಡಿಗೂ ಎತ್ತರದ ನಿರ್ಜೀವಪ್ರದೇಶದಲ್ಲಿ ಎಲ್ಲೆಲ್ಲೂ ಹಿಮತುಂಬಿ ನಿಂತಿರುವ ಧವಳಗಿರಿಗಳು ಇವುಗಳಿಂದ ಕೂಡಿದ ಈ ಹಿಮಜಗತ್ತು ಹೀಗೆ ಪ್ರಕೃತಿ ಸೌಂದರ್ಯದ ತೌರೂರಾಗಿ ಪೂರ್ವಪಶ್ಚಿಮ ದಿಗಂತವನ್ನು ಕೂಡಿಸುವಂತೆ ಸ್ಥಿರವಾಗಿ ನಿಂತಿದೆ. ಈ ಹಿಮಾಲಯ ಪರ್ವತಶ್ರೇಣಿ ನಿಜವಾಗಿಯೂ ಪೃಥ್ವಿಯನ್ನು ಅಳೆಯುವ 'ಮಾನದಂಡ'ವೇ ಸರಿ.

ಹಿಮಾಲಯ ಪರ್ವತಶ್ರೇಣಿಯಲ್ಲಿ ಉನ್ನತವಾದ ಅನೇಕ ಶಿಖರಗಳು ಹಿಮದಿಂದ ಆವೃತವಾಗಿ ಮೇಘವನ್ನು ಕೊರೆದುಕೊಂಡು ಗಗನವನ್ನು ಚುಂಬಿಸುತ್ತ ನಿಂತಿವೆ.

ಎವರೆಸ್ಟ್ ಶಿಖರವನ್ನು ಜಯಿಸಿದ ೧೯೫೩ ನೆಯ ಬ್ರಿಟಿಷ್ ಪರ್ವತಾರೋಹಿಗಳ ತಂಡದ ನಾಯಕ ಜಾರ್ಜ್ ಹಂಟರವರು ಬರೆದಿರುವ *The Ascent of Everest* ಎಂಬ ಪುಸ್ತಕದ ಆಧಾರದ ಮೇಲೆ.

ಅವುಗಳಲ್ಲೆಲ್ಲ ಅತ್ಯುನ್ನತವಾದುದು ಎವರೆಸ್ಟ್ ಶಿಖರ; ಪ್ರಪಂಚದಲ್ಲೇ ಅತ್ಯುನ್ನತ ಶಿಖರವಿದು. ಇದರ ಎತ್ತರ ೨೯,೦೨೮ ಅಡಿ. ಅಂದರೆ ಸುಮಾರು ಐದುವರೆ ಮೈಲಿ.

ಈ ಎವರೆಸ್ಟ್ ಶಿಖರವನ್ನೇರಿ ಅದರ ತುದಿಯಲ್ಲಿ ನಿಂತು ಅದನ್ನು ಜಯಿಸಿದೆ ಎನ್ನಬೇಕೆಂಬ ಮಹತ್ತರ ಆಶೆಯುಳ್ಳ ಸಾಹಸಪ್ರಿಯರಾದ ಪರ್ವತಾರೋಹಿಗಳು ಪ್ರಪಂಚದಲ್ಲಿ ಅನೇಕರಿದ್ದಾರೆ. ಈ ಸಾಹಸದಲ್ಲಿ ತೊಡಗಿದವರಲ್ಲಿ ನಾಲ್ಕು ಮಂದಿ ಬ್ರಿಟಿಷರು, ಒಬ್ಬ ಸ್ವಿಜ್ಜರ್ಲೆಂಡಿನವ, ಒಬ್ಬ ಭಾರತೀಯ, ತುದಿ ಇನ್ನು ಒಂದು ಸಾವಿರ ಅಡಿ ಮಾತ್ರ ಉಳಿದಿದೆ ಎನ್ನುವ ವರೆಗೂ ತಲುಪಿ ಹಿಂದಿರುಗಿದರು. ಕೆಲವರು ಈ ಸಾಧನೆಯಲ್ಲಿ ಬಲಿದಾನವಾಗಿದ್ದಾರೆ. ಮೆಲ್ಲೋರಿ ಮತ್ತು ಇರ್ವಿನ್ನರ ಬಲಿದಾನದ ಕಥೆ ತುಂಬಾ ಕರುಣಾಜನಕವಾಗಿದೆ. ೧೯೨೪ ರಲ್ಲಿ ಈ ಇಬ್ಬರು ವೀರರು ಶಿಖರದ ತುದಿ ಮುಟ್ಟಲು ಇನ್ನು ಸಾವಿರ ಅಡಿ ಮಾತ್ರ ಉಳಿದಿದೆ ಎನ್ನುವ ವರೆಗೆ ಏರಿ ಅಲ್ಲಿಂದ ಕಾಣೆಯಾದರು.

ಪ್ರಯತ್ನದ ಮೇಲೆ ಪ್ರಯತ್ನ ನಡೆದರೂ ಗುರಿ ಮುಟ್ಟಲಾಗಲಿಲ್ಲವಾಗಿ ಈ ಎವರೆಸ್ಟ್ ಶಿಖರ ಜಯಿಸಲಾರದುದೆಂಬ ಒಂದು ಶಾಪವಿರಬೇಕು ಎಂಬ ಭಾವನೆ ಕೂಡ ಜನರಲ್ಲಿ ಬೆಳೆದಿತ್ತು. ಆದರೆ ನ್ಯೂಜಿಲೆಂಡಿನ ಎಡ್ಮಂಡ್ ಹಿಲ್ಲೋರಿ ಮತ್ತು ಭಾರತದ ಟೆನ್ಜಿಂಗ್ (ಟೆನ್ಜಿಂಗ್‌ನ ಜನ್ಮಭೂಮಿ ನೇಪಾಳ) ೧೯೫೩ ನೆಯ ಮೇ ೨೯ ನೆಯ ದಿನ ಎವರೆಸ್ಟ್ ಶಿಖರದ ತುದಿ ಮುಟ್ಟಿ ಜಯಶೀಲರಾದರು. ಈ ಭಾಗ್ಯ ಈ ಇಬ್ಬರು



ಎಡ್ಮಂಡ್ ಹಿಲ್ಲೋರಿ



ಸರ್ದಾರ್ ಟೆನ್ಜಿಂಗ್

ವೀರರ ಪಾಲಿಗೆ ಬಂತು. ಆದರೆ ನಿಜವಾಗಿಯೂ ಈ ಜಯದ ಕೀರ್ತಿ ಈ ಮಹದುದ್ದೇಶ ಸಾಧನೆಗೆ ಮೊದಲಿಂದ ಇದುವರೆಗೆ ಸಾಹಸಪಟ್ಟ ಎಲ್ಲ ಸಾಧಕರಿಗೂ ಸಲ್ಲತಕ್ಕದ್ದಾಗಿದೆ.

ಎವರೆಸ್ಟ್ ಜಯಿಸಿದ ಸಾಹಸದ ಕಥೆ ಬಹು ಸ್ವಾರಸ್ಯವಾಗಿದೆ. ಈ ಸಾಹಸ ಕಾರ್ಯ ಪ್ರಾರಂಭವಾದದ್ದು ೧೯೨೧ ರಲ್ಲಿ. ಅಲ್ಲಿಂದ ಇದುವರೆಗೆ ಹನ್ನೊಂದಕ್ಕೂ ಕಡಿಮೆ ಇಲ್ಲದ ಪರ್ವತಾರೋಹಿಗಳ ತಂಡಗಳು ಈ ಕಾರ್ಯವನ್ನು ಕೈಗೊಂಡವು. ಅವುಗಳಲ್ಲಿ ಒಂಬತ್ತು ಬ್ರಿಟಿಷ್ ತಂಡಗಳು. ಒಂದು ತಂಡದವರು ಗಳಿಸಿದ ಅನುಭವದ ಪ್ರಯೋಜನವನ್ನು ಮತ್ತೊಂದು ತಂಡದವರು ಪಡೆದು ಸಾಧನೆ ನಡಸಿದರು. ಒಂದು ಸಾಮ್ಯ ಕೊಡಬಹುದಾದರೆ, ರಿಲೇ ಓಟದಂತೆ ಎಂದು ಹೇಳಬಹುದು. ಒಬ್ಬ ತಲುಪಿದ ದೂರದಿಂದ ಮತ್ತೊಬ್ಬ ಮುಂದೆ ಸಾಗುತ್ತ ಕೊನೆಯ ಹಂತದಲ್ಲಿದ್ದವನು ಮಾತ್ರ ಗುರಿಮುಟ್ಟುವಂತೆ ಹಿಂದೆ ನಡೆದ ಪ್ರಯತ್ನಗಳ ಅನುಭವದ ಆಧಾರದ ಮೇಲೆ ೧೯೫೩ ನೆಯ ಬ್ರಿಟಿಷ್ ತಂಡದವರು ಜಯಗಳಿಸಿದರು.

ಹೌದು, ಯಾವ ಪುರುಷಾರ್ಥಕ್ಕೆ ಈ ಅಗಾಧ ಸಾಹಸ? ಈ ಜಯಪಡೆದು ಗಳಿಸ ಬಹುದಾದರೂ ಏನು? ಪ್ರಪಂಚದ ಅತ್ಯುನ್ನತ ಶಿಖರವನ್ನು ಮುಟ್ಟಿ ನಿಂತರೆ ಒದಗುವ ಪ್ರಯೋಜನವೇನು? ಬರಿಯ ಆರ್ಥಿಕಸಂಪತ್ತಿನ ದೃಷ್ಟಿಯಿಂದ ನೋಡಿದರೆ ಯಾವ ಪ್ರಯೋಜನವೂ ಕಾಣದಿರಬಹುದು. ಆದರೆ ದುಸ್ಸಾಧ್ಯ, ಅಸಾಧ್ಯವೆಂಬುದನ್ನು ಸಾಧಿಸುವ ಮಹತ್ವಾಕಾಂಕ್ಷೆಯೇ ಮಂಗನಿಂದ ಮಾನವನಾಗುವಂತೆ ಮಾಡಿತು. ಆ ಮಹತ್ವಾಕಾಂಕ್ಷೆಯೇ ಮಾನವನನ್ನು ಇನ್ನೂ ಉನ್ನತಿಗೆ ಕೊಂಡುಹೋಗುವ ಸ್ಫೂರ್ತಿಶಕ್ತಿ. ಈ ದೃಷ್ಟಿಯಿಂದ ನೋಡಿದರೆ ಈ ಸಾಹಸದ ಮಹತ್ವ ಗೊತ್ತಾಗುತ್ತದೆ. ಈ ಪ್ರಶ್ನೆಗೆ ಈ ಸಾಹಸದಲ್ಲಿ ಬಲಿದಾನವಾದ ಮೆಲ್ಲೋರಿ ಹೇಳಿದ "ಏಕೆಂದರೆ ಅದು ಅಲ್ಲಿರುವುದರಿಂದ" ಎಂಬ ಸ್ವಾರಸ್ಯವಾದ ಮಾತು ಸಮಂಜಸವಾಗಿದೆ. ಮಾನವನಿಗೆ ಸವಾಲು ಹಾಕುತ್ತ ನಿಂತಿರುವುದರಿಂದಲೇ ಮನುಷ್ಯ ಎವರೆಸ್ಟನ್ನು ಗೆಲ್ಲಲು ಪ್ರಯತ್ನಿಸಿ ಜಯಗಳಿಸಿದ.

ಇನ್ನು ಆರೋಹಣದ ಕಥೆ. ಹಿಮಾಲಯದ ಶಿಖರಗಳನ್ನು ಹತ್ತುವುದರಲ್ಲಿ ನಾನಾ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ನಾನಾ ಕಷ್ಟಕಾರ್ಪಣ್ಯಗಳನ್ನು ಅನುಭವಿಸಬೇಕಾಗುತ್ತದೆ. ಆ ಎತ್ತರವನ್ನು ಏರಲು ಅನುಕೂಲವಾದ ಸಲಕರಣೆಗಳನ್ನು ಒದಗಿಸಿಕೊಳ್ಳುವುದು ಸುಲಭಸಾಧ್ಯವಾದ ಕೆಲಸವಲ್ಲ. ಎತ್ತರ ಎತ್ತರಕ್ಕೆ ಹೋದಂತೆ ವಾಯು ತೆಳುವಾಗುವುದರಿಂದ ಜೀವಿಸಲು ಬೇಕಾದ ಆಮ್ಲಜನಕ ಕಡಿಮೆಯಾಗಿ ಉಸಿರಾಡಲು ಕಷ್ಟವಾಗುತ್ತದೆ. ಗಾಳಿಯಲ್ಲಿ ಆಮ್ಲಜನಕ ಸಾಕಾದಷ್ಟು ಒದಗದಿದ್ದಲ್ಲಿ ಶಕ್ತಿಯುಡುಗಿ ಆಯಾಸ ಕಾಣಿಸಿಕೊಳ್ಳುತ್ತದೆ. ಆ ಸ್ಥಿತಿಯಲ್ಲಿ ಒಂದು ಹೆಜ್ಜೆ ಮುಂದಿ

ಡಲೂ ಅಪಾರ ಕಷ್ಟ ಕಾಣುತ್ತದೆ. ಇದರ ಜೊತೆಗೆ ಹವಾಗುಣದ ಹಾವಳಿ ಅಲ್ಲದೆ ಹಿಮವನ್ನು ತೂರುವ ಬಿರುಗಾಳಿ, ಸಹಿಸಲಾಗದ ಚಳಿ, ಗೊತ್ತಾಗದಂತೆಯೆ ಜಾರುವ ಹಿಮರಾಶಿ. ಕಿಂಚಿತ್ ತಪ್ಪಿದರೂ ಪ್ರಾಣಾಪಾಯಕರವಾದ ನಿರ್ಜನ ನಿರ್ಜೀವ ಪ್ರದೇಶ. ಈ ಸನ್ನಿವೇಶದಲ್ಲಿ ತನ್ನ ದೇಹದ ಜೊತೆಗೆ ತನಗೆ ಬೇಕಾದ ಆಹಾರ ಸಾಮಗ್ರಿಗಳನ್ನೂ ಆಮ್ಲಜನಕದ ಸಲಕರಣೆಗಳನ್ನೂ ಬೆನ್ನಮೇಲೆ ಹೊತ್ತು ಹೆಜ್ಜೆಯ ಮೇಲೆ ಹೆಜ್ಜೆಯಿಟ್ಟು ಮುಂದೆಮುಂದೆ ಸಾಗಬೇಕು. ಈ ಸಾಹಸದಲ್ಲಿ ಶ್ರದ್ಧಾಸಕ್ತಿ ಉಳ್ಳವರಿಗೆ ದೃಢಸಂಕಲ್ಪ ಹೊತ್ತವರಿಗೆ ಮಾತ್ರ ಈ ಕಷ್ಟಗಳನ್ನು ಸಹಿಸಲು ಸಾಧ್ಯ.

ಎವರೆಸ್ಟ್ ಶಿಖರ ನೇಪಾಳ ರಾಜ್ಯದ ಎಲ್ಲೆಕಟ್ಟಿನಲ್ಲಿದೆ. ಪರ್ವತಾರೋಹಿಗಳು ತಂಡವಾದ ಮೇಲೆ ತಂಡವಾಗಿ ಈ ಶಿಖರದ ತುದಿ ಮುಟ್ಟಲು ಟಿಬೆಟ್ ಮಾರ್ಗವಾಗಿ ಉತ್ತರದಿಕ್ಕಿನಿಂದ ಪ್ರಯತ್ನಿಸಿದರು. ಆ ದಾರಿ ದುಸ್ಸಾಧ್ಯವೆಂಬುದು ಮನದಟ್ಟಾದಾಗ ೧೯೫೧ ರಲ್ಲಿ ಒಂದು ತಂಡ ಎರಿಕ್ ಷಿಪ್ಟನ್ ಎನ್ನುವವರ ನೇತೃತ್ವದಲ್ಲಿ ಹೊಸ ದಾರಿಯನ್ನು ಕಂಡುಹಿಡಿಯಲು ಹೊರಟಿತು. ಹಲವು ವಿಧದಲ್ಲಿ ಆಗುಹೋಗನ್ನು ಪರಾಂಬರಿಸಿ ದಕ್ಷಿಣದಿಕ್ಕಿನಿಂದ ಒಂದು ದಾರಿಯನ್ನು ಸೂಚಿಸಿತು. ಹಿಂದಿನ ಅನುಭವವನ್ನು ಅಳೆದು ನೋಡಿ ಈ ದಾರಿಯೇ ಉತ್ತಮವಾದುದು ಎಂದು ಕೂಡ ಆ ತಂಡ ನಿರ್ಧಾರಕ್ಕೆ ಬಂತು. ಈ ಹೊಸದಾರಿಯ ಸೂಚನೆ ಪ್ರಪಂಚದ ಪರ್ವತಾರೋಹಿಗಳಲ್ಲಿ ಒಂದು ಭರವಸೆಯನ್ನು ಉಂಟುಮಾಡಿತು. ಈ ಸಲಹೆಯನ್ನು ಕೂಡಲೆ ಉಪಯೋಗಿಸಿಕೊಂಡದ್ದು ಸ್ವಿಡ್ಜರ್ಲೆಂಡಿನ ಪರ್ವತಾರೋಹಿಗಳ ತಂಡ. ಈ ತಂಡಕ್ಕೆ ಸೇರಿದ ಲ್ಯಾಂಬರ್ಡ್ ಮತ್ತು ಟೆನ್‌ಜಿಂಗ್, ಅದುವರೆಗೆ ಉತ್ತರದಿಕ್ಕಿನಿಂದ ಎಷ್ಟು ಎತ್ತರ ಸಾಧಿಸಲಾಗಿತ್ತೊ ಅಷ್ಟೇ ಎತ್ತರವನ್ನು ಅಂದರೆ ೨೮,೦೦೦ ಅಡಿ ಮುಟ್ಟಿ ಮುಂದೆ ಸಾಗಲಾರದೆ ಹಿಂದಿರುಗಿದರು. ಈ ಅನುಭವದ ಪ್ರಯೋಜನ ಪಡೆದು ೧೯೫೩ ರಲ್ಲಿ ಬ್ರಿಟಿಷ್ ತಂಡ ಎವರೆಸ್ಟ್ ಶಿಖರ ಜಯಿಸಲು ಹೊರಟಿತು.

ಈ ಅಗಾಧವಾದ ಕಾರ್ಯಕ್ಕೆ ಸಲಕರಣೆಗಳನ್ನು ಒದಗಿಸಿಕೊಳ್ಳುವುದು ಸುಲಭವಾದ ಕೆಲಸವಲ್ಲ. ಜೊತೆಗೆ ಸರಿಯಾದ ಜನರನ್ನು ಒದಗಿಸಿಕೊಳ್ಳುವುದೂ ಸುಲಭವಲ್ಲ. ಎಲ್ಲ ವಿಧದಲ್ಲಿಯೂ ಪ್ರಪಂಚದ ಇತರ ಭಾಗದ ಸಂಬಂಧವೇ ಹರಿದುಹೋದ ಆ ದೂರದ ನಿರ್ಜೀವಪ್ರದೇಶದಲ್ಲಿ, ಕಠಿಣವಾದ ಸನ್ನಿವೇಶದಲ್ಲಿ, ಅಸಹ್ಯವಾದ ವಾತಾವರಣದಲ್ಲಿ ಮುಖ ಮುರಿಯದೆ ಸಾಧನೆ ನಡಸಬಲ್ಲ ಆರೋಗ್ಯದೃಢಕಾಯರಾದ ಜನ ಬೇಕು. ತಂಡದವರೆಲ್ಲರೂ ಒಮ್ಮುಖವಾಗಿದ್ದುಕೊಂಡು ಒಬ್ಬರು ಮತ್ತೊಬ್ಬರಿಗೆ ಸಹಕಾರಿಯಾಗಿ ಉತ್ತೇಜನಕಾರಿಯಾಗಿದ್ದುಕೊಂಡು ಶ್ರದ್ಧಾಸಕ್ತಿಯಿಂದ ಕೆಲಸ ಸಾಗಿಸುವುದು ಅನಿವಾರ್ಯ. ಬೇಕಾದ ಸಾಮಾನು ಸಲಕರಣೆಗಳು ವಿಶೇಷಗುಣ ಉಳ್ಳವು

ಗಳಾಗಿರಬೇಕು. ಸಾಮಾನುಗಳನ್ನು ಆರಿಸುವಾಗ ಇರಬೇಕಾದ ದೂರದೃಷ್ಟಿ ಮತ್ತು ಜಾಣತನ ಅಪಾರ. ಒದಗಿಸಿಕೊಂಡ ಸಾಮಾನುಗಳನ್ನು ಯಾವ ಸಂಚಾರ ಸೌಲಭ್ಯವೂ ಇಲ್ಲದ ಆ ಬೆಟ್ಟಪ್ರದೇಶದಲ್ಲಿ ಎತ್ತರ ಎತ್ತರಕ್ಕೆ ಸುಗಮವಾಗಿ ಸಾಗಿಸಲು ಅನುಕೂಲವಾಗಿ ಅಳವಡಿಸಿ ಗಂಟುಕಟ್ಟಬೇಕು. ಈ ಎಲ್ಲ ಸಲಕರಣೆಗಳು ಸಮರ್ಪಕವಾಗಿ ಆದರೆ ಮಾತ್ರ ಜಯ ಸಿಗುವುದೆಂಬ ಭರವಸೆ ಮೂಡುತ್ತದೆ.

ಸುಮಾರು ೩೦ ವರ್ಷದಿಂದಲೂ ಎವರೆಸ್ಟ್ ಶಿಖರವನ್ನು ಜಯಿಸಲು ಕಾರ್ಯ ನಡಸುತ್ತಿದ್ದ ಸಂಯುಕ್ತ ಹಿಮಾಲಯ ಸಮಿತಿ ಮತ್ತೆ ಈ ಕಾರ್ಯವನ್ನು ಕೈಗೊಂಡಿತು. ಬ್ರಿಟನ್ನಿನ ನುರಿತ ಪರ್ವತಾರೋಹಿ ಕರ್ನಲ್ ಜಾರ್ಜ್ ಹಂಟ್ ಅವರನ್ನು ನಾಯಕರನ್ನಾಗಿ ಈ ಕಾರ್ಯ ನಡಸಲು ನೇಮಿಸಿತು. ಇವರ ನೇತೃತ್ವದಲ್ಲಿ ಎಲ್ಲ ಸಿದ್ಧತೆ ನಡೆಯಿತು. ಈ ಅಗಾಧವಾದ ಸಾಹಸಕ್ಕೆ ವಯಸ್ಸಿನಲ್ಲಿ, ಮನೋಭಾವನೆಯಲ್ಲಿ, ಶ್ರದ್ಧೆಯಲ್ಲಿ, ಆರೋಗ್ಯದಲ್ಲಿ, ಅನುಭವದಲ್ಲಿ ಉತ್ತಮರೆನಿಸಿಕೊಂಡವರನ್ನು ಆರಿಸಿಕೊಳ್ಳಲಾಯಿತು. ಪರಿಣತರ ಸಲಹೆ ಮತ್ತು ಸಹಕಾರದಿಂದ ಆಹಾರ ವಸ್ತುಗಳನ್ನೂ ಆಮ್ಲಜನಕ ಸಲಕರಣೆಗಳನ್ನೂ ಮತ್ತಿತರ ಸಾಮಾನುಗಳನ್ನೂ ಹೊಂದಿಸಿಕೊಳ್ಳಲಾಯಿತು. ತಗಲುವ ವೆಚ್ಚವೆಲ್ಲ ಬ್ರಿಟನ್ನಿನ 'ರಾಯಲ್ ಜಿಯಾಗ್ರಫಿಕಲ್ ಸೊಸೈಟಿ' ಸಂಸ್ಥೆಯಿಂದಲೂ 'ಟೈಮ್ಸ್ ಪತ್ರಿಕೆ' ಕಾರ್ಯಾಲಯದಿಂದಲೂ ಹಲವರು ವ್ಯಕ್ತಿಗಳಿಂದಲೂ ಒದಗಿತು.



ಕರ್ನಲ್ ಜಾನ್ ಹಂಟ್


ಹಿಮಾಲಯದ ಆರೋಹಣಕಾರ್ಯ ಪ್ರಾರಂಭಿಸುವ ಮೊದಲು ಸಲಕರಣೆಗಳ ಯೋಗ್ಯತೆಯನ್ನು ದೃಢಪಡಿಸಿಕೊಳ್ಳುವ ಸಲುವಾಗಿ ಆಲ್ಪ್ಸ್ ಬೆಟ್ಟಗಳಲ್ಲಿ ಪ್ರಯೋಗ ನಡೆಸಲಾಯಿತು. ಇಷ್ಟೆಲ್ಲ ಮುಗಿಸಿಕೊಂಡು ೧೯೫೩ ಫೆಬ್ರವರಿ ೩ ನೆಯ ದಿನ ತಂಡವು ಹಡಗಿನಲ್ಲಿ ಇಂಗ್ಲೆಂಡನ್ನು ಬಿಟ್ಟು ೨೮ ನೆಯ ದಿನ ಬೊಂಬಾಯಿಯನ್ನು ತಲಪಿತು. ಆ ತಂಡದ ಇಬ್ಬರು ಮುಂದಾಗಿ ನೇಪಾಳದ ರಾಜಧಾನಿ ಖಟ್ಮಂಡುವಿಗೆ ವಿಮಾನದಲ್ಲಿ ಹೋಗಿ ಸೇರಿದ್ದರು. ತಂಡದವರೆಲ್ಲ ಮಾರ್ಚಿ ೮ ನೆಯ ದಿನ ಖಟ್ಮಂಡುವಿನಲ್ಲಿ ಸೇರಿದರು. ಪರ್ವತಾರೋಹಿಗಳಿಗೆ ಸಲಹೆ ಸಹಕಾರ ನೀಡುತ್ತಿರುವ ಕಲ್ಕತ್ತದ 'ಹಿಮಾಲಯನ್ ಕ್ಲಬ್' ಈ ತಂಡದ ಸಹಾಯಕ್ಕೆಂದು ಇಪ್ಪತ್ತು ಮಂದಿ ಷರ್ಪ

ಜನರನ್ನು ಕಳುಹಿಸಿತು. ಈ ಜನರು ಖಟ್ಮಂಡುವಿಗೆ ಬಂದು ತಂಡವನ್ನು ಸೇರಿದರು. ಈ ಷರ್ಪ ಜನರ ಜೊತೆಯಲ್ಲೇ ಸರ್ದಾರ್ ಟೆನ್‌ಜಿಂಗ್ ಬಂದದ್ದು. ಟೆನ್‌ಜಿಂಗ್ ಇದುವರೆಗಾಗಲೆ ಎವರೆಸ್ಟ್ ಶಿಖರ ಹತ್ತಲು ಐದು ಸಾರಿ ಪ್ರಯತ್ನಿಸಿದ್ದರು. ಷರ್ಪ ಜನರು ಟಿಬೆಟ್ ಬುಡಕಟ್ಟಿಗೆ ಸೇರಿದವರು. ಅವರ ಜನ್ಮಸ್ಥಳ ನೇಪಾಳದಲ್ಲಿನ ಸೋಲಾಕುಂಬ ಪ್ರದೇಶ. ಅವರಲ್ಲನೇಕರು ಭಾರತದ ಡಾರ್ಜಲಿಂಗ್ ಪ್ರದೇಶಕ್ಕೆ ಬಂದು ನೆಲಸಿದ್ದಾರೆ. ಕುಳ್ಳು ಜನರಾದರೂ ಹಸನ್ಮುಖಿಗಳಾದ ಧೈರ್ಯಶಾಲಿಗಳು. ಇವರ ಮುಖ್ಯವೃತ್ತಿ ಪರ್ವತಾರೋಹಿಗಳಿಗೆ ಸಹಾಯಕರಾಗಿ ನಿಲ್ಲುವುದು.

ಈ ಪರ್ವತಾರೋಹಿ ತಂಡ ಮಾರ್ಚಿ ೧೦-೧೧ ರಲ್ಲಿ ಖಟ್ಮಂಡುವನ್ನು ಬಿಟ್ಟು ೩೫೦ ಕೂಲಿಗಳಿಂದ ತಮ್ಮ ಸಾಮಾನನ್ನು ಸಾಗಿಸಿಕೊಂಡು ಪೂರ್ವಾಭಿಮುಖವಾಗಿ ಹೊರಟಿತು. ಹಿಮಾಲಯದ ಎತ್ತರದಿಂದ, ಹಿಮ ಕರಗಿ ನೀರಿನಿಂದ ತುಂಬಿ ಜಾರಿ ಬರುತ್ತಿದ್ದ ಸಣ್ಣ ಪುಟ್ಟ ಮತ್ತು ದೊಡ್ಡ ನದಿಗಳನ್ನು ನಾನಾ ಉಪಾಯಗಳಿಂದ ದಾಟಿಕೊಂಡು ಕಣಿವೆಗಳನ್ನು ಇಳಿದು ಕಾಡುಗಳಲ್ಲಿ ತೂರಿ ಗುಡ್ಡಗಳನ್ನು ಹಾರಿ ಪ್ರಯಾಣ ನಡೆಯಿತು. ನೇಪಾಲ ಸುಂದರವಾದ ನಾಡು. ಅಲ್ಲಲ್ಲೆ ಗುಡಿಸಲು ಕಟ್ಟಿಕೊಂಡು ವ್ಯವಸಾಯ ಮಾಡಿ ಆಲೂಗೆಡ್ಡೆ ಬೆಳೆದು ಜೀವಿಸುತ್ತಿರುವ ಜನ. ಜೊತೆಗೆ ಬಣ್ಣಬಣ್ಣದ ಉಡುಪುತೊಟ್ಟ ಮುಗುಳ್ನಗೆಯ ಮುಗ್ಧೆಯರು ಮತ್ತು ಮುದ್ದಾದ ಹಾಲುಗೆನ್ನೆಯ ಹಸುಳೆಗಳು. ಈ ಸೌಂದರ್ಯವನ್ನು ಸವಿಯುತ್ತ ಪ್ರಯಾಣ ಮುಂದೆ ಮುಂದೆ ಸಾಗಿತು. ದೂರದಲ್ಲಿ ಮೋಡದಂತೆ ಮಸುಕಾಗಿ ಕಾಣುತ್ತಿದ್ದ ಹಿಮತುಂಬಿದ ಶಿಖರಗಳು ಹತ್ತಿರ ಹತ್ತಿರ ಹೋದಂತೆ ಭವ್ಯವಾಗಿ, ಸುಂದರವಾಗಿ ಕಂಗೊಳಿಸಿದವು. ಈ ರೀತಿ ಒಂದು ವಾರದ ಪ್ರಯಾಣ ಸಾಗಿದ ಮೇಲೆ ದೂರದಲ್ಲಿ, ತಪ್ಪಲು ನೆರೆ ಶಿಖರಗಳಿಂದ ಮರೆಯಾಗಿದ್ದು ತಲೆಯೆತ್ತಿ ನಿಂತಿರುವ, ಎವರೆಸ್ಟ್ ಶಿಖರ ಭವ್ಯವಾಗಿ ಗೋಚರವಾಯಿತು. ಈ ದರ್ಶನ ಆ ಪರ್ವತಾರೋಹಿಗಳಲ್ಲಿ ರೋಮಾಂಚನವನ್ನೂ ಸ್ಫೂರ್ತಿಯನ್ನೂ ಉಂಟುಮಾಡಿತು. ಮುಂದೆ ಪ್ರಯಾಣ ಬೆಳೆದು ಮಾರ್ಚಿ ೨೬ ನೆಯ ದಿನ ತ್ಯಾಂಗಬಾಕೆಗೆ ಮುಟ್ಟಿತು.

ತ್ಯಾಂಗಬಾಕೆ ಆ ಪ್ರಾಂತದ ಬೌದ್ಧಧರ್ಮ ಕ್ಷೇತ್ರ. ಅಲ್ಲಿ ಒಂದು ಬೌದ್ಧಮಠ ಇದೆ. ಸುತ್ತ ಹಲವಾರು ಶಿಖರಗಳು ಬಳಸಿರುವ ೧೩,೦೦೦ ಅಡಿ ಎತ್ತರದ ಸುಂದರ ಪ್ರದೇಶದಲ್ಲಿ ಈ ಕ್ಷೇತ್ರವಿದೆ. ಇಲ್ಲಿ ತಂಡದವರು ಮೂರು ದಿನ ವಿಶ್ರಾಂತಿ ಪಡೆದರು. ಆ ಕಾಲದಲ್ಲಿ ಮೂರು ವಾರದ ಹಿಮಾಲಯ ಆರೋಹಣ ಶಿಕ್ಷಣಕ್ಕಾಗಿ ತಯಾರು ಮಾಡಿಕೊಂಡರು. ಮೂರು ಗುಂಪಾಗಿ ವಿಂಗಡಿಸಿಕೊಂಡು ಎವರೆಸ್ಟ್‌ನ ಆರೋಹಣಕ್ಕೆ ಉಪಯೋಗಿಸುವ ಸಾಮಾನುಗಳನ್ನು ಅದರಲ್ಲೂ ಮುಖ್ಯವಾಗಿ ಆಮ್ಲಜನಕದ ಸಲ

ಕರಣೆಗಳ ಉಪಯೋಗವನ್ನು ಪರೀಕ್ಷಿಸುವ ಉದ್ದೇಶದಿಂದ ಮತ್ತು ಎತ್ತರ ಎತ್ತರ ಹೋದಂತೆ ಆ ಸನ್ನಿವೇಶಕ್ಕೆ ದೇಹಸ್ಥಿತಿಯನ್ನೂ ಹೊಂದಿಸಿಕೊಳ್ಳುವ ಉದ್ದೇಶದಿಂದ ಪರ್ವತಾರೋಹಿಗಳು ಹಿಮಾಲಯ ಪ್ರದೇಶದಲ್ಲಿ ಹೊರಟು ೨೦,೦೦೦ ಅಡಿಗಳ ಎತ್ತರದ ವರೆಗೂ ಹತ್ತಿ, ಅನುಭವಗಳಿಸಿ, ಸುರಕ್ಷಿತವಾಗಿ ಏಪ್ರಿಲ್ ೫ ರಂದು ಹಿಂತಿರುಗಿ




ಪ್ರಪಾತವನ್ನು ಲೋಹದೇಣಿಯ ಸಹಾಯದಿಂದ ದಾಟುತ್ತಿರುವುದು

ದರು. ಆ ರಾತ್ರಿ ದಿಮ್ಮಿಗಳನ್ನು ಒಟ್ಟಿ ಹತ್ತಿಸಿದ ಜ್ವಾಲೆಯ ಸುತ್ತ ಕುಳಿತು ಆ ಶಾಖವನ್ನು ಅನುಭವಿಸುತ್ತ, ಆಕಾಶದಲ್ಲಿ ಮಿನುಗುತ್ತಿರುವ ನಕ್ಷತ್ರಗಳನ್ನು ಈಕ್ಷಿಸುತ್ತ, ತಮ್ಮ ಜಯದ ಕನಸು ಕಾಣುತ್ತ ಆ ಜನರು ಜಯ ಸಿಕ್ಕೇಸಿಗುವುದೆಂದು ಭರವಸೆಯನ್ನು ಹೊಂದಿದರು.

ಎವರೆಸ್ಟ್, ಲೋಟ್ಸೆ ಮತ್ತು ನುಪ್ಸೆ ಶಿಖರಗಳು ಒಂದು ಗುಂಪಾದಂತಿವೆ. ಈ ಮಧ್ಯೆ ಒಂದು ಕಣಿವೆ ಇದೆ. ಇದನ್ನು ಪಶ್ಚಿಮ ಕಣಿವೆ ಎಂದು ಕರೆಯುತ್ತಾರೆ. ಈ ಕಣಿವೆ ಎವರೆಸ್ಟ್ ತಪ್ಪಲಿನ ವರೆಗೂ ಹಬ್ಬಿದೆ. ಇದರಲ್ಲಿ ಸಾಗುವುದು ಅತಿ ಕಷ್ಟ. ಈ ಪರ್ವತಾರೋಹಣದ ಮಾರ್ಗವನ್ನು ಮನದಟ್ಟುಮಾಡಲು ಮುಂದಿನ ಚಿತ್ರ ಕೊಟ್ಟಿದೆ.

ಈ ಚಿತ್ರದಲ್ಲಿ 'ಹಿಮಬೀಳು' ಎಂದು ಇರುವಲ್ಲಿ ಕಷ್ಟದ ಪ್ರಾರಂಭ. ಪಶ್ಚಿಮ ಕಣಿವೆ ಎಂದು ಇರುವಲ್ಲಿಂದ ಕೆಳಗೆ ೩,೦೦೦ ಅಡಿ ಎತ್ತರದ ಒಂದೇ ಬೀಳು. ಹಿಮದಿಂದ ಆವೃತವಾದ ಈ ದಾರಿಯಲ್ಲಿ ಗೊತ್ತಾಗದಂತೆಯೇ ಹಿಮದ ರಾಶಿ ಜಾರುತ್ತಿರುತ್ತದೆ. ಹಿಮಬಂಡೆ ಒಡೆದು ಮೃತ್ಯುವಿನ ಬಾಯಿ ತೆರೆದಂತೆ ಬಿರುಕುಬಿಟ್ಟು ನಿಲ್ಲುವು



ಎವರೆಸ್ಟ್ ಆರೋಹಣದ ದಾರಿ

ದುಂಟು. ಮೇಗಳಿಂದ ಅಗಾಧವಾದ ಹಿರಿಯ ಪ್ರಮಾಣದ ಜಾರಿ ಉರುಳುವುದೂ ಉಂಟು. ಅನಿರೀಕ್ಷಿತವಾಗಿ ಒದಗುವ ಈ ಮೃತ್ಯುಸ್ವರೂಪ ಕಂಟಕಗಳಿಗೆ ಬಲಿಯಾಗದೆ ತಪ್ಪಿಸಿಕೊಂಡು ಮುಂದುವರಿಯುವುದೆಂದರೆ ಅದೃಷ್ಟದ ಬಲವೂ ಇರಬೇಕು. ಹಿಮಬೀಳನ್ನು ಹತ್ತಿ ಪಶ್ಚಿಮಕಣಿವೆ ತಲುಪಿದರೂ ಇನ್ನೂ ಕಷ್ಟತಮವಾದ ಶಿಖರಗಳು ಅಡ್ಡ ನಿಲ್ಲುತ್ತವೆ. ಮೂರು ಮೈಲಿ ಅಂತರದಲ್ಲಿ ಎವರೆಸ್ಟ್‌ನ ನೆರೆ ಶಿಖರವಾದ ಲೋಟ್ಸೆಯನ್ನು ಹತ್ತಿದರೇ ಎವರೆಸ್ಟನ್ನು ಸಮೀಪಿಸಲು ಅನುಕೂಲವಾದ ದಕ್ಷಿಣ ಕಣಿವೆದಾರಿಯನ್ನು ತಲುಪಲು ಸಾಧ್ಯ. ಈ ಎತ್ತರ ಸಾಮಾನ್ಯವಾಗೇನಿಲ್ಲ, ೨೭,೮೯೦ ಅಡಿ; ಪಶ್ಚಿಮ ಕಣಿವೆಯಿಂದ ಸುಮಾರು ಒಂದು ಮೈಲಿ ಎತ್ತರ. ಈ ಸ್ಥಳದಿಂದ ಎವರೆಸ್ಟ್ ಶಿಖರದ

ತುದಿ ಇನ್ನೂ ೩,೦೦೦ ಅಡಿ ಎತ್ತರದಲ್ಲುಳಿಯುತ್ತದೆ. ಈ ಎತ್ತರದಲ್ಲಿ ಅತಿ ದಾರುಣ ವಾದ ಸನ್ನಿವೇಶ, ಅಸಹ್ಯವಾದ ವಾತಾವರಣ, ಬಿರುಗಾಳಿ, ಈ ಹಾವಳಿಯನ್ನೆಲ್ಲ ಸಹಿಸ ಬೇಕು. ಮನುಷ್ಯ ಇಲ್ಲಿ ಬದುಕಬೇಕಾದರೆ, ಚೇತನ ಉಳಿಸಿಕೊಳ್ಳಬೇಕಾದರೆ ತಾನು ಉಟ್ಟಿರುವ ಉಡುಪನ್ನೂ ತಾನು ಕೊಂಡುಹೋಗಿರುವ ಆಮ್ಲಜನಕದ ಡಬ್ಬಿಯನ್ನೂ ಅವಲಂಬಿಸಬೇಕು.

ಗುರಿ ತಲುಪಿ ಸುರಕ್ಷಿತವಾಗಿ ಹಿಂದಿರುಗಲು ಅನುಕೂಲವಾಗುವಂತೆ ಸುರಕ್ಷಿತ ವಾದ ಘಟ್ಟಗಳಲ್ಲಿ ಬೇಕಾದಷ್ಟು ಬಿಡಾರಗಳನ್ನು ಸ್ಥಾಪಿಸಬೇಕಾಗುತ್ತದೆ. ಪ್ರತಿ ಯೊಂದು ಬಿಡಾರವನ್ನೂ ಆಹಾರ ಮತ್ತಿತರ ಸಲಕರಣೆಗಳಿಂದ ಸಜ್ಜುಗೊಳಿಸ ಬೇಕಾಗುತ್ತದೆ.

ತ್ಯಾಂಗಬಾಕೆಯಲ್ಲಿ ಬೀಡುಬಿಟ್ಟು ಮೂರು ವಾರಗಳ ಕಾಲ ಶಿಕ್ಷಣ ಪಡೆದು ದಾಯಿತು. ಆಮೇಲೆ ಪ್ರತಿಯೊಂದು ಗುಂಪೂ ತನ್ನ ಪಾಲಿಗೆ ಬಂದ ಜವಾಬ್ದಾರಿ ಯನ್ನು ಹೊತ್ತು ಬಿಡಾರಗಳ ಏರ್ಪಾಡಿಗೆ ಹೊರಟಿತು. ಏಪ್ರಿಲ್ ೧೨ ನೆಯ ದಿನ ೧೭,೯೦೦ ಅಡಿ ಎತ್ತರದಲ್ಲಿ ಮೂಲಬಿಡಾರವನ್ನು ಸ್ಥಾಪಿಸಲಾಯಿತು. ೧೯,೪೦೦ ಅಡಿ ಎತ್ತರದಲ್ಲಿ ಎರಡನೆಯ ಬಿಡಾರ, ೨೦,೨೦೦ ಅಡಿ ಎತ್ತರದಲ್ಲಿ ಮೂರನೆಯ ಬಿಡಾರ, ೨೧,೨೦೦ ಅಡಿ ಎತ್ತರದಲ್ಲಿ ನಾಲ್ಕನೆಯ ಬಿಡಾರ, ೨೨,೦೦೦ ಅಡಿ ಎತ್ತರ ದಲ್ಲಿ ಐದನೆಯ ಬಿಡಾರ, ೨೩,೦೦೦ ಅಡಿಯಲ್ಲಿ ಆರನೆಯ ಬಿಡಾರವನ್ನು ಸ್ಥಾಪಿಸ ಲಾಯಿತು. ೧೭,೯೦೦ ಅಡಿಯಲ್ಲಿ ಮೊದಲನೆಯ ಬಿಡಾರವನ್ನು ಸ್ಥಾಪಿಸಿದ ಮೇಲೆ ೨೩,೦೦೦ ಅಡಿ ಎತ್ತರದಲ್ಲಿ ಆರನೆಯ ಬಿಡಾರ ಸ್ಥಾಪಿಸುವಷ್ಟರಲ್ಲಿ ನಾಲ್ಕು ವಾರ ಕಳೆದುಹೋದವು.

ಈ ಎತ್ತರ ಮುಟ್ಟಿ ಇಷ್ಟು ಕೆಲಸ ಸಾಧಿಸಲು ಆ ಜನರು ಅಪಾರ ಕಷ್ಟಗಳನ್ನು ಎದುರಿಸಬೇಕಾಯಿತು. ಹಿಮಭೂಮಿಯನ್ನು ದಾಟುವಾಗ ಅನಿರೀಕ್ಷಿತವಾಗಿ ಹಿಮ ಬಂಡೆಯೊಡೆದು ತೆರೆದ ಬಾಯಲ್ಲಿ ಬಿದ್ದು ಮುಚ್ಚಿಹೋಗುವುದು, ಮೇಲಿನಿಂದ ಜಾರಿ ಬರುವ ಹಿಮಬಂಡೆಗೆ ಸಿಕ್ಕಿ ಕೊಚ್ಚಿಹೋಗುವುದು, ಕಡಿದಾದ ಹಿಮಬಂಡೆಯಲ್ಲಿ ಮೆಟ್ಟಲು ಕೊರೆದುಕೊಂಡು ಹತ್ತುವಾಗ ಕಾಲುಜಾರಿ ಪ್ರಪಾತದಲ್ಲಿ ಉರುಳಿ ಮಾಯವಾಗುವುದು ಆಶ್ಚರ್ಯವೇನಲ್ಲ. ಆದರೆ ಈ ತಂಡದವರು ಅದೃಷ್ಟವಶಾತ್ ಯಾವ ದುರಂತಕ್ಕೂ ಸಿಕ್ಕದೆ ಕೆಲಸ ಸಾಧಿಸಿದರು. ಆರು ಬಿಡಾರಗಳನ್ನು ಸ್ಥಾಪಿಸಿ, ಗುಡಾರಗಳನ್ನು ಎತ್ತಿಕಟ್ಟಿ, ಒಂದು ಬಿಡಾರದಿಂದ ಮತ್ತೊಂದು ಬಿಡಾರಕ್ಕೆ ಹಲವಾರು ಸಲ ತಿರುಗಾಡಿ, ಸಾಮಾನುಗಳನ್ನು ಸಾಗಿಸಿ ಅಣಿಗೊಳಿಸಿದರು.

ಮೇ ೬ ನೆಯ ತಾರೀಖಿನ ದಿನ ತಂಡದ ನಾಯಕ ಜಾನ್ ಹಂಟ್ ಎಲ್ಲರನ್ನೂ

ಸೇರಿಸಿ ಎವರೆಸ್ಟನ್ನು ಹೇಗೆ ಜಯಿಸಬೇಕೆಂಬ ವಿಷಯದಲ್ಲಿ ತಮ್ಮ ಯೋಜನೆಯನ್ನು ವಿವರಿಸಿದರು: ಎವರೆಸ್ಟನ್ನು ಏರಲು ಒಂದೊಂದು ಸಾರಿಗೆ ಇಬ್ಬಿಬ್ಬರಂತೆ ನಾಲ್ಕನೆಯ ಬಿಡಾರದಿಂದ ಹೊರಟು ಮೂರು ದಿನದಲ್ಲಿ ಎಂಟನೆಯ ಬಿಡಾರವನ್ನು ತಲಪಬೇಕು. ಮಿಕ್ಕವರು ಅವರಿಗೆ ಸಹಾಯಕರಾಗಿ ನಿಲ್ಲಬೇಕು. ಎಂಟನೆಯ ಬಿಡಾರದಿಂದ ಆ ಇಬ್ಬರು ಮಾರನೆಯ ಬೆಳಿಗ್ಗೆ ಹೊರಟು ಶಿಖರದ ತುದಿ ಮುಟ್ಟಿ ಸಂಜೆಯ ಹೊತ್ತಿಗೆ ಹಿಂತಿರುಗಬೇಕು. ಮೊದಲನೆಯ ಪ್ರಯತ್ನ ಫಲಿಸದೆ ಹೋದರೆ ಎರಡನೆಯ ಪ್ರಯತ್ನ ಮಾರನೆಯ ದಿನವೇ ನಡೆಯಬೇಕು. ಅದೂ ಫಲಿಸದಿದ್ದಲ್ಲಿ ಮತ್ತೆ ಎಂಟನೆಯ ಬಿಡಾರಕ್ಕೆ ಬೇಕಾದ ಸಲಕರಣೆಗಳನ್ನು ಒದಗಿಸಿಕೊಂಡು ಮತ್ತೊಂದು ಪ್ರಯತ್ನ ನಡೆಸಬೇಕು.

ಈ ಯೋಜನೆಯಂತೆ ಟಾಮ್‌ಚಾಡಿಲಾನ್ ಮತ್ತು ಚಾರ್ಲ್ಸ್ ಇವಾನ್ಸ್ ಇವರು ಮೊದಲನೆಯ ಪ್ರಯತ್ನ ನಡೆಸಬೇಕೆಂದೂ ಎರಡನೆಯ ಪ್ರಯತ್ನಕ್ಕೆ ಎಡ್ಮಂಡ್ ಹಿಲ್ಲರಿ ಮತ್ತು ಟೆನ್‌ಜಿಂಗ್ ಹೋಗಬೇಕೆಂದೂ ಗ್ರಿಗರಿ ಮತ್ತು ಷರ್ಪ ಸಿಬ್ಬಂದಿ ಇವರ ಸಹಾಯಕ್ಕೆ ನಿಲ್ಲಬೇಕೆಂದೂ ಗೊತ್ತಾಯಿತು. ಈ ಯೋಜನೆಯಂತೆ ಸಿದ್ಧತೆ ನಡೆಯಿತು. ಇನ್ನೂ ಏಳನೆಯ ಮತ್ತು ಎಂಟನೆಯ ಬಿಡಾರಗಳ ಸ್ಥಾಪನೆ ಯಾಗಬೇಕಾಗಿತ್ತು. ವಾತಾವರಣ ಕಡುಕಷ್ಟಕರವಾಗಿತ್ತು. ಚುಚ್ಚುಬಿಸಿಲು ಹಿಮರಾಶಿಯ ಮೇಲೆ ಬಿದ್ದು ಉಂಟಾದ ಹಿಮದ ಹೊಳಪು ಕಣ್ಣನ್ನು ಕೋರೈಸಿ ಕುರುಡುಮಾಡುತ್ತಿತ್ತು. ಗುಡಾರಗಳನ್ನೂ ಜನವನ್ನೂ ತೂರಿಕೊಂಡು ಹೋಗುವಂತಹ ಬಿರುಗಾಳಿ ಬೀಸುತ್ತಿತ್ತು. ಆ ಎತ್ತರದಲ್ಲಿ ಹಿಮಬಂಡೆಗಳನ್ನು ಕಡಿದು ಮೆಟ್ಟಲು ಮಾಡಿಕೊಂಡು ಬೆನ್ನಮೇಲೆ ಭಾರ ಹೊತ್ತು ಕಡಿದಾದ ಎತ್ತರ ಏರುವ ಶ್ರಮ ಅಪಾರವಾಗಿತ್ತು. ರಕ್ಷಣೆ ಕೊಡುವ ಎಷ್ಟೆ ಬೆಚ್ಚನೆ ಉಡುಪು ಉಟ್ಟಿದ್ದರೂ ಅದನ್ನೂ ತೂರಿ ದೇಹವನ್ನು ನಡಗಿಸುವ ಕೊರೆತ ದಾರುಣವಾಗಿತ್ತು. ಗಾಳಿಯ ಒತ್ತಡ ಕಡಮೆಯಿದ್ದು ದೇಹಕ್ಕೆ ಸಾಕಾದಷ್ಟು ಆಮ್ಲಜನಕ ದೊರಕದೆ ಒದಗುವ ಸುಸ್ತು ಮತ್ತು ನಿದ್ರಾಹೀನತೆಯಿಂದ ದೇಹ ಬಳಲಿ ಬೆಂಡಾಗುತ್ತಿತ್ತು. ಆಮ್ಲಜನಕ ಸೇವಿಸದೆ ರಾತ್ರಿ ನಿದ್ರೆ ಹತ್ತುತ್ತಲೇ ಇರಲಿಲ್ಲ. ಆ ಸಾಹಸಿಗಳು ಈ ಕಷ್ಟವನ್ನೆಲ್ಲ ಎದುರಿಸಿ ಮೇ ೧೭ ರಲ್ಲಿ ೨೪,೦೦೦ ಅಡಿ ಎತ್ತರದಲ್ಲಿ ಏಳನೆಯ ಬಿಡಾರವನ್ನೂ ೨೨ ರಲ್ಲಿ ೨೫,೮೫೦ ಅಡಿ ಎತ್ತರದಲ್ಲಿ ಎಂಟನೆಯ ಬಿಡಾರವನ್ನೂ ಸ್ಥಾಪಿಸಿದರು.

ಮೊದಲನೆಯ ಧಾಳಿಯ ಜೊತೆಯ ಟಾಮ್ ಮತ್ತು ಇವಾನ್ ೨೬ ನೆಯ ತಾರೀಖು ಎಂಟನೆಯ ಬಿಡಾರದಿಂದ ಹೊರಟರು. ಆಮ್ಲಜನಕದ ಸೇವನೆಯಿಂದ ಶಕ್ತಿಗೊಂಡು ಮುಂದೆ ಮುಂದೆ ನಿಧಾನವಾಗಿ ಬಲು ನಿಧಾನವಾಗಿ ಸಾಗಿದರು. ಒಂದು ಹೆಜ್ಜೆ ಇಟ್ಟ ಮೇಲೆ ಮತ್ತೊಂದು ಹೆಜ್ಜೆ ಎತ್ತಿ ಮುಂದಿಡಲು ಅದೆಷ್ಟೋ

ಶ್ರಮ. ಎಂಟೊಂಬತ್ತು ಹೆಜ್ಜೆ ಇಟ್ಟ ಮೇಲೆ ಹಿಮಕೊಡಲಿಯಾಶ್ರಯದಲ್ಲಿ ನಿಂತು ಉಸಿರು ಹುಯ್ದು ಸುಧಾರಿಸಿಕೊಂಡ ಮೇಲೆಯೇ ಮುಂದಿನ ಹೆಜ್ಜೆ. ಹೀಗೆ ಮುಂದುವರಿದರು. ತುದಿ ಮುಟ್ಟಲು ಇನ್ನೂ ಹೊತ್ತಿತ್ತು. ಹವಾ ಅಷ್ಟೇನೂ ಅನುಕೂಲ ವಾಗಿಲ್ಲದಿದ್ದರೂ ಕೆಟ್ಟಿತ್ತೆಂದು ಹೇಳುವಂತಿರಲಿಲ್ಲ. ಅವರು ತುದಿ ಮುಟ್ಟುವ ಛಲದಿಂದ ಹೆಜ್ಜೆ ಎಳೆಯುತ್ತಿದ್ದರು. ಆದರೆ ಹೊಸ ಪುಡಿಹಿಮ ದಾರಿಯನ್ನು ಮುಚ್ಚಿತ್ತು. ತಳದಲ್ಲಿದ್ದ ಬಂಡೆಯು ಬಿಗಿ ಸಿಗುವುದು ಕಷ್ಟವಾಯಿತು. ಸುತ್ತ ಮೋಡ ಮುಚ್ಚಿ ದಿಗ್ಭ್ರಮೆಯುಂಟಾಯಿತು. ಹಿಮಗಾಳಿ ಬೀಸಿ ಇವರನ್ನು ತೂರತೊಡಗಿತು. ಆದರೂ ಈ ಪರಿಸ್ಥಿತಿಯಲ್ಲಿ ಎರಡು ಗಂಟೆಗಳ ಕಾಲ ಹೋರಾಡಿ ಸುಮಾರು ೨೮,೦೦೦ ಅಡಿ ಎತ್ತರಕ್ಕೆ ತಲಪಿದರು. ಅಲ್ಲಿ ಕೊಂಚ ನಿಂತು ಹೊಸ ಆಮ್ಲಜನಕದ ಡಬ್ಬಗಳನ್ನು ಕಟ್ಟಿಕೊಂಡು ಪ್ರಯಾಣವನ್ನು ಮುಂದುವರಿಸಿದರು. ಇವಾನ್ಸ್‌ನ ಆಮ್ಲಜನಕದ ಡಬ್ಬಿ ಸರಿಯಾಗಿ ಕೆಲಸಮಾಡದೆ ತೊಂದರೆ ಕೊಟ್ಟಿತು. ಆದರೂ ತಮ್ಮೆಲ್ಲ ಮನಶ್ಶಕ್ತಿಯನ್ನೂ ದೇಹಶಕ್ತಿಯನ್ನೂ ಒಟ್ಟುಗೂಡಿಸಿ ಮುಂದೆ ಮುಂದೆ ಹೆಜ್ಜೆ ಇಟ್ಟರು. ಮಧ್ಯಾಹ್ನ ಒಂದು ಗಂಟೆಯ ಹೊತ್ತಿಗೆ ೨೮,೭೦೦ ಅಡಿ ಎತ್ತರವನ್ನು ಮುಟ್ಟಿದರು. ಅದುವರೆಗೆ ಇನ್ನಾರೂ ಆ ಎತ್ತರವನ್ನು ಮುಟ್ಟಿರಲಿಲ್ಲ. ಯಾವುದು ಪ್ರಪಂಚದ ಅತ್ಯಂತ ಎತ್ತರವೋ ಯಾವುದನ್ನು ತಲುಪಲು ಪ್ರಯತ್ನದ ಮೇಲೆ ಪ್ರಯತ್ನ ನಡೆದು ಸಾಧಿಸಲಾಗಿರಲಿಲ್ಲವೋ ಆ ಸ್ಥಾನ ಇನ್ನು ಬರಿ ಮುನ್ನೂರು ಅಡಿ ಎತ್ತರದಲ್ಲೇ ಇದೆ. ಆ ವೀರರು ಆ ಮುನ್ನೂರಡಿಯನ್ನು ತಲೆಯೆತ್ತಿ ನೋಡಿ




ಹಿಮಬೀಳಲ್ಲಿ ದಾರಿಮಾಡಿಕೊಂಡು ಮುಂದೆ ಮುಂದೆ ಸಾಗುತ್ತಿರುವುದು

ದರು. ಕಡಿದಾದ ಎತ್ತರ, ಹಿಮತುಂಬಿದ ಬೆಟ್ಟದೇಣಿ. ಆ ಏಣಿನ ಎರಡು ಪಕ್ಕದಲ್ಲೂ ಭಯಂಕರವಾದ ಪ್ರಪಾತ. ಕಿಂಚಿತ್ ಜಾರಿದರೂ ಗಂಡಾಂತರ ತಪ್ಪಿದ್ದಲ್ಲ. ಆಗಲೆ ಹೊತ್ತಾಗಿ ಹೋಗಿದೆ. ಆ ಪರಿಸ್ಥಿತಿಯಲ್ಲಿ ಪ್ರಯತ್ನಪಡುವುದೆಂದರೆ ಅವರು ಉಳಿಯ ಲಿಕ್ಕಿಲ್ಲ. ಆದರೂ ಅಷ್ಟು ಸಾಧಿಸಿ ಗುರಿಮುಟ್ಟದೆ ಹಿಂದಿರುಗಲು ಅವರಿಗೆ ವ್ಯಥೆ ಯಾಯಿತು. ಹಿಂದಿರುಗಿದರು. ಸಾಕಾಗಿ, ನಿಶ್ಯಕ್ತರಾಗಿ ಎಂಟನೆಯ ಬಿಡಾರಕ್ಕೆ ಬಂದು ಅವರಿಗಾಗಿ ಕಾಯುತ್ತಿದ್ದವರನ್ನು ಸೇರಿದರು. ಅವರು ಗುರಿಮುಟ್ಟದೆ ಹಿಂದಿರುಗಿದರೂ ಅವರ ಸಾಹಸ, ಸಾಧನೆ ಮುಂದಿನ ಪ್ರಯತ್ನ ಕೈಗೊಳ್ಳುವವರಿಗೆ ಉತ್ತೇಜನಕಾರಿ ಯಾಗಿದ್ದುವು. ಗುರಿ ಮುಟ್ಟುವ ಭರವಸೆಯನ್ನು ತಂದುವು.

ಮೇ ೨೮ ನೆಯ ದಿನ ಎಂಟನೆಯ ಬಿಡಾರದಲ್ಲಿ ಆರು ಜನರಿದ್ದರು. ಎಡ್ಮಂಡ್ ಹಿಲ್ಲರಿ ಮತ್ತು ಟೇಜಿಂಗ್ ಅವರಲ್ಲಿಬ್ಬರು. ಈ ಇಬ್ಬರು ಇತರರ ಸಹಾಯದಿಂದ ಆ ದಿನ ೨೭,೯೦೦ ಅಡಿ ಎತ್ತರಕ್ಕೆ ಹತ್ತಿ ಆ ಎತ್ತರದಲ್ಲಿ ಒಂದು ಸಣ್ಣ ಗುಡಾರವನ್ನು ಕಟ್ಟಿ ತಾವಿಬ್ಬರು ಉಳಿದುಕೊಂಡು ಮಿಕ್ಕವರನ್ನು ಹಿಂದಕ್ಕೆ ಕಳುಹಿಸಿದರು. ಆ ದಿನ ಸೂರ್ಯಾಸ್ತಸಮಯದಲ್ಲಿ ಆ ಇಬ್ಬರೂ ಗುಡಾರವನ್ನು ಹೊಕ್ಕು ಇದ್ದಬದ್ದ ಬೆಚ್ಚನೆ ಬಟ್ಟೆಯನ್ನು ಹೊದ್ದು ಮಲಗುಚೀಲದಲ್ಲಿ ಅಡಗಿಕೊಂಡರು. ಮಾರನೆಯ ದಿನ (ಮೇ ೨೯ ರ) ಬೆಳಿಗ್ಗೆ ನಾಲ್ಕು ಗಂಟೆಗೆ ಎದ್ದು ಸಿದ್ಧತೆಗೆ ತೊಡಗಿದರು. ಹಿಮನ್ ಹೆಚ್ಚಿ ನಿಂಬೇಹಣ್ಣಿನ ಪಾನಕ ತಯಾರುಮಾಡಿಕೊಂಡು ಕುಡಿದರು. ಅವರಲ್ಲಿ ಕೊನೆಯ ದಾಗಿ ಉಳಿದಿದ್ದ ಬಿಸ್ಕತ್ತುಗಳನ್ನು ತಿಂದರು. ಗಾಳಿಗೆ ಮತ್ತು ಚಳಿಗೆ ಮಣಿಯದ ಉಡುಪು ತೊಟ್ಟರು. ಜೀವನಾಧಾರ ಮತ್ತು ಶಕ್ತಿದಾಯಕವಾದ ಆಮ್ಲಜನಕದ ಡಬ್ಬಿಗಳನ್ನು ಪರೀಕ್ಷಿಸಿ ಅಳವಡಿಸಿಕೊಂಡು ಮುಖವಾಡಗಳನ್ನು ಧರಿಸಿದರು. ಸಿದ್ಧವಾಗಿ ೬ ಗಂಟೆ ಹೊತ್ತಿಗೆ ಗುಡಾರದಿಂದ ಹೊರಗೆ ತೂರಿಕೊಂಡು ಬಂದರು. ನಿಂತು ಕೊಂಚಹೊತ್ತು ಉಸಿರಾಡಿ ಶ್ವಾಸಕೋಶಕ್ಕೆ ಆಮ್ಲಜನಕವನ್ನು ತುಂಬಿ ಶಕ್ತಿಗೊಂಡು ಎವರೆಸ್ಟ್ ಯಾತ್ರೆಗೆ ಹೊರಟರು.

ಆಗಲೆ ಹಿಮರಾಶಿಯ ಮೇಲೆ ಬಿಸಿಲುಬಿದ್ದು ಹೊಳಪು ತಂದಿತ್ತು. ಟೇಜಿಂಗ್ ಬಿದ್ದಿದ್ದ ಹಿಮಪುಡಿಯನ್ನು ಒದ್ದು ದಾರಿಮಾಡಿಕೊಂಡು ಮುಂದುವರಿದರು. ಹಿಲ್ಲರಿ ಅವರ ಹಿಂದೆ. ಅವರ ಮುಂದೆ ದೂರದಲ್ಲಿ ಉನ್ನತವಾಗಿ ಎವರೆಸ್ಟ್ ಶಿಖರ. ಆ ದಾರಿ ಯಲ್ಲಿ ೨೮,೦೦೦ ಅಡಿ ಮುಟ್ಟಲು ಅವರಿಗೆ ಬಹಳ ಹೊತ್ತು ಹಿಡಿಯಲಿಲ್ಲ. ಆಮೇಲೆ ಹಿಲ್ಲರಿ ಮುಂದುವರಿದು ಟೇಜಿಂಗ್ ಅವರ ಹಿಂದಾಗಿ ಪ್ರಯಾಣ ಬೆಳೆಸಿದರು. ಅಲ್ಲಿಂದ ಮುಂದೆ ಕತ್ತಿ ಅಲುಗಿನ ಬಾಯಿಯಂತಿದ್ದ ಶಿಖರದೇಣಿ. ಮುಂದಿನ ದಾರಿ. ಆ ಏಣಿನ ಎರಡು ಪಕ್ಕದಲ್ಲೂ ಸಾವಿರಾರು ಅಡಿ ಆಳದ ಭೀಕರ ಪ್ರಪಾತ.

ಆ ಏಣಿನ ಮೇಲೆ ಹೆಜ್ಜೆ ಇಟ್ಟರೆ ಹಿಮ ಜಾರಿ ಗೊತ್ತಾಗದ ಕಡೆ ಹೆಜ್ಜೆ ಸರಿಯುತ್ತಿತ್ತು. ಅತಿ ಭಯಂಕರ ಹಾಗೂ ಅತ್ಯಂತ ಅಪಾಯಕರ ಪರಿಸ್ಥಿತಿ. ಸಾಧ್ಯವಾದ ಕಡೆ ಎಚ್ಚರಿಕೆಯಿಂದ ಅತ್ತ ಇತ್ತ ಸರಿದು ಹೆಜ್ಜೆ ಇಟ್ಟು ಮುಂದುವರಿದರು. ಹೀಗೆ ಮುಂದುವರಿಯುತ್ತಿದ್ದಾಗ ಹಿಲ್ಲರಿ ಆಯತಪ್ಪಿ ನಾಲ್ಕೈದು ಹೆಜ್ಜೆ ಹಿಂದೆ ಜಾರಬೇಕಾಯಿತು. ಎಚ್ಚರಿಕೆ ತಪ್ಪಿದ್ದರೆ ಅವರಿಬ್ಬರೂ ಕಾಣೆಯಾಗುತ್ತಿದ್ದ ಪ್ರಸಂಗ ಅದು. ಈ ಪರಿಸ್ಥಿತಿಯಲ್ಲಿ ಹಿಲ್ಲರಿ ಮುಂದೆ ಹೋಗುವುದು ಸರಿಯೆ ಎಂದು, ಟೆನ್ಜಿಂಗ್‌ರನ್ನು ವಿಚಾರಿಸಿದರು. ಟೆನ್ಜಿಂಗ್ ಹೇಗೆಂದರೆ ಹಾಗೆ ಎಂದು ಉತ್ತರಿಸಿದರು. ಸರಿ ಮುಂದುವರಿಯಲು ನಿರ್ಧರಿಸಿ ಹೆಜ್ಜೆ ಇಟ್ಟರು. ಕೊಂಚ ಎತ್ತರದಲ್ಲಿ ಗಟ್ಟಿ ಹಿಮ ಮುಚ್ಚಿದ ಬಂಡೆ ಸಿಕ್ಕಿತು. ಅದರಲ್ಲಿ ಮೆಟ್ಟಲುಗಳನ್ನು ಕೊರೆದುಕೊಂಡು ಮೇಲೇರಲಾಯಿತು. ಅಲ್ಲಿ ಮತ್ತೆ ಹಿಮಾಚ್ಛಾದಿತ ಬಂಡೆಯೊಂದು ಸಿಕ್ಕಿತು. ಈಗಾಗಲೇ ಬೆಳಗಿನ ಒಂಬತ್ತು ಗಂಟೆ ಸಮಯ. ಮುಂದಿರುವ ಕಡಿದಾದ ಬಂಡೆಯ ಏಣಿನ ಮೇಲೆ ಹೆಜ್ಜೆ ಇಡುವುದು ಅಪಾಯಕರವಾಗಿ ಕಂಡಿತು. ಅದರ ಒಂದು ಪಕ್ಕಕ್ಕೆ ಮಂಜಿನಿಂದ ತುಂಬಿದ್ದ ೧೨,೦೦೦ ಅಡಿ ಆಳದ ಕಾಂಚನಗಂಗ ಪ್ರಪಾತ. ಮತ್ತೊಂದು ಪಕ್ಕದಲ್ಲೂ ಅಷ್ಟೆ. ಅಲ್ಲೊಂದು ಸ್ಥಳಮಾಡಿ ಕೊಂಚ ಹೊತ್ತು ಕುಳಿತು ವಿಶ್ರಮಿಸಿಕೊಂಡರು. ಬೇರೆ ಆಮ್ಲಜನಕದ ಡಬ್ಬಿಗಳನ್ನು ಅಳವಡಿಸಿಕೊಂಡರು. ಅನಂತರ ಉತ್ಸಾಹಗೊಂಡು ಮೆಟ್ಟಲುಗಳನ್ನು ಕಡಿದುಕೊಂಡು ಮುಂದುವರಿದರು. ಹಿಲ್ಲರಿ ಮೆಟ್ಟಲುಗಳನ್ನು ಕಡಿದು ಮೇಲೇರುತ್ತಿದ್ದಾಗ ಟೆನ್ಜಿಂಗ್ ಆತ ಅಪಾಯಕ್ಕೆ ಒಳಗಾಗದಂತೆ ಹಗ್ಗದಿಂದ ಬಿಗಿಹಿಡಿದು ಸಹಾಯಮಾಡುತ್ತಿದ್ದರು.




ಹಗ್ಗದೇಣಿಯ ಸಹಾಯದಿಂದ ಹಾದು ಬಂಡೆಯನ್ನೇರುತ್ತಿರುವುದು

ಹಿಲ್ಲರಿ ಒಂದು ಹಂತಕ್ಕೆ ಹತ್ತಿದ ಮೇಲೆ ಟೆನ್‌ಜಿಂಗ್‌ರನ್ನು ಮೇಲಕ್ಕೆ ಹತ್ತಿಸಿಕೊಳ್ಳು ತ್ತಿದ್ದರು. ಹೀಗೆ ಒಂದು ಗಂಟೆ ಸಾಗಿದಮೇಲೆ ಅವರು ನಲವತ್ತಡಿ ಕಡಿದಾದ ಎತ್ತರದ ಬಂಡೆಯ ಬುಡ ತಲಪಿದರು. ಅದು ನುಣುಪಾಗಿದ್ದು ಹಿಡಿತ ಸಿಗುತ್ತಿರ ಲಿಲ್ಲ. ಅವರ ಗುರಿಗೂ ಅವರ ಶಕ್ತಿಗೂ ಅಡ್ಡನಿಂತ ಕಂಟಕದಂತಿತ್ತು ಆ ಬಂಡೆ. ಆದರೆ ಅದೃಷ್ಟವಶಾತ್ ಅದರ ಏಣಿನ ಪಕ್ಕದಲ್ಲೇ ಗಟ್ಟಿಹಿಮ ಆ ಬಂಡೆಗೆ ಅಪ್ಪಳಿಸಿ ಅಂಟಿಕೊಂಡು ನಿಂತಿದ್ದ ಹಿಮಗೋಲು. ಹೀಗಿದ್ದ ಹಿಮಗೋಲಿಗೂ ಬಂಡೆಗೂ ನಡುವೆ ಗಾಳಿಯ ಒತ್ತಡದಿಂದಲೋ ಏನೋ ನಲವತ್ತು ಅಡಿಯುದ್ದಕ್ಕೂ ಒಂದು ಸಂದು ಉಂಟಾಗಿತ್ತು. ಟೆನ್‌ಜಿಂಗ್ ಹಗ್ಗಹಿಡಿದು ಸಹಾಯಕ್ಕೆ ನಿಲ್ಲಲು ಹಿಲ್ಲರಿ ಆ ಸಂದಿನಲ್ಲಿ ತೆವಳಿಕೊಂಡು ಮೇಲೆ ಹತ್ತತೊಡಗಿದರು. ಕಷ್ಟತಮವಾದ ಪ್ರಯತ್ನ ಅದು. ಅಂತು ಆ ನಲವತ್ತಡಿ ಎತ್ತರವನ್ನು ಮುಗಿಸಿ ಉಸಿರುಹುಯ್ದುಕೊಂಡು ನಿಂತರು. ಆಮೇಲೆ ಹಗ್ಗದ ಸಹಾಯದಿಂದ ಟೆನ್‌ಜಿಂಗ್‌ರನ್ನು ಮೇಲೇರಿಸಿಕೊಳ್ಳುವ ಪ್ರಯತ್ನ ನಡೆಯಿತು. ಟೆನ್‌ಜಿಂಗ್ ಅಪಾರ ಸಾಹಸಪಟ್ಟು ಹಿಲ್ಲರಿಯವರನ್ನು ತಲಪಿದ ಕೂಡಲೆ, ಸಮುದ್ರದಿಂದ ತೆಗೆದ ಹೆಮ್ಮೀನು ತನ್ನ ಹೆಣಗಾಟದಿಂದ ದಣಿದು ದಡದಲ್ಲಿ ಬೀಳುವಂತೆ, ಕುಸಿದು ಬಿದ್ದರು. ಚೇತರಿಸಿಕೊಳ್ಳಲು ಅವರಿಗೆ ಕೊಂಚ ಹೊತ್ತು ಬೇಕಾಯಿತು.

ಮುಂದೆಯೂ ದಾರಿ ಸುಗಮವಾಗಿರಲಿಲ್ಲ. ಒಂದು ಮುಗಿದಮೇಲೆ ಮತ್ತೊಂದು ಕೋಡುಗಲ್ಲು ಮುಂದೆ ನಿಂತು ಶಿಖರದ ತುದಿ ಎಲ್ಲಿದೆ ಎಂಬುದೇ ಗೊತ್ತಾಗಲಿಲ್ಲ. ಕಾಲವೋ ಬೇಗಬೇಗನೆ ಕಳೆದುಹೋಗುತ್ತಿತ್ತು. ಆಗ ಅವರಲ್ಲಿದ್ದ ಹರ್ಷ ಕಡಮೆ ಯಾಗಿ ತುಟಿಕಚ್ಚಿ ಸಾಹಸಪಡುವಂತಾಯಿತು. ಕೊಂಚ ಹೊತ್ತಿನಲ್ಲೇ ತಮ್ಮ ಗುರಿ ಹತ್ತಿರವೇ ಇದೆ ಎಂಬುದನ್ನು ತಿಳಿದರು. ಹಿಮಗೊಡಲಿ ಪೆಟ್ಟಿನಿಂದುಂಟಾದ ಕೆಲವೇ ಮೆಟ್ಟಲುಗಳಲ್ಲಿ ಹೆಜ್ಜೆ ಇಡಲು ಅವರು ಎವರೆಸ್ಟ್ ಶಿಖರವನ್ನು ಮೆಟ್ಟಿ ನಿಂತಿದ್ದರು. ಆಗ ಬೆಳಗಿನ ಹನ್ನೊಂದೂವರೆ ಗಂಟೆ.

ವೀರರಿಬ್ಬರೂ ಪ್ರಪಂಚದಲ್ಲೇ ಅತ್ಯಂತ ಎತ್ತರದ ಸ್ಥಾನದಲ್ಲಿ ನಿಂತಿದ್ದರು. ಇದುವರೆಗೂ ಯಾರಿಗೂ ಸಾಧ್ಯವಾಗದುದನ್ನು ಸಾಧಿಸಿದ್ದರು. ಇದುವರೆಗೆ ನಡೆದ ಸಾಹಸದಮೇಲೆ ಸಾಹಸದ ಪೂರ್ಣಫಲವನ್ನು ಕಂಡಿದ್ದರು. ಅವರ ಮನಸ್ಸು ನೆಮ್ಮದಿ ಗೊಂಡಿತ್ತು. ಹಿಲ್ಲರಿ ಹಸನ್ಮುಖದಿಂದ ಟೆನ್‌ಜಿಂಗರ ಕಡೆ ನೋಟ ಬೀರಿದರು. ಆಮ್ಲಜನಕದ ಮುಖವಾಡ ಮುಚ್ಚಿದ್ದರೂ ಟೆನ್‌ಜಿಂಗರ ಮುಖದಲ್ಲಿ ಆನಂದದ ಹೊಳಪು ಕಾಣಿಸದಿರಲಿಲ್ಲ. ಆ ಆನಂದದಲ್ಲಿ ಟೆನ್‌ಜಿಂಗ್ ಆ ಎತ್ತರದಿಂದ ಸುತ್ತ ತಿರುಗಿ ಜಗತ್ತನ್ನು ನೋಡಿದರು. ಇಬ್ಬರೂ ಹಸ್ತಲಾಘವ ಮಾಡಿ ಒಬ್ಬರನ್ನೊಬ್ಬರು ಅಪ್ಪಿಕೊಂಡರು. ಒಬ್ಬರನ್ನೊಬ್ಬರು ಮನಸ್ಸು ತೃಪ್ತಿಯಾಗುವಂತೆ ಬೆನ್ನು ತಟ್ಟಿದರು.



ಗೌರೀಶಂಕರ (ಎವರೆಸ್ಟ್) ಶಿಖರದ ತುಟ್ಟ ತುದಿ.

ಹಿಲ್ಲರಿ ತಾನು ತಂದಿದ್ದ ಕ್ಯಾಮರವನ್ನು ಹೊರತೆಗೆದರು. ಟೆನ್‌ಜಿಂಗ್ ತನ್ನ ಹಿಮಕೊರಲಿಗೆ ಬ್ರಿಟಿಷ್ ನೇಪಾಲ್ ವಿಶ್ವಸಂಸ್ಥೆ ಮತ್ತು ಭಾರತದ ಧ್ವಜಗಳನ್ನು ಕಟ್ಟಿ ಮೇಲೆತ್ತಿ ಹಿಡಿದು ನಿಂತರು. ಹಿಲ್ಲರಿ ಎವರೆಸ್ಟಿನ ಮೇಲೆ ಟೆನ್‌ಜಿಂಗ್ ಚಿತ್ರ ಇಳಿಸಿದರು. ಟೆನ್‌ಜಿಂಗ್ ಶಿಖರದ ಮೇಲಿದ್ದ ಹಿಮದ ಹೊದಿಕೆಯಲ್ಲಿ ಒಂದು ಗುಂಡಿ ತೋಡಿ ಅದರಲ್ಲಿ ತಾವು ಹರಕೆ ಹೊತ್ತು ತಂದಿದ್ದ ಆಹಾರವಸ್ತುಗಳನ್ನೂ ಪುಷ್ಪವನ್ನೂ ಆ ಗುಂಡಿಯಲ್ಲಿಟ್ಟು ತಮ್ಮ ಜಯಕ್ಕಾಗಿ ಭಗವಂತನಿಗೆ ಅರ್ಪಿಸಿದರು. ಹಿಲ್ಲರಿಯೂ

ಆ ಪಕ್ಕದಲ್ಲೇ ಮತ್ತೊಂದು ಗುಂಡಿ ತೋಡಿ ತನಗೆ ಜಾರ್ಜ್ ಹಂಟರಿಂದ ಕೊಡಲ್ಪಟ್ಟಿದ್ದ ಸಿಲುಬೆಯನ್ನು ಅದರಲ್ಲಿಟ್ಟು ಅರ್ಪಿಸಿದರು. ಈ ಅರ್ಪಣೆ ಕಿಂಚಿತ್ತಾಗಿ ಕಂಡರೂ ಆ ಭಕ್ತಿ ಆ ಕೃತಜ್ಞತೆ ಅಪಾರವಾಗಿತ್ತು.

ಈ ಇಬ್ಬರು ವೀರರೂ ಅಲ್ಲಿ ಹೆಚ್ಚು ಹೊತ್ತು ಕಾಲಕಳೆಯುವಂತಿರಲಿಲ್ಲ. ಆಮ್ಲಜನಕ ಮುಗಿದರೆ ಇಳಿಯಲು ಕಷ್ಟವಾಗುತ್ತಿತ್ತು. ಅಲ್ಲದೆ ಹವಾಗುಣ ಒಂದೇ ಸಮ ಇರುವುದೆಂಬ ನಂಬಿಕೆಯಿರಲಿಲ್ಲ. ಆಗಲೆ ಸಾಕಾಗಿಹೋಗಿತ್ತು. ಆಗ ಅವರಲ್ಲಿ ಉಳಿದಿದ್ದದ್ದು ಜಯದ ಶಕ್ತಿಯಷ್ಟೆ. ಆದಷ್ಟು ಬೇಗನೆ ಆ ಕಠಿಣ ಪರಿಸ್ಥಿತಿ ಕಳೆದು ಸುರಕ್ಷಿತ ಸ್ಥಳಕ್ಕೆ ಸೇರುವುದು ಅನಿವಾರ್ಯವಾಗಿತ್ತು. ಆ ಎತ್ತರದಿಂದ ಇಳಿಯುವುದೂ ಹತ್ತುವುದಕ್ಕಿಂತ ಸುಲಭವೇನಾಗಿರಲಿಲ್ಲ. ಅದರಿಂದ ಅಲ್ಲಿ ಹದಿನೈದು ನಿಮಿಷ ಕಳೆದ ಮೇಲೆ ಕೆಳಗಿಳಿಯತೊಡಗಿದರು. ಎಂಟನೆಯ ಬಿಡಾರಕ್ಕೆ ಸಂಜೆಯೊಳಗೇ ಬಂದು ಮುಟ್ಟಿದರು. ಅಲ್ಲಿ ವಿಶ್ರಮಿಸಿಕೊಂಡು ಹೊರಟು ತಮ್ಮ ಗುಂಪನ್ನು ಸೇರಿದರು. ತಮ್ಮ ನಾಯಕ ಕರ್ನಲ್ ಹಂಟರವರಿಗೂ ಗುಂಪಿನ ಮತ್ತೆಲ್ಲ ಜೊತೆಯ ಸಾಹಸಿಗಳಿಗೂ ಎವರೆಸ್ಟ್ ಶಿಖರವನ್ನು ಜಯಿಸಿದ ಆನಂದವನ್ನು ತಂದರು. ವಿಶ್ವದಲ್ಲಿ ವಿಶೇಷಘಟನೆಯೊಂದನ್ನು ಉಂಟುಮಾಡಿದರು.

ನಭ.



ಗೌರೀಶಂಕರ ಶಿಖರದ ಮೇಲೆ ಟೆನ್ಜಿಂಗ್

ಕನ್ನಡ ಕಾವ್ಯಪ್ರಕಾಶ

(ಮಮ್ಮಟನ ಮೂಲಗ್ರಂಥದ ಅನುವಾದ)

ಮೊದಲನೆಯ ಉಲ್ಲಾಸ

ಗ್ರಂಥದ ಆರಂಭದಲ್ಲಿ ವಿಘ್ನನಿವಾರಣೆಗಾಗಿ ಉಚಿತಳೂ ಇಷ್ಟಳೂ ಆದ[1] ವಾಗ್ದೇವಿಯನ್ನು ಗ್ರಂಥಕರ್ತನು[2] ನುತಿಸುತ್ತಾನೆ[3]—

ನಿಯತಿಕೃತನಿಯಮರಹಿತಾಂ
ಹ್ಲಾದೈಕಮಯೀಮನನ್ಯಪರತಂತ್ರಾಂ ।
ನವರಸರುಚಿರಾಂ ನಿರ್ಮಿತಿ-
ಮಾದಧತೀ ಭಾರತೀ ಕವೇರ್ಜಯತಿ ‖ ೧ ‖

ತವೆ ವಿಧಿನಿಯಮವಿದೂರಂ
ಬುಧಿಯೊಳ್ ಸುಖಮಾತ್ರರೂಪಮಪರಾಧೀನಂ ।

---

1 ದೇವತೆಗಳಲ್ಲಿ 'ಉಚಿತದೇವತೆ', 'ಇಷ್ಟದೇವತೆ', 'ಉಚಿತೇಷ್ಟದೇವತೆ' ಎಂದು ಮೂರು ಬಗೆಗಳನ್ನು ತೋರಿಸಿ, ಅವಕ್ಕೆ ಉದಾಹರಣೆಗಳನ್ನು ಮಾಣಿಕ್ಯಚಂದ್ರನು ಸೂಚಿಸಿದ್ದಾನೆ. ನೀತಿ ಶಾಸ್ತ್ರದ ಆದಿಯಲ್ಲಿ ರಾಜನನ್ನೂ ಕಾಮಶಾಸ್ತ್ರದ ಆದಿಯಲ್ಲಿ ಮನ್ಮಥನನ್ನೂ ಸ್ತುತಿಸುವುದು 'ಉಚಿತ'. ರಘುವಂಶದ ಆದಿಯಲ್ಲಿ ಸ್ತುತರಾದ ಪಾರ್ವತೀಪರಮೇಶ್ವರರು ಕಾಳಿದಾಸನ 'ಇಷ್ಟ' ದೇವತೆಗಳು. ಕಾವ್ಯಕ್ಕೆ ಅಧಿದೇವಿಯಾದ ವಾಗ್ದೇವಿಯು ಮಮ್ಮಟನಿಗೆ ಇಷ್ಟದೇವತೆಯಷ್ಟೇ ಅಲ್ಲ; ಸಮುಚಿತ ದೇವತೆಯೂ ಆಗಿದ್ದಾಳೆ.

2 ಕಾವ್ಯಪ್ರಕಾಶದ ಕಾರಿಕೆಗಳು ಪದ್ಯರೂಪವಾಗಿಯೂ ವಿವರಣೆಯಾದ ವೃತ್ತಿ ಗದ್ಯ ರೂಪವಾಗಿಯೂ ಇದೆ. ಇವೆರಡನ್ನೂ ಒಬ್ಬನೇ, ಮಮ್ಮಟನೇ, ಬರೆದಿರುವುದು ಚಿರಪ್ರಸಿದ್ಧ. ಆದರೂ ವ್ಯಾಖ್ಯಾನದ ಸಂಪ್ರದಾಯಕ್ಕನುಸಾರವಾಗಿ ಕಾರಿಕಾಕಾರನೇ ಬೇರೆ, ವೃತ್ತಿಕಾರನೇ ಬೇರೆಯೆಂಬಂತೆ ಉತ್ತಮ ಪುರುಷದ ಬದಲು 'ಗ್ರಂಥಕರ್ತ'ನೆಂಬ ಪ್ರಯೋಗ ಬಂದಿದೆ. ಈ ಪ್ರಯೋಗದಿಂದ ಭ್ರಾಂತರಾದ ಮಹೇಶ್ವರನೇ ಮೊದಲಾದ ಈಚಿನ ಟೀಕಾಕಾರರು ಭರತನು ಅಗ್ನಿಪುರಾಣಾದಿಗಳಿಂದ ಕಾರಿಕೆಗಳನ್ನು ಸಂಗ್ರಹಿಸಿ ಬರೆದನೆಂದೂ ಮಮ್ಮಟನು ವೃತ್ತಿಯನ್ನಷ್ಟೇ ರಚಿಸಿದನೆಂದೂ ಹೇಳುತ್ತಾರೆ. ಈ ವಾದವನ್ನು ಇಂದಿನ ಸಂಶೋಧಕರು ಒಪ್ಪಿಲ್ಲ.

3 ನುತಿಸುವುದೆಂದರೆ ಸಕಾರಣವಾಗಿ ಹೊಗಳುವುದು ; ಸುಮ್ಮನೆ ಧ್ಯಾನಮಾಡುವುದಲ್ಲ.

ನವರಸರುಚಿರಂ ತಾನೆನೆ
ನವಸೃಷ್ಟಿಯನೀವ ಕವಿಯ ವಾಣಿಯೆ ಗೆಲ್ವಳ್ ||

ಬ್ರಹ್ಮನ ನಿರ್ಮಿತಿ ಅಥವಾ ಸೃಷ್ಟಿ 'ನಿಯತಿ'[4] ಎಂದರೆ ಅದೃಷ್ಟದ ನಿಯಮಾನುಸಾರವಾಗಿರುತ್ತದೆ[5]; ಸುಖ, ದುಃಖ ಮತ್ತು ಮೋಹ, ಈ ಮೂರು ಅಂಶಗಳಿಂದಲೂ ಸಮ್ಮಿಶ್ರವಾಗಿರುತ್ತದೆ[6]; ಪರಮಾಣುಗಳೇ ಮೊದಲಾದ ಉಪಾದಾನ ಕಾರಣಗಳಿಗೂ ಕರ್ಮವೇ ಮುಂತಾದ ಸಹಕಾರಿ ಕಾರಣಗಳಿಗೂ[7]

---

[4] 'ನಿಯತಿ' ಎಂದರೆ ಅದೃಷ್ಟವೆಂಬರ್ಥ ರೂಢಿಯಲ್ಲಿ ಪ್ರಸಿದ್ಧ. ನಮ್ಮ ವೇದಾಂತಶಾಸ್ತ್ರದಲ್ಲಿ ಜಗತ್ತಿನ ಸೃಷ್ಟಿಗೆ ಪ್ರಳಯಪೂರ್ವದ ಜೀವರ ಅದೃಷ್ಟರೂಪೀ ಕರ್ಮವೂ ಕಾರಣವೆಂದು ಪರಿಗಣಿತವಾಗಿದೆ. ಆದರೆ ಕಾಶ್ಮೀರ ಶೈವಸಿದ್ಧಾಂತದಲ್ಲಿ ಅದಕ್ಕೆ ವಿಶಿಷ್ಟವಾದ ಮತ್ತೊಂದು ಅರ್ಥ ಉಕ್ತವಾಗಿದೆ. ಪಂಚಭೂತಗಳು, ಪಂಚಕರ್ಮೇಂದ್ರಿಯಗಳು, ಪಂಚಬುದ್ಧೀಂದ್ರಿಯಗಳು, ಪಂಚವಿಷಯಗಳು ಮುಂತಾದ ತತ್ತ್ವಗಳಿಂದಾರಂಭವಾಗಿ ಶಿವತತ್ತ್ವದಲ್ಲಿ ಕಡೆಯಾಗುವ ಮೂವತ್ತಾರು ತತ್ತ್ವಗಳಲ್ಲಿ ನಿಯತಿಯೆಂಬ ಒಂದು ತತ್ತ್ವವುಂಟು. ಆ ತತ್ತ್ವದಂತೆ ವಿಶ್ವನಿಯಾಮಿಕೆಯಾದ ಶಕ್ತಿಯೇ ನಿಯತಿ. ನಿಯತಿಯೇ ನಾಮರೂಪಗಳಿಗೆ ಕಾರಣಳು. "ಈಶ್ವರಃ ಶುದ್ಧವಿದ್ಯಾ ಚ ಕಾಲಶ್ಚ ನಿಯತಿಸ್ತಥಾ" ಎಂಬ ಶೈವಶಾಸ್ತ್ರ ಇದಕ್ಕೆ ಆಧಾರ. ಮಮ್ಮಟನಿಗೆ ಎರಡು ಅರ್ಥಗಳೂ ವಿವಕ್ಷಿತವಾಗಿದ್ದಿರಬಹುದು. ಪ್ರದೀಪಕಾರನು ವಸ್ತುಗಳ ಅಸಾಧಾರಣ ಧರ್ಮವೆಂದೂ ಅರ್ಥಮಾಡಿದ್ದಾನೆ. ನಿಯತಿಯೆಂದರೆ ನಿಯಮಿತವಾದ ಸಂಸಾರವೆಂಬ ಅರ್ಥವನ್ನು ಮಹೇಶ್ವರನು ಸೂಚಿಸಿದ್ದಾನೆ.

[5] ನಿಯತಿಯ ನಿಯಮವೆಂದರೆ ತಾರ್ಕಿಕರು ಹೇಳುವ ವ್ಯಾಪ್ತಿಯೇ ಎಂದು ವೈದ್ಯನಾಥನೂ, 'ನಿಯತ'ವೆಂದರೆ ಜನ್ಯವೆಂದು ಮಹೇಶ್ವರನೂ ಬರೆಯುತ್ತಾರೆ. ಚೇತನ, ಅಚೇತನ, ವಸ್ತುಗಳ ಅನಿವಾರ್ಯ ಭೇದವೆಂದು ಮಾಣಿಕ್ಯಚಂದ್ರನ ಮತ. ಇದನ್ನೇ ಇಂಗ್ಲಿಷಿನಲ್ಲಿ Laws of Nature ಎನ್ನುವುದಕ್ಕೆ ಪರ್ಯಾಯವಾದ ನಿಸರ್ಗನಿಯಮವೆಂಬರ್ಥದಲ್ಲಿ ಇಂದು ವ್ಯಾಖ್ಯಾನಮಾಡಬಹುದು.

[6] ಸಾಂಖ್ಯದರ್ಶನದ ಪ್ರಕಾರ ಜಗತ್ತಿನ ಸೃಷ್ಟಿಗೆ ಸತ್ತ್ವ, ರಜಸ್ಸು, ಮತ್ತು ತಮಸ್ಸೆಂಬ ತ್ರಿಗುಣಗಳಿಂದ ಕೂಡಿದ ಪ್ರಕೃತಿಯೇ ಆದಿಕಾರಣ. ಅದರ ವಿಕೃತಿ ಅಥವಾ ಪರಿಣಾಮಗಳಿಂದಲೇ ಬುದ್ಧಿ, ಅಹಂಕಾರ, ಮುಂತಾದುವೂ ಚರಾಚರ ವಿಶ್ವವೂ ಕಡೆಗೆ ಹುಟ್ಟುತ್ತವೆ. ಪುರುಷನು ವಸ್ತುತಃ ನಿರ್ವಿಕಾರನೂ ಸಾಕ್ಷಿಯೂ ಆಗಿದ್ದರೂ ಪ್ರಕೃತಿಯ ಪರಿಣಾಮಗಳಾದ ಬುದ್ಧಿ, ಅಹಂಕಾರ ಮತ್ತು ಮನಸ್ಸುಗಳ ಪ್ರಭಾವದಿಂದ ಅಜ್ಞನಾಗಿ ಪ್ರಕೃತಿ ಗುಣಗಳ ಫಲವಾದ ಭೋಗಗಳಲ್ಲೇ ತೊಳಲುತ್ತಾನೆ. ಸತ್ತ್ವಗುಣದ ಫಲ ಸುಖವಾದರೆ ರಜೋಗುಣದ ಫಲ ದುಃಖ ಮತ್ತು ತಮೋಗುಣದ ಫಲ ಮೋಹ. ಇವುಗಳ ಅನುಭವ ಮುಕ್ತನೊಬ್ಬನನ್ನು ಹೊರತು ಮಿಕ್ಕೆಲ್ಲರಿಗೂ ಅನಿವಾರ್ಯ. ಪ್ರಕೃತಿಜನ್ಯವಾದ ವಿಶ್ವವೇ ಸುಖದುಃಖಮೋಹಮಯವಾದುದೆಂದು ಸಾಂಖ್ಯರ ಸಿದ್ಧಾಂತ. ಕಾವ್ಯದಲ್ಲಿ ಮಾತ್ರ ದುಃಖಮೋಹಗಳ ಸ್ಪರ್ಶವಿಲ್ಲವೆಂದು ಮಮ್ಮಟನ ತಾತ್ಪರ್ಯ.

[7] ವೈಶೇಷಿಕ ದರ್ಶನದ ಪ್ರಕಾರ ಎಲ್ಲ ಕಾರ್ಯಗಳೂ ಎರಡು ಬಗೆಯ ಕಾರಣ ಸಾಮಗ್ರಿಯನ್ನವಲಂಬಿಸಿ ಹುಟ್ಟುತ್ತವೆ. ಒಂದು ಮಡಕೆಯಾಗಬೇಕಾದರೆ ಮೊದಲು ಮಣ್ಣು ಬೇಕು. ಇದು

ಅಧೀನವಾಗಿರುತ್ತದೆ; (ಸಿಹಿ, ಹುಳಿ, ಮುಂತಾದ) ಆರೇ ರಸಗಳು ಮಾತ್ರ ಅಲ್ಲಿ ಉಂಟು; ಎಲ್ಲವೂ ಹೃದ್ಯವೆಂಬಂತೆಯೂ ಇಲ್ಲ[9]; ಆದರೆ ಕವಿವಾಣಿಯ ಸೃಷ್ಟಿ

ಉಪಾದಾನಕಾರಣ. ಆಮೇಲೆ ಕುಂಬಾರನ ಚಕ್ರ ತಿರುಗಬೇಕು, ತಿರುಗಿಸಲು ಕೋಲೂ ಬೇಕು. ಎಲ್ಲಕ್ಕಿಂತಲೂ ಹೆಚ್ಚಾಗಿ ಕುಂಬಾರ ಬೇಕು. ಈ ಎಲ್ಲ ಸಾಮಗ್ರಿಗಳೂ ಸಾಮಾನ್ಯವಾಗಿ ಸಹಕಾರಿ ಕಾರಣವೆನಿಸುತ್ತವೆ. ಜಗತ್ತಿನ ಸೃಷ್ಟಿಗೆ ಉಪಾದಾನವಾವುದೆಂದರೆ ಪೃಥಿವೀ, ಜಲ, ವಾಯು, ತೇಜಸ್ಸು, ಇವುಗಳ ಪರಮಾಣುಗಳೆಂದೇ ವೈಶೇಷಿಕರು ಹೇಳುತ್ತಾರೆ. ಸ್ಥೂಲಪದಾರ್ಥಗಳನ್ನು ಕಡೆತನಕ ವಿಭಾಗಿಸುತ್ತಾ ಹೋದರೆ ಕಣ್ಣಿಗೆ ಕಾಣುವಂತಹ ಕಡೆಯ ಪರಿಮಾಣವನ್ನು ಬಿಸಿಲು ಕೋಲಿನಲ್ಲಿರುವ ಕಣಕ್ಕೆ ಹೋಲಿಸಿ ತ್ರುಟಿಯೆನ್ನುತ್ತಾರೆ, ಅದಕ್ಕೆ ರೂಪವಿರುವುದರಿಂದ ಅದನ್ನು ತ್ರ್ಯಣುಕವೆಂದು ಭಾವಿಸಿ, ಅದು ಮತ್ತೂ ವಿಭಾಗಕ್ಕೆ ಬರುವುದೆನ್ನುತ್ತಾರೆ. ಮೂರು ದ್ವ್ಯಣುಕಗಳ ಸಂಯೋಗವೇ ತ್ರ್ಯಣುಕ. ಒಂದೊಂದು ದ್ವ್ಯಣುಕದಲ್ಲೂ ರೂಪಾದಿಗಳಿಲ್ಲದ ಎರಡು ಪರಮಾಣುಗಳುಂಟೆಂದು ತಿಳಿಯುತ್ತಾರೆ. ಹೀಗೆ ರೂಪಾದಿಗಳಿಲ್ಲದ ಪರಮಾಣುಗಳು ರೂಪವುಳ್ಳ ಸ್ಥೂಲ ವಸ್ತುಗಳಿಗೆ ಪರಸ್ಪರ ಸಂಯೋಗ ವಿಶೇಷದಿಂದಲೇ ಕಾರಣವಾಗುವುವೆಂದು ಅವರ ತತ್ವ. ಈ ಪರಮಾಣುಗಳನ್ನು ಸಮವಾಯಿ ಕಾರಣಗಳೆಂದೂ ಸಂಯೋಗವನ್ನು ಅಸಮವಾಯಿಕಾರಣವೆಂದೂ ಹೇಳುವುದುಂಟು. ವಿಯುಕ್ತವಾದ ಪರಮಾಣುಗಳು ಸಂಯುಕ್ತವಾಗಲು ಅದೃಷ್ಟ ಅಥವಾ ಕರ್ಮ ನಿಮಿತ್ತ ಕಾರಣವೆಂದು ಅವರೂ ಒಪ್ಪುತ್ತಾರೆ. ಹೋಲಿಸಿ—

ಜಾಲಾಂತರಗತೇ ಭಾನೌ ಯತ್ ಸೂಕ್ಷ್ಮಂ ದೃಶ್ಯತೇ ರಜಃ |
ತಸ್ಯ ಷಷ್ಠ್ಯೈಕಭಾಗೋ ಯಃ ಪರಮಾಣುಃ ಸ ಕೀರ್ತಿತಃ ||

8 ಕಾರಿಕೆಯಲ್ಲಿ 'ಅನನ್ಯ ಪರತಂತ್ರಾಂ' ಎಂದಿದೆ. ವೃತ್ತಿಯಲ್ಲಿ ಬ್ರಹ್ಮಸೃಷ್ಟಿ . . . 'ಕಾರಣ ಪರತಂತ್ರ'ವೆಂದು ಹೇಳಿದೆ. ಆದ್ದರಿಂದ ಎರಡು ಕಡೆಗಳಲ್ಲೂ 'ಪರತಂತ್ರ' ಎಂದರೆ 'ಅಧೀನ' ಎಂಬಿಷ್ಟೇ ಅರ್ಥ ಗ್ರಂಥಕರ್ತನಿಗೆ ವಿವಕ್ಷಿತವೆನಿಸುತ್ತದೆ. ಆದರೆ ಅಮರಕೋಶದಲ್ಲಿ "ಪರತಂತ್ರಃ ಪರಾಧೀನಃ" ಎಂದಿರುವುದರಿಂದ ಕಾರಿಕೆಯಲ್ಲಿ ಅನ್ಯ, ಪರ, ಎನ್ನುವಾಗ ಪುನರುಕ್ತಿ ದೋಷ ಬಂದೀತೆಂದು ಅದನ್ನು ತಪ್ಪಿಸಲು ಪ್ರದೀಪಕಾರನು 'ಅನನ್ಯ' ಎಂದರೆ 'ಕವಿ, ಮತ್ತು ಆತನ ಪ್ರತಿಭೆಗಳನ್ನು ಬಿಟ್ಟು' ಎಂದೂ 'ಪರ' ಎಂದರೆ 'ತನಗಿಂತ ಬೇರೊಂದು' ಎಂದೂ ಅರ್ಥಗಳನ್ನಿಳಿದಿದ್ದಾನೆ. 'ಅಸೂರ್ಯಂಪಶ್ಯ' ಎಂಬ ಸಮಾಸಪದಕ್ಕೆ ಸೂರ್ಯನನ್ನೂ ಕೂಡ ನೋಡದಷ್ಟು ಸುಖವಾಸದಲ್ಲಿರುವವನು ಎಂದರ್ಥ ಮಾಡಿಕೊಳ್ಳುವಂತೆ ನಿಷೇಧಾರ್ಥಕವಾದ ಅಕಾರವನ್ನು ಪ್ರಕೃತದಲ್ಲಿಯೂ ಕ್ರಿಯೆಯೊಡನೆ ಅನ್ವಯಿಸಿಕೊಂಡು ಮತ್ತಾವುದಕ್ಕೂ ಅಧೀನವಲ್ಲದ್ದೆಂಬ ಅರ್ಥವನ್ನೇ ಮಾಡಿಕೊಳ್ಳಬೇಕು. ಆಗ ಕವಿವಾಣಿಯ ಸ್ವಾತಂತ್ರ್ಯವನ್ನೇ ಮತ್ತಷ್ಟು ಒತ್ತಿ ಹೇಳಿದಂತಾಗುತ್ತದೆ.

9 ಬ್ರಹ್ಮಸೃಷ್ಟಿಯಲ್ಲಿರುವ ರಸಗಳೆಂದರೆ ರುಚಿಗಳು. ಮಧುರ, ಆಮ್ಲ, ಲವಣ, ಕಟು, ಕಷಾಯ, ತಿಕ್ತ, ಎಂಬ ಆರನ್ನೇ ತಾರ್ಕಿಕರು ರಸಗಳೆಂದು ತಿಳಿಯುತ್ತಾರೆ. ಕಾವ್ಯದಲ್ಲಿ ರಸವೆಂದರೆ ಶೃಂಗಾರಾದಿಗಳು ಒಂಭತ್ತು. ಕವಿಸೃಷ್ಟಿ ರಸಸಂಖ್ಯೆಯಲ್ಲಷ್ಟೇ ಅಲ್ಲ; ಆಸ್ವಾದ್ಯತ್ವದಲ್ಲಿಯೂ ಅಧಿಕವೆಂದು ಗ್ರಂಥಕಾರನ ತಾತ್ಪರ್ಯ.

ಇದಕ್ಕೆ ಎಲ್ಲ ಬಗೆಯಲ್ಲಿಯೂ ವಿಲಕ್ಷಣವಾದುದು; ಆದ್ದರಿಂದಲೇ ಅದು ಬ್ರಹ್ಮ ಸೃಷ್ಟಿಗಿಂತಲೂ ಮಿಗಿಲಾದುದು[10]. ಮಿಗಿಲೆನ್ನುವುದರಿಂದ ನಮಸ್ಕರಿಸುತ್ತೇನೆಂಬ ಅರ್ಥ ಧ್ವನಿತವಾಗುತ್ತದೆ[11]. ಆದ್ದರಿಂದ ಕವಿವಾಣಿಯನ್ನು ನಮಿಸುವೆನೆಂದು ತಾತ್ಪರ್ಯ.

ಗ್ರಂಥದ ವಿಷಯವು[12] ಅನೇಕ ಪ್ರಯೋಜನಗಳನ್ನುಳ್ಳದ್ದೆಂದು ವಿವರಿಸಲು ಇದನ್ನು ಹೇಳಿದೆ!—

ಕಾವ್ಯಂ ಯಶಸೇಽರ್ಥಕೃತೇ ವ್ಯವಹಾರವಿದೇ ಶಿವೇತರಕ್ಷತಯೇ ।
ಸದ್ಯಃ ಪರನಿರ್ವೃತಯೇ ಕಾಂತಾಸಮ್ಮಿತತಯೋಪದೇಶಯುಜೇ[13] ॥ ೨ ॥

ಕೀರ್ತಿಗೆ, ಧನಲಾಭಕ್ಕೆ, ವ್ಯವಹಾರಜ್ಞಾನಕ್ಕೆ, ಅಶುಭದ ನಿವಾರಣೆಗೆ, ತತ್ಕಾಲದಲ್ಲಿ ಪರಮಾನಂದಕ್ಕೆ, ಇನಿಯಳಂತೆ ಉಪದೇಶಯೋಜನೆಗೆ—ಎಲ್ಲಕ್ಕೂ ಕಾವ್ಯ ಸಹಾಯಕ.

ಕೀರ್ತಿ ಹರಡುವುದಕ್ಕೆ ಕಾಲಿದಾಸನೇ ಮೊದಲಾದ ಕವಿಗಳು ನಿದರ್ಶನ[14]; ಶ್ರೀ ಹರ್ಷನೇ ಮುಂತಾದವರಿಂದ ಧಾವಕನೇ ಮೊದಲಾದ ಕವಿಗಳು ಹಣವನ್ನು

---

[10] ಉಪಮೇಯವಾದ ಕವಿಸೃಷ್ಟಿಯೇ ಪ್ರಸಿದ್ಧೋಪಮಾನವಾದ ಬ್ರಹ್ಮಸೃಷ್ಟಿಗಿಂತ ಅಧಿಕವೆಂದು ವರ್ಣಿಸಿರುವುದರಿಂದ ಮಂಗಳಶ್ಲೋಕದಲ್ಲಿ ವ್ಯತಿರೇಕಾಲಂಕಾರವು ಸ್ಪಷ್ಟ. ಕವಿಯು ಬ್ರಹ್ಮನಿಗಿಂತಲೂ ದೊಡ್ಡವನೆಂಬುದೂ ಈ ಅಲಂಕಾರದಿಂದಲೇ ಸಿದ್ಧವಾಗುತ್ತದೆ.

[11] ವ್ಯತಿರೇಕಾಲಂಕಾರವು ವಾಚ್ಯವಾಗಿರುವಂತೆ ನಮಸ್ಕಾರಮಾಡುತ್ತೇನೆಂಬ ವಾಕ್ಯವು ವಾಚ್ಯವಲ್ಲ. ಇದು ಅಲಂಕಾರದಿಂದ ವ್ಯಂಗ್ಯ. ಆದಿಶ್ಲೋಕದಲ್ಲಿ ಅದು ಅತ್ಯಂತ ಪ್ರಸಕ್ತವೂ ಪ್ರಧಾನವೂ ಆದುದರಿಂದ ಮುಂದೆ ಹೇಳುವಂತೆ ಈ ಶ್ಲೋಕವು ಉತ್ತಮಕಾವ್ಯವೆನಿಸಲು ಸಾಧಕವಾಗಿದೆ.

[12] ಗ್ರಂಥವೆಂದರೆ ಲಕ್ಷಣಗ್ರಂಥವಾದ ಕಾವ್ಯಪ್ರಕಾಶ. ಇದರ ವಿಷಯವೆಂದರೆ ಲಕ್ಷಣಗಳೇ. ಆದರೆ ಎರಡನೆ ಕಾರಿಕೆಯಲ್ಲಿ ಲಕ್ಷಣಗಳ ಪ್ರಯೋಜನವನ್ನು ವರ್ಣಿಸಿಲ್ಲ; ಕಾವ್ಯದ ಪ್ರಯೋಜನವನ್ನೇ ವರ್ಣಿಸಿದೆ. ಈ ವಿಸಂಗತಿಯನ್ನು ತಪ್ಪಿಸಲು ಪ್ರದೀಪಕಾರನು ಲಕ್ಷಣಗಳು ಕಾವ್ಯಕ್ಕೆ ಅಂಗಗಳಾದ್ದರಿಂದ, ಪ್ರಧಾನವಾದ ಕಾವ್ಯವು ಸಪ್ರಯೋಜನವಾದರೆ, ಅಂಗವಾದ ಲಕ್ಷಣಕ್ಕೂ ಬೆಲೆ ಬರುತ್ತದೆಂದು ವಿವರಿಸಿದ್ದಾನೆ. ಆದರೆ ಸಾಮಾನ್ಯವಾಗಿ ಉಳಿದ ಟೀಕಾಕಾರರೆಲ್ಲರೂ ಗ್ರಂಥವಿಷಯುವೆಂದರೆ ಕಾವ್ಯವೆಂದೇ ನೇರವಾಗಿ ಅರ್ಥಮಾಡಿಬಿಡುತ್ತಾರೆ.

[13] ಕಾರಿಕೆಯಲ್ಲಿರುವ ಕೃತ್, ವಿದ್, ಯುಜ್, ಎಂಬ ಪದಗಳು 'ಸಂಪದ್' ಎಂಬಂತೆ ಕ್ವಿಬಂತವಾದ ಭಾವನಾಮಗಳು. ಸುಮ್ಮನೆ 'ಅರ್ಥಾಯ' ಎಂದಿದ್ದರೆ 'ಹಣಕ್ಕೆ' ಎಂದಾಗುತ್ತಿತ್ತು. 'ಅರ್ಥಕೃತೇ' ಎಂದರೆ 'ಹಣದ ಸಂಪಾದನೆಗೆ' ಎಂಬ ವಿಶಿಷ್ಟಾರ್ಥವಿದೆ. ಹಾಗೆಯೇ 'ವ್ಯವಹಾರವಿದೇ' ಎಂದರೆ ವ್ಯವಹಾರಜ್ಞಾನವಾಗುವುದಕ್ಕೆ ಎಂದು ಅಭಿಪ್ರಾಯ.

[14] ಅಲಂಕಾರಶಾಸ್ತ್ರಕಾರರು ಕಾಳಿದಾಸನಿಗೇ ಕವಿಗಳಲ್ಲಿ ಅಗ್ರಸ್ಥಾನವನ್ನಿತ್ತಿರುವುದು ಅವರ ರುಚಿಶುದ್ಧಿಗೆ ಸಾಕ್ಷಿ.

ಗಳಿಸಿದುದು ಸುವಿದಿತ[15]; ರಾಜನೇ ಮುಂತಾದವರಿಗೆ ಉಚಿತವಾದ ಆಚಾರವೇನೆಂಬ ಪರಿಜ್ಞಾನಕ್ಕೂ ಕಾವ್ಯವೇ ಸಾಧಕ[16]; ಸೂರ್ಯನೇ ಮುಂತಾದ ದೇವತೆಗಳ ಕೃಪೆಯಿಂದ ಮಯೂರನೇ ಮೊದಲಾದ ಕವಿಗಳು ರೋಗಮುಕ್ತರಾದುದು ಪ್ರಸಿದ್ಧವಾಗಿದೆ[17]. ಎಲ್ಲಕ್ಕಿಂತಲೂ ಮೇಲಾದ ಪ್ರಯೋಜನವೆಂದರೆ ರಸಾಸ್ವಾದನಕ್ಷಣದಲ್ಲಿಯೇ ಜನಿಸಿ ಬೇರೆಲ್ಲವನ್ನೂ ಮರೆಸಿಬಿಡುವಂತಹ ಪರಮಾನಂದ[18]. (ಕಡೆಯ ಪ್ರಯೋಜನವಾದ) ಉಪದೇಶದಲ್ಲಿ ಅನೇಕ ಬಗೆಗಳುಂಟು :—

ವೇದ ಮುಂತಾದ ಶಾಸ್ತ್ರಗಳಲ್ಲಿ ಶಬ್ದ ಪ್ರಧಾನವಾದ ಕಾರಣ ಅವುಗಳ ಆದೇಶ ಪ್ರಭುವಿನ ಅಪ್ಪಣೆಯಂತೆ[19]; ಪುರಾಣವೇ ಮೊದಲಾದ ಇತಿಹಾಸಗಳಲ್ಲಿ ಅರ್ಥದ

---

15 ರತ್ನಾವಳೀ ನಾಟಿಕೆಯನ್ನು ಬರೆದವನು ಧಾವಕನೆಂದೂ, ಅದನ್ನು ತನ್ನ ರಸನಾದ ಹರ್ಷನ ಹೆಸರಲ್ಲಿ ಪ್ರಕಟಿಸಿ ದುಡ್ಡುಮಾಡಿದನೆಂದೂ ಶ್ರೀ ವಿದ್ಯಾಚಕ್ರವರ್ತಿಯೇ ಮುಂತಾದ ವ್ಯಾಖ್ಯಾಕಾರರು ಬರೆಯುತ್ತಾರೆ. ಧಾವಕನೆಂದರೆ ಅಗಸ; ಇದು ಭಾಸನ ಮತ್ತೊಂದು ಹೆಸರೆಂದೂ ಕೆಲವರು ಸೂಚಿಸಿದ್ದಾರೆ. ಸಂಸ್ಕೃತ ಸಂಶೋಧಕರೆಲ್ಲರೂ ಈ ಅಂಶಗಳನ್ನು ಮಾನ್ಯಮಾಡಿಲ್ಲ.

16 ರಾಜ, ಮಂತ್ರಿ, ಗುರು, ಮುಂತಾದವರು ಹೇಗೆ ನಡೆದುಕೊಳ್ಳಬೇಕೆಂಬ ಬಗ್ಗೆ ಆಚಾರದ ಔಚಿತ್ಯವನ್ನು ತೋರಿಸುವುದೇ ಸಂಸ್ಕೃತಕಾವ್ಯದ ವೈಶಿಷ್ಟ್ಯ.

17 ಇದರಿಂದ ಮಮ್ಮಟನ ಕಾಲದಲ್ಲಿ ಕಾವ್ಯದ ಬಗ್ಗೆ ಇದ್ದ ಧರ್ಮಶ್ರದ್ಧೆಯೂ ವ್ಯಕ್ತವಾಗುತ್ತದೆ. ಕಾವ್ಯದಿಂದ ದೇವತಾನುಗ್ರಹವನ್ನು ಸಂಪಾದಿಸಬಹುದೆಂದೂ, ಕರ್ಮವಿಪಾಕದಿಂದ ಬಂದ ರೋಗಾದಿ ಆಪತ್ತುಗಳನ್ನು ನಿವಾರಿಸಿಕೊಳ್ಳಬಹುದೆಂದೂ ಜನರು ತಿಳಿಯುತ್ತಿದ್ದರು. ಸಂಸ್ಕೃತದಲ್ಲಿರುವ ಸ್ತೋತ್ರವೆಂಬ ಕಾವ್ಯರಾಶಿಗೆ ಈ ಭಾವನೆಯೇ ಮೂಲ.

ಮಯೂರಕವಿಯು ಶ್ರೀಹರ್ಷನ ಆಸ್ಥಾನದಲ್ಲಿದ್ದನೆಂದೂ ಪ್ರಸಿದ್ಧನಾದ ಬಾಣಭಟ್ಟನೇ ಈತನ ಅಳಿಯನೆಂದೂ ಐತಿಹ್ಯವಿದೆ. ಈತನ ಮಯೂರಾಷ್ಟಕವೆಂಬ ಮುಕ್ತಕಗಳೂ ಸೂರ್ಯಶತಕವೆಂಬ ಸ್ತೋತ್ರಕಾವ್ಯವೂ ಈಗ ಉಪಲಬ್ಧವಿವೆ. ಋತುಸ್ನಾನಮಾಡಿಕೊಂಡು ಬರುತ್ತಿದ್ದ ತನ್ನ ಮಗಳ ಸೌಂದರ್ಯವನ್ನೇ ವರ್ಣಿಸಿ ಇವನು ಅಷ್ಟಕವನ್ನು ಹೇಳಲು, ಅದರಿಂದ ಕುಪಿತೆಯಾದ ಮಗಳು ಕುಷ್ಟರೋಗ ಬರಲೆಂದು ತಂದೆಯನ್ನು ಶಪಿಸಿದಳಂತೆ. ಆ ರೋಗ ಪರಿಹಾರವಾಗದಿದ್ದರೆ ಆತ್ಮಹತ್ಯೆ ಮಾಡಿಕೊಳ್ಳುವೆನೆಂದು ಪ್ರತಿಜ್ಞೆಮಾಡಿ ತನ್ನ ದೇಹವು ತೂಗುವಂತೆ ನೂರು ದಾರಗಳಿಂದ ಮರಕ್ಕೆ ಕಟ್ಟಿಸಿಕೊಂಡು, ಆರೋಗ್ಯದಾತನಾದ ಸೂರ್ಯದೇವನನ್ನು ಒಂದೊಂದೇ ಶ್ಲೋಕದಿಂದ ಭಜಿಸುತ್ತ, ಒಂದು ಶ್ಲೋಕ ಮುಗಿದೊಡನೆ ಒಂದು ದಾರವನ್ನು ಕತ್ತರಿಸುತ್ತ ಹೋದನಂತೆ. ನೂರನೆಯ ಶ್ಲೋಕ ಹೇಳಿ ಮುಗಿಸುವಷ್ಟರಲ್ಲಿ ದೇವನು ಪ್ರತ್ಯಕ್ಷನಾಗಿ ರೋಗ ಶಮನಮಾಡಿದನಂತೆ. ಇದು ಮಯೂರನ ಸೂರ್ಯಶತಕದ ಪ್ರಾಶಸ್ತ್ಯವನ್ನು ಬಿಂಬಿಸುವ ದಂತಕಥೆ.

18 ರಸದ ಮೀಮಾಂಸೆಯು ಮುಂದೆ ನಾಲ್ಕನೆಯ ಉಲ್ಲಾಸದಲ್ಲಿ ವಿಶದವಾಗಿ ಬರುತ್ತದೆ.

19 ವಾಙ್ಮಯವನ್ನೆಲ್ಲ ಉಪದೇಶದ ವೈವಿಧ್ಯದೃಷ್ಟಿಯಿಂದ ಪ್ರಭುಸಮ್ಮಿತ, ಸುಹೃತ್ಸಮ್ಮಿತ, ಕಾಂತಾಸಮ್ಮಿತ, ಎಂದು ಮೂರು ಬಗೆಯಾಗಿ ಮಮ್ಮಟನಿಗಿಂತ ಪ್ರಾಚೀನನಾದ ಭಟ್ಟನಾಯಕನು ವಿಂಗಡಿಸಿದ್ದನು. ಭಟ್ಟನಾಯಕನು ಧ್ವನಿವಿರೋಧಿಯಾದರೂ ಮಮ್ಮಟನು ಇಲ್ಲಿ ಆತನ

ತಾತ್ಪರ್ಯ ಮಾತ್ರ ಪ್ರಧಾನವಾಗಿರುವುದರಿಂದ ಅವುಗಳ ಆದೇಶ ಗೆಳೆಯನ ಸೂಚನೆಗೆ ಸಮಾನ[20]; ಆದರೆ ಇವೆರಡಕ್ಕೂ ವಿಲಕ್ಷಣವಾದುದೇ ಕಾವ್ಯದ ಉಪದೇಶಕ್ರಮ. ಕಾವ್ಯದಲ್ಲಿ ಶಬ್ದ, ಅರ್ಥ, ಎರಡೂ ತಮ್ಮ ಪ್ರಾಧಾನ್ಯವನ್ನು ಕಳೆದುಕೊಂಡು ರಸ ಪ್ರತೀತಿಗೆ ಅನುಕೂಲಿಸುವ ಕಾರ್ಯದಲ್ಲಿ ಮಾತ್ರ ನಿರತವಾಗಿಬಿಡುತ್ತವೆ[21]. ಹೀಗೆ ಲೋಕೋತ್ತರವಾದ ವರ್ಣನೆಯಲ್ಲಿ ನಿಪುಣನಾದವನೇ ಕವಿ, ಅವನ ಕೃತಿಯೇ ಕಾವ್ಯ[22].

ವ್ಯಾಪಾರ ಪ್ರಾಧಾನ್ಯವಾದದ ಸಾಮಾನ್ಯಾಂಶವನ್ನು ಅನುಸರಿಸಿದ್ದಾನೆ. ವೇದಗಳಲ್ಲಿ ಮತ್ತು ಧರ್ಮಶಾಸ್ತ್ರಗಳಲ್ಲಿ ವಿಧಿಸಿರುವುದನ್ನು ಚಾಚೂ ತಪ್ಪದೆ ಅಕ್ಷರಶಃ ಪಾಲಿಸಬೇಕು. ಒಂದು ಶಬ್ದಕ್ಕೆ ಲೋಪವಾದರೂ ವಿಧಿಲೋಪ ಬಂದು ಕರ್ಮವು ಹಾಳಾಗುತ್ತದೆ. ಆದ್ದರಿಂದ ವೇದದ ಆದೇಶವು ರಾಜಾಜ್ಞೆಯಂತೆ ಶಬ್ದಪ್ರಧಾನ.

20 ಇತಿಹಾಸಪುರಾಣಗಳಲ್ಲಿ ಹಾಗಲ್ಲ. ಅನೇಕ ಪೂರ್ವಕಥೆಗಳ ಸಹಾಯದಿಂದ ಯುಕ್ತಿಯುಕ್ತವಾಗಿ ನಿಯಮಾನುಷ್ಠಾನದ ಪ್ರಯೋಜನವನ್ನು ಅವು ಮನಸ್ಸಿಗೆ ಬಿಂಬಿಸುತ್ತವೆ. ಈ ಕಥೆಗಳು ಅತಿಮಾನುಷವೂ ಅಸಂಭವವೂ ಆಗಿರುವ ಕಾರಣ, ಅವಕ್ಕೆ ಅಕ್ಷರಶಃ ಸತ್ಯತ್ವವನ್ನಾರೋಪಿಸುವಂತಿರುವುದಿಲ್ಲ. ಅವನ್ನು 'ಅರ್ಥವಾದ'ವೆನ್ನುವರು ; ಎಂದರೆ ಅವುಗಳ ತಾತ್ಪರ್ಯ ಮಾತ್ರ ಗ್ರಾಹ್ಯವೆಂದು ಭಾವ. ಆದುದರಿಂದ ಇತಿಹಾಸಾದಿಗಳು ಗೆಳೆಯನ ಸಲಹೆಗಳಂತೆ ಅರ್ಥಪ್ರಧಾನ.

21 ಕೆಳಗೆ ಬರೆದ ಭಟ್ಟನಾಯಕನ ಶ್ಲೋಕಗಳೇ ಮಮ್ಮಟನ ಉಕ್ತಿಗಳಿಗೆ ಆಧಾರ :—

ಶಬ್ದಪ್ರಾಧಾನ್ಯಮಾಶ್ರಿತ್ಯ ತತ್ರ ಶಾಸ್ತ್ರಂ ಪೃಥಗ್ ವಿದುಃ |
ಅರ್ಥೇ ತತ್ತ್ವೇನ ಯುಕ್ತೇ ತು ವದಂತ್ಯಾಖ್ಯಾನಮೇತಯೋಃ ||
ದ್ವಯೋರ್ಗುಣತ್ವೇ ವ್ಯಾಪಾರಪ್ರಾಧಾನ್ಯೇ ಕಾವ್ಯಗೀರ್ಭವೇತ್ ||

ವಸ್ತುತಃ ಈ ಮಾತುಗಳು ಭಟ್ಟನಾಯಕನ ಭಾವಕತ್ವ, ಭೋಜಕತ್ವಗಳೆಂಬ ಕಾವ್ಯವ್ಯಾಪಾರಗಳ ಉತ್ಕರ್ಷಸ್ಥಾಪನೆಗೆ ಸಹಾಯವಾಗುವಂತೆಯೇ ವ್ಯಂಜಕತ್ವವ್ಯಾಪಾರದ ಪ್ರಕರ್ಷಸ್ಥಾಪನೆಗೂ ಸಹಾಯವಾಗಬಹುದಾದರೂ, ಭಟ್ಟನಾಯಕನು ವ್ಯಾಪಾರವನ್ನು ಪ್ರಧಾನವೆನ್ನುವ ಹಾಗೆ ವ್ಯಂಜಕತ್ವವ್ಯಾಪಾರವೇ ಕಾವ್ಯದಲ್ಲಿ ಪ್ರಧಾನವೆಂದು ಧ್ವನಿವಾದಿಗಳು ಹೇಳುವಂತಿಲ್ಲ. ಆನಂದವರ್ಧನಾದಿ ಧ್ವನಿವಾದಿಗಳಿಗೆ ವ್ಯಂಗ್ಯವಾದ ವಸ್ತು, ಅಲಂಕಾರ, ರಸಗಳೇ ವ್ಯಾಪಾರಕ್ಕಿಂತಲೂ ಪ್ರಧಾನ. ಕಾವ್ಯಕ್ಕೆ ವಿಶ್ರಾಂತಿ ಬರುವುದು ಪ್ರಧಾನವಾದ ವ್ಯಂಗ್ಯಾರ್ಥದಲ್ಲೇ ಹೊರತು, ತತ್ಸಹಾಯಕವಾದ ವ್ಯಾಪಾರದಲ್ಲಲ್ಲ. ಮಮ್ಮಟನೇ ಮುಂದೆ ವ್ಯಂಗ್ಯಪ್ರಾಧಾನ್ಯವನ್ನು ಅಂಗೀಕರಿಸುತ್ತಾನೆ. ಈ ಪೂರ್ವಾಪರವಿರೋಧವನ್ನು ಮಾಣಿಕ್ಯಚಂದ್ರನು ಎತ್ತಿ ತೋರಿಸಿದ್ದಾನೆ. ಆದರೆ ಮಮ್ಮಟನ ವಾಕ್ಯವನ್ನು ವ್ಯಂಗ್ಯವಾದ ರಸವೇ ಕಾವ್ಯದ ಪರಮ ಲಕ್ಷ್ಯ ; ವ್ಯಂಜನಾವ್ಯಾಪಾರವು ರಸಕ್ಕೆ ಅಂಗ ಮಾತ್ರ ಎಂಬುದಾಗಿ ಅರ್ಥಮಾಡಿಕೊಂಡು ವಿರೋಧವನ್ನು ಪರಿಹರಿಸಿಕೊಳ್ಳಲೂ ಅವಕಾಶವಿದೆ. ಹೀಗೆ ಮಾಡುವಾಗ ವಸ್ತು, ಅಲಂಕಾರ, ಧ್ವನಿಗಳ ಪ್ರಾಧಾನ್ಯಕ್ಕೆ ಸ್ವಲ್ಪ ಕೊರತೆಯಾಗಬಹುದು.

22 ಹೋಲಿಸಿ—ಪ್ರಜ್ಞಾ ನವನವೋನ್ಮೇಷಶಾಲಿನೀ ಪ್ರತಿಭಾ ಮತಾ |
ತದನುಪ್ರಾಣನಾಜೀವದ್ವರ್ಣನಾನಿಪುಣಃ ಕವಿಃ ||
ತಸ್ಯ ಕರ್ಮ ಸ್ಮೃತಂ ಕಾವ್ಯಂ . . .

(ಭಟ್ಟತೌತನ ಕಾವ್ಯಕೌತುಕ)

ಕಾಂತೆಯಂತೆ ಮೊದಲು ಸರಸವಾಗಿ ಮನೋಲ್ಲಾಸವನ್ನು ತರುವ ಮೂಲಕ ತನ್ನ ಕಡೆಗೆ ಗಮನವನ್ನು ಸೆಳೆದುಕೊಂಡು, 'ರಾಮಾದಿಗಳಂತೆ ನಡೆಯಬೇಕು, ರಾವಣಾದಿಗಳಂತಲ್ಲ'ವೆಂಬ ನೀತಿಯ ಉಪದೇಶವನ್ನು (ಅಪ್ರತ್ಯಕ್ಷವಾಗಿ) ಮಾಡಿ ಕೊಡುತ್ತದೆ[23]. ಈ ಪ್ರಯೋಜನಗಳಲ್ಲಿ ಕೆಲವು ಕವಿಗೂ ಕೆಲವು ಸಹೃದಯನಿಗೂ ಯಥಾನುಗುಣವಾಗಿ ಅನ್ವಯಿಸುತ್ತವೆ[24]. ಆದ್ದರಿಂದ ಕಾವ್ಯ ಎಲ್ಲ ರೀತಿಯಿಂದಲೂ ಆದರಣೀಯ.

ಕಾವ್ಯದ ಪ್ರಯೋಜನವನ್ನು ಹೇಳಿದನಂತರ ಈಗ ಕಾವ್ಯದ ಕಾರಣ ಸಾಮಗ್ರಿಯನ್ನು ವಿವರಿಸುತ್ತಾನೆ :—

ಶಕ್ತಿರ್ನಿಪುಣತಾ ಲೋಕಶಾಸ್ತ್ರಕಾವ್ಯಾದ್ಯವೇಕ್ಷಣಾತ್ |
ಕಾವ್ಯಜ್ಞಶಿಕ್ಷಯಾಭ್ಯಾಸ ಇತಿ ಹೇತುಸ್ತದುದ್ಭವೇ ‖ ೩ ‖

'ಶಕ್ತಿ'[25]; ಲೋಕ, ಶಾಸ್ತ್ರ, ಕಾವ್ಯ, ಮುಂತಾದುವುಗಳ ವಿಶೇಷ ಪರಿಚಯ

---

23 ಕಾವ್ಯದಲ್ಲಿಯೂ ವೇದ, ಇತಿಹಾಸಗಳಂತೆ ಉಪದೇಶಪರತ್ವವಿದ್ದೇ ಇದೆ. ಉಪದೇಶವು ವೇದದಲ್ಲಿ ಕ್ರೂರವಾಗಿಯೂ ಇತಿಹಾಸದಲ್ಲಿ ಪ್ರೇರಕವಾಗಿಯೂ ಇದ್ದರೆ ಕಾವ್ಯದಲ್ಲಿ ಮಾತ್ರ ಮೃದು ಮಧುರವಾಗಿಯೂ ಸರಸಹೃದಯಂಗಮವಾಗಿಯೂ ಇರುತ್ತದೆ. ಇಷ್ಟೇ ವ್ಯತ್ಯಾಸ. ಉಪದೇಶ ಮಾರ್ಗದಲ್ಲಿ ವ್ಯತ್ಯಾಸವೇ ಹೊರತು ಉಪದೇಶವಸ್ತುವಿನಲ್ಲಿ ವ್ಯತ್ಯಾಸವಿಲ್ಲ. ಆದ್ದರಿಂದಲೇ ಕಾವ್ಯವನ್ನು ಕಾಂತಾಸಮ್ಮಿತವೆಂದು ಕರೆದಿರುವುದು. ಇದನ್ನು ಕುಂತಕನು ಶಾಸ್ತ್ರಗಳು ಕಹಿಯಾದ ಔಷಧಕ್ಕೆ ಸಮಾನವೆಂದೂ ಕಾವ್ಯವು ಅದೇ ರೋಗವನ್ನು ಪರಿಹರಿಸಬಲ್ಲ ಅಮೃತಕ್ಕೆಣೆಯೆಂದೂ ಹೇಳಿದ್ದಾನೆ—

ಕಟುಕೌಷಧವತ್ ಶಾಸ್ತ್ರಮವಿದ್ಯಾವ್ಯಾಧಿನಾಶನಮ್ |
ಆಹ್ಲಾದ್ಯಾಮೃತವತ್ ಕಾವ್ಯಮವಿವೇಕಗದಾಪಹಮ್ ||

ಕಾವ್ಯವು ನಿವಾರಿಸುವ ವ್ಯಾಧಿಯೆಂದರೆ ಅವಿವೇಕ ; ಶಾಸ್ತ್ರವು ಗುಣಮಾಡುವ ವ್ಯಾಧಿಯಾದರೂ ಇದೇ.

24 ಯಶಸ್ಸು, ಧನ, ಅನರ್ಥ, ಪ್ರತೀಕಾರಗಳು ಕವಿಗೂ, ವ್ಯವಹಾರಜ್ಞಾನ, ಪರಾನಂದ, ಕಾಂತಾಸಮ್ಮಿತವಾದ ಉಪದೇಶಗಳು ಸಹೃದಯನಿಗೂ ಅನ್ವಯಿಸುವುವೆಂದು ಭಟ್ಟಗೋಪಾಲನು ಬರೆದಿದ್ದಾನೆ.

25 ಇದಕ್ಕೇ ಪ್ರತಿಭೆಯೆಂದೂ ಹೇಳುತ್ತಾರೆ. 'ಸ್ಮೃತಿ', 'ಮತಿ', 'ಬುದ್ಧಿ', 'ಪ್ರಜ್ಞೆ', 'ಪ್ರತಿಭೆ' ಇವುಗಳ ಅರ್ಥವೈಶಿಷ್ಟ್ಯವನ್ನು ಕೆಳಗಿನ ಶ್ಲೋಕಗಳು ಸ್ಪಷ್ಟಪಡಿಸುತ್ತವೆ :—

"ಸ್ಮೃತಿರ್ವ್ಯತೀತವಿಷಯಾ ಮತಿರಾಗಾಮಿಗೋಚರಾ |
ಬುದ್ಧಿಸ್ತಾತ್ಕಾಲಿಕೀ ಜ್ಞೇಯಾ ಪ್ರಜ್ಞಾ ತ್ರೈಕಾಲಿಕೀ ಮತಾ ||
ಪ್ರಜ್ಞಾಂ ನವನವೋನ್ಮೇಷಶಾಲಿನೀಂ ಪ್ರತಿಭಾಂ ವಿದುಃ |
ದ್ವೇ ವರ್ತ್ಮನೀ ಗಿರಾಂ ದೇವ್ಯಾಃ ಶಾಸ್ತ್ರಂ ಚ ಕವಿಕರ್ಮ ಚ ||
ಪ್ರಜ್ಞೋಪಜ್ಞಂ ತಯೋರಾದ್ಯಂ ಪ್ರತಿಭೋದ್ಭವಮಂತಿಮಮ್ ||

ದಿಂದ ಬಂದ ನೈಪುಣ್ಯ; ಕಾವ್ಯಜ್ಞರ ಶಿಕ್ಷಣದ ಮೇರೆಗೆ ಅಭ್ಯಾಸ; ಈ ಮೂರೂ ಕೂಡಿ ಕಾವ್ಯದ ಉತ್ಪತ್ತಿಗೆ ಕಾರಣಸಾಮಗ್ರಿಯೆನಿಸುತ್ತದೆ.

'**ಶಕ್ತಿ**'ಯೆಂದರೆ ಕವಿತ್ವಕ್ಕೆ ಬೀಜರೂಪವಾದ ಸಂಸ್ಕಾರವಿಶೇಷ. ಅದಿಲ್ಲದೆ ಕಾವ್ಯ ಹುಟ್ಟಲೇ ಆರದು; ಹುಟ್ಟಿದರೂ ಹಾಸ್ಯಾಸ್ಪದವಾದೀತು[26]. 'ಲೋಕ' ಎಂದರೆ ಚರಾಚರಗಳೆಲ್ಲವನ್ನೂ ಒಳಗೊಂಡ ವಿಶ್ವದ ನಡೆವಳಿಕೆ[27]. 'ಶಾಸ್ತ್ರ' ಎಂದರೆ ಛಂದಸ್ಸು, ವ್ಯಾಕರಣ, ನಿಘಂಟುಕೋಶ, ಕಲೆಗಳ ಲಕ್ಷಣ, ಧರ್ಮ, ಅರ್ಥ, ಕಾಮ, ಮೋಕ್ಷಗಳನ್ನು ಕುರಿತ ಗ್ರಂಥಗಳು, ಮತ್ತು ಗಜ, ಅಶ್ವ, ಖಡ್ಗ, ಮುಂತಾದುವುಗಳ ಲಕ್ಷಣಗ್ರಂಥಗಳು[28]. 'ಕಾವ್ಯ' ಎಂದರೆ ಮಹಾಕವಿಗಳ ಕೃತಿಗಳು. 'ಮುಂತಾದುವುಗಳ' ಎಂದರೆ ಇತಿಹಾಸಾದಿಗಳ ಎಂದರ್ಥ. ಇವುಗಳನ್ನೆಲ್ಲಾ ಪರಿಶೀಲಿಸುವುದರಿಂದ ಬರುವ ನೈಪುಣ್ಯವೇ **ವ್ಯುತ್ಪತ್ತಿ**[29]. ಕಾವ್ಯವನ್ನು ಬರೆಯಲು ಮತ್ತು ವಿಮರ್ಶಿಸಲು ಬಲ್ಲವರೇ ಕಾವ್ಯಜ್ಞರು. ಅವರ ಉಪದೇಶದ ಮೇರೆಗೆ[30] ರಚನೆ ಮತ್ತು ಸಂಯೋಜನೆಗಳಲ್ಲಿ[31] ಮತ್ತೆ ಮತ್ತೆ ಪ್ರವೃತ್ತಿಯೇ '**ಅಭ್ಯಾಸ**'. ಈ ಮೂರು ಒಟ್ಟುಗೂಡಿದಾಗ ಕಾವ್ಯದ ನಿರ್ಮಾಣ ಮತ್ತು ಉತ್ಕರ್ಷಕ್ಕೆ ಕಾರಣವೆನಿಸುವುದೇ ಹೊರತು, ಒಂದೊಂದೂ ಬೇರೆಯಾಗಿದ್ದಾಗ ಕಾರಣವೆನಿಸುವುದಿಲ್ಲ. ಆದ್ದರಿಂದಲೇ ಕಾರಿಕೆಯಲ್ಲಿ 'ಹೇತುಃ' ಎಂಬ ಏಕವಚನಪ್ರಯೋಗವಿರುವುದೇ ಹೊರತು "ಹೇತವಃ" ಎಂಬ ಬಹುವಚನಪ್ರಯೋಗವಿಲ್ಲ.

ವಾಗ್ದೇವಿಯ ದಾರಿಗಳೆರಡು :—(೧) ಶಾಸ್ತ್ರ, (೨) ಕವಿಕರ್ಮ. ಮೊದಲನೆಯದು ಪ್ರಜ್ಞೆಯ ಫಲ; ಎರಡನೆಯದು ಪ್ರತಿಭೆಯ ಫಲ. ಹೋಲಿಸಿ—**ಕನ್ನಡ ಕಾವ್ಯಾಲಂಕಾರ** I. ೫.

26 ಹೋಲಿಸಿ—**ಕನ್ನಡ ಕಾವ್ಯಾಲಂಕಾರ**, I. ೧೨.

27 ಹೋಲಿಸಿ—"ಲೋಕೋ ವಿದ್ಯಾಃ ಪ್ರಕೀರ್ಣಂ ಚ ಕಾವ್ಯಾಂಗಾನಿ"—ವಾಮನ. ಲೋಕದ ವಿಚಿತ್ರ ವರ್ತನೆಯೇ ಎಂದರೆ ಸ್ವಭಾವ ವಿಶೇಷ ವರ್ಣನೆಯೇ ಸ್ವಭಾವೋಕ್ತಿ, ಅತಿಶಯೋಕ್ತಿ, ಮುಂತಾದ ಅಲಂಕಾರಗಳಿಗೆ ಮೂಲವೆಂದು ಭಟ್ಟಗೋಪಾಲನು ವಿವರಿಸಿದ್ದಾನೆ.

28 ಹೋಲಿಸಿ—**ಕನ್ನಡ ಕಾವ್ಯಾಲಂಕಾರ**, V. ೪.

29 'ವ್ಯುತ್ಪತ್ತಿ'ಯೆಂದರೆ ಸಕಲ ಪದಾರ್ಥಗಳ ಪೌರ್ವಾಪರ್ಯ ಪರ್ಯಾಲೋಚನ ಕೌಶಲವೆಂದು ಮಾಣಿಕ್ಯಚಂದ್ರನ ಟೀಕೆ.

30 ಕಾವ್ಯಜ್ಞರ ಉಪದೇಶವೆಂದರೆ ಕವಿಸಮಯವನ್ನು ಚೆನ್ನಾಗಿ ಬಲ್ಲವರ ಮಾರ್ಗದರ್ಶನವೆಂದೂ ನದಿಯೇ ಮುಂತಾದ ಜಲಾಶಯಗಳಲ್ಲಿ ಇಲ್ಲದಿದ್ದರೂ ಪದ್ಮ, ಹಂಸ, ರತ್ನ, ಮುಂತಾದುವನ್ನು ವರ್ಣಿಸಬೇಕೆಂಬ ಸಂಪ್ರದಾಯದ ದೀಕ್ಷೆಯೆಂದೂ ಮಾಣಿಕ್ಯಚಂದ್ರನ ಮತ.

31 'ರಚನೆ'ಯೆಂದರೆ ಬಿಡಿಬಿಡಿಯಾದ ಪದ್ಯಗಳ ರಚನೆಯೆಂದೂ, 'ಸಂಯೋಜನೆ'ಯೆಂದರೆ ಅವುಗಳನ್ನು ಗ್ರಂಥರೂಪವಾಗಿ ಸಂಘಟಿಸುವುದೆಂದೂ ಮೇಲಿನ ವ್ಯಾಖ್ಯಾಕಾರನು ಹೇಳುತ್ತಾನೆ.

ಹೀಗೆ ಕಾವ್ಯದ ಕಾರಣವನ್ನು ಹೇಳಿದನಂತರ ಈಗ ಅದರ ಸ್ವರೂಪ[32]ವನ್ನು ಹೇಳುತ್ತಾನೆ:—

ತದದೋಷೌ ಶಬ್ದಾರ್ಥೌ ಸಗುಣಾವನಲಂಕೃತೀ ಪುನಃ ಕ್ವಾಪಿ । ೪*a*

ದೋಷಗಳಿಲ್ಲದ, ಗುಣಯುತವಾದ, ಎಲ್ಲೋ ಒಮ್ಮೊಮ್ಮೆ ಅಲಂಕಾರಗಳು ಇರದ, ಶಬ್ದಾರ್ಥಗಳೇ[33] **ಕಾವ್ಯ**[34].

ದೋಷ, ಗುಣ, ಅಲಂಕಾರ, ಇವುಗಳನ್ನು ಮುಂದೆ ವಿವರಿಸಲಾಗುತ್ತದೆ[35]. 'ಎಲ್ಲೋ' ಎಂಬ ಮಾತಿನ ತಾತ್ಪರ್ಯವಿಷ್ಟು:—ಸಾಮಾನ್ಯವಾಗಿ ಎಲ್ಲೆಡೆ

---

32 'ಸ್ವರೂಪ'ವೆಂದರೆ ಇಲ್ಲಿ ಲಕ್ಷಣ (= *Definition*) ಎಂದರ್ಥ.

33 'ಶಬ್ದಾರ್ಥಗಳೇ' ಎಂದರೆ ಇಲ್ಲಿ ಒಂದಕ್ಕೊಂದು ಸೇರಿಕೊಂಡಿರುವ ಶಬ್ದಾರ್ಥಯುಗಲವೆಂದೇ ತಿಳಿಯಬೇಕು. ರಮಣೀಯವಾದ ಶಬ್ದಮಾತ್ರವಾಗಲಿ, ಅರ್ಥಮಾತ್ರವಾಗಲಿ ಕಾವ್ಯವೆನಿಸುವುದಿಲ್ಲ. ರಮಣೀಯತೆಯು ಉಭಯಗತವೂ ಪ್ರತ್ಯೇಕಿಸಲು ಬಾರದೆಯೂ ಇರುವಂತಿದ್ದಾಗ ಮಾತ್ರ ಕಾವ್ಯವಾಗುತ್ತದೆ. ಹೋಲಿಸಿ—'ನ ಶಬ್ದಸ್ಯ ರಮಣೀಯತಾವಿಶಿಷ್ಟಸ್ಯ ಕೇವಲಸ್ಯ ಕಾವ್ಯತ್ವಮ್, ನಾಪ್ಯರ್ಥಸ್ಯ' (ವಕ್ರೋಕ್ತಿಜೀವಿತ) ಮತ್ತು 'ಶಬ್ದಾರ್ಥೌ ಸಹಿತೌ ಕಾವ್ಯಮ್'—(ಭಾಮಹ) **ಕನ್ನಡ ಕಾವ್ಯಾಲಂಕಾರ,** I. ೧೬. ಇಲ್ಲಿ ಶಬ್ದ, ಅರ್ಥ, ಎಂಬ ಪದಗಳಿಗೆ ಒಟ್ಟು ಕಾವ್ಯದಲ್ಲಿ ಕಿವಿಗೆ ಪ್ರಿಯವಾಗುವ ಅಂಶ ಮತ್ತು ಬುದ್ಧಿಗೆ ಪ್ರಿಯವಾಗುವ ಅಂಶವೆಂದು ಸಾಮಾನ್ಯವಾಗಿ ತಿಳಿಯಬೇಕೇ ಹೊರತು ನಿಘಂಟುಗಳಲ್ಲಿರುವ ಪ್ರತಿಶಬ್ದ ಮತ್ತು ಅರ್ಥವಿವರಣೆಗಳನ್ನಲ್ಲ. ಈ ದೃಷ್ಟಿಯಿಂದ ಸ್ಥೂಲವಾಗಿ ಶಬ್ದ ಎಂದರೆ ಇಂಗ್ಲಿಷಿನ Manner ಮತ್ತು ಅರ್ಥ ಎಂದರೆ Matter ಎಂಬ ಅಭಿಪ್ರಾಯದ ವರೆಗೂ ಕಲ್ಪನೆಯನ್ನು ವಿಸ್ತರಿಸಿಕೊಳ್ಳಲೆಡೆಯುಂಟು.

34 'ಕಾವ್ಯ'ವೆಂದರೆ ಪದ್ಯವೆಂಬ ಸಂಕುಚಿತಾರ್ಥ ಸಂಸ್ಕೃತದಲ್ಲೆಂದೂ ಇಲ್ಲ. ಕವಿಕರ್ಮ ಅಥವಾ Literature ಎಂಬ ವಿಶಾಲಾರ್ಥವೊಂದರಲ್ಲಿಯೇ ಅದನ್ನು ಗ್ರಹಿಸಬೇಕು. 'ಕವಿ' ಯೆಂದರೂ ಹಾಗೆಯೇ Man of Letters ಎಂದೇ ಅರ್ಥ.

35 ಏಳನೆಯ ಉಲ್ಲಾಸವು ದೋಷವಿವೇಚನೆಗೂ, ಎಂಟನೆಯದು ಗುಣನಿರೂಪಣೆಗೂ, ಒಂಭತ್ತು ಹತ್ತನೆಯವು ಶಬ್ದಾರ್ಥಾಲಂಕಾರ ವಿವರಣೆಗೂ ಮೀಸಲಾಗಿವೆ.

ಮಮ್ಮಟನ ಈ ಕಾವ್ಯಲಕ್ಷಣದ ಮೇಲೆ ಸಂಸ್ಕೃತ ಅಲಂಕಾರ ಶಾಸ್ತ್ರದಲ್ಲಿ ಬೇಕಾದಷ್ಟು ಖಂಡನಮಂಡನಗಳು ನಡೆದಿವೆ. ದಿಗ್ಗಜಪಂಡಿತರ ವಿದ್ವಚ್ಚರ್ಚೆಯು ಅವರ ಪಾಂಡಿತ್ಯಪ್ರದರ್ಶನ ಮಾಡುವುದಾದರೂ ಕಾವ್ಯದ ವಿಷಯವಾಗಿ ಹೆಚ್ಚಿನ ಬೆಳಕನ್ನು ಬೀರುವುದೆನ್ನಿಸುವುದಿಲ್ಲ. ಇಲ್ಲಿ ಸಂಗ್ರಹವಾಗಿ ಚರ್ಚಾಗ್ರಸ್ತವಾದ ಅಂಶಗಳನ್ನು ಸೂಚಿಸುತ್ತೇವೆ:—

ಮಮ್ಮಟನ ಲಕ್ಷಣವಾಕ್ಯದಲ್ಲಿ ದೋಷ, ಗುಣ, ಅಲಂಕಾರ, ಈ ಪದಗಳಿವೆಯೇ ಹೊರತು ಇವುಗಳ ಅರ್ಥವಿವರಣೆಯಿಲ್ಲ. ಅರ್ಥವಿವರಣೆಯು ಮುಂದಿನ ಉಲ್ಲಾಸಗಳಲ್ಲಿ ಉಂಟೆಂದು ಅವನೇ ಹೇಳಿದ್ದರೂ, ಅವುಗಳನ್ನೋದುವ ಗೋಜಿಗೆ ಹೋಗದೆ ಪ್ರಾಚೀನಾಲಂಕಾರಿಕರ ಗ್ರಂಥಸಂಸ್ಕಾರದಿಂದಲೇ ಈ ಪದಗಳಿಗೆ ಅರ್ಥಮಾಡುವ ರೂಢಿಯುಂಟು. ಹಾಗೆ ಅಪಾರ್ಥಮಾಡುವುದರಿಂದಲೇ

ಗಳಲ್ಲಿಯೂ ಅವು (=ಶಬ್ದಾರ್ಥಗಳು) ಅಲಂಕಾರಯುಕ್ತವಾಗಿಯೇ ಇರುತ್ತವೆ;

ಲಕ್ಷಣವು ದೋಷಮಯವಾಗಿ ಭಾಸವಾಗುತ್ತದೆಂಬುದನ್ನು ಮೊದಲೇ ಸೂಚಿಸಬೇಕಾಗಿದೆ. ಮಮ್ಮಟನ ಮನೋಗತವಿಷ್ಟೆ :—ಏಳನೆಯ ಉಲ್ಲಾಸದ ಆದಿಯಲ್ಲೇ ಹೇಳಿದಂತೆ 'ಮುಖ್ಯಾರ್ಥ ಹತಿ'ಯು ದೋಷ ; ರಸವೇ ಮುಖ್ಯಾರ್ಥ. ರಸಾಶ್ರಯವಾದ ವಾಚ್ಯವೂ ದೋಷಕ್ಕೆ ಆಲಂಬನವಾಗ ಬಹುದು ; ಅವೆರಡಕ್ಕೂ ಉಪಯೋಗಿಗಳಾಗುವುದರಿಂದ ಶಬ್ದಾದಿಗಳೂ ದೋಷಕ್ಕೆ ಆಲಂಬನವಾಗ ಬಹುದು. ಎಂದಮೇಲೆ ರಸಭಂಗಕ್ಕೆ ನೇರವಾಗಿಯೋ ದೂರವಾಗಿಯೋ ಕಾರಣವಾಗತಕ್ಕವು ಮಾತ್ರ ಮಮ್ಮಟನಿಗೆ ವಿವಕ್ಷಿತವಾದ ದೋಷಗಳೇ ಹೊರತು ಭಾಮಹ, ದಂಡಿ, ವಾಮನಾದಿ ಪ್ರಾಚೀನರು ಹೇಳುವ ಕಾವ್ಯದೋಷಗಳಲ್ಲ. ಎಂಟನೆಯ ಉಲ್ಲಾಸದ ಆದಿಯಲ್ಲಿ ಹೇಳಿರುವಂತೆ ಮುಖ್ಯವಾದ ರಸಕ್ಕೆ ಯಾವವು ಅಂಗಗಳೋ-ಆತ್ಮನಿಗೆ ಶೌರ್ಯಾದಿಗುಣಗಳಂತೆ, ಯಾವುವುಗಳ ಸ್ಥಿತಿಯು ಅಚಲವೋ, ಅವು ಮಾತ್ರ ಗುಣಗಳು. ಭಾಮಹ, ದಂಡಿ, ಮುಂತಾದವರು ಹೇಳುವ ಗುಣಗಳಲ್ಲ. ಅದೇ ರಸವನ್ನೇ ಅಂಗದ ಮೂಲಕ ಯಾವುವು ಕಳೆಯೇರಿಸುತ್ತವೋ—ಅಂಗಶೋಭೆಯನ್ನು ಹೆಚ್ಚಿಸುವ ಹಾರಾದಿಗಳಂತೆ—ಅವು ಮಾತ್ರ ಶಬ್ದಾರ್ಥಾಲಂಕಾರಗಳು ; ಪ್ರಾಚೀನರು ಹೇಳತಕ್ಕವಲ್ಲ. ಹೀಗೆ ದೋಷ, ಗುಣ, ಅಲಂಕಾರ, ಈ ಮೂರು ಪ್ರಕ್ರಿಯೆಗಳ ವಿವರಣೆಯಲ್ಲೂ ರಸವನ್ನೇ ಕೇಂದ್ರದಲ್ಲಿಟ್ಟುಕೊಂಡಿರುವುದೂ, ರಸಾನುಗುಣವಾಗಿ ಮಾತ್ರ ಅವನ್ನು ವಿವರಿಸುತ್ತಿರುವುದೂ ಸೂರ್ಯಪ್ರಕಾಶದಷ್ಟು ಸ್ಪಷ್ಟವಾಗಿದೆ. ಒಂದು ಸಣ್ಣ ದೋಷ ಬಂದರೂ ರಸಭಂಗವಾಗುವುದರಿಂದ ಕಾವ್ಯತ್ವಕ್ಕೆ ಹಾನಿ ಬರುವುದರಿಂದ ಲಕ್ಷಣದಲ್ಲಿ **ಅದೋಷೌ** ಎಂದಿದ್ದಾನೆ. ಗುಣಗಳಿಲ್ಲದೆ ರಸಪ್ರತೀತಿಯು ಅಸಂಭವವಾದ್ದರಿಂದ **ಸಗುಣೌ** ಎಂದಿದ್ದಾನೆ. ಇವೆರಡು ನಿಯಮಗಳೂ ಸಿದ್ಧಿಸಿದಮೇಲೆ ಪ್ರಾಯಿಕವಾಗಿ ಅಲಂಕಾರಗಳ ಶೋಭೆಯಿರುವುದೇ ಸತ್ಯವಾದರೂ, ಒಮ್ಮೊಮ್ಮೆ ಅದಿಲ್ಲದಿದ್ದರೂ ಕಾವ್ಯತ್ವಕ್ಕೆ ಚ್ಯುತಿಯಿಲ್ಲವೆಂದು '**ಅನಲಂಕೃತೀ ಪುನಃ ಕ್ವಾಪಿ**' ಎಂಬ ಮಾತಿನಲ್ಲಿ ಸೂಚಿಸಿದ್ದಾನೆ. ಹೀಗೆ ಸರಿಯಾಗಿ ಅರ್ಥಮಾಡಿಕೊಂಡರೆ ಲಕ್ಷಣವು ತರ್ಕದೃಷ್ಟಿಗೂ ನಿರ್ದುಷ್ಟವೆನಿಸೀತು.

ಸಾಹಿತ್ಯದರ್ಪಣವನ್ನು ಬರೆದ ವಿಶ್ವನಾಥನು (ರಸಗಂಗಾಧರಕಾರನಾದ ಜಗನ್ನಾಥನೂ) ಎತ್ತಿ ತೋರಿಸುವ ಕೆಲವು ಲಕ್ಷಣದೋಷಗಳು ಹೀಗಿವೆ—

1. ಉತ್ತಮ ಕಾವ್ಯವೆಂದೊಪ್ಪುವ ಎಷ್ಟೋ ಲಕ್ಷ್ಯಗಳಲ್ಲಿಯೂ ಒಂದಿಲ್ಲೊಂದು ದೋಷವಿದ್ದೇ ಇರುವುದರಿಂದ ಲಕ್ಷಣದ ಪ್ರಕಾರ ಅವುಗಳಿಗೆ ಕಾವ್ಯತ್ವ ತಪ್ಪುತ್ತದೆ. ಆದ್ದರಿಂದ ಲಕ್ಷಣದಲ್ಲಿ ಅವ್ಯಾಪ್ತಿದೋಷ. ಸರ್ವಥಾ ನಿರ್ದುಷ್ಟವಾದ ಕಾವ್ಯವೇ ಅಸಂಭವ. 'ಅದೋಷ'ವೆಂದರೆ 'ಅಲ್ಪದೋಷ'ವೆಂದು ಅರ್ಥಮಾಡಿದರೆ ನಿರ್ದುಷ್ಟವಾದುದು ಕಾವ್ಯವಲ್ಲದೆ ಹೋದೀತು. ಲಕ್ಷಣದಲ್ಲಿ ಇದು ಸೇರಿಸಬೇಕಾದ ಅಂಶವೇ ಅಲ್ಲ.

2. ಗುಣಗಳು ರಸಧರ್ಮಗಳೆಂದೊಪ್ಪಿದ ಮೇಲೆ ಅವನ್ನು ಶಬ್ದಾರ್ಥಗಳಿಗೆ ವಿಶೇಷಣವಾಗಿ ಪ್ರಯೋಗಿಸುವುದೂ ತಪ್ಪೇ. ಶಬ್ದಾರ್ಥಗಳಲ್ಲಿ ರಸವತ್ತ್ವವಿರುವುದಾದರೆ **ಸಗುಣೌ** ಎನ್ನುವ ಬದಲು 'ರಸವನ್ತೌ' ಎಂದೇಕೆ ಹೇಳಲಿಲ್ಲ ? ರಸವಿಲ್ಲದಿದ್ದರೆ ಗುಣವೆಲ್ಲಿಂದ ಸಿದ್ಧಿಸುತ್ತದೆ? ಆದ್ದರಿಂದ **ಸರಸೌ** ಎನ್ನಬೇಕೇ ಹೊರತು ಸಗುಣೌ ಎಂದಲ್ಲ.

3. ಕಾವ್ಯದ ಸ್ವರೂಪವನ್ನು ಹೇಳುವಾಗ ಅದರ ಉತ್ಕರ್ಷಕಾರಣವನ್ನು ಹೇಳಲೇಬೇಕಾಗಿಲ್ಲ. ಆದ್ದರಿಂದ 'ಅನಲಂಕೃತೀ ಪುನಃ ಕ್ವಾಪಿ' ಎಂಬುದು ಸರಿಯಲ್ಲ.

ಎಲ್ಲೋ ಕೆಲವೆಡೆಗಳಲ್ಲಿ ಮಾತ್ರ, ಸ್ಫುಟವಾದ ಅಲಂಕಾರಗಳಿರದಿದ್ದರೂ[36] ಕಾವ್ಯತ್ವಕ್ಕೆ ಚ್ಯುತಿಯಿಲ್ಲ. ಹೇಗೆಂದರೆ—

ಇದಕ್ಕೆ ಉದ್ದ್ಯೋತದಲ್ಲಿ ಸಮಾಧಾನವನ್ನು ಹೇಳಿದೆ—

ವ್ಯಂಗ್ಯವಾದ ರಸದ ಚಮತ್ಕಾರಾತಿಶಯದಲ್ಲಿ ತಲ್ಲೀನನಾಗಿರುವ ಸಹೃದಯನಿಗೆ ದೋಷ ಸದ್ಭಾವವು ಗಮನಕ್ಕೆ ಬರದೆ ಅಪ್ರತೀತವಾಗಿ ನಿಲ್ಲಬಹುದು. ಎಲ್ಲಿ ರಸಭಂಗವುಂಟಾಗಿ ದೋಷವು ಪ್ರತೀತವೋ ಅದು ಮಾತ್ರ ದೋಷವೇ ಹೊರತು, ಕವಿಪ್ರತಿಭಾ ಬಲದಿಂದ ತಿರೋಹಿತವಾಗಿ ಪ್ರತೀತವಾಗದುದಲ್ಲ. ಆದ್ದರಿಂದ ಲಕ್ಷಣದಲ್ಲಿ ಅದೋಷೌ ಎಂದರೆ 'ಪ್ರತೀತದೋಷವಿಲ್ಲದ' ಎಂದರ್ಥ.

ನಾಗೇಶಭಟ್ಟನು ಹೇಳುವಂತೆ ಮಮ್ಮಟನು ಬರೆಯುತ್ತಿರುವುದು ಆದರ್ಶಕಾವ್ಯದ ಸಾಮಾನ್ಯ ಲಕ್ಷಣವೇ ಹೊರತು ಉಪಲಬ್ಧಕಾವ್ಯಗಳಿಗೆ ಮಾತ್ರ ಪರಿಮಿತವಾದುದಲ್ಲ.

ಇನ್ನು ಕಾವ್ಯಲಕ್ಷಣದಲ್ಲಿ 'ರಸ' ಶಬ್ದವನ್ನೇ ತರುವುದುಚಿತವೇ ಅಲ್ಲವೇ ಎಂಬ ಪ್ರಶ್ನೆ. ಕಾವ್ಯಸ್ವರೂಪವನ್ನು ತೋರಿಸುವಾಗ ಶಬ್ದಾರ್ಥಗಳನ್ನೂ, ಅವುಗಳಲ್ಲಿರಬೇಕಾದ ಗುಣಗಳನ್ನೂ ತೋರಿಸಲು ಬರುವುದೇ ಹೊರತು ಕೇವಲ ಪ್ರತೀತಿಮಾತ್ರವಾದ 'ರಸ'ವೆಂಬ ಶಬ್ದದಿಂದ ಏನನ್ನೂ ಹೇಳಿದಂತಾಗುವುದಿಲ್ಲ. ಇಂಗ್ಲಿಷಿನಲ್ಲಿ *Abstract definition* ಎಂದು ಹೇಳಿರುವ ಲಕ್ಷಣ ದೋಷವೇ ಸಂಪನ್ನವಾಗುತ್ತದೆ. ಅಮೂರ್ತವಾದ ರಸಗಳ ಸ್ವರೂಪನಿರ್ದೇಶಮಾಡಲು ಮೂರ್ತವಾದ ಶಬ್ದಾರ್ಥಗಳಿಗೂ ಅದಕ್ಕೂ ಇರುವ ಗುಣ-ದೋಷವೆಂಬ ಸಂಬಂಧಸೂಚನೆಯೇ ಹೆಚ್ಚು ಸಮರ್ಪಕವೆನ್ನಬಹುದು.

ಜಗನ್ನಾಥನು ಈ ಲಕ್ಷಣದಲ್ಲಿ ಮತ್ತೊಂದು ದೋಷವನ್ನು ತೋರಿಸಿದ್ದಾನೆ:—"ಶಬ್ದಾರ್ಥವೆರಡೂ ಕೂಡಿ ಕಾವ್ಯವಾಗಲಾರದು. 'ಕಾವ್ಯವನ್ನು ಗಟ್ಟಿಯಾಗಿ ಓದುತ್ತಾನೆ,' 'ಕಾವ್ಯದ ಅರ್ಥ ತಿಳಿಯಿತು,' 'ಕಾವ್ಯವನ್ನು ಕೇಳಿದೆ; ಆದರೆ ಅರ್ಥವಾಗಲಿಲ್ಲ' ಎಂದು ಮುಂತಾಗಿ ಸರ್ವರೂ ಆಡುವ ಮಾತುಗಳಲ್ಲಿ ಶಬ್ದವನ್ನು ಮಾತ್ರ ಕಾವ್ಯವೆನ್ನುವ ರೂಢಿಯಿರುವುದರಿಂದ . . ."

ವೈದ್ಯನಾಥನು ತನ್ನ ಉದ್ದ್ಯೋತ-ಪ್ರಭಾ ಎಂಬ ಟೀಕೆಯಲ್ಲಿ ಅದಕ್ಕೆ ಸಮಾಧಾನ ಹೇಳಿದ್ದಾನೆ:—'ಕಾವ್ಯವೆಂದರೆ ವರ್ಣನಾತ್ಮಕವಾದ ಶಬ್ದಾರ್ಥಯುಗಲವೆಂದು ಮೊದಲೇ ಹೇಳಿಯಾಗಿರುವಾಗ, ಅರ್ಥಯುಕ್ತವಲ್ಲದ ಶಬ್ದದಲ್ಲಿ ವರ್ಣನಾತ್ಮಕತೆಯೇ ಬರುವಂತಿಲ್ಲದ ಪ್ರಯುಕ್ತ ಶಬ್ದಮಾತ್ರ ಕಾವ್ಯವೆನಿಸಲಾರದು.' 'ಶಬ್ದಾರ್ಥ'ಕ್ಕೆ ನಾವು ಮೇಲೆ ಸೂಚಿಸಿದ ವಿಶಾಲಾರ್ಥದಲ್ಲಿ ಆಕ್ಷೇಪಕ್ಕೇ ಎಡೆಯಿಲ್ಲ.

ಪ್ರಾಚೀನ ಸಂಪ್ರದಾಯವನ್ನನುಸರಿಸುವ ಜಯದೇವನು ಚಂದ್ರಾಲೋಕದಲ್ಲಿ ಮಮ್ಮಟನನ್ನು 'ಅನಲಂಕೃತೀ' ಎಂಬ ಬಗ್ಗೆ ಹೀಗಳೆದಿದ್ದಾನೆ:—

ಅಂಗೀಕರೋತಿ ಯಃ ಕಾವ್ಯಂ ಶಬ್ದಾರ್ಥಾವನಲಂಕೃತೀ |
ಅಸೌ ನ ಮನ್ಯತೇ ಕಸ್ಮಾತ್ ಅನುಷ್ಣಮನಲಂ ಕೃತೀ ||—I, ೮.

'ಅಲಂಕಾರವಿಲ್ಲದ ಶಬ್ದಾರ್ಥಗಳೂ ಕಾವ್ಯವೆನ್ನುವವನು ಬೆಂಕಿ ತಂಪೆಂದೇಕೆ ಹೇಳಬಾರದು?' ಈ ಆಕ್ಷೇಪ-ಸಮಾಧಾನಗಳ ಕುತೂಹಲವುಳ್ಳವರು ಮೂಲಗ್ರಂಥಗಳನ್ನೋದಬೇಕು. ಮಮ್ಮಟನ

ಯಃ ಕೌಮಾರಹರಸ್ಸ ಏವ ಹಿ ವರಸ್ತಾ ಏವ ಚೈತ್ರಕ್ಷಪಾಃ
ತೇ ಚೋನ್ಮೀಲಿತಮಾಲತೀಸುರಭಯಃ ಪ್ರೌಢಾಃ ಕದಂಬಾನಿಲಾಃ ।
ಸಾ ಚೈವಾಸ್ಮಿ ತಥಾಪಿ ತತ್ರ ಸುರತವ್ಯಾಪಾರಲೀಲಾವಿಧೌ
ರೇವಾರೋಧಸಿ ವೇತಸೀತರುತಲೇ ಚೇತಸ್ಸಮುತ್ಕಂಠತೇ[37] ॥

ಮೊದಲೆನ್ನ ಕೌಮಾರಹರನಾದನೇ ವರನು,
ಮಧುಮಾಸರಜನಿಯಿವೆ ಮುನ್ನಿನಂತೆ!
ಫುಲ್ಲಮಾಲತಿಪುಷ್ಪಗಂಧದಿಂ ಬೀಗುತಿಹ
ಗಾಳಿಗಳು ಸುಳಿಯುತಿವೆ ಮೊದಲಿನಂತೆ!

ಅಂತೆಯಿರುವೆನು ನಾನು, ಆದರೆನ್ನಯ ಮನವು
ನರ್ಮದೆಯ ತಡಿಗೀಗ ಕಾತರಿಸುತಿಹುದು;
ನೀರ್ವಳ್ಳಿ ತುರುಗಲಡಿ ನಾವಲ್ಲಿ ಸವಿದಿರ್ದ
ಕೂಟಬೇಟದ ಸವಿಯ ನೆನೆನೆನೆಯುತಿಹುದು.

ಲಕ್ಷಣಕ್ಕಿಂತಲೂ ಸಮರ್ಪಕವೆಂದು ಇತರರು ಬರೆದಿರುವ—"ವಾಕ್ಯಂ ರಸಾತ್ಮಕಂ ಕಾವ್ಯಂ,' (ವಿಶ್ವನಾಥ) "ರಮಣೀಯಾರ್ಥಪ್ರತಿಪಾದಕಃ ಶಬ್ದಃ ಕಾವ್ಯಂ" (ಜಗನ್ನಾಥ) ಮುಂತಾದ ಲಕ್ಷಣಗಳ ಯುಕ್ತಾಯುಕ್ತತೆಯನ್ನೂ ತಾರ್ಕಿಕ ಹಾಗೂ ವ್ಯಾವಹಾರಿಕ ದೃಷ್ಟಿಗಳಿಂದ ನಿರ್ಣಯಿಸಬಹುದು. ಪ್ರಾಚೀನರು ಮತ್ತು ನವೀನರಿಬ್ಬರನ್ನೂ ಮನವೊಲಿಸಲೋ ಎಂಬಂತೆ ಅಡ್ಡಗೋಡೆಯ ಮೇಲಿನ ದೀಪವಿಟ್ಟಂತೆ ಮಮ್ಮಟನು ಲಕ್ಷಣವನ್ನು ಬರೆದು ಇಬ್ಬರಿಂದಲೂ ಅಸಮರ್ಪಕವೆಂಬ ಟೀಕೆಗೆ ಗುರಿಯಾದನೆಂದು ಡಾ|| ಸುಶೀಲ ಕುಮಾರ ಡೇ ಯವರು ಅಭಿಪ್ರಾಯಪಟ್ಟಿದ್ದಾರೆ.

36 ಕಾವ್ಯದಲ್ಲಿ ಅಲಂಕಾರಗಳಿಲ್ಲದಿದ್ದರೂ ಇರಬಹುದೆಂದು ಹೇಳಿದ ಮಮ್ಮಟನೇ ಇಲ್ಲಿ ವೃತ್ತಿಯಲ್ಲಿ ಸಣ್ಣ ಬದಲಾವಣೆ ಮಾಡಿಕೊಳ್ಳುತ್ತಿದ್ದಾನೆ—ಸ್ಫುಟವಾದ ಎಂಬ ವಿಶೇಷಣದಿಂದ. ಇದರಿಂದ ಅವನ ಅಭಿಪ್ರಾಯದಲ್ಲಿ ಕಾವ್ಯದಲ್ಲೆಲ್ಲ ಅಲಂಕಾರವು ಸ್ಫುಟವಲ್ಲದಿದ್ದರೆ ಅಸ್ಫುಟರೀತಿಯಿಂದಾದರೂ ಇದ್ದೇ ಇರುತ್ತದೆಂದು ಹೇಳುವುದಕ್ಕೆ ಆಸ್ಪದವಿದೆ. ಈ ಅವನ ಅಭಿಪ್ರಾಯವು ಪ್ರಾಚೀನ ಲಕ್ಷಣಕಾರರನ್ನು ಮೆಚ್ಚಿಸಲು ಹೊರಟಿದೆಯೆಂದರೂ ಎನ್ನಬಹುದು. ಏಕೆಂದರೆ ಆನಂದವರ್ಧನನು ಈ ಮಾತನ್ನು ಹೇಳಿಲ್ಲ.

37 'ಶಾರ್ಙ್ಗಧರಪದ್ಧತಿ'ಯೆಂಬ ಸುಭಾಷಿತಕೋಶದಲ್ಲಿ ಈ ಶ್ಲೋಕವು ಶೀಲಾ ಭಟ್ಟಾರಿಕೆಯದೆಂದು ಉದಾಹೃತವಾಗಿದೆ. ಬಾಲ್ಯದಲ್ಲಿ ಯಾರನ್ನು ಪ್ರಚ್ಛನ್ನವಾಗಿ ಪ್ರೀತಿಸಿ ಆನಂದಿಸುತ್ತಿದ್ದಳೋ ಆತನೊಡನೆಯೇ ವಿವಾಹವಾದ ಮೇಲೆ ತನ್ನ ಅನುಭವವನ್ನು ನಾಯಿಕೆಯು ಸಖಿಯೊಡನೆ ಹೇಳುವ ಪ್ರಕರಣವೆಂದು ಭಟ್ಟಗೋಪಾಲನು ಬರೆಯುತ್ತಾನೆ.

ಇಲ್ಲಿ ಸ್ಫುಟವಾದ ಅಲಂಕಾರವೇನೂ ಇಲ್ಲ[38]. ರಸಕ್ಕೆ ಪ್ರಾಧಾನ್ಯವಿರುವ ಕಾರಣ ಅದನ್ನು (ಅಪ್ರಧಾನವಾದ) ಅಲಂಕಾರವೆನ್ನಲಾಗದು[39].

ಕಾವ್ಯದ ಭೇದಗಳನ್ನು ಇನ್ನು ಕ್ರಮವಾಗಿ ಹೇಳುತ್ತಾನೆ:—

ಇದಮುತ್ತಮಮತಿಶಯಿನಿ ವ್ಯಂಗ್ಯೇ ವಾಚ್ಯಾದ್ ಧ್ವನಿರ್ಬುಧೈಃ ಕಥಿತಃ ‖ ೪೬ ‖

ವಾಚ್ಯವಾದ ಅಂಶಕ್ಕಿಂತಲೂ ವ್ಯಂಗ್ಯವಾದುದೇ ಪ್ರಧಾನವಾಗಿದ್ದರೆ ಅದು ಉತ್ತಮ; **ಧ್ವನಿ**ಯೆಂಬ ಹೆಸರನ್ನು ವಿದ್ವಾಂಸರು ಅದಕ್ಕೆ ಇತ್ತಿದ್ದಾರೆ[40].

---

38 ಇಲ್ಲಿ ಅಲಂಕಾರವೇ ಯಾವುದೂ ಇಲ್ಲವೆಂದರ್ಥವಲ್ಲ. ಎರಡು ಅಲಂಕಾರಗಳಿಗೆ ಪ್ರಸಕ್ತಿಯಿದ್ದರೂ ಎರಡೂ ಅಸ್ಫುಟವಾಗಿಯೇ ಉಳಿದಿವೆಯೆಂದರ್ಥ. ಕಾರಣಗಳಿಲ್ಲದಿದ್ದರೂ ಕಾರ್ಯವು ಉತ್ಪನ್ನವಾಯಿತೆಂದರೆ 'ವಿಭಾವನೆ'ಯೆಂಬ ಅಲಂಕಾರ; ಕಾರಣಗಳೆಲ್ಲವೂ ಇದ್ದರೂ ಕಾರ್ಯವು ಉತ್ಪನ್ನವಾಗಲಿಲ್ಲವೆಂದು ವರ್ಣಿಸಿದರೆ 'ವಿಶೇಷೋಕ್ತಿ'ಯೆಂಬ ಅಲಂಕಾರ. ಪ್ರಕೃತ ಲಕ್ಷ್ಯದಲ್ಲಿ ಎರಡಕ್ಕೂ ಪ್ರಸಕ್ತಿಯಿದೆ; ಆದರೆ ಎರಡೂ ಅಸ್ಫುಟ. ಹೇಗೆಂದರೆ—'ಮನಸ್ಸು ಕಾತರಿಸುವುದು' ಎಂಬ ಕಾರ್ಯವುಂಟು; ಅದಕ್ಕೆ ಕಾರಣಗಳಾದ ನಾಯಕಾಭಾವ, ಕಾಲದೇಶಾದಿ ಪ್ರಾತಿಕೂಲ್ಯ ಮುಂತಾದ ಕಾರಣಗಳೇನೂ ಇಲ್ಲ. ಆದ್ದರಿಂದ ವಿಭಾವನೆಯೆನ್ನಬಹುದು. ಆದರೆ ಕವಿಯು ವಾಚ್ಯವಾಗಿ ಕಾರಣವನ್ನು ಇಲ್ಲವೆನ್ನುವ ಬದಲು ಕಾರಣದ ಅಭಾವವಿದೆ ಎಂದು ಪ್ರಕಾರಾಂತರದಿಂದ ಹೇಳಿದ್ದಾನೆ. 'ನಾಯಕನಿಲ್ಲದೆ ಏನೂ ಇಲ್ಲ' ಎನ್ನದೆ 'ಅದೇ ವರನಿದ್ದಾನೆ' ಎಂದಿದ್ದಾನೆ. ಅರ್ಥಾತ್ ಕಾರಣ ನಿಷೇಧದ ಬದಲು ಕಾರಣಾಭಾವವನ್ನು ವಿಧಿರೂಪವಾಗಿ ಹೇಳಿದ್ದಾನೆ. ಆದ್ದರಿಂದಲೇ ಅಲಂಕಾರವು ಅಸ್ಫುಟವಾಗುತ್ತದೆ; ಹಾಗೆಯೇ ಕಾತರಿಸದಿರುವ ಕಾರ್ಯಕ್ಕೆ ಸಾಧಕಗಳಾದ ನಾಯಕನೇ ಮುಂತಾದ ಕಾರಣಗಳೆಲ್ಲ ಇದ್ದರೂ ಆ ಫಲವು ಹುಟ್ಟುವುದಿಲ್ಲ; ಪ್ರತಿಯಾಗಿ, ಅದಕ್ಕೆ ವಿರುದ್ಧವಾದ ಕಾತರವೇ ಹುಟ್ಟುತ್ತದೆ. ಆದ್ದರಿಂದ ವಿಶೇಷೋಕ್ತಿಯನ್ನಬಹುದು. ಆದರೆ ಕವಿಯು ವಾಚ್ಯವಾಗಿ ಕಾತರದ ಅಭಾವವು ಆಗಿಲ್ಲ ಎಂದು ನಿಷೇಧರೂಪವಾಗಿ (=*Negatively*) ಹೇಳುವ ಬದಲು ಕಾತರವೇ ಉಂಟಾಗಿದೆ ಎಂದು ವಿಧಿರೂಪವಾಗಿಯೇ (=*Affirmatively*) ಹೇಳಿದ್ದಾನೆ. ಹೀಗೆ ಎರಡು ಅಲಂಕಾರಗಳೂ ಅಸ್ಫುಟವಾಗಿರುವುದರಿಂದ, ಅವುಗಳ ಸಂಕರವೂ ಅಸ್ಫುಟವೆಂದೇ ತಿಳಿಯಬೇಕಾಗಿದೆ.

39 ಇಲ್ಲಿ ವಿಭಾವಾದಿಗಳ ವರ್ಣನೆಯಿಂದ ಶೃಂಗಾರರಸವು ಅಭಿವ್ಯಕ್ತವಾಗುತ್ತಿರುವುದರಿಂದ 'ರಸವದಲಂಕಾರ'ವೆಂದು ಪ್ರಾಚೀನರಂತೆ ಹೇಳಬಾರದೇಕೆ, ಎಂಬ ಪ್ರಶ್ನೆಗೆ ಮಮ್ಮಟನು ಉತ್ತರ ಹೇಳುತ್ತಿದ್ದಾನೆ. ದಂಡಿಯೇ ಮೊದಲಾದ ಪ್ರಾಚೀನರ ದೃಷ್ಟಿಯಲ್ಲಿ ರಸವೂ ಒಂದು ಅಲಂಕಾರ, ಉಪಮಾದಿಗಳಂತೆಯೇ. ಆದರೆ ನವೀನ ಆಲಂಕಾರಿಕರ ಪ್ರಕಾರ ಉಪಮಾದಿ ಅಲಂಕಾರಗಳು ಅಲಂಕರಿಸುವ ಆತ್ಮವೇ ರಸವಾದ್ದರಿಂದ ಅದು ಅಲಂಕಾರ್ಯವೇ ಹೊರತು ಸರ್ವಥಾ ಅಲಂಕಾರವಲ್ಲ. ರಸವು ಪ್ರಧಾನವಾಗಿರುವಾಗಲೆಲ್ಲ ಅದು ಅಲಂಕಾರ್ಯವೆಂದೂ, ಒಂದು ರಸವು ಮತ್ತೊಂದು ರಸಕ್ಕೆ ಗೌಣವಾದಾಗ ಮೊದಲನೆಯದು ರಸವದಲಂಕಾರವಾಗುವುದೆಂದೂ ಇವರ ಪ್ರಕ್ರಿಯೆ. ಹೋಲಿಸಿ—ಕನ್ನಡ ಧ್ವನ್ಯಾಲೋಕ, II. ೫.

40 ಹೋಲಿಸಿ, ಕನ್ನಡ ಧ್ವನ್ಯಾಲೋಕ, I, ೧೩.

'ಅದು' ಎಂದರೆ ಕಾವ್ಯ. 'ವಿದ್ವಾಂಸ'ರೆಂದರೆ ವೈಯಾಕರಣಿಗಳೆಂದು ತಾತ್ಪರ್ಯ. ಅವರು ಪ್ರಧಾನವಾದ 'ಸ್ಫೋಟ'ವೆಂಬ ವ್ಯಂಗ್ಯಕ್ಕೆ ವ್ಯಂಜಕವಾಗಬಲ್ಲ ಶಬ್ದವನ್ನು ಮಾತ್ರ **ಧ್ವನಿ**ಯೆಂದು ವ್ಯವಹರಿಸಿದ್ದಾರೆ[41]. ಅಂತೆಯೇ ಅವರ ಮತವನ್ನು ಅನುಸರಿಸಿದ ಇತರರು ವಾಚ್ಯಾಂಶವನ್ನು ಅಪ್ರಧಾನವಾಗಿಸಿ ವ್ಯಂಗ್ಯಾಂಶಕ್ಕೆ ಮಾತ್ರ ವ್ಯಂಜಕವಾಗುವ ಶಕ್ತಿಯುಳ್ಳ ಶಬ್ದಾರ್ಥ ದ್ವಯವನ್ನೂ ಕೂಡ ಅದೇ **ಧ್ವನಿ**ಯೆಂಬ ಹೆಸರಿನಿಂದ ಕರೆದಿದ್ದಾರೆ[42]. ಹೇಗೆಂದರೆ :—

41 ವೈಯಾಕರಣರ ಪರಿಭಾಷೆಯಲ್ಲಿ ಅಕ್ಷರಸಮೂಹವೆಲ್ಲವೂ 'ಪದ'ವಲ್ಲ; ಅರ್ಥಬೋಧಕ ವಾದುದು ಮಾತ್ರ ಪದ. ಅಕ್ಷರಗಳು ಒಂದೊಂದೂ ಕ್ಷಣನಶ್ವರ; ಎರಡನೆಯ ಅಕ್ಷರದ ಉಚ್ಚಾರಣೆಯ ಕಾಲದಲ್ಲಿ ಮೊದಲನೆಯ ಅಕ್ಷರವು ನಷ್ಟವಾಗಿರುತ್ತದೆ. ಹೀಗೆ ಕ್ರಮಕ್ರಮವಾಗಿ ಉಚ್ಚರಿತವಾದ ಅಕ್ಷರಗಳು ಏಕಕಾಲದಲ್ಲಿ ಒಟ್ಟುಗೂಡುವುದೂ ಅಸಂಭವವೇ. ಆದ್ದರಿಂದ ಕಡೆಯ ವರ್ಣದ ಉಚ್ಚಾರಣೆಯ ಫಲವಾಗಿ ಪ್ರತೀತವಾಗುವ ಅರ್ಥವನ್ನೇ ಅವರು ಪದವೆಂದು ಪರಿಗಣಿಸುತ್ತಾರೆ. ಈ 'ಪದ'ಕ್ಕೆ ಪರ್ಯಾಯವಾಗಿ 'ಸ್ಫೋಟ'ವೆಂಬ ಪಾರಿಭಾಷಿಕ ಶಬ್ದವನ್ನೂ ಬಳಸುತ್ತಾರೆ. ಮೊದ ಮೊದಲಿನ ವರ್ಣಗಳು ನಷ್ಟವಾಗಿದ್ದರೂ ಅವುಗಳ ಸಂಸ್ಕಾರವನ್ನು ಜತೆಗೂಡಿಕೊಂಡು 'ಪದ' ಅಥವಾ 'ಸ್ಫೋಟ'ವನ್ನು ಅಭಿವ್ಯಕ್ತಗೊಳಿಸುವ ಕಡೆಯ ಅಕ್ಷರವನ್ನು ಮಾತ್ರ ಅವರು "ಧ್ವನಿ" ಯೆನ್ನುತ್ತಾರೆ. ಈ ಅಂತ್ಯಾಕ್ಷರವನ್ನೇ ಮಮ್ಮಟನು ಇಲ್ಲಿ ಶಬ್ದವೆಂದಿದ್ದಾನೆ. ಹೋಲಿಸಿ—"ಧ್ವನಿಃ ಸ್ಫೋಟಶ್ಚ ಶಬ್ದಾನಾಂ ಧ್ವನಿಸ್ತು ಖಲು ಲಕ್ಷ್ಯತೇ."—ಇದು ಮಹೇಶ್ವರನ ಟೀಕೆಯ ಪ್ರಕಾರ ಸ್ಫೋಟವಾದದ ತಿರುಳು.

ನಾಗೋಜಿಭಟ್ಟನ ಉದ್ದ್ಯೋತದಲ್ಲಿ ಸ್ಫೋಟಪ್ರಕ್ರಿಯೆಯನ್ನು ಬೇರೊಂದು ರೀತಿಯಲ್ಲಿ ವಿವರಿಸಿದೆ:—ಶಬ್ದಬ್ರಹ್ಮನ ಶುದ್ಧಸ್ವರೂಪಕ್ಕೆ ಪರಾ ಎನ್ನುತ್ತಾರೆ. ನಾಭಿಯಲ್ಲಿ ಅದೇ ಪಶ್ಯಂತೀ ಎಂಬ ವಿಕಾರವನ್ನು ಪಡೆದು, ಆಮೇಲೆ ಅದೇ ಹೃದಯದಲ್ಲಿ ಮಧ್ಯಮಾ ಎಂಬ ಹೆಸರಿಗೆ ಪಾತ್ರವಾಗಿ, ಕಡೆಗೆ 'ಪಟ' ಮುಂತಾದ ಪ್ರಕಟರೂಪವನ್ನು ತಾಳಿದಾಗ ಅದೇ ವೈಖರೀ ಧ್ವನಿಯೆನಿಸುತ್ತದೆ. ಈ ವೈಖರೀ ಧ್ವನಿಯೇ 'ಸ್ಫೋಟ'ವೆಂಬ ಶಬ್ದಬ್ರಹ್ಮಕ್ಕೆ ವ್ಯಂಜಕವೆಂದಭಿಪ್ರಾಯವೆಂದು ಪ್ರದೀಪಕಾರನ ವಾಕ್ಯ.

ಪದದಲ್ಲಿರುವ ಒಂದೊಂದು ಅಕ್ಷರವೂ ಸ್ಫೋಟವನ್ನೇ ಅಸ್ಫುಟವಾಗಿ ಅಭಿವ್ಯಂಜಿಸುವುದೆಂದೂ ಆದರೆ ಕಡೆಯ ಅಕ್ಷರವು ಮಾತ್ರ ಅದನ್ನು ಸ್ಫುಟವಾಗಿ ತೋರಿಸುವುದೆಂದೂ ಸರ್ವದರ್ಶನ ಸಂಗ್ರಹದಲ್ಲಿ ಹೇಳಿದೆ. ಒಂದು ಶ್ಲೋಕವನ್ನು ಕಂಠಪಾಠ ಮಾಡುವಾಗ 'ಪ್ರತಿಯೊಂದು ಸಲ' ಓದಿದಾಗಲೂ ಅಸ್ಫುಟವಾಗಿ ಜ್ಞಾನವಾಗುತ್ತಲೂ ಮತ್ತೆ ಮತ್ತೆ ಓದಿದಾಗ ಸ್ಫುಟತರವಾಗುತ್ತಲೂ ಇದ್ದರೂ ಕಡೆಯ ಸಲ ಓದಿದ ಮೇಲೆ ಮಾತ್ರ ಸುಸ್ಪಷ್ಟವಾಗುವಂತೆ ಎಂಬ ಉದಾಹರಣೆಯನ್ನು ಕೊಟ್ಟಿದೆ. ಈ ಉದಾಹರಣೆಯನ್ನೇ ವಾಕ್ಯಪದೀಯವನ್ನು ಬರೆದ ಭರ್ತೃಹರಿಯೂ ಕೊಟ್ಟಿದ್ದಾನೆ. ಅಕ್ಷರಗಳೇ ಧ್ವನಿ, ಅಖಂಡಾರ್ಥವಾದ ಸ್ಫೋಟವನ್ನವು ವ್ಯಂಜಿಸುತ್ತವೆ ಎಂಬುದಿಷ್ಟೇ ವ್ಯಾಕರಣದ ಪ್ರಕ್ರಿಯೆ.

42 ಕಾವ್ಯಕ್ಕೆ ಈ ತತ್ವದ ವಿಸ್ತರಣೆಯ ಉಲ್ಲೇಖವು ಧ್ವನ್ಯಾಲೋಕದಲ್ಲೇ ಬರುತ್ತದೆ. ವಿವರಗಳಿಗೆ ಕನ್ನಡ ಧ್ವನ್ಯಾಲೋಕ, ಪು. ೧೯ ನ್ನು ಓದಿ. ಸ್ಫೋಟವಾದದಲ್ಲಿ ವ್ಯಂಗ್ಯವೇ ಹೇಗೆ

ನಿಶ್ಶೇಷಚ್ಯುತಚಂದನಂ ಸ್ತನತಟಂ ನಿರ್ಮೃಷ್ಟರಾಗೋಽಧರೋ
ನೇತ್ರೇ ದೂರಮನಂಜನೇ ಪುಲಕಿತಾ ತನ್ವೀ ತವೇಯಂ ತನುಃ।
ಮಿಥ್ಯಾವಾದಿನಿ ದೂತಿ ಬಾಂಧವಜನಸ್ಯಾಜ್ಞಾತಪೀಡಾಗಮೇ
ವಾಪೀಂ ಸ್ನಾತುಮಿತೋ ಗತಾಸಿ ನ ಪುನಸ್ತಸ್ಯಾಧಮಸ್ಯಾಂತಿಕಮ್[43] ॥

ನಿಶ್ಶೇಷವಳಿಸಿಹುದು ಕುಚತಟದ ಚಂದನವು
ಸಂಪೂರ್ಣ ತೊಳೆದಿಹುದು ತುಟಿಯ ಕೆಂಪು;
ಕಣ್ಣ ಕಡೆಯೊಳಗೀಗ ಕಾಡಿಗೆಯು ಕಾಣಿಸದು
ಪೊಂಪುಳಿಯ ತೋರುತಿದೆ ಮೈಯ ತೆಳ್ಪು.

ಸುಳ್ಳುಗಾರ್ತಿಯೆ! ಸಖಿಯೆ! ನಿನ್ನೊಡತಿಗರಿಯದೆಯೆ
ಪೀಡೆಯನು ಬರಿದೇಕೆ ತರಿಸುತಿರುವೆ?
ಕೆರೆಗೆ ಮೀಯಲು ನೀನು ಪೋದೆಯಲ್ಲದೆ ಮತ್ತೆ
ಆ ಅಧಮನೆಡೆಗಲ್ತು ನನ್ನಿಯಿದುವೆ.

ಇಲ್ಲಿ 'ಅವನೆಡೆಗೇ ರಮಿಸಲು ಹೋಗಿದ್ದೆ'ಯೆಂಬುದು ಪ್ರಧಾನವಾಗಿ ವ್ಯಂಗ್ಯವಾಗುತ್ತದೆ, 'ಅಧಮ' ಎಂಬ ಪದದ ಪ್ರಭಾವದಿಂದ[44].

ಪ್ರಧಾನವೋ ಹಾಗೆಯೇ ನವೀನಾಲಂಕಾರಿಕರ ತತ್ತ್ವದಲ್ಲೂ ಕಾವ್ಯದಲ್ಲಿ ವ್ಯಂಗ್ಯವಾದ ರಸಾದಿಗಳೇ ಪ್ರಧಾನ, ಸ್ಫೋಟವಾದದಲ್ಲಿ ಅಕ್ಷರಗಳು ಮಾತ್ರ ವ್ಯಂಜಕಗಳು, ವ್ಯಂಜಕಗಳಾದ್ದರಿಂದಲೇ ಅವಕ್ಕೆ ಧ್ವನಿಯೆಂಬ ಹೆಸರಿದೆ. ಕಾವ್ಯದಲ್ಲಿಯಾದರೋ ಶಬ್ದ, ಅರ್ಥ ಎರಡೂ ವ್ಯಂಜಕಗಳು; ಅವೆರಡಕ್ಕೂ ಧ್ವನಿಯೆಂಬ ಹೆಸರನ್ನು ಕೊಡಲಾಗಿದೆ.

ಅಭಿನವಗುಪ್ತರು **ಲೋಚನ**ದಲ್ಲಿ ವ್ಯಂಜನಾವ್ಯಾಪಾರ, ವ್ಯಂಗ್ಯಾರ್ಥ, ಮುಂತಾದುವುಗಳಿಗೂ ಧ್ವನಿಯೆಂಬ ಹೆಸರನ್ನು ವಿಸ್ತರಿಸಿದ್ದರೂ, ಆನಂದವರ್ಧನ ಮತ್ತು ಮಮ್ಮಟರೂ ವ್ಯಂಜಕವಾದ ಶಬ್ದಾರ್ಥಯುಗಲರೂಪಕ್ಕೆ ಅಥವಾ ಕಾವ್ಯಕ್ಕೆ ಮಾತ್ರ ಧ್ವನಿಯೆಂಬ ಹೆಸರನ್ನು ಪರಿಮಿತಗೊಳಿಸಿರುವುದು ಗಮನಾರ್ಹ. ಇವರ ದೃಷ್ಟಿಯಲ್ಲಿ ಉತ್ತಮಕಾವ್ಯ ಮಾತ್ರ '**ಧ್ವನಿ**'; ವ್ಯಾಕರಣದಲ್ಲಿ ಸ್ಫೋಟವನ್ನು ಅಭಿವ್ಯಕ್ತಗೊಳಿಸುವ ಶಬ್ದಗಳು ಮಾತ್ರ ಧ್ವನಿಯಾದಂತೆ!

43 ಶ್ಲೋಕವು **ಅಮರುಶತಕ**ದಿಂದ ಉದಾಹೃತವಾಗಿದೆ.

44 ಕಾಂತನನ್ನು ಕರೆತರಲು ನಾಯಿಕೆ ದೂತಿಯನ್ನು ಕಳಿಸಿದ್ದಾಳೆ. ಕಡೆಗೆ ನಾಯಕನಿಲ್ಲದೆ ದೂತಿಯೊಬ್ಬಳೇ ಅವನು ಸಿಕ್ಕಲಿಲ್ಲವೆನ್ನುತ್ತಾ ಬಂದಾಗ ಅವಳ ದೇಹಚಿಹ್ನೆಗಳಿಂದ ಆಕೆಯೇ ತನ್ನ ಕಾಂತನೊಡನೆ ರಮಿಸಿ ಬಂದಿದ್ದಾಳೆಂಬುದನ್ನು ತಿಳಿದ ನಾಯಿಕೆ ವ್ಯಂಗ್ಯವಾಗಿ ಈ ರೀತಿ ಅವಳ ಮರ್ಮೋದ್ಘಾಟನೆ ಮಾಡುವಳೆಂಬುದು ಟೀಕಾಕಾರರು ಕಲ್ಪಿಸುವ ಸಂದರ್ಭ. ಒಂದೊಂದಾಗಿ ಅವಳ ಸಂಭೋಗ ಚಿಹ್ನೆಗಳನ್ನು ಎತ್ತಿ ಎಲ್ಲಕ್ಕೂ ಕೆರೆಯ ಸ್ನಾನವೇ ಕಾರಣವೆಂದು ನಾಯಿಕೆಯು

ಅತಾದೃಶಿ ಗುಣೀಭೂತವ್ಯಂಗ್ಯಂ ವ್ಯಂಗ್ಯೇ ತು ಮಧ್ಯಮಮ್ ॥ ೫a ॥

ವ್ಯಂಗ್ಯವು ಹಾಗಲ್ಲದಿರುವಾಗ ಕಾವ್ಯ 'ಗುಣೀಭೂತ-ವ್ಯಂಗ್ಯ'ವೆನಿಸುತ್ತದೆ. ಅದು ಮಧ್ಯಮ ಕಾವ್ಯ[45].

ಹಾಗಲ್ಲದಿರುವಾಗ ಎಂದರೆ ವಾಚ್ಯಕ್ಕಿಂತ ಹೆಚ್ಚಿನ ಪ್ರಾಧಾನ್ಯವನ್ನು ಪಡೆಯದಿರುವಾಗ ಎಂದರ್ಥ. ಉದಾಹರಣೆ :—

ಗ್ರಾಮತರುಣಂ ತರುಣ್ಯಾ ನವವಂಜುಲಮಂಜರೀಸನಾಥಕರಮ್ ।
ಪಶ್ಯನ್ತ್ಯಾ ಭವತಿ ಮುಹುರ್ನಿತರಾಂ ಮಲಿನಾ ಮುಖಚ್ಛಾಯಾ ॥

ವರವಂಜುಲ[46]ಮಂಜರಿಯಂ
ಕರದೊಳ್ ಪಿಡಿದಿರ್ದ ತರುಣನಂ ಕಾಣಲೊಡಂ |
ತರುಣಿಯ ಮುಖವರ್ಣಂ ತಾಂ
ಭರದಿಂದಂ ಮಲಿನಮಾಯ್ತು ಮೇಲಿಂ ಮೇಲಿಂ ||

ಹೇಳುತ್ತಾ ಹೋಗುತ್ತಾಳೆ. ಕೆರೆಯ ಸ್ನಾನದಿಂದಲೂ ಈ ಚಿಹ್ನೆಗಳು ತಲೆದೋರಲು ಅವಕಾಶವಿರುವುದರಿಂದ ನಾಯಿಕೆಯ ಗೂಢಾರ್ಥವು ಮೊದಮೊದಲು ಭಾಸವಾಗುವುದಿಲ್ಲ. ಆದರೆ ಕಡೆಗೆ ತನ್ನ ರಮಣನನ್ನು ಇದ್ದಕ್ಕಿದ್ದಂತೆಯೇ 'ಅಧಮ'ನೆನ್ನುವಾಗ ಆ ಪದದಲ್ಲಿರುವ ಆಕ್ರೋಶಾತಿಶಯದಿಂದ ಅವನು ಮಹಾಪರಾಧವನ್ನೇ ಮಾಡಿರಬೇಕೆಂದು ತಟ್ಟನೆ ಹೊಳೆಯುತ್ತದೆ. ದೂತೀಸುರತವೇ ಆ ಅಪರಾಧವೆಂಬುದೂ ಪೂರ್ವಪದಗಳ ಪುನರಾಲೋಚನೆಯಿಂದ ವ್ಯಕ್ತವಾಗುತ್ತದೆ. ದೂತಿಯನ್ನು ವ್ಯಂಗ್ಯವಾಗಿ ಧಿಕ್ಕರಿಸುವುದೇ ಪ್ರಕೃತದಲ್ಲಿ ನಾಯಿಕೆಯ ವಿವಕ್ಷೆಯೆಂದೂ ತಿಳಿಯುತ್ತದೆ. ಈ ಅಭಿಪ್ರಾಯವೇ ಇಲ್ಲಿ ಪ್ರಧಾನವಾಗಿರುವುದರಿಂದಲೂ, ಇದು ಕೇವಲ ವ್ಯಂಗ್ಯವೇ ಆಗಿರುವುದರಿಂದಲೂ ಇದು ಧ್ವನಿಕಾವ್ಯಕ್ಕೆ ಉದಾಹರಣೆ. ಇದಕ್ಕೆ ಮುಖ್ಯವಾಗಿ ಸಾಧಕವೆಂದರೆ 'ಅಧಮ' ಎಂಬ ಪದದಲ್ಲಿರುವ ಅಪಾರ ವ್ಯಂಜಕತ್ವ.

ಈ ಅಭಿಪ್ರಾಯವನ್ನು ಸರಿಯಾಗಿ ಗ್ರಹಿಸದೆ ವಿಶ್ವನಾಥನು ತರ್ಕದೃಷ್ಟಿಯಿಂದ ವಿವೇಚಿಸುತ್ತಾ ಇಲ್ಲಿ ವಿಪರೀತಲಕ್ಷಣಾ (ಅಥವಾ Irony) ಮೂಲವಾದ ವ್ಯಂಜಕತ್ವ ಇರುವುದೆಂದಿದ್ದಾನೆ. ಹಾಗೆನ್ನುವಾಗ, 'ಕಾಕು'ವಿನ ಬೆಲೆ ಹೆಚ್ಚಾಗುವುದೇ ಹೊರತು 'ಅಧಮ' ಎಂಬ ಪದದಲ್ಲಿರುವ ಸ್ವಾರಸ್ಯ ಹೊರಬೀಳುವುದಿಲ್ಲ. ವಿಪರೀತ ಲಕ್ಷಣೆಯನ್ನು ಆಶ್ರಯಿಸುವುದಾದರೆ ಪೂರ್ವವಾಕ್ಯಗಳಲ್ಲಿ ವಾಪೀಸ್ನಾನ, ಸುರತಕ್ರೀಡೆಗಳೆರಡಕ್ಕೂ ಸಮಾನವಾಗಿ ಅನ್ವಯಿಸುವ ಧರ್ಮಗಳನ್ನು ಹೇಳಿರುವುದಕ್ಕೆ ಪ್ರಯೋಜನವೂ ತಪ್ಪಿಹೋಗುತ್ತದೆ. (ನೋಡಿ—ಸಾಹಿತ್ಯದರ್ಪಣ, ಪು. ೧೪. *Kane Edn.*) ಮುಂದೆ ರಸಗಂಗಾಧರದಲ್ಲಿ ಜಗನ್ನಾಥನೂ ಮಮ್ಮಟನ ಅಭಿಪ್ರಾಯವನ್ನೇ ಸಮರ್ಥಿಸುತ್ತಾನೆ. (ಪು. ೧೬).

45 ಹೋಲಿಸಿ—ಕನ್ನಡ ಧ್ವನ್ಯಾಲೋಕ, ಪು. ೧೪೩, ೧೫೧.

46 "ಬಕುಲೋ ವಂಜುಲೋऽಶೋಕೇ" ಎಂದು ಕೋಶವಿರುವುದರಿಂದ 'ವಂಜುಲ' ಎಂದರೆ ಬಕುಲ ಅಥವಾ ಅಶೋಕ ಎಂದು ಅರ್ಥಮಾಡಬಹುದು.

ಇಲ್ಲಿ 'ವಂಜುಲಲತಾಗೃಹವನ್ನು ಸಂಕೇತಸ್ಥಾನವೆಂದು ಗೊತ್ತುಮಾಡಿದ್ದ ತರುಣಿ ಅಲ್ಲಿಗೆ ಬರಲಾಗಲಿಲ್ಲ'ವೆಂಬ ವ್ಯಂಗ್ಯವು ಅಮುಖ್ಯವಾಗಿದೆ; ಅದಕ್ಕಿಂತಲೂ ವಾಚ್ಯವೇ ಚಮತ್ಕಾರಮಯವಾಗಿರುವುದರಿಂದ[47].

ಶಬ್ದಚಿತ್ರಂ ವಾಚ್ಯಚಿತ್ರಮವ್ಯಂಗ್ಯಂ ತ್ವವರಂ ಸ್ಮೃತಮ್ ॥ ೫೬ ॥

ವ್ಯಂಗ್ಯವೇ ಇಲ್ಲದ ಕಾವ್ಯ ಶಬ್ದಚಿತ್ರ ಇಲ್ಲವೆ ಅರ್ಥಚಿತ್ರ; ಅದು ಅಧಮ ಕಾವ್ಯ.

ಚಿತ್ರವೆಂದರೆ ಗುಣ ಮತ್ತು ಅಲಂಕಾರಗಳಿಂದ ಮಾತ್ರ ಕೂಡಿರುವುದೆಂದರ್ಥ. ವ್ಯಂಗ್ಯವಿಲ್ಲದ ಎಂದರೆ ಸ್ಫುಟವಾದ ವ್ಯಂಗ್ಯಾರ್ಥವಿಲ್ಲದ ಎಂದು ಅಭಿಪ್ರಾಯ[48]. 'ಅವರ' ಎಂದರೆ ಅಧಮ[49]. ಉದಾಹರಣೆ (ಶಬ್ದಚಿತ್ರಕ್ಕೆ)—

ಸ್ವಚ್ಛನ್ದೋಚ್ಛಲದಚ್ಛಕಚ್ಛಕುಹರಚ್ಛಾತೇತರಾಂಬುಚ್ಛಟಾ-
ಮೂರ್ಛನ್ಮೋಹಮಹರ್ಷಿಹರ್ಷವಿಹಿತಸ್ನಾನಾಹ್ನಿಕಾಹ್ನಾಯ ವಃ ।
ಭಿದ್ಯಾದುದ್ಯದುದಾರದರ್ದುರದರೀದೀರ್ಘಾದರಿದ್ರದ್ರುಮ-
ದ್ರೋಹೋದ್ರೇಕಮಹೋರ್ಮಿಮೇದುರಮದಾ ಮಂದಾಕಿನೀ
ಮಂದತಾಮ್[50] ॥

ಸ್ವಚ್ಛಂದಮುಚ್ಚಲಿಪ ಸ್ವಚ್ಛಕಚ್ಛದ ಬಳಿಯ
ದುರ್ಬಲತೆಯುಂ ಬಲದಿನನುಗೊಳಿಪ ಬೊಬ್ಬುಳಿಯ
ಪೆರ್ಚಳದಿನಚ್ಚುಗವ ನುರ್ಚುನೂರಾಗಿಸುವ,
ಹರಿಸಮಿಗೆ ರಿಸಿಗಳಾ ಮಜ್ಜನಾದ್ಯುಜ್ಜುಗವ
ಬಿಚ್ಚಳಿಪ, ದಪ್ಪವಹ ಕಪ್ಪೆಗಳು ಕುಪ್ಪಳಿಪ,
ಕಂದರದ ಪೆರ್ಮರವನೊರ್ಮೊದಲೆ ಮೂರ್ಮುಲೆವ,

---

47 ಹಿಂದಿನ ಶ್ಲೋಕದಲ್ಲಿ ದೂತಿಯ ನಿಂದೆಯು ಹೇಗೆ ಪ್ರಧಾನವೋ ಹಾಗೆ ಇಲ್ಲಿ ತರುಣಿಯು ಸಂಕೇತಕ್ಕೆ ತಪ್ಪಿದಳೆಂಬ ವಿಷಯವು ಪ್ರಧಾನವಲ್ಲ; ವಾಚ್ಯವಾದ ವರ್ಣನೆಯೇ ವ್ಯಂಗ್ಯವಸ್ತುವಿಗಿಂತಲೂ ರಮಣೀಯವಾಗಿರುವುದರಿಂದ. ಹಿಂದಿನ ಶ್ಲೋಕದಲ್ಲಿ ವಾಪೀಸ್ನಾನದ ವಾಚ್ಯವರ್ಣನೆಗಿಂತಲೂ ಸುರತಚಿಹ್ನೆಯ ವ್ಯಂಗ್ಯನಿರೂಪಣೆಯು ಹೃದಯಂಗಮವಾಗಿರುವುದರಿಂದ ಪ್ರಧಾನ.

48 ಏಕೆಂದರೆ ಅಸ್ಫುಟವಾದ ವ್ಯಂಗ್ಯವಿಲ್ಲದ ವಸ್ತುವೇ ವಿಶ್ವದಲ್ಲಿ ವಿರಲ.

49 ಹೋಲಿಸಿ— ಕನ್ನಡ ಧ್ವನ್ಯಾಲೋಕ, ಪು. ೧೫೬.

50 ಇಲ್ಲಿ 'ಛೇಕ' ಮತ್ತು ವೃತ್ತ್ಯನುಪ್ರಾಸಗಳೆಂಬ ಶಬ್ದಾಲಂಕಾರಗಳು ಸುಸ್ಪಷ್ಟ.

ಪೇರಲೆಗಳುರ್ವಿನಿಂ ಕೊರ್ವಿ ಗರ್ವವನುಲಿವ,
ಮಂದಾಕಿನಿಯೆ ! ನೀನೆಮ್ಮ ಮಂದತೆಯ ನೀಗೌ.

(ಅರ್ಥಚಿತ್ರಕ್ಕೆ ಉದಾಹರಣೆ :—)

ವಿನಿರ್ಗತಂ ಮಾನದಮಾತ್ಮಮಂದಿರಾತ್
ಭವತ್ಯುಪಶ್ರುತ್ಯ ಯದೃಚ್ಛಯಾಪಿ ಯಮ್ ।
ಸಸಂಭ್ರಮೇಂದ್ರದ್ರುತಪಾತಿತಾರ್ಗಲಾ
ನಿಮೀಲಿತಾಕ್ಷೀವ ಭಿಯಾಮರಾವತೀ[51] ॥

ಮಾನದಮನನೆನಿಪ್ಪ ದಾನವನು ಸ್ವೇಚ್ಛೆಯೊಳೆ
ಆವ ನೆವಮಿಲ್ಲದೆಯೆ ನಿಜಗೃಹವ ಬಿಡೆಯೂ ।
ಆದ ಕೇಳಿದಿಂದ್ರನವನಗುಳಿಯನು ವಹಿಲದೊಳೆ
ಹಾಕಲಮರಾವತಿಯು ಬೆಚ್ಚಿದಂಗನೆ ತಾನು
ಕಣ್ಮುಚ್ಚಿಕೊಂಡಿಹಳು ದಿಟವೆನಿಸದೇನು[52] ॥

ಇಲ್ಲಿಗೆ ಕಾವ್ಯಪ್ರಕಾಶದಲ್ಲಿ ಕಾವ್ಯದ ಪ್ರಯೋಜನ-ಕಾರಣ-ಸ್ವರೂಪ-ವಿಶೇಷಗಳ ನಿರ್ಣಯವೆಂಬ ಮೊದಲನೆಯ ಉಲ್ಲಾಸ ಮುಗಿದುದು.

ನುತಶಬ್ದಾರ್ಥಶರೀರಂ
ಗತದೋಷಂ ಸರಸಸಗುಣಸದಲಂಕೃತಿಯಿಂ ।
ಕೃತತೋಷಂ ಕವಿಸಹೃದಯ
ತತಿಗೆನಿಪೀ ಕಾವ್ಯಲಕ್ಷಣಂ ಸಂಸೇವ್ಯಂ ॥

—ಡಾ || ಕೆ. ಕೃಷ್ಣಮೂರ್ತಿ

---

[51] ಈ ಶ್ಲೋಕದ ಆಕರವು ಹಯಗ್ರೀವವಧವೆಂಬ ಕಾವ್ಯ.

[52] ಇಲ್ಲಿ ಉತ್ಪ್ರೇಕ್ಷೆಯೆಂಬ ಅರ್ಥಾಲಂಕಾರವು ಸ್ಪಷ್ಟ.

ರುದ್ರಸಾಹಿತ್ಯದಲ್ಲಿ ಆನಂದಾಸ್ವಾದ

೧

ಲೋಕದಲ್ಲಿ ಸಾಮಾನ್ಯವಾಗಿ ಮನುಷ್ಯನಿಗೆ ಸ್ವಂತ ಸುಖದಲ್ಲಿ ಸಂತೋಷವೂ ಸ್ವಂತ ಕಷ್ಟದಲ್ಲಿ ದುಃಖವೂ ಆಗುವುದು ಸಹಜ. ಹಾಗೆಯೇ ತನ್ನ ನೆರೆಹೊರೆಯವರ ವಿಷಯದಲ್ಲಿ ವರ್ತಿಸುವುದು ಅವನ ಮಾನವೀಯತೆಯ ಕುರುಹುಗಳಲ್ಲಿ ಒಂದು. ಎಷ್ಟೋ ವೇಳೆ ಇತರರ ಏಳಿಗೆ ಅವನಿಗೆ ತೃಪ್ತಿಯನ್ನುಂಟುಮಾಡದಿದ್ದರೂ, ಅವರ ಕಷ್ಟ ಕಾರ್ಪಣ್ಯಗಳು ಅವನಿಗೆ ಅವರಲ್ಲಿ ಅನುಕಂಪ ಅನುತಾಪಗಳನ್ನುಂಟುಮಾಡುತ್ತವೆ. ನೋವಿನ ತಲಸ್ಪರ್ಶ ಇಡೀ ವಿಶ್ವವನ್ನೇ ಬಂಧುವನ್ನಾಗಿ ಮಾಡುತ್ತದೆಯಂತೆ. ಇದಕ್ಕೆ ವ್ಯತಿರಿಕ್ತವಾದ ವರ್ತನೆ ತನ್ನಲ್ಲಿ ಕಂಡುಬಂದಲ್ಲಿ, ಆ ವ್ಯಕ್ತಿಗೆ ತನ್ನ ಮಾನವೀಯತೆಯ ಲಾಘವಕ್ಕಾಗಿ ನಾಚಿಕೆಯಾಗುತ್ತದೆ. ಇತರರು ಹಾಗೆ ಆಚರಿಸಿದರೆ, ಅವರಲ್ಲಿ ಜುಗುಪ್ಸೆ, ಕೋಪಗಳುಂಟಾಗುತ್ತವೆ. ಇದು ಸಾಮಾನ್ಯವಾಗಿ ಲೋಕರೂಢಿ. ಆದರೆ ಸಾಹಿತ್ಯಾಸ್ವಾದದಲ್ಲಿಯಾದರೋ, ಮಾನವನ ರುಚಿ ಇದಕ್ಕೆ ಭಿನ್ನವಾಗಿರುತ್ತದೆ. ಯಾವುದು ಅನುದಿನದ ಜೀವನದಲ್ಲಿ ಅವನಿಗೆ ಅನಾದರ, ಅಸಹ್ಯ, ದುಃಖಗಳನ್ನುಂಟುಮಾಡುತ್ತದೋ, ಸಾಹಿತ್ಯದಲ್ಲಿ ಅದರ ಅನುಕೃತಿ ಅವನಿಗೆ ಅದರಲ್ಲಿ ಔತ್ಸುಕ್ಯ, ಪ್ರೀತಿ, ಆನಂದಗಳನ್ನುಂಟುಮಾಡುತ್ತದೆ. ಜೀವನದ ವಿಕಾರ, ವಿಕೃತಿಗಳು ಸಾಹಿತ್ಯಲೋಕದ ಹೊಸಲು ದಾಟುತ್ತಲೇ ಸ್ಫುರದ್ರೂಪ, ಮಂಗಳಾಕೃತಿಗಳಾಗುತ್ತವೆ. ಜೀವನದ ಕಗ್ಗಲ್ಲುಗಳು ಸಾಹಿತ್ಯಸ್ಪರ್ಶದಿಂದ ನೀಲಮಣಿಗಳಾಗುತ್ತವೆ. ಬಾಳಬೆಂಗಾಡು ಸಾಹಿತ್ಯದೇವನ ಪ್ರವೇಶದಿಂದ ಅಮರನಂದನವಾಗುತ್ತದೆ; ಅಲ್ಲಿನ ಚಂಡಾತಪ ಇಲ್ಲಿ ಶೀತಲ ಕಿರಣನಾಗುತ್ತಾನೆ; ಅಲ್ಲಿನ ಭಯ, ದುಃಖ, ಚಿತ್ತಕ್ಷೋಭೆಗಳು ಇಲ್ಲಿ ಧೃತಿ, ತುಷ್ಟಿ, ಶಾಂತಿಗಳಾಗಿ ಪರಿಣಮಿಸುತ್ತವೆ. ಇದೊಂದು ವಿಚಿತ್ರಘಟನೆ. ಇಷ್ಟೇ ಅಲ್ಲದೆ ಕೃತ್ಯ ಕ್ರೂರವಾದಷ್ಟೂ ಕೃತಿ ಆನಂದಕರವಾಗುತ್ತದೆಯೆಂಬ ಕವಿ, ವಿಮರ್ಶಕರ ಅಭಿಪ್ರಾಯವಂತೂ ಇನ್ನೂ ವಿಲಕ್ಷಣ. ಇದಕ್ಕೆ ನಿದರ್ಶನ ರುದ್ರಕೃತಿಯಲ್ಲಿ ಮಾನವನ ಅನಾದಿಯಾದ ಆನಂದಾಸ್ವಾದ.

ರುದ್ರಕೃತಿಯ ವಸ್ತು, ಸಾಧುಗಳ ಸತ್ವಪರೀಕ್ಷೆಗಾಗಿ ವಿಧಿಯೊಡ್ಡುವ ದುಃಖ ಪರಂಪರೆಯ ಚಿತ್ರಣದಿಂದ ಹಿಡಿದು, ಅರೆಗಣ್ಣಿಂದಲೋ ಅಥವಾ ಬಿಚ್ಚುಗಣ್ಣಿಂದಲೋ ಮಾಡಿದ ಕ್ಷಮ್ಯ ಅಲ್ಪಾಪರಾಧಗಳಿಂದ ಮೊದಲಾಗಿ ಪ್ರಾಯಶ್ಚಿತ್ತವೇ ಇಲ್ಲದ ಪಾಪ

ಗಳ ವರೆಗೆ, ಮತ್ತು ಅವುಗಳಿಗಾಗಿ ಪರಿಮಿತಿಯಿಲ್ಲದ ಕಷ್ಟಗಳನ್ನನುಭವಿಸುವ ದೃಶ್ಯಗಳ ವರೆಗೆ ವ್ಯಾಪಿಸಿರುತ್ತದೆ. ಮನುಷ್ಯಕೃತ ಅನೇಕ ದರ್ಶನಗಳಲ್ಲಿ ಪಾಪಿಗೆ ಅಯ್ಯೋ ಎನ್ನುವ ದರ್ಶನ ಸಾಹಿತ್ಯವಾಗಿರಬಹುದು. ಆದರೂ ರುದ್ರಕೃತಿಗಳ ವಸ್ತುಗಳಂತೂ ಅನೇಕ ವೇಳೆ ರಾಕ್ಷಸೀಯ. ಮಾತೃಹತ್ಯ (ಓರೆಸ್ಟಿಸ್), ಪಿತೃಹತ್ಯ ಮತ್ತು ಮಾತೃಗಮನ (ಈಡಿಪಸ್), ಭ್ರೂಣಹತ್ಯಾ (ಮೀಡಿಯ, ಅಶ್ವತ್ಥಾಮನ್), ಸ್ತ್ರೀಹತ್ಯ (ಓಥೆಲೋ), ಸ್ವಾಮಿಹತ್ಯ (ಮ್ಯಾಕ್‌ಬೆತ್, ರಿಚರ್ಡ್ III), ಇವು ಪ್ರಪಂಚದ ಶ್ರೇಷ್ಠ ರುದ್ರನಾಟಕಗಳ ವಸ್ತುಗಳು. ಹೀಗೆಂದ ಮೇಲೆ ಇವುಗಳ ಅವಲೋಕನದಿಂದ ಆನಂದವುಂಟಾಗುವುದು ಸಾಧ್ಯವೇ ಎಂಬ ಸಂಶಯ ಬಂದರೂ ಬರಬಹುದು. ಹಾಗೇನಾದರೂ ಆದಲ್ಲಿ ಅದು ಅಸ್ವಾಭಾವಿಕ, ಅನೈಸರ್ಗಿಕ, ಅಥವಾ ಅಮಾನುಷವೆಂದಾಗಲೀ ಅಭಿಪ್ರಾಯವುಂಟಾಗಬಹುದು. ಆದರೆ ಈ ವಿಲಕ್ಷಣ ಅನುಭವಕ್ಕೆ ಭಾಗಿಗಳು ಕೇವಲ ಪಾಮರರಲ್ಲದೆ, ಶ್ರೇಷ್ಠಕವಿ, ವಿಮರ್ಶಕರುಗಳೂ ಆಗಿರುವುದು ಆಶ್ಚರ್ಯಕರ. ಹೋಮರಿನಿಂದ ಎಲಿಯಟ್ಟಿನ ವರೆಗೆ, ಅರಿಸ್ಟಾಟಲಿನಿಂದ ಅಬರ್‌ಕ್ರಾಂಬಿಯ ವರೆಗೆ ಈ ವಿಷಯದಲ್ಲಿ ಏಕಾಭಿಪ್ರಾಯವನ್ನು ಕಾಣುತ್ತೇವೆ.

ಪಾಶ್ಚಾತ್ಯವಿಮರ್ಶಾಕುಲಪತಿ, "ಬಲ್ಲಿದರ ಗುರು," ಅರಿಸ್ಟಾಟಲ್ ತನ್ನ 'ಕಾವ್ಯಮೀಮಾಂಸೆ'ಯಲ್ಲಿ ಕಾವ್ಯದ ಉದ್ದೇಶ ಆನಂದವೆಂದು ಹೇಳಿ, ರುದ್ರನಾಟಕ ಈ ಕಾರ್ಯದಲ್ಲಿ ಹೆಚ್ಚು ಪ್ರಭಾವಯುತವಾದುದರಿಂದ ಅದು ಮಹಾ ಕಾವ್ಯಕ್ಕಿಂತಲೂ ಉತ್ತಮವೆಂದೂ, ಮತ್ತು ಸಾಹಿತ್ಯಪ್ರಕಾರಗಳಲ್ಲೇ ಶ್ರೇಷ್ಠತಮವೆಂದೂ ಸಾರಿದನು. ನಿರಾಶಾವಾದಿಗಳ ಆಚಾರ್ಯಪುರುಷ ಷೋಪೆನ್ ಹೋ : "ಪ್ರಭಾವದ ಹಿರಿಮೆ ಮತ್ತು ರಚನೆಯ ಕಷ್ಟಸಾಧ್ಯತೆಗಳಿಂದ, ರುದ್ರನಾಟಕವು ಕಾವ್ಯಕಲೆಯ ಶಿಖರವಾಗಿ ಪರಿಗಣಿತವಾಗಬೇಕು, ಮತ್ತು ಹಾಗೆ ಪರಿಗಣಿತವೂ ಆಗಿದೆ" ಎನ್ನುತ್ತಾನೆ. ರುದ್ರದರ್ಶನ ಮಾನವನ ಸಾರ್ವತ್ರಿಕ, ಸಾರ್ವಕಾಲಿಕ ಅವಶ್ಯಕತೆ ಎಂದು ಬುಷರ್‌ನ ಮತ. ಅಬರ್‌ಕ್ರಾಂಬಿಯಾದರೋ : "ಆನಂದಾಸ್ವಾದವಿಲ್ಲದಿದ್ದರೆ ರುದ್ರತೆಯೇ ಇರುವುದಿಲ್ಲ . . . ಆರೋಗ್ಯವಾಗಿರುವ ಮನಸ್ಸಿನ ನಿಜವಾದ ಚಿಹ್ನವೆಂದರೆ ರುದ್ರತೆಯ ಆನಂದಾಸ್ವಾದಕ್ಕಿಂತ ಬೇರೆ ಯಾವುದೂ ಇಲ್ಲ. . . . ರುದ್ರನಾಟಕದ ಕಲೆಯಲ್ಲಿ ತನ್ನ ಮರ್ತ್ಯಜೀವನಕ್ಕಿಂತ ಮೇಲೇರಬಹುದಾದಂತಹ ಭವ್ಯವಾದ ಔನ್ನತ್ಯವನ್ನು ಮಾನವನು ಇನ್ನೆಲ್ಲೂ ಕಾಣ." ಎಂದು ಅಭಿಪ್ರಾಯಪಡುತ್ತಾನೆ.

ರುದ್ರದೃಷ್ಟಿ ನಮ್ಮ ಸಂಸ್ಕೃತಿಯ ಹೃದಯಕ್ಕೆ ಹೊರಗೆಂದುಕೊಂಡಿರುವ ನಮ್ಮಲ್ಲೂ ಇದೆ. ನಮ್ಮ ಆದಿಕಾವ್ಯವೇ ಕರುಣರಸದ ಆದರ್ಶಕಾವ್ಯವೆಂದು ಆಲಂಕಾರಿಕರ ಮತ. ಪಾಶ್ಚಾತ್ಯರಲ್ಲೂ ಹೋಮರನ ಮಹಾ ಕಾವ್ಯಗಳೇ ರುದ್ರನಾಟಕಗಳ

ಉದ್ಭವಭೂಮಿಯೆಂದು ಅರಿಸ್ಟಾಟಲಿನ ಅಭಿಪ್ರಾಯ. ಭಾಸ, ಕಾಳಿದಾಸಾದಿಗಳು ಶೃಂಗಾರ ರಸನಿರೂಪಣೆಯಲ್ಲಿ ಕೃತಕೃತ್ಯತೆಯನ್ನು ಪಡೆಯಲು ವಿಪ್ರಲಂಭ ಶೃಂಗಾರದ ಘಟನೆಗಳನ್ನಾಶ್ರಯಿಸಿದರೇ ಹೊರತು, ಸಂಭೋಗ ಶೃಂಗಾರದ ಘಟನೆಗಳನ್ನಲ್ಲ. ಭವಭೂತಿಯಾದರೋ "ಏಕೋ ರಸಃ ಕರುಣ ಏವ" ಎಂದು ಘೋಷಿಸಿದರೆ, ಅತ್ತ ಕಡೆಯಿಂದ "ಶೋಕತಮ ಭಾವನೆಗಳನ್ನೊಸರುವುವೇ ಎಮ್ಮ ಮಧುರತಮ ಗೀತ ಗಳು" ಎಂದು ಶೆಲ್ಲಿ ಅನುಮೋದಿಸುತ್ತಾನೆ. ನಮ್ಮ ವಿಮರ್ಶಕರಲ್ಲೂ, ಧ್ವನಿಕಾರನು

ಶೃಂಗಾರೇ ವಿಪ್ರಲಂಭಾಖ್ಯೇ ಕರುಣೇಚ ಪ್ರಕರ್ಷಿವತ್ |
ಮಾಧುರ್ಯಮಾರ್ದ್ರತಾಂ ಯಾತಿ ಯತಸ್ತತ್ರಾಧಿಕಂ ಮನಃ ||

ಎಂದುದನ್ನು, ಇದರ ಮೇಲಿನ ವ್ಯಾಖ್ಯಾನದಲ್ಲಿ ಅಭಿನವಗುಪ್ತನು "ಸಂಭೋಗ ಶೃಂಗಾರಾತ್ ಮಧುರತರೋ ವಿಪ್ರಲಂಭಃ ತತೋಽಪಿ ಮಧುರತರಃ ಕರುಣಃ" ಎಂದು ವಿವರಿಸುತ್ತಾನೆ. ವಿಶ್ವನಾಥನೂ ಕೂಡ "ಕರುಣಾದಾವಪಿ ರಸೇ ಜಾಯತೇ ಯತ್ಪರಂ ಸುಖಂ" ಎಂದು ಅಭಿಪ್ರಾಯಪಡುತ್ತಾನೆ.

ಹೀಗೆ ಕವಿ, ವಿಮರ್ಶಕರೆಲ್ಲಾ ರುದ್ರಕೃತಿಗಳಿಂದ ಆಕರ್ಷಿತರಾಗಿದ್ದರೂ, ಅದ ರಲ್ಲಿನ ಆನಂದಾಸ್ವಾದದ ಲಕ್ಷಣ, ರೀತಿಗಳ ವೈಲಕ್ಷಣ್ಯವನ್ನು ಒಂದಿಲ್ಲೊಂದು ಬಗೆ ಯಾಗಿ ವಿವರಿಸಲು ಪ್ರಯತ್ನಿಸಿದ್ದಾರೆ. ವಾಲ್ಮೀಕಿಗಳ ಶೋಕದಲ್ಲುದ್ಭವಿಸಿ, ಕರುಣ ರಸಸ್ಯಂದಿಯಾದ, ಅವರ ಕಾವ್ಯ ನಮ್ಮಲ್ಲೂ ಶೋಕವನ್ನುಂಟುಮಾಡದೆ ಸಂತೋಷ ವನ್ನುಂಟುಮಾಡುವುದನ್ನು ಕುರಿತು ಚರ್ಚೆ ನಮ್ಮ ಅಲಂಕಾರಗ್ರಂಥಗಳಲ್ಲಿ ಅನೇಕ ಪ್ರಕಾರಗಳಲ್ಲಿ ಕಂಡುಬರುತ್ತದೆ. ಅದೇ ರೀತಿ ಪಾಶ್ಚಾತ್ಯರಲ್ಲಿ ಅರಿಸ್ಟಾಟಲಿನಿಂದ ಇಂದಿನ ವಿಮರ್ಶಕರ ವರೆಗೂ ಒಂದೊಂದು ರೀತಿಯಾಗಿ ಕವಿಗಳು, ವಿಮರ್ಶಕರು, ತತ್ವಜ್ಞರು ಈ ಮರ್ಮವನ್ನು ಭೇದಿಸಲು ತಮ್ಮ ತಮ್ಮ ಶಕ್ತ್ಯನುಸಾರವಾಗಿ ಯತ್ನಿಸಿ ದ್ದಾರೆ. ಆದರೆ ವಿಮರ್ಶೆಯ ಇತಿಹಾಸದ ಆದಿಯಲ್ಲೇ ಆರಂಭವಾದ ಈ ಸಮಸ್ಯೆ ಇಂದಿನ ವರೆಗೂ ತನ್ನ ಪ್ರಶ್ನಪತಾಕೆಯನ್ನು ತಗ್ಗಿಸಿಲ್ಲ. ಧಾಳಿಗಳೇನೋ ನಡೆಯು ತ್ತಿವೆ; ಆದರೆ ನಗರವಿನ್ನೂ ಪೂರ್ಣವಾಗಿ ವಶವಾಗಿಲ್ಲ. ಈ ವಿವರಣೆಗಳಲ್ಲಿ ಕೆಲವುಗಳ ರೂಪರೇಷೆಗಳನ್ನು ಉಲ್ಲೇಖಿಸಿ, ಅವುಗಳ ಗುಣಾವಗುಣಗಳನ್ನು ಚರ್ಚಿಸುವುದು ಈ ಲೇಖನದ ಉದ್ದೇಶ.

೨

ರುದ್ರಕೃತಿಗಳ ಪ್ರಭಾವವನ್ನು ವಿಮರ್ಶಿಸುವ ಮೊದಲು ರುದ್ರಕೃತಿಗಳ ಲಕ್ಷಣ ಮತ್ತು ಆನಂದದ ಲಕ್ಷಣಗಳನ್ನು ಸ್ಥೂಲವಾಗಿಯಾದರೂ ತಿಳಿದಿರಬೇಕು. ರುದ್ರ

ಕೃತಿಯ ಲಕ್ಷಣವನ್ನು ಅರಿಸ್ಟಾಟಲಿನ ರುದ್ರನಾಟಕದ ಲಕ್ಷಣದಿಂದ ತೆಗೆದುಕೊಳ್ಳಬಹುದು. ಮತ್ತು ರುದ್ರನಾಟಕಗಳ ಮೇಲಿನ ಅಭಿಪ್ರಾಯಗಳನ್ನು ರುದ್ರಕೃತಿ ಸಾಮಾನ್ಯಕ್ಕೂ ಅನ್ವಯಿಸಿಕೊಳ್ಳಬಹುದು. ಅರಿಸ್ಟಾಟಲಿನ ಕಾವ್ಯಮೀಮಾಂಸೆಯ ಆರನೆಯ ವಿಭಾಗದಲ್ಲಿ ರುದ್ರನಾಟಕದ ಲಕ್ಷಣ ಹೀಗಿದೆ: "ರುದ್ರನಾಟಕವು ಗಂಭೀರವಾದ, ಪೂರ್ಣವಾದ ಮತ್ತು ಯುಕ್ತಪ್ರಮಾಣದಿಂದ ಕೂಡಿದ ಒಂದು ಕಾರ್ಯದ ಅನುಕರಣ; ಪ್ರತಿಯೊಂದು ಬಗೆಯ ಅಲಂಕಾರದಿಂದ ಕೂಡಿದ ಬಾಷೆಯಲ್ಲಿರಬೇಕು; ಅಭಿನಯರೂಪದಲ್ಲಿ, ಕಥನರೂಪದಲ್ಲಲ್ಲ; ಕರುಣೆ ಮತ್ತು ಭಯಗಳ ಮೂಲಕ ಆ ಭಾವಗಳನ್ನು ಸೂಕ್ತರೀತಿಯಿಂದ ಶಮನಮಾಡಬೇಕು." ಈ ಲಕ್ಷಣದಲ್ಲಿ ಪ್ರತಿಯೊಂದು ಪದದ ಮೇಲೂ ವಿಪುಲವಾದ ಚರ್ಚೆಯಿದೆ. ಆದರೂ ಅರಿಸ್ಟಾಟಲಿನ ಮುಖ್ಯ ಅಭಿಪ್ರಾಯವನ್ನು ಗ್ರಹಿಸಲು ಕಷ್ಟವಲ್ಲ. ಈ ಲಕ್ಷಣದಲ್ಲಿ ಗಮನಿಸಬೇಕಾದ ಅಂಶ ರುದ್ರನಾಟಕದ ಅಂತ್ಯವನ್ನು ಕುರಿತದ್ದು. ರುದ್ರನಾಟಕ ದುರಂತವಾಗಿರಬೇಕಾದ ನಿಯಮವೇನೂ ಇಲ್ಲ. ರುದ್ರನಾಯಕನ ಲಕ್ಷಣವನ್ನು ಕೊಡುವಾಗ, ಅವನು ಉದಾತ್ತಚರಿತನಾದ ಮಹಾಪುರುಷನಾಗಿರಬೇಕು ಮತ್ತು ಯಾವುದೋ ದೋಷದಿಂದ ಉನ್ನತ ದೆಶೆಯಿಂದ ಕ್ಷೀಣದೆಶೆಗೆ ಬರಬೇಕೆಂದು ಅರಿಸ್ಟಾಟಲನು ಹೇಳುತ್ತಾನೆ. ಆದರೆ ರುದ್ರನಾಟಕವು ನಾಯಕನ ಸಾವಿನಲ್ಲೇ ಮುಕ್ತಾಯವಾಗಬೇಕೆಂಬುದಾಗಲೀ, ರುದ್ರನಾಟಕದ ಲಕ್ಷಣ, ಪ್ರಭಾವಗಳನ್ನು ಕೊನೆಯ ಅಂಕದಲ್ಲಿನ ಹೆಣಗಳ ಸಂಖ್ಯೆಯ ಮೇಲೆ ನಿರ್ಣಯಿಸುವುದಾಗಲೀ ಅರಿಸ್ಟಾಟಲನಿಗೆ ಒಪ್ಪಿಗೆಯಿಲ್ಲ. ಇದು ಷೇಕ್ಸ್‌ಪಿಯರಿನ ರುದ್ರನಾಟಕಪ್ರಕಾರವನ್ನು ಎಲ್ಲಾ ರುದ್ರನಾಟಕಗಳಿಗೂ ಅನ್ವಯಿಸತೊಡಗುವ ಯತ್ನ. ರುದ್ರನಾಯಕನು ಸಾವಿಗೊಳಗಾಗದಿದ್ದರೂ ಉಚ್ಛ್ರಾಯಸ್ಥಿತಿಯಿಂದ ಹೀನಸ್ಥಿತಿಗೆ ಬರುವುದು ಸಾಮಾನ್ಯವಾಗಿ ಎಲ್ಲಾ ರುದ್ರನಾಟಕಗಳಲ್ಲಿ ಕಂಡುಬರುತ್ತದೆ. ಇದು ಕರುಣಭಯಗಳನ್ನು ಪ್ರಚೋದಿಸಲು ಉತ್ತಮವಾದ ಮಾರ್ಗವೆಂದು ಒಂದುಕಡೆ ಹೇಳಿದರೂ, ಅರಿಸ್ಟಾಟಲನು ತನ್ನ ಗ್ರಂಥದ ಹದಿನಾಲ್ಕನೇ ವಿಭಾಗದಲ್ಲಿ ರುದ್ರವಸ್ತುವಿನ್ಯಾಸವನ್ನು ಚರ್ಚಿಸುತ್ತಾ ದುರಂತವಾಗಿ ಮುಕ್ತಾಯವಾಗಬೇಕಾದ ನಾಟಕ ಕೊನೆಯಲ್ಲಿ ಯಾವುದೋ ಒಂದು ಘಟನೆಯಿಂದ, ಹಾಗಾಗದೆ ಸುಖಮುಖವಾಗುವುದೇ ಶ್ರೇಷ್ಠರೀತಿಯದೆಂದು ಹೇಳುತ್ತಾನೆ. ಆದ್ದರಿಂದ ರುದ್ರನಾಟಕ ದುರಂತವಾಗಿರಬೇಕೆಂಬ ನಿಯಮ ಅರಿಸ್ಟಾಟಲಿನದಲ್ಲ; ರುದ್ರನಾಟಕಗಳೆಂದು ಕರೆಸಿಕೊಂಡಿರುವ ಕೆಲವು ನಾಟಕಗಳು ಹಾಗಿಲ್ಲವೂ ಇಲ್ಲ; ಆದರೆ ದುಃಖಭೂಯಿಷ್ಠವಾಗೇನೋ ಇರಬೇಕು. ಈ ವಿಷಯದಲ್ಲಿ: "ರುದ್ರನಾಟಕವು ನೋವನ್ನು ಕುರಿತದ್ದಾಗಿದೆ; ಕೆಲವು ವೇಳೆ, ಪಾಪವನ್ನು, ಅನೇಕ ವೇಳೆ ದುಃಖವನ್ನು, ಅನೇಕ ವೇಳೆ

ಅವಶ್ಯವಾಗಲ್ಲ, ಸಾವನ್ನು" ಎಂದು ಅಲ್ಲಾರ್‌ಡೈಸ್ ನಿಕೊಲ್ ಹೇಳಿರುವುದು ಸಾಧು ವಾಗಿದೆ. ಕೊನೆಯ ಅಂಕದಲ್ಲಿ ಸಾವಿಲ್ಲದಿರುವುದರಿಂದ ನಮ್ಮಲ್ಲಿ ರುದ್ರನಾಟಕವೇ ಇಲ್ಲವೆಂದು ಅಭಿಪ್ರಾಯಪಡುವ ವಿಮರ್ಶಕರು ಈ ಅಂಶವನ್ನು ಗಮನದಲ್ಲಿಡುವುದು ಅವಶ್ಯಕ.

ಹೀಗೆಯೇ ಆನಂದದ ಲಕ್ಷಣವನ್ನು ವಿವರಿಸುವುದರಲ್ಲೂ ಅನೇಕ ವಾದ ವಿವಾದಗಳಿವೆ. ಅಣಕುಪದ್ಯ ಮೊದಲಾಗಿ ಮಹಾಕಾವ್ಯದ ವರೆಗೂ, ಚಾಟುಕಥೆ ಯಿಂದ ಮೊದಲಾಗಿ ಶ್ರೇಷ್ಠಕಾದಂಬರಿಗಳ ವರೆಗೂ, ಭಾವಗೀತದಿಂದ ಮೊದಲಾಗಿ ರುದ್ರನಾಟಕದ ವರೆಗೂ ಇರುವ ಸಾಹಿತ್ಯಭೇದಗಳೆಲ್ಲವುಗಳ ಪ್ರಭಾವವನ್ನೂ ಆನಂದವೆಂದೇ ಕರೆಯುತ್ತೇವೆ. ಇಲಿಯಡ್, ರಾಮಾಯಣ, ಈಡಿಪಸ್, ಟಿರ್ರಾನಸ್, ಸ್ವಪ್ನವಾಸವದತ್ತ; ಹ್ಯಾಮ್ಲೆಟ್, ಶಾಕುಂತಲ; ಪಾರಡೈಸ್ ಲಾಸ್ಟ್, ಗದಾ ಯುದ್ಧ; ರಿಟರ್ನ್ ಆಫ್ ದಿ ನೇಟಿವ್ ಕಾದಂಬರಿ; ಬೆಟ್ಟದ ಜೀವ, ಚಕ್ರದೃಷ್ಟಿ; ಬೆರಳ್ಗೆ ಕೊರಳ್, ಅಮ್ಮಾವ್ರ ಗಂಡ; ಈ ಎಲ್ಲವುಗಳ ಪ್ರಭಾವವೂ ಆನಂದವೆಂದೇ ಕರೆಯಲ್ಪಡುತ್ತಿರುವಾಗ ಆನಂದವೆಂದರೇನೆಂಬ ಪ್ರಶ್ನೆ ಹುಟ್ಟುತ್ತದೆ. ಸ್ಥೂಲವಾಗಿ ಪರಿಶೀಲಿಸಿದಲ್ಲಿ ಇದು ಒಂದು ಬಗೆಯಾದ ಸಮನ್ವಿತವಾದ ಶಾಂತಸ್ಥಿತಿಯೆಂದು ಕಾಣುತ್ತದೆ. ಈ ಅರ್ಥವನ್ನೇ ಸೂಚಿಸಿ ಅರಿಸ್ಟಾಟಲನು ಸಾಹಿತ್ಯವನ್ನು ಪ್ಲೇಟೋವಿನ ಖಂಡನೆಯಿಂದ ಪಾರುಮಾಡಿದನು. ಈ ಸ್ಥಿತಿಯನ್ನೇ "ಭಾವೋದ್ರೇಕ ತಗ್ಗಿದ, ಚಿತ್ತ ಶಾಂತಿ"ಯೆಂದು ಮಿಲ್ಟನ್ ವಿವರಿಸಿದುದು. ನಮ್ಮಲ್ಲೂ ಆಲಂಕಾರಿಕರು ಇದನ್ನು "ಹ್ಲಾದಃ ಸ್ವವಿಶ್ರಾಂತಿ ಲಕ್ಷಣ ಆನಂದಃ" ಎಂದು ಕರೆದು, ಇದನ್ನು ಒಂದು ಬಗೆಯ ಸಮಾಧಿಸ್ಥಿತಿಗೆ ಹೋಲಿಸಿದರು. ಆದರೆ ಶಾಂತಸ್ಥಿತಿಯೆಂದರೆ ಭಾವ ಶೂನ್ಯದ ಸ್ಥಿತಿಯಲ್ಲ; ಭಾವಾತಿರೇಕಸ್ಥಿತಿಯೂ ಅಲ್ಲ. ರಮ್ಯವಸ್ತುಗಳ ದರ್ಶನ, ಮಧುರಶಬ್ದಗಳ ಶ್ರವಣ ಸುಖಿಯಾಗಿರುವ ಮನುಷ್ಯನನ್ನೂ ಪರ್ಯುತ್ಸುಕನನ್ನಾಗಿ ಮಾಡುತ್ತವೆಯೆಂದು ಕಾಳಿದಾಸನು ಹೇಳುತ್ತಾನೆ. ಆದರೆ ಈ ಔತ್ಸುಕ್ಯದಿಂದ ಯಾವ ವಿಧವಾದ ಚಿತ್ತಕ್ಷೋಭೆಯೂ ಉಂಟಾಗುವುದಿಲ್ಲ. ಬುದ್ಧಿ, ಭಾವನಾಶಕ್ತಿಗಳು ಪೂರ್ಣವಾಗಿ ವಿಕಾಸಹೊಂದಿ, ಪರಸ್ಪರ ವೈಷಮ್ಯವಿಲ್ಲದೆ, ಸಮನ್ವಿತಸ್ಥಿತಿಯಲ್ಲಿರು ವುದೇ ಆನಂದದ ಲಕ್ಷಣವೆಂದು ಹೇಳಬಹುದು. ಇದು ರುದ್ರನಾಟಕಗಳಿಂದ ಹೇಗೆ ಪ್ರಾಪ್ತಿಯಾಗುತ್ತದೆಂಬುದೇ ಒಂದು ಬಗೆಹರಿಸಲಾಗದ ಪ್ರಶ್ನೆಯಾಗಿದೆ.

೩

ಫಾಗ್ವೆ, ಸೆಗ್ನಿ, ರೂಸ್ಸೋ, ಬರ್ಗಸೋನ್‌ರ ಮತದಲ್ಲಿ ರುದ್ರನಾಟಕದಲ್ಲಿ ನಮಗೆ ದೊರಕುವುದು, ಇತರರ ನೋವಿನಲ್ಲಿ ನಗುವನ್ನು ಪ್ರದರ್ಶಿಸುವ ಒಂದು ವಿಧವಾದ

ಪ್ರಾಕೃತ, ಅನಾಗರಿಕಸಂತೋಷ. ಪ್ರತಿಯೊಬ್ಬರ ಹೃದಯದಲ್ಲೂ ನಾಗರಿಕತೆಯ ಆಚ್ಛಾದನೆಯ ತೆರೆಯಲ್ಲಿ ಪ್ರಾಕ್ತನ ಕಾಲದ ಕ್ರೂರಭಾವಗಳು ಅಡಗಿರುತ್ತವೆ. ಸಮಾಜದ ರೀತಿನೀತಿಗಳಿಂದ ಅವು ಪ್ರಕಾಶಕ್ಕೆ ಬರಲು ಅವಕಾಶವಾಗುವುದಿಲ್ಲ. ಆದರೆ ರುದ್ರನಾಟಕದಲ್ಲಿಯಾದರೋ ಅಂತಹ ಸಂದರ್ಭವೊದಗುತ್ತದೆ. ಆಗ ನಾವು ಧೈರ್ಯವಾಗಿ ನಮ್ಮ ಸಹಜವಾದ ಭಾವಗಳನ್ನು ತೃಪ್ತಿಪಡಿಸಬಹುದು. ಆದ್ದರಿಂದ ರುದ್ರನಾಟಕದ ಆನಂದ ನಮ್ಮ ಪ್ರಚ್ಛನ್ನರಾಕ್ಷಸೀಯ ಭಾವಗಳ ತುಷ್ಟಿಯ ಮೇಲೆ ನಿಂತಿದೆ ಎಂದು ಇವರ ಅಭಿಪ್ರಾಯ. ಈ ವಿಧವಾದ ಆನಂದ ಕೆಲವರಿಗೆ ಆಗಬಹುದು. ಆದರೆ ಇದು ಸಾಮಾನ್ಯವಾಗಿ ಅನುಭವದೂರವಾದದ್ದು. ರುದ್ರನಾಟಕದಲ್ಲಿ ನಮಗೆ ರುದ್ರನಾಯಕನಲ್ಲಿ ಅನುತಾಪ, ಕರುಣೆಗಳುಂಟಾಗುತ್ತವೆಯೇ ಹೊರತು, ಅವನ ದುಃಖದಲ್ಲಿ ಸಂತೋಷವಲ್ಲ. ಇದರ ಛಾಯೆ ವೈನೋದಿಕ (Comedy)ಗಳಲ್ಲಿ ಕಂಡು ಬಂದರೂ, ಈ ಭಾವನೆಗೂ ರುದ್ರದೃಷ್ಟಿಗೂ ಬಹಳ ದೂರ. ಅದೂ ಅಲ್ಲದೆ, ರುದ್ರ ನಾಟಕದ ಕೃತಕೃತ್ಯತೆ ನಮ್ಮ ಪ್ರಾಕೃತ ಭಾವಗಳನ್ನು ತೃಪ್ತಿಪಡಿಸುವುದಷ್ಟೇ ಆಗಿದ್ದರೆ, ಅದರ ಪ್ರಭಾವದಿಂದ ನಾವು ಹೆಚ್ಚು ಕ್ಷುದ್ರರಾಗಿ ಕ್ರೂರರಾಗಬೇಕಿತ್ತು. ಆದರೆ ಹಾಗಾಗದೆ ನಾವು ಹೆಚ್ಚು ವಿಶಾಲಹೃದಯರೂ, ಅನುಕಂಪಿಗಳೂ ಆಗುವುದು ಎಲ್ಲರ ಅನುಭವವೇದ್ಯವಾಗಿರುವುದರಿಂದ ಈ ವಿಮರ್ಶಕರ ವಾದವನ್ನು ಒಪ್ಪುವುದಕ್ಕಾಗುವುದಿಲ್ಲ.

ಇನ್ನು ಕೆಲವರ ಅಭಿಪ್ರಾಯದಲ್ಲಿ ರುದ್ರನಾಟಕದ ಆನಂದ ಪರಪೀಡನದ ದರ್ಶನದಿಂದಲ್ಲ; ಆತ್ಮಪೀಡನದಿಂದ ಉಂಟಾಗುವ ವಿಚಿತ್ರವಾದ ಒಂದು ಬಗೆಯ ಸಂತೋಷ. ಆದರೆ ಹ್ಯಾಮ್‌ಲೆಟ್, ಲಿಯರ್, ಈಡಿಪಸ್, ಜನತೆಯ ಶತ್ರು ಮುಂತಾದ ನಾಟಕಗಳ ಪ್ರಭಾವ ಈ ರೀತಿಯದೆಂದು ಯಾರಿಗೂ ಅನ್ನಿಸುವುದಿಲ್ಲ.

ಇದೇ ಬಗೆಯ ಮತ್ತೊಂದು ಪಂಥದ ವಿಮರ್ಶಕರ ಪ್ರಕಾರ ಸಂತೋಷ, ದುಃಖಗಳಿಗೆ ಹೆಚ್ಚು ಅಂತರವಿಲ್ಲ; ಒಂದರ ಪ್ರಕರ್ಷವೇ ಇನ್ನೊಂದಾಗುತ್ತದೆ. ಫಾನ್‌ತಾನಲ್ಲನು "ಸಂತೋಷದ ಚಲನೆ, ಸ್ವಲ್ಪ ಮುಂದೆ ಹೋದರೆ, ದುಃಖವಾಗುತ್ತದೆ; ದುಃಖದ ಚಲನೆ, ಸ್ವಲ್ಪ ಕಡಿಮೆಯಾದಲ್ಲಿ, ಸುಖವಾಗುತ್ತದೆ" ಎನ್ನುತ್ತಾನೆ. ಶೆಲ್ಲಿಯೂ ಕೂಡ "ನಮ್ಮ ವ್ಯಕ್ತಿತ್ವದ ಅಧಮಭಾಗದ ನೋವು ಅನೇಕ ವೇಳೆ ಉತ್ತಮಭಾಗದ ಸುಖಕ್ಕೆ ಸಂಬಂಧಪಟ್ಟಿರುತ್ತದೆ. . . . ರುದ್ರಕೃತಿಯಲ್ಲಿನ ನಮ್ಮ ಸಹಾನುಭೂತಿ ಈ ತತ್ವದ ಮೇಲೆ ನಿಂತಿದೆ; ದುಃಖದ ಹೃದಯದಲ್ಲಿರುವ ಸುಖದ ಸೂಚನೆಯನ್ನು ಕೊಡುವುದರಿಂದ ರುದ್ರನಾಟಕವು ನಮಗೆ ಸಂತೋಷವನ್ನು ಕೊಡುತ್ತದೆ" ಎಂದು ವಾದಿಸುತ್ತಾನೆ. ಆದರೆ ದುಃಖದ ಮಧ್ಯದಲ್ಲಿ ಸುಖ ಹೇಗಿರು

ತ್ತದೆ ಎಂಬ ಪ್ರಶ್ನೆಗೆ ಇಲ್ಲಿ ಉತ್ತರ ದೊರಕುವುದಿಲ್ಲ. ಸುಖದುಃಖಗಳು ಏಕ ಜಾತೀಯವೆನ್ನುವುದೂ ಅಸಮರ್ಪಕ.

ಇನ್ನು ಕೆಲವರು ರುದ್ರನಾಟಕದ ದರ್ಶನದಿಂದ ನಮಗೆ ವ್ಯಥೆಯಾಗುತ್ತದೆಂದು ಒಪ್ಪಿದರೂ, ಇನ್ನು ಕೆಲವು ಕಾರಣಗಳಿಂದ ಆ ವ್ಯಥೆಯ ತೀವ್ರತೆ ಕಡಿಮೆಯಾಗುತ್ತದೆಂದೂ ಆದ್ದರಿಂದ ನಮಗೆ ಆನಂದವುಂಟಾಗುತ್ತದೆಯೆಂದೂ ಹೇಳುತ್ತಾರೆ. ರುದ್ರ ನಾಟಕದ ವಸ್ತುವೇನೋ ಭೀಕರ; ಆದರೆ ಅದೊಂದು ನಾಟಕ, ಕಲ್ಪನೆಯ ಕೃತಿ; ನಿಜವಾದ ಜೀವನವಲ್ಲ. ಈ ಭಾವ ನಾವು ರುದ್ರನಾಟಕವನ್ನು ನೋಡುತ್ತಿರುವಾಗಲೂ ನಮ್ಮಲ್ಲಿರುವುದರಿಂದ, ನಾವು ಆ ದುಃಖವನ್ನು ಸಹಿಸಲು ಶಕ್ತರಾಗಿ, ಆನಂದಪಡೆಯುತ್ತೇವೆ. "ನಮಗೆ ಪ್ರಿಯನಾಗಿರುವ ನಾಯಕನ ದುರದೃಷ್ಟಕ್ಕಾಗಿ ನಾವು ಅಳುತ್ತೇವೆ; ಅದೇ ಕ್ಷಣದಲ್ಲಿಯೇ ಇದೆಲ್ಲಾ ಬರಿಯ ಕಲ್ಪನೆಯೇ ಹೊರತು ಇನ್ನೇನೂ ಅಲ್ಲ ಎಂದು ಸಮಾಧಾನ ಹೊಂದುತ್ತೇವೆ" ಎಂದು ಫಾನ್‌ತಾನಲ್ಲನು ಹೇಳುತ್ತಾನೆ. ಡಾಕ್ಟರ್ ಜಾನ್‌ಸನ್ "ರುದ್ರನಾಟಕದಲ್ಲಿನ ಆನಂದ ಇದೆಲ್ಲಾ ಕಲ್ಪನೆ ಎಂಬ ಜ್ಞಾನದಿಂದ ಉದ್ಭವಿಸುತ್ತದೆ; ಕೊಲೆ, ದ್ರೋಹಗಳು ನಿಜವೆಂದು ನಾವು ತಿಳಿದರೆ, ಅವು ನಮ್ಮನ್ನು ಸಂತೋಷಗೊಳಿಸಲಾರವು . . . ಯಾವ ಅನುಕೃತಿಯೂ ಸತ್ಯವೆಂದು ಗಣಿಸಲ್ಪಡುತ್ತದೆಂಬುದು ಸುಳ್ಳು . . . ನಿಜಸ್ಥಿತಿಯೇನೆಂದರೆ ಪ್ರೇಕ್ಷಕರು ಸದಾ ಜಾಗ್ರತರಾಗಿಯೇ ಇರುತ್ತಾರೆ, ಮತ್ತು ಮೊದಲನೆಯ ಅಂಕದಿಂದ ಕೊನೆಯ ಅಂಕದ ವರೆಗೂ, ರಂಗಭೂಮಿಯನ್ನು ರಂಗಭೂಮಿಯೆಂತಲೂ, ನಟರನ್ನು ನಟರು ಮಾತ್ರವೇ ಎಂತಲೂ ತಿಳಿದಿರುತ್ತಾರೆ" ಎನ್ನುತ್ತಾನೆ. ನಾವು ನಿಜವಾದ ವ್ಯಕ್ತಿಗಳ ಸಮ್ಮುಖದಲ್ಲಿಲ್ಲ. ನಮಗೂ ಆ ವ್ಯಕ್ತಿಗಳಿಗೂ ಮಧ್ಯೆ ಕವಿಯ ಅಂತಃಪಟವೊಂದಿದೆ; ಪುಸ್ತಕ ಪುಸ್ತಕವೇ, ನಾಟಕ ನಾಟಕವೇ ಹೊರತು ಜೀವನವಲ್ಲ ಎಂಬುದನ್ನು ನಾವು ಯಾವಾಗಲೂ ಮರೆಯುವುದಿಲ್ಲ. ಆದ್ದರಿಂದ ನಮಗೆ ದುಃಖನಿರೂಪಣದಲ್ಲಿ ಸುಖಾನುಭವವುಂಟಾಗುತ್ತದೆಯೆಂದು ಎಮಿಲ್ ಫಾಗ್ವೆಯ ಮತ.

ಕಾವ್ಯದ ಲೋಕ, ವ್ಯಕ್ತಿ, ಭಾವಗಳಿಗೂ ನಮ್ಮ ಸಾಂಸಾರಿಕ ಜಗತ್ತು, ವ್ಯಕ್ತಿ, ಭಾವಗಳಿಗೂ ಸಾದೃಶ್ಯವಿದ್ದರೂ, ಅವು ಅಭಿನ್ನಗಳಲ್ಲ. ಕಾವ್ಯದಲ್ಲಿ ಘಟನೆಗಳು ಪೂರ್ತಿಯಾಗಿ ನಮ್ಮ ಸಂಬಂಧಪಟ್ಟವಾಗಲೀ ಅಥವಾ ಪೂರ್ತಿಯಾಗಿ ಬೇರೆಯವರವಾಗಲೀ ಆಗಿರುವುದಿಲ್ಲ. ಅಲ್ಲಿನ ವ್ಯಕ್ತಿಗಳು ನಮ್ಮ ಅನುದಿನದ ಜೀವನದ ವ್ಯಕ್ತಿಗಳಲ್ಲ. ಅಲ್ಲಿನ ಸುಖದುಃಖಗಳು ನಮ್ಮ ಲೋಕದವುಗಳಲ್ಲ. ಕಾವ್ಯದ ವಸ್ತು ನಮ್ಮಲ್ಲೆಬ್ಬಿಸುವ ಭಾವಗಳಿಗೂ, ನಮ್ಮ ಜೀವನದಲ್ಲಿ ನಾವು ಅನುಭವಿಸುವ ಭಾವಗಳಿಗೂ ಬೇಕಾದಷ್ಟು

ಅಂತರವಿದೆ. ನಾವು ಕಾವ್ಯಾಸ್ವಾದದಲ್ಲಿ ಅನುಭವಿಸುವುದು ದೈನಂದಿನ ಭಾವಗಳನ್ನಲ್ಲ, ಅವು ನಮ್ಮ ಹೃದಯದಲ್ಲಿ ಬಿಟ್ಟಿರುವ ಸಂಸ್ಕಾರ ವಿಶೇಷಗಳನ್ನು. ಹೀಗಾಗುವುದಕ್ಕೆ ಕಾರಣ ಕಾವ್ಯದಲ್ಲಿ ಶಬ್ದಕ್ಕಿರುವ "ಸಾಧಾರಣೀಕರಣ ವ್ಯಾಪಾರದ ಮಹಿಮೆ" ಮತ್ತು "ಕಬ್ಬಿಗರ್ ತಾಮಘಟಿತಘಟನಾನೂತನಬ್ರಹ್ಮ"ರಾಗಿರುವುದರಿಂದ. ಆದ್ದರಿಂದ ಕಾವ್ಯದಲ್ಲಿನ ದುಃಖವಸ್ತು ನಮಗೆ ಶೋಕವನ್ನುಂಟುಮಾಡದೆ ಆನಂದವನ್ನು ಕೊಡುತ್ತದೆಯೆಂದು ಅನೇಕ ಆಲಂಕಾರಿಕರ ಮತ.

ಈ ವಾದದಲ್ಲಿ ಸತ್ಯಾಂಶವೇನೋ ಇದೆ. ರುದ್ರನಾಟಕ ಸಾಕ್ಷಾತ್ ಜೀವನವಲ್ಲದಿರುವುದರಿಂದ ಅಲ್ಲಿನ ದುಃಖವಸ್ತು ನಮಗೆ ಹೆಚ್ಚು ದುಃಖವನ್ನೇನೋ ಉಂಟುಮಾಡದಿರಬಹುದು. ಅದಮಾತ್ರಕ್ಕೆ ಅದು ಸುಖಕೊಡಬೇಕೆಂಬ ನಿಯಮವಿಲ್ಲ. ನಾಟಕದ ವಸ್ತು ಕಲ್ಪಿತವೆಂಬ ಜ್ಞಾನದಿಂದ ಶೋಕದ ಒತ್ತಡ ಕಡಿಮೆಯಾಗಬಹುದು ; ಆದರೆ ಆ ಶೋಕವಸ್ತು ದರ್ಶನದಿಂದ ಸಂತೋಷ ಹೇಗೆ ಉಂಟಾಯಿತು ಎಂಬ ಪ್ರಶ್ನೆಗೆ ಈ ವಾದ ಉತ್ತರಕೊಡುವುದಿಲ್ಲ.

ರುದ್ರನಾಟಕದಲ್ಲಿ ದುಃಖವಸ್ತು ಸಹನೀಯವಾದುದಲ್ಲದೆ, ಆನಂದದಾಯಕವೂ ಆಗಿರುವುದಕ್ಕೆ ಕಾರಣವನ್ನು ಭಾಷಾಶೈಲಿಯ ಔತ್ಕರ್ಷ್ಯದಲ್ಲಿ ಕಾಣಲು ಕೆಲವರು ಯತ್ನಿಸಿದ್ದಾರೆ. ಇವರಲ್ಲಿ ಹ್ಯೂಮ್ ಮತ್ತು ಸಂತಾಯನ ಮುಖ್ಯರಾದವರು. ಲಾಬ್ಬೆ ಧೂಬಾ ಮತ್ತು ಫಾನ್‌ತಾನಲ್ಲಿನ ವಾದಗಳು ಅಸಮರ್ಪಕವೆಂದು ಪರಿಗಣಿಸಿ, ರುದ್ರವಸ್ತು ಪ್ರಿಯವಾಗಲು ಅದರ ಶೈಲಿಯ ಓಜಸ್ಸು ಮತ್ತು ಮಾನವನಿಗೆ ಎಲ್ಲಾ ರೀತಿಯ ಅನುಕೃತಿಗಳಲ್ಲೂ ಇರುವ ಆದರಗಳೇ ಮುಖ್ಯಕಾರಣಗಳೆಂದು ಹ್ಯೂಮ್ ನಿರ್ಧರಿಸಿದನು. ಆದರೆ ಸಂತಾಯನನಾದರೋ ಶೈಲಿಯೇ ಮುಖ್ಯಕಾರಣವೆಂದು ಅಭಿಪ್ರಾಯಪಡುತ್ತಾನೆ. ಶೈಲಿಯ ಗತಿ, ವಿನ್ಯಾಸಗಳ ಮೋಡಿಗೆ ಸಿಕ್ಕಿ ನಾವು ಸಾಮಾನ್ಯವಾಗಿ ಸಹಿಸಲಸಾಧ್ಯವಾದ ಭಾವಾವೇಶಗಳನ್ನೂ ಸಹ ಸುಖವಾಗಿ ಅನುಭವಿಸುವೆವೆನ್ನುತ್ತಾನೆ. ಆದರೆ ಅನುಕರಣ ಮತ್ತು ಶೈಲಿಗಳ ಮೋಹಕತ್ವ ರುದ್ರನಾಟಕಕ್ಕೆ ಮೀಸಲಿಲ್ಲ. ಅವು ಎಲ್ಲಾ ಸಾಹಿತ್ಯಪ್ರಕಾರಗಳಲ್ಲೂ ಇವೆ. ಅವುಗಳ ರಂಜಕತೆ ಸುಖವಸ್ತುವನ್ನುಳ್ಳ ವೈನೋದಿಕದಲ್ಲಿ ಇನ್ನೂ ಹೆಚ್ಚಾಗಿರಬೇಕು. ಆದರೆ ಹಾಗಾಗದೆ ರುದ್ರನಾಟಕ ಮಧುರತರವೆಂದು ಸಾರ್ವತ್ರಿಕವಾಗಿ ಕಂಡುಬಂದಿರುವುದರಿಂದ ಶೈಲಿ ಮತ್ತು ಅನುಕರಣೆಗಳು ರುದ್ರನಾಟಕದ ಆನಂದಾಸ್ವಾದಕ್ಕೆ ಮುಖ್ಯಕಾರಣಗಳೆಂದು ಒಪ್ಪಲಾಗುವುದಿಲ್ಲ. ಅನೇಕ ಕಾರಣಗಳಲ್ಲಿ ಇವೂ ಸೇರಿವೆಯೆಂದರೇನೋ ಒಪ್ಪಬಹುದು.

೪

ಈ ಸಮಸ್ಯೆಗೆ ಉತ್ತರಕೊಡುವ ಮೊದಲನೆಯ ಯತ್ನ ಅರಿಸ್ಟಾಟಲಿನದು. ಅವನ "ಕಾವ್ಯಮೀಮಾಂಸೆ"ಯ ಆರನೆಯ ವಿಭಾಗದಲ್ಲಿ ರುದ್ರನಾಟಕವು "ಕರುಣೆ, ಭಯಗಳನ್ನು ಪ್ರಚೋದಿಸಿ, ಆ ಭಾವಗಳ ಶಮನವನ್ನು ಮಾಡಬೇಕು" ಎನ್ನುತ್ತಾನೆ. ಆದರೆ ಅವನು ಉಪಯೋಗಿಸಿರುವ ಪದಗಳ ಅರ್ಥನಿಷ್ಕರ್ಷೆಗಾಗಿ ನಡೆದಿರುವ ಚರ್ಚೆ ಮಾನವಬುದ್ಧಿಗೇ ಅವಮಾನಕರ ಎಂದು ಮಾರ್ಲೆ ಅಭಿಪ್ರಾಯಪಟ್ಟಿರುವುದು ಆಶ್ಚರ್ಯವಲ್ಲ. ಕರುಣೆ, ಭಯಗಳು ನಮಗಾಗಿಯೋ, ಪಾತ್ರಗಳಿಗಾಗಿಯೋ; ಅವುಗಳಲ್ಲಿ ಒಂದು ನಮಗೆ, ಇನ್ನೊಂದು ಪಾತ್ರಕ್ಕೋ; ಶಮನವೆಂದರೆ ಹೆಚ್ಚಾದುದರ ತ್ಯಾಗವೋ, ಅಥವಾ ಇರುವುದರ ಪರಿಶುದ್ಧಿಯೋ; ಶಮನವು ಭಾವಗಳಿಗೋ, ನಮ್ಮ ಹೃದಯಕ್ಕೋ? ಎಂಬ ಪ್ರಶ್ನೆಗಳ ಸಾಲಿಗೆ ವ್ಯಾಖ್ಯಾನಗಳಲ್ಲಿ ಕೊನೆಮೊದಲೇ ಇಲ್ಲ. ಆಧುನಿಕ ವಿದ್ವಾಂಸರ ಪರಿಶೋಧನೆಗಳಿಂದ ಶಮನವೆಂಬ ಪದ ವೈದ್ಯಶಾಸ್ತ್ರದಿಂದ ಆರಿಸಿದ್ದು; ದೇಹದಲ್ಲಿ ಅತಿಯಾಗಿ ಬೆಳೆದು ಶರೀರಕ್ಕೆ ತೊಂದರೆಯನ್ನುಂಟುಮಾಡಬಹುದಾದ ಭಾಗವನ್ನು ದೇಹದಿಂದ ಹೊರಕ್ಕೆ ಕಳುಹಿಸುವುದು ಈ ಚಿಕಿತ್ಸೆಯ ರೀತಿ; ಶಮನಮಾಡಬೇಕಾದ್ದು ಭಾವಗಳನ್ನಲ್ಲ, ಮನುಷ್ಯನ ಹೃದಯವನ್ನು ಎಂದು ನಿರ್ಧಾರವಾಗಿದೆ. ಆದರೆ ಅರಿಸ್ಟಾಟಲನು ಈ ಪದವನ್ನು ಬೇರೆಯಾದ ಅರ್ಥದಲ್ಲಿ ಏಕೆ ಉಪಯೋಗಿಸಿರಬಾರದೆಂಬ ಸಂದೇಹವೇನೋ ಹಾಗೆಯೇ ಉಳಿಯುತ್ತದೆ. ಆದರೆ ಅವನು ಇದರಲ್ಲಿ ಪ್ಲೇಟೋವಿಗೆ ಉತ್ತರವನ್ನು ಸೂಚಿಸಿರುವುದರಿಂದಲೂ, ಮಿಲ್ಟನ್ ತನ್ನ ಸ್ಯಾಮ್ಸನ್ ನಾಟಕದ ಕೊನೆಯಲ್ಲಿ ಕೊಟ್ಟಿರುವ ವಿವರಣದಿಂದಲೂ, ಶಮನ ಪದಕ್ಕೆ ವೈದ್ಯಶಾಸ್ತ್ರದ ಅರ್ಥವನ್ನೇ ಇಟ್ಟುಕೊಳ್ಳಬಹುದು.

ಕಾವ್ಯಗಳು ಮನುಷ್ಯನನ್ನು ಭಯ, ಕರುಣೆಗಳಿಂದ ತುಂಬಿ ಅವನನ್ನು ನಿರ್ವೀರ್ಯನನ್ನಾಗಿ ಮಾಡುವುವೆಂದು ಪ್ಲೇಟೋವಿನ ಆಕ್ಷೇಪ. ಆದರೆ ಹಾಗೆ ಮಾಡದೆ ಅವನಲ್ಲಿರುವ ಮಿತಿಮೀರಿದ ಭಯ, ಕರುಣೆಗಳನ್ನು ನಿರ್ಮೂಲಮಾಡಿ ಅವನನ್ನು ಸಮಸ್ಥಿತಿಯಲ್ಲಿಡುವುದರಲ್ಲಿ ಕಾವ್ಯಗಳು ಹಿತಕಾರಿಗಳೆಂದು ಅರಿಸ್ಟಾಟಲಿನ ಸಮಾಧಾನ. ಆದರೆ ರುದ್ರನಾಟಕಗಳು ಭಯ, ಕರುಣೆಗಳ ಆಧಿಕ್ಯದಿಂದ ನರಳುತ್ತಿರುವವರಿಗೆ ಮಾತ್ರ ಅವಶ್ಯಕವೇ, ಅವರಿಗೆ ಮಾತ್ರ ರುಚಿಸುತ್ತವೆಯೇ ಎಂಬ ಪ್ರಶ್ನೆಯೊದಗುತ್ತದೆ. ಇತರರ ಮೇಲೆ ಅದರ ಪ್ರಭಾವ ಯಾವ ವಿಧವಾದದ್ದು? ಅದರ ಫಲ ಶಾಂತಸ್ಥಿತಿಯೆಂದರೆ ಆ ಶಾಂತಸ್ಥಿತಿಯ ಲಕ್ಷಣವೇನು? ಇವು ಅರಿಸ್ಟಾಟಲಿನ ಗ್ರಂಥಗಳಲ್ಲಿ ವಿಶದವಾಗಿ ವರ್ಣಿತವಾಗಿಲ್ಲ. ಆದರೂ ಒಟ್ಟಿನ ಭಾವವನ್ನು ಗ್ರಹಿಸುವುದಾದರೆ ಪರಸ್ಪರ ವೈಷಮ್ಯವಿಲ್ಲದೆ ಸಮಸ್ತ ಭಾವಗಳೂ ಯುಕ್ತಪ್ರಮಾಣದಲ್ಲಿ ಸಾಮರಸ್ಯದಿಂದಿರುವುದೇ ಈ

ಸ್ಥಿತಿಯೆಂದು ಭಾವಿಸಬಹುದು. ಭಾವೋದ್ವೇಗವೂ, ಭಾವಶೂನ್ಯವೂ ಇಲ್ಲದ, ಆದರೆ ಭಾವಯುತವಾದ ಸ್ಥಿತಿ. ಅಗಮ್ಯೆಮ್ನಾನ್, ಅಯಿಯಾಸ್, ಈಡಿಪಸ್, ಲಿಯರ್, ಟೆಸ್ ಓದಾದ ಮೇಲೆ ನಾವು ನಿರ್ಲಿಪ್ತತೆಯನ್ನೇನೋ ಹೊಂದಿರುವುದಿಲ್ಲ. ಆದರೆ ಚಿತ್ತಕ್ಷೋಭೆಯಿಂದಲೂ ಕೂಡಿರುವುದಿಲ್ಲ. ಇದೇ ಸ್ಥಿತಿಯನ್ನೇ "ಸಂವಿದ್ವಿಶ್ರಾಂತಿ" ಎಂದು ಅಭಿನವಗುಪ್ತನು ಕರೆದು ಅದೇ ಕಾವ್ಯದಲ್ಲಿ ರಸಾಸ್ವಾದದ ಫಲವೆಂದು ಎಣಿಸಿದನು. ಆದರೆ ಈ ಭಯ, ಕರುಣೆಗಳು ಹೇಗೆ ಆನಂದವನ್ನು ಕೊಡುವುವೆಂಬುದನ್ನು ಮಾತ್ರ ಅರಿಸ್ಟಾಟಲನಾಗಲೀ, ಅಭಿನವಗುಪ್ತನಾಗಲೀ ವಿವರಿಸಿಲ್ಲ. ರುದ್ರನಾಟಕದ ಈ ವಿಲಕ್ಷಣ ವ್ಯಾಪಾರವನ್ನು ವಿಮರ್ಶಿಸುವುದಕ್ಕಿಂತ, ಪ್ಲೇಟೋವಿಗೆ ಸಮರ್ಪಕವಾದ ಉತ್ತರವನ್ನೊದಗಿಸುವುದೇ ಅರಿಸ್ಟಾಟಲಿನ ಉದ್ದೇಶವೆಂದು ಕಾಣುತ್ತದೆ. ಆದ್ದರಿಂದ ರುದ್ರನಾಟಕಗಳ ನೈತಿಕ ಪ್ರಭಾವಕ್ಕೆ ಹೆಚ್ಚು ಬೆಲೆ ಕೊಟ್ಟು, ಅವುಗಳ ಮಾನಸಪ್ರಭಾವಕ್ಕೆ ಗೌರವ ಕೊಟ್ಟಿಲ್ಲ. ರುದ್ರನಾಟಕದ ಪ್ರಭಾವ ಈ ರೀತಿಯ ಶಾಂತಸ್ಥಿತಿಯೆಂದು ಒಪ್ಪಿದರೂ, ಅದು ಈ ಎರಡು ಭಾವಗಳ ಶಮನದಿಂದಲೇ ಆಗುತ್ತದೆಂದು ನಂಬಲಾಗುವುದಿಲ್ಲ.

ಐ. ಎ. ರಿಚರ್ಡ್ಸ್ ಈ ವಾದವನ್ನೇ ಮತ್ತೊಂದು ರೀತಿಯಲ್ಲಿ ಮಂಡಿಸುತ್ತಾನೆ. ಶಮನವೆಂದರೆ ವಿರುದ್ಧ ಶಕ್ತಿಗಳ ಸಮನ್ವಯ. ಕರುಣೆ ಆಕುಂಚನ ಶಕ್ತಿ; ಭಯ ಪ್ರಸಾರಣಶಕ್ತಿ; ಸಕ್ರಮವಾದ ಒಂದೇ ಅನುಭವದಲ್ಲಿ ಅವುಗಳ ಐಕ್ಯವೇ ಶಮನ. ಇದರಿಂದಲೇ ರುದ್ರನಾಟಕದ ಘರ್ಷಣೆಯ ನಡುವೆ ನಮಗೆ ಶಾಂತಿ ಸಿಗುವುದು ಎಂದು ರಿಚರ್ಡ್ಸ್ ಹೇಳುತ್ತಾನೆ. ಆದರೆ ಇದು ಅನುಭವದಲ್ಲಿ ಕಂಡುಬರುವುದಿಲ್ಲ, ಮತ್ತು ಭಯಕ್ಕೆ ಹೆಚ್ಚು ಪ್ರಾಮುಖ್ಯತೆ ಕೊಡಲ್ಪಟ್ಟಿದೆ. ಅದೂ ಅಲ್ಲದೆ ಈ ವಿವರಣೆ ಷೇಕ್ಸ್‌ಪಿಯರಿನ ನಾಟಕಗಳಲ್ಲೇ ಎಲ್ಲಕ್ಕೂ, ಗ್ರೀಕ್ ನಾಟಕಗಳಿಗೂ ಅನ್ವಯಿಸುವುದಿಲ್ಲವೆಂದು ರಿಚರ್ಡ್ಸ್‌ನೇ ಹೇಳಿರುವುದು ಈ ಮತದ ಅಸಂಪೂರ್ಣತೆಯನ್ನು ಸೂಚಿಸುತ್ತದೆ.

೫

ಈಚಿನ ತಾತ್ವಿಕರಲ್ಲಿ ಹೆಗೆಲ್ ತನ್ನ ದರ್ಶನದ ರೀತಿಯನ್ನು ರುದ್ರನಾಟಕಗಳಲ್ಲಿ ನಿದರ್ಶಿಸಲು ಯತ್ನಿಸುತ್ತಾನೆ. ಹೆಗೆಲ್ಲನಿಗೆ ಸೃಷ್ಟಿಯು ಸಾರ್ವಭೌಮ ವಿವೇಕೆಂದು ಅಪಾರವಾದ ನಂಬುಗೆ; ವಿಶ್ವವೂ ಕೂಡ ಆ ವಿವೇಕದ ವಿಕಾಸ ಮಾತ್ರವೇ. ಅದೂ ಅಲ್ಲದೆ ಸೃಷ್ಟಿಯಲ್ಲಿನ ಪ್ರತಿಯೊಂದು ವಸ್ತುವಿನ ಮತ್ತು ಘಟನೆಯ ಹಿಂದೆ ಒಂದು ಗುರಿ, ಬುದ್ಧಿ ಇದೆ. ಇಲ್ಲಿ ಆಕಸ್ಮಿಕವೆಂಬುದೇ ಇಲ್ಲ. ಹೆಗೆಲ್ಲನು ಈ ತತ್ವವನ್ನು ರುದ್ರನಾಟಕಕ್ಕೂ ಅನ್ವಯಿಸಿದನು. ರುದ್ರಘಟನೆಗಳ ಹಿಂದೆ ರಹಸ್ಯವೇನೂ ಇಲ್ಲ.

ನಡೆಯುವುದೆಲ್ಲವಕ್ಕೂ ಕಾರಣಗಳಿವೆ, ಮತ್ತು ನಡೆಯುವವೆಲ್ಲವೂ ಸಮರ್ಪಕ. ತಮ್ಮಿಷ್ಟಕ್ಕೇ ವಿಚಾರಿಸಿದಲ್ಲಿ ಧರ್ಮಗಳೆಂದು ತೋರುವ ಶಕ್ತಿಗಳ ಪರಸ್ಪರ ಘರ್ಷಣೆಯೇ ರುದ್ರಘಟನೆಯ ಮುಖ್ಯ ಲಕ್ಷಣ. ರುದ್ರನಾಯಕನು ಒಲವು, ಮಹತ್ವಾಕಾಂಕ್ಷೆ, ದೇಶಪ್ರೇಮ ಮುಂತಾದ ಯಾವುದೋ ಒಂದು ಧರ್ಮಧ್ಯೇಯದ ಧ್ವಜಧಾರಿಯಾಗಿ ಮುನ್ನುಗ್ಗುತ್ತಾನೆ. ಹಾಗೆ ನುಗ್ಗುವಾಗ ಇತರ ಧರ್ಮಗಳನ್ನು ಸಂದರ್ಶಿಸಿದಾಗ, ಅವುಗಳಿಗೂ ಯುಕ್ತಗೌರವವನ್ನು ಸಲ್ಲಿಸದೆ ಮುಂದುವರಿಯಲು ಯತ್ನಿಸುತ್ತಾನೆ, ಇದು ವಿಶ್ವದ ಅಧಿಷ್ಠಾತೃಶಕ್ತಿಗೆ ಸಮ್ಮತವಲ್ಲ. ಆದ್ದರಿಂದ ಈ ಧರ್ಮಗಳ ಪರಸ್ಪರ ಘರ್ಷಣೆಯಲ್ಲಿ ರುದ್ರನಾಯಕನು ನಾಶಹೊಂದಿ ಧರ್ಮಗಳ ಸಮನ್ವಿತಸ್ಥಿತಿಗೆ ಅವಕಾಶ ಕಲ್ಪಿಸಿಕೊಡುತ್ತಾನೆ. "ಧರ್ಮತತ್ವದ ಆತ್ಮವಿಭಜನೆ ಮತ್ತು ಆಂತರಿಕ ಯುದ್ಧವೇ ನಿಜವಾದ ರುದ್ರಘಟನೆ; ಅಧರ್ಮದೊಡನೆ ಧರ್ಮದ ಹೋರಾಟಕ್ಕಿಂತ; ಧರ್ಮದೊಡನೆ ಧರ್ಮದ ಯುದ್ಧ. ಏಕದೇಶೀಯವಾದ ಈ ಶಕ್ತಿಗಳಲ್ಲೆರಡು, ಅಸಮಂಜಸವಾದ ಹಕ್ಕುಗಳನ್ನು ಮುಂದಿಡುತ್ತಾ, ಪರಸ್ಪರ ಸಂಧಿಸುತ್ತವೆ. ದೇಶ ನಿರಾಕರಿಸಿದ್ದನ್ನು ಕುಲ ಬೇಕೆನ್ನುತ್ತದೆ; ಗೌರವ ತಡೆದದ್ದನ್ನು ಒಲವು ಬೇಡುತ್ತದೆ. ಈ ಪ್ರತಿಸ್ಪರ್ಧಿ ಶಕ್ತಿಗಳೆರಡೂ ಅವುಗಳ ಸರಹದ್ದಷ್ಟರಲ್ಲಿ ಸರಿ, ಮತ್ತು ಅದಷ್ಟರೊಳಗೆ ಪ್ರತಿಯೊಂದರ ಹಕ್ಕೂ ನ್ಯಾಯಸಮ್ಮತವೇ; ಆದರೆ ಒಂದರ ನ್ಯಾಯ ಅನ್ಯಾಯಕ್ಕೆ ಒಯ್ಯಲ್ಪಡುತ್ತದೆ, ಏಕೆಂದರೆ ಅದು ಇನ್ನೊಂದರ ನ್ಯಾಯವಾದ ಹಕ್ಕನ್ನು ಅಲಕ್ಷಿಸುತ್ತದೆ, ಮತ್ತು ಇವೆರಡೂ ಯಾವುದರ ಅಂಶ ಮಾತ್ರವೋ ಅದಕ್ಕೆ ಮಾತ್ರ ಸಲ್ಲಬೇಕಾದ ಸರ್ವಾಧಿಪತ್ಯವನ್ನೇ ತನಗಾಗಿ ಕೇಳುತ್ತದೆ." ರುದ್ರನಾಟಕದಲ್ಲಿ ಈ ಪ್ರತಿಸ್ಪರ್ಧಿ ಧರ್ಮಶಕ್ತಿಗಳ ಘರ್ಷಣೆಯನ್ನು ಮುಕ್ತಾಯಗೊಳಿಸುವ ದುರ್ಘಟನೆಯು ಕುರುಡುದೈವದ ಆಕಸ್ಮಿಕ ಕಾರ್ಯವಲ್ಲ. ಅದು ಖತಿಗೊಂಡ ನಿತ್ಯಧರ್ಮದ ಅಪ್ರತಿಹತ ಪುನಸ್ಸಂಧಾನ, ತನ್ನ ಅಂಶಶಕ್ತಿಗಳ ಅತಿರೇಕವಾದ ಸೋಗುಗಳೆದುರು ತನ್ನ ಸರ್ವಾಧಿಪತ್ಯವನ್ನು ಸ್ಥಾಪಿಸುವ ನಿತ್ಯಧರ್ಮದ ಚರ್ಯೆ" ಎಂದು ಹೆಗೆಲ್ ಅನ್ನುತ್ತಾನೆ. ರುದ್ರನಾಟಕದಲ್ಲಿನ ಕಷ್ಟ ದುಃಖಗಳು ಅಲ್ಲಿನ ಪಾತ್ರ, ಕಾರ್ಯಗಳ ಸ್ವಾಭಾವಿಕ ಫಲಿತಾಂಶ. ನಮ್ಮನ್ನು ವ್ಯಥೆಪಡಿಸಿ ಕುಂದಿಸುವುದಕ್ಕಿಂತ, ನಾಟಕದ ಕೊನೆಯಲ್ಲಿ ನಿತ್ಯನೀತಿಯ ಧರ್ಮವಿಜಯದಲ್ಲಿ ಸಮಾಧಾನಭಾವವನ್ನು ನಮ್ಮಲ್ಲುಂಟುಮಾಡಿ, ರುದ್ರನಾಟಕವು ನಮಗೆ ಅವಶ್ಯವಾಗಿ ಸಂತೋಷವನ್ನುಂಟುಮಾಡಬೇಕೆಂದು ಹೆಗೆಲ್ಲನ ಸಿದ್ಧಾಂತ.

ಇದೇ ತತ್ವವನ್ನೇ ಅಬರ್‌ಕ್ರಾಂಬಿ ಇನ್ನೊಂದು ಬಗೆಯಾಗಿ ವಿವರಿಸಿದ್ದಾನೆ. ರುದ್ರಕಲೆಯು ನಮಗೆ ಅತ್ಯುತ್ತಮ ಬಗೆಯ ಆನಂದವನ್ನು ಹೇಗೆ ಕೊಡಬಲ್ಲದು

ಎಂಬುದನ್ನು ಚರ್ಚಿಸುತ್ತಾ ಅಬರ್‌ಕ್ರಾಂಬಿಯು "ರುದ್ರನಾಟಕದಲ್ಲಿ ಒಳಿತು, ಕೆಡಕು ಎರಡೂ ಅವಶ್ಯವಾಗಿ ಇರಬೇಕು; ಇವೆರಡರ ಅಂತಿಮ ಸಮನ್ವಯದಿಂದ ಕೇಡು ತಾನು ಮಾಡಿರುವ ಹಾನಿಯನ್ನು ಮೀರಿ ಹೊಂದಿರುವ ಬೆಲೆಯ ಅರಿವು ನಮಗೆ ಬರುತ್ತದೆ—ಕೇಡು ಬೇಜವಾಬ್ದಾರಿ, ಪ್ರಯೋಜನರಹಿತ ಕ್ರೌರ್ಯದ ಅತಿಕ್ರಮಪ್ರವೇಶವಲ್ಲ, ಆದರೆ ವಿಶ್ವಧರ್ಮದ ಆಜ್ಞಾಧಾರಕ ಎಂಬುದೇ ಆ ಅರಿವು—ಇದೇ ರುದ್ರನಾಟಕದಲ್ಲಿ ದೊರಕುವ ಸಮಾಧಾನದ ಜೀವಾಳ ಎಂದು ಹೇಳುತ್ತಾನೆ.

ಈ ಸಿದ್ಧಾಂತಕ್ಕೆ ಅನೇಕ ಪ್ರಬಲವಾದ ಪ್ರತಿವಾದಗಳಿವೆ. ಮೊದಲನೆಯದಾಗಿ, ವಿಶ್ವತತ್ವವು ವಿವೇಕ ಘನವಾಗಿದ್ದರೆ, ಎರಡು ಧರ್ಮಗಳಿಗೆ ಪರಸ್ಪರ ವಿರೋಧವನ್ನು ಕಲ್ಪಿಸಿ, ಅದನ್ನು ಶಮನಮಾಡಲು ಒಬ್ಬ ಮಾನವನಿಗೆ ಅಸಹ್ಯಯಾತನೆಯನ್ನು ಕೊಟ್ಟು, ಅನಂತರ ಆ ಧರ್ಮಗಳನ್ನು ಏಕೆ ಸಮನ್ವಯ ಮಾಡಬೇಕಾಗಿತ್ತು? ಈ ವಿರೋಧಕ್ಕೆ ಅವಕಾಶವನ್ನೇ ಕೊಡದಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು? ಆ ಸಮನ್ವಯವನ್ನು ಇನ್ನಾವುದಾದರೂ ಶಾಂತರೀತಿಯಲ್ಲಿ ಏಕೆ ಮಾಡಬಾರದಾಗಿತ್ತು? ಎಂಬ ಪ್ರಶ್ನ ಪರಂಪರೆಗೆ ಉತ್ತರ ಸಿಗುವುದು ಕಠಿಣ. ಎರಡನೆಯದಾಗಿ, ಪ್ರಪಂಚದ ವ್ಯವಹಾರಗಳು ನಿಯತ ಕಾರ್ಯಕಾರಣಭಾವದಿಂದ ಕೂಡಿರುವುದೆಂದು ಹೇಳಲಾಗುವುದಿಲ್ಲ; ಮತ್ತು ಪಾಪಕ್ಕೆ ಸೂಕ್ತವಾದಷ್ಟು ಮಾತ್ರ ಪ್ರಾಯಶ್ಚಿತ್ತವನ್ನೂ ನಾವು ನೋಡುವುದಿಲ್ಲ. ಎಷ್ಟೋ ಕಾರ್ಯಗಳ ಕಾರಣ ಅದೃಷ್ಟ; ಮತ್ತು ರುದ್ರನಾಟಕದಲ್ಲಿ ಸಾಮಾನ್ಯವಾಗಿ ನಮಗೆ ಕಂಡುಬರುವ ದೃಶ್ಯ ಅಲ್ಪಾಪರಾಧಕ್ಕೆ ಮಿತಿಯಿಲ್ಲದ ಶಿಕ್ಷೆ. ಮೂರನೆಯದಾಗಿ, ರುದ್ರಸಾಹಿತ್ಯ ಹೆಗೆಲ್ಲನ ವಾದಕ್ಕೆ ನಿದರ್ಶನವಾಗಿರುವ ಬದಲು ಅಪವಾದವಾಗಿಯೇ ಇದೆ. ಹೆಗೆಲ್ ಮಾಡಿದ ಅಂತಿಗೊನೆ ನಾಟಕದ ಚರ್ಚೆ ಆ ಕೃತಿಗೆ ಅನುಗುಣವಾಗಿಲ್ಲ. ಅಂತಿಗೊನೆ ಬಾಂಧವ್ಯದ ಪ್ರತೀಕವೆನ್ನಬಹುದಾದರೂ, ಕ್ರಿಯಾನನಂತೂ ರಾಷ್ಟ್ರದ ಆದರ್ಶವಲ್ಲ. ಅವನ ಸ್ವಾರ್ಥ ಸುಲಭವಾಗಿ ಹೊರಬೀಳುತ್ತದೆ. ಮುಮ್ಮೇಳದ ನಗರವೃದ್ಧರೂ ಅವನು ಮಾಡುತ್ತಿರುವುದು ನೀತಿಬಾಹಿರವೆಂದು ಬಾರಿಬಾರಿಗೂ ಹೇಳುತ್ತಾರೆ. ಆದ್ದರಿಂದ ಈ ನಾಟಕದಲ್ಲಿ ಎರಡು ಸಮಾನಧರ್ಮಗಳ ಘರ್ಷಣೆಯೇ ಇಲ್ಲ. ಗ್ರೀಕ್ ಮತ್ತು ಪಾಶ್ಚಾತ್ಯರ ಇತರ ರುದ್ರನಾಟಕಗಳಂತೂ ಹೆಗೆಲ್ಲನ ಸಿದ್ಧಾಂತಕ್ಕೆ ತೀರ ವಿರುದ್ಧವಾಗಿವೆ. ಕೊನೆಯದಾಗಿ ರುದ್ರನಾಟಕದ ಕೊನೆಯಲ್ಲಿ ಆಗಿರುವುದು ಸರಿ ಎಂಬ ಭಾವವಂತೂ ನಮಗೆ ಬರುವುದಿಲ್ಲ. ಈಡಿಪಸ್, ಟ್ರೋಜನ್ ವಿಮೆನ್, ಹ್ಯಾಮ್ಲೆಟ್, ಲಿಯರ್, ಗೋಸ್ಟ್ಸ್, ಮೇಯರ್ ಆಫ್ ಕ್ಯಾಸ್ಟರ್ ಬ್ರಿಡ್ಜ್, ಚೋಮನ ದುಡಿ,

ಬೆಟ್ಟದ ಜೀವ, ಕಾನೂರು ಸುಬ್ಬಮ್ಮ ಹೆಗ್ಗಡತಿ, ಇವುಗಳನ್ನು ಓದಿದವರಿಗೆ ಇದರ ಮನವರಿಕೆಯಾಗುತ್ತದೆ.

ಹೆಗೆಲ್ಲನು ರುದ್ರನಾಟಕದ ವೈಶಿಷ್ಟ್ಯವನ್ನು ಹುಡುಕುವ ಬದಲು, ತನ್ನ ಸಿದ್ಧಾಂತವನ್ನು ಅದರ ಮೇಲೆ ಹೊರಿಸಲು ಪ್ರಯತ್ನಪಟ್ಟಿರುವುದೇ ಅವನ ವಿವರಣೆಯ ಅಸಮರ್ಪಕತೆಗೆ ಕಾರಣ. ಮತ್ತು ಜೀವನದಲ್ಲಿನ ಬುದ್ಧಿಗೋಚರವಲ್ಲದ ರಹಸ್ಯಗಳಿಗೆ ತಕ್ಕ ಗೌರವ ಕೊಡದಿರುವುದು ಅವನ ಸಿದ್ಧಾಂತದಲ್ಲಿನ ಒಂದು ಕಳಂಕ, ಆದ್ದರಿಂದ ಸೃಷ್ಟಿಯಲ್ಲಿನ ಅರ್ಥವಾಗದಿರುವ ತೊಡಕೊಂದನ್ನು ನಿರೂಪಿಸ ಹೊರಟಿರುವ ರುದ್ರನಾಟಕ ಹೆಗೆಲ್ಲನ ಮಾನದಂಡಕ್ಕೆ ಸಿಗದಿದ್ದುದು ಆಶ್ಚರ್ಯವಲ್ಲ.

೬

ಷೋಪೆನ್‌ಹೋ ರುದ್ರನಾಟಕದ ಆಕರ್ಷಣೆಯನ್ನು ತನ್ನ ಸಿದ್ಧಾಂತದ ರೀತಿಯಲ್ಲಿ ವಿವರಿಸಿದನು. ಅವನ ಮತದಲ್ಲಿ ಜೀವನ ದುಃಖಮಯ. ಕೇವಲ ನಶ್ವರ ಮತ್ತು ಕ್ಲೇಶದಾಯಕಗಳಾದ ಸಂಸಾರದ ಸುಖಗಳನ್ನು ತ್ಯಜಿಸುವುದರಿಂದುಂಟಾಗುವ ಮನಶ್ಶಾಂತಿಯನ್ನು ಯಾವನು, ಮರಣಕ್ಕೆ ಮೊದಲು, ಹೊಂದುವನೋ ಅವನೇ ವಿವೇಕಿ. ಜೀವನದ ಈ ಗಂಭೀರ ದುಃಖಮಯ ಮುಖದ ಶ್ರೇಷ್ಠ ರೀತಿಯ ಚಿತ್ರ ರುದ್ರನಾಟಕಗಳಲ್ಲಿದೆ, "ಪ್ರಪಂಚ, ಜೀವನ ನಮಗೆ ನಿಜವಾಗಿ ಸುಖವನ್ನು ಕೊಡಲಾರವು ಮತ್ತು ಆದಕಾರಣ ನಮ್ಮ ಪ್ರೀತಿಗೆ ಅವು ಯೋಗ್ಯವಲ್ಲ ಎಂಬ ಜ್ಞಾನವನ್ನು ಎಚ್ಚರಗೊಳಿಸುವುದೇ ಎಲ್ಲಾ ರುದ್ರನಾಟಕಗಳೂ ಭವ್ಯತೆಗೆ ಸ್ವಭಾವತಃ ಏರಲು ಅವು ಹೊಂದಿರುವ ವಿಚಿತ್ರ ಶಕ್ತಿ." ಪ್ರತಿಸ್ಪರ್ಧಿಮತಿಗಳ ಭೀಕರ ಹೋರಾಟದ ಕೊನೆಯಲ್ಲಿ, ಮಾನವನ ಮತ್ತು ಅದೃಷ್ಟವಿಧಿಯ ಕರುಣಾಜನಕ ಯುದ್ಧದ ಅಂತ್ಯದಲ್ಲಿ, ತಮಸ್ಸು ಪೂರ್ತಿಕವಿಯುವುದರೊಳಗಾಗಿ ಒಂದು ಶಾಂತಕ್ಷಣ ಒದಗುತ್ತದೆ. ಅದರಲ್ಲಿ ಜೀವನದ ನಿಸ್ಸಾರತ್ವವನ್ನು ರುದ್ರನಾಯಕನೂ, ಅವನ ಜೊತೆಯಲ್ಲಿ ನಾವೂ, ಮನಗಂಡು, ವೈರಾಗ್ಯವನ್ನು ತಾಳುತ್ತೇವೆ. ನಮ್ಮ ಜೀವನ ಎಷ್ಟು ಅಸ್ಥಿರವಾದುದು ; ನಮ್ಮ ಸುಖಗಳು ಎಷ್ಟು ಕ್ಷಣಿಕವಾದವುಗಳು ; ಸಂಸಾರ ಎಂತಹ ಕಾರ್ಗತ್ತಲಿನಿಂದ ಆವೃತವಾಗಿ, ವೇದನೆಯಿಂದ ತುಂಬಿದೆ ಎಂಬ ಅರಿವು ನಮಗೆ ಉಂಟಾಗಿ ನಾವು ಜೀವನದ ಮೋಹಕ್ಕೆ ಬೆನ್ನು ತಿರುಗಿಸುತ್ತೇವೆ. ಈ ಸಂನ್ಯಾಸದಿಂದ ಒಂದು ಅಲೌಕಿಕ ಶಾಂತಿಯನ್ನು ಹೊಂದುತ್ತೇವೆ. ಈ ಕಾರ್ಯದಲ್ಲಿ ನಮಗೆ ರುದ್ರಸಾಹಿತ್ಯ ಅತ್ಯಂತ ಸಹಕಾರಿಯಾಗಿರುತ್ತದೆ. ವೈನೋದಿಕಸಾಹಿತ್ಯ ಜೀವನದಲ್ಲಿ ಇಚ್ಛೆಯನ್ನು ಕೆರಳಿಸಿದರೆ, ರುದ್ರನಾಟಕ ಜೀವನದಲ್ಲಿ ವೈರಾಗ್ಯವನ್ನು ಬೋಧಿಸುತ್ತದೆ.

ಜೀವನ ನಿಷ್ಫಲತೆಯ ತತ್ವಕ್ಕೆ ರುದ್ರನಾಟಕಗಳು ಶ್ರೇಷ್ಠ ದೃಷ್ಟಾಂತಗಳು. ಆದ್ದರಿಂದಲೇ ನಾವು ರುದ್ರನಾಟಕಗಳ ಅವಲೋಕನದಲ್ಲಿ ಆನಂದವನ್ನನುಭವಿಸುತ್ತೇವೆ ಎಂದು ಷೋಪೆನ್‌ಹೋನ ಮತ. ಈ ಅಭಿಪ್ರಾಯವನ್ನು ಷ್ಲೆಗೆಲ್, ಮಿಂಟರ್ನೋ, ಟೈಮೋಕ್ಲಿಸ್ ಮತ್ತು ಇನ್ನೂ ಅನೇಕ ತಾತ್ವಿಕರೂ, ಮತಪ್ರವರ್ತಕರೂ ಅನುಮೋದಿಸುತ್ತಾರೆ. ನಮ್ಮಲ್ಲೂ ರಾಮಾಯಣ, ಮಹಾಭಾರತ, ಸಾಧುಸಂತರ ರುದ್ರಚರಿತ್ರೆಗಳ ಪ್ರಭಾವ ಇದೇ ವಿಧವಾದುವೆಂಬ ಶ್ಲೋಕಗಳು ಬೇಕಾದಷ್ಟಿವೆ. ಆದರೂ ಈ ವಿವರಣೆ ಪೂರ್ಣವಾಗಿ ಸಮರ್ಪಕವೇ ಎಂಬುದು ನಿರ್ಣಿತವಾಗಬೇಕು.

ಈ ವಿವರಣೆ ಹೆಗೆಲ್ಲನ ವಿವರಣೆಗಿಂತ ಸಮಂಜಸವಾಗಿದೆ. ರುದ್ರನಾಟಕದ ಅಂತ್ಯದಲ್ಲಿ ನಮ್ಮ ಮನಸ್ಸು ಖಿನ್ನವಾಗಿ, ಒಂದು ರೀತಿಯ ನೈರಾಶ್ಯಭಾವ, ವೈರಾಗ್ಯ ಉದಯಿಸುತ್ತವೆ. ಆದರೂ ಅವು ಷೋಪೆನ್‌ಹೋ ಹೇಳುವ ಪ್ರಮಾಣದಲ್ಲಲ್ಲ. ಜೀವನ ದುಃಖಮಯವೆನಿಸಿದರೂ, ಹೇಯವೆನಿಸುವುದಿಲ್ಲ. ರುದ್ರಘಟನೆಗಳನ್ನು ಅನುಭವಿಸಿದ ರುದ್ರನಾಯಕರಲ್ಲೂ ಅನೇಕರು ಕೊನೆಯಲ್ಲಿ ಈ ಭಾವವನ್ನು ವ್ಯಕ್ತಪಡಿಸುವುದಿಲ್ಲ. ಮ್ಯಾಕ್‌ಬೆತ್, ರಿಚರ್ಡ III, ಕರ್ಣ ಮುಂತಾದವರು ವೀರಘೋಷಗಳೊಡನೆ ತಮ್ಮ ಕೊನೆಯನ್ನು ಕಾಣುತ್ತಾರೆ. ಡಾಕ್ಟರ್ ಸ್ಟಾಕ್‌ಮನ್, ಬೆಟ್ಟದ ಜೀವದ ನಾಯಕರು ಧೃತಿಗೆಡುವುದೂ ಇಲ್ಲ, ಜೀವನದ ಕರೆಗೆ ಕಿವುಡರೂ ಆಗುವುದಿಲ್ಲ. ರುದ್ರನಾಟಕವನ್ನು ನೋಡಿದನಂತರ ಅಥವಾ ಓದಿದನಂತರ ಈ ನಿರಾಶಾಭಾವದ ಜೊತೆಗೆ ಒಂದು ಬಗೆಯ ಉತ್ಸಾಹವನ್ನೂ ನಾವು ಪಡೆಯುತ್ತೇವೆ. ಜೀವನ ಅಂತಹ ಸಮಯದಲ್ಲಿ ಶೋಕ ಭೂಯಿಷ್ಠವಾಗಿರಬಹುದು, ಆದರೆ ತ್ಯಾಜ್ಯವಲ್ಲ ಎಂಬ ಭಾವ ನಮ್ಮಲ್ಲಿರುತ್ತದೆ. ರುದ್ರನಾಯಕರ ಪಾಡಿಗೆ ಕರುಣೆಯ ಜೊತೆಗೆ, ಅವರಲ್ಲಿ ನಮಗೆ ಆದರ, ಗೌರವಗಳೂ ಉಂಟಾಗುತ್ತವೆ. ಷೋಪೆನ್‌ಹೋನೂ ಕೂಡ ಈ ಅಂಶವನ್ನು ಮನಗಂಡಿದ್ದನು. ಸಾಮಾನ್ಯವಾಗಿ ಗ್ರೀಕರ ರುದ್ರನಾಟಕದ ಅಂತ್ಯದಲ್ಲಿ ಈ ವೈರಾಗ್ಯಭಾವ ಕಂಡುಬರುವುದಿಲ್ಲವೆನ್ನುತ್ತಾನೆ; ಆದರೆ ಗ್ರೀಕರು ಇನ್ನೂ ಪೂರ್ತಿಯಾಗಿ ಸಂಸ್ಕೃತರಾಗಿಲ್ಲದುದೇ ಇದಕ್ಕೆ ಕಾರಣವೆನ್ನುತ್ತಾನೆ. ರುದ್ರನಾಟಕದ ಶಿರೋರತ್ನಗಳಾದ ಗ್ರೀಕರ ರುದ್ರನಾಟಕಗಳೇ ಈ ವಾದಕ್ಕೆ ಅಪವಾದಗಳೆಂದರೆ, ಈ ವಾದದ ಅಸಮರ್ಪಕತೆಗೆ ಬೇರೆ ಯಾವ ನಿದರ್ಶನವೂ ಬೇಕಾಗಿಲ್ಲ.

೭

ನೀಟ್ಜೆ 'ರುದ್ರನಾಟಕದ ಜನನ' ಎಂಬ ಗ್ರಂಥದಲ್ಲಿ ಇದೇ ರೀತಿಯಾದ ಮತವನ್ನು ಮಂಡಿಸುತ್ತಾನೆ. ಭೂಮಿಯ ಮೇಲೆ ಮಾನವನ ಬಾಳಿನ ದುಃಖಮಯತ್ವವನ್ನು ಒತ್ತಿ ಹೇಳಿ, ರುದ್ರನಾಟಕವು ತಾತ್ವಿಕವಾದ ಸಮಾಧಾನಕೊಡುವ ಕಲೆ, "ಪ್ರಕೃತಿಯ

ಸತ್ಯಕ್ಕೆ ಅಧಿಭೌತದ ಪೂರಣ" ಎನ್ನುತ್ತಾನೆ. ಬಾಳು ಕಣ್ಣೀರ ಕಣಿವೆಯೆಂದು ಷೊಪೆನ್‌ಹೋನೊಡನೆ ಒಪ್ಪಿದರೂ, ರುದ್ರನಾಟಕದ ಅಭಿಪ್ರಾಯದಲ್ಲಿ ಬೇರೆಯಾಗುತ್ತಾನೆ. ರುದ್ರನಾಟಕ ಷೊಪೆನ್‌ಹೋಗೆ ಜೀವನೇಚ್ಛೆಯ ತ್ಯಾಗವೆಂದು ಕಂಡರೆ, ಅದು ಬದುಕುವ ಆಸೆಗೆ ಪ್ರಬಲಪೋಷಕವಾಗಿ ನೀಟ್ಷೆಗೆ ಕಾಣುತ್ತದೆ. ಅದು "ಬಾಳಿಗೆ ಆಗಲಿ—ಎಂದು ಹೇಳುವ ಶ್ರೇಷ್ಠಕಲೆ." ಅನುದಿನದ ಜೀವನದಲ್ಲೇ ಸಾಕಷ್ಟು ದುಃಖವನ್ನನುಭವಿಸುತ್ತಿರುವಾಗ, ಮನುಜಬಾಳಿನ ದೌರ್ಭಾಗ್ಯವನ್ನು ರುದ್ರನಾಟಕದಿಂದ ಸಾಧಿಸಬೇಕಾದ ಅವಶ್ಯಕತೆಯೇನೂ ಇಲ್ಲ. ಅದರ ಬದಲು ನಮ್ಮ ವಿಷಾದಸ್ಥಿತಿಗೆ ಪರಿಹಾರ ಕಲ್ಪಿಸುತ್ತದೆ. ಇದು ಕಲಾಶಕ್ತಿ ವಿಶಿಷ್ಟಗುಣ. "ಭವ್ಯದ ಅನುಕೃತಿಯನ್ನು ಕಲೆಯಿಂದ ದಮ್ಯವಾದ ಭೀಕರತೆಯ ರೂಪದಲ್ಲಿ" ರುದ್ರನಾಟಕ ಕೊಟ್ಟು ಮಾನವನು ಜೀವಿಸಲು ಒತ್ತಾಸೆ ಕೊಡುತ್ತದೆ; ವೈನೋದಿಕವೂ ಕೂಡ "ಆಭಾಸಪ್ರಕರಣಗಳಲ್ಲಿ ನಮಗುಂಟಾಗುವ ಅಸಹ್ಯದಿಂದ ಕಲಾರೂಪದಲ್ಲಿ ಪಾರುಮಾಡುತ್ತದೆ."

ಜೀವನದಲ್ಲಿನ ನಿತ್ಯಶಕ್ತಿಗಳನ್ನೇ ರುದ್ರನಾಟಕ ಪ್ರತಿಬಿಂಬಿಸುತ್ತದೆ. ಜೀವನದ ಅಧಿಷ್ಠಾತೃದೇವತೆಗಳು ಮಧುದೇವತೆ ಡಯನೀಸಸ್ ಮತ್ತು ಗಾನದೇವ ಅಪಾಲ್ಲೋ. ತನ್ನ ಪ್ರತ್ಯೇಕ ವ್ಯಕ್ತಿತ್ವದಲ್ಲಿ ನಲಿದಾಡುವ ಭವ್ಯ ಪ್ರಪಂಚವನ್ನು ಅಪಾಲ್ಲೋ ಸೃಷ್ಟಿಸಿದರೆ, ಡಯನೀಸಸ್ ಅದನ್ನು ತನ್ನ ಉನ್ಮತ್ತಾವಸ್ಥೆಯಲ್ಲಿ ಲಯಮಾಡಿ ಮತ್ತೆ ಅದ್ವೈತ ತತ್ವದಲ್ಲಿ ಅದು ಲೀನವಾಗುವಂತೆ ಮಾಡುತ್ತಾನೆ. ಆದರೆ ಈ ಲಯದಲ್ಲಿ ವ್ಯಕ್ತಿಗೆ ಆನಂದವುಂಟಾಗುತ್ತದೆಯೇ ಹೊರತು, ವೇದನೆಯಲ್ಲ. ದುಃಖದ ಮೂಲಕಾರಣ ವ್ಯಕ್ತಿತ್ವದ ಪ್ರತ್ಯೇಕತೆ. ಈ ಪ್ರತ್ಯೇಕತೆ ನಾಶವಾಗಿ, ಎಲ್ಲಾ ವಸ್ತುಗಳೂ ತಮ್ಮ ಆದ್ಯಕಾರಣವಾದ ಏಕತತ್ವದಲ್ಲಿ ನಿಲ್ಲುವ ಸ್ಥಿತಿಯ ದರ್ಶನವೇ ರುದ್ರನಾಟಕದ ಬೀಜವೆಂದು ನೀಟ್ಷೆಯ ಮತ. ರುದ್ರನಾಟಕದಲ್ಲಿ ಸೃಷ್ಟವಾದದ್ದೆಲ್ಲಾ ಹೇಗೆ ನಾಶಹೊಂದುತ್ತವೆಂದು ನೋಡುತ್ತೇವೆ. ಆದರೆ ಇದರಿಂದ ನಮಗೆ ಭಯವಾಗುವುದಿಲ್ಲ. ಕೆಲವು ಕ್ಷಣಗಳ ಮಾತ್ರಕ್ಕೆ ನಾವು ವಿಶ್ವದ ಆದಿತತ್ವವೇ ಆಗುತ್ತೇವೆ ಮತ್ತು ಅದರ ಆನಂದದಲ್ಲಿ ಭಾಗಿಗಳಾಗುತ್ತೇವೆ. ಘರ್ಷಣೆ, ನೋವು, ನಷ್ಟ ಇವೆಲ್ಲಾ ಸ್ಥಿತಿಯನ್ನು ಹೊಂದಲು ಅವಶ್ಯವೆಂದು ತೋರುತ್ತವೆ. ಆದ್ದರಿಂದ ಆ ಆನಂದಭರದಲ್ಲಿ ನಾವು ನೋವು ಸಾವುಗಳನ್ನು ಮರೆಯುತ್ತೇವೆ. "ಭಯ, ಕರುಣೆಗಳಿದ್ದರೂ ಕೂಡ, ನಾವು ಸಂತುಷ್ಟಪ್ರಾಣಿಗಳಾಗಿರುತ್ತೇವೆ; ವ್ಯಕ್ತಿಗಳಾಗಿ ಅಲ್ಲ, ಆದರೆ ಯಾವುದರ ಸೃಷ್ಟಿಯ ಆನಂದದಲ್ಲಿ ನಾವು ಮಗ್ನರೋ, ಆ **ಒಂದು** ಪ್ರಾಣಶಕ್ತಿಯಾಗಿ" ಎಂದು ನೀಟ್ಷೆ ಘೋಷಿಸುತ್ತಾನೆ.

ಈ ಸಿದ್ಧಾಂತ ರುದ್ರನಾಟಕದ ವಿಚಾರಪ್ರಚೋದಿತವಾದ, ಭವ್ಯವಾದ

ವಿವರಣೆ. ಇದು ನಮ್ಮಲ್ಲಿ ರಸಾಸ್ವಾದವನ್ನು ಬ್ರಹ್ಮಾನಂದದೊಂದಿಗೆ ಹೋಲಿಸಿರುವ ಆಲಂಕಾರಿಕರನ್ನು ಜ್ಞಾಪಿಸುತ್ತದೆ. ಈ ವಾದವನ್ನು ಕುರಿತು "ತತ್ವಶಾಸ್ತ್ರ ಅಷ್ಟು ದೂರ ಹೋದಾಗ, ಕಾವ್ಯವನ್ನು ವಿಮರ್ಶಿಸುವ ಬದಲು, ಅದು ಕಾವ್ಯವೇ ಆಗಿಬಿಡುತ್ತದೆ" ಎಂದು ಲ್ಯೂಕಾಸ್‌ನು ಅಂದಿರುವುದು ಸರಿ. ಇದರಲ್ಲಿ ಕೆಲವು ಸೂಕ್ಷ್ಮ ವಿಷಯಗಳು ಚೆನ್ನಾಗಿ ಸೂಚಿತವಾಗಿವೆ. ರುದ್ರನಾಟಕ ಕೇವಲ ಶೋಕಪ್ರಚೋದಕವಲ್ಲ. ಹರ್ಷ, ಶೋಕಗಳೆರಡೂ ಅದರಲ್ಲಿ ಅಡಗಿವೆ. ಅದರ ವಸ್ತು ಸೃಷ್ಟಿ, ಲಯಗಳೆರಡನ್ನೂ ಒಳಗೊಂಡಿರುತ್ತದೆ ಎಂಬ ಅಂಶ ಗಮನೀಯವಾದದ್ದು. ಎರಡನೆಯದಾಗಿ ಅಲ್ಲಿನ ಘಟನೆಗಳು ಕೇವಲ ಚಾರಿತ್ರಿಕ ಘಟನೆಗಳು ಮಾತ್ರವಲ್ಲ, ವಿಶ್ವಶಕ್ತಿಗಳ ಸಂಕೇತಗಳು ಎಂಬುದೂ ವಾಸ್ತವವೇ. ಮತ್ತು ರುದ್ರನಾಟಕ ನಮ್ಮ ಹೃದಯದ ಸುತ್ತಲಿರುವ ಅಹಂಭಾವದ ಕೋಟೆಗಳನ್ನು ಒಡೆದು, ನಾವು ಅಖಂಡವಾದ ವಿಶ್ವತತ್ವದಲ್ಲಿ ಐಕ್ಯವಾಗಲು ಸಹಾಯಮಾಡುವುವೆಂಬ ಅಭಿಪ್ರಾಯವೂ ಸತ್ಯವಾದದ್ದೇ. ಇದನ್ನೇ ಯೇಟ್ಸ್ "ರುದ್ರನಾಟಕವು ಮನುಷ್ಯನನ್ನು ಮನುಷ್ಯನಿಂದ ಪ್ರತ್ಯೇಕಿಸುವ ಕೋಟೆಗಳನ್ನು ಸದಾ ಖಂಡಿತವಾಗಿ ಮುಳುಗಿಸಿ, ಮುರಿಯಬೇಕು; ಮತ್ತು ಈ ಕೋಟೆಗಳ ಮೇಲೆಯೇ ವೈನೋದಿಕ ತನ್ನ ಸಂಸಾರವನ್ನು ಹೂಡಿದೆ" ಎಂದು ಹೇಳಿದ್ದಾನೆ. ಎಫ್. ಆರ್. ಲೀವಿಸ್: "ರುದ್ರತೆಯ ಲಕ್ಷಣದ ಮುಖ್ಯಭಾಗವಾವುದೆಂದರೆ, ಅದು ಅಹಂಭಾವದ ದೃಷ್ಟಿಯನ್ನು ನಾಶಗೊಳಿಸುತ್ತದೆ. . . ರುದ್ರಾನುಭವದ ಜೊತೆಯಲ್ಲುಂಟಾಗುವ ಜೀವನದ ಔನ್ನತ್ಯದ ಅರಿವು ನಿರ್ಧಾರವಾಗುವುದು ಅಹಂಭಾವವನ್ನು ಅಧಿರೋಹಣ ಮಾಡುವುದರಿಂದ—ಅಹಂಭಾವವನ್ನು ಸ್ಥಾಪಿಸುವ ಎಲ್ಲಾ ಮಾರ್ಗಗಳಿಂದಲೂ ತಪ್ಪಿಸಿಕೊಳ್ಳುವುದರಿಂದ" ಎನ್ನುತ್ತಾನೆ. ಈ ರೀತಿಯ ಅಹಂತತ್ವದಿಂದ ಮುಕ್ತಿ ಎಲ್ಲಾ ಕಲೆಗಳ ಆಸ್ವಾದನದಲ್ಲೂ ಇದ್ದೇ ಇರಬೇಕು. ತನ್ಮಯತೆಯ ಅನುಭವ ರುದ್ರನಾಟಕದಲ್ಲಿ ಮಾತ್ರವಲ್ಲದೆ, ಇತರ ಸಾಹಿತ್ಯಪ್ರಕಾರಗಳಲ್ಲೂ ಕಂಡುಬರುತ್ತದೆ. ಆದರೆ ಅದರ ಔತ್ಕರ್ಷ್ಯ ರುದ್ರನಾಟಕದಲ್ಲಿ ಅಧಿಕ.

ನೀಟ್ಷೆಯ ಮತದ ಮತ್ತೊಂದು ವೈಶಿಷ್ಟ್ಯವೇನೆಂದರೆ, ಭಾವಾವೇಶದ ಪರಿಣಾಮವನ್ನು ಕುರಿತದ್ದು. ಯಾವ ಪ್ರಬಲಭಾವದ ಪ್ರಭಾವಕ್ಕೆ ಒಳಗಾದರೂ, ನಾವು ನಮ್ಮ ಸಕಲ ವ್ಯಾಪಾರಗಳನ್ನೂ ಮರೆತು, ಆನಂದವನ್ನು ಹೊಂದುವೆವೆಂದು ಸಾಮಾನ್ಯವಾಗಿ ವಿಮರ್ಶಕರೆಲ್ಲರ ಅಭಿಪ್ರಾಯ. ಶೋಕ ಹೇಗೆ ಆನಂದದಾಯಕವಾಗುತ್ತದೆಂಬ ಪ್ರಶ್ನೆಗೆ ಅಭಿನವಗುಪ್ತನು ಇದೇ ಉತ್ತರವನ್ನು ಕೊಡುತ್ತಾನೆ. "ರುದ್ರಕಲೆ, ಪ್ರಕೃಷ್ಟಭಾವದ ಕಲೆ, ಕೋಟೆಗಳ ನಾಶಕಾರಿ, ಬುದ್ಧಿಯ ಕ್ಷೋಭ

ಕಾರಿ, ಉನ್ಮತ್ತತೆಗೆ ನಮ್ಮನ್ನು ಪ್ರಚೋದಿಸಿ, ಸಮಾಧಿಯ ಗಂಭೀರದೆಶೆಯ ವರೆಗೂ ಸೆಳೆಯುತ್ತಾ, ನಮ್ಮನ್ನು ಆಕರ್ಷಿಸುತ್ತದೆ" ಎಂದು ಯೇಟ್ಸ್ ಹೇಳುತ್ತಾನೆ. "ಸಜೀವಭಾವದ ಪೂರ್ಣಪ್ರವಾಹದ ಸ್ಪರ್ಶದಿಂದುದ್ಭವಿಸುವ ರೋಮಾಂಚ" ರುದ್ರನಾಟಕಗಳ ಆನಂದಾಸ್ವಾದನಕ್ಕೆ ಒಂದು ಕಾರಣ ಎಂದು ಮಾಂಟೇಗ್ ಅಭಿಪ್ರಾಯಪಡುತ್ತಾನೆ.

ಈ ಅಭಿಪ್ರಾಯ ಅನುಭವಸಿದ್ಧವಾದರೂ, ಅದರ ವಿವರಣೆ ತೃಪ್ತಿಕರವಾಗಿಲ್ಲ. ಭಾವಾವೇಶದಿಂದ ಒಂದು ವಿಧವಾದ ಆನಂದ ದೊರಕಿದರೂ, ಭಾವಗಳು ತಮ್ಮ ಸಜಾತೀಯವಾದ ಫಲಗಳನ್ನು ಕೊಡಬಹುದೇ ಹೊರತು, ವಿರುದ್ಧಫಲಗಳನ್ನು ಕೊಡಲಾರವು. ಶೃಂಗಾರನಿರೂಪಣದಿಂದ ಸುಖಪ್ರಾಪ್ತಿ ಸಹಜ; ಆದರೆ ಶೋಕ ದಿಂದ ಆನಂದವನ್ನು ಅಪೇಕ್ಷಿಸುವುದು, ಬೇವಿನ ಮರದಲ್ಲಿ ಮಾವಿನ ಹಣ್ಣನ್ನು ಬೇಡುವಂತೆ. ಭಾವದ ಒತ್ತಡ ಹೆಚ್ಚಿದಷ್ಟೂ ನಮಗೆ ಆನಂದ ಹೆಚ್ಚಬೇಕಾದರೆ, ಸುಖವಸ್ತು ನಿರೂಪಣೆಯಲ್ಲಿ ನಮಗೆ ಸಿಗುವಷ್ಟು ಆನಂದ, ರುದ್ರವಸ್ತು ನಿರೂಪಣೆ ಯಲ್ಲಿರಲಾರದು. ಆದಕಾರಣ ವೈನೋದಿಕವೇ ರುದ್ರನಾಟಕಕ್ಕಿಂತ ಶ್ರೇಷ್ಠ ಸಾಹಿತ್ಯಪ್ರಕಾರವಾಗಬೇಕಾಗಿತ್ತು. ಆದರೆ ಕವಿ, ವಿಮರ್ಶಕರ ಅನುಭವ ಇದಕ್ಕೆ ವಿರುದ್ಧವಾಗಿದೆ. ಆದ್ದರಿಂದ ಮೇಲಿನ ವಿವರಣೆ ನಮ್ಮ ಸಂಶಯಗಳನ್ನು ಪರಿಹರಿ ಸುವುದಿಲ್ಲ.

ರುದ್ರನಾಟಕ ನೈರಾಶ್ಯಭಾವವನ್ನು ಸೂಚಿಸದಿರುವುದಕ್ಕೆ ಅದರಲ್ಲಿ ಲಯ, ಸೃಷ್ಟಿ ಎರಡೂ ಇರುವುದೇ ಕಾರಣವೆಂಬ ನೀಟ್ಷೆಯ ಸೂಚನೆ ಬಹಳ ಮಹತ್ವ ವುಳ್ಳದ್ದು. ಲಯದ ಹೃದಯದಲ್ಲೇ ಪುನಸ್ಸೃಷ್ಟಿಯ ಬೀಜವಿರುವುದು ನಮಗೆ ಜೀವನದಲ್ಲಿ ಶ್ರದ್ಧೆ, ವಿಶ್ವಾಸಗಳನ್ನು ಕೊಡುತ್ತದೆಯೆನ್ನುತ್ತಾನೆ. ಈ ವಿಷಯವನ್ನು ಪ್ರಾಚೀನ ಜನಾಂಗಗಳ ಚರಿತ್ರೆಕಾರರೂ, ವಿಮರ್ಶಕರೂ ಬಹಳವಾಗಿ ಬೆಳೆಸಿದ್ದಾರೆ. ಪುರಾಣಗಳ ಕಥೆಗಳು ಬರಿಯ ಕಟ್ಟುಕಥೆಗಳಲ್ಲವೆಂದೂ, ಅಂದಿನ ಜೀವನದ ಸಂಕೇತ ಗಳೆಂದೂ ಭಾವಿಸಿ ಪ್ರಾಕ್ತನ ಜನಾಂಗಗಳ ಸಂಸ್ಕೃತಿಗಳನ್ನು ರಚಿಸುತ್ತಾರೆ. ಈ ಕಥೆಗಳ ಸಂಕಲನ, ವಿವರಣೆಗಳಲ್ಲಿ ಅಗ್ರಸ್ಥಾನ ಸರ್ ಜೇಮ್ಸ್ ಫ್ರೇಜರನಿಗೆ ಸಲ್ಲಬೇಕು. ಅವನ "ಸುವರ್ಣ ಶಾಖೆ"ಯಲ್ಲಿ ಈಜಿಪ್ಟಿನ ಆಸಿರಿಸ್, ಗ್ರೀಸಿನ ಡಯನೀಸಸ್‌ನ ಕಥೆಗಳಿವೆ. ಇವರಿಬ್ಬರೂ ಕೃಷಿದೇವತೆಗಳೆಂತಲೂ, ಬಿತ್ತನೆಯಾದ ಮೇಲೆ ಹುಟ್ಟಿ ಸುಗ್ಗಿಯ ಅನಂತರ ಮೃತಿಹೊಂದುವರೆಂತಲೂ ಉಲ್ಲೇಖವಿದೆ. ಅಂದಿನ ಜನರು ಪೈರು ಬಂದಾಗ ಹರ್ಷಪ್ರದವಾದ ಗೀತ, ನಾಟ್ಯಗಳನ್ನೂ, ಕುಯಿಲಾದನಂತರ ಶೋಕಪೂರ್ಣವಾದ ಗೀತ, ನಾಟ್ಯಗಳನ್ನೂ ಪ್ರದರ್ಶಿಸುತ್ತಿದ್ದರಂತೆ. ಶೋಕವನ್ನು

ಸೂಚಿಸುವ ಗೀತ, ನಾಟ್ಯಗಳ ಕೊನೆಯಲ್ಲಿ, ತಮ್ಮ ದೇವತೆ ಮತ್ತೆ ಬದುಕಿ ಬರುವು ದೆಂಬ ನಂಬುಗೆಯಿಂದ ಹರ್ಷಪೂರ್ಣ ಗೀತ, ನಾಟ್ಯಗಳನ್ನಾಡುತ್ತಿದ್ದರಂತೆ. ರುದ್ರನಾಟಕ ಈ ಶೋಕಗೀತ, ನಾಟ್ಯಗಳಿಂದ ಜನಿಸಿದ್ದು, ಮತ್ತು ಇಂದಿನ ವರೆಗೂ ಅದೇ ಅವಯುವರೂಪವನ್ನು ಧಸಿದೆಯೆಂದೂ ಜೇನ್ ಹ್ಯಾರಿಸನ್, ಗಿಲ್ಬರ್ಟ್ ಮರ್ರೆ, ಕಾರ್ನಫರ್ಡ್ ಮುಂತಾದವರ ಅಭಿಪ್ರಾಯ. ಈ ರಚನಾಕ್ರಮ ಗ್ರೀಸಿನ ಎಲ್ಲಾ ರುದ್ರನಾಟಕಗಳಲ್ಲೂ ಇದೆಯೆಂದು ಹೇಳುತ್ತಾರೆ. ಪುರಾಣದ ಕೃಷಿದೇವತೆಯಂತೆ, ರುದ್ರನಾಯಕನೂ ಕೂಡ ಉಚ್ಛ್ರಾಯಸ್ಥಿತಿಯಲ್ಲಿದ್ದು, ಅಪಘಾತಕ್ಕೊಳಗಾಗಿ, ತನ್ನ ಜೀವಿತವನ್ನು ಮುಗಿಸುವ ಮೊದಲು ಮತ್ತೆ ಪ್ರಬುದ್ಧನಾಗಿ, ದೇಹವನ್ನು ತ್ಯಜಿಸುತ್ತಾನೆ. ಈ ಶಿಲ್ಪವನ್ನು ಗ್ರೀಕರ ನಾಟಕಗಳಲ್ಲಿ ಮಾತ್ರವಲ್ಲ, ಷೇಕ್ಸ್‌ಪಿಯರಿನ ನಾಟಕಗಳಲ್ಲೂ ಕೆನ್ನೆತ್ ಬರ್ಕ್, ಫ್ರಾನ್ಸಿಸ್ ಫರ್ಗ್ಯೂಸನ್ ಮುಂತಾದವರು ತೋರಿಸಿದ್ದಾರೆ. ಆಧುನಿಕ ವಿಮರ್ಶೆಯಲ್ಲಿ ಈ ದೃಷ್ಟಿಯೇ ಹೆಚ್ಚು ಪ್ರಚಾರಕ್ಕೆ ಬರುತ್ತಿದೆ.

ಇದರಲ್ಲಿ ಸತ್ಯಾಂಶವೇನೋ ಇದೆ. ರುದ್ರನಾಟಕದ ಕೊನೆಯಲ್ಲಿ ನಾವು ನೋಡುವ ರುದ್ರನಾಯಕನು, ನಾವು ನಾಟಕದ ಮೊದಲಲ್ಲಿ ನೋಡಿದ ವ್ಯಕ್ತಿಗಿಂತ ಕೆಲವು ವಿಷಯಗಳಲ್ಲಿ ಬೇರೆಯಾಗಿರುತ್ತಾನೆ. ಅದಕ್ಕೆ ಕಾರಣ ನಾಟಕದ ಮಧ್ಯ ಭಾಗದಲ್ಲಿ ಅವನು ಹೊಂದಿದ ಅನುಭವಗಳು. ಅವನು ಮಾಡಿದ ಕೃತ್ಯಗಳನ್ನು ಬದಲಾಯಿಸಲು ಸಾಧ್ಯವಿಲ್ಲ; ಅವನು ಅನುಭವಿಸಿದ ಕಷ್ಟಗಳನ್ನೂ ಹಿಂದೆಗೆಯಲಾಗು ವುದಿಲ್ಲ. ಅವನು, ಜ್ಞಾತವಾಗಿಯೋ ಅಜ್ಞಾತವಾಗಿಯೋ, ತಿರುವಿದ ಚಕ್ರ ಸುತ್ತುತ್ತಾ ಹೋಗುತ್ತದೆ: ಅದನ್ನು ನಿಲ್ಲಿಸಲು ಅವನಿಗಾಗಲಿ, ಇನ್ನಾರಿಗಾಗಲೀ ಶಕ್ತಿಯಿಲ್ಲ. ಕೊನೆಯಲ್ಲಿ ಆ ಚಕ್ರದಡಿಯಲ್ಲಿ ಅವನು ಸಿಕ್ಕಿ ಚೂರಾಗುವ ಮೊದಲು, ವಿಶ್ವನಿಯಮದ ಜ್ಞಾನ ಅವನಿಗುಂಟಾಗುತ್ತದೆ. ದೇಹಕ್ಕೇನೋ ವಿನಾಶವೊದಗಿದರೂ, ಅವನ ಆತ್ಮ ಎಚ್ಚರವಾಗಿ, ಪೂತವಾಗುತ್ತದೆ. ಇದರ ದರ್ಶನ ನಮಗೆ ಅವನ ಮರಣ ದಲ್ಲಿ ದುಃಖವನ್ನುಂಟುಮಾಡದೆ, ಆನಂದವನ್ನುಂಟುಮಾಡುತ್ತದೆ. ಇದಕ್ಕೆ ಲಿಯರ್, ಓಥೆಲೋ, ಮ್ಯಾಕ್‌ಬೆತ್ ಉತ್ತಮ ನಿದರ್ಶನಗಳು. ಈ ವಿವರಣೆಯಲ್ಲೂ ರುದ್ರ ನಾಟಕದಲ್ಲಿನ ದುಃಖದ ತೀವ್ರತೆ ಕಡಿಮೆಯಾಗುವುದಕ್ಕೆ ಕಾರಣ ಕಂಡುಬರು ತ್ತದೆಯೇ ಹೊರತು, ಆನಂದ ಹೇಗೆ ಉಂಟಾಗುತ್ತದೆಂಬುದು ಗೊತ್ತಾಗುವುದಿಲ್ಲ.

೮

ರುದ್ರನಾಟಕದ ಪ್ರಭಾವ ಶಮನವಲ್ಲ. ರುದ್ರನಾಟಕ ಆಸ್ಪತ್ರೆಯಲ್ಲ, ಔಷಧವಲ್ಲ; ಅದೊಂದು ಔತಣ. ಎಲ್ಲ ವಿಧವಾದ ಅನುಭವಗಳೂ ನಮಗೆ ಪ್ರಿಯವಾದುವೇ.

ಸ್ವಂತ ಜೀವನದಲ್ಲಿ ದೊರೆಯಲಾರದ ಅನುಭವಗಳನ್ನು ಸಾಹಿತ್ಯದಲ್ಲಿ ಪಡೆದು ನಮ್ಮ ಹೃದಯದ ಹಸಿವನ್ನು ಅಡಗಿಸುತ್ತೇವೆ. ರುದ್ರನಾಟಕದಲ್ಲಿ ನಾವು ಅನೇಕ ಮಹದನುಭವಗಳನ್ನು ಪರೋಕ್ಷವಾಗಿ ಪಡೆಯುತ್ತೇವೆ. ಇತರ ಕಲೆಗಳು ಸುಂದರ ವಾಗಿರಬಹುದು; ರುದ್ರನಾಟಕವಾದರೋ ಜೀವನದ ಸತ್ಯತೆಯನ್ನು ಪ್ರತಿಬಿಂಬಿಸುತ್ತದೆ. ಜೀವನದ ಗಂಭೀರ ಮತ್ತು ಸತ್ಯ ಪ್ರತಿಕೃತಿಯಲ್ಲಿ ನಮಗಿರುವ ಆದರವೇ ರುದ್ರನಾಟಕದಲ್ಲಿ ನಮ್ಮ ಆನಂದಾನುಭವಕ್ಕೆ ಮೂಲ. "ಮಾನವ ಎಂತಹ ವಿಚಿತ್ರ ಸೃಷ್ಟಿ!" ಎಂಬ ಭಾವವೇ ರುದ್ರನಾಟಕದ ತಿರುಳು. ಮನುಷ್ಯನಲ್ಲಿ ಭಯ ಧೈರ್ಯಗಳ, ಮೌಢ್ಯಮಹತ್ವಗಳ, ಬಲಾಬಲಗಳ, ವಿಚಿತ್ರವಾದ ಒಕ್ಕೂಟವೇ ರುದ್ರನಾಟಕದ ವಸ್ತು. "ಜಗತ್ತಿನ ವೈಭವ, ವಿನೋದ, ಒಗಟು ಮಾನವ" ಎಂಬುದನ್ನು ತೋರಿಸುವುದೇ ರುದ್ರನಾಟಕದ ಉದ್ದೇಶ ಎಂದು ಎಫ್. ಎಲ್. ಲ್ಯೂಕಾಸ್ ಹೇಳುತ್ತಾನೆ. ರುದ್ರನಾಟಕ ಈ ವೈಲಕ್ಷಣ್ಯವನ್ನು ನಮ್ಮ ಮುಂದಿಟ್ಟು ಮಾನವನ ಜೀವನ ನಮಗೆ ಗೊತ್ತಿದ್ದುದಕ್ಕಿಂತಲೂ ಎಷ್ಟು ಹೆಚ್ಚು ಅದ್ಭುತ, ಭಯಂಕರ, ಮತ್ತು ರೋಮಾಂಚಕರ ಎಂಬುದನ್ನು ಪ್ರದರ್ಶಿಸುವುದರಿಂದ ನಮ್ಮಲ್ಲಿ ಭಾವೋನ್ನತ್ಯವನ್ನುಂಟುಮಾಡಿ ಹರ್ಷವನ್ನು ಕೊಡುತ್ತದೆಯೆಂದು ಮಾಂಟೇಗ್ ಅಭಿಪ್ರಾಯಪಡುತ್ತಾನೆ. ಇದರಲ್ಲಿ ಸತ್ಯದ ಅಂಶವಿದೆ; ಆದರೆ ಇದು ರುದ್ರನಾಟಕದ ಅಂತಿಮ ಪ್ರಭಾವವಲ್ಲ. ಏಕೆಂದರೆ ನಮಗೆ ಅನುಭವವಾಗುವುದು; ಮನುಷ್ಯನ ಹಿರಿಮೆ, ವೈಚಿತ್ರ್ಯಗಳು ಮಾತ್ರವಲ್ಲದೆ, ಅವನ ದೌರ್ಬಲ್ಯ, ಅಲ್ಪತೆಗಳೂ ಕೂಡ. ಅವನ ನೈತಿಕ ಜಯದಲ್ಲಿನ ಹರ್ಷಕ್ಕಿಂತ ಅವನ ಅಸಹಾಯತೆಗಾಗಿ ಸಹಾನುಭೂತಿಯೇ ನಮ್ಮ ಹೃದಯವನ್ನಾವರಿಸುತ್ತದೆ. ಮತ್ತು ರುದ್ರನಾಟಕವು ಮಾತ್ರ ಜೀವನ ಹೃದಯವನ್ನು ಸತ್ಯವಾಗಿ ಪ್ರತಿಬಿಂಬಿಸುತ್ತದೆಯೆಂಬ ವಾದವನ್ನು ಒಪ್ಪಲಾಗುವುದಿಲ್ಲ.

೯

ಕೆಲವರ ಮತದಲ್ಲಿ ರುದ್ರನಾಟಕದಲ್ಲಿ ಆನಂದಕೊಡುವುದರಲ್ಲಿ ಇವೆಲ್ಲಕ್ಕಿಂತಲೂ ಮುಖ್ಯವಾದುದೆಂದರೆ ಅದರಲ್ಲಿ ಮಾನವ ಘಟನೆಗಳ ಹಿಂಬದಿಯಲ್ಲಿರುವ ವಿಶ್ವದ ಅವ್ಯಕ್ತಶಕ್ತಿಯ, ಅಜ್ಞಾತರಹಸ್ಯದ ಅಸ್ಪಷ್ಟಸೂತ್ರದ ಹಿನ್ನೆಲೆ. ಇದಿಲ್ಲದಿದ್ದರೆ ರುದ್ರನಾಟಕ ತನ್ನ ಘನತೆ, ಗೌರವಗಳನ್ನು ಕಳೆದುಕೊಳ್ಳುತ್ತದೆಂದು ಅಲ್ಲಾರ್ಡೈಸ್ ನಕೊಲ್ ಹೇಳುತ್ತಾನೆ. ರುದ್ರಕವಿಯ ಮಹತ್ತರ, ಕುಶಲತಮ ಗುಣ ದೃಶ್ಯಗಳ ವ್ಯಕ್ತಿಗಳ ಪ್ರದರ್ಶನದಿಂದಾಚೆಗೆ ಇರುತ್ತದೆ. ಅದು ಅನಂತತೆಯೊಂದನ್ನು ಸೂಚಿಸುವ ಜೀವನವನ್ನು ನಿತ್ಯತೆಯ ಘರದೆಯ ಮುಂದಿಡುವ, ಮತ್ತು ಬಗೆಹರಿಸಲಾಗದ ಪ್ರಶ್ನೆಗಳ

ಇರವನ್ನು ಪಾಠಕನು ಗ್ರಹಿಸುವಂತೆ ಮಾಡುವ, ಶಕ್ತಿಯಲ್ಲಿದೆ. ಈ ದುರ್ಜ್ಞೇಯದ ದರ್ಶನ ನಿರಾಶಾವಾದಕ್ಕೆ ಒಯ್ಯಬಹುದೆಂಬುದು ದಿಟ; ಆದರೆ ಅದು ಹಾಗೆ ಸದಾ ಮಾಡಿಲ್ಲ ಎಂದು ಸ್ಮಾರ್ಟ್ ಅಭಿಪ್ರಾಯಪಡುತ್ತಾನೆ. ರುದ್ರತತ್ವ ಕೇವಲ ಭೌತ ಅಥವಾ ಮಾನಸ ವಸ್ತುಗಳಿಗಿಂತ ಹೆಚ್ಚನ್ನು ಒಳಗೊಂಡಿರುತ್ತದೆ. ಮಾನವನ ಕೂಡ ಮಾನವನ, ಕಾಮದೊಡನೆ ಕಾಮದ ಘರ್ಷಣೆಗಿಂತ, ಮತ್ತು ಧರ್ಮಕಾಮಗಳ ಅನಾದಿಯಾದ ವೈಷಮ್ಯಕ್ಕಿಂತ ಆಚೆ ಹೋಗುತ್ತದೆ. ಅದರ ಕಾರ್ಯವಾದರೋ ನಮ್ಮ ಸಾಮಾನ್ಯ ಜೀವನ ಎಷ್ಟು ಅದ್ಭುತ ಎಂದು ತೋರಿಸುವುದು; ಸದಾ ಕ್ಷುಬ್ಧವಾಗಿರುವ ಅನಂತತೆಗಳ ನಡುವೆ ಸ್ವಸ್ಥವಾಗಿರುವ ಆತ್ಮದ ಮೇಲೆ ಬೆಳಕು ಚಲ್ಲುವುದು, ತರ್ಕಭಾವಗಳ ವಿವಾದವನ್ನಡಗಿಸಿ, ಆ ತುಮುಲದ ಮೇಲೆ ಮಾನವನ ಮತ್ತು ಅವನ ವಿಧಿಯ ನಡುವಿನ ಗಂಭೀರವಾದ, ಅವ್ಯಾಹತ ಪಿಸುಮಾತುಗಳು ಕೇಳುವಂತೆ ಮಾಡುವುದು. ಜೀವ ತನ್ನ ಸತ್ಯ, ಸೌಂದರ್ಯ ಅಥವಾ ದೈವದ ಹತ್ತಿರ ಬರುವ ಅಥವಾ ದೂರ ಹೋಗುವಾಗಿನ, ಅದರ ಅನಿಶ್ಚಿತ, ವ್ಯಥಿತ ನಡಿಗೆಯನ್ನು ನಮಗೆ ತೋರಿಸುವುದು ರುದ್ರತತ್ವದ ಧರ್ಮ ಎಂದು ಮೇಕರ್‌ಲಿನ್ ವಿವರಿಸುತ್ತಾನೆ. ಲೋಕದಲ್ಲಿ ಸೌಂದರ್ಯದರ್ಶನದಿಂದಾದ ಆನಂದದಲ್ಲಿ ಯಾವುದೋ ಅನಿರ್ವಚನೀಯವಾದ ಖಿನ್ನತೆಯೂ ಬೆರತಿರುತ್ತದೆ. "ಆನಂದದ ಗುಡಿಯಲ್ಲೇ, ಆಚ್ಛಾದಿತಳಾದ ದುಃಖದೇವಿ ತನ್ನ ರಾಜಗೃಹವನ್ನು ಹೊಂದಿರುತ್ತಾಳೆ" ಎನ್ನುತ್ತಾನೆ ಕೀಟ್ಸ್. "ಜಗತ್ತಿನ ಭವ್ಯ ಸೌಂದರ್ಯದೊಂದಿಗೆ ಎಲ್ಲೆಲ್ಲೂ ಬೆರೆತಿರುವ ನೋವು" ಎಂದು ಸಿಂಜ್ ವರ್ಣಿಸುತ್ತಾನೆ. ಇದೊಂದು ಬಗೆಹರಿಯದ ರಹಸ್ಯ. ನಾವು ಉತ್ತಮ ರುದ್ರನಾಟಕದ ಪ್ರಭಾವಕ್ಕೆ ಸಿಕ್ಕಿದಾಗ ನಾವು ಈ ಮರ್ಮದ ಹತ್ತಿರ ಬಂದಂತಾಗುತ್ತದೆ. ಅದು ಪೂರ್ಣವಾಗೇನೋ ಕೈಗೆ ಸಿಗುವುದಿಲ್ಲ; ಆದರೂ ಆ ಕೆಲವು ನಿಮಿಷಗಳಲ್ಲಿ ಅದು ಪೂರ್ಣವಾಗಿ ಅರ್ಥವಾದಂತಿರುತ್ತದೆ. ಅನುಭವವಾದ ಮೇಲೂ ನಮಗೆ ಯಾವುದೋ ಸತ್ಯದ ದರ್ಶನವಾದಂತಿರುತ್ತದೆ, ಭ್ರಾಂತಿಯೆಂಬಂತಲ್ಲ. ಆಗ ನಾವು ಮುಂದೆ ಬಗ್ಗಿ ನೋಡಿ, ನಮಗಿಂತ ಪ್ರಗಲ್ಭವಾದ ಚಿತ್ತ ಸದಾ ನೋಡುತ್ತಿರುವಂತಹ ಜೀವನದ ದರ್ಶನವನ್ನು ಕೆಲವು ನಿಮಿಷಗಳು ಮಾತ್ರ ನೋಡಿದೆವೆನ್ನಬಹುದಲ್ಲವೇ ಎಂದು ಮಾಂಟೇಗ್ ಕೇಳುತ್ತಾನೆ. ಮಾನವನ ಭವಿತವ್ಯ ಹೃದಯ ಬುದ್ಧಿಶಕ್ತಿಗಳ ರುಚಿ ರುದ್ರನಾಟಕದ ಉನ್ನತದರ್ಶನದ ವೇಳೆಗಳಲ್ಲಿ ಸಿಗುತ್ತದೆಂದು ಭಾವಿಸುತ್ತಾನೆ. ಈ ಭಾವನೆಗಳೇನೋ ಸಾಮಾನ್ಯವಾಗಿ ಎಲ್ಲಾ ರುದ್ರನಾಟಕಗಳಲ್ಲೂ ಪ್ರಚೋದಿತವಾಗುವಂತಹವುಗಳೇ. ಇದಕ್ಕೆ ಪರದ ಹಿನ್ನೆಲೆಯಿಲ್ಲದಿದ್ದರೆ ರುದ್ರನಾಟಕದ ಗಂಭೀರತೆಯೇ ಅದೃಶ್ಯವಾಗುತ್ತದೆ. ಮತ್ತು ದುಃಖವಸ್ತುಗಳು

ಆನಂದವನ್ನು ಕೊಡಲು ಬೇಕಾಗುವ ಸಾಮರ್ಥ್ಯದಲ್ಲಿ ಒಂದು ದೊಡ್ಡ ಭಾಗವನ್ನು ಕಳೆದುಕೊಳ್ಳುತ್ತವೆ. ಇದೊಂದರಿಂದಲೇ ರುದ್ರನಾಟಕ ಸಂತೋಷವನ್ನು ಕೊಡಲು ಶಕ್ತವಾಗುತ್ತದೆಂದು ಹೇಳಲಾಗದಿದ್ದರೂ. ಇದಿಲ್ಲದಿದ್ದರೆ ಅದರ ಶಕ್ತಿ ಬಹುಮಟ್ಟಿಗೆ ಕುಗ್ಗಿ ಅದು ರುದ್ರನಾಟಕವೇ ಅಥವಾ ಅಲ್ಲವೇ ಎಂಬ ಜಿಜ್ಞಾಸೆಗೆ ಅವಕಾಶ ಕೊಡಬಹುದು.

೧೦

ಹೀಗೆ ರುದ್ರನಾಟಕದ ಆನಂದದಾಯಕತೆಯನ್ನು ಕುರಿತು ವಿಮರ್ಶೆ ವಿಪುಲ ವಾಗಿ, ಬಹುಮುಖವಾಗಿ ನಡೆದಿದೆ, ನಡೆಯುತ್ತಲೂ ಇದೆ. ಈ ವಿಮರ್ಶೆಗಳನ್ನೂ, ನಮ್ಮ ಸ್ವಂತ ಅನುಭವವನ್ನೂ ಹೋಲಿಸಿಕೊಂಡರೆ ನಮಗೆ ಕಾಣುವದೇನೆಂದರೆ ಮೇಲಿನ ಪ್ರತಿಯೊಂದು ವಾದದಲ್ಲೂ ಸತ್ಯಾಂಶಗಳೇನೋ ಇವೆ, ಆದರೆ ಅವುಗಳು ಪ್ರತ್ಯೇಕವಾಗಿ, ಇತರರ ಸಹಕಾರವಿಲ್ಲದೆ ರುದ್ರನಾಟಕದ ಆನಂದಾಸ್ವಾದವನ್ನು ವಿವರಿಸಲು ಶಕ್ತವಲ್ಲ. ಈ ಎಲ್ಲ ಭಾವಗಳು ಸೇರಿ, ಕಲೆತು ರುದ್ರನಾಟಕದ ಪ್ರಭಾವಕ್ಕೆ ಅದರ ವೈಲಕ್ಷಣ್ಯವನ್ನು ಕೊಡುತ್ತವೆಂದು ನಮಗೆ ಅನ್ನಿಸುತ್ತದೆ. ಅವುಗಳಲ್ಲಿ ಕೆಲವು ದುಃಖವಸ್ತುವಿನ ತೀವ್ರತೆಯನ್ನು ಕಡಿಮೆಮಾಡುತ್ತವೆ; ಉಳಿದವುಗಳು ಅದು ಆನಂದದಾಯಕವಾಗುವಂತೆ ಮಾಡುತ್ತವೆ. ಈ ಎರಡು ವಿಧವಾದ ಕ್ರಿಯೆಗಳ ಏಕ ಫಲ ಆನಂದಾಸ್ವಾದ. ಇದು ನಾಟಕ, ಕಲ್ಪನೆಯ ಕೃತಿ, ಜೀವನವಲ್ಲ ಎಂಬ ಭಾವ; ಕಾವ್ಯದ ಸಾಧಾರಣೀಕರಣ ವ್ಯಾಪಾರಕ್ಕೆ ಸಿಕ್ಕಿ ವಸ್ತು ಪಾತ್ರಗಳಲ್ಲಾಗುವ ಮಾರ್ಪಾಡು; ಅಂತ್ಯದಲ್ಲಿ ರುದ್ರನಾಯಕನಿಗಾಗುವ ಜ್ಞಾನೋದಯ; ಇವೆಲ್ಲಾ ದುಃಖದ ಒತ್ತಡವನ್ನು ತಗ್ಗಿಸುತ್ತವೆ. ಅನುಕೃತಿ ಸಾಮಾನ್ಯದಿಂದಲೇ ಉತ್ಪನ್ನ ವಾಗುವ ತೃಪ್ತಿ, ಶೈಲಿಯ ಮೋಹಕತೆ ಮತ್ತು ಗಾಂಭೀರ್ಯ, ನಾಯಕನ ಧೀರೋ ದಾತ್ತಸ್ವಭಾವ ಮತ್ತು ಚರಿತ, ವಿಶ್ವದ ಅಜ್ಞಾತಶಕ್ತಿಗಳ ಆವರಣ ಇವು ಆನಂದ ವನ್ನು ಕೊಡುತ್ತವೆ. ಇಷ್ಟು ಗುಣಗಳೂ ರುದ್ರನಾಟಕದಲ್ಲಿರುವುದರಿಂದಲೇ ಅದು ಆನಂದಸ್ಯಂದಿಯಾಗುವುದು ಸಾಧ್ಯ.

ರುದ್ರನಾಟಕ ಇತರ ಸಾಹಿತ್ಯಪ್ರಕಾರಗಳಂತೆ ಆನಂದವನ್ನು ಕೊಡಬಹುದು. ಆದರೆ ಆನಂದಪಾರಮ್ಯಕ್ಕೆ ನಮ್ಮನ್ನು ಮುಟ್ಟಿಸಲು ಅದಕ್ಕಿರುವ ಶಕ್ತಿ ಉಳಿದವು ಗಳಿಗಿಲ್ಲವೆಂಬುದು ಏತರಿಂದ ಎಂಬ ಪ್ರಶ್ನೆಗೆ ಉತ್ತರ, ರುದ್ರನಾಟಕದ ವಸ್ತುವಿನಲ್ಲಿ ದೃಷ್ಟಿಯಲ್ಲಿ ದೊರೆಯುತ್ತದೆ. ಒಂದಿಲ್ಲೊಂದು ವಿಧವಾದ ಘರ್ಷಣೆ ನಾಟಕಗಳಲ್ಲಿದ್ದೇ ಇರಬೇಕು; ಇಲ್ಲದಿದ್ದರೆ ನಾಟಕರಚನೆಯೇ ಸಾಧ್ಯವಿಲ್ಲ. ಆದ್ದರಿಂದಲೇ ಶಾಂತರಸವು

ರಸವೇ ಎಂಬ ಚರ್ಚೆ ನಮ್ಮ ಆಲಂಕಾರಿಕರಲ್ಲಿರುವುದು. ಈ ಘರ್ಷಣೆ ಒಂದೊಂದು ನಾಟಕಪ್ರಕಾರದಲ್ಲಿ ಒಂದೊಂದು ರೀತಿಯಾಗಿರುತ್ತದೆ. ವೈನೋದಿಕದಲ್ಲಿ ಕಂಡು ಬರುವುದು ವ್ಯಕ್ತಿಯು ತನ್ನ ಸುತ್ತಲಿನ ಸಮಾಜದ ಅನಿತ್ಯ ಕಟ್ಟು, ಕಟ್ಟಳೆಗಳಿಗೆ ಒಳಪಡದಿರುವುದರಿಂದ ಇತರರ ಹಾಸ್ಯಕ್ಕೆ ಗುರಿಯಾಗುವುದು; ರುದ್ರನಾಟಕದ ವಸ್ತು ಮಾನವ ಮತ್ತು ವಿಶ್ವದ ಶಕ್ತಿಗಳ ತುಮುಲಯುದ್ಧ. ವೈನೋದಿಕದಲ್ಲಿ ವ್ಯಕ್ತಿಯು ಬುದ್ಧಿಮಾತ್ರ ಎಚ್ಚರವಾಗಿದ್ದರೆ ಸಾಕು; ತನ್ನ ತಪ್ಪನ್ನು ಸುಲಭವಾಗಿ ತಿದ್ದಿಕೊಳ್ಳಬಹುದು; ಅವನ ತಪ್ಪಿಗೆ ಶಿಕ್ಷೆಯೂ ಕೂಡ ಅಲ್ಪವಾದದ್ದೇ. ನಗೆಯ ಎಳೆಮಿಂಚಿನಿಂದ ಅವನ ಮೌಢ್ಯ ಹೊರಬೀಳುವುದೇ ಹೊರತು, ವಿಧಿಯ ಬರಸಿಡಿಲು ಅವನ ಜೀವನವನ್ನೇ ಸುಟ್ಟುಬಿಡುವುದಿಲ್ಲ. ವೈನೋದಿಕ ಬುದ್ಧಿಪ್ರಧಾನವಾದದ್ದಾದರೆ, ರುದ್ರನಾಟಕ ಬುದ್ಧಿಭಾವಗಳೆರಡರ ಉತ್ಕರ್ಷತೆಯಿಂದಲೂ ಕೂಡಿರುತ್ತದೆ. ಆದ್ದರಿಂದಲೇ ಯೋಚಿಸಿದರೆ ವಿನೋದ, ಭಾವಿಸಿದರೆ ರುದ್ರ ಎನ್ನುತ್ತಾರೆ.

ಈ ಘರ್ಷಣೆಯಿಂದ ಪಾರಾಗಲು ವ್ಯಕ್ತಿಯು ತನ್ನ ಶಕ್ತಿಯನ್ನು ಉಪಯೋಗಿಸಬೇಕು. ವೈನೋದಿಕದಲ್ಲಿ ಪ್ರಕಾಶವಾಗುವ ಶಕ್ತಿ ಏಕದೇಶೀಯವಾದದ್ದು ಮತ್ತು ಅಲ್ಪ ಪ್ರಮಾಣದ್ದು. ಆದರೆ ರುದ್ರ ಘರ್ಷಣೆಯಲ್ಲಿ ಮಾನವನು ತನ್ನ ಎಲ್ಲಾ ಶಕ್ತಿಗಳನ್ನೂ, ಅವುಗಳ ಪೂರ್ಣ ಪ್ರಗಲ್ಭಾವಸ್ಥೆಯಲ್ಲಿ, ಹೊರಪಡಿಸಬೇಕು. ಏಕೆಂದರೆ ಅವನ ಪ್ರತಿಶಕ್ತಿ ಸಂಸಾರದ ಕ್ಷಣಿಕ ನಿಬಂಧನೆಗಳಲ್ಲ, ವಿಶ್ವದ ನಿತ್ಯಶಕ್ತಿ. ಅದೂ ಅಲ್ಲದೆ ವೈನೋದಿಕದ ದೃಷ್ಟಿ ಮನುಜನಲ್ಲಡಗಿರುವ ಮಂಗನ ಮೇಲಿರುತ್ತದೆ; ಅವನ ಅವಹೇಳನವೇ ಅದರ ಗುರಿ. ಆದರೆ ರುದ್ರನಾಟಕದಲ್ಲಿಯಾದರೋ ನಮಗೆ ಕಾಣುವುದು ಮಾನವನಲ್ಲಿರುವ ಮಹಾದೇವ. ನಮಗೆ ಅವನಲ್ಲಿ ಉಂಟಾಗುವುದು ಪೂಜ್ಯತೆ ಗೌರವಗಳು. ವೈನೋದಿಕ, ವ್ಯಕ್ತಿಯನ್ನು ಕಾಲ ದೇಶ ಸಮಾಜಗಳಿಂದ ಪರಿಮಿತನಾದ ಕೇವಲ ವ್ಯಕ್ತಿಯಾಗಿ ನಮ್ಮ ಮುಂದಿಡುತ್ತದೆ; ರುದ್ರನಾಯಕ ಕಾಲದೇಶಾತೀತನಾದ ಮಾನವ ಪ್ರತೀಕನಾಗುತ್ತಾನೆ. ಆದ್ದರಿಂದ ವೈನೋದಿಕದಂತಲ್ಲದೆ, ರುದ್ರನಾಟಕ ಸಾರ್ವಕಾಲಿಕ, ಸಾರ್ವಜನೀಯವಾಗಿರುವುದು.

ಈ ಮಹದ್ಘರ್ಷಣೆಯಲ್ಲಿ ರುದ್ರನಾಯಕನ ದೇಹಪಾತವಾದರೂ, ಅವನ ಆತ್ಮ ಮಾನವತೆಯ ಶಿಖರವನ್ನೇರುತ್ತದೆ. ವಿಧಿ ತನ್ನ ಶಕ್ತಿಮಾಹಾತ್ಮ್ಯೆಯಿಂದ ಹೊರವಿಜಯವನ್ನು ಹೊಂದಿದರೆ, ಮಾನವ ತನ್ನ ಧೀರೋದಾತ್ತತೆಗಳಿಂದ ಅಂತರ್ವಿಜಯವನ್ನು ಸಾಧಿಸುತ್ತಾನೆ. ಮಾನವನಲ್ಲಿರುವ ಪ್ರತಿಯೊಂದು ಶಕ್ತಿ ತನ್ನ ಪರಾಕಾಷ್ಠದೆಸೆಯಲ್ಲಿ ಬೆಳಗುತ್ತಿರುತ್ತದೆ. ಕಾಲಗರ್ಭದಲ್ಲಿ ಅಡಗಿ ಮುಂದೆ ಪ್ರತ್ಯಕ್ಷವಾಗಬಹುದಾದ ಮಾನವ ಜೀವನದ ಭವ್ಯರೂಪದ ಛಾಯೆಯೊಂದನ್ನು ನಾವು ರುದ್ರನಾಟಕ

ದಲ್ಲಿ ಕಾಣುತ್ತೇವೆ. ಈ ಔನ್ನತ್ಯದ ದರ್ಶನ, ಆ ಭಾವದಲ್ಲಿ ತನ್ಮಯತೆಯೇ ರುದ್ರ ನಾಟಕದಲ್ಲಿ ನಾವು ಪಡುವ ಆನಂದಕ್ಕೆ ಮುಖ್ಯಕಾರಣ. ಅಲ್ಲಿನ ಕರುಣೆ ದೈನ್ಯವಲ್ಲ; ಅಲ್ಲಿನ ಘಟನೆಗಳನ್ನು ನೋಡಿ ಭಯವುಂಟಾದರೂ, ನಮ್ಮ ಪ್ರತೀಕವಾಗಿ ವಿಧಿಯ ಮುಂದೆ ನಿಂತಿರುವ ರುದ್ರನಾಯಕ ಧೃತಿಗೆಟ್ಟು ಕುಮಾನವರೀತಿಯಲ್ಲಿ ವರ್ತಿಸಿ ಮಾನವಕುಲಕ್ಕೇ ಕಳಂಕಬರುವಂತೆ ಮಾಡದೆ, ಮಾನವತೆಯ ಶ್ರೇಷ್ಠ ಗುಣಗಳಿಗಾಗಿ ತನ್ನನ್ನೇ ಬಲಿಯಾಗಿ ಸಮರ್ಪಿಸುವುದನ್ನು ಕಂಡು, ಅವನ ಅಂತ್ಯಕ್ಕೆ ವ್ಯಸನಪಡು ವುದಕ್ಕಿಂತ ಅವನ ಚಾರಿತ್ರದಲ್ಲಿ ನಮಗೆ ಗೌರವ, ಅಭಿಮಾನ, ಆದರಗಳುಂಟಾಗುತ್ತವೆ. ಮಾನವತೆಯ ಗೌರವವನ್ನು ರಕ್ಷಿಸಿದ್ದಕ್ಕಾಗಿ ಅವನಿಗೆ ನಾವು ಚಿರಋಣಿಗಳಾಗು ತ್ತೇವೆ. ಅಂತಹ ಮಹದ್ವ್ಯಕ್ತಿಯ ಜೀವನ ಹೋರಾಟವನ್ನು ಭಾವನೆಯ ಮೂಲಕ ನಾವೂ ನಡೆಸುವುದರಿಂದ, ಅವನ ಆತ್ಮದ ಜಯವನ್ನು ನಮ್ಮದಾಗಿ ಅನುಭವಿಸಿ ಉಲ್ಲಾಸ, ಶಾಂತಿಗಳನ್ನು ಪಡೆಯುತ್ತೇವೆ. ಇದೇ ನಾವು ರುದ್ರನಾಟಕದ ದುಃಖ ವಸ್ತುವಿನ್ಯಾಸದಲ್ಲಿ ಕಾಣುವ ಆನಂದದ ತತ್ವ.

ಹಾಗೆಂದಮಾತ್ರಕ್ಕೆ ನಾವು ರುದ್ರನಾಟಕದ ರಹಸ್ಯವನ್ನು ಬಯಲುಮಾಡಿ ದಂತಾಗುವುದಿಲ್ಲ. ಇಷ್ಟು ವಿವರಣೆಗಳ ಕೊನೆಯಲ್ಲೂ ಅದು ರಹಸ್ಯವಾಗಿಯೇ ಉಳಿಯುತ್ತದೆ; ಅದರ ಪ್ರಕಾಶಕ್ಕೆ ವಿಮರ್ಶೆಯ ದೀವಿಗೆಗಳು ಹಚ್ಚಲ್ಪಡುತ್ತವೆ. ಅದರ ಪ್ರಭಾವವನ್ನು ಸ್ವಶಕ್ತ್ಯನುಸಾರವಾಗಿ ಸ್ಥೂಲರೂಪದಲ್ಲಿ ಇಲ್ಲಿ ವಿವರಿಸಿದೆ ಎಂಬುದನ್ನು ಬಿಟ್ಟು, ವಿವರಣೆ ಪೂರ್ಣವಾಗಿದೆ, ಇನ್ನುಮುಂದೆ ಈ ವಿಷಯದಲ್ಲಿ ಹೇಳಬೇಕಾದುದಿಲ್ಲವೆಂಬ ಅಭಿಪ್ರಾಯ ಧೈರ್ಯ ಈ ಲೇಖಕನಿಗೆ ಇಲ್ಲ.

ಪ್ರಮಾಣ ಲೇಖನಾವಳಿ

1. ARISTOTLE: *Poetics* (Tr. by Butcher).
2. HUME: *Essay on Tragedy.*
3. HEGEL: *Tragedy.*
4. SCHOPENHEUR: *The World as Will and Idea.*
5. NIETZSCHE: *The Birth of Tragedy.*
6. MAETERLINCK: *The Tragical in Daily Life.*
7. W. B. YEATS: *The Tragic Theatre.*
8. BRADLEY: *Shakespearean Tragedy.*
9. ,, *Hegels Theory of Tragedy.*
10. HAIGH: *The Tragic Drama of the Greeks.*
11. C. E. VAUGHAN: *Types of Tragic Drama.*
12. J. S. SMART: *Tragedy.*
13. ABERCROMBIE: *The Idea of Great Poetry.*
14. I. A. RICHARDS: *Principles of Criticism.*

15. C. E. MONTAGERE: *Delights of Tragedy.*
16. F. L. LUCAS: *Tragedy.*
17. M. DIXON: *Tragedy.*
18. ALLARDYCE NICOLL: *The Theory of Drama.*
19. P. K. GUHA: *Tragic Relief.*
20. GILBRT MURRAY: *Aeschylus.*
21. F. D. KITTO: *Greek Tragedy.*
22. F. R. LEAVIS: *Tragedy and the 'Medium.'*
23. SUSAN B. TAUBES: *The Nature of Tragedy.*
24. D. D. RAPHAEL: *Tragedy and Religion.*
25. PANCHAPAGESA SASTRI: *The Philosophy of Aesthetic Pleasure.*
26. A. SHANKARAN: *Some Aspects of Literary Criticism in Sanskrit.*
27. M. HIRIYANNA: *Art Experience.*
28. ANANDAVARDHANA: *Dhvanyaloka.*
29. MAMMATA: *Kavyaprakasa.*
30. VISWANATHA: *Sahityadarpana.*
31. ತೀ. ನಂ. ಶ್ರೀಕಂಠಯ್ಯ: ಕಾಳಿದಾಸನಲ್ಲಿ ದುರಂತವಸ್ತುವಿನ್ಯಾಸ.
32. ,, ,, : ಭಾರತೀಯ ಕಾವ್ಯಮೀಮಾಂಸೆ.

ಎನ್. ಬಾಲಸುಬ್ರಹ್ಮಣ್ಯ.

ವಿರಹ-ಮಿಲನ

ಬರಿಯ ಕೊಡವೊಂದನ್ನು ಮುಂದಿಟ್ಟು, ಗಲ್ಲಕ್ಕೆ ಕೈಯನ್ನು ಊರಿಕೊಟ್ಟು ತರುಣಿಯೊಬ್ಬಳು ಕಂಬನಿತುಂಬಿ ಹೀಗೆ ಹೇಳಿಕೊಳ್ಳುತ್ತಿದ್ದಾಳೆ.

ಇಲ್ಲ ಇಲ್ಲ ಅವನಿಲ್ಲ ಇಲ್ಲಿ
ಈ ರಿಕ್ತಬೃಂದೆಯಲ್ಲಿ,
ಎನ್ನೆದೆಯ ಮಸಣದಲ್ಲಿ!

ಎಲ್ಲೋ ಎಲ್ಲೋ ಅವನೆಲ್ಲೋ ಎಲ್ಲೋ
ನಾ ಕಾಣೆನವನ ಇರವ,
ನಾನರಿಯೆನವನ ಬರವ!

ಎಂದೊ ಎಂದೊ ಬಹು ಹಿಂದೆ ಎಂದೊ
ಅವನಿದ್ದನಲ್ಲ ಇಲ್ಲಿ
ಶ್ರೀಮಂತ ಬೃಂದೆಯಲ್ಲಿ!

ಅಂದಿನಂತೆ ಇದೆ ಪ್ರೇಮ ಮತ್ತ ಶಿಖಿ
ಆನಂದ ಭೋಗದಲ್ಲಿ,
ಆ ನೃತ್ಯ ಯೋಗದಲ್ಲಿ!

ಆದರಯ್ಯೋ ಅವನಿಲ್ಲ ಇಲ್ಲಿ
ಈ ರಿಕ್ತ ಬೃಂದೆಯಲ್ಲಿ
ಎನ್ನೆದೆಯ ಮಸಣದಲ್ಲಿ!

ಕೊರಳ ಗಂಟೆ ದನಿ ಬಲೆಯ ಬೀಸಿ
ನೂರಾರು ಗೋವು ಕುಲವು
ಬಯಸಿವೆಯೊ ಕೊಳಲ ಊಲಿವು,
ಆದರಯ್ಯೋ . . .

ದಿವ್ಯಪ್ರೇಮದುನ್ಮತ್ತ ಗಾನವನು
ಹಾಡಿ ಹರಿವ ಯಮುನೆ
ಪ್ರೇಮ ಬಂಧ ಗಮನೆ!
ಆದರಯ್ಯೋ . . .

ಇಂದು ಬರದಿರಲಿ ಆ ಕ್ರೂರಪ್ರೇಮಿ
ಈ ತಾಯಿ ಯಮುನೆಯೊಡಲು
ಎನಗಹುದು ಮೃತ್ಯು ಮಡಿಲು
ಎನಗಹುದು ಮೃತ್ಯುಮಡಿಲು !

ಶ್ರೀಕೃಷ್ಣ:—

ಬಂದೆ ಬಂದೆ ಇಗೊ ಬಂದೆ ಬಂದೆ
ನಾ ಬಂದೆ ನಲ್ಲ ಗೆಳತೀ
ನೀನೆನ್ನ ಹರಣದೊಡತೀ
ನೀನೆನ್ನ ಹರಣದೊಡತಿ.
ಇಲ್ಲೆ ಇಲ್ಲೆ ಇಗೊ ಇಲ್ಲೆ ಇಲ್ಲೆ
ನಿನ್ನೆದೆಯ ಕುಟ್ಮದಲ್ಲಿ
ಸುಪ್ರೇಮ ಸದ್ಮದಲ್ಲಿ
ಇರುವೆನಲ್ಲ ಗೆಳತೀ
ಎನ್ನ ಹರಣದೊಡತೀ !
ಮಂದ ಗಮನೆ ಆ ಧೀರ ಯಮುನೆ
ಗಂಭೀರ ಗಾನದಲ್ಲಿ
ಆ ಪ್ರೇಮ ತಾನದಲ್ಲಿ . . .
ನೂರು ಬಂಧವನು ಅರಳಿ ಕುಣಿಯುವಾ
ಒಲುಮೆ ನವಿಲು ನಾನು
ಅದಕೆ ಮುಗ್ಧೆ ನೀನು !
ಲೋಕ ಲೋಕಗಳ ಎದೆಯನಳೆಯುವಾ
ಗೋವ ತೃಷಿತ ನೋಟ
ಎನ್ನಾತ್ಮಕಹುದು ಬೇಟ !
ನಿನ್ನ ಕಣ್ಣ ತುದಿ ಹನಿಯು ಸೃಷ್ಟಿಸಿಹ
ಇಂದ್ರಧನುವಿನಲ್ಲೆ
ಇರುವೆನಲ್ಲೆ ನಲ್ಲೆ
ಇರುವೆನಲ್ಲೆ ನಲ್ಲೆ !

ಪ್ರಭುಶಂಕರ.

ಸಂಸ್ಕೃತಿ ಮತ್ತು ಅದರ ಪುನರುದ್ಧಾರ

೫

ಈ ದಿವಸ ನಮ್ಮ ಆಚರಣೆಯಲ್ಲಿರುವ ಸಂಸ್ಕೃತಿಯ ಭವಿಷ್ಯವೇನು ? ಇಂದಿನ ಸಂಸ್ಕೃತಿಯ ಭವಿಷ್ಯವೆಂದರೆ ಈಗ ಆಚರಣೆಯಲ್ಲಿರುವ ಸಂಸ್ಕೃತಿ ಕೆಲವು ಕಾಲಾನಂತರ ಯಾವ ರೂಪದಲ್ಲಿ ಇರುತ್ತದೆ? ಈಗ ನಾವು ಕಾಣುತ್ತಿರುವ ರೂಪ ಮುಂದೆಯೂ ಸಹ ಇರುತ್ತದೆಯೇ ? ಅಥವಾ ಬೇರೊಂದು ರೂಪವನ್ನು ತಾಳುತ್ತದೆಯೆ? ಅಥವಾ ಈಗಿರುವ ಸಂಸ್ಕೃತಿಯ ಸ್ವರೂಪವನ್ನು ನಾವು ಇಷ್ಟಪಡದಿದ್ದರೆ, ಯಾವ ರೂಪಾಂತರ ಹೊಂದಿದ ಸಂಸ್ಕೃತಿಯನ್ನು ರೂಢಿಸಿಕೊಳ್ಳಲು ಇಷ್ಟವಿದೆ? ಈ ಸಮಸ್ಯೆ ಬರುತ್ತದೆ.

ಈಗ ನಮ್ಮ ಜನಜೀವನದಲ್ಲಿರುವ ಸಂಸ್ಕೃತಿಯ ಮಟ್ಟವನ್ನು ಪರಿಶೀಲಿಸಿದೆವು ; ಎಲ್ಲ ಮತ್ತು ಪ್ರಾಚೀನ ಮತ್ತು ಊಳಿಗಮಾನ್ಯದ ಸಂಸ್ಕೃತಿಯನ್ನು ಕಲುಕುವಂತೆ ಬಂಡವಾಳ ಸಂಸ್ಕೃತಿ ಬೇರೂರಿ ನಮ್ಮ ಜೀವನ ದ್ವಂದ್ವಮಯವಾಗಿರುವ ಅಂಶವನ್ನು ಕಂಡೆವು. ಈ ಸಂದಿಗ್ಧ ಜೀವನದಲ್ಲಿ ಪರಿಹರಿಸಬೇಕಾಗಿರುವ ಅನೇಕ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಸಮಸ್ಯೆಗಳು ತಲೆದೋರಿ ಆಧುನಿಕ ಉತ್ಪಾದನಾ ಸಾಧನೆಗಳು ಮತ್ತು ವಿಜ್ಞಾನದ ಮೂಲಕ ಸಮಸ್ಯೆಗಳ ಪರಿಹಾರ ಅಡಗಿರುವುದು ವ್ಯಕ್ತವಾಗಿ ಅವುಗಳನ್ನು ಹೆಚ್ಚು ಹೆಚ್ಚು ಪ್ರಮಾಣದಲ್ಲಿ ನಾವು ಉಪಯೋಗಕ್ಕೆ ತರುತ್ತಲಿದ್ದೇವೆ. ಪ್ರಜಾಸತ್ತೆಯ ಸಂವಿಧಾನವನ್ನು ರಚಿಸಿಕೊಂಡು ಪ್ರತಿಯೊಬ್ಬ ಭಾರತೀಯನಿಗೂ ಸಮಾನ ಹಕ್ಕುಗಳನ್ನು ಘೋಷಿಸಿ ಆರ್ಥಿಕವಾಗಿ, ಸಾಮಾಜಿಕ ವಾಗಿ, ಸಮಾನ ಅವಕಾಶಗಳನ್ನು ಕಲ್ಪಿಸಿಕೊಡಲು ಕಂಕಣಬದ್ಧರಾಗಿದ್ದೇವೆ. ಬೇರೊಂದು ಮಾತುಗಳಲ್ಲಿ ಇದನ್ನು ಹೇಳುವುದಾದರೆ, ಆಧುನಿಕ ಉತ್ಪಾದನಾ ಸಾಧನ ಗಳು ಬಂಡವಾಳ ಉತ್ಪಾದನಾ ಕ್ರಮ ಮತ್ತು ವಿಜ್ಞಾನ ನಮ್ಮ ಜನಜೀವನದಲ್ಲಿ ಪ್ರವೇಶಿಸಿ ಶತಮಾನಗಳಿಂದ ಆಚರಣೆಯಲ್ಲಿರುವ ಪ್ರಾಚೀನ ಮತ್ತು ಊಳಿಗಮಾನ್ಯ ಮಟ್ಟದ ಜನಜೀವನವನ್ನು ಮಾರ್ಪಾಡುಮಾಡುತ್ತಿವೆ. ಬಂಡವಾಳ ಆರ್ಥಿಕ ವ್ಯವಸ್ಥೆ ಪಾಶ್ಚಾತ್ಯ ದೇಶಗಳಲ್ಲಿ ಮತ್ತು ನಮ್ಮ ದೇಶದಲ್ಲಿ ಉಂಟುಮಾಡಿರುವ ದುಃಸ್ಥಿತಿಯನ್ನು ಕಂಡು ಹೆದರಿ ಅಂತಹ ವ್ಯವಸ್ಥೆಯನ್ನು ದಮನಮಾಡಬೇಕೆಂಬ ಅಭಿಲಾಷೆ ಇದೆ. ಆದರೆ ಆಧುನಿಕ ಉತ್ಪಾದನಾಸಾಧನಗಳ ಉಪಯೋಗವನ್ನು ಬಿಟ್ಟುಬಿಡಲು ಯಾರಿಗೂ ಇಷ್ಟವಿಲ್ಲ. ಬಂಡವಾಳ ಮಟ್ಟದ ಸಮಾಜವಾದೀ ಮಟ್ಟದ ದೇಶಗಳು

ಆಧುನಿಕ ಉಪಕರಣಗಳ ಸಹಾಯ ಪಡೆದು ತಮ್ಮ ಅನೇಕ ಆರ್ಥಿಕಸಮಸ್ಯೆಗಳನ್ನೂ ಪ್ರಕೃತಿ ಮತ್ತು ಸಮಾಜಜನ್ಯ ನ್ಯೂನತೆಗಳನ್ನೂ ಪರಿಹರಿಸಿಕೊಂಡು ಪ್ರಗತಿ ಸಾಧಿಸಿರುವುದರ ಮೇಲ್ಪಂಕ್ತಿ ಎಲ್ಲರ ಮನಸ್ಸಿನಲ್ಲೂ ನಾಟಿದೆ. ಬಂಡವಾಳ ಆರ್ಥಿಕ ವ್ಯವಸ್ಥೆ ಮತ್ತು ಉತ್ಪಾದನಾಕ್ರಮವನ್ನು ತ್ಯಜಿಸಿ ಆಧುನಿಕ ವಿಜ್ಞಾನದ ಉತ್ಪಾದನಾ ಸಾಧನಗಳನ್ನು ಉಪಯೋಗಿಸುವುದು ಹೇಗೆಂಬ ಸಮಸ್ಯೆ ಬಾಧಿಸುತ್ತಿದೆ. ರಾಜ್ಯಾಂಗ ಎಲ್ಲ ಪೌರರಿಗೂ ಸಮಾನ ಅವಕಾಶಗಳನ್ನು ಕಲ್ಪಿಸಿಕೊಟ್ಟು ನಾಗರಿಕ ಜೀವನವನ್ನು ನಡೆಸುವ ಭರವಸೆ ಇತ್ತಿದೆ. ಮೇಲಾಗಿ ಮತ್ತು ಎಲ್ಲದಕ್ಕಿಂತಲೂ ಮುಖ್ಯವಾಗಿ ನಮ್ಮ ಸಮಸ್ಯೆಗಳ ಪರಿಹಾರ, ಮತ್ತು ಅವುಗಳನ್ನು ಪರಿಹರಿಸಲು ಅನುಸರಿಸಬೇಕಾಗಿರುವ ಮಾರ್ಗ 'ಭಾರತೀಯ ಸಂಸ್ಕೃತಿ'ಗೆ ಅನುಗುಣವಾಗಿ, 'ಭಾರತೀಯ ಸಂಸ್ಕೃತಿ'ಗೆ ಧಕ್ಕೆ ತರದಿರುವ ರೀತಿಯಲ್ಲಿರಬೇಕು; ಅಥವಾ, ಧಕ್ಕೆ ತರುವ ಹಾಗಿದ್ದರೆ 'ನಮ್ಮ ಸಂಸ್ಕೃತಿ'ಯ ಪುನರುದ್ಧಾರದ ಮೂಲಕ ಮತ್ತು ಪ್ರಸಾರದ ಮೂಲಕವೇ ಈ ಸಮಸ್ಯೆಗಳು ಪರಿಹಾರವಾಗಬೇಕು ಅನ್ನುವ ವಾದವೂ ಇದೆ.

ಸಮಸ್ಯೆಗಳ ಪರಿಹಾರಕ್ಕೆ ಮಾರ್ಗವನ್ನು ಶೋಧಿಸೋಣ. ಹೀಗೆ ಶೋಧಿಸಿದ ಮಾರ್ಗ 'ನಮ್ಮ ಸಂಸ್ಕೃತಿ'ಗೆ ಅನುಗುಣವಾಗಿಲ್ಲದಿದ್ದ ಪಕ್ಷದಲ್ಲಿ ಆ ಮಾರ್ಗವನ್ನು ಬಿಟ್ಟುಬಿಡಬೇಕಾಗುತ್ತದೆ. ನಾಳೆ ಬರುವ ಸಂಸ್ಕೃತಿ ಇಂದಿನ ಸಂಸ್ಕೃತಿಯ ಬೆಳವಣಿಗೆ ಎಂದರೆ ಇಂದಿನ ಸಂಸ್ಕೃತಿ ಬಂಡವಾಳ ಆರ್ಥಿಕ ವ್ಯವಸ್ಥೆಯ ಮೇಲೆ ನಿಂತಿರುವುದರಿಂದ[1] ಮುಂದೆ ರೂಪಗೊಳ್ಳುವ ಸಂಸ್ಕೃತಿ ಬಂಡವಾಳಮಟ್ಟದ ಸಂಸ್ಕೃತಿಯಾಗುತ್ತದೆ. ಪಾಶ್ಚಾತ್ಯ ಮಾರ್ಗವನ್ನು ಅನುಸರಿಸಿದಂತಾಗುತ್ತದೆ. ಬಂಡವಾಳ ಆರ್ಥಿಕ ವ್ಯವಸ್ಥೆ ಉಂಟುಮಾಡುವ ಪರಿಣಾಮಗಳು ಮತ್ತು ಅದು ಅನುಸರಿಸುವ ಲಾಭಮಾರ್ಗ ವ್ಯಕ್ತಿವಿಕಾಸಕ್ಕೆ ಮತ್ತು 'ನಮ್ಮ ಸಂಸ್ಕೃತಿ'ಗೆ ಧಕ್ಕೆ ತರುವುದರಿಂದ ಅದನ್ನು ಬಿಟ್ಟುಬಿಡಬೇಕಾಗುತ್ತದೆ.

ನಮ್ಮ ಇಂದಿನ ಸಂಸ್ಕೃತಿಯಿಂದ ಬಂಡವಾಳ ಆರ್ಥಿಕವ್ಯವಸ್ಥೆಯನ್ನು ಬಿಟ್ಟುಬಿಟ್ಟು, ಆಧುನಿಕ ಉತ್ಪಾದನಾಸಾಧನಗಳು, ವಿಜ್ಞಾನ ಇವುಗಳನ್ನು ಮಾತ್ರ (ಏಕೆಂದರೆ ಪಾಶ್ಚಾತ್ಯ ದೇಶಗಳಲ್ಲಿ ಜನಿಸಿದ ವಸ್ತುಗಳಾದ ಮಾತ್ರಕ್ಕೆ ದ್ವೇಷಮಾಡುವುದು ಬೇಡ; ಒಳ್ಳೆಯದನ್ನು ಎಲ್ಲಿಯದಾದರೂ ತೆಗೆದುಕೊಳ್ಳೋಣವೆಂಬ ವಾದವಿರುವುದರಿಂದ) ಉಪಯೋಗಿಸಿಕೊಂಡು ನಾಳೆಯ ಸಂಸ್ಕೃತಿ ಈ ಆಧಾರದ ಮೇಲೆ ರೂಪಗೊಳ್ಳುವುದಕ್ಕೆ ಸಾಧ್ಯವಿಲ್ಲವೆ? ಸಾಧ್ಯವಿದೆ. ಆದರೆ ಇಲ್ಲಿ ಇನ್ನೊಂದು ತೊಡಕು

1 ಸಂಪೂರ್ಣವಾಗಿ ಬಂಡವಾಳವ್ಯವಸ್ಥೆ ಭಾರತದಲ್ಲಿ ಇಲ್ಲ. ಪ್ರಾಚೀನ ಮತ್ತು ಊಳಿಗಮಾನ್ಯದ ಆರ್ಥಿಕ ಮತ್ತು ಸಾಮಾಜಿಕ ಲಕ್ಷಣಗಳು ಉಳಿದಿವೆ.

ಬರುತ್ತದೆ. ಆಧುನಿಕ ಉತ್ಪಾದನಾಸಾಧನಗಳ ಮತ್ತು ವಿಜ್ಞಾನದ ಉಪಯೋಗ ಯಾವ ಆರ್ಥಿಕ ಆಧಾರದ ಮೇಲೆ ಆಗಬೇಕೆಂಬ ಪ್ರಶ್ನೆ ಬರುತ್ತದೆ. ಬಂಡವಾಳ ವ್ಯವಸ್ಥೆಯ ಮೇಲೇ ಅಥವಾ ಅವುಗಳ ಉಪಯೋಗವನ್ನು ಸಾಮೂಹಿಕವಾಗಿ ಸಮಾಜ ಉಪಯೋಗಿಸತಕ್ಕದ್ದೇ ? ಬಂಡವಾಳವ್ಯವಸ್ಥೆಯನ್ನು ಕೈಬಿಟ್ಟಿದ್ದೇವೆ. ಸಾಮೂಹಿಕವಾಗಿ ಸಮಾಜ ಉಪಯೋಗಿಸುವುದೆಂದು ಹೇಳಿದರೆ ಸಮಾಜವಾದದ ಆರ್ಥಿಕವ್ಯವಸ್ಥೆ ಬರಬೇಕಾಗುತ್ತದೆ! ಇದು ಪಾಶ್ಚಾತ್ಯದಲ್ಲಿ ಪಾಶ್ಚಾತ್ಯ, ನಿರೀಶ್ವರ ವಾದಿಯಾದ ವ್ಯವಸ್ಥೆ. ವ್ಯಕ್ತಿಗಳ ಸ್ವಾತಂತ್ರ್ಯವನ್ನೆ ಹಾಳುಮಾಡುವ ವ್ಯವಸ್ಥೆ. ಇದು 'ನಮ್ಮ ಸಂಸ್ಕೃತಿ' ಖಂಡಿತವಾಗಿಯೂ ಅಲ್ಲ! ವ್ಯಕ್ತಿಗಳು ಸ್ವಾತಂತ್ರ್ಯ ಹೊಂದಿರುವ ಹಾಗೆ ಆಧುನಿಕ ಉತ್ಪಾದನಾಸಾಧನಗಳ ಮತ್ತು ವಿಜ್ಞಾನದ ಉಪಯೋಗವನ್ನು ಹೊಂದುವುದಕ್ಕಾಗುವುದಿಲ್ಲವೆ? ವ್ಯಕ್ತಿಗಳು ಸ್ವಾತಂತ್ರ್ಯ ಹೊಂದಿರುವ ಹಾಗೆ ಖಾಸಗೀ ಸ್ವಾಮ್ಯ ಮತ್ತು ಖಾಸಗೀ ಉದ್ಯಮದ ಆರ್ಥಿಕವ್ಯವಸ್ಥೆ ಎಂದರೆ ಇದಕ್ಕೂ ಬಂಡವಾಳ ವ್ಯವಸ್ಥೆಗೂ ಇರುವವ್ಯತ್ಯಾಸವೇನು? ಬಂಡವಾಳ ಆರ್ಥಿಕವ್ಯವಸ್ಥೆಯ ತಿರುಳು ಲಾಭಾ ಸಕ್ತರಾದ ವ್ಯಕ್ತಿಗಳ ಸ್ವಂತ ಉದ್ಯಮಗಳ, ಪೈಪೋಟಿಯ ಮತ್ತು ಖಾಸಗೀ ಸ್ವಾಮ್ಯದ ಆರ್ಥಿಕವ್ಯವಸ್ಥೆ. ಬಳಸಿ, ಹಾರಾಡಿ, ನಾವು ಯಾವುದನ್ನು ಬಿಟ್ಟುಬಿಡಬೇಕೆಂದಿದ್ದೆವೋ ಅದಕ್ಕೇ ಪುನಃ ಬರುತ್ತಿದ್ದೇವೆ. ಇದೂ 'ನಮ್ಮ ಸಂಸ್ಕೃತಿ'ಯಲ್ಲ.

ಬಂಡವಾಳ ಆರ್ಥಿಕವ್ಯವಸ್ಥೆ ಬೇಡ. ಸಮಾಜವಾದ ಆರ್ಥಿಕವ್ಯವಸ್ಥೆ ಬೇಡ. ನಮ್ಮದೇ ಆಗಿರುವಂತೆ ಇವು ಎರಡರಲ್ಲೂ ಇರುವ ಉತ್ತಮ ಅಂಶಗಳನ್ನು ತೆಗೆದು ಕೊಂಡು (ಬಂಡವಾಳ ಆರ್ಥಿಕವ್ಯವಸ್ಥೆಯಿಂದ ವ್ಯಕ್ತಿ ಸ್ವಾತಂತ್ರ್ಯ, ವ್ಯಕ್ತಿ ಉದ್ಯಮ ಮತ್ತು ಖಾಸಗೀ ಸ್ವಾಮ್ಯ, ಸಮಾಜವಾದೀ ಆರ್ಥಿಕವ್ಯವಸ್ಥೆಯಿಂದ ಬಂಡವಾಳ ಆರ್ಥಿಕವ್ಯವಸ್ಥೆಯ ಕೆಟ್ಟ ಚಾಲುಗಳಾದ ಲಾಭದಾಸೆ, ಪೈಪೋಟಿ, ಬ್ಯಾಂಕ್‌ರಪ್ಟ್ಸಿ ಮತ್ತು ನಿರುದ್ಯೋಗ, ಇವುಗಳನ್ನು ತಡೆಗಟ್ಟುವ ಹಾಗೆ ಸಮಾಜದ ಹಿಡಿತ) ಹತೋಟಿಯ ಆರ್ಥಿಕವ್ಯವಸ್ಥೆ (Controlled Economy) ಯನ್ನು ರಚಿಸಿಕೊಳ್ಳುವ ನೀತಿಯನ್ನು ಅನುಸರಿಸಿದರೆ ಇದೂ ನಮ್ಮ ಸಂಸ್ಕೃತಿಗೆ ಅನುಗುಣವಾಗಿಲ್ಲ. ಬಂಡವಾಳ ಆರ್ಥಿಕ ವ್ಯವಸ್ಥೆ ಸಮಾಜದ ಅಡಿಪಾಯವಾಗಿ ಉಳಿಯುತ್ತದೆ. ಪಾಶ್ಚಾತ್ಯ ದೇಶಗಳು ಈ ನೀತಿಯನ್ನು ಅನುಸರಿಸುತ್ತಿವೆ; ಈ ನೀತಿಯಿಂದ ಅವುಗಳ ಸಮಸ್ಯೆಗಳು ಪರಿಹಾರ ವಾಗಿಲ್ಲ. ಪಾಶ್ಚಾತ್ಯ ದೇಶಗಳು ಅನುಸರಿಸುತ್ತಿರುವ ನೀತಿ ಮೇಲೆ ಮತ್ತು ಬಂಡವಾಳ ಆರ್ಥಿಕವ್ಯವಸ್ಥೆ ಅಡಿಪಾಯವಾಗಿ ಉಳಿಯುವುದರಿಂದ ಆ ಆಧಾರದ ಮೇಲೆ ನಮ್ಮ ಸಂಸ್ಕೃತಿಯನ್ನು ರೂಪಿಸುವುದಾದರೆ ನಮ್ಮ ಸಂಸ್ಕೃತಿಯ ವೈಶಿಷ್ಟ್ಯ ಏನಾಯಿತು ? ನಮ್ಮದೇ ಆದ ಆರ್ಥಿಕ ಮತ್ತು ರಾಜಕೀಯವ್ಯವಸ್ಥೆ ಎಲ್ಲಿ ಬಂತು ?

ಯಾವ ಮಾರ್ಗವನ್ನು ಅನುಸರಿಸಿದರೂ 'ಪಾಶ್ಚಾತ್ಯ' ಮಾರ್ಗಕ್ಕೆ ಹೋಗುತ್ತಲಿದ್ದೇವೆ. ನಿರುತ್ಸಾಹರಾಗಬೇಕಾಗಿಲ್ಲ. ನಮ್ಮ ಸಂಸ್ಕೃತಿಯಾದ ಪ್ರಾಚೀನ ಸನಾತನ ಆರ್ಯಸಂಸ್ಕೃತಿಯನ್ನು ಪುನರುದ್ಧಾರಮಾಡುವುದಾದರೆ ಮತ್ತು ಪ್ರಸಾರಮಾಡುವುದಾದರೆ ನಮ್ಮದೇ ಆದ ಭಾರತೀಯ ಸಂಸ್ಕೃತಿ ಪುನಃ ರೂಪಗೊಂಡು ನಮ್ಮ ಸಮಸ್ಯೆಗಳೆಲ್ಲವೂ ಪರಿಹಾರವಾಗುವುವು[1].

ಈ ಸನಾತನ ಆರ್ಯಸಂಸ್ಕೃತಿಯ ಪುನರುದ್ಧಾರ ಮತ್ತು ಪ್ರಸಾರವೆಂದರೆ, ನಮ್ಮ ಇಂದಿನ ಪಾಶ್ಚಾತ್ಯ—ವ್ಯಕ್ತಿತ್ವವನ್ನು ಹಾಳುಮಾಡುತ್ತಿರುವ, ಅನೀತಿ, ಅಧರ್ಮಕ್ಕೆ ತೌರುಮನೆಯಾದ ನಿಸ್ತೇಜ, ಭೂತಪ್ರವೃತ್ತಿಯ ಸಂಸ್ಕೃತಿಯನ್ನು ಬಿಟ್ಟು, ನಮ್ಮ ಜೀವನದಲ್ಲಿ ಸನಾತನ ಆರ್ಯಸಂಸ್ಕೃತಿಯನ್ನು ಆಚರಣೆಗೆ ತರುವುದೆಂದರ್ಥವಾಗುತ್ತದೆ. ಅಂದರೆ ಆ ಕಾಲದ[2] ಆರ್ಥಿಕ, ಸಾಮಾಜಿಕ, ರಾಜಕೀಯ, ನೈತಿಕವ್ಯವಸ್ಥೆ ಮತ್ತು ಸಂಬಂಧಗಳನ್ನು, ಉತ್ಪಾದನಾಸಾಧನಗಳನ್ನು, ಉತ್ಪಾದನಾಕ್ರಮವನ್ನು, ಸಾಹಿತ್ಯ, ಕಲೆ, ಪ್ರಕೃತಿವಿಜ್ಞಾನ, ಈ ಕಾಲದ ಭಾವನೆ, ತತ್ವ, ಇತ್ಯಾದಿಗಳನ್ನು ಆಚರಣೆಗೆ ತರುವುದು. ಇದು ಸಾಧ್ಯವೇ? ಈ ಕಾಲದ ಜನಜೀವನ ನಮಗೆ ಗೊತ್ತಿರುವ ವಿಷಯ.

ಸಂಸ್ಕೃತಿಯ ಪುನರುದ್ಧಾರ ಮತ್ತು ಪ್ರಸಾರವೆಂದರೆ ಪ್ರಾಚೀನ ಮಟ್ಟದ ಸಂಸ್ಕೃತಿಯ ಆರ್ಥಿಕ ಸಾಮಾಜಿಕ ನೈತಿಕವ್ಯವಸ್ಥೆ ಮತ್ತು ಸಂಬಂಧಗಳನ್ನು ಪುನಃ ಆಚರಣೆಗೆ ತಂದು, ಆಧುನಿಕ ಉತ್ಪಾದನಾಸಾಧನಗಳನ್ನು ವಿಜ್ಞಾನ ಮತ್ತು ಇವುಗಳು ತಂದುಕೊಟ್ಟಿರುವ ಸೌಕರ್ಯಗಳನ್ನು ಬಿಟ್ಟು, ಪ್ರಾಚೀನಮಟ್ಟಕ್ಕೆ ಕೊಂಡೊಯ್ಯುವ ಯತ್ನವೆಂದು ಅಪಾರ್ಥ ಮಾಡಬಾರದು; ಪುನರುದ್ಧಾರವೆಂದರೆ, ಪ್ರಸಾರವೆಂದರೆ ಈ ಪ್ರಾಚೀನ ಸನಾತನ ಆರ್ಯಸಂಸ್ಕೃತಿಯಲ್ಲಿ ಕಂಡುಬರುವ ದೈವಭಕ್ತಿ, ಆಧ್ಯಾತ್ಮಿಕ ಮಾರ್ಗ, ಧರ್ಮ, ಸತ್ಯ, ಅಹಿಂಸೆ ಇತ್ಯಾದಿಗಳನ್ನು ತಂದು ನೈತಿಕವಾಗಿ ಧಾರ್ಮಿಕವಾಗಿ ಕುಗ್ಗಿರುವ ಕಾಲದಲ್ಲಿ ಸನಾತನ ತತ್ವಗಳನ್ನು ನೀತಿಯನ್ನು ಪ್ರಚಾರಮಾಡು

---

1 ಇದರಿಂದ ಇನ್ನೊಂದು ಅಂಶ ಹೊರಬೀಳುತ್ತದೆ. ಈ 'ನಮ್ಮ ಸಂಸ್ಕೃತಿ' ಈಗ ಆಚರಣೆಯಲ್ಲಿದ್ದಿದ್ದರೆ ಪುನರುದ್ಧಾರದ ಮತ್ತು ಪ್ರಸಾರದ ಪ್ರಶ್ನೆಯೇ ಬರುತ್ತಿರಲಿಲ್ಲ. ಈ ಸಂಸ್ಕೃತಿ ನಮ್ಮ ಆಚರಣೆಯಲ್ಲಿ, ಇಂದಿನ ಸಂಸ್ಕೃತಿಯಲ್ಲಿ, ಇಲ್ಲವೆಂದು ಅರ್ಥವಾಗುತ್ತದೆ. ಈ ಆಚರಣೆ ಎಂದಿನಿಂದ ಭಾರತೀಯರು ಬಿಟ್ಟರು? ಬಹುಶಃ ಪ್ರಾಚೀನ ಹಿಂದೂ ಸಾಮ್ರಾಜ್ಯಗಳು ಕಣ್ಮರೆಯಾದ ಕಾಲದಿಂದ! ಅಥವಾ ಅದಕ್ಕೂ ಹಿಂದಿನಿಂದಲೆ?

2 ಈ ಕಾಲ ಆರ್ಯರು ಸಿಂಧೂನದಿಯ ಮೈದಾನದಲ್ಲಿ ನೆಲೆಸಿ, ಕ್ರಮೇಣ ಗಂಗಾನದಿಯ ಮೈದಾನದಲ್ಲಿ ನಾಗರಿಕತೆಯನ್ನು ಸ್ಥಾಪಿಸಿದ ಕಾಲವಾಗುತ್ತದೆ. ಇದರೊಡನೆ ಹಿಂದೂ ಸಾಮ್ರಾಜ್ಯಗಳ ಕಾಲವೂ ಸೇರುತ್ತದೆ. ಈ ಕಾಲವನ್ನು ಪ್ರಾಚೀನಮಟ್ಟದ ಸಂಸ್ಕೃತಿ ಕಾಲವೆಂದು ಹಿಂದೆ ನೋಡಿದೆವು.

ವುದರಿಂದ ನಾವು ಏಳಿಗೆ ಹೊಂದಲು ಸಾಧ್ಯವಾಗುತ್ತದೆ; ಅರ್ಥಸಂಗ್ರಹಣೆಯೇ ಜೀವನದ ಗುರಿಯಲ್ಲ; ಆತ್ಮೋನ್ನತಿಯನ್ನು ಹೊಂದುವುದು ಮುಖ್ಯಗುರಿಯಾಗಿರ ಬೇಕು; ಇದೇ ಇಹದಲ್ಲಿ ಸುಖವನ್ನೂ ಪರಲೋಕದಲ್ಲಿ ಸದ್ಗತಿ, ಮೋಕ್ಷವನ್ನೂ ಕೊಡುವ ಉಸಿರಾಗಿದೆ; ಸನಾತನ ಆರ್ಯಸಂಸ್ಕೃತಿ ತೋರಿಸಿಕೊಟ್ಟಿರುವ ಮಾರ್ಗ ಸರ್ವಕಾಲದಲ್ಲಿಯೂ ಅನುಸರಿಸಲು ಯೋಗ್ಯವಾದವು ಎಂಬ ವಾದವಾಗುತ್ತದೆ.

ಈ ಅರ್ಥದಲ್ಲಿ ಸಂಸ್ಕೃತಿಯ ಪುನರುದ್ಧಾರ ಮತ್ತು ಪ್ರಸಾರವೆಂದರೆ ನೀತಿಬೋಧನೆ ಯಾಯಿತು. ನೀತಿಬೋಧನೆ ನಮ್ಮ ಸಮಸ್ಯೆಗಳಿಗೆ ಸೂಕ್ತ ಉತ್ತರಗಳನ್ನು, ಮಾರ್ಗ ವನ್ನು ತೋರಿಸಿಕೊಡುತ್ತದೆಯೇ? ಸನಾತನ ಸಂಸ್ಕೃತಿಗೆ ಅನುಗುಣವಾಗಿ ಅದಕ್ಕೆ ಧಕ್ಕೆ ತರದ ರೀತಿಯಲ್ಲಿ ಯಾವ ಆರ್ಥಿಕವ್ಯವಸ್ಥೆ ಮತ್ತು ನೀತಿಯನ್ನು ಅನುಸರಿ ಸೋಣ? ಪ್ರಾಚೀನಕಾಲದ ಆರ್ಥಿಕ ವ್ಯವಸ್ಥೆ, ಉತ್ಪಾದನಾಕ್ರಮ ಮತ್ತು ಉತ್ಪಾದನಾಸಾಧನಗಳಲ್ಲಿ ನಮ್ಮ ಸಮಸ್ಯೆಗಳಿಗೆ ಉತ್ತರ ಸಿಗುವುದಿಲ್ಲ. ಸಿಗುವ ಉತ್ತರವನ್ನು ಆಚರಣೆಗೆ ತರುವುದಾದರೆ ನಾವು ಗಳಿಸಿರುವ ವಿಜ್ಞಾನ, ವಿದ್ಯುಚ್ಛಕ್ತಿ, ಕೈಗಾರಿಕೆಗಳು, ಯಂತ್ರಗಳು, ಏರೋಪ್ಲೇನ್, ಹಡಗು, ಮುದ್ರಣಾಲಯಗಳು, ರೇಡಿಯೋ, ಇತ್ಯಾದಿಗಳೆಲ್ಲವನ್ನು ನಾಶಮಾಡಿ ಪಶುಪಾಲನೆಯನ್ನು, ಬೇಟೆಯನ್ನು ಅಥವ ಕೃಷಿಯನ್ನು ಮುಖ್ಯವೃತ್ತಿಯನ್ನಾಗಿ ಮಾಡಿಕೊಂಡು ವರ್ಣಾಶ್ರಮ ಧರ್ಮಕ್ಕೆ ಹೋಗಬೇಕಾಗುತ್ತದೆ. ಕೊಂಬು, ಕಹಳೆ, ರಾಜ, ವಂದಿಮಾಗಧರು ರಾಜಪುರೋಹಿತರು, ಬಂಡಿ ಅಥವಾ ರಥ, ಚರಕ, ಬಿಲ್ಲು, ಬಾಣ, ಬತ್ತಳಿಕೆ ಇತ್ಯಾದಿ ಗಳೆಲ್ಲವೂ ಬರುತ್ತವೆ. ಆಧುನಿಕ ಉತ್ಪಾದನಾಸಾಧನಗಳು, ವಿಜ್ಞಾನ ಮತ್ತು ವೈಜ್ಞಾನಿಕದೃಷ್ಟಿ ಇವುಗಳನ್ನು ಬಿಟ್ಟುಬಿಡಲು ನಾವು ಸಿದ್ಧರಿಲ್ಲ.

ಸನಾತನ ಸಂಸ್ಕೃತಿಯಲ್ಲಿ ಅಡಗಿರುವ ನೀತಿ, ಧರ್ಮಚಿಂತನೆಯ ಪುನರುದ್ಧಾರ ಮತ್ತು ಪ್ರಸಾರ ಈಗ ಮಾಡಬೇಕಾಗಿರುವ ಪ್ರಮೇಯವೇ ಇಲ್ಲ. ಇದರ ಪ್ರಸಾರ ಶತಮಾನಗಳಿಂದ ಭಾರತೀಯರ ಮೇಲೆ ಆಗುತ್ತಲೇ ಇದೆ. ಆದರೂ ಸಹ ಅಧರ್ಮ, ಅಶಾಂತಿ, ಇತ್ಯಾದಿ ಜನಜೀವನದಲ್ಲಿ ಕಂಡುಬರುವುದಾದರೆ ಮೂಲವಾಗಿ ಬೇರೆ ಕಾರಣಗಳಿದ್ದು, ಭಾರತೀಯರು ಸನಾತನ ಸಂಸ್ಕೃತಿಯ ಧರ್ಮವನ್ನು ಆಚರಣೆ ಯಲ್ಲಿ ತರುವುದಕ್ಕೆ ಬೇರೆ ಕಾರಣಗಳು ಅಡ್ಡಿ ಬಂದಿರಬೇಕು. ಈ ಅಡ್ಡಿಗಳನ್ನು ಪರೀಕ್ಷೆಮಾಡುವುದಾದರೆ ಸಮಾಜಜನ್ಯ ನ್ಯೂನತೆಗಳು ವ್ಯಕ್ತಿಗಳನ್ನು ಅಮಾನುಷ ರನ್ನಾಗಿ ಮಾಡುತ್ತಿವೆ. ಬೇಕಾಗಿರುವುದು ಸಮಾಜ ವಿಜ್ಞಾನದ ಅರಿವು, ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಜ್ಞಾನದ ಪ್ರಸಾರ. ಮಾನವರು ತಮ್ಮ ಸಂಬಂಧಗಳಲ್ಲಿ, ತಮ್ಮ ಆರ್ಥಿಕ, ಸಾಮಾಜಿಕ, ಮತ್ತು ರಾಜಕೀಯ ವ್ಯವಸ್ಥೆ

ಗಳಲ್ಲಿ ಜನಿಸಿರುವ, ಜನಿಸುತ್ತಿರುವ ನ್ಯೂನತೆಗಳನ್ನು ಅರಿವು ಮಾಡಿಕೊಂಡು, ಆರ್ಥಿಕ, ಸಾಮಾಜಿಕ, ರಾಜಕೀಯ ವ್ಯವಸ್ಥೆ ಮತ್ತು ಸಂಬಂಧಗಳ ಮೇಲೆ ಹತೋಟಿಯನ್ನು ಹೊಂದದಂತೆ ಅವರ ಗಮನವನ್ನು ಸೆಳೆಯುವುದಾಗಿದೆ. ಇಲ್ಲವಾದರೆ, ಅರೆಯ ಬಂಡೆಯ ಮೇಲೆ ಕಾಳನ್ನು ಬಿತ್ತಿ ವ್ಯವಸಾಯಮಾಡಿದಂತಾಗುತ್ತದೆ. ಈ ರೀತಿಯ ಪುನರುದ್ಧಾರದ ಮತ್ತು ಪ್ರಸಾರದ ಯೋಜನೆಗಳು ಬರಲು ಕಾರಣವೇನು? ಬಂಡವಾಳಪದ್ಧತಿಯ ಮೇಲೆ ನಿಂತಿರುವ ಆರ್ಥಿಕ ಮತ್ತು ಸಾಮಾಜಿಕ ವ್ಯವಸ್ಥೆ ಮತ್ತು ಸಂಬಂಧಗಳು ಅನೀತಿಗೆ, ಅಸತ್ಯಕ್ಕೆ, ವ್ಯಕ್ತಿಗಳನ್ನು ನೂಕಿರುವಾಗ ಅವರನ್ನು ಉದ್ಧಾರಮಾಡುವ ಸಲುವಾಗಿ ಸಂಸ್ಕೃತಿ ಪುನರುದ್ಧಾರ ಮತ್ತು ಪ್ರಚಾರಕ್ಕೆ ಅವಕಾಶಕೊಟ್ಟಿದ್ದರೆ, ದಾಸ್ಯದಿಂದ ಬಿಡುಗಡೆ ಹೊಂದಿರುವಾಗ ಪಾಶ್ಚಾತ್ಯ ಸಂಸ್ಕೃತಿಯ ಸಹವಾಸದಿಂದ ಕೆಟ್ಟೆವೆಂದು ಭಾವಿಸಿ ಅದನ್ನು ತೊಡೆಯಲು ಮತ್ತು ಸನಾತನ ಸಂಸ್ಕೃತಿಗೆ ಅನುಗುಣವಾಗಿರುವ ಸಂಸ್ಕೃತಿಯನ್ನು ರಚಿಸಿಕೊಳ್ಳುವ ಯತ್ನ ಸಹಜವಾಗಿದೆ. ಪಾಶ್ಚಾತ್ಯರಂತೆ ಅನೇಕ ರಂಗಗಳಲ್ಲಿ ಮುಂದುವರಿದಿಲ್ಲವೆಂಬ ಅಳುಕು ನಮ್ಮ ಮನಸ್ಸನ್ನು ಆವರಿಸಿದೆ. ಆದಷ್ಟು ಶೀಘ್ರವಾಗಿ ಮುಂದೋಟವನ್ನು ಸಾಧಿಸುವ ಬದಲು ನಮ್ಮ ಸಂಸ್ಕೃತಿಯಲ್ಲಿ ಪಾಶ್ಚಾತ್ಯ ಸಂಸ್ಕೃತಿಯಲ್ಲಿ ಕಂಡುಬರುವ ಆಧುನಿಕ ಉತ್ಪಾದನಾ ಸಾಧನಗಳು, ವಿಜ್ಞಾನ, ಇತ್ಯಾದಿ ಎಲ್ಲವೂ ಇವೆ ಎಂದು ವಿವರಿಸಿ ತೇಲಿಸಿಬಿಡುವ (Rationalizing) ಮನೋವೃತ್ತಿ ಹುಟ್ಟಿ, ನಾವು ಯಾವುದರಲ್ಲೂ ಹಿಂದೆ ಬಿದ್ದಿಲ್ಲವೆಂದು ವಂಚಿಸಿಕೊಂಡು ಎಲ್ಲ ಸಮಸ್ಯೆಗಳಿಗೂ ನಮ್ಮ ಸಂಸ್ಕೃತಿಯಾದ ಸನಾತನ ಸಂಸ್ಕೃತಿಯಲ್ಲಿ ಉತ್ತರವನ್ನು ಕಾಣುವುದಕ್ಕೆ ಹೊರಡುವುದು ದಾಸ್ಯದಿಂದ ಬಿಡುಗಡೆ ಹೊಂದಿರುವಾಗ ಸ್ವಾಭಾವಿಕವಾಗುತ್ತದೆ.

ಇವುಗಳಲ್ಲದೆ, ಸದ್ಯದ ಪರಿಸ್ಥಿತಿಗಳು ಸನಾತನ ಸಂಸ್ಕೃತಿಯ ಪುನರುದ್ಧಾರಕ್ಕೆ ಪ್ರಚೋದನೆ ಕೊಡಲು ಸಾಧಕವಾಗಿವೆ. ಇಂದಿನ ಜನಜೀವನವನ್ನು ನೋಡಿದೆವು. ಭಾರತೀಯ ಸಂಸ್ಕೃತಿಗೆ ಅನುಗುಣವಾಗಿರುವ ಜನಜೀವನ ಬೇಕು. ಆದರೆ ನಿತ್ಯ ಜೀವನದಲ್ಲಿ ಆಧುನಿಕ ಉಪಕರಣಗಳು, ಯಂತ್ರಗಳು ಇತ್ಯಾದಿಗಳು ಕೊಡುವ ಪ್ರಯೋಜನಗಳನ್ನು ದೂರಮಾಡಲು ಸಾಧ್ಯವಿಲ್ಲ. ಅವುಗಳ ಉಪಯೋಗ ತರುವ ಮಾರ್ಪಾಡುಗಳಿಗೆ ಹೊಂದಿಕೊಂಡು ಜೀವನ ಸಾಗಿಸೋಣವೆಂದರೆ ಹಳೆಯ ಭಾವನೆಗಳನ್ನು, ಆಚಾರ ವ್ಯವಹಾರಗಳನ್ನು ಬಿಡಬೇಕಾಗುತ್ತದೆ. ಜೊತೆಗೆ ಬಂಡವಾಳ ಆರ್ಥಿಕ ವ್ಯವಸ್ಥೆ ಜನಜೀವನದ ಮೇಲೆ ಪ್ರಭಾವವನ್ನು ಬೀರಿ ಅವರ ಜೀವನವನ್ನು ನುಚ್ಚುನುರಿ ಮಾಡುತ್ತಲಿದೆ. ಈ ಗೊಂದಲಪರಿಸ್ಥಿತಿಯಲ್ಲಿ ಪ್ರಾಚೀನ ಕಾವ್ಯಗಳಲ್ಲಿ, ಕಥೆಗಳಲ್ಲಿ, ಪುರಾಣಗಳಲ್ಲಿ ಚಿತ್ರವಾಗಿರುವ ಪರ್ಣಕುಟೀರಗಳು, ಋಷ್ಯಾಶ್ರಮಗಳು, ಜಿಂಕೆ ಸಿಂಹದ

ಪಕ್ಕದಲ್ಲಿ ಮಲಗಿ ನಿದ್ರಿಸುತ್ತಿರುವ ಸಾಹಿತಿಯ ವರ್ಣನೆ, ಕಂಗೆಟ್ಟ ಮನಕ್ಕೆ ಬಣ್ಣದ ಆದರ್ಶದ ಚಿತ್ರವನ್ನು ಪ್ರದರ್ಶಿಸಿ ಮನಸ್ಸು ಉದ್ವೇಗಹೊಂದು (Romantic) ವಂತೆ ಆಗುತ್ತದೆ. ವ್ಯಕ್ತವಾದ (Real) ಬಾಳಿನಲ್ಲಿ ಆಗದಿದ್ದರೂ, ಮನಸ್ಸಿನಲ್ಲಿಯಾದರೂ ಸುಖ, ಶಾಂತಿಜೀವನ ಸಿಗುತ್ತದೆ. ಇಂತಹ ಸಂದರ್ಭದಲ್ಲಿ ಈ ಪರಿಸ್ಥಿತಿಗೆ ಕಾರಣಗಳನ್ನು ವೈಜ್ಞಾನಿಕವಾಗಿ ತಿಳಿಯಲು ಇಚ್ಛಿಸದೆ, ಒಂದು ಪಕ್ಷ ಅವುಗಳಿಗೆ ಕಾರಣಗಳು ವ್ಯಕ್ತವಾದರೂ ದಮನಮಾಡಲು ನಿಶ್ಚಯಿಸದೆ, ಅಡ್ಡಿಬರುವ ವಿರೋಧವನ್ನು ಪ್ರತಿಭಟಿಸಲು ಯತ್ನಿಸದೆ ಭಾವನಾಪ್ರಪಂಚದಲ್ಲಿ ಮುಳುಗಿ, ಇಹವನ್ನು ಮಿಥ್ಯವೆಂದು ದೂಷಿಸಿ, ಎಲ್ಲಕ್ಕೂ, ಯಂತ್ರ, ವಿಜ್ಞಾನವೇ ಮೂಲಕಾರಣವೆಂದು ಅವಹೇಳನದಲ್ಲಿ ನಿರತರಾಗಿ, ಹಿಂದಿನ 'ರಾಮರಾಜ್ಯ'ವನ್ನು ನೆನೆಸಿಕೊಳ್ಳುವುದು ಸ್ವಾಭಾವಿಕವಾಗುತ್ತದೆ.[1]

ಆದರ್ಶದ, ಕಲ್ಪನೆಯ ಭಾವನಾಪ್ರಪಂಚವನ್ನು ನಿರ್ಮಿಸುವ ಸಾಹಿತ್ಯ, ಚರಿತ್ರೆ, ಭಾಷಣಗಳು, ಉಪದೇಶಗಳು, ನೀತಿವಾಕ್ಯಗಳು ನೊಂದ ಜನರ ಮೆಚ್ಚುಗೆಯನ್ನು ಪಡೆದು ಅವರನ್ನು ಮೆಚ್ಚಿ ಮನತಣಿಯುವ ಹಾಗೆ ಮಾಡುತ್ತವೆ. ಈ ಬಗೆಯಾದ ಸಾಹಿತ್ಯಕ್ಕೆ, ಐತಿಹಾಸಿಕ ಬರೆವಣಿಗೆಗಳಿಗೆ, ಉಪದೇಶಾಮೃತಗಳಿಗೆ, ನೈತಿಕಪ್ರಸಾರಕ್ಕೆ ಉತ್ತೇಜನ ಸಿಗುತ್ತದೆ. ಕಲ್ಪನಾಪ್ರಪಂಚ ಎಲ್ಲೆಮೀರುತ್ತದೆ. ಹಾಗೆಯೇ ಆಧುನಿಕ ನಾಗರಿಕತೆಯ ಬಗ್ಗೆ, ವಿಜ್ಞಾನದ ಬಗ್ಗೆ, ವಿದ್ಯಾಭ್ಯಾಸದ ಬಗ್ಗೆ, ಮಾನವವ್ಯಕ್ತಿಯ ಮೇಲೆ ವಿಶ್ವಾಸ, ನಂಬಿಕೆ ಎಲ್ಲವೂ ಕಡಿಮೆಯಾಗುತ್ತಾ ದ್ವೇಷ ಮೂಡುತ್ತದೆ. ಆದರೆ, ಎಷ್ಟೇ ಜಿಗುಪ್ಸೆ, ದ್ವೇಷ, ಬಂದರೂ ಈ ನಾಗರಿಕತೆಯ ಸಹವಾಸವನ್ನು ಬಿಡುವುದಕ್ಕೆ ಮನಸ್ಸು ಮಾಡುವುದಕ್ಕಾಗುತ್ತದೆಯೆ? ಒಂದು ಪಕ್ಷ ಬಿಟ್ಟರೆ ಬದುಕುವುದೆಂತು. ವ್ಯವಹಾರಪ್ರಪಂಚದಲ್ಲಿ ಬಾಳನ್ನು ಸಾಧಿಸಬೇಕು. ದ್ವಂದ್ವಜೀವನ ಉಂಟಾಗುತ್ತದೆ. ಇಂತಹ ದಾರುಣಜೀವನದಲ್ಲಿ ತಗುಲುವ ಶಾಖ, ಕಷ್ಟಗಳು, ಅನಿಶ್ಚಯತೆಯ ಪರಂಪರೆಗಳು ಯಾಗಪಶುವಿನ ಮಟ್ಟಕ್ಕೆ ವ್ಯಕ್ತಿಗಳನ್ನು ನೂಕಿ ತಮ್ಮ ಹಣೆಬರಹಗಳನ್ನು ನೆನೆಸಿಕೊಳ್ಳುವುದರಲ್ಲಿ ಸಂದೇಹವಿಲ್ಲ. ಹೆದರಿದ ಜೀವಕ್ಕೆ ಧ್ಯಾನ, ಭಕ್ತಿ, ವೈರಾಗ್ಯ, ದೇವರ ಪೂಜೆ, ಮಾಟ, ಮಂತ್ರ, ದಾನಗಳೇ ಗತಿ!

ನಮ್ಮ ಭಾರತೀಯ ಜನಜೀವನದಲ್ಲಿ ಈ ಬಗೆಯಾದ ಸಂದಿಗ್ಧಪರಿಸ್ಥಿತಿ ಒದಗಿ

---

1 ಈ ಬಗೆಯಾದ ಉನ್ಮಾದ ಅಥವಾ ಉದ್ವೇಗ ಮನೋವೃತ್ತಿಯನ್ನು ಪಾಶ್ಚಾತ್ಯರಾಷ್ಟ್ರಗಳಲ್ಲಿ ಕೈಗಾರಿಕಾ ಆಂದೋಳನವಾಗಿ ಬಂಡವಾಳವ್ಯವಸ್ಥೆ ಪ್ರಸರಿಸುತ್ತಿದ್ದ ಕಾಲದಲ್ಲಿ ನೊಂದ ಜನಸಮೂಹವನ್ನು ಕಂಡು ಅಥವಾ ಎಲ್ಲವೂ ಮಾರ್ಪಾಡು ಆಗುತ್ತಿರುವುದನ್ನು ಕಂಡು ಉದ್ವೇಗದ ಸಾಹಿತ್ಯ, ಚರಿತ್ರೆ, ಭಾವನೆಗಳು ಉಂಟಾದುದನ್ನು ಕಾಣಬಹುದು.

ವಿಚಾರಶೂನ್ಯತೆ ತಾಂಡವಾಡುತ್ತಿದೆ. ಪಾಶ್ಚಿಮಾತ್ಯ ದೇಶಗಳಲ್ಲಿ ಈಗ ಕಂಡು ಬರುತ್ತಿರುವ ಚಿತ್ರ ಇದೇ ಆಗಿದೆ. ಶತಮಾನಗಳ ನೋವು ಮತ್ತು ಉಂಟಾಗುತ್ತಿರುವ ಬದಲಾವಣೆಗಳಿಂದ ಕಂದಿರುವ ಗಾಬರಿ ಭಾರತೀಯರನ್ನು ಒಂದು ರೀತಿಯಲ್ಲಿ ವಿಚಾರಶೂನ್ಯರನ್ನಾಗಿ ಮಾಡಿದ್ದರೆ, ಇನ್ನೊಂದು ರೀತಿಯಲ್ಲಿ ಲಾಭವೇ ಜೀವನಾಡಿ ಯಾಗುಳ್ಳ ಬಂಡವಾಳ ಆರ್ಥಿಕವ್ಯವಸ್ಥೆ ಜನಜೀವನದಲ್ಲಿ ದೇಶದೇಶಗಳ ಸಂಬಂಧದಲ್ಲಿ ತಂದಿರುವ ವಿರಸ, ಘರ್ಷಣೆ, ಅನಿಶ್ಚಯತೆ, ಪೈಪೋಟಿ ಪಾಶ್ಚಿಮಾತ್ಯ ದೇಶಗಳನ್ನು ವಿಚಾರಶೂನ್ಯರನ್ನಾಗಿ ಮಾಡುತ್ತಿವೆ. ಇಲ್ಲಿ ಸಂಸ್ಕೃತಿ ಪ್ರಸಾರದಿಂದ ಜನರಲ್ಲಿ ಶಾಂತಿ ತರಲು ಯತ್ನಗಳು ನಡೆಯುತ್ತಿದ್ದರೆ, ಅಲ್ಲಿ ನೈತಿಕ ಪುನರುದ್ಧಾರ ಚಳುವಳಿ ರೂಪವನ್ನು ತಾಳಿದೆ. (Moral Rearmament) ಇತ್ತೀಚಿನ ಪಾಶ್ಚಿಮಾತ್ಯ ಸಾಹಿತ್ಯ, ಚರಿತ್ರೆಗಳಲ್ಲೂ ಇದನ್ನೆ ಕಾಣಬಹುದು.

ಒಂದು ಮಾತಿನಲ್ಲಿ ಹೇಳುವುದಾದರೆ ಹೊಸ ಪರಿಸ್ಥಿತಿಗಳಲ್ಲಿ ನಮಗಿರುವ ಸಮಸ್ಯೆಗಳನ್ನೇ ದೃಢಮನಸ್ಸಿನಿಂದ ಪರಿಹರಿಸಬೇಕಾಗಿರುವ ಸಮಯದಲ್ಲಿ, ಹೊಸ ಭಾವನೆಗಳು, ಹೊಂದಾಣಿಕೆ, ವಿಚಾರಮಥನ ಅವಶ್ಯಕವಾಗಿರುವಾಗ ಸಂಸ್ಕೃತಿ ಪುನರುದ್ಧಾರ, ಪ್ರಸಾರ, ಜನರನ್ನು ವಿಚಾರಶೂನ್ಯರನ್ನಾಗಿ ಮಾಡಿ, ಅಂಧಶ್ರದ್ಧೆ, ಅಂಧಪ್ರೇಮ, ಇವುಗಳನ್ನೆ ತಂದು, ಹೊಂದಾಣಿಕೆಗೆ ಮಾರ್ಗ ತೋರದೆ, ದೇಶಕ್ಕೆ ದುರ್ದೆಸೆ ಬರುವುದರಲ್ಲಿ ಸಂದೇಹವಿಲ್ಲ. ಪ್ರಜಾಪ್ರಭುತ್ವಕ್ಕೆ ನಾವು ಹೊಂದಿಕೊಳ್ಳ ಬೇಕಾಗಿರುವಾಗ ಈ ಪ್ರಸಾರ ಊಳಿಗಮಾನ್ಯ ಸಂಸ್ಕೃತಿಯ ಭಾವನೆಗಳು, ರಾಜತ್ವ, ವರ್ಣಾಶ್ರಮಗಳು, ಜಾತಿಬೇಧಗಳು ಪ್ರಕೃತಿಯ ಬಗ್ಗೆ ಕುರುಡುನಂಬಿಕೆ ಗಳು ಪುನಃ ಆರಂಭವಾಗುವುದಕ್ಕೆ ಅವಕಾಶಕೊಡುವುವು.

೭

ಮುಕ್ತಾಯರೀತಿಯಲ್ಲಿ ಕೆಲವು ಮಾತುಗಳು.

ಭಾರತೀಯ ಮತ್ತು ಆಂಗ್ಲಸಂಸ್ಕೃತಿಗಳು ಎರಡೂ ಒಂದು ಕಾಲದಲ್ಲಿ ಊಳಿಗ ಮಾನ್ಯದ ಮಟ್ಟದ ಸಂಸ್ಕೃತಿಯಲ್ಲಿದ್ದವು. ಆಂಗ್ಲಸಂಸ್ಕೃತಿ ಉತ್ಪಾದನಾಸಾಧನ ಗಳನ್ನು ಬೆಳಸುವುದರ ಮೂಲಕ, ವಿಜ್ಞಾನವನ್ನು ಅಭಿವೃದ್ಧಿಗೊಳಿಸುವುದರ ಮೂಲಕ ಊಳಿಗಮಾನ್ಯಮಟ್ಟದಿಂದ ಬಂಡವಾಳಮಟ್ಟಕ್ಕೆ ಮುಂದುವರಿದು, ಈ ಮೂಲಕ ಪ್ರಕೃತಿಜನ್ಯವಾದ ಅನೇಕ ನ್ಯೂನತೆಗಳನ್ನು ಪರಿಹರಿಸಿಕೊಂಡುದನ್ನು ನೋಡಿದೆವು. ಇದೇ ಆಂಗ್ಲಜನರು ಸಾಧಿಸಿರುವ ಪ್ರಗತಿಯಾಯಿತು. ಆದರೆ ಬಂಡವಾಳ ಆರ್ಥಿಕ ವ್ಯವಸ್ಥೆಯಿಂದ ಹೊರಬಿದ್ದ ಅನೇಕ ಸಮಾಜಜನ್ಯವಾದ ನ್ಯೂನತೆಗಳನ್ನು ಪರಿಹರಿಸು

ವುದರಲ್ಲಿ ಅಷ್ಟು ಪ್ರಗತಿಯನ್ನು ಸಾಧಿಸದಿರುವ ಅಂಶ ವೇದ್ಯವಾಗಿ ಕಾಣುತ್ತಿದೆ. ಭಾರತ ದೇಶ ಆಧುನಿಕ ಉತ್ಪಾದನಾಸಾಧನಗಳನ್ನು, ವಿಜ್ಞಾನ ಇತ್ಯಾದಿಗಳಿಂದ ಸಮಸ್ಯೆಗಳ ಪರಿಹಾರದಲ್ಲಿ ಪ್ರಯೋಜನ ಹೊಂದಲು ನಿರ್ಧರಿಸಿದೆ. ಆದರೆ ಇವುಗಳ ಉಪಯೋಗದಿಂದಲೇ ಬಂಡವಾಳವ್ಯವಸ್ಥೆ ಬರುತ್ತದೆಂಬ ಹೆದರಿಕೆಗೆ ಕಾರಣವಿಲ್ಲ. ಏಕೆಂದರೆ, ಉತ್ಪಾದನಾಸಾಧನಗಳು, ವಿಜ್ಞಾನ ಇವುಗಳಲ್ಲೇ ದೋಷವಿಲ್ಲ. ಅವುಗಳನ್ನು ಉಪಯೋಗಿಸುವ ರೀತಿ ಅವುಗಳ ಉಪಯೋಗ ದುರುಪಯೋಗವನ್ನು ನಿರ್ಧರಿಸುತ್ತದೆ. ಇವುಗಳನ್ನು ಬಂಡವಾಳ ಆರ್ಥಿಕವ್ಯವಸ್ಥೆ ವ್ಯಕ್ತಿಗಳ ಲಾಭದಾಸೆಗೆ ಉಪಯೋಗಿಸಿಕೊಳ್ಳಬಹುದು, ಅಥವಾ ಸಮಾಜ ಸಾಮೂಹಿಕವಾಗಿ ಸಮಾಜದ ಹಿತದೃಷ್ಟಿಯಿಂದ ಇವುಗಳನ್ನು ಉಪಯೋಗಿಸಬಹುದು. ಈ ರೀತಿಯ ಉಪಯೋಗವನ್ನು ಸೋವಿಯಟ್ ರಷ್ಯದಲ್ಲಿ, ಚೀಣಾದಲ್ಲಿ ಕಾಣುತ್ತಲಿದ್ದೇವೆ.

ಬದುಕಿ ಬಾಳಲು ಹೊರಟ ಮಾನವ ಸಮಾಜಗಳು ನಿರ್ಮಿಸಿಕೊಂಡಿರುವ ಆರ್ಥಿಕವ್ಯವಸ್ಥೆ, ಉತ್ಪಾದನಾಕ್ರಮ ಒಂದು ಮಟ್ಟಕ್ಕೆ ಸಾರುತ್ತವೆಯೇ ಹೊರತು, ಒಂದೇ ಮಟ್ಟದಲ್ಲಿ ಮೂಲವಾಗಿ ಅವುಗಳ ಸ್ವರೂಪದಲ್ಲಿ ವ್ಯತ್ಯಾಸಗಳಿರುವುದಿಲ್ಲ. ಆದುದರಿಂದ ಅನುಸರಿಸಬಹುದಾದ ಆರ್ಥಿಕನೀತಿ ಆರ್ಥಿಕವ್ಯವಸ್ಥೆಯನ್ನು ಹೊಂದಿಕೊಂಡಿರುತ್ತದೆ. ಈಗ ನಮ್ಮ ಭಾರತದಲ್ಲಿರುವ ಆರ್ಥಿಕವ್ಯವಸ್ಥೆ ಎಂದರೆ ಊಳಿಗಮಾನ್ಯದ ಚಿಹ್ನೆಗಳನ್ನು ಒಳಗೊಂಡಿರುವ ಬಂಡವಾಳ ಆರ್ಥಿಕವ್ಯವಸ್ಥೆ. ಈ ಆಧಾರದ ಮೇಲೆ ಭಾರತದಲ್ಲಿ ಒಂದು ಆರ್ಥಿಕನೀತಿ ಇದೆ. ಇಲ್ಲಿ ಮರೆಯಬಾರದಿರುವ ಅಂಶವೇನೆಂದರೆ ನಾವು ಅನುಸರಿಸುತ್ತಿರುವ ಈಗಿನ ಆರ್ಥಿಕನೀತಿ ವಿದೇಶಗಳು ಅನುಸರಿಸುತ್ತಿರುವ ಆರ್ಥಿಕ ನೀತಿಯಿಂದ ಬೇರೆಯದಲ್ಲ. ಒಂದುಪಕ್ಷ ನಾವು ಬಂಡವಾಳ ಆರ್ಥಿಕವ್ಯವಸ್ಥೆ ಬೇಡವೆಂದರೆ ನಾವು ಇನ್ನೊಂದುಮಟ್ಟದ ಆರ್ಥಿಕವ್ಯವಸ್ಥೆಗೆ ಹೋಗುವುದರ ಮೂಲಕ ಆಧುನಿಕ ಉತ್ಪಾದನಾಸಾಧನಗಳ ಮತ್ತು ವಿಜ್ಞಾನದ ಉಪಯೋಗವನ್ನು ಹೊಂದಬೇಕು. ಈ ಹೊಸಮಟ್ಟದ ಆರ್ಥಿಕವ್ಯವಸ್ಥೆಯನ್ನು ನಾವು ಯಾವ ಹೆಸರಿನಿಂದ ಕರೆಯುವುದಾದರೂ ಅದು ವಿದೇಶಗಳಲ್ಲಿ ಆಗಲೇ ಆಚರಣೆಯಲ್ಲಿರುವ ಹೊಸ ಆರ್ಥಿಕಮಟ್ಟ—ಸಮಾಜವಾದ—ವಾಗಿದೆ. ಸಮಾಜವಾದೀ ವ್ಯವಸ್ಥೆ ಬೇಡವೆಂದರೆ ಉಳಿಯುವುದು ಬಂಡವಾಳ ಆರ್ಥಿಕವ್ಯವಸ್ಥೆ, ಅದೂ ಬೇಡವೆಂದರೆ ಊಳಿಗಮಾನ್ಯದ ಆರ್ಥಿಕವ್ಯವಸ್ಥೆ, ಅದೂ ಬೇಡವೆಂದರೆ ಪ್ರಾಚೀನ ಆರ್ಥಿಕ ವ್ಯವಸ್ಥೆ, ಅದೂ ಬೇಡವೆಂದರೆ ಅನಾಗರಿಕ ಆರ್ಥಿಕವ್ಯವಸ್ಥೆ, ಅದೂ ಬೇಡವೆಂದರೆ ಆತ್ಮಹತ್ಯ! ಬಂಡವಾಳ ಆರ್ಥಿಕವ್ಯವಸ್ಥೆಯ ಮೇಲೆ ವಿಧಿಸುವ ಹತೋಟಿ ಬೇರೊಂದು ವಿಧದ ಆರ್ಥಿಕವ್ಯವಸ್ಥೆಯಾಗದೆ ಕೇವಲ ಆರ್ಥಿಕ ನೀತಿಯಾಗುತ್ತದೆ.

ಬಂಡವಾಳ ಆರ್ಥಿಕ ವ್ಯವಸ್ಥೆಯಲ್ಲಿರುವ ವಿರಸಗಳು ಇದ್ದೇ ಇರುತ್ತವೆ. ಎಲ್ಲಾ ವರ್ಗಗಳನ್ನೂ ತೃಪ್ತಿಪಡಿಸಲು ಹೊರಟು ಯಾವ ವರ್ಗವನ್ನೂ ತೃಪ್ತಿಪಡಿಸದೆ ವಿರಸಗಳು ಹೆಚ್ಚಾಗುತ್ತವೆ. ದೇಶದ ಆರ್ಥಿಕ ಅಭಿವೃದ್ಧಿ ಹಿಂದೆ ಬೀಳುವ ಸಂಭವವೂ ಉಂಟು. ಬಂಡವಾಳ ಆರ್ಥಿಕವ್ಯವಸ್ಥೆಯ ಜೊತೆಗೆ ಸಮಾಜವಾದೀ ಆರ್ಥಿಕ ವ್ಯವಸ್ಥೆಯನ್ನು ನಿರ್ಮಿಸುವುದು ಮಿಶ್ರ ಆರ್ಥಿಕವ್ಯವಸ್ಥೆಯಾಗುತ್ತದೆ. ಯಾವ ಯಾವ ಆರ್ಥಿಕಕ್ಷೇತ್ರಗಳನ್ನು ಬಂಡವಾಳ ಅಥವಾ ಸಮಾಜವಾದಿ ವ್ಯವಸ್ಥೆಯ ಮೇಲೆ ನಿರ್ಮಿಸಬೇಕೆಂಬ ಸಮಸ್ಯೆ ಬರುತ್ತದೆ. ನಮ್ಮ ಗುರಿ ಸಮಾಜವಾದೀ ಆರ್ಥಿಕ ವ್ಯವಸ್ಥೆಯಾಗಿದ್ದು, ಬಂಡವಾಳ ಆರ್ಥಿಕಕ್ಷೇತ್ರವನ್ನು ಸಮಯ ಸಂದರ್ಭಾನು ಸಾರ ಉಳಿಸಿಕೊಂಡು ಕ್ರಮಕ್ರಮವಾಗಿ ಬಿಟ್ಟುಬಿಡುತ್ತಾ ಹೋದರೆ ಸಮಾಜ ವಾದೀ ಆರ್ಥಿಕವ್ಯವಸ್ಥೆ ಬರುತ್ತದೆ. ಇಲ್ಲದಿದ್ದರೆ ನಾವು ಹೊರಟ ಸ್ಥಾನದಿಂದ (ಬಂಡವಾಳ ಆರ್ಥಿಕವ್ಯವಸ್ಥೆ) ಮುಂದುವರಿಯದೆ ಬಂಡವಾಳ ಆರ್ಥಿಕವ್ಯವಸ್ಥೆಯೇ ಉಳಿಯುತ್ತದೆ. ಈ ತೀರ್ಮಾನಗಳಿಂದ ನಾವು ಭಯಸ್ಥರಾಗಿ ನಮ್ಮ ಭಾರತೀಯ ಸಂಸ್ಕೃತಿಗೆ ಧಕ್ಕೆ ಬರುತ್ತದೆಂದು ಹೆದರಬೇಕಾಗಿಲ್ಲ. ಭಾರತೀಯರು ಪಾಶ್ಚಾತ್ಯ ಸಂಸ್ಕೃತಿಯ ಅನುಕರಣಮಾಡಿದಂತಾಗುವುದಿಲ್ಲ. ದೃಷ್ಟಾಂತಕ್ಕೆ ಅಮೇರಿಕಾ ಮತ್ತು ಫ್ರಾನ್ಸ್ ದೇಶಗಳನ್ನು ತೆಗೆದುಕೊಳ್ಳೋಣ. ಆ ದೇಶಗಳಲ್ಲಿ ಬಂಡವಾಳ ಆರ್ಥಿಕವ್ಯವಸ್ಥೆ ಇದೆ; ರಾಜಕೀಯವಾಗಿ ಪ್ರಜಾಪ್ರಭುತ್ವವಿದೆ. ಇಷ್ಟಿದ್ದ ಮಾತ್ರಕ್ಕೇ ಆ ಎರಡು ದೇಶಗಳ ಸಂಸ್ಕೃತಿಯಲ್ಲಿ ವ್ಯತ್ಯಾಸಗಳು ಇಲ್ಲವೆಂದಲ್ಲ. ಈ ಎರಡು ದೇಶಗಳ ಇತಿ ಹಾಸದಲ್ಲಿ ಹಿಂದಿನಿಂದ ಬಂದ ಉಡಿಗೆ, ತೊಡಿಗೆ, ಸಂಗೀತ, ಸಾಹಿತ್ಯ, ಕಲೆ, ಆಚಾರವ್ಯವ ಹಾರಗಳು ಜನಜೀವನದಲ್ಲಿ ಇದ್ದೇ ಇವೆ. ರಷ್ಯನ್ ಜನರು ಸಮಾಜವಾದೀ ಆರ್ಥಿಕ ವ್ಯವಸ್ಥೆಯಲ್ಲಿದ್ದರೆ, ಅವರು ತಮಗೆ ತಮ್ಮ ಸಂಸ್ಕೃತಿಯಲ್ಲಿ ಹಿಂದಿನಿಂದ ಬಂದಿರುವ ರಷ್ಯನ್ ಭಾಷೆಯನ್ನು ಬಿಟ್ಟಿಲ್ಲ.

ಈ ಸಮಾಜಗಳಲ್ಲಿ ಕಂಡುಬರುವ ಸಂಸ್ಕೃತಿಗಳ ಸ್ವರೂಪವೆಂದರೆ ಉತ್ಪಾದನಾ ಕ್ರಮ. ಮಾರ್ಪಾಡು ಹೊಂದಿದ ಹಾಗೆ ಜನರು ತಮ್ಮ ಆಚರಣೆಯಲ್ಲಿದ್ದ ಸಂಸ್ಕೃತಿಯ ಹಲವು ಅಂಶಗಳನ್ನು ಬದಲಾವಣೆ ಹೊಂದಿರುವ ಉತ್ಪಾದನಾಕ್ರಮಕ್ಕೆ ಹೊಂದಿಸಿ ಕೊಂಡಿದ್ದಾರೆ. ಈ ಹೊಂದಾಣಿಕೆ ಕೆಲವು ವೇಳೆ ಸುಲಭವಾಗಿ ಆಗಿದೆ, ಇನ್ನು ಕೆಲವು ವೇಳೆ ಪ್ರಯಾಸದಿಂದ ಆಗಿದೆ. ಬದಲಾವಣೆಯ ಅವಶ್ಯಕತೆಯನ್ನು ಅರಿತು ಹೆಚ್ಚು ಹೆಚ್ಚಾಗಿ ಜನರು ಜಾಗ್ರತಿಗೊಂಡು, ಹೊಂದಿಕೊಳ್ಳುವುದಾದರೆ ಮಾರ್ಪಾಡು ಸುಲಲಿತವಾಗಿ ಆಗುತ್ತದೆ. ಬಲಾತ್ಕಾರದ ಅವಶ್ಯಕತೆಯೇ ಬರುವುದಿಲ್ಲ. ಎರಡನೆಯ ದಾಗಿ ಆರ್ಥಿಕ ಬದಲಾವಣೆ, ಪ್ರಗತಿ ಸುಲಭವಾಗಿ ಆಗುವುದಲ್ಲದೆ, ಬಹು ಬೇಗನೆ

ಏಳಿಗೆ ಸಾಧಿಸಬಹುದು. ಭಾರತೀಯರಾದ ನಾವು ಮಾಡಬೇಕಾಗಿರುವ ಕೆಲಸವು ಇದೇ ಆಗಿದೆ.

'ನಮಗೆ ಅನುಗುಣವಾದ ಅಭಿವೃದ್ಧಿ, ಅನುಗುಣವಾದ ಆರ್ಥಿಕ, ಸಾಮಾಜಿಕ, ರಾಜಕೀಯ, ನೈತಿಕವ್ಯವಸ್ಥೆ ಮತ್ತು ಸಂಬಂಧ, ಇತ್ಯಾದಿಗಳೆಂದರೆ ಭಾರತದಲ್ಲಿ ಪ್ರಾಚೀನ ಮತ್ತು ಊಳಿಗಮಾನ್ಯಮಟ್ಟದ ಲಕ್ಷಣಗಳನ್ನು ತೊಡೆದುಹಾಕುವುದು ; ಬಂಡವಾಳ ಆರ್ಥಿಕವ್ಯವಸ್ಥೆಯನ್ನು ವರ್ಜಿತಮಾಡುವುದು ; ನಮ್ಮ ಪ್ರಕೃತಿ ಮತ್ತು ಸಮಾಜಜನ್ಯ ಸಮಸ್ಯೆಗಳನ್ನು ಆಧುನಿಕ ಉತ್ಪಾದನಾಸಾಧನಗಳು, ವಿಜ್ಞಾನ ಮತ್ತು ವೈಜ್ಞಾನಿಕದೃಷ್ಟಿ ಇವುಗಳ ಆಧಾರದ ಮೇಲೆ ಹೊಸಮಟ್ಟದ ಆರ್ಥಿಕವ್ಯವಸ್ಥೆಯನ್ನು ರಚಿಸಿಕೊಳ್ಳುವುದು ; ಆಗುವ ಮಾರ್ಪಾಡುಗಳಿಗೆ 'ನಮ್ಮ ಸಂಸ್ಕೃತಿ'ಯನ್ನು, ಜೀವನವನ್ನು, ಹೊಂದಿಸಿಕೊಳ್ಳುವುದು. ಹೀಗೆ ರೂಪಗೊಳ್ಳುವ ಸಂಸ್ಕೃತಿಯೇ ನಮ್ಮ ಸಂಸ್ಕೃತಿ ; ಭಾರತದ ಪ್ರಜಾಸತ್ತೆ ಸಂವಿಧಾನ ಜನರಿಗೆ ಇತ್ತಿರುವ ಭರವಸೆಗಳನ್ನು ಪೂರ್ಣಗೊಳಿಸುವ ಸಂಸ್ಕೃತಿ. ಇದರಿಂದ 'ನಮ್ಮ ಸಂಸ್ಕೃತಿ'ಯ ಮೇಲಿನ ಅಭಿಮಾನಕ್ಕೆ ಚ್ಯುತಿ ಬರುವುದಿಲ್ಲ. ಕಾಲ, ಸನ್ನಿವೇಶ ಮತ್ತು ನಮ್ಮ ಸಮಸ್ಯೆಗಳ ಪರಿಹಾರಮಾರ್ಗಕ್ಕೆ ಅನುಗುಣವಾಗಿ ಬದಲಾವಣೆಯನ್ನು ಮಾತ್ರ ಹೊಂದುತ್ತೇವೆ. ಬದಲಾವಣೆ ಹೊಂದಬೇಕೆಂಬ ಜಾಗೃತಿ ಆದಷ್ಟು ಬೇಗನೆ ಬಂದು, ವಿಚಾರಮಥನ ಬೆಳದರೆ ನಾವು ಅಭಿವೃದ್ಧಿಯನ್ನು ಶೀಘ್ರವಾಗಿ ಗಳಿಸುತ್ತೇವೆ. ಇದಕ್ಕಾಗಿ ಒಂದು ಹೊಸ ಭಾವನಾರಂಗದ ಸೃಷ್ಟಿಯ ಅವಶ್ಯಕತೆಯೂ ಇದೆ. ಇಲ್ಲವಾದರೆ ಮಾರ್ಗಶೂನ್ಯರಾಗಿ 'ನಮ್ಮ ಸಂಸ್ಕೃತಿ'ಯಲ್ಲಿರುವ ಅನೇಕ ಅಂಶಗಳನ್ನು ಮಾರ್ಪಾಡುಮಾಡಿಕೊಂಡು ಉಳಿಸಿಕೊಳ್ಳಬಹುದಾದವುಗಳನ್ನು ನಾವೇ ನಾಶಹೊಂದುವಂತೆ ಮಾಡುತ್ತೇವೆ.

ಮಾರ್ಪಾಡು ಮತ್ತು ಹೊಂದಾಣಿಕೆಗಳು ಸುಲಭವಾಗಿ ಆಗುವುದಕ್ಕೆ ಮೊದಲನೆಯದಾಗಿ, ರಸಭಾವ ಮನೋವೃತ್ತಿಯನ್ನು (Sentimentalism) ಬಿಡಬೇಕು. ಎಲ್ಲವೂ ನಮ್ಮ ಸಂಸ್ಕೃತಿಯಲ್ಲಿದೆ ಎಂಬ ಕುರುಡುನಂಬಿಕೆಯನ್ನು ದೂರಮಾಡಬೇಕು. 'ನಮ್ಮ ಸಂಸ್ಕೃತಿ' ಎಂಬ ಅಂಧಪ್ರೇಮಕ್ಕೆ ತುತ್ತಾಗಿ ವಿಜ್ಞಾನಕ್ಕೆ ಮತ್ತು ವೈಜ್ಞಾನಿಕ ದೃಷ್ಟಿಗೆ ಸರಿಹೊಂದದ ಆಚಾರವ್ಯವಹಾರಗಳನ್ನು, ಹಳೆಯ ಭಾವನೆಗಳನ್ನು ಮತ್ತು ಗತಿಸಿದ ರೀತಿನೀತಿಗಳನ್ನು ಪುನರುದ್ಧಾರಮಾಡಲು ಯತ್ನಿಸಬಾರದು. ಈ ಪುನರುದ್ಧಾರವನ್ನು ಇತ್ತೀಚೆಗೆ ನಾನಾ ರಂಗಗಳಲ್ಲಿ—ಸಾಹಿತ್ಯ, ಕಲೆ, ನೃತ್ಯ, ವಿದ್ಯಾಭ್ಯಾಸ ಇತ್ಯಾದಿಗಳಲ್ಲಿ ಕಾಣಬಹುದಾಗಿದೆ. ಎರಡನೆಯದಾಗಿ, ನಮ್ಮ ಸಂಸ್ಕೃತಿಯಲ್ಲಿ ಇರದ ಅಂಶಗಳನ್ನೇ ವಿದೇಶ ಸಂಸ್ಕೃತಿಗಳಿಂದ ನಾವು ತೆಗೆದುಕೊಂಡು ನಮ್ಮದೇ ಆಗಿ

ಮಾಡಿಕೊಳ್ಳಬೇಕು. ಮಾನವಕೋಟಿ ಒಟ್ಟಿನಲ್ಲಿ ಗಳಿಸಿರುವ ಸಂಸ್ಕೃತಿ ಎಲ್ಲರಿಗೂ ಸೇರಿದ್ದು. ನಾವು ಆ ಮಾನವಕೋಟಿಯ ಒಂದು ಭಾಗ. ಪ್ರಾಚೀನ ಭಾರತೀಯ ಸಂಸ್ಕೃತಿಯಲ್ಲಿ ಕಂಡುಬರುವ ವೈಶಿಷ್ಟ್ಯವೇ ಇದು. ಗ್ರೀಕರಿಂದ, ಪರ್ಷಿಯನರಿಂದ, ಚೀಣರಿಂದ ಸಂಪರ್ಕಹೊಂದಿ ಉಚ್ಚಾಟ್ರಾಯ ನಾಗರಿಕತೆಯನ್ನು ಕಟ್ಟಿದರು. ಆ ಮೇಲ್ಪಂಕ್ತಿಯನ್ನು ನಾವು ಮರೆಯಬಾರದು. ಮೂರನೆಯದಾಗಿ, ಭಾರತೀಯ ಇತಿಹಾಸವನ್ನು ಮಾನವಶಾಸ್ತ್ರದೃಷ್ಟಿಯಿಂದ, ವೈಜ್ಞಾನಿಕದೃಷ್ಟಿಯಿಂದ, ನೋಡುವುದು ಅಗತ್ಯವಾಗಿದೆ. ಜನಜೀವನವನ್ನು, ಅವರ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ವ್ಯವಸ್ಥೆ ಮತ್ತು ಸಂಬಂಧಗಳು, ಭಾವನೆಗಳು ಇವುಗಳನ್ನು ಐತಿಹಾಸಿಕ ವಾಗಿ ಮಥನಮಾಡುವ ದೃಷ್ಟಿಯಿಂದ ನೋಡಬೇಕು. ಭಾರತದ ಇತಿಹಾಸದ **ಐತಿಹಾಸಿಕ ಸತ್ಯಾಂಶಗಳು** 'ನಮ್ಮದು' ಎಂಬ ಪ್ರೇಮದಲ್ಲಿ, ಅಂಧಶ್ರದ್ಧೆಯ ಹೊಡೆತಕ್ಕೆ ಸಿಕ್ಕಿ, ದಮನವಾಗದೆ, ನಮಗೆ ಮಾರ್ಗದರ್ಶಕವಾಗಿ ಉಳಿಯಲಿ. ಈ ದೃಷ್ಟಿಯಿಂದ ನಮ್ಮ ಇತಿಹಾಸದ ಓದು, ಪರಿಶೋಧನೆ ಮತ್ತಷ್ಟು ಅವಶ್ಯಕ ವಾಗಿದೆ. ಈ ಮೂರು ಅಂಶಗಳು ಹೆಚ್ಚು ಗಮನಾರ್ಹವಾಗಿವೆ.

ಎಲ್. ಶ್ರೀಕಂಠಯ್ಯ

ಸಭಾಕಂಪ

ಆಹ! ಎಂತಹ ಅನುಕಂಪ ಹುಟ್ಟಿಸುವ ಪದ! ವೇದಿಕೆಯ ಮೇಲೆ ಉಂಟಾಗುವ ಭೂಕಂಪದ ಪರಿಣಾಮವೇ ಈ ಸಭಾಕಂಪ! ಅಷ್ಟಲ್ಲದೆ ಮತ್ತೇನು? ಕುಳಿತು ಕೇಳುವವರ ಪಾಲಿಗೇನೊ ಭೂಮಿ ತಿರುಗುತ್ತಿದ್ದರೂ ನಿಂತಂತೆಯೇ ಇರುತ್ತೆ; ಆದರೆ, ಸಭೆಯೊಂದರ ವೇದಿಕೆಯನ್ನು ಮೆಟ್ಟಿದೊಡನೆಯೇ ಅರಿವಾಗುತ್ತದೆ, ಎಂತಹ ಅಜ್ಞಾನಿಗೂ, ಭೂಮಿ ತಿತ್ತಿತ್ತಿ . . . . ತಿರುಗುತ್ತಿದೆಯೆಂದು. ಹಾಗೆ ನಿಂತವನ ಕಣ್ಣೊ ಗಿರ್ರೆಂದು, ತಲೆ ಸುತ್ತಿ, ಕೈಕಾಲು ನಡುಕಕ್ಕೆ ಪ್ರಾರಂಭ! ಹೀಗಾಗಿ, ಭಾಷಣಕಾರಂಗೆ ನಡುಕವೇ ನಾಂದಿ.

ಸಭಾಕಂಪ ಭಾಷಣಕಾರನಿಗೆ ಆ ಮಹಾದೇವನಿತ್ತ ವರ! ಈ ವಿದ್ಯೆ ಇಂದು ನಿನ್ನೆ ಕಲಿತು ಬರತಕ್ಕುದಲ್ಲ. ಒಬ್ಬೊಬ್ಬರಿಗೆ ದೈವದತ್ತವಾದ ಸುಕೃತ. ಪೂರ್ವಜನ್ಮದ ಪುಣ್ಯ, ಅಷ್ಟೇ . . . . ಏಕೆ? ಎಷ್ಟೋ ನಾಟಕಗಳಲ್ಲಿ ಸಭಾಕಂಪವನ್ನೇ 'ಸೀನಾಗಿ' ಅಭಿನಯಿಸಬೇಕಾದಾಗ ಪಾತ್ರಧಾರಿ ಇದನ್ನು ಅಷ್ಟೊಂದು ಸಹಜವಾಗಿ ಅಭಿನಯಿಸ ಲಾರ! ನುರಿತ ನಟನಿಗೂ ಈ ಅಭಿನಯ ದುಸ್ಸಾಧ್ಯವೆಂದಮೇಲೆ ಇದರ ಮೇಲ್ಮೆ ಯನ್ನು ನೀವು ಕುಳಿತಲ್ಲೆ ಅಳೆಯಬಹುದು; ಅಳೆದು ಗೊಳ್ಳೆನಬಹುದು.

"ಷೂ ಒಳಗೆ ಷಿವರಿದರು" ಎಂಬ ಪರಂಗಿ ಮಾತು ಉಂಟು. ಅದೂ, ಈ ಸಭಾಕಂಪಕ್ಕೆ ಸಂಬಂಧಪಟ್ಟುದೆ. ಷೂ ಹಾಕಿಕೊಂಡರೆ ಕಾಲ್ನಡುಕ ಸಭೆಗೆ ಕಾಣು ವುದಿಲ್ಲವೆಂದು ಎಷ್ಟೋ ಭಾಷಣಕಾರರ ಅಭಿಮತ (ಹಾಗೂ ಭ್ರಾಂತಿ) ಆದರೆ ಸಭಿಕರು ಬಿಡಬೇಕಲ್ಲಾ! ಒಂದು ವೇಳೆ ಕೇಳುವುದನ್ನಾದರೂ ಬಿಟ್ಟಾರೆಯೇ ವಿನಹ, ನೋಡುವುದನ್ನು, ನೋಡಿ ಆನಂದಿಸುವುದನ್ನು ಬಿಟ್ಟಾರೆಯೆ? ಸುಮ್ಮನೆ ಕೂರಲಿಕ್ಕೆ ಅವರೇನು ಮಮ್ಮಿಗಳೊ ಡಮ್ಮಿಗಳೊ? ಸಭಿಕರಿಗೆ ಬೇಕಾಗಿರುವುದು ಒಟ್ಟಿನಲ್ಲಿ ಮನೋರಂಜನೆ. ಅವರು ಬರುವುದೂ ಅದಕ್ಕಾಗಿಯೇ. ಭಾಷಣಕ್ಕಾಗಿಯೇ ಬರುವವ ರಾಗಿದ್ದರೆ ಅವರಿಗೂ ದೇವರು ಕೊಟ್ಟ ಬಾಯಿಲ್ಲವೆ? ಅವರೂ 'ಇಸ್ಟೇಜ್' ಹತ್ತಿ ಬಾಯಿ ಕಳೆದು ಮುಚ್ಚಬಹುದಲ್ಲ. ಅಥವಾ ಭಾಷಣಕಾರನಿಗೆ ಬಾಯನ್ನೂ ಇತರ ಸಭಿಕರಿಗೆ ಕಿವಿ ಯನ್ನೂ ಮಾತ್ರ ದೇವರು ಹಂಚಿಕೊಟ್ಟಿದ್ದಾನೆಯೆ? ಇಷ್ಟಬಂದವರು ಬಾಯಾರೆ ಭಾಷಣ ಬಿಡಬಹುದು; ಇಷ್ಟವಿದ್ದವರು ಕಿವಿಯಾರೆ ಕೇಳಬಹುದು, ಎಂಬ 'ರೂಲೀ ಸಿಗೆ' ಒಳಗಾಗಿ ತಾನೆ ದೇವರು ಬಾಯಿ ಕಿವಿ ಎರಡನ್ನೂ ದಯಪಾಲಿಸಿರುವುದು.

ಹಿಂದೆಯೇ, ಷೂ ಎಂದೆನಲ್ಲ. ಕೆಲವು ದೂರಾಲೋಚನೆಯ ಭಾಷಣಕಾರರೂ

ಷೂ ಮೆಟ್ಟಿಕೊಂಡೇ ಭಾಷಣ ಮಾಡುವವರಿದ್ದಾರೆ. ಅದರ ಗುಟ್ಟಾದರೊ ಇಷ್ಟೆ. ಒಂದು, ಷೂ ಕಳಚಿಟ್ಟು ವೇದಿಕೆಯ ಮೇಲೆ ಬಂದರೆ ಭಾಷಣದ ಮಧ್ಯೆ ತಮ್ಮ ಷೂ ತಮಗೇ ಕಾಲುಕೊಟ್ಟು ಇನ್ನಾರ ಪಾದವನ್ನಾದರೂ ವರಿಸೀತು ಎಂಬ ಶಂಕೆ, ಇನ್ನೊಂದು, 'ಕೊಡಲಿಯ ಕಾವು ಬುಡಕ್ಕೆ ಮೃತ್ಯು' ಎಂಬಂತೆ, ಸಮಯಾನು ಸಂದರ್ಭ ಭೀಕರ ಭಾಷಣದ ಮಧ್ಯೆ ತಮ್ಮ ಮೇಲೇ ತಮ್ಮ ಷೂ ಎಗರಿಬಿದ್ದರೆ? (ಏಕೆಂದರೆ ಹಾಗೆ ಮಾಡುವುದರಿಂದ ಸಭಿಕರಿಗೆ ತಮ್ಮ ಕಾಲಲ್ಲಿರುವುದು ನಷ್ಟ ವಾಗುತ್ತದೆಂಬ ಭೀತಿಯಿರುವುದಿಲ್ಲವಲ್ಲ!) ಅವನ ಬಾಣವನ್ನೆ ಅವನ ಮೇಲೆ ತಿರು ಗಿಸುವುದರಿಂದ ಇವರ ಬತ್ತಳಿಕೆ ಬತ್ತಿಹೋಗುವುದಿಲ್ಲವಲ್ಲ! ಮೂರನೆಯದಾಗಿ, ಬರಿಗಾಲಲ್ಲಿ ಭಾಷಣಕ್ಕೆ ನಿಂತರೆ ತಮ್ಮ ಚರಣಕಮಲಗಳು ಗಡಗಡಿಸುವುದು ಸಭಿಕರ ಮನಕ್ಕೆ, ಅಲ್ಲ ಅಲ್ಲ, ಕಣ್ಣಿಗೆ ಕಣ್ದಿಟ್ಟಾಗುತ್ತದೆಯಲ್ಲದೆ ಪಾದಪದ್ಮಗಳು ಬೆವರಿಡುವುದನ್ನೂ ಸಭಿಕರು ಈಕ್ಷಿಸಬಹುದು ಎಂಬ ಶಂಕೆ. ಈ ಶಂಕೆಯೇನೋ— 'ಆಮ' ಹೌದು, ನಿಜ; ಆದರೆ ಎಷ್ಟೋ ವೇಳೆಗಳಲ್ಲಿ ಹನಿಕೂಡಿ ಹಳ್ಳ ಎಂಬಂತೆ ಬೆವರಿನ ಹನಿಹನಿಯೂ ಷೂನೊಳಗೆ ಸೇರಿ ಹಳ್ಳವಾಗಿ ತುಂಬಿ ಭಾಷಣ ಮುಗಿವ ಹೊತ್ತಿಗೆ ಈಚೆಗೆ ತುಳುಕಿ ನಿಂತ ಅಷ್ಟು ಜಾಗ ಮಟ್ಟಿಗೆ ಹಾಗೆ ಒದ್ದೆಯಾಗಿರುವುದನ್ನು ನೋಡಿ ಎಷ್ಟೋ ಸಹೃದಯ ಸಭಿಕರು ಕಣ್ಣಲ್ಲಿ ಕಾರಂಜಿಯ ಕೋಡಿಯನ್ನೇ ಹರಿಯಿಸುವ ಸಂದರ್ಭಗಳೂ ಉಂಟು. ತಾನೇ ಮಾರ್ಜಾಲ; ಕುಳಿತು ಕೇಳುವವರೆಲ್ಲ ಕೇವಲ ಮೂಷಕಗಳು ಎಂಬ ಹೆಮ್ಮೆಯಿಂದ ಬಂದ ಭಾಷಣಕಾರ ಸುಸ್ತಾಗುವ ಸೀನನ್ನು ನೆನೆಸಿಕೊಂಡರೆ ಇಲಿಗೆ ಚೆಲ್ಲಾಟ—ಬೆಕ್ಕಿಗೆ ಪ್ರಾಣಸಂಕಟ ಎಂಬ ಗಾದೆ ನೆನಪಿಗೆ ಬರುತ್ತೆ. ಲಿಪ್ಸಿಂದ 'ತ್ಸು, ತ್ಸು' ಎಂಬ ಸಿಂಪತಿಯೂ ಸಿಡಿಯುತ್ತೆ.

ಉದಾಸೀನದಿಂದ ಸುಖಾಸೀನರಾಗಿ ನಮ್ಮಂತೆ ಸುಮ್ಮನೆ ಕುಳಿತು ಕೇಳುವು ದನ್ನು ಬಿಟ್ಟು, ಸುಕಾಸುಮ್ಮನೆ ವೇದಿಕೆ ಹತ್ತಿದಾನಲ್ಲಾ ಎಂದು ಸಭಿಕರು ಸವಾಲ್ ಹಾಕಬಹುದು. ಆದರೆ, ಎಲ್ಲರೂ ಬೊಂಬು ಹೊರುವವರಾದರೆ ಮಲಗುವವರು ಯಾರು ಎಂಬ ಪ್ರಶ್ನೆ ಉದ್ಭವಿಸುತ್ತದೆ. ಈ ಸಮಸ್ಯಾಪರಿಹರಕ್ಕಾಗಿಯೇ 'ಭಾಷಣ' ಎಂಬ ನಾಟಕವನ್ನಿಟ್ಟುಕೊಂಡು ಕೆಲವರು ಕೈಕಾಲು ನಡುಗಿಸಿ ನಕಲೀ ಪಾರ್ಟು ಮಾಡಿ, ಸೇರಿದವರನ್ನು ಸಂತೋಷಪಡಿಸಿ ಸತಾಯಿಸುತ್ತಾರೆ!

ಈ ಸಭಾಕಂಪವನ್ನು ನೋಡಿ ಮನದಣಿಯ ಹಿಗ್ಗಬೇಕಾದರೆ, ಆಯಾ ಭಾಷಣ ಕಾರರು ತೊಟ್ಟುಕೊಂಡು ಬಂದ ಉಡುಪಿನಿಂದಲೇ. ಮದರಾಸಿನವರು ಉಡುವ ಹಾಗೆ ಅಡ್ಡಪಂಚೆ ಉಟ್ಟು ಭಾಷಣಕ್ಕೆ ನಿಂತರೆ ಕಾಲ್ನಡುಕ ಸಭೆಗೆ ಅಷ್ಟೊಂದು ಗೊತ್ತಾ ಗುವುದಿಲ್ಲ. ಆದರೆ, ಪ್ಯಾಂಟ್ ತೊಟ್ಟು ಭಾಷಣಕ್ಕೆ ನಿಂತರೆ, ಎರಡು ಕಾಲೂ

ನಡನಡುಗುವುದು ಗೋಚರವಾಗುತ್ತದೆ. ಆ ಪ್ರಾಣಿ ಆಪಾದಮಸ್ತಕ ಗಡಗಡನೆ ನಡುನಡುಗಿ, ಒಣಗಿದಾ ಜಿಹ್ವೆಯಂ ಹೊರಚಾಚಿ ಒಳಸೆಳೆದು, ತಡವರಿಪ ಕರದಿಂದ ಕರವಸ್ತ್ರಮಂ ತೆಗೆದು, ತನ್ನ ಮೊಗಕೆ ತಾನೆ ಮಂಗಳಾರತಿಯೆತ್ತುವೊಲು, ತನ್ನ ಕರದಿಂ ತಾನೆ ತನ್ನ ವದನಕೆ ಚಾಮರಂ ಬೀಸಿ ಗದ್ಗದಿಸುವಾ ನೋಟ ಅಂದಿನ ಸಭೆಯ ಎಂತಹ ಅಧ್ಯಕ್ಷನನ್ನಾದರೂ ಬೆಚ್ಚಿಸುತ್ತದೆ. ಅಂತಹ ಭಾಷಣಕಾರ ಕನ್ನಡಕ ಉಪಯೋಗಿಸು ವವನಾದರಂತೂ ಬಿಡಿ ; ಭಾಷಣಕ್ಕೆ ನಿಂತೊಡನೆ ಆತ ಮಾಡುವ ಮೊದಲ ಕೆಲಸ ವೆಂದರೆ, ತನ್ನ ಕನ್ನಡಕವನ್ನು "ಸಭಿಕರೆ ಮತ್ತು ಸಭಾಧ್ಯಕ್ಷರೆ" ಎಂದು ಸಂಬೋಧಿಸಿ ದೊಡನೆಯೇ ಗಂಭೀರವಾಗಿ, ಮಡಿಸಿ ಕಿಸೆಯಲ್ಲಿಟ್ಟುಕೊಳ್ಳುವುದು. ಇಂತಹವನು ನಿಜ ವಾಗಿಯೂ ನಾವು ಯಾವ ಕೋಣದಿಂದ ನೋಡಿದರೂ, ಜಾಣನೇ ಸೈ ! ಏಕೆಂದರೆ, ಅವನಿಗೂ ಗೊತ್ತು ; ಅವನ ಭಾಷಣದ ಮಧ್ಯೆ ಕನ್ನಡಕ ಹೇಳದೆ ಕೇಳದೆ ಮೂಗು ಕಿವಿಗಳ ಕಂಟ್ರೋಲನ್ನೂ ಮೀರಿ, ಜಾರಿ, ನುಚ್ಚುನೂರಾಗುವುದೆಂದು. ಪಾಪ ! ಒಂದೊಂದು ಭಾಷಣಕ್ಕೂ ಒಂದೊಂದು ಕನ್ನಡಕ ಕೊಳ್ಳುತ್ತ ಹೋದರೆ ಅವನಿಗೆ ಚಂದಾ ಕೂಡಿಸಿಕೊಡಲು ಇನ್ನೆಷ್ಟು ಜೀವ ಹುಟ್ಟಬೇಕೊ !

ಇಂತಹ ಬೆವರಿ ಬೆಚ್ಚುವ ಭಾಷಣಕಾರರೇ ಇಂದು ಜಾಸ್ತಿಯಾಗಿರುವುದರಿಂದ ಪ್ರತಿ ಸಭೆಯಲ್ಲೂ ವೇದಿಕೆಯ ಮೂಲೆಯಲ್ಲಿ ಕಾರ್ಯದರ್ಶಿ ಲೋಟಾಸಮೇತಾ ನೀರು ತುಂಬಿದ ಹೂಜಿಯಿಟ್ಟಿರುತ್ತಾನೆ. ಭಾಷಣದ ಪ್ರಾರಂಭದಲ್ಲಿ ಸಭೆಯ ಔಚಿತ್ಯಕ್ಕೆ ತಕ್ಕಂತೆ ಶುಭ್ರವಾದ ಗಾಜಿನ ಲೋಟಾವೊಂದರಲ್ಲಿ ನೀರು ತುಂಬಿ ಭಾಷಣಕಾರನ ಪಕ್ಕದ ಮೇಜಿನಮೇಲಿಡುವುದು ರೂಢಿ. ಗಾಜಿನ ಲೋಟವೇನೊ ಅಂದವೇ, ಕುಡಿತದ ಕೈ ಹತೋಟಿಯಲ್ಲಿದ್ದರೆ. ಆದರೆ ಮೈ ಕೈ ನಡುಗಿದಾಗ ಭಾಷಣಕಾರ ಕುಡಿಯಲಿಕ್ಕೆ ಅಂತಹ ಗಾಜಿನ ಲೋಟಕ್ಕೆ ಕೈ ಚಾಚಿದರೆ, ಅದೂ ಕೈ ಜಾರಿ ನೆಲಕ್ಕೆ ಬಿದ್ದರೆ ? ನೀರು ಹೋದರೂ ಹೋಗಲಿ. ಒಂದು ಲೋಟ ನೀರು ಚೆಲ್ಲಿದರೆ ನಾಲ್ಕು ಕೊಡ ನೀರು ತರಿಸುವ (ಅಥವಾ ಹೊರುವ) ತಾಕತ್ತು ಕಾರ್ಯದರ್ಶಿಗಿಲ್ಲವೆ? ಆದರೆ ಲೋಟ ನುಚ್ಚುನೂರಾಗದಿದ್ದೀತೆ? ಆದ್ದರಿಂದಲೆ, ಈಗೀಗ ಸಭೆಗಳಲ್ಲಿ ಗಾಜಿನ ಲೋಟದ ಬದಲಿಗೆ ಅಲ್ಯೂಮಿನಂ ಲೋಟ ಮೇಜನ್ನಲಂಕರಿಸುತ್ತದೆ. ಅಲ್ಲದೆ ಅಂತಹ ಲೋಟ ಇಡುವುದರಿಂದ ಕುಡಿವವಗಲ್ಲದೆ ಉಳಿದವರಿಗೆ ಲೋಟದೊಳಗೆ ಕಾರ್ಯದರ್ಶಿ ಕೊಟ್ಟಿರುವುದೇನು ಎಂಬುದು ಗೊತ್ತಾಗುವಂತಿಲ್ಲ. ನೀರಿದ್ದರೂ ಇರಬಹುದು ; ಅದು ಬೀರಿದ್ದರೂ ಇರಬಹುದು. ಅಥವಾ ಹಿಂದಿನದಿನದ ಬೀರಿದ್ದರೂ ಇರಬಹುದು. ಮೂವರಿಗೇ ಗೊತ್ತು. ಕೊಟ್ಟ ಕಾರ್ಯದರ್ಶಿಗೆ; ಕುಡಿವ ಭಾಷಣಕಾರನಿಗೆ; ವಾಸನೆಯನ್ನು ಸೂಕ್ಷ್ಮವಾಗಿ ಗ್ರಹಿಸಬಲ್ಲ ಮೂಗಿರುವ ಅಧ್ಯಕ್ಷ ಮಹಾಶಯಗೆ.

ಭಾಷಣಕಾರನಿಗೆ ಉಂಟಾದ ಸಭಾಕಂಪದ ಸ್ಥಿತಿಯನ್ನು ಇತರರೂ ಈಕ್ಷಿಸಿ ಆನಂದಿಸುವಂತೆ ಅಧ್ಯಕ್ಷರೂ ಆನಂದಿಸುತ್ತಾರೆ. ಆದರೆ ಅಧ್ಯಕ್ಷ ಮಹಾಶಯನು ಸಭಿಕರು ಗೊಳ್ಳೆನುವಂತೆ ಬಾಯಿಬಿಟ್ಟು ನಗಲಾರ. ಹಾಗೆ ನಗುವುದು ತನ್ನ ಸ್ಥಾನಕ್ಕೂ ತಕ್ಕುದಲ್ಲ. ಹಾಗೆ ನಗದಿರುವುದಕ್ಕೆ ಕಾರಣವೂ ಉಂಟು; "ಗಾಜಿನ ಮನೆಯಲ್ಲಿರುವಾತ ಬೇರೆ ಮನೆಯ ಮೇಲೆ ಕಲ್ಲೆಸೆಯಬಾರದು" ಎಂಬ ಭದ್ರೋಪದೇಶವೇ ಅವನಿಗೆ ನಿಯಮ. ಏಕೆಂದರೆ, ತಾನು ಭಾಷಣಕ್ಕೆ ನಿಂತಾಗಲೂ ಸಭಾಕಂಪ ತಪ್ಪಿದ್ದಲ್ಲ. ಭಾಷಣಕಾರನನ್ನು ನೋಡಿ ಆಗ ತಾನು ನಕ್ಕಿದ್ದಾದರೆ, ಈಗ ಭಾಷಣಕಾರನೂ ಮರುನಕ್ಕು ಮುಯ್ಯಿ ತೀರಿಸಬಹುದಲ್ಲ. ಅತ್ತೆಗೊಂದು ಕಾಲವಾದರೆ, ಸೊಸೆಗೊಂದು ಕಾಲ!

ಆದರೆ, ಅಧ್ಯಕ್ಷ ಸಭಾಕಂಪಕ್ಕಾಗಿ ಭಾಷಣಕಾರನಷ್ಟು ಬೆದರಬೇಕಾಗಿಲ್ಲ. ಅವನು ಮೇಜಿನ ಹಿಂದೆಯೇ ನಿಂತು ಭಾಷಣಮಾಡುವುದರಿಂದ ಕಾಲುನಡುಕ ಸಭೆಗೆ ಗೋಚರವಾಗದು. ಅಲ್ಲದೆ ಮೇಜಿನ ಮೇಲೆ ಬಣ್ಣದ ವಸ್ತ್ರ ಹಾಸಿರುವುದರಿಂದ ನೆಲದವರೆಗೆ ಅದು ಶೋಭಾಯಮಾನವಾಗಿ ಮುಚ್ಚುವುದರಿಂದ ಇವನ ಕಾಲಿನ ಗೌರವವನ್ನು ಕಾಪಾಡುತ್ತೆ. ಅಷ್ಟುಹೊತ್ತಿಗೆ ವೇಳೆಯೂ ಮೀರಿರುವುದರಿಂದ ಅಧ್ಯಕ್ಷರು ಮಾಮೂಲಾಗಿ, "ಈ ವಿಷಯದ ಮೇಲೆ ಗಂಟೆಗಟ್ಟಲೆ ನಿಂತು ಮಾತಾಡಬಹುದು; ಆದರೆ ಆಗಲೇ ವೇಳೆಯಾಗಿರುವುದರಿಂದ ಇಲ್ಲಿಗೇ ಭಾಷಣ ನಿಲ್ಲಿಸಬೇಕಾಗಿದೆ" ಎಂದು ಗಂಭೀರವಾಗಿ ಮುಗಿಸಿ ಬಚಾವಾಗುತ್ತಾರೆ. ಸಧ್ಯಕ್ಕೆ ಬೀಸುವ ದೊಣ್ಣೆ ತಪ್ಪಿಸಿಕೊಂಡರೆ ಮುಂದಿನ ಸಭೆಗೂ ಅವರೇ ಅಧ್ಯಕ್ಷರಾಗಬಹುದು!

ಸರಿ; ಮಾಮೂಲಾಗಿ ಕಾರ್ಯದರ್ಶಿ ವಂದನಾರ್ಪಣೆಯ ಮಂಗಳಾರತಿಯನ್ನು ಅಧ್ಯಕ್ಷ ಮತ್ತು ಭಾಷಣಕಾರರ ಮುಖಕ್ಕೆ ಎತ್ತುತ್ತಿದ್ದಂತೆಯೇ ಪರದೆ ಬಿದ್ದು ಎಲ್ಲರೂ ವೇದಿಕೆಮೇಲಿಂದ ಪರಾರಿಯಾಗುತ್ತಾರೆ.

ದೇವಂಗಿ ಟಿ. ಚಂದ್ರಶೇಖರ.

ರಾಜಕಾರಣ

ರಾಜಕೀಯವು ಕುಹಕ, ಕುತಂತ್ರ; ರಾಜಕಾರಣಿಗಳು ಮೋಸಗಾರರು, ವಂಚಕರು. ಈ ಮಾತು ಅನೇಕರ ಬಾಯಿಂದ ಬಂದಿದೆ. ರಾಜಕಾರ್ಯವೆಂದರೇನು? ರಾಜಕೀಯ ನಡವಳಿಕೆ ಎಂತಹುದು? ರಾಜಕಾರ್ಯ ಸಾಧಕರು ಸಾರ್ವಜನಿಕ ಜೀವನದಲ್ಲಿ ಯಾವ ಪಾತ್ರ ವಹಿಸುತ್ತಾರೆ? ರಾಷ್ಟ್ರತಂತ್ರದ ಸಮಸ್ಯೆಗಳೇನು? ಪರಿಹಾರವೇನು? ಈ ಪ್ರಶ್ನೆಗಳನ್ನು ಬಗೆಹರಿಸಿದರೆ ಮೇಲಿನ ಆಕ್ಷೇಪಣೆಯ ಸತ್ಯಾಸತ್ಯತೆಯ ತಿರುಳು ಗೊತ್ತಾಗುತ್ತದೆ.

ಚರಿತ್ರೆಯ ಪ್ರಾರಂಭಕಾಲದಿಂದಲೂ ರಾಜಕೀಯ ತಂತ್ರ ಬೆಳೆದುಬಂದಿದೆ. ಪ್ರಪಂಚದ ಅಸಂಖ್ಯ ದೇಶಗಳು, ಜನಾಂಗಗಳು ಪ್ರಾಚೀನಕಾಲದಿಂದ ರಾಷ್ಟ್ರ ಅಥವಾ ನಾಡನ್ನು ಕಟ್ಟಿಕೊಂಡು ತಮ್ಮ ಜೀವನದಲ್ಲಿ ಎದುರಾದ ಸಮಸ್ಯೆಗಳನ್ನು ಪರಿಹರಿಸಲು ಪ್ರಯತ್ನಿಸಿವೆ. ದೊಡ್ಡ ದೊಡ್ಡ ಚಕ್ರಾಧಿಪತ್ಯಗಳು ಎದ್ದುಬಿದ್ದ ಕಥೆಯನ್ನು ಇತಿಹಾಸವು ಹೇಳುತ್ತದೆ. ರಾಜತಂತ್ರ ಸಾಧಕರು, ರಾಜಕಾರಣ ಪಟುಗಳು ತಮ್ಮ ಪ್ರತಿಭೆಗನುಗುಣವಾಗಿ ರಾಷ್ಟ್ರನೌಕೆಯನ್ನು ನಡೆಸಿದ್ದಾರೆ. ರಾಜ್ಯಗಳ ಏಳುಬೀಳನ್ನು ರಾಜಕೀಯ ತಂತ್ರಗಳ ಸೋಲುಗೆಲವನ್ನು ಇತಿಹಾಸದರ್ಪಣದಲ್ಲಿ ನಾವು ಕಾಣಬಹುದು. ರಾಜನೀತಿ ದರ್ಶನದ 'ರಾಮಾಯಣ' 'ಮಹಾಭಾರತ'ಗಳ ಪರಿಚಯ ಮಾಡಿಕೊಳ್ಳಬಹುದು.

ಕ್ರಿಸ್ತಶಕಕ್ಕೆ ಮೊದಲು ಪ್ರಾಚೀನ ಗ್ರೀಕರು ಹಿರಿಯ ಹೆಸರು ಪಡೆಯುವಂತೆ ರಾಜಕೀಯ ಜೀವನ ನಡೆಸಿದರು. ಮತಪ್ರಭಾವಕ್ಕೊಳಗಾಗಿದ್ದರೂ ಗ್ರೀಕರಾಗಲೀ ಅವರ ತರುವಾಯ ಬಂದ ರೋಮನ್ನರಾಗಲೀ ಮತೀಯ ರಾಷ್ಟ್ರವನ್ನು ಕಟ್ಟಲಿಲ್ಲ. ಅವರು ಲೌಕಿಕ ರಾಜ್ಯದ ಉಪಾಸಕರು. ತಮ್ಮ ಪ್ರಭುತ್ವವನ್ನೂ, ಸಂಸ್ಕೃತಿಯನ್ನೂ ಮತ್ತೊಬ್ಬರ ಮೇಲೆ ಹೇರಬೇಕೆಂಬುದೇ ಅವರ ಆಕಾಂಕ್ಷೆಯಾಗಿತ್ತು. ತಮ್ಮ ಹಿತಸಂವರ್ಧನೆ ಮತ್ತು ಪ್ರಭಾವ ವಿಕಾಸಗಳೇ ಅವರ ಜೀವನದ ರಹಸ್ಯಗಳಾಗಿದ್ದುವು. ದೇವರ ಹೆಸರಿನಲ್ಲಿ ರಾಜಕೀಯ ಪ್ರಭಾವವಿರುವುದಾಗಲೀ, ದೇವರನ್ನು ಹೊತ್ತುಕೊಂಡು ಕುಣಿಯುವುದಾಗಲೀ, ಅವರಿಗೆ ಬೇಕಾಗಿರಲಿಲ್ಲ. ರಾಷ್ಟ್ರತಂತ್ರವು ಲೌಕಿಕ ಸುಖಸಾಧನೆಯ ಉಪಕರಣವಾಗಿತ್ತು.

ಮಧ್ಯಯುಗದಲ್ಲಿ ಧಾರ್ಮಿಕ ಮತ್ತು ರಾಜಕೀಯ ತತ್ವಗಳ ಘರ್ಷಣೆ ತಲೆದೋರಿತು. ಕ್ರೈಸ್ತ ಧರ್ಮಗುರುಗಳು ರಾಜಕೀಯ ಅಧಿಕಾರಕ್ಕಾಗಿ ಈ ಹೋರಾಟ

ಹೂಡಿದರು. 'ಅರಮನೆ ಗುರುಮನೆ'ಗಳಲ್ಲಿ ತಿಕ್ಕಾಟ ನಡೆಯಿತು. ಧರ್ಮಗುರುಗಳು ತಮ್ಮ ಶಕ್ತಿಯನ್ನು ದೇವರ ಹೆಸರಿನಲ್ಲಿ, ಧರ್ಮದ ಸೋಗಿನಲ್ಲಿ, ರಾಷ್ಟ್ರದ ಅಧಿಕಾರ ನಡೆಸಿದರು. ಮಧ್ಯಯುಗವು ಅಸ್ತಂಗತವಾಗಿ ಆಧುನಿಕ ಕಾಲ ಪ್ರಾರಂಭವಾಗುತ್ತಲೇ ಧಾರ್ಮಿಕ ಶಕ್ತಿಯ ಪ್ರಭಾವ ಕಡಿಮೆಯಾಗುತ್ತಬಂತು. ರಾಷ್ಟ್ರಛತ್ರದ ಕೆಳಗೆ ರಾಷ್ಟ್ರಗಳು ತಲೆಯೆತ್ತಲಾರಂಭಿಸಿದವು. ಅರಸೊತ್ತಿಗೆಯ ಉಪಟಳ ಹೆಚ್ಚಾಗಲು ಅವರ ವಿರುದ್ಧ ಜನರು ದೊಡ್ಡ ಸಂಗ್ರಾಮವನ್ನೇ ಹೂಡಬೇಕಾಯಿತು. ಇಂಗ್ಲೆಂಡಿನಲ್ಲಿ, ಫ್ರಾನ್ಸಿನಲ್ಲಿ ರಾಜನ ಕೊಲೆಯಾಯಿತು. ಪ್ರಜಾಪ್ರಭುತ್ವವು ಫ್ರಾನ್ಸ್, ಇಂಗ್ಲೆಂಡ್, ಅಮೇರಿಕಾ ಮೊದಲಾದ ದೇಶಗಳಲ್ಲಿ ಸ್ಥಾಪಿತವಾಯಿತು.

ಪ್ರಪಂಚದ ಒಂದನೇ ಮಹಾಯುದ್ಧದ ತರುವಾಯ ಯೂರೋಪಿನಲ್ಲಿ ರಾಜ್ಯಕ್ರಾಂತಿಗಳಾದವು. ಇಟಲಿ, ಜರ್ಮನಿ, ರಷ್ಯ ದೇಶಗಳು ಸರ್ವಾಧಿಕಾರಿ ಪ್ರಭುತ್ವವನ್ನು ಸ್ಥಾಪಿಸಿಕೊಂಡವು. ಇಟಲಿ, ಜರ್ಮನಿಗಳ ರಾಜ್ಯವಿಸ್ತರಣೆಯ ದಾಹದ ಪ್ರತೀಕವೇ ಪ್ರಪಂಚದ ಎರಡನೆಯ ಯುದ್ಧ. ಜರ್ಮನಿ, ಇಟಲಿ, ಜಪಾನುಗಳ ಶಕ್ತಿ ಕುಸಿಯಿತು. ಎರಡನೆಯ ಯುದ್ಧದ ರುದ್ರನಾಟಕ ಮುಕ್ತಾಯವಾಯಿತು. ಮಾನವ ಚರಿತ್ರೆಯ ಆದಿಯಿಂದಲೂ ಈ ಯುದ್ಧಗಳು ಆಗುತ್ತಲೇ ಇವೆ. ಆದರೆ ರಾಷ್ಟ್ರಗಳ ಜೀವನಗುರಿ ಏನು? ರಾಷ್ಟ್ರತಂತ್ರ ಹೇಗಿರಬೇಕು? ರಾಷ್ಟ್ರದ ಮೂಲನಿರ್ದೇಶಕ ತತ್ವಗಳಾವುವು? ರಾಜ್ಯನೀತಿಯ ಸ್ವರೂಪ ಎಂತಹದು? ಇವೇ ಮೊದಲಾದ ಪ್ರಶ್ನೆಗಳು ನಮ್ಮನ್ನು ಇನ್ನೂ ಬಾಧಿಸುತ್ತಲಿವೆ. ಇವುಗಳನ್ನು ಉತ್ತರಿಸಲು ರಾಜ್ಯವಿಸ್ತಾರಕರ, ರಾಜಕಾರಣ ಪಟುಗಳ ಅನುಭವವು ಸಹಾಯಕವಾಗುವುದರಲ್ಲಿ ಸಂದೇಹವೇ ಇಲ್ಲ.

ಈ ಅನುಭವದ ಬೆಳಕಿನಲ್ಲಿ ರಾಜನೀತಿ ತತ್ವಗಳು ಬರೆಯಲ್ಪಟ್ಟಿವೆ. ಬೇರೆ, ಬೇರೆ ದೇಶ, ಕಾಲ, ಸನ್ನಿವೇಶದಲ್ಲಿ ಜನಿಸಿದ ರಾಜಕೀಯ ತತ್ವವೇತ್ತರೂ, ರಾಜಕಾರಣ ಪಟುಗಳೂ ರಾಜಕೀಯ ತತ್ವಗಳನ್ನು ಪ್ರತಿಪಾದಿಸಿದ್ದಾರೆ. ಪ್ಲೇಟೋ, ಅರಿಸ್ಟಾಟಲ್, ಮೆಕವೆಲ್ಲಿ, ಲಿಂಕ್, ರೂಸೋ, ಮಿಲ್, ನೀಚೆ, ಮಾರ್ಕ್ಸ ಮೊದಲಾದ ಮೇಧಾವಿಗಳು ರಾಜತಂತ್ರವನ್ನು ಕುರಿತು ವಿವೇಚಿಸಿದ್ದಾರೆ; ಭಾರತದಲ್ಲಿಯೂ ಕೂಡ ರಾಜನೀತಿಯನ್ನು ಕುರಿತು ಬರೆದ ಕೆಲವು ಗ್ರಂಥಗಳು ಸಿಕ್ಕುತ್ತವೆ. ಇವುಗಳಲ್ಲಿ ಕೌಟಿಲ್ಯ ಅಥವಾ ಚಾಣಕ್ಯನ ಅರ್ಥಶಾಸ್ತ್ರವು ಲೋಕಪ್ರಸಿದ್ಧವಾಗಿದೆ. ಇತ್ತೀಚೆಗೆ ವ್ಯಕ್ತವಾಗಿರುವ ಮಹಾತ್ಮ ಗಾಂಧಿ, ಎಂ. ಎನ್. ರಾಯ್ ಮೊದಲಾದವರ ರಾಜಕೀಯ ಅಭಿಪ್ರಾಯಗಳು ಶಾಸನಶಾಸ್ತ್ರಕ್ಕೆ ಅಮೋಘ ಕಾಣಿಕೆಯಾಗಿವೆ. ಪಾಶ್ಚಾತ್ಯ ಲೇಖಕರಲ್ಲಿ ಪ್ರಸಿದ್ಧರಾದ ಹೆಚ್. ಜಿ. ವೆಲ್ಸ, ಬರ್ನಾರ್ಡ್ ಷಾ, ಬರ್ಟರೆಂಡ್

ರಸೆಲ್, ಹೆರಾಲ್ಡ್ ಲಾಸ್ಕಿ, ಮೊದಲಾದವರ ಬರಹಗಳು ರಾಜಕೀಯ ವಿಜ್ಞಾನಕ್ಕೆ ವಿಶೇಷ ಕಳೆಯನ್ನು ತಂದಿವೆ.

ರಾಜ್ಯತಂತ್ರದ ಬಗ್ಗೆ ಭಿನ್ನಾಭಿಪ್ರಾಯಗಳಿವೆ. ಅರಾಜಕ ತತ್ವವಾದಿಗಳು ರಾಜ್ಯ ಸಂಸ್ಥೆಯೇ ಇರಕೂಡದೆನ್ನುತ್ತಾರೆ. ಮತ್ತೆ ಕೆಲವರು ರಾಜ್ಯಸಂಸ್ಥೆಯ ಅಗತ್ಯತೆಯನ್ನು ಒಪ್ಪುವುದಲ್ಲದೆ ಸೈನ್ಯಬಲದ ತಳಹದಿಯ ಮೇಲೆ ಅದನ್ನು ಕಟ್ಟಬೇಕೆಂದು ವಾದಿಸುತ್ತಾರೆ. ಇದೇ ಶಕ್ತಿಸಿದ್ಧಾಂತ. ಇದನ್ನು ವಿರೋಧಿಸುವವರೇ ಶಾಂತಿವಾದಿಗಳು. ಮಾರ್ಕ್ಸನ ಅನುಯಾಯಿಗಳು, ರಾಜ್ಯವು ಕೆಲವು ಬಂಡವಾಳಶಾಹಿಗಳ ಸುಲಿಗೆಯ ಸಾಧನವೆಂದೂ ಇದನ್ನು ನಾಶಗೊಳಿಸಿ ಸಾಮ್ಯವಾದವನ್ನು ಸಾಧಿಸಬೇಕೆಂದೂ ಪ್ರತಿಪಾದಿಸುತ್ತಾರೆ. ಪ್ರಜಾಪ್ರಭುತ್ವವಾದಿಗಳು ವ್ಯಕ್ತಿಸ್ವಾತಂತ್ರ್ಯವನ್ನು ಎತ್ತಿಹಿಡಿದು ಶಾಸನ ಬದ್ಧರೀತಿ ಯಲ್ಲಿಯೇ ಸಾಮ್ಯವಾದದ ಗುರಿಯನ್ನು ಕ್ರಮೇಣ ಸಾಧಿಸಬಹುದೆಂದು ಅಭಿಪ್ರಾಯ ಪಡುತ್ತಾರೆ. ಹೀಗೆ ನಾನಾದೃಷ್ಟಿಗಳಿಂದ ರಾಜ್ಯದ ಗುರಿ ಮತ್ತು ಸಾಧನೆಗಳ ಬಗ್ಗೆ ರಾಜನೀತಿಜ್ಞರು ತಮ್ಮ ಖಚಿತವಾದ ಮತಗಳನ್ನು ಹೊರಗೆಡವಿದ್ದಾರೆ. ಇದರಿಂದ ರಾಜಕೀಯ ತತ್ವಗಳಲ್ಲಿ ಪರಸ್ಪರ ಘರ್ಷಣೆಯುಂಟಾಗುವುದು ಸ್ವಾಭಾವಿಕವಾಗಿದೆ.

ಅಂತಯೇ ರಾಜ್ಯದ ಆಡಳಿತ, ರಾಷ್ಟ್ರನೀತಿ ಮತ್ತು ವಿದೇಶಾಂಗ ಧೋರಣೆ ಮೊದಲಾದ ಜಟಿಲ ಸಮಸ್ಯೆಗಳ ಬಗ್ಗೆ, ವಿಪುಲವಾದ ವಿವಾದಗಳುಂಟಾಗಿವೆ. ದೇಶದ ರಾಜ್ಯಸೂತ್ರಗಳು ವೇದಾಂತಿ (ವೇದಾಂತ ಬಲ್ಲವರೇ ರಾಜರು)ಗಳ ಕೈಯಲ್ಲಿರಬೇಕೆಂದು ಪ್ಲೇಟೋ ಎಂಬ ಆದರ್ಶವಾದಿ ವಾದಿಸಿದರೆ ಅವನೊಬ್ಬ ಹುಚ್ಚನೆಂದು ವಾಸ್ತವ ವಾದಿಗಳು ಬೀಳುಗಳೆಯುತ್ತಾರೆ. ಸರ್ವಾಧಿಕಾರವೇ ಮಿಂಚಿನಂತೆ ರಾಜ್ಯದ ಅಭ್ಯುದಯವನ್ನು ಸಾಧಿಸಬಲ್ಲದೆಂದು ಕೆಲವರು ಪ್ರತಿಪಾದಿಸಿದರೆ ಇದು ಮಾನವ ವ್ಯಕ್ತಿತ್ವ ವಿನಾಶಕ ತತ್ವವೆಂದು ಸರ್ವಾಧಿಕಾರಿ ಪ್ರಭುತ್ವ ವಿರೋಧಿಗಳು ಸಾರಿ ಹೇಳುತ್ತಾರೆ. ಇಂತಹ ಪ್ರಾಮಾಣಿಕ ಮತಭೇದವುಳ್ಳ ರಾಜಕೀಯ ತತ್ವಗಳು ಹಲವಾರು. ರಾಷ್ಟ್ರತಂತ್ರಕ್ಕೆ ಸಂಬಂಧಿಸಿದ ಇಂತಹ ಅತ್ಯಂತ ಗಹನವಾದ ವಿಷಯ ಗಳಲ್ಲಿ ಸಿದ್ಧಿ ಮತ್ತು ಸಾಧನೋಪಾಯಗಳಿಗೆ ಸಂಬಂಧಿಸಿದ್ದು ಬಹು ಮುಖ್ಯವಾಗಿದೆ.

ಸಾಮಾನ್ಯವಾಗಿ ರಾಜಕೀಯ ಅಥವಾ ರಾಷ್ಟ್ರತಂತ್ರ ಶಕ್ತಿಯ ತಳಹದಿಯ ಮೇಲೆ ಸಾಗುತ್ತದೆ. ಗುರಿ ಒಳ್ಳೆಯದಾದರೆ ಅದನ್ನು ಸಾಧಿಸುವ ಮಾರ್ಗ ಯಾವು ದಾದರೂ ಆಗಬಹುದು ಎಂಬ ತತ್ವವನ್ನು ಮೆಕವೆಲ್ಲಿ ಎಂಬ ಇಟಲಿ ದೇಶದ ಲೇಖಕ 'ರಾಜಕುಮಾರ' ಎಂಬ ತನ್ನ ಪುಸ್ತಕದಲ್ಲಿ ಪ್ರತಿಪಾದಿಸಿದ್ದಾನೆ. ರಾಷ್ಟ್ರತಂತ್ರಕ್ಕೂ, ನೈತಿಕ ವಿಚಾರಗಳಿಗೂ ಯಾವ ಸಂಬಂಧವನ್ನೂ ಹಚ್ಚಬಾರದೆಂದು ಅವನ ಸ್ಪಷ್ಟ ಅಭಿ ಪ್ರಾಯ. ದೇಶದ ಒಳಹೊರಗಿನ ಶತ್ರುಗಳನ್ನು ನಿವಾರಿಸಲು ರಾಜನೀತಿಜ್ಞರು ಯಾವ

ದಾರಿಯನ್ನಾದರೂ ಹೇಯವಾದರೂ ಚಿಂತೆಯಿಲ್ಲ ಹಿಡಿಯಬೇಕು. ಪ್ರಪಂಚದಲ್ಲಿ ಬಲವೇ ಆಳುತ್ತದೆ. ಬಲಶಾಲಿಗಳು ದುರ್ಬಲರನ್ನು ಆಳುತ್ತಾರೆ. ರಾಷ್ಟ್ರದ ಸೂತ್ರ ಧಾರಿಗಳು ಕ್ರೌರ್ಯ, ದೌರ್ಜನ್ಯಗಳಿಗೂ ಕೂಡ ಹೇಸಬಾರದು. ರಾಜನು ಜನರ ಪ್ರೀತಿ ಪಾತ್ರನಾಗಿರಬೇಕೆ? ಇಲ್ಲವೆ ಭೀತಿಪಾತ್ರನಾಗಿರಬೇಕೆ? ಎಂಬ ವಿಷಯದಲ್ಲಿ ಮೆಕ ವೆಲ್ಲಿಯು ಜನರಲ್ಲಿ ಪ್ರೀತಿಗಿಂತ ಹೆದರಿಕೆಯೇ ಹೆಚ್ಚಾಗಿ ಹರಡುವಂತೆ ರಾಜನು ನೋಡಿ ಕೊಳ್ಳಬೇಕೆಂದು ವಾದಿಸಿದ್ದಾನೆ. ಮೆಕವೆಲ್ಲಿಯ ತತ್ವ ೧೯ನೆಯ ಶತಮಾನದಲ್ಲಿ ಮತ್ತೆ ನೀಚೆ ಎಂಬ ಜರ್ಮನ್ ತತ್ವಶಾಸ್ತ್ರಜ್ಞನ ಮೂಲಕ ಪುನರ್ಜನ್ಮ ತಾಳುತ್ತದೆ. ನೀಚೆ ರಾಜ್ಯವನ್ನು ವಿಸ್ತಾರಗೊಳಿಸಲು ಯುದ್ಧ ಹೂಡುವುದು ನ್ಯಾಯವೆಂದು ಘೋಷಿಸಿ ದ್ದಾನೆ. ಡಾರ್ವಿನ್ನನ ತತ್ವ ಕೂಡ ಬಲಾಢ್ಯರಾದವರು ಜಗತ್ತನ್ನು ಆಳಬೇಕೆಂಬ ಮೆಕ ವೆಲ್ಲಿಯ ತತ್ವಗಳನ್ನು ಎತ್ತಿ ಹಿಡಿಯುತ್ತದೆ. ಈ ಶಕ್ತಿ ತತ್ವದ ಮೇಲೆಯೇ ಜರ್ಮನಿಯಲ್ಲಿ ಹಿಟ್ಲರನು ಪ್ರಚಂಡ ರಾಷ್ಟ್ರ ವಿಸ್ತರಣೆಯ ಕಾರ್ಯಕ್ಕೆ ಕೈಹಾಕಿದ್ದು. ರಾಜಕಾರಣ ದಲ್ಲಿ ನೀತಿ ಅಥವಾ ಧರ್ಮವನ್ನು ಬೆರಸಕೂಡದೆಂಬುದು ಈ ಬಣದವರ ವಾದ.

ರಾಜ್ಯಸಂಸ್ಥೆಯ ವ್ಯಕ್ತಿಗಳನ್ನು ಹತೋಟಿಯಲ್ಲಿಟ್ಟಿರಬೇಕೆಂಬುದನ್ನು ಪ್ರಾಯಶಃ ಯಾರೂ (ಅರಾಜತತ್ವವಾದಿಗಳ ಹೊರತಾಗಿ) ಅಲ್ಲಗಳೆದಿಲ್ಲ. ಪ್ರಾಚೀನ ಕಾಲದಿಂದಲೂ ಸರಕಾರದ ನಿಯಂತ್ರಣವನ್ನು ಒಪ್ಪಲಾಗಿದೆ. 'ಷಿಯಾಸತ್' ಎಂಬ ಪರ್ಶಿಯನ್ ಪದ 'ಪಾಲಿಟಿಕ್ಸ್' ಎಂಬ ಇಂಗ್ಲೀಷ್ ಪದದ ಪರ್ಯಾಯವಾಗಿದೆ. ಜನರನ್ನು ಹೇಗೆ ಹತೋಟಿಯಲ್ಲಿಡಬೇಕೆಂಬುದೇ ಇದರ ಗೂಢಾರ್ಥ. ಭಾರತದಲ್ಲಿಯೂ ಕೂಡ ಪ್ರಾಚೀನ ಕಾಲದಲ್ಲಿ 'ದಂಡನೀತಿ' ಎಂಬ ಪದವನ್ನು ಉಪಯೋಗಿಸಲಾಗಿದೆ. ರಾಜ್ಯಕಾರ್ಯವೆಂದರೆ ಜನರನ್ನು ನಿಯಂತ್ರಿಸುವುದು ಎಂದು ಪ್ರತಿಪಾದಿಸಿದಾಕ್ಷಣ ರಾಜಕಾರಣವು ಯಾವ ನೈತಿಕಭಾವನೆಗಳಿಂದಲೂ ಪ್ರೇರಿತವಾಗಿರಕೂಡದು ಎಂದು ಹೇಳಲಿಕ್ಕಾಗದು. 'ದಂಡನೀತಿ' ಎಂದರೆ ದುಷ್ಟರನ್ನು ಶಿಕ್ಷಿಸುವುದು ಎಂದು ಅರ್ಥ. ಅಲ್ಲದೆ 'ದಂಡ'ವು ಧರ್ಮ, ಅರ್ಥ ಮತ್ತು ಕಾಮ (ಅಪೇಕ್ಷೆ) ಸಾಧನೆಯ ಮಾರ್ಗ ಮಾತ್ರ. ಆದುದರಿಂದ ರಾಷ್ಟ್ರತಂತ್ರ ಉಚ್ಚ ಆದರ್ಶಗಳನ್ನು ತಿರಸ್ಕರಿಸಬಾರದು. ಮಹಾತ್ಮ ಗಾಂಧಿ, ಟಾಲ್‌ಸ್ಟಾಯ್ ಮೊದಲಾದ ಶಾಂತಿವಾದಿಗಳು ಈ ಅಹಿಂಸಾತ್ಮಕ ರಾಜನೀತಿಯನ್ನು ಎತ್ತಿಹಿಡಿದಿದ್ದಾರೆ. ಗಾಂಧೀಜಿಯ ದೃಷ್ಟಿಯಲ್ಲಿ ಹಣ ಮತ್ತು ಅಧಿಕಾರ ಮನುಷ್ಯನನ್ನು ತಪ್ಪುದಾರಿಗೆಳೆಯುವ ಸಾಧನಗಳು. ಅವುಗಳ ದಾಸನಾಗದೆ ಮನುಷ್ಯ ತನ್ನ ವ್ಯಕ್ತಿತ್ವವನ್ನು ಬೆಳಸಬೇಕು.

ವ್ಯಕ್ತಿಯ ಹಿರಿಮೆಯೇ ರಾಷ್ಟ್ರದ ಅಡಿಗಲ್ಲು. ರಾಷ್ಟ್ರವು ಸ್ವಾರ್ಥಿಗಳ ಕ್ರೀಡಾ ರಂಗವಲ್ಲ. ರಾಜಕೀಯವು ಕೇವಲ ಕುಟಿಲತಂತ್ರವಲ್ಲ. ರಾಜ್ಯದ ಗುರಿ ಮತ್ತು

ಸಾಧನೆಗಳೆರಡೂ ಶುದ್ಧವಾಗಿರಬೇಕು. 'ಹಿಂಸೆಯಿಂದ ದೊರೆಯಬಹುದಾದ ಸ್ವರಾಜ್ಯ ನನಗೆ ಬೇಡ' ಎಂದು ಗಾಂಧೀಜಿ ಸ್ಪಷ್ಟವಾಗಿ ಹೇಳಿದರು. ವ್ಯಕ್ತಿ ರಾಷ್ಟ್ರಗಳ ನಡುವಿನ ಕಲಹ ಮತ್ತು ರಾಷ್ಟ್ರರಾಷ್ಟ್ರಗಳ ಕಲಹಗಳನ್ನು ಅಹಿಂಸಾತ್ಮಕವಾಗಿ ಪರಿಹರಿಸಿಕೊಳ್ಳಬೇಕು. ಯುದ್ಧವು ಮನುಷ್ಯನ ನೀತಿಯ ಅಧಃಪತನದ ಗುರುತಾಗಿದೆ. ಅಹಿಂಸಾತ್ಮಕ ಪ್ರತಿಭಟನೆಯಿಂದಲೇ ಜಗತ್ತಿನ ದಬ್ಬಾಳಿಕೆ ಮತ್ತು ಹಿಂಸಾಚಾರಗಳನ್ನು ನಿವಾರಿಸಬೇಕು. ಇದು ಗಾಂಧಿಮಾರ್ಗ. ಗಾಂಧೀಜಿಯ ಅಹಿಂಸೆ ಹೇಡಿಗಳ ಧರ್ಮವಲ್ಲ. ಆತ್ಮಶಕ್ತಿಯನ್ನು ಬೆಳಸಿಕೊಂಡಿರುವ ದೃಢಮನುಷ್ಯರ ದಿವ್ಯಾಸ್ತ್ರ. ಸಹನೆ, ತ್ಯಾಗ, ಬಲಿದಾನಗಳಿಂದ ಕೂಡಿದ ಶಾಸನಬದ್ಧ ಅಹಿಂಸಾತ್ಮಕ ಪ್ರತಿಭಟನೆ ಅಥವಾ ಅಸಹಕಾರದಿಂದ ಜಗತ್ತಿನಲ್ಲಿ ಎಂತಹ ನಿರಂಕುಶಪ್ರಭುತ್ವವನ್ನಾದರೂ ದಾರಿಗೆ ತರಬಹುದು. ಈ ದೃಷ್ಟಿಯುಳ್ಳ ಗಾಂಧೀಜಿಗೆ ರಾಜಕೀಯವೂ ಅಧ್ಯಾತ್ಮದ ಸಾಧನೋಪಾಯ. ಅಂತೆಯೇ ರಾಜಕೀಯದಲ್ಲಿ ಕುಟಿಲತೆ, ಕಪಟ, ವಂಚನೆ ಇರಕೂಡದು. ಇದು ವ್ಯಕ್ತಿಗೂ ರಾಷ್ಟ್ರಕ್ಕೂ ಅನ್ವಯಿಸುವ ಮಾತು.

ಪ್ರಪಂಚದ ಕಲಹನಿವಾರಣೆಗೆ ಯಾವ ತಂತ್ರ ಸಹಾಯಕವಾದೀತು? ಮೆಕವೆಲ್ಲಿಯ ಹಾದಿಯೋ? ಗಾಂಧೀ ತಂತ್ರವೊ? ಇದೊಂದು ಜಟಿಲ ಸಮಸ್ಯೆ. ರಾಷ್ಟ್ರಾಭ್ಯುದಯವನ್ನು ಬಯಸುವವರು ಮೆಕವೆಲ್ಲಿಯ ರಾಜನೀತಿಯನ್ನು ಅನುಸರಿಸಬೇಕೆಂದು ವಾದಿಸುತ್ತಾರೆ. ಧರ್ಮ, ನ್ಯಾಯ, ನೀತಿಗಳಿಗೆ ಬಾಗದ ಕುಟಿಲ ರಾಜಕಾರಣವೇ ಮಾನವಸಂಹಾರದ ಮೂಲವೆಂದು ಅನುಭಾವಿಗಳು, ದ್ರಷ್ಟಾರರು ಎಚ್ಚರಿಸುತ್ತಾರೆ. ಪ್ರಪಂಚದಲ್ಲಿ ಕಾಲ, ಸನ್ನಿವೇಶಗಳಿಗೆ ಬೇಕಾದ ರಾಷ್ಟ್ರತಂತ್ರವನ್ನು ರಾಜನೀತಿಜ್ಞರು ಪ್ರಯೋಗಿಸಿದ್ದಾರೆ. ಮೆಕವೆಲ್ಲಿಯ ಕಾಲ ನೀಚರು, ಸ್ವಾರ್ಥಿಗಳು ಮತ್ತು ಕಪಟಿಗಳಿಂದ ಕೂಡಿತ್ತು. ಆಗಿನ ಪರಿಸ್ಥಿತಿಗೆ ಹೊಂದಬಹುದಾದ ರಾಷ್ಟ್ರತಂತ್ರವನ್ನು ಮೆಕವೆಲ್ಲಿ ಆತ್ಮಸಂರಕ್ಷಣೆಯ ದೃಷ್ಟಿಯಿಂದ ಪ್ರತಿಪಾದಿಸಿದ್ದಾನೆ. ಆದರೆ ಇದು ನಿತ್ಯನೂತನ ತತ್ವವಾಗಲಾರದು. ಮೆಕವೆಲ್ಲಿಯ ಯುಗ ಮನುಷ್ಯನ ಚರಿತ್ರೆಯ ಪೂರ್ಣ ಚಿತ್ರವಲ್ಲ. ರಾಜನೀತಿಜ್ಞರು ಕೇವಲ ಕುಟಿಲತಂತ್ರವನ್ನೇ ಸಾಧಿಸಿ, ಧರ್ಮ ನ್ಯಾಯಗಳನ್ನು ತ್ಯಜಿಸಿದರೆ ಅದು ಮನುಷ್ಯಕುಲದ ದ್ರೋಹ. ಧರ್ಮಭಾವನೆಯಿಂದ, ತ್ಯಾಗಬುದ್ಧಿಯಿಂದ, ಅನ್ಯಾಯದ ವಿರುದ್ಧ, ನಿಂತು ಹೋರಾಡುವ ರಾಜಕಾರಣ ಪಟುವು ಮಾನವತ್ವದ ಗೌರವವನ್ನು ರಕ್ಷಿಸಿ, ಧರ್ಮವೀರನೆನ್ನಿಸಿಕೊಳ್ಳುತ್ತಾನೆ. ಗಾಂಧೀ ತಂತ್ರವು ರಾಷ್ಟ್ರನೀತಿಯ ಹಿನ್ನೆಲೆಯಾಗಿದ್ದರೆ ವ್ಯಕ್ತಿಗಳಲ್ಲಿ ಮತ್ತು ರಾಷ್ಟ್ರಗಳಲ್ಲಿ ನೀತಿಯ ಮಟ್ಟ ಏರುವುದು. ಆದರೆ ಗಾಂಧೀ ತಂತ್ರದ ಪ್ರಯೋಗ ಸುಲಭಸಾಧ್ಯವಲ್ಲ. ರಾಷ್ಟ್ರವು ಸಂಪೂರ್ಣವಾಗಿ ಗಾಂಧೀ

ತಂತ್ರವನ್ನು ಅನುಷ್ಠಾನದಲ್ಲಿ ತರುವುದು ಕಷ್ಟ, ಆದರೂ ರಾಷ್ಟ್ರತಂತ್ರಕ್ಕೂ, ಅಧ್ಯಾತ್ಮತಂತ್ರಕ್ಕೂ ಸಂಬಂಧಕಲ್ಪಿಸುವ ಗಾಂಧೀ ತತ್ವಬೋಧೆ ಮಾನವರಿಗೆ ಕೊಡಬಹುದಾದ ಎಚ್ಚರಿಕೆಯಾಗಿದೆ. ವ್ಯಕ್ತಿಯಲ್ಲಿ ನೀತಿ, ನಿಸ್ವಾರ್ಥತೆ ಸತ್ಯ ಮೊದಲಾದ ಗುಣಗಳು ಕಡಿಮೆಯಾಗುತ್ತಾ ಬಂದು ರಾಜ್ಯವು ಸಾಧಕರ ಕೈ ಗೊಂಬೆಯಾದರೆ ಕುಸಿದು ಬೀಳುತ್ತದೆ ಎಂಬುದಕ್ಕೆ ಗ್ರೀಸ್ ಮತ್ತು ರೋಮ್ ದೇಶಗಳ ಉದಾಹರಣೆಯೇ ಸಾಕು. ಆದುದರಿಂದ ಕುಟಿಲತೆಯೇ ರಾಜ್ಯದ ಸುವರ್ಣತತ್ವವಾಗಬಾರದು. ಆದರೆ ಕೇವಲ ಅನಿವಾರ್ಯವಾಗಿ ಅದನ್ನು ಪ್ರಯೋಗಿಸಬೇಕಾದೀತು. ಅದೂ ರಾಷ್ಟ್ರದ ಸಮಷ್ಟಿ ಹಿತಸಾಧನೆಗಾಗಿ. ಕೌಟಿಲ್ಯನ ಅರ್ಥಶಾಸ್ತ್ರವೂ ಇದನ್ನೇ ಬೋಧಿಸುತ್ತದೆ.

ಸಾಹಿತಿಗಳ ದೃಷ್ಟಿಯಲ್ಲಿ ರಾಜಕಾರಣ

ರಾಜನೀತಿಜ್ಞ ಮತ್ತು ಧರ್ಮಬೋಧಕ ಹಾಗೂ ಸಮಾಜನಿರ್ಮಾತೃಗಳ ದೃಷ್ಟಿಯಿಂದ ಇದುವರಿಗೆ ರಾಷ್ಟ್ರತಂತ್ರವನ್ನು ವಿವರಿಸಿದ್ದಾಯಿತು. ಇನ್ನು ಸಾಹಿತಿಗಳ ಕಣ್ಣಿನಿಂದ ರಾಜಕಾರಣವನ್ನು ನೋಡೋಣ. ಸಾಹಿತಿಗಳಿಗೆ ರಾಜಕೀಯವು ಅಷ್ಟು ಆಕರ್ಷಕವಲ್ಲ. ಕವಿಗಳು ಸಾರ್ವಭೌಮರಾಗಲು ನಿರಾಕರಿಸುತ್ತಾರೆ! ಏಕೆಂದರೆ ರಾಜಕೀಯವು ಅಂತಹದು. ಪ್ರಜಾಪ್ರಭುತ್ವದಲ್ಲಿಯಂತೂ ರಾಜಕಾರಣಿಗಳ ಪಾತ್ರ ಸಂತೋಷದ್ದಲ್ಲ. ಚುನಾವಣೆ, ಪೈಪೋಟಿ, ಪಕ್ಷರಾಜಕಾರಣ, ವ್ಯಕ್ತಿ ಮತ್ತು ಗುಂಪುಗಳ ಘರ್ಷಣೆ, ಅನೇಕರ ಹಂಗು—ಪ್ರಭಾವಗಳಿಗೊಳಗಾಗಿ ಎಷ್ಟೋ ರಾಜಕೀಯ ಸಾಧಕರು "ಸಾಕಪ್ಪ ಸಾಕು ; ಈ ರಾಜಕೀಯ" ಎಂದು ಸಾರ್ವಜನಿಕ ಜೀವನದಿಂದ ಹೊರಗೆ ಬಂದಿದ್ದಾರೆ. ರಾಜಕಾರಣಿಗಳಿಗೇ ಅನೇಕ ಬಾರಿ ರಾಜಕೀಯ ಜೀವನ ತಲೆನೋವನ್ನುಂಟುಮಾಡಬಹುದು. ಎಂದ ಮೇಲೆ ಸಾಹಿತಿಗಳಿಗೆ ಅದರಲ್ಲಿ ಎಷ್ಟೂ ಆಸಕ್ತಿ ಇರದಿರುವುದು ಆಶ್ಚರ್ಯವಲ್ಲ. ಜಾನ್‌ಸನ್‌ನನು ರಾಜಕಾರಣವು ಪುಂಡರು, ಪಟಿಂಗರು ಮಾಡುವ ವೃತ್ತಿ ಎಂದಿದ್ದಾನೆ. ಜಾರ್ಜ್ ಬರ್ನಾರ್ಡ್ ಷಾ ಕೂಡ ಇದೇ ಅಭಿಪ್ರಾಯವನ್ನು ತನ್ನ "ಪ್ರತಿಯೊಬ್ಬನೂ ರಾಜಕೀಯದ ಬಗ್ಗೆ ತಿಳಿದುಕೊಳ್ಳಬೇಕಾದುದೇನು" (*Every Body's Political What is What*) ಎಂಬ ಪುಸ್ತಕದಲ್ಲಿ ಪುಷ್ಟೀಕರಿಸಿದ್ದಾನೆ. ಕನ್ನಡದ ಹಿರಿಯ ಸಾಹಿತಿಗಳಾದ ಶ್ರೀ ಡಿ. ವಿ. ಗುಂಡಪ್ಪನವರ ವಿಚಾರಲಹರಿ ಈ ಕೆಳಗಿನ ಅವರ ಪದ್ಯದಿಂದ ಸುಸ್ಪಷ್ಟವಾಗುತ್ತದೆ.

> ಸರಕಾರ ಹರಿಗೋಲು, ತೆರೆ ಸುಳಿಗಳತ್ತಿತ್ತ |
> ನೆರೆ ಕುಡಿದವರು ಕೆಲರು ಹುಟ್ಟುಹಾಕುವರು ||
> ಬಿರುಗಾಳಿ ಬೀಸುವುದು, ಜನವೆದ್ದು ಕುಣಿಯುವುದು |
> ಉರುಳದಿಹುದಚ್ಚರಿಯೆ ? ಮಂಕುತಿಮ್ಮ ||

(ಮಂಕುತಿಮ್ಮನ ಕಗ್ಗದಿಂದ).

ಮಹಾಕವಿಗಳಾದ ಶ್ರೀ 'ಕುವೆಂಪು' ಅವರು ರಾಜತಂತ್ರ ಮತ್ತು ರಾಜಕಾರ್ಯ ಸಾಧಕರ ವಿಷಯದಲ್ಲಿ ಇಂತು ಅಭಿಪ್ರಾಯಪಡುತ್ತಾರೆ:—ಮನುಷ್ಯನು ಉತ್ತಮ ಜೀವನ ಸಾಧಿಸಲು ಈ ಕೆಳಗೆ ಕಂಡಂತೆ ಬೆಲೆಗಳನ್ನು ಗೌರವಿಸಬೇಕು. ಮೊದಲು ಅಧ್ಯಾತ್ಮ, ಅದಕ್ಕೆ ಪ್ರಥಮ ಗೌರವ ಸಲ್ಲಿಸಬೇಕು. ಎರಡನೆಯದಾಗಿ, ಸಂಸ್ಕೃತಿ ಮತ್ತು ಸಾಹಿತ್ಯ. ಮೂರನೆಯದಾಗಿ, ಸಾಮಾಜಿಕ ಮತ್ತು ಆರ್ಥಿಕ; ಕೊನೆಯದಾಗಿ, ರಾಜಕೀಯ. ಹೀಗೆ ರಾಜಕೀಯಕ್ಕೆ ನಾಲ್ಕನೆಯ ಸ್ಥಾನ. ರಾಜಕೀಯಕ್ಕಾಗಿ ರಾಜಕೀಯವಲ್ಲ. ಅಧ್ಯಾತ್ಮ ಶ್ರೀಸಾಧನೆಗೆ ನಮ್ಮ ಆರ್ಥಿಕ ಮತ್ತು ರಾಜಕೀಯ ಚಟುವಟಿಕೆಗಳು ಮೀಸಲಾಗಿರಬೇಕು. ಕೇವಲ ಹೊಟ್ಟೆ-ಬಟ್ಟೆಗೆ, ಬಣ್ಣದ ಚಿಟ್ಟೆ ಬಾಳಿಗೆ, ಹಮ್ಮು ಬಿಮ್ಮುಗಳಿಗೆ ರಾಜಕೀಯವಲ್ಲ. ಆತ್ಮಸಂಸ್ಕೃತಿಯು ಮೆರೆಯಲು ಅದು ಸಾಧನವಾಗಬೇಕು. ಇದೇ ವಿಚಾರವನ್ನು ಮಹಾತ್ಮ ಗಾಂಧೀಜಿಯವರೂ ಸಮರ್ಥಿಸುತ್ತಾರೆ. ಜೀವನದ ಬೆಲೆಗಳು ಮೇಲ್ಕಂಡಂತೆ ನಿಷ್ಕರ್ಷೆಯಾಗಿ ಅವುಗಳಿಗೆ ಸಲ್ಲಬೇಕಾದ ಪೂಜೆ ಸಲ್ಲದಿದ್ದರೆ, ಜನಜೀವನ ಉಚ್ಚಮಾರ್ಗದಲ್ಲಿ ವಿಕಾಸವಾಗಲಾರದು. ಆದುದರಿಂದಲೇ "ಅರ್ಪಿತವಾಗಲಿ ಸ್ವಾತಂತ್ರ್ಯಂ ಶ್ರೀ ಚಾಮುಂಡೇಶ್ವರಿ ಪದತಲಕೆ" ಎಂದು ಕವಿವಾಣಿ ನುಡಿಯುತ್ತದೆ.

ಉಪಸಂಹಾರ

ರಾಜಕೀಯವಿಜ್ಞಾನ ಈ ರೀತಿ ರಾಷ್ಟ್ರತಂತ್ರದ ಮೇಲೆ ಬೆಳಕು ಚೆಲ್ಲುತ್ತದೆ. ತಮಗೆ ತೋರಿದಂತೆ ಪರಿಸ್ಥಿತಿಯ ಮಿತಿಗೊಳಗಾಗಿ ರಾಜನೀತಿಜ್ಞರು ಅಭಿಪ್ರಾಯಗಳನ್ನು ಮೂಡಿಸಿದ್ದಾರೆ. ರಾಜಕೀಯವನ್ನು ಕೆಲವರು ಚದುರಂಗದ ಆಟಕ್ಕೆ ಹೋಲಿಸಿದ್ದಾರೆ. ರಾಷ್ಟ್ರದ ಹಿತದ ದೃಷ್ಟಿಯಿಂದ ಯೋಚಿಸುವ ಚಾಣಕ್ಯನೀತಿ—ರಾಜತಂತ್ರವು ಅವ್ಯವಹಾರ್ಯವಲ್ಲ. ಅಂತಹ ಮೇಲ್ಮಟ್ಟದ ರಾಜಕಾರ್ಯಪಟುತ್ವದಿಂದ ಮಾನವಕಲ್ಯಾಣವಾಗಬೇಕು ಅಷ್ಟೆ. ಕೇವಲ ವ್ಯಕ್ತಿಯ ಅಧಿಕಾರಲಾಲಸೆಯ ತೃಪ್ತಿಗಾಗಿ ರಾಜತಂತ್ರದ ದುರುಪಯೋಗವಾಗಬಾರದು. ರಾಜಕಾರ್ಯಸಾಧಕರು ಸಮಾಜದ ಮೇಲೆ ಬೀರುವ ಪ್ರಭಾವಕ್ಕಿಂತ, ಧರ್ಮಸಾಧಕರು ಬೀರುವ ಪ್ರಭಾವ ಹೆಚ್ಚು ಶಾಶ್ವತ ಮತ್ತು ಪರಿಣಾಮಕಾರಿಯಾಗಿದೆ. ಸಮಾಜಹಿತವನ್ನು ಅಲಕ್ಷಿಸಿ ಸ್ವಾರ್ಥಸಾಧಿಸುವ ರಾಜಕಾರ್ಯಸಾಧಕರು ಹೆಚ್ಚಿದಂತೆಲ್ಲ 'Bad money drives good money' ಎಂಬ ತತ್ವದಂತೆ ಸ್ವಾರ್ಥಿಗಳೇ ಹೆಚ್ಚಾಗಿ ಯೋಗ್ಯ ಸಮಾಜ ಸೇವಕರು ಮೂಲೆಗೆ ಬೀಳುವರು! ಇದು ರಾಜ್ಯದ ಅಭ್ಯುದಯದ ಶುಭಚಿಹ್ನವಲ್ಲ.

ಗ. ಸ. ಹಾಲಪ್ಪ.

ಅಪೋಹವಾದ

ಕೊಂಕಣ ಸುತ್ತಿ ಮೈಲಾರಕ್ಕೆ ಹೋದರೆಂಬ ಗಾದೆ ಸರ್ವವಿದಿತ. ಈ ಅಪೋಹವಾದವೆಂದರೇನೆಂದು ವಿಚಾರಿಸುವಾಗ ಅದನ್ನು ನೆನಪಿಟ್ಟರೊಳ್ಳೆಯದು. ಇಲ್ಲದಿದ್ದರೆ ಈ ವಾದಸರಣಿ ವಿಚಿತ್ರವಾಗಿರುವುದರಿಂದ ಅದು ಕಂತೆಯ ಪುರಾಣ ವಾದೀತು.

ಈ ನ್ಯಾಯಕ್ಕೆ ತಂದೆತಾಯಿಗಳು ವ್ಯಾಕರಣಶಾಸ್ತ್ರಜ್ಞರು. ಪತಂಜಲಿಯ ಮಹಾಭಾಷ್ಯದ "ವ್ಯಾಪಾರಾತ್ ಜಾತಿಭಾಗಸ್ಯ ಭೇದಾಪೋಹೇನ ವರ್ತತೇ" ಎಂಬ ಉಲ್ಲೇಖ (Mbh. Vol. II, P. 324) ಈ ಮಾತನ್ನು ಪುಷ್ಟೀಕರಿಸುತ್ತದೆ. ಆದರೆ ಅನೇಕಮಂದಿ ಈ ಅಪೋಹವಾದದ ಉಗಮ ಬೌದ್ಧರದು—ಹಾಗೂ ದಿಜ್ಞ್ನಾಗನದು ಎನ್ನುತ್ತಾರೆ.

ಒಂದು ಮಾತಿಗೆ ಒಂದರ್ಥವಾದರೂ ಇರಲೇಬೇಕು. ಯಾವ ಮಾತಿಗೆ ಏನೇನರ್ಥ ಅಥವಾ "ಶಬ್ದಾರ್ಥ ವೈಚಿತ್ರ್ಯ ಅಥವಾ ಶಬ್ದಾರ್ಥ ವೃತ್ತಿವೈಚಿತ್ರ್ಯ"ದ ರೂಪುರೇಖೆಗಳೇನೇನೆಂದರೆ, ಅದಕ್ಕೆ ಅನೇಕ ಉತ್ತರಗಳಿವೆ. ಅದರಲ್ಲಿ ಅಪೋಹವಾದವೂ ಒಂದು. ಈ ವಾದದ ಸ್ವಾರಸ್ಯವೇನೆಂದರೆ ದ್ರಾವಿಡ ಪ್ರಾಣಾಯಾಮಕ್ರಮದಲ್ಲಿ ಶಬ್ದಕ್ಕೆ ಅರ್ಥ ಹೇಳುವುದು. ಕಪ್ಪು ಎಂಬ ಪದಕ್ಕರ್ಥವೇನೆಂದರೆ ಅಪೋಹವಾದಿಗಳು—ಕಪ್ಪಲ್ಲದಲ್ಲದ್ದೆಂದು [ತದ್ಭಿನ್ನಬಿನ್ನ] ಅರ್ಥಮಾಡುತ್ತಾರೆ. ಪೌರ್ವಾತ್ಯ ಶಾಸ್ತ್ರಜ್ಞರೆಲ್ಲಾ ಇದನ್ನು ಒಪ್ಪಲಿ ಒಪ್ಪದಿರಲಿ, ಇದನ್ನು ಬಳಸಿ ಬೆಳೆಸಿ ಅಳಿಸುತ್ತಾರೆ. ಬೌದ್ಧರು ಮಾತ್ರ ಉಳಿಸಿದ್ದಾರೆ. ಪಾಶ್ಚಾತ್ಯರಲ್ಲಿ ಪ್ರಾಚೀನ ಗ್ರೀಕ್ ನ್ಯಾಯವಾದಿಗಳಲ್ಲಿ "ಪೈಥಾಗೊರಸ್ಸ"ನ ಅನುಯಾಯಿ ಪಾರ್ಮಿನೈಡೀಸ್ ತನ್ನ "ಕ್ರ್ಯಾಟಿಲಸ್" ಎಂಬ ಸಂವಾದದಲ್ಲಿ ಈ ವಾದದ ಛಾಯೆಯನ್ನು ಬಳಸಿರುವನು. ಆ ಪಾರ್ಮಿನೈಡೀಸ್ ಶಾಸ್ತ್ರಿ—"ಶೀತ"ವೆಂಬ ಪದಕ್ಕೆ ಬಿಸಿಯಲ್ಲದ್ದೆಂದರ್ಥಮಾಡಿದ್ದಾನೆ. ಕತ್ತಲೆಂದರೆ ಬೆಳಕಲ್ಲದ ವಸ್ತುವಂತೆ—ಆದ್ದರಿಂದ ಈತನ ಮಾತು ಅಪೋಹವಾದಕ್ಕೆ ಸರಿದೂಗಿಲ್ಲವೇ? ಇದು ಅದರ ಮರಿಯೇ—ಅದು ಇದರ ಮರಿಯೇ ಎಂಬ ಪ್ರಶ್ನೆ ಕಾಲಕ್ಷೇಪದ ಮಾತು. ಎಲ್ಲಾದರೂ ಶಾಸ್ತ್ರಜ್ಞರು ಶಾಸ್ತ್ರಜ್ಞರೇ. ಅವರಿಗೆ, ಅವರ ಶಾಸ್ತ್ರಸಾಮರಸ್ಯಕ್ಕೆ ತಲೆದೂಗಿ ತಲೆಬಾಗೋಣ.

ಜಿ. ಎಂ. ಮರುಳಸಿದ್ಧಯ್ಯ

"ಮೂರು ಮಧ್ಯಾಹ್ನ"

೧೯೪೪ ನೇ ಅಕ್ಟೋಬರ ೨೬ ನೆಯ ತಾ. ಮಧ್ಯಾಹ್ನ

ರಾಜ—ಓ ರಾಣೀ . . . ಹಾಗೇ . . . ಕಾಫೀಂತ ನಾಲಕ್ಕು ಸಾರೆ ಕೂಗಿದೆ ಆಗ್ಲೇ . . . ಈಗ ಬರ್‍ತಾ ಇದೀ . . . ಭಾಗ್ಯದ ಲಕ್ಷ್ಮಿ ಹಾಗೆ !

ರಾಣಿ—ಹಾಲು ಬೇರೆ ಒಡೆದ್ಹೋಗಿತ್ತಲ್ಲ . . . ಈಗ ತರಿಸಿದೆ ಅವನ ಕೈಲಿ.

ರಾಜ—Ho ! I am sorry ! ಕೊಡ್ತೊ . . .

ರಾಣಿ—ಚೆನ್ನಾಗಿದ್ಯೆ ಕಾಫೀ . . .

ರಾಜ—ಸುಮಾರಾಗಿ . . .! ಉಂ . . . ಆದ್ರೆ the touch of your magic hand ಅದರ defects ನ್ನೆಲ್ಲ compensate ಮಾಡ್ತಾಕಿದೆ. . . .

ರಾಣಿ !—ಚನ್ನಾಗಿರುಲ್ಲಾಂತ ಗೊತ್ತು ನಂಗೆ ! ಅದಕ್ಕೇ ನಾನು ಕುಡಿಲೇ ಇಲ್ಲ. ಸ್ವಲ್ಪ Ovaltine ಮಾಡ್ಕೊಂಡೆ . . .

ರಾಜ—ನಂಗೆ ಮಾತ್ರಾ ಹೀಗೆ ಒಂದು ಬಕೆಟ್ ಕಲಗಚ್ಚಿಗೆ coffee ಅಂತ ಹೆಸರಿಟ್ಟು ತಂದ್ಬಿಟ್ಟೆ ! ! (thinks it a joke)

ರಾಣಿ—ನೀವು ತಾನೇ ಯಾವಾಗ್ಲೂ coffee coffee ಅಂತ ಕೂಕ್ಕೋತಿರೋದು ! ನಂಗೇನು coffee ಅಗ್ಲೇ ಬೇಕೂಂತೇನಿಲ್ಲ . . . cocoa, ovaltine, good milk ಏನಾದ್ರೂ ಆಗುತ್ತೆ !

ರಾಜ—ಓ . . . ನಿನಗೆ ಅದೆಲ್ಲ ಆಗೋದ್ರಿಂದ್ಲೇ ನನ್ಕಾಫಿ ಗತಿ ಹೀಗಿರೋದು. ನೀನೂ ಕುಡಿಯೋದು ಅದನ್ನಾಂತಿದ್ರೆ . . . ಎಷ್ಟಾದ್ರೂ ಇನ್ನೂ ಚೆನ್ನಾಗಿರ್ತಿತ್ತು.

ರಾಣಿ—ಆಹಹಹ . . . ಅದಕ್ಕೂ ನನ್ನೇ ಬೈರಿ . . . ನೀವು . . .

ರಾಜ—ಒಳ್ಳೇ coffee ಮುಂದೆ ಏನಿದೆಯೋ ಪ್ರಪಂಚದಲ್ಲಿ ?

ರಾಣಿ—All right . . . ಈವತ್ಸಂಜೆ ಹೋಗೋಣ . . . coffee ಬಾರ್‌ಗೆ ನೋಡಿ ಕಲ್ತ್ಕೊಳ್ಳೀನಿ ಕುಡದೂ . . .

ರಾಜ—O k ! girlie ! ರಾಣೀ . . . ಇವತ್ತೇನು ಗೊತ್ತಾ ?

ರಾಣಿ—ಅಮಾವಾಸ್ಯೇನಾ ?

ರಾಜ—ಅಲ್ಲಾ ಕಣೆ ! ನಮ್ಮ marriage anniversary ! ಇವತ್ತಿಗೆ ನೋಡು ಸರಿಯಾಗಿ ಒಂದು ವರ್ಷ ! . . .

ರಾಣಿ—ಓ . . . ಹೌದೂಂದ್ರೆ : September 26th !

ರಾಜ—ನಿಂಗೆ ಜ್ಞಾಪಕ ಇದೆಯಾ . . . ಕಳೆದ ವರ್ಷ ಇದೇ ದಿನ . . . ಇಷ್ಟು ಹೊತ್ತಿನಲ್ಲೇ ನಾವು ಮಾತಾಡಿದ್ದು for the first time in our life !

ರಾಣಿ—ಓ . . . ಹೌದು . . .

ರಾಜ—ಒಳ್ಳೇ ದಿವ್ಯಲಗ್ನದಲ್ಲಿ talk ಪ್ರಾರಂಭ ಮಾಡಿದ್ದಿ ಅಂತ ಕಾಣುತ್ತೆ. . . . ಅಲ್ಲಿಂದೀವರ್ಗೆ ನೋಡು ಎಷ್ಟು ಬೆಳೆದಿವೆ ನಂ ಮಾತು !

ರಾಣಿ—ಆ ?

ರಾಜ—ಹೂಂ !

ರಾಣಿ—ಏೀ !

ರಾಜ—ಏಕೇ ?

ರಾಣಿ—"ಬೆಳೆದಿದೆ" ಅಂತೀರಿ.

ರಾಜ—ಯಾಕೆ ? . . . ಏನು ? ಅಂದ್ರೆ ?

ರಾಣಿ—ಮಾತು "ಬೆಳೆದಿದೆ" ಅಂದ್ರೆ "ಜಗ್ಳ ಆಗಿದೇಂತಲ್ವಾ !

ರಾಜ—ಛೆ . . . ಛೆ . . . ನಮ್ಮಿಬ್ಬರೊಳಗೆ ಜಗ್ಳ ಆಗುತ್ತೇನೆ ? . . . So long as I am like this absolutely a timid thing ?

ರಾಣಿ—ಏ . . . ಥೂ ಹೋಗೀಂದ್ರೆ ! ಹೋಗ್ಲಿ . . . ಇವತ್ತು ನಂ marrage ನ celebrate ಮಾಡ್ಬೇಡ್ವಾ !

ರಾಜ—ಹೂಂ . . . ಇವತ್ಮಾಡೋಣ first class ಹಬ್ಬ . . . ಅದೂ ಅಲ್ದೆ ಮುಂದಿನ ತಿಂಗಳು ತೌರಿಗೆ ಹೊರಡ್ತಿ . . . ಬರೋದಿನ್ನಾರು ತಿಂಗ್ಳು !

ರಾಣಿ—(Laughing) ಏ ! . . . ಥೂ . . . !

ರಾಜ—ಥೂ ಏನು . . . ಎಲ್ಲಾ ಆದ್ಮೇಲೆ !

ರಾಣಿ—ಇವತ್ತೊಂದು ಸಿನೇಮಾಕ್ಕೆ ಹೋಗೋಣಾಂದ್ರೆ ! . . .

ರಾಜ—. . . oh yes ! ಹೋಗೋಣ . . . first showಗೆ. . . .

ರಾಣಿ—ಮತ್ತೆ . . . ನಾ ರೆಡಿಯಾಗಿಬಿಡ್ತೇನೆ. ಊಂ, ನೋಡಿ ಉಟ್ಕೊಳೋಕೆ ಯಾವ್ದೂ ಹೊಸ ಸೀರೇನೆ ಇಲ್ಲ !

ರಾಜ—ಹೊಸ ಸೀರೆ ? . . . ನಿನ್ನ ಹತ್ರ ಇಪ್ಪತ್ನಾಲ್ಕು ಡಜನ್ ಇದೆಯಲ್ಲೇ ?

ರಾಣಿ—ಅದೆಲ್ಲ ಎರಡೆರಡು—ಮೂರ್ಮೂರುಸಲ ಉಟ್ಕೊಂಡಾಗ್ಹೋಗಿದೆ !

ರಾಜ—ದೇವ್ರೇ ಗತಿ . . . ?

ರಾಣಿ—ನಂಗೊಂದು ಸೀರೆ ಬೇಕು !

ರಾಜ—Right . . .

ರಾಣಿ—Blouse piece ?

ರಾಜ—All right ಅದೂ . . .

ರಾಣಿ—ನೋಡಿ . . . Snow Powder ಎಲ್ಲಾ ಮುಗೀತಾ ಬಂತು.

ರಾಜ—ನಿಂಗ್ಯಾಕೆ ಆ artificial make up ಹೇಳು . . . you look . . . ಓ . . . ಏನೂಂತ ಹೇಳ್ಲೀ . . . !

ರಾಣಿ—ಏನ್ಬೇಕಾದ್ರೂ ಹೇಳ್ತಿರೀ . . . ಮಾತ್ಗೇನು . . . ಅದನ್ನ ಕೊಡಿ ಸೊದನ್ನ ತಪ್ಪಿಸಿಕೊಳ್ಳೋಕೇಂದ್ರೆ ! . . .

ರಾಜ—O k. ಏನೇನ್ಬೇಕು ಎಲ್ಲ ಗುರ್ತು ಹಾಕಿಬಿಡು . . . ತಂದ್ಬಿಡೋಣ ಇವತ್ತೆ !

ರಾಣಿ—ನಂಗೊಂದ್ಸೊಲ್ಪ Woollen ಬೇಕು . . . ಊರಿಗೆ ತೊಗೊಂಡ್ಹೋಗಿ . . .

ರಾಜ—ನಂಗೊತ್ತು . . . ಕುಲಾವೀ ಹಾಕೋಕೇ !

ರಾಣಿ—ಏ . . . ಹೋಗೀಂದ್ರೆ . . .

ರಾಜ—ಹೋಗಿಂದ್ರೇನೂ ಇಲ್ಲ . . . ಬನ್ನಿಂದ್ರೇನೂ ಇಲ್ಲ ! ಅಷ್ಟು ಗೊತ್ತಾಗೊಲ್ವೇ ನಮಗೆ !

ರಾಣಿ—ಹೂಂ . . . ಹೌದು . . . ಅದಕ್ಕೆ . . .

ರಾಜ—ಹಾಗ್ಹೇಳು . . .

ರಾಣಿ—ಒಂದು ದಂತದ ಬಾಚಣಿಗೆ . . .

ರಾಜ—ಇದೆಯಲ್ಲಾ ಒಂದು . . .

ರಾಣಿ—ಅದಕ್ಕೊಂದು ಹಲ್ಲು ಮುರಿದ್ಹೋಗಿದೆ . . .

ರಾಜ—ಹೂಂ . . . ನನ್ನ ಹಲ್ಲು ಉಳಿಸಿಕೊಳ್ಳಬೇಕಾದ್ರೆ . . . ಒಂದು ತಂದ್ಕೊಟ್ಬಿಡಲೇಬೇಕು ! (a Joke !)

ರಾಣಿ—ಏ . . . ನಂಗೀಗ ೨೦ ರೂಪಾಯಿ ಬೇಕು.

ರಾಜ—ಯಾಕೇ ? . . .

ರಾಣಿ—ಖರ್ಚಿಗೆ . . . !

ರಾಜ—ನಿಂಗೇನು ಖರ್ಚು . . . ! ಕದ್ದು ಏನಾದ್ರೂ ಹೋಟಲ್ ಗೀಟಲ್‌ಗೆ ?

ರಾಣಿ—ಹೂಂ . . . ಹೋಟಲ್‌ಗೆ ಹೋಗ್ತಾರೆ !

ರಾಜ—ಮತ್ತೆ !

ರಾಣಿ—ಯಾಕೇ. . . ಬೇಕು !

ರಾಜ—All right we are celebrating the first anniversary! ಇವತ್ಯಾಕೆ ವಾದವಿವಾದಗಳು !

ರಾಣಿ—ಮತ್ತೊರಡಿ. ಓಡ್ಹೋಗಿ ಬಂದ್ಸೀರೆ ತಂದ್ಬಿಡಿ ! ಅದನ್ನೇ ಉಟ್ಕೊಂಡು ಸಿನಿಮಾಕೆ ರಡಿಯಾಗ್ತೀನಿ.

ರಾಜ—ಈಗ್ಲೇ ಬೇಕೆ ಹೊಸಸೀರೆ ! ? ಅಯ್ಯೋ ರಾಮಾ ! ?

ರಾಣಿ—ಬೇಗಬನ್ನಿಂದ್ರೆ! ಬಂದು ಜೋರಾಗಿ ಬಾಗಿಲ್ತಟ್ಟಿ . . . ಒಳಗಿರ್‍ತೀನೀ . . . ಆ್ಹ . . .

ರಾಜ—ಏ . . . . ಏ . . . ಏ . . .

೧೯೪೪ ನೇ ಸೆಪ್ಟಂಬರ ೨೬ ನೇ ಮಧ್ಯಾಹ್ನ

ರಾಣಿ—(Slow) ಅಷ್ಟೊಂದು ಕೂಗಿದರೂ ಮಾತಾಡಬಾರದೆ. . . ?

ರಾಜ—. . .

ರಾಣಿ—ಕಣ್ಬಿಟ್ಕೊಂಡೇ ನಿದ್ದೆ ಮಾಡ್ತಿದೀರಾ ?

ರಾಜ—. . .

ರಾಣಿ—ಇದ್ಯಾಕೆ ಹೀಗೆ ಕೂತಿದೀರಿ ? . . . ಪಕ್ಕದ ಮನೆ ಸರೋಜನ ಗಂಡನ್ನ ನೆನೆಸ್ಕೊಂಡ್ರೆ . . ಅವಳೆಷ್ಟಂತಾಳೆ ಅವರನ್ನ. . . ಇಷ್ಟಾದ್ರೂ ಕೋಪಮಾಡಿ ಕೊಳ್ಳಬೇಕಲ್ಲ ಅವರು !

ರಾಜ—. . .

ರಾಣಿ—ಕತ್ತೆತ್ತಿ ನೋಡಬಾರದೇ ನನ್ನ ! ಹೀಗೆ ತಲೆತಗ್ಗಿಸಿ ನನ್ನ ಮುಂದೆ ಭಕ್ತಿಪ್ರದರ್ಶನ ಮಾಡಬೇಕೆ ? . . .

ರಾಜ—ಊಸ್ . . .

ರಾಣಿ—ಯಾಕೆ ತಲೆನೋವೆ ? ಅಂಗಾಲ ಸಿಡಿತವೆ ! ಹೊಟ್ಟೆ ಶೂಲೆಯೆ ? ಏನಾರೂ ಗಾಯವಾಯ್ತೆ ! ಬೈಸಿಕಲ್ಲಿಂದಾ ಬಿದ್ರಾ ? ಯಾರಾದ್ರೂ ಛತ್ರಿಯಿಂದ ತಿವಿದರೆ ? ಚೇಳು ಕುಟುಕಿತೆ ? ಹೀಗೆ ನಿಟ್ಟುಸಿರು ಬಿಡ್ತಿದೀರಿ . . .

ರಾಜ—ಕಿವಿ ಛಳಕು . . .

ರಾಣಿ—ಕಿವಿ ಛಳಕು ! ಯಾಕೆ ? ಯಾವಾಗಿಂದ ? ಎಲ್ಲಿ ಪ್ರಾರಂಭವಾಯ್ತು ? ಏನ್ಮಾಡಿದ್ರೆ ಹೋಗತ್ತಂತೆ ? ಡಾಕ್ಟರಿಗೆ ಹೇಳಿದ್ರಾ ? ಅದ್ನೂ ನಾನೇ ಮಾಡ್ಬೇಕೇನೋ ?

ರಾಜ—ನಿನ್ಮಾತು ಕೇಳಿ . . . ಕೇಳೀ೯ . . . ಛಳಕು ಕಿವಿ.

ರಾಣಿ—ಅಹಹಹ . . . ಏನ್ಬುದ್ಧಿವಂತ್ಕೇನೋ ! ಕಿವಿಚಳಕಂತೆ ! ನನಗೊಂದ್ಸ ಹಾಯಕ್ಕೆ ಬರೋಕಾಗುಲ್ಲ! ಬೈಯ್ಯೋಕಾಗುತ್ತೆ? ನಾನೇನು ಇಷ್ಟು ಮಹಾ ಮಾತಾಡಿದ್ದು? . . . ಇನ್ನೂ ಆ ಸರೋಜ ಮಾತಾಡೋದನ್ನ ಕೇಳ್ಬೇಕು ನೀವು. . . . ಆದ್ರೂ ಪಾಪ ಅವಳ್ಗಂಡ ಆ ಪ್ರಾಣಿ ಎಷ್ಟು ನಯ . . . ವಿನಯ ಹೆಂಡ್ತಿಂದ್ರೆ ಅವಳು . . . ಹೇಳೇಳಿದಾಹಾಗೆ . . . ನೋಡಿ ದಿನಬಿಟ್ಟು ದಿನ ಸಿನೇಮಾ ರೆಗ್ಯೂಲರ್ time table ಹಾಕ್ಬಿಟ್ಟಿದಾರೆ ಆತ. ಅಂದ್ಹಾಗೆ ಸಿನೇಮಾಕೆ ಹೋಗೋಣಾ ಹೋಗೋಣಾಂತ ೩ ತಿಂಗಳಿಂದ ದಿನಕ್ಕೆ ೫೦ ಸಲದ ಹಾಗೆ ಕೂತ್ಕೋತೀನಿ. ನನ್ಮಾತು ಕಿವಿಮೇಲೆ ಬಿದ್ರೆ ತಾನೇ . . . ಬೆಳಗ್ಗೆ ಹಾಗೇ ಸಾವರಿಸಿಕೊಂಡು ಊಟಾಂತ್ಮಾಡಿ ಮೂಕರಾಗಿ ೧೦ ಘಂಟೆಗೆ ಆಫೀಸಂತ ಹೊರಟ್ಬಿಟ್ರೆ ಇನ್ಬರೋದು ರಾತ್ರಿ ೧೦ ಘಂಟೇಗೆ!! ಆ ಸರೋಜನ ಗಂಡ ಪಾಪ ೧೧ ಘಂಟೆಗೆ ಹೋಗಿ ೨ ಘಂಟೆಗೆ ಮನೆಗೆ ಬಂದು ಪುನಃ ೨ ವರೆಗೆ ಹೋಗಿ ಐದೂ ಕಾಲಿಗೆ ಸರೀಗೆ ಬಂದ್ಬಿಡ್ತಾರೆ ಪುನಃ.

ರಾಜ—ಓ . . . ಅವನ timings ತಿಳಿದಹಾಗಾಯ್ತು . . . murder ಮಾಡ್ಬೇಕು ಅವನ್ನ . . .!

ರಾಣಿ—ಇವತ್ತು ಸಿನೇಮಾಕ್ಕೆ ಹೋಗೋಣವೆ?

ರಾಜ—ಆಗೋಲ್ಲ!

ರಾಣಿ—ಯಾವದೊಳ್ಳೆ . . .! ಏನ್ಹೇಳ್ಲಿ! " ಆಗೋಲ್ಲ ಆಗೋಲ್ಲ " " ಆಗೊಲ್ಲ " " ಆಗೊಲ್ಲ " ತಮಗೆ ಬೇಕಾದ್ದೆಲ್ಲ ಮನೆ ಹೊರ್ಗೆ ಮಾಡ್ಕೊಳ್ಳೋದು ! ನಮ್ಮ ನ್ಮಾತ್ರ ಕೇಳೋರೆ ಇಲ್ಲ! ನಾನಾಗೊಹೊತ್ಗೆ ಮಾಡ್ತಿದೀನೀ ಅಷ್ಟೇ! ಇದುವರೆಗೆ ನೋಡಿ ಏನೇನ್ಕೇಳಿದೀನಿ. ಬಳೆ—ಬೀಸಣಿಗೆ—ಬಾಚಣಿಗೆ—ಎಂಬ್ರಾಯಿಡ್ರಿ ನೀಡ್ಲು—ಉಲ್ಲನ್ ಸ್ನೋ . . . ಪೌಡರ್ . . . ಎರಡು cake soap ಪು ಬೆಳ್ಳಿ ಚಂಚ ear drops ಉ ಆ ಮೆರೂಚ್ ಸೀರೆ . . . ಆ blouse cuttng ಉ ! ಅವತ್ತು ಮಾರ್ಕೇಟಿನಲ್ಲಿ ತೋರಿಸಿ ಇಲ್ವಾನ್ಕೊಂಡ್ನಲ್ಲಾ ಆ ಎರಡು ಜೊತೆ ಚಪ್ಲಿ! ಎಷ್ಟು ಥರ ಟೇಪು ಕೇಳಿದೇನೆ ನಾನು! ಮಗೂಗೆಂತ, ಆ ರೈಲು, perambulator . . ಬೆಳ್ಳಿ ಪೀಪಿ! ಆ silk sarscenet ಉ ಕೊನೆಗೇ ಆ nestler chacolate tin ಊ! ನಂಗೇಂತ ಆ silk piece ಉ overcoat ಉ ! . . . ಒಂದು . . . ಇದರಲ್ಲಿ ಒಂದ್ಸಾಮಾನಾದ್ರು ತೆಕ್ಕೊಟ್ಟಿದ್ದಿರಾ ನಂಗೆ ಈ ತಿಂಗಳಲ್ಲಿ! " ಆಗೋಲ್ಲಾ ಆಗೋಲ್ಲಾ ಆಗೋಲ್ಲಾ "! . . . ಅಯ್ಯೋ ಪಾಪ . . . ಆ ಸರೋಜನ್ಗಂಡ . . . ಏನ್ಹೇಳ್ಲೀ . . . ಅವಳು ಕೇಳಕೇಳಿದ್ನೆಲ್ಲಾ

ತಂದ್ಕೊಡ್ತಾರೆ ಪಾಪ . . . ಎಷ್ಟಿಟ್ಕೊಂಡಿದಾಳೆ ಅವಳು . . . ಆ ಸಾಮಾನೂ . . . ಆ ಬಟ್ಟೇ . . . ಅಬ್ಬಬ್ಬ . . . ಆ ಸರೋಜನ ಗಂಡ. . . .

ರಾಜ—(Aside) ಅಂತಹ ಶಿಂಗಲೀಕನ್ನೇ ಮದುವೆ ಮಾಡ್ಕೋಬೇಕಾಗಿತ್ತು ನೀನು !

ರಾಣಿ—ಹೀಗ್ಮಾತಾಡೋಕೇನ್ಮುಟ್ಟಿಸಬೇಕು ! ಏನ್ಹೇಳ್ಳಿ . . . ಮಾತಿಲ್ಲ ಒಳ್ಳೆ ಸನ್ಯಾಸಿ ಹಾಗೆ ಧ್ಯಾನಾಮಾಡ್ತಾ . . . ಕಣ್ಬಿಟ್ಕೊಂಡೇ ನಿದ್ದೇಮಾಡ್ತಾ ಕೂತಿರೋದು . . . ಮಾತಾಡಿದ್ರೆ ಸಾಕು. "ತವರುಮನೆಗೆ ಹೋಗೂ . . . ತವರು ತವರುಮನೇಗ್ಹೋಗಿ ನಾಲಕ್ಕು ದಿನ ಇದ್ಬಿಟ್ಟು ಬಾ"! ನಾನೇನು ಮದುವೆ ಯಾಗಿರೋದು ನಿಮ್ಮನ್ನೊ ಇಲ್ಲ ತವರುಮನೇನೋ ?

ರಾಜ—ಶ್ರೀರಾಮಚಂದ್ರ . . . (ಮಗು ಅಳುತ್ತದೆ ದೂರದಿಂದ).

ರಾಣಿ—ಒಳ್ಳೆ ಚೆನ್ನಾಯ್ತು. ಈ ಸೆವದಲ್ಲಾದ್ರೂ ರಾಮಧ್ಯಾನ ನಡೆಯುತ್ತಲ್ಲ. ಹಾಗಿದ್ರೆ ನೀವು ನನ್ನ ಜೊತೆ ಸಿನೇಮಾಕ್ಕೆ ಬರುಲ್ವೆ ?

ರಾಜ—ಆಗೋಲ್ಲ.

ರಾಣಿ—ನಾನೇನು Untouchable ಏ ?

ರಾಜ—Untolkable ಉ !

ರಾಣಿ—ಸರಿ . . . ನಾನು ಹೋಗ್ಬರ್ತೀನಿ ಸರೋಜನ ಜೊತೆ . . . ಮಗು ನೋಡ್ಕೊಂಡು ಮನೇಲಿರಿ ನೀವು.

ರಾಜ—ಆ್ಞಂ ?

ರಾಣಿ—ಹೂಂ !

ರಾಜ—ಒಂದ್ನಿಮಿಷ ರಾಣಿ . . . ಇವತ್ತೇನು ಗೊತ್ತೇನೆ ?

ರಾಣಿ—ಅಮಾವಾಸ್ಯೇನಾ ?

ರಾಜ—ಈಚೆಗೆ ಎಲ್ಲಾ ದಿನಗಳೂ ಬರೀ ಅಮಾವಾಸ್ಯೇನೇ ಆಗಿದೆಯಲ್ಲೆ ಮನಸ್ಸಿನಲ್ಲಿ ಕತ್ತಲು ಕಟ್ಟಿಕೊಂಡು !

ರಾಣಿ—ಏನೂ ಈ Philosophy ?

ರಾಜ—Philosophy ಅಲ್ಲಕಣೇ Psychology ! ಈ mental cud ನಲ್ಲಿ ಎಷ್ಟು ದಿನ pull on ಮಾಡೋಕಾಗುತ್ತೇ ನಾವು ?

ರಾಣಿ—cud ಏನೂ . . . ಎಲ್ಲಾ ನಿಮ್ಮಿಂದಲೇ.

ರಾಜ—ಹೌದುಕಣೇ . . . ಆದ್ರೆ ನಿನ್ನ defects ಸ್ವಲ್ಪೂ ಇಲ್ಲಾಂತೀಯ ?

ರಾಣಿ—ಏನೋ . . . ಅಲ್ಪ ಸ್ವಲ್ಪ . . . ಒಂದ್ವೇಳೆ . . . ಇದ್ರೂ . . . ಉಂ ಇರಬಹುದು.

ರಾಜ—"ಇರಬಹುದು" Oh! That is a great progress ನೋಡು—ಇವತ್ನಿಂದ ಒಂದು ಹೊಸ understanding ಗೆ ಬರದೆಹೋದರೆ—I am afraid we get tired of each other.

ರಾಣಿ—ಹೌದು ಹೌದು . . . ಬೆಳಗ್ನಿಂದ ಮೂಗರ ಹಾಗೆ ಎಂದಿಗೆ ೧೦ ಘಂಟೆಯಾದೀತಪ್ಪಾಂತ ಕೂತ್ಕೊಂಡು ಊಟವಾದೇಟ್ಗೆ ಸೈಕಲ್ಹತ್ತಿದ್ರೆ ಬರೋದು ಇನ್ನು ರಾತ್ರಿ ೧೦ ಘಂಟೇನೆ, ನಾವೇನ್ಮಾಡೋಕೆ ಇಲ್ಲಿ!!

ರಾಜ—ಮೊದಲಿರ್ತಿರ್ಲಿಲ್ವೇ ಯಾವಾಗ್ಲೂ ಮನೇಲೇ . . . ನಿನ್ನಿಂದ್ಲೇ ಎಂದೇನೆ ಸುಳಿದಾಡ್ತಾ.

ರಾಣಿ—ಹೂಂ ಉಂ! ಈಚೀಚೆಗೆ ತಾನೇ ಈ ಬದಲಾವಣೆ!

ರಾಜ—That is because I am tired of your ಸರೋಜ, ಸರೋಜನ ಗಂಡ, your demands, that unbroken talk!

ರಾಣಿ—ಹೂಂ . . . ಬಿಡಿ ನಮ್ಮದೇ ಎಲ್ಲಾ ತಪ್ಪು!

ರಾಜ—ಹಾಗಲ್ಲ . . . ಇಬ್ರೂ compromise ಮಾಡ್ಕೊಳ್ಳೋಣ. We shall start a new life!

ರಾಣಿ— ಊಂ! new life ಉ ಹೇಗೋ!?

ರಾಜ—ಕೇಳೂ! ಹೀಗೆ ನಾವು strangers ಆಗ್ತಾ ಇರೋಕೆ cause ನೆಲ್ಲ ಕಂಡ್ಹಿಡ್ಕೊಂಡಿದೀನಿ ನಾನು.

ರಾಣಿ—ನಾನೂ ಕಂಡ್ಹಿಡ್ಕೊಂಡಿದೀನಿ!!

ರಾಜ—ಆಗ಼್್ಲಿ—ನೀನೂ ಹೇಳೂ—ಈಗ ನಾನು ಸ್ವಲ್ಪ conditions ಹಾಕ್ತೀನಿ ಅದಕ್ಕೆ ನೀನು ಒಪ್ಪಬೇಕು.

ರಾಣಿ—ನನ್ನ conditions ಗೆ? ನೀವೂ?

ರಾಜ—ಒಪ್ಕೋತೀನಿ—Surely!

ರಾಣಿ—ಆಗ್ಲಿ ಹಾಗಾದ್ರೆ—! ಹೇಳಿ.

ರಾಜ—ಬರೀ "ಆಗ್ಲಿ ಹಾಗಾದ್ರೆ" ಅಲ್ಲ—ಒಪ್ಕೊಂಡ ಮೇಲೆ ನಡಸ್ಲೇಬೇಕು.

ರಾಣಿ—ಹೂಂ, ಹೇಳಿ ಹೋಗ್ಲಿ—

ರಾಜ—ಹೇಳು—ನಡಸ್ತೀಯಾ?

ರಾಣಿ—Oh yes !

ರಾಜ—ಹೂಂ ಭಾಷೆ ಕೊಡು !

ರಾಣಿ—ಏ ಹೋಗ್ರಿ . . . ಹುಡುಗಾಟ . . . ಹೋಗ್ಲಿ . . . ತೊಗೊಳ್ರಿ ಭಾಷೆ!

ರಾಜ—ಹಾಗೇ ! ! ನೋಡು ನನ್ನ first condition ! ಊ ಇನ್ಮೇಲೆ ದಯವಿಟ್ಟು ನನ್ಮುಂದೆ ಆ ಸರೋಜನ ಗಂಡನ ವಿಷಯ ಮಾತಾಡಕೂಡದು !

ರಾಣಿ—ಹೂ—ನನ್ನ first condition ಆಫೀಸಾದಕೂಡ್ಲೇ ೫ ಘಂಟೆಗೆ ತಾವು ನೇರವಾಗಿ ಮನೇಗೆ ಬರಬೇಕು !

ರಾಜ—Righto! second condition ಅಂದು—ನೀನು ವಾರಕ್ಕೆ ಒಂದು ಸಿನಿಮಾ ಮೇಲೆ ಹೋಗೋಹಾಗಿಲ್ಲ !

ರಾಣಿ—ಓ . . . ಅದೇ ಸ್ವಲ್ಪ . . . ಹೂಂ ಹೋಗ್ಲಿ—ನನ್ನ second condition ವಾರಕ್ಕೊಂದು ದಿನ ತಾವೇ ಕರಕ್ಕೊಂಡ್ಹೋಗಬೇಕು ನನ್ನ ಸಿನಿಮಾಗೆ !

ರಾಜ—All right! thirdly, ನಿನ್ನ cosmetic, ಬಟ್ಟೆ ಎಲ್ಲಾ ಸೇರ್ಸಿ ತಿಂಗಳಿಗೆ ೨೦ ರೂಪಾಯಿ ಮೇಲಿಲ್ಲ !

ರಾಣಿ—ಆ್ಹಂ ?

ರಾಜ—ಹೂ.

ರಾಣಿ—ಆಗೋಲ್ಲ—ಕೊನೇಪಕ್ಷ ೩೦ Rs. ಕೊಡಿ—

ರಾಜ—ಆಗೊಲ್ಲ

ರಾಣಿ—ಬಿಡಿ ಹಾಗಾದ್ರೆ.

ರಾಜ—ಹೋಗ್ಲಿ ೨೫ ರೂಪಾಯಿ !

ರಾಣಿ—ಊಂ . . . (Complaing)

ರಾಜ—ಲೇ compromise ಅಂದ್ಬಿಟ್ಟು—ಕಾಟ ಕೊಡ್ತೀಯಾ !

ರಾಣಿ—ಹೋಗ್ಲಿ—೨೫ Rupees ? ಆಂ ? ತಿಂಗಳಿಗೆ ?

ರಾಜ—All right !

ರಾಣಿ—ನಮ್ಮ third condition—ಮನೇಲಿದ್ದಾಗೆಲ್ಲ ತಾವೇ ಮಗೂನ ನೋಡ್ಕೋಬೇಕು—ಅಳದ ಹಾಗೇ. . .

ರಾಜ—ಆ್ಹಂ! . . . ಆ loud speaker ನ quiet ಆಗಿ ಇಡೋದೇ ತಾನೇ ಮಹಾಕಷ್ಟ !—ಹೂಂ—ಅದೂ ಆಗ್ಲಿ—ಬಿಡು ನೀನೇ ಗೆದ್ದೆ ! ಆಮೇಲ್ನೋಡು—ಇನ್ನೊಂದು—final ಊ !

ರಾಣಿ—ಏನು ?

ರಾಜ—ನಾವೊಂದು "Night book" ಅಂತ ಇಟ್ಟಿರಬೇಕು.

ರಾಣಿ—ಏಕೇ ?

ರಾಜ—ದಿನಾ ನಾಮಾಡಿದ ತಪ್ಪೆಲ್ಲ ಆಗಾಗ್ಗೇ ದಬಾಯಿಸದೆ quiet ಆಗಿ ನೀನು ಆ ಬುಕ್ನಲ್ಲಿ ಬರೆದಿಡು—ನಿನ್ನ ದಿನಗಟ್ಲೆ defects ನೆಲ್ಲ ನಾ ಬರೆದಿಡ್ತೀನಿ. . . ದಿನಾ ರಾತ್ರಿ between ೯ and ೯.೩೦ ಅದನ್ನ ಇಬ್ರೂ ಓದಿ—convince ಮಾಡಿ—ತಪ್ಪು ನಿಜವಾದ್ರೆ penalty ಕೊಡೋಣ!

ರಾಣಿ—Correct ಕಣ್ರೀ . . . ಆದ್ರೆ ಇದೆಲ್ಲ ಯಾವತ್ನಿಂದ?

ರಾಜ—ಈಗಿಂದ ಈ minute ನಿಂದ.

ರಾಣಿ—ಆಹಾ ?

ರಾಜ—ಹೂಂ . . . (child weeps—background)

ರಾಣಿ—ತಪ್ಪಿದರೆ penalty ಏನೂ ? ಕೊಡೋದು.

ರಾಜ—ತಪ್ಪಲೇಕೂಡದು—penalty question ಏ ಇಲ್ಲ.

ರಾಣಿ—ಓ . . . ಸರೀರ್ರಿ.

ರಾಜ—ರಾಣೀ . . . ಹಾಗಿದ್ರೆ—ಇವತ್ನಿಂದ new life ಕಣೇ ನಮ್ಮದು. New light.

ರಾಣಿ—ಹಾಗಿದ್ರೆ ಇವತ್ತು picture ಗೆ ?

ರಾಜ—ಹೋಗೋಹಾಗಿಲ್ಲ ನೀನು—second condition !

ರಾಣಿ—ಓ . . . ಮಗು ಅಳ್ತಿದೆ . . . ಎದ್ಬಿಟ್ಟ ಕಳ್ಳ—

ರಾಜ—ಓ ಹೋಗಿ ಎತ್ಕೋ . . .

ರಾಣಿ—ಊಂ . . .! ತಾವು. . . .

ರಾಜ—ಅ್ಹಂ ?

ರಾಣಿ—ಹೂಂ . . . ನಂದು third condition . . . ಮಗುನ ಎತ್ಕೊಳ್ದಿ ಇದ್ರೆ . . . book ನಲ್ಲಿ ಬರೀಬೇಕಾಗುತ್ತೇ !

ರಾಜ—ಓ . . . (laugh) yes . . . ಬಾ . . . ಬಾ . . . ಬಾ ಮರಿ (goes to background) ಬಾ ಮರೀ . . . ಟುರ್ರ್ . . .

ಎಚ್. ಕೆ. ರಂಗನಾಥ.

ಮುಗಿದುದು.

ಕಾವ್ಯಾವಲೋಕನ

ಅರ್ಥಶಾಸ್ತ್ರ—ಲೇಖಕರು : ಕು. ಶಿ. ಹರಿದಾಸಭಟ್ಟ, ಎಂ.ಎ. ; ಪ್ರಕಾಶಕರು : ಕಾವ್ಯಾಲಯ, ಮೈಸೂರು ; ಕ್ರೌನ್ ೧/೮ ಆಕಾರದ ೩೦೫ ಪುಟಗಳು ; ಬೆಲೆ, ಸಾದಾಪ್ರತಿ ರೂ. ೫ ; ಉತ್ತಮ ಪ್ರತಿ ರೂ. ೬-೮-೦.

ಕನ್ನಡದಲ್ಲಿ ಶಾಸ್ತ್ರಗ್ರಂಥಗಳೇ ಹೆಚ್ಚಾಗಿಲ್ಲದಿರುವಾಗ, ಹಲವು ಶಾಸ್ತ್ರಗಳಲ್ಲಿ ಅವುಗಳನ್ನು ಸಮಗ್ರವಾಗಿ ಪರಿಚಯಮಾಡಿಕೊಡುವ ಒಂದೊಂದು ಪುಸ್ತಕವೂ ಇಲ್ಲದಿರುವಾಗ, ಕನ್ನಡದಲ್ಲಿ ಹೊಸದಾಗಿ ಪ್ರಕಟವಾದ ಒಂದು ಶಾಸ್ತ್ರಗ್ರಂಥವನ್ನು ವಿಮರ್ಶಿಸುವುದು ಬಹು ಕಷ್ಟದ ಕೆಲಸ. ಒಂದು ಪುಸ್ತಕದ ವಿಮರ್ಶೆಮಾಡುವಾಗ, ಇದೇ ವಿಷಯವನ್ನವಲಂಬಿಸಿ ರಚಿತವಾಗಿರುವ ಇತರ ಪುಸ್ತಕಗಳ ಗುಣಾವಗುಣಗಳನ್ನು ಮನಸ್ಸಿನಲ್ಲಿಟ್ಟುಕೊಂಡಿರಬೇಕಾಗುತ್ತದೆ. ವಿಮರ್ಶೆಯ ಮಾರ್ಗ ಬೆಳೆಯುವುದೇ ಇಂಥ ಹೋಲಿಕೆಯಿಂದ. ಆದರೆ ಕನ್ನಡದಲ್ಲಿ ಇವುಗಳ ಕೊರತೆಯಾಗಿರುವುದರಿಂದ, ಈ ಶಾಸ್ತ್ರವಿಷಯಕ ಗ್ರಂಥಗಳ ರಚನೆಗೆ ಸ್ಫೂರ್ತಿ ನೀಡುತ್ತಿರುವ ಇಂಗ್ಲಿಷ್ ಪುಸ್ತಕಗಳನ್ನು ಮನಸ್ಸಿನಲ್ಲಿಟ್ಟುಕೊಂಡು ವಿಮರ್ಶೆಯ ನಿಲವನ್ನು ನಿರ್ಧರಿಸಲು ಹೊರಡುವುದು ಅಷ್ಟೇನೂ ಹಿತಕರವಾದ ಅಭ್ಯಾಸವಲ್ಲ. ಕನ್ನಡದ ದೃಷ್ಟಿಯಿಂದ ಈ ಪುಸ್ತಕ ಎಷ್ಟರಮಟ್ಟಿಗೆ ಉಪಯುಕ್ತವಾಗಿದೆ?—ಎಂಬುದನ್ನಷ್ಟೇ ವಿಚಾರಿಸುವುದು ಯುಕ್ತ, ಹಾಗೂ ಅಗತ್ಯ.

ಕು. ಶಿ. ಹರಿದಾಸಭಟ್ಟರ 'ಅರ್ಥಶಾಸ್ತ್ರ' ಗ್ರಂಥಕ್ಕೂ ಈ ಮಾತುಗಳು ಅನ್ವಯಿಸುತ್ತವೆ. ಕಾಲೇಜಿನ ಶಿಕ್ಷಣವನ್ನೂ ಪ್ರಾದೇಶಿಕ ಭಾಷೆಯ ಮಾಧ್ಯಮದ ಮೂಲಕವೇ ನಡಸಬೇಕೆಂಬ ವಾದಕ್ಕೆ ಹೆಚ್ಚು ಹೆಚ್ಚು ಪುರಸ್ಕಾರ ದೊರಕುತ್ತಿರುವ ಈ ಸಮಯದಲ್ಲಿ 'ಅರ್ಥಶಾಸ್ತ್ರ'ದಂಥ ಉಪಯುಕ್ತ ವಿಷಯವನ್ನು ಕುರಿತು ಕನ್ನಡದಲ್ಲಿ ನಾಲ್ಕಾರು **ಸಮಗ್ರ** ಗ್ರಂಥಗಳೂ ಇಲ್ಲದಿರುವುದು ವಿಷಾದದ ಸಂಗತಿ. ಈ ದೃಷ್ಟಿಯಿಂದ ಹರಿದಾಸಭಟ್ಟರ ಪುಸ್ತಕವನ್ನು ಎಲ್ಲರೂ ಸ್ವಾಗತಿಸಲೇಬೇಕು.

ಗುಣದ ದೃಷ್ಟಿಯಿಂದಲೂ ಭಟ್ಟರ ಪುಸ್ತಕ ಸಮರ್ಪಕವಾಗಿದೆಯೆಂದೇ ಹೇಳಬೇಕು. ಸುಮಾರು ಮುನ್ನೂರು ಪುಟಗಳ ಪರಿಮಿತಿಯಲ್ಲಿ ಭಟ್ಟರು ದಿನೇ ದಿನೇ ಬೆಳೆಯುತ್ತಿರುವ—ಈಗಾಗಲೇ ವಿಪುಲವಾಗಿ ಬೆಳೆದಿರುವ—ಅರ್ಥಶಾಸ್ತ್ರದ ಸಮಗ್ರ ಪರಿಚಯವನ್ನು ಮಾಡಿಕೊಡಲು ಯತ್ನಿಸಿದ್ದಾರೆ. ಅರ್ಥಶಾಸ್ತ್ರದಲ್ಲಿ ಇತ್ತೀಚೆಗೆ ಪ್ರಚಲಿತವಿರುವ

ಅಭಿಪ್ರಾಯಗಳನ್ನು ಇದು ಒಳಗೊಂಡಿದ್ದರೂ ಕೂಡ ಈ ಪುಸ್ತಕ ತುಂಬಾ ಕ್ಲಿಷ್ಟವಾಗಿಯೇನೂ ಪರಿಣಮಿಸಿಲ್ಲ.

ಅರ್ಥಶಾಸ್ತ್ರ ಎಂದರೇನೆಂಬುದನ್ನು ಲೇಖಕರು ಮೊದಲಿನ ಅಧ್ಯಾಯದಲ್ಲಿ ನಿರೂಪಿಸಿದ್ದಾರೆ. ಅರ್ಥಶಾಸ್ತ್ರದ ಜನಕನಾದ ಆಡಂ ಸ್ಮಿಥ್‌ನಿಂದ ಹಿಡಿದು ಇಪ್ಪತ್ತನೆಯ ಶತಮಾನದ ರಾಬಿನ್ಸ್‌ನ ವರೆಗೂ ಅರ್ಥಶಾಸ್ತ್ರಜ್ಞರು ಹೇಗೆ ಈ ಪದಲಕ್ಷಣವನ್ನು ವಿವರಿಸಿರುವರೆಂಬುದನ್ನು ಲೇಖಕರು ಸೂಕ್ಷ್ಮವಾಗಿ ಪರಿಶೀಲಿಸಿದ್ದಾರೆ. ಮುಂದಿನ ಅಧ್ಯಾಯದಲ್ಲಿ ಅರ್ಥಶಾಸ್ತ್ರದಲ್ಲಿ ಬಳಸುವ ಕೆಲವು ಪದಗಳನ್ನು ಅವರು ವಿವರಿಸಿದ್ದಾರೆ.

ಅನುಭೋಗವೇ ಆರ್ಥಿಕಪ್ರಪಂಚದ ಆಧಾರ. ಆದ್ದರಿಂದ ಅನುಭೋಗಕ್ಕೆ ಸಂಬಂಧಿಸಿದ ಹಲವು ಸಮಸ್ಯೆಗಳ ವಿಶ್ಲೇಷಣೆಗೆ ಮುಂದಿನ ಅಧ್ಯಾಯ ಮೀಸಲು. ಹಿಂದೆ—ನಮ್ಮ ಆರ್ಥಿಕ ವ್ಯವಸ್ಥೆ ಬೆಳೆಯದಿದ್ದಾಗ—ಪ್ರತಿಯೊಬ್ಬರೂ ಅವರವರ ಇಚ್ಛೆಯ ಪೂರೈಕೆಗಾಗಿ ಅವರವರೇ ನೇರವಾಗಿ ಶ್ರಮಿಸುತ್ತಿದ್ದರು. ಆದರೆ ಈಗ ಶ್ರಮಕ್ಕೂ ಇಚ್ಛೆಯ ಪೂರೈಕೆಗೂ ಬಹುದೂರದ ಸಂಬಂಧ. ಒಬ್ಬನ ಶ್ರಮ ಆತನ ಇಚ್ಛೆಯ ಪೂರೈಕೆಗೆ ನೇರವಾಗಿ ಸಹಾಯಕವಾಗುವುದಿಲ್ಲ. ಇದು ಇಂದಿನ ಆರ್ಥಿಕ ವ್ಯವಸ್ಥೆಯ ಸಂಕೀರ್ಣತೆಯ ಲಕ್ಷಣ. ಈ ಸಂಕೀರ್ಣತೆ ಸಫಲವಾಗಿರುವುದು ವಿನಿಮಯದ ಮೂಲಕ. ಈ ವಿನಿಮಯಕ್ಕೆ ಮೌಲ್ಯನಿರ್ಣಯವೇ ಕೀಲೆಣ್ಣೆ. ಆದರೆ ಈ ಮೌಲ್ಯ ಹೇಗೆ ನಿರ್ಣೀತವಾಗುವುದೆಂಬುದನ್ನು ಅರಿಯುವುದು ಅಷ್ಟು ಸುಲಭದ ಕೆಲಸವಲ್ಲ. 'ಮೌಲ್ಯಮೀಮಾಂಸೆ' ಅರ್ಥಶಾಸ್ತ್ರದ ಅತಿ ಕ್ಲಿಷ್ಟವಾದ ಭಾಗಗಳಲ್ಲೊಂದು. ಆಡಂ ಸ್ಮಿಥನ ಎರಡು ಸೂತ್ರಗಳನ್ನು ಅನುಸರಿಸಿ ಎರಡು ಹಾದಿಗಳು ರಚಿತವಾಗಿವೆ. ಈ ಎರಡು ಹಾದಿಗಳನ್ನೂ, ಆಧುನಿಕ ಅರ್ಥಶಾಸ್ತ್ರಜ್ಞರ 'ಪರಿಸರದ ಉಪಯುಕ್ತತೆಯ ಮೀಮಾಂಸೆ'ಯನ್ನೂ ಲೇಖಕರು ವಿಶದವಾಗಿ ವಿವೇಚಿಸಿದ್ದಾರೆ.

ಇಂದಿನ ಆರ್ಥಿಕವ್ಯವಸ್ಥೆಯಲ್ಲಿ ಅನುಭೋಗ ಒಂದು ತುದಿಯಾದರೆ ಉತ್ಪಾದನೆ ಇನ್ನೊಂದು ತುದಿ. ಇವೆರಡೂ ಒಂದಕ್ಕೊಂದು ಪೂರಕ. ಉತ್ಪಾದನೆಯ ಜತೆಜತೆಯಲ್ಲೇ ಸಂಪತ್ತಿನ ವಿತರಣೆಯೂ ಸೇರಿದೆ. ಉತ್ಪಾದನೆಗೆ ಅಗತ್ಯವಾದ ನಾಲ್ಕು ಅವಯವಗಳು, ಇವಕ್ಕೆ ಸಲ್ಲುವ ವರಮಾನ—ಇವುಗಳಿಗೆ ಸಂಬಂಧಿಸಿದ ಹಲವು ಸೂತ್ರಗಳನ್ನೂ ಲೇಖಕರು ಚರ್ಚಿಸಿದ್ದಾರೆ. ಶ್ರಮವಿಭಾಗ, ಪರಿಪೂರ್ಣ ಮೇಲಾಟ, ಅಪರಿಪೂರ್ಣ ಮೇಲಾಟ, ಸರ್ವಮಾನ್ಯ—ಮುಂತಾದ ಹಲವು ವಿಷಯಗಳನ್ನೂ ಅವರು ಪ್ರಾಸಂಗಿಕವಾಗಿ ವಿಶ್ಲೇಷಿಸಿದ್ದಾರೆ.

ಇಂದಿನ ಆರ್ಥಿಕವ್ಯವಸ್ಥೆಯ ಚಾಲನ ಶಕ್ತಿ ಹಣ. ಇದರ ವ್ಯವಸ್ಥೆಯನ್ನು ಕುರಿತ ವಿವೇಚನೆ ಬಹು ಸ್ವಾರಸ್ಯವಾಗಿರುತ್ತದೆ. ಹಣದ ಮುಸುಕು ಇಂದಿನ ಎಲ್ಲ

ಆರ್ಥಿಕ ವ್ಯಾಪಾರಗಳನ್ನೂ—ಅವು ನೇರವಾಗಿ ತೋರದ ಹಾಗೆ—ಅಸ್ಪಷ್ಟಗೊಳಿಸಿದೆ. ಇಂದಿನ ಆರ್ಥಿಕವ್ಯವಸ್ಥೆಯನ್ನು ಅರಿತುಕೊಳ್ಳಬೇಕಾದರೆ ಹಣಪ್ರಪಂಚವನ್ನೂ ಅರಿಯಲೇಬೇಕು. ಹಣಪ್ರಪಂಚದ ಹಲವು ಸಮಸ್ಯೆಗಳನ್ನೂ, ರಾಜಸ್ವ (Public Finance), ಅಂತರರಾಷ್ಟ್ರೀಯ ವ್ಯಾಪಾರ—ಇವುಗಳಿಗೆ ಸಂಬಂಧಿಸಿದ ಸೂತ್ರಗಳನ್ನೂ ಲೇಖಕರು ವಿವರಿಸಿದ್ದಾರೆ. ಕೊನೆಯ ಎರಡು ಅಧ್ಯಾಯಗಳು ಸಮಾಜವಾದಿ ಅರ್ಥಮಂಡಲದ ವಿವರಣೆಗೂ ಹಿಂದುಳಿದ ರಾಷ್ಟ್ರಗಳ ಅಭಿವೃದ್ಧಿ ಸಮಸ್ಯೆಯ ಚರ್ಚೆಗೂ ಮೀಸಲು.

ಲೇಖಕರು ತಮ್ಮ ಮುಂದಿರಿಸಿಕೊಂಡ ಕೆಲಸವನ್ನು ತಕ್ಕಮಟ್ಟಿಗೆ ಅಚ್ಚುಕಟ್ಟಾಗಿಯೇ ಮಾಡಿದ್ದಾರೆಂದು ಹೇಳಬಹುದು. ಅರ್ಥಶಾಸ್ತ್ರವನ್ನು ಕುರಿತ ಈ ಗ್ರಂಥದಲ್ಲಿ ವ್ಯಾಪಾರದ ಆವರ್ತ (Trade Cycle) ವನ್ನು ಕುರಿತ ಸೂತ್ರಗಳನ್ನು ವಿವೇಚಿಸದಿರುವುದು ಒಂದು ಕೊರತೆ. ಮುಂದಿನ ಆವೃತ್ತಿಯಲ್ಲಿ ಈ ಕೊರತೆಯನ್ನು ಅವರು ನಿವಾರಿಸಲಿ.

ಭಟ್ಟರ ಶೈಲಿ ಸಾಮಾನ್ಯವಾಗಿ ಸರಲವಾಗಿಯೇ ಇದ್ದರೂ ಅಲ್ಲಲ್ಲಿ ಅದು ಕ್ಲಿಷ್ಟವಾಗಿ ಪರಿಣಮಿಸಿದೆ. ಇಂಗ್ಲಿಷ್ ಭಾಷೆಯಲ್ಲಿ ಅರ್ಥಶಾಸ್ತ್ರವನ್ನು ಓದದಿರುವವರಿಗೆ (ಅಂಥವರಿಗಾಗಿಯೇ ಈ ಪುಸ್ತಕವೆಂದು ಲೇಖಕರು ಮುನ್ನುಡಿಯಲ್ಲಿ ಹೇಳಿಕೊಂಡಿದ್ದಾರೆ.) ಇಂಥ ಭಾಗಗಳು ಸುಲಭವಾಗಿ ಅರ್ಥವಾಗಲಾರವು. ಕೆಲವೆಡೆಗಳಲ್ಲಂತೂ, ಕೆಲವು ಇಂಗ್ಲಿಷ್ ಪುಸ್ತಕಗಳ ಶೈಲಿಯೇ ಕನ್ನಡಕ್ಕೆ ಇಳಿದಂತೆ ತೋರುತ್ತದೆ. ಈ ಕ್ಲಿಷ್ಟತೆಯನ್ನು ನಿವಾರಿಸಬಹುದಾಗಿತ್ತು.

ಕೆಲವು ಕಡೆಗಳಲ್ಲಿ ಸಣ್ಣಪುಟ್ಟ ತಪ್ಪುಗಳು ನುಸುಳಿವೆ. ಸರಕಾರ ತನ್ನ ಉದ್ದಿಷ್ಟ ಕಾರ್ಯಗಳನ್ನು ಪುಕ್ಕಟೆಯಾಗಿ ಮಾಡಲು ಸಿದ್ಧವಾಗಿಲ್ಲ (ಪುಟ ೪)—ಎನ್ನುವುದಕ್ಕಿಂತ, 'ಪುಕ್ಕಟೆಯಾಗಿ ಮಾಡಲಾರದು' ಎನ್ನುವುದು ಹೆಚ್ಚು ಸಮಂಜಸವಾಗಬಹುದಲ್ಲವೆ? 'ಮರ್ಫಿ' ರೇಡಿಯೋವೂ, 'ಪ್ರಮುಖ' ರೇಡಿಯೋವೂ ಒಂದೇ ಬಗೆಯಾಗಿ ಗೋಳಿಡುವುವು (ಪುಟ ೪೨)—ಎಂದು ಹೇಳುವುದು ಹಾಸ್ಯವಾಗಲಾರದು.

ಆದರೆ ಇವೆಲ್ಲಾ ಸಣ್ಣಪುಟ್ಟ ದೋಷಗಳು. ಭಟ್ಟರು ಶ್ರಮವಹಿಸಿ ಈ ಪುಸ್ತಕವನ್ನು ಬರೆದಿದ್ದಾರೆ. ಅವರು ತಮ್ಮ ಈ ಪುಸ್ತಕದ ಮೂಲಕ ಕನ್ನಡದ ವಿಚಾರಪ್ರಿಯರ ಒಲವನ್ನು ಗಳಿಸುವರೆಂಬುದರಲ್ಲಿ ಸಂದೇಹವಿಲ್ಲ.

ಎಚ್ಚೆಸ್ಕೆ.

*
* *

ವಿ. ಸೀ. (ಕವಿ ಕಾವ್ಯಪರಿಚಯ)—ಸಂಪಾದಕರು : ಶ್ರೀ ಎಸ್. ಅನಂತನಾರಾಯಣ, ಎಂ.ಎ. ಮತ್ತು ಪ. ವಿ. ಚಂದ್ರಶೇಖರ; ಪ್ರಕಾಶಕರು : ಗೆಳೆಯರ ಬಳಗ, ಅರಸೀಕೆರೆ ಮತ್ತು ದಾವಣಗೆರೆ; ಪುಟಗಳು ೧೨೮ ; ಬೆಲೆ, ರೂ. ೧-೦-೦.

ಕನ್ನಡ ಸಾಹಿತ್ಯದ ಪರಿಚಯವಿದ್ದವರಿಗೆ ಶ್ರೀ ವಿ. ಸೀತಾರಾಮಯ್ಯನವರು ಹೊಸಬರಲ್ಲ. ಕುಮಟೆದಲ್ಲಿ ನಡೆದ ಸಾಹಿತ್ಯಸಮ್ಮೇಳನದ ಅಧ್ಯಕ್ಷರಾದ ಮೇಲಂತೂ ಅವರ ಹೆಸರು ಕನ್ನಡನಾಡಿನ ಹಳ್ಳಿಹಳ್ಳಿಗೆ ಮುಟ್ಟಿದೆ. ಅಧ್ಯಕ್ಷರಾದ ಸುಸಮಯದ ಸವಿ ನೆನಪಿಗಾಗಿ ಅವರ ಜೀವನ-ಕಾವ್ಯಗಳ ಪರಿಚಯ ಮಾಡಿಕೊಡುವ ಈ ಕೃತಿಯನ್ನು ಗೆಳೆಯರ ಬಳಗದವರು ಪ್ರಕಾಶಿಸಿದ್ದು ಸ್ತುತ್ಯಾರ್ಹಸಂಗತಿ. ಇಲ್ಲಿನ ವರೆಗೆ ವಿ. ಸೀ. ಯವರನ್ನು ಅಷ್ಟಕ್ಕಷ್ಟೆ ಅರಿತಿದ್ದವರಿಗೆ ಈ ಗ್ರಂಥ ಅವರ ಒಳ-ಹೊರಗುಗಳ ದಿಗ್ದರ್ಶನ ಮಾಡಿಕೊಡುತ್ತದೆ. ಇದು ಪುಟ್ಟದಾದರೂ, ಪೂರ್ಣಕೃತಿ.

ಈ ಕೃತಿಯಲ್ಲಿ ವಿವಿಧ ಲೇಖಕರು ಬರೆದ ಹದಿನಾಲ್ಕು ಪ್ರಬಂಧ ಹಾಗೂ ಪದ್ಯಗಳಿವೆ. ಒಂದೊಂದೂ ಒಂದೊಂದು ದೃಷ್ಟಿಯಿಂದ ವಿ. ಸೀ. ಯವರನ್ನು ನಿಟ್ಟಿಸಿದವುಗಳಾಗಿವೆ. ಇಲ್ಲಿನ ಪ್ರಬಂಧಗಳನ್ನು, ವ್ಯಕ್ತಿಪರಿಚಯ ಹಾಗೂ ಕೃತಿಪರಿಚಯದವುಗಳೆಂದು ವಿಭಾಗಿಸಬಹುದು. ಈ ಎಲ್ಲ ಪ್ರಬಂಧಗಳು ಒಬ್ಬನೇ ಕೃತಿಕಾರನ ಪುಸ್ತಕದಲ್ಲಿ ಬರುವ ವಿವಿಧ ಅಧ್ಯಾಯಗಳಂತೆ ಅಳವಟ್ಟಿರುವುದನ್ನು ನೋಡಿದರೆ, ಸಂಪಾದಕೀಯ ಜಾಣ್ಮೆಯ ಅರಿವು ನಮಗಾಗುತ್ತದೆ. ವಿ. ಸೀ. ಜೀವನದ ಬಹುಶಃ ಎಲ್ಲ ಮುಖಗಳ ಪರಿಚಯ ಇಲ್ಲಿದೆ ಎಂದು ಹೇಳಬಹುದು.

ವ್ಯಕ್ತಿಪರಿಚಯದ ಪ್ರಬಂಧಗಳನ್ನು ಮೊದಲು ನೋಡೋಣ. 'ಕಡಲಿನ ಕರೆಗೆ ಕಿವಿಗೊಟ್ಟ ಕೂಸು' ಎಂಬ ಲೇಖನದಲ್ಲಿ, ಕಾರಂತರು ವಿ. ಸೀ. ಪಡುಕರಾವಳಿ ಹಾಗೂ ಅಲ್ಲಿನ ಜನರೊಡನೆ ಬೆಳೆಯಿಸಿದ್ದ ಸಂಬಂಧವನ್ನು ಮಿತ್ರರಾಗಿ, ವಿಮರ್ಶಕರಾಗಿ, ಚಿತ್ರಿಸಿದ್ದಾರೆ. ಕಾವ್ಯಮಯವಾಗಿರುವ ಈ ಪ್ರಬಂಧದ ಶಿರೋನಾಮೆಯೇ, ಅದರ ಒಳಗನ್ನು ತೆರೆದು ತೋರುತ್ತದೆ, ಆಹ್ವಾನಿಸುತ್ತದೆ. ಪಡುಕರಾವಳಿಯ 'ಕಡಲು, ಬಂಡೆ, ಬೆಟ್ಟವನ್ನು ಕಂಡು ಮೂಕರಾಗಿದ್ದರಂತೆ!' ವಿ. ಸೀ. ಸದಭಿರುಚಿಯಿಂದ ಲೋಕದಲ್ಲಿ ಕೆಟ್ಟುಹೋಗಿದ್ದಾರಂತೆ! 'ನಾಡಿಗೆ ಸಲ್ಲದ ನಾಜೂಕೂ ಕಿಸೆಗೆ ಸಲ್ಲದ ನಾಜೂಕುಗಳನ್ನು ತುಂಬಿಕೊಂಡ ಪ್ರಾಣಿಯಂತೆ,' ರುಮಾಲು ಸುತ್ತುವುದರಲ್ಲಿ, ಪೊಂಗಲ್ ತಯಾರಿಸುವುದರಲ್ಲಿ, ಪುಸ್ತಕ ಅಚ್ಚಿಸುವುದರಲ್ಲಿ ವಿ. ಸೀ. ಯವರದು ನಾಜೂಕೋ ನಾಜೂಕಂತೆ! ಅರ್ಥಶಾಸ್ತ್ರಜ್ಞರೂ, ವಿಮರ್ಶಕರೂ ಆಗಿ, ಹೇಗೆ ಕನ್ನಡದ ಸೇವೆ ಸಲ್ಲಿಸಿದರೆಂಬ ವಿಷಯವನ್ನು ವಿ. ಸೀ. ಯವರ ಆತ್ಮೀಯರಲ್ಲಿ ಒಬ್ಬರಾದ ಕಾರಂತರು, ಸವಿ ನೆನಪುಗಳ ಸರಪಳಿಯಲ್ಲಿ ತೋರಿಸಿದ್ದಾರೆ.

ಎರಡನೆಯದಾಗಿ 'ಕ್ರತುಶಕ್ತಿ—ವಿ. ಸೀ.' ಎಂಬ ಲೇಖನದಲ್ಲಿ, ಅವರೊಂದಿಗೆ ಓಡಾಡುವ ಭಾಗ್ಯಪಡೆದ ಕೆ. ಎಸ್. ನರಸಿಂಹಸ್ವಾಮಿಯವರು, ವಿ. ಸೀ. ಹೇಗೆ ಅಪ್ಪಟ ರಸಿಕರೆಂಬುದನ್ನೂ, ಮಾನವಪ್ರೇಮಿಯೆಂಬುದನ್ನೂ, ವಿಶ್ವಸಾಹಿತ್ಯಕಲೆಗಳನ್ನು ಅರಿತವರೆಂಬುದನ್ನೂ, ತರುಣ ಬರಹಗಾರರಿಗೆ ರಚನಾತ್ಮಕವಾದ ಉತ್ತೇಜನ ಕೊಡುವವರೆಂಬುದನ್ನೂ, ಅವರ ಪತ್ರಗಳಿಂದಲೂ, ವೈಯಕ್ತಿಕ ಮಾತುಕತೆಗಳನ್ನು ನೆನಪಿಸಿಕೊಂಡು ಚಿತ್ರಿಸಿದ್ದಾರೆ. ಆದರೆ, ಪ್ರಬಂಧದ ಶಿರೋನಾಮೆ ಮನೆಗಿಂತ ಬೋರ್ಡ್ ದೊಡ್ಡದೆಂಬಂತಾಗಿದೆ.

ಎಸ್. ಮಂಜನಾಥರವರ ಪ್ರಬಂಧದಲ್ಲಿ ವಿ. ಸೀ. ಯವರ ಆಂತರ್ಯದ ಸೂಕ್ಷ್ಮ, ಮೃದು, ವಿನಯ, ಸಂಕೋಚಸ್ವಭಾವವನ್ನು ಗೆಳೆತನದ ಬಾಳಿನ ಕಳೆದ ಸನ್ನಿವೇಶಗಳನ್ನು ಆರಿಸಿ, ತೋರಿಸಿದ್ದಾರೆ. ಓದಿಗೆ ತೊಂದರೆ ಕೊಡುತ್ತಿದ್ದ ಕೆಲಸಗಾರರನ್ನೂ, ಅತ್ತ ಹೋಗಿರೆಂದು ಹೇಳಲು ಪಟ್ಟ ಸಂಕೋಚವನ್ನೂ ಮಿತ್ರರೊಬ್ಬರು ಪುಸ್ತಕದ ೧೦-೧೨ ಪುಟಗಳನ್ನು ಹರಿದುಕೊಟ್ಟಾಗ, ವಿ. ಸೀ. ಯವರ ಕಣ್ಣೀರುಕ್ಕಿಬಂದ ಸನ್ನಿವೇಶಗಳನ್ನೂ ಹೆಕ್ಕಿ ತೋರಿಸಿದ್ದಾರೆ. ಅವುಗಳನ್ನು ಓದಿದಾಗ 'ಅಯ್ಯೋ, ಇವರು ಹೇಳದಿದ್ದರೆ ಇವು ನಮ್ಮ ಪಾಲಿಗೆ ಇಲ್ಲವಾಗುತ್ತಿದ್ದುವಲ್ಲಾ' ಎಂಬ ಉದ್ಗಾರ ಮೂಡುತ್ತದೆ. ಇದರಲ್ಲಿ ಸಂಗೀತ, ಶಿಲ್ಪ, ವರ್ಣಶಿಲ್ಪ, ನೃತ್ಯ, ನಾಟ್ಯ, ನಾಟಕ, ಚಲನಚಿತ್ರ ಇವುಗಳಲ್ಲಿ ವಿ. ಸೀ. ಯವರಿಗಿದ್ದ ಅಭಿರುಚಿ, ಆಸ್ಥೆಗಳನ್ನು ಸೋದಾಹರಣವಾಗಿ ವಿವರಿಸಿದ್ದಾರೆ. ತಂದೆಯ ಗುಣಶೀಲಗಳನ್ನು ತಾಯಿ ಮಗನಿಗೆ ವಾತ್ಸಲ್ಯದಿಂದ ಮೈದಡುವುತ್ತಾ, ಸಾಂಸಾರಿಕ ಮಾತುಗಳಲ್ಲಿ ಹೇಳುತ್ತಿರುವ ಅನುಭವವಾಗುತ್ತದೆ. ಈ ಪ್ರಬಂಧ ಓದುವಾಗ ಅಷ್ಟು ಸರಳ, ಅಷ್ಟು ಸಮೀಪ.

ಶ್ರೀ ಮಾಸ್ತಿಯವರ 'ಸೀತಣ್ಣ'ನೆಂಬ ನುಡಿಚಿತ್ರ, ಅಷ್ಟೇ ಮಧುರ, ಮಂಜುಳವಾಗಿ, ವಿ. ಸೀ. ಯವರ ಸಂಕ್ಷಿಪ್ತ ಜೀವನಚರಿತ್ರೆಯಂತಿದೆ. 'ಒಬ್ಬ ವ್ಯಕ್ತಿ ತನ್ನ ಆತ್ಮೀಯರೊಡನೆ ಹೇಗೆ ವರ್ತಿಸುತ್ತಾನೆ ಎಂಬುದನ್ನು ಗುರುತಿಸಿದರೆ ಅವನ ಶೀಲ ಗೊತ್ತಾಗುತ್ತದೆ' ಎಂಬುದಕ್ಕೆ ಉದಾಹರಣೆಯಾಗಿ ಈ ವ್ಯಕ್ತಿ ಪರಿಚಯದ ಪ್ರಬಂಧಗಳಿವೆ.

ಇನ್ನುಳಿದುವು ಅವರ ಕೃತಿಪರಿಚಯ ಹಾಗೂ ವಿಮರ್ಶಾಪ್ರಬಂಧಗಳು. ಇವುಗಳಲ್ಲಿ ವಿ. ಸೀ. ಯವರ, 'ಗೀತಗಳು'—'ದೀಪಗಳು' ಎಂಬ ಕವನಸಂಗ್ರಹಗಳನ್ನು ಕುರಿತು ಶ್ರೀ ಜಿ. ಎಸ್. ಶಿವರುದ್ರಪ್ಪನವರೂ, 'ನೆಳಲು-ಬೆಳಕು' ಮತ್ತು ದ್ರಾಕ್ಷಿ-ದಾಳಿಂಬೆಗಳನ್ನು ಕುರಿತು ಶ್ರೀ ಎಸ್. ಅನಂತನಾರಾಯಣರೂ ಬರೆದಿದ್ದಾರೆ. ಈ ಇಬ್ಬರು ತರುಣಕವಿಗಳು ಆ ಹಿರಿಯ ಕವಿಯ ಕಾವ್ಯನಂದನದಲ್ಲಿ ವಿಹರಿಸಿ, ಪರಿ

ಚಯಾತ್ಮಕ ಹಾಗೂ ವಿಮರ್ಶಾತ್ಮಕ ಪ್ರಬಂಧಗಳನ್ನು ಬರೆದಿದ್ದಾರೆ. ವಿ. ಸೀ. ಯವರ ಗೀತಗಳಲ್ಲಿ ಕಾಣುವ ಸಂಗೀತ, ಶೈಲಿಯ ಸರಳತೆ ಮತ್ತು ಭೋರ್ಗರೆತಗಳನ್ನೂ, ಸ್ಫೂರ್ತಿದಾಯಕ ಆಶಾವಾದಿ ಮನೋಧರ್ಮ, ಆತ್ಮವಿಶ್ವಾಸ, ಪೌರುಷ, ಚೆಲುವು ಒಲವು, ಆಧ್ಯಾತ್ಮಿಕ ದೃಷ್ಟಿಗಳನ್ನು ಬಿಂಬಿಸುವ ಉದಾಹರಣೆಗಳಿಂದ 'ವಿ. ಸೀ. ಕವಿ'ಯನ್ನು ಕಂಡರಿಸಿದ್ದಾರೆ, ಶ್ರೀ ಶಿವರುದ್ರಪ್ಪ. ಈ ಪ್ರಬಂಧ ಸಮತೋಲನೆ, ಸಮಷ್ಟಿದೃಷ್ಟಿ, ಹಾಗೂ ಸಮರ್ಪಕ ಉದಾಹರಣೆಗಳಿಂದ ಒಂದು ಕುಸುರಿಗೆಲಸದ ಸ್ವತಂತ್ರ ಕೃತಿಯೆಂಬ ಭಾವನೆ ತರುತ್ತದೆ. ಹಾಗೇ. ಶ್ರೀ ಅನಂತನಾರಾಯಣರು, ವಿ. ಸೀ. ಯವರ ಸಾವಿರ ಮುಖದ ಅನುಭವ ಪ್ರಕೃತಿ ಪುರುಷರಂತೆ ಮಿಲನಗೊಂಡು, ಸಮಾಜದ ಕ್ರೌರ್ಯವನ್ನು ಪ್ರತಿಭಟಿಸುವ, ಪತಿತರಿಗೆ ಕರಗುವ, ನಿಸರ್ಗ ರಚಿಸಿರುವ ಬಣ್ಣಬಣ್ಣದ ಮೋಡಿಯನ್ನು ಚಿತ್ರಿಸುವ, ಅಲ್ಲಲ್ಲಿ ವಿಡಂಬಿಸುವ, ಪ್ರೇಮದ ಬಗೆಬಗೆಯ ನೋವುನಲವುಗಳನ್ನು ನಿರೂಪಿಸುವ, ಕವಿಯ ಅಂತರಂಗದ ಪದರುಪದರುಗಳನ್ನು ತೋರಿಸಿದ್ದಾರೆ. ವಿ. ಸೀ. ಯವರ ಕಾವ್ಯದಲ್ಲಿ ಬರುವ ಸಂಗೀತ ಹಾಗೂ ಮತ್ತಿತರ ಗುಣಾವಗುಣಗಳ ಬಗ್ಗೆ ದಿಟ್ಟವಿಮರ್ಶೆ ಇಲ್ಲಿದೆ. ಆದರೆ 'ದ್ರಾಕ್ಷಿ-ದಾಳಿಂಬೆ' ಇವರು ಹೇಳುವಷ್ಟು ಉತ್ಕೃಷ್ಟ ಕೃತಿಯೇ ಎಂಬುದು ವಿವಾದಾಸ್ಪದವಾದ ಮಾತು. ಉದಾತ್ತ ವಿಚಾರಗಳಿದ್ದರೂ, ಉದಾತ್ತ ಕಾವ್ಯಗುಣ ಹೆಚ್ಚು ಕವನಗಳಿಗಿಲ್ಲ ಎಂದು ಒಪ್ಪಿಕೊಳ್ಳಬೇಕಾಗಿದೆ. ಅವರೇ ನೆಳಲು ಬೆಳಕಿನ ಬಗ್ಗೆ ಹೇಳಿದ 'ವಿಚಾರಗಳು ವಿಚಾರ ಗಳಾಗಿಯೇ ಉಳಿದಿವೆ. ಕಾವ್ಯಕಲ್ಪನೆಯ ಸೂಜಿಗಲ್ಲಿನ ಮೋಡಿಯಿಂದ ರಸಚಿತ್ರ ಗಳಾಗಿಲ್ಲ. ರಸದರ್ಶನಗಳಾಗಿಲ್ಲ' ಎಂಬ ಮಾತು 'ದ್ರಾಕ್ಷಿ-ದಾಳಿಂಬೆ'ಗೂ ಅನ್ವಯಿಸ ಬಹುದೆಂದು ಕಾಣುತ್ತದೆ. ಅಂತೂ ಈ ಎರಡು ಪ್ರಬಂಧಗಳು 'ಕವಿ ವಿ. ಸೀ.' ಯವರನ್ನು ತೋರಿಸುವುದರಲ್ಲಿ ಸಾರ್ಥಕ್ಯ ಪಡೆದಿವೆ.

ವಿ. ಸೀ. ಯವರ 'ಸೊಹ್ರಾಬ್ ಮತ್ತು ರುಸ್ತುಂ' ಹಾಗೂ 'ಆಗ್ರಹ' ಎಂಬ ಎರಡು ನಾಟಕಗಳ ಬಗ್ಗೆ ಶ್ರೀ ತ. ಸು. ಶಾಮರಾಯರೂ, ಅವರ 'ರಾಧೆ' ಮತ್ತು 'ಉದ್ಧಾರ'ವೆಂಬ ಎರಡು ಕತೆಗಳನ್ನು ಕುರಿತು ಶ್ರೀ ಆರ್. ಎಸ್. ರಾಮ ರಾಯರೂ ಪ್ರಬಂಧಗಳನ್ನೂ ಬರೆದಿದ್ದಾರೆ. ವಿ. ಸೀ. ಯವರನ್ನು ಕುರಿತು ಬರೆದ ಶ್ರೀ ದ. ರಾ. ಬೇಂದ್ರೆ ಹಾಗೂ ರಾಘವರ ಎರಡು ಕವನಗಳು ಇಲ್ಲಿ ಹೊಂದಿಕೊಂಡಿವೆ.

ಶ್ರೀ ಪರಮೇಶ್ವರಭಟ್ಟರು, 'ಪಂಪಾಯಾತ್ರೆ'ಯನ್ನು ಕುರಿತು ಅತ್ಯಂತ ಸುಂದರ ವಾದ ಪ್ರಬಂಧ ಬರೆದಿದ್ದಾರೆ. ಪಂಪಾಯಾತ್ರೆಯಲ್ಲಿ ಬರುವ ಕಣ್ಣಿಗೆ ಕಟ್ಟುವ, ಮನಸ್ಸಿಗೆ ಮುಟ್ಟುವ ವರ್ಣನೆಗಳು ದೈವೀಪ್ರೇರಕವೆಂಬಂತೆ ಮೂಡಿ 'ಅತ್ಯದ್ಭುತಂ ರೋಮಹರ್ಷಣಂ'ಎಂಬಂತಾಗಿರುವುದನ್ನು ಪ್ರಥಮದಲ್ಲಿ ವಿವರಿಸಿ, ಅದರಲ್ಲಿ ಬರುವ

ವಿವಿಧ ಅನುಭವಗಳನ್ನೂ ಸೂಚಿಸಿದ್ದಾರೆ. ಮನಸ್ಸಿನ ತುಡಿತ, ಸಂಸ್ಕಾರ, ಪೂರ್ವ ಚರಿತ್ರೆ, ಇಂದಿನ ಅವನತಿ, ಹಗಲುಗನಸು-ಕನಸು, ಹಾಸ್ಯ, ಪ್ರತಿಮಾಸೃಷ್ಟಿ ಎಂಬ ವಿಶೇಷ ಲಕ್ಷಣಗಳಿಂದ ಪಂಪಾಯಾತ್ರೆ 'ಪ್ರವಾಸ ಕಥನ'ವಾಗಿ ಕಾವ್ಯ ಖಂಡವಾಗಿ, ಅಂಚುಕಟ್ಟಿದ ಶಾಲಿನಂತೆ, ಶಿಲ್ಪದ ಸೊಗಸನ್ನು ಬಿಂಬಿಸಿ, ಓದುಗರ ಮನಸ್ಸು ಸಂಸ್ಕೃತಿಯ ಕಾಂತಿಯಿಂದ ದೀಪ್ತವಾಗುವಂತೆ ಚಿತ್ರಿಸಿರುವುದನ್ನು ಬಿತ್ತರಿಸಿದ್ದಾರೆ.

ಶ್ರೀ ಪ್ರಭುಪ್ರಸಾದರು 'ಧರ್ಮಶಾಸ್ತ್ರ, ಕಾನೂನು, ನ್ಯಾಯ'ಗಳ ಬಗ್ಗೆ ವಿ. ಸೀ. ಯವರ ವಿಚಾರಧಾರೆಯನ್ನೂ, ಶ್ರೀ ಕು. ಶಿ. ಹರಿದಾಸಭಟ್ಟರು, 'ಹಣ ಪ್ರಪಂಚ'ದ ವಿಚಾರ, ವೈಶಿಷ್ಟ್ಯ ಹಾಗೂ ಕೊರತೆಗಳನ್ನೂ ಸೂಕ್ತವಾಗಿ ನಿರೂಪಿಸಿದ್ದಾರೆ. ಈ ಎರಡು ಪ್ರಬಂಧಗಳಲ್ಲಿ ವಿ. ಸೀ. ಯವರ ಎದೆಗಾರಿಕೆ, ಪ್ರಾಜ್ಞತೆ, ಹಾಗೂ ಜಟಿಲಸಂಗತಿಗಳನ್ನು ವಿವರಿಸುವ ರೀತಿ, ನೋಟ, ಮನೋಭಾವ, ಶಾಸ್ತ್ರೀಯ ವಿಷಯಗಳನ್ನೂ ಮನದಟ್ಟಾಗಿಸುವ ಸರಳಶೈಲಿ ಮುಂತಾದ ವಿಶಿಷ್ಟ ಗುಣಗಳನ್ನು ಎತ್ತಿ ತೋರಿಸಿದ್ದಾರೆ.

'ವಿ. ಸೀ. ಯವರ ಪ್ರಬಂಧಗಳು ಮತ್ತು ವಿಮರ್ಶೆ'ಗಳೆಂಬ ವಿಮರ್ಶಾತ್ಮಕ ಲೇಖನವನ್ನು ಶ್ರೀ ದೇ. ಜವರೇಗೌಡರು ಬರೆದಿದ್ದಾರೆ. 'ಔಚಿತ್ಯ ಮತ್ತು ಸಂಯಮಗಳೇ ಪ್ರಬಂಧಕಲೆಯ ಹಿರಿಯ ರಹಸ್ಯ'ವೆಂಬ ನಿಷ್ಪತ್ತಿಗೆ ತಾರ್ಕಿಕವಾಗಿ ಬಂದು 'ಮೈಸೂರು ರುಮಾಲು', 'ಕಾಯಿಲೆಗಳು' ಮತ್ತು 'ಮಳೆ' ಎಂಬ ಪ್ರಬಂಧಗಳು ಹೇಗೆ 'ಉತ್ತಮ ಪ್ರಬಂಧಗಳಿಗೆ ಒಳ್ಳೆಯ ನಿದರ್ಶನ'ಗಳೆಂದು ತೋರಿಸಿದ್ದಾರೆ.

ಅನಂತರ, ಕರ್ನಾಟಕ ಕಾದಂಬರಿ, ಅಭಿಜ್ಞಾನ ಶಾಕುಂತಲ, ಮತ್ತು ಅಶ್ವತ್ಥಾಮನ್—ಈ ಮೂರನ್ನು ವಿಮರ್ಶಾಕೃತಿಗಳೆಂದು ಕರೆದು ಅವುಗಳ ಗುಣಾವಗುಣ, ಹಾಗೂ ಕನ್ನಡವಿಮರ್ಶೆಯ ಪ್ರಪಂಚದಲ್ಲಿ ಅವುಗಳ ಸ್ಥಾನವನ್ನು ನಿರ್ಧರಿಸಿದ್ದಾರೆ. ಆದರೆ, 'ಕರ್ನಾಟಕ ಕಾದಂಬರಿ' ಎಂಬ ಪ್ರಚಾರ ಪುಸ್ತಕಮಾಲೆಯ ಮರಿಹೊತ್ತಿಗೆಯನ್ನು ವಿಮರ್ಶಾಕೃತಿ ಎಂದು ಕರೆಯಬಹುದೆ? ವಿಮರ್ಶೆ ಎಂಬ ಉದ್ದೇಶದಿಂದ ಬರೆದುದಲ್ಲ ಆ ಕೃತಿ, ಅದರಲ್ಲಿ ವಿಮರ್ಶಾತ್ಮಕವಾದ ಮಾತುಗಳಿರಬಹುದು ಅಷ್ಟೆ. ಶಾಕುಂತಲ ನಾಟಕದ ವಿಮರ್ಶೆಯ ಬಗ್ಗೆ ಇನ್ನೂ ಸ್ವಲ್ಪ ವಿಮರ್ಶಿಸಬಹುದಿತ್ತು 'ಅಶ್ವತ್ಥಾಮನ್' ನಾಟಕದ ವಿಮರ್ಶೆಯ ವಿಮರ್ಶೆ ಚೆನ್ನಾಗಿದೆ, ಆದರೆ, ಅದು ವಿಭಾಗ, ವಿತರಣೆಗಳಿಲ್ಲದೆ, ಜಟಿಲವಾಗಿದೆ ಎಂಬುದನ್ನು ಸೂಚಿಸಬಹುದಿತ್ತು.

ಅಲ್ಲದೆ ವಿ. ಸೀ. ಯವರು ಆಂಗ್ಲ ಮತ್ತು ಕನ್ನಡ ಪತ್ರಿಕೆಗಳಲ್ಲಿ ಬರೆದ ವಿಮರ್ಶಾತ್ಮಕ ಲೇಖನಗಳನ್ನು ಸೂಚಿಸುವುದರಿಂದಲೇ ತೃಪ್ತರಾಗದೆ, ಸ್ವಲ್ಪ ವಿವೇಚಿಸ

ಬಹುದಿತ್ತು. ಅಲ್ಲದೆ, ವಿ. ಸೀ. ಯವರು ಬರೆದ ಮಾದರಿಯ ಪುಸ್ತಕವಿಮರ್ಶೆಗಳನ್ನೂ ವಿವೇಚಿಸಿದ್ದರೆ ಅನೌಚಿತ್ಯವಾಗುತ್ತಿರಲಿಲ್ಲ.

ಒಟ್ಟಿನಲ್ಲಿ, ಈ ಕೃತಿ ವಿ. ಸೀ. ಯವರ ಬಹುಮುಖಪ್ರತಿಭೆಯನ್ನು ಕನ್ನಡಿಸುತ್ತಿದೆ. ಇದರಲ್ಲಿ ಅವರ 'ಈಗಿನ ಕವಿಕಾವ್ಯದೃಷ್ಟಿ' ಎಂಬ ಭಾಷಣದಿಂದ ಕೆಲವು ಉತ್ಕೃಷ್ಟ ಮಾತುಗಳನ್ನು ಎತ್ತಿಕೊಡಬಹುದಾಗಿತ್ತು. ಅಲ್ಲದೆ, ಅವರ ಇಂಗ್ಲಿಷ್ ಲೇಖನಗಳ ಬಗ್ಗೆ ಒಂದು ಪ್ರಬಂಧ ಇದ್ದಿದ್ದರೆ, ಕೃತಿ ಪೂರ್ಣಾರ್ಥದಲ್ಲಿ ಪೂರ್ಣವಾಗುತ್ತಿತ್ತು. ಐ. ಶ್ರೀ ಪ್ರಸಾದರು ಬರೆದ ವಿ. ಸೀ. ರೇಖಾಚಿತ್ರ ಪರವಾಯಿಲ್ಲ. ಗೆಳೆಯರ ಬಳಗ, ಆಶಿಸಿರುವ ಕುವೆಂಪು ಅವರ ಬಗ್ಗೆ ಇಂಥ ಕೃತಿ ಬೇಗ ಬರಲೆಂದು ಹಾರೈಸಿ, ಪ್ರಸ್ತುತ ಗ್ರಂಥಪ್ರಕಾಶನಕ್ಕೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ವೃಷಭೇಂದ್ರಸ್ವಾಮಿ.

*
* *

ಪ್ರೇಮಾಶ್ರಮ—ಲೇಖಕರು : ಪ್ರೇಮಚಂದ; ಅನುವಾದಕರು : ಮೇವುಂಡಿ ಮಲ್ಲಾರಿ ; ಪ್ರಕಾಶಕರು : ಮಿಂಚಿನಬಳ್ಳಿ ಕಾರ್ಯಾಲಯ, ಧಾರವಾಡ ; ಪುಟಗಳು ೨೬೮ ; ಬೆಲೆ, ರೂ. ೧-೮-೦.

ಪ್ರೇಮಾಶ್ರಮ 'ಹಿಂದಿ ಕಾದಂಬರಿ ಸಾಮ್ರಾಟ'ರೆನಿಸಿಕೊಂಡ ಪ್ರೇಮಚಂದರ ಉತ್ತಮ ಕಾದಂಬರಿಗಳಲ್ಲೊಂದಾಗಿದೆ. ಹಿಂದಿ ತಿಳಿದ ಜನತೆಗೆ ಪ್ರೇಮಚಂದರ ಪರಿಚಯ ಹೊಸದಲ್ಲ. ಕಥೆಗಾರರಾಗಿ ಕಾದಂಬರಿಕಾರರಾಗಿ ಹಿಂದಿ ತಿಳಿದ ಜನತೆಯ ಹೃದಯಮಂದಿರದಲ್ಲಿ ಸ್ಥಿರವಾಗಿ ನೆಲಸಿದ್ದಾರೆ. ಪ್ರೇಮಚಂದರು ಶ್ರೇಷ್ಠ ಕಥೆಗಾರರೇ ಅಲ್ಲದೆ ಶ್ರೇಷ್ಠ ಕಾದಂಬರಿಕಾರರೂ ಕೂಡ ಎಂಬುದಕ್ಕೆ ನಿದರ್ಶನಗಳಾಗಿ ಅವರ ಸೇವಾಸದನ, ರಂಗಭೂಮಿ, ಪ್ರೇಮಾಶ್ರಮ, ಗಬನ್ ಮತ್ತು ಗೋಧಾನ್ ಕಾದಂಬರಿಗಳು ಇಂದಿಗೂ ಓದುಗರ ಪ್ರೀತಿಯ ಕೃತಿಗಳಾಗಿವೆ. ಅವರ 'ಗೋದಾನ್' ಕಾದಂಬರಿಯು ಪ್ರೇಮಚಂದರನ್ನು ಮಹಾ ಕಾದಂಬರಿಕಾರರ ಪಟ್ಟಕ್ಕೇರಿಸಿದೆ.

ಪ್ರೇಮಚಂದರು ಆದರ್ಶೋನ್ಮುಖ ಯಥಾರ್ಥವಾದಿಗಳು. ಅವರು ಶುಷ್ಕ ಯಥಾರ್ಥವಾದಿಗಳೇ ಅಲ್ಲ ; ಯಥಾರ್ಥದ ಭಕ್ತಿಯ ಮೇಲೆ ಆದರ್ಶದ ಮಹಲನ್ನು ಕಟ್ಟುವ ಮಹಾಶಿಲ್ಪಿ. ಪ್ರೇಮಾಶ್ರಮದಲ್ಲಿ ಇದರ ವಿರಾಟ್‌ಸ್ವರೂಪ ನಮಗೆ ಗೋಚರವಾಗುತ್ತದೆ. ಪ್ರೇಮಚಂದರು ರೈತರ ಪ್ರತಿನಿಧಿ. ದೇಶದ ಬೆನ್ನೆಲುಬೆನಿಸಿಕೊಂಡ ಹಳ್ಳಿಗಳೇ ಅವರ ಕಾರ್ಯರಂಗ. ಅವರ ಕಾದಂಬರಿ ಮತ್ತು ಕಥೆಗಳಲ್ಲಿ ವಿಶೇಷವಾಗಿ ಹಳ್ಳಿಯ ಜೀವನ, ಹಳ್ಳಿಗರ ಜೀವನ ಸಮಸ್ಯೆ, ಜಮೀನುದಾರಿಯ ಸಮಸ್ಯೆಗಳೇ ಹೆಚ್ಚು ಗೋಚರವಾಗುತ್ತವೆ. ಪ್ರಸ್ತುತ ಕಾದಂಬರಿಯಲ್ಲೂ ಇದೇ ಜಮೀನುದಾರಿಯ

ಸಮಸ್ಯೆ. ಈ ಜಮೀನುದಾರಿಯ ಕರಾಳಪಾಶದಿಂದ ರೈತರ ಮುಕ್ತಿಯ ಮಾರ್ಗದ ದಿಗ್ದರ್ಶನ ಮಾಡಿದ್ದಾರೆ. ಖಿಲವಾಗುತ್ತಿದ್ದ ಮರಣಾಸನ್ನ ಜಮೀನುದಾರಿಯ ಕಠೋರ ವ್ಯವಹಾರವನ್ನು ತಮ್ಮ ನಿಪುಣಲೇಖಣಿಯಿಂದ ಸುಂದರವಾಗಿ ಚಿತ್ರಿಸಿದ್ದಾರೆ.

ಕಥೆ ಲಖನಪುರದ ಜಮೀನ್ದಾರರದು. ಮನೆತನದ ಪ್ರತಿಷ್ಠೆಯನ್ನುಳಿಸಿಕೊಳ್ಳಲು 'ಆಡಂಬರ ಸಡಗರಗಳಿಗೆ' ಮಿತಿಮೀರಿ ವೆಚ್ಚಮಾಡಿ ದುರ್ದಶೆಗೀಡಾಗುತ್ತಿರುವ ಜಮೀನ್ದಾರಿ. ಇದೇ ದಾರಿಯಲ್ಲಿ ನಡೆದಿರುವ ಲಾಲಾ ಪ್ರಭಾಶಂಕರರು ಮನೆತನದ ಪ್ರತಿಷ್ಠೆಗೌರವಗಳನ್ನುಳಿಸಿಕೊಳ್ಳಲು ಹೆಣಗುತ್ತಿರುವ ಪ್ರಾಣಿ. ಜ್ಞಾನಶಂಕರ ಪ್ರೇಮಶಂಕರ ಅವರ ಅಣ್ಣನ ಮಕ್ಕಳು. ಪ್ರೇಮಚಂದರ ಆದರ್ಶವ್ಯಕ್ತಿ ಪ್ರೇಮಶಂಕರ ಅಮೆರಿಕೆಯಿಂದ ಕೃಷಿ ವಿಷಯದ ವಿಶೇಷ ಅಧ್ಯಯನಮಾಡಿ ಬಂದು ಗಾಂಧೀಜಿಯವರ ಆದರ್ಶವನ್ನನುಸರಿಸಿ 'ಪ್ರೇಮಾಶ್ರಮ'ವನ್ನು ಸ್ಥಾಪಿಸಿ ರೈತರ ಉದ್ಧಾರಕಾರ್ಯ ಕೈಗೊಳ್ಳುತ್ತಾನೆ. ಅದೇ ಜ್ಞಾನಶಂಕರ, 'ಕಾಕ'ನ ಆಡಳಿತದಲ್ಲಿ ವಿಶ್ವಾಸವಿಲ್ಲದೆ ಪ್ರಭಾಶಂಕರರಿಂದ ದೂರವಾಗುತ್ತಾನೆ. ಕ್ರೂರ ಜಮೀನುದಾರಿಯ ಪ್ರತಿಮೂರ್ತಿಯಾಗಿ, ಸ್ವಾರ್ಥಭೂತವನ್ನೇರಿ ಲಖನಪುರದ ರೈತರ ಮೇಲೆ ಅತ್ಯಾಚಾರಮಾಡಿಸುತ್ತಾನೆ. ಹೆಣ್ಣುಕೊಟ್ಟ ಮಾವ 'ಕಮಲಾನಂದನಿಗೆ' ವಿಷಕೊಡುತ್ತಾನೆ. ವಿಧವೆ ಅತ್ತಿಗೆ (ಹೆಂಡತಿಯ ಅಕ್ಕ) 'ಗಾಯತ್ರಿ'ಯ ಮೇಲೆ ಮಾಯಾಜಾಲವನ್ನೆಸೆದು ಭಯಂಕರ ಧೂರ್ತನಾಗುತ್ತಾನೆ. ಆದರೆ ಅವನ ಸ್ವಾರ್ಥಕ್ಕೆ ಅವನ ಧೂರ್ತತನಕ್ಕೆ ಸಿಕ್ಕಿದ ಲಾಭವೇನು? ಮಾವನ ತಿರಸ್ಕಾರ, ಗಾಯತ್ರಿಯ ತಿರಸ್ಕಾರ, ಹೆಂಡತಿಯ ಸಾವು, ರೈತರ ಶಾಪ. ಕೊನೆಗೆ ಮೂರು ಜಮೀನುದಾರಿಗೆ ಒಡೆಯನಾದ ಮಗ ಮಾಯಿಶಂಕರ ಜಮೀನುದಾರಿಯನ್ನು ಬಿಟ್ಟುಕೊಟ್ಟು ರೈತರಿಗೆ ಸ್ವಾತಂತ್ರ್ಯವನ್ನು ಕೊಟ್ಟಾಗ ಜ್ಞಾನಶಂಕರನ ನಿರಾಶೆ ತುಂಬಿ ತುಳುಕಿ ಸ್ವಾರ್ಥಪಿಶಾಚಿಯನ್ನು ಕೊಚ್ಚಿಕೊಂಡು ಹೋಯಿತು. ಪ್ರೇಮಶಂಕರನ ಸೇವೆ, ಮಾಯಾಶಂಕರನ ಔದಾರ್ಯದಿಂದ ಶತಮಾನಗಳ ಕಠೋರ ಜಮೀನ್ದಾರಿಯ ಕ್ರೂರಹಿಡಿತದಿಂದ ರೈತರಿಗೆ ಮುಕ್ತಿ ದೊರಕಿತು.

ಪ್ರಸ್ತುತ ಕೃತಿ ಪ್ರೇಮಚಂದರ ಮೂಲಕೃತಿಯ ಅನುವಾದವಲ್ಲ. ಮೂಲ ಕೃತಿ ಇದರ ಎರಡರಷ್ಟು ದೊಡ್ಡದು. ಇದು 'ಸಂಕ್ಷಿಪ್ತ ಪ್ರೇಮಾಶ್ರಮ'ದ ಅನುವಾದ. ಪ್ರೇಮಚಂದರ ಕೃತಿಯ ವಿಷಯ ಏನೂ ಹೇಳಬೇಕಾಗಿಲ್ಲ. ಅನುವಾದದ ವಿಷಯ ಒಂದೆರಡು ಮಾತು ಹೇಳಬೇಕಾಗಿದೆ. ಪ್ರೇಮಚಂದರ ಭಾಷಾಮಾಧುರ್ಯ, ವರ್ಣನಾಸೌಂದರ್ಯ ಅನುವಾದದಲ್ಲಿ ಬಹುಮಟ್ಟಿಗೆ ಬಾರದಿರುವುದು ದೊಡ್ಡ ಕೊರತೆ. ಅನುವಾದಿತಭಾಷೆ ಹೆಚ್ಚು ಅಪಕ್ವವಾಗಿ ಕಾಣುತ್ತದೆ. 'ಖಬರ್‌ಲೇನಾ'

ಎಂಬಾ ಹಿಡುನುಡಿಯ ಪ್ರಯೋಗದ ಅನುವಾದ ' ವಿಚಾರಿಸಿಕೊಳ್ಳಬೇಕು ' ಎಂದಾಗುತ್ತದೆ, ಆದರೆ ' ಸಮಾಚಾರ ತಕ್ಕೊಳ್ಳುವುದು ' ಅಷ್ಟು ಉತ್ತಮ ಪ್ರಯೋಗದಂತೆ ಕಾಣುವುದಿಲ್ಲ. ಮತ್ತೆ ಹೆಸರುಗಳ ಅನುವಾದದಲ್ಲೂ ಹಾಗೆಯೇ. 'ಬಿಸೇಸರ'ವೆಂಬುವುದು ' ವಿಶ್ವೇಶ್ವರ 'ದ ತದ್ಭವರೂಪ. ಇದರ ಅನುವಾದ ' ವಿಶೇಸರ ' ಎಂದಿದ್ದರೆ ಹೆಚ್ಚು ಚೆನ್ನಾಗುತ್ತಿತ್ತು. ಹಾಗೆಯೇ ಭಾಷಾದೋಷಗಳು ಅಲ್ಲಲ್ಲಿ ಕಂಡುಬರುತ್ತವೆ.

ಆದರೂ ಮಿಂಚಿನಬಳ್ಳಿಯವರ, ಹಿಂದಿಯ ಒಳ್ಳೆಯ ಕೃತಿಗಳನ್ನು ಕನ್ನಡದ ಓದುಗರಿಗೆ ಒದಗಿಸಿಕೊಡುತ್ತಿರುವ ಕಾರ್ಯ ಸ್ತುತ್ಯಾರ್ಹವಾದುದೆ. ಇಂತಹ ಉತ್ತಮ ಕೃತಿಗಳ ಉತ್ತಮ ಅನುವಾದಗಳು ಬಂದರೆ ಕನ್ನಡಸಾಹಿತ್ಯಕ್ಕೆ ಮತ್ತೂ ಹೆಚ್ಚು ಲಾಭವಾಗುವುದು.

ಯ. ಹನುಮಯ್ಯ.

* * *

ಮೃಣಾಳಿನಿ—ಮೂಲಲೇಖಕರು : ಬಂಕಿಮಚಂದ್ರ ಚಟರ್ಜಿ ; ಅನುವಾದಕರು : ಬಿ. ಪುಟ್ಟಸ್ವಾಮಯ್ಯ ; ಪ್ರತಿಭಾ ಪ್ರಕಾಶನ, ಕಾಟನ್‌ಪೇಟೆ, ಬೆಂಗಳೂರು ೨ ; ಬೆಲೆ, ರೂ. ೦-೧೫-೦.

ಬಂಕಿಮರು ಆನಂದಮಠ, ದೇವಿಚೌಧರಾಣಿ, ದುರ್ಗೇಶನಂದಿನಿ ಮುಂತಾದ ಕಾದಂಬರಿಗಳ ಮೂಲಕ ಕನ್ನಡ ಓದುಗರಿಗೆ ಪರಿಚಿತರಾಗಿದ್ದಾರೆ. ಅವರ ಕಾದಂಬರಿಗಳನ್ನೋದಿ ಆನಂದಿಸಿದ ಜನ ' ಮೃಣಾಳಿನಿ 'ಯನ್ನು ಅಷ್ಟಾಗಿ ಮೆಚ್ಚಲಾರರು. ಇದು ಕಾದಂಬರಿಕಾರರ ಅಪಕ್ವಲೇಖಣಿಯ ಕೃತಿ ಎಂದು ತೋರುತ್ತದೆ. ಇದು ಯಾವಾಗ ಬರೆದುದೆಂದು ಅನುವಾದಕರು ಹೇಳಿಲ್ಲ. ಆದರೂ ಓದಿದರೆ ಅಪಕ್ವತೆಯ ಅರಿವುಂಟಾಗದೆ ಇರದು.

ಈ ಕೃತಿಯನ್ನು ಅನುವಾದಕರು ' ರೂಪಾಂತರ'ವೆಂದು ಕರೆದಿದ್ದಾರೆ. ಅವರೇ ಹೇಳುವಂತೆ ಕೆಲವು ಬದಲಾವಣೆಗಳನ್ನು ಮಾಡಿಕೊಂಡಿದ್ದಾರೆ. ಕಥಾವಸ್ತು ಮತ್ತು ಸಂಭಾಷಣೆ ಸಾಕಷ್ಟು ಚೆನ್ನಾಗಿದೆ. ಆದರೆ ಪಾತ್ರನಿರೂಪಣೆ ಅಷ್ಟು ಚೆನ್ನಾಗಿ ಬಂದಿಲ್ಲ. ಕಥೆಯ ನಾಯಕ ' ಹೇಮಚಂದ್ರ ', ನಾಯಿಕೆ ' ಮೃಣಾಳಿನಿ ' ಇವರ ಪಾತ್ರ ಸಪ್ಪೆಯಾಗಿದೆ. ಸಂಘರ್ಷಮಯಜೀವನದಲ್ಲಿ ಇವರ ಪಾತ್ರಗಳು ಉಜ್ವಲವಾಗಿ ಚಿತ್ರಿತವಾಗಬೇಕಾಗಿತ್ತು. ಗಿರಿಜೆಯ ಪಾತ್ರ ಮಾತ್ರ ಚೆನ್ನಾಗಿ ಬಂದಿದೆ. ಉಳಿದೆಲ್ಲ ಪಾತ್ರಗಳೂ ಸಪ್ಪೆ. ಅನುವಾದಿತ ಭಾಷೆ ಯಾಕೊ ಅಷ್ಟು ಪರಿಷ್ಕೃತವಾಗಿಲ್ಲ. " ಈಗ ನಾವು ವಾಚಕರನ್ನು ಆ ಮನೆಯ ಅಂತಃಪುರದಲ್ಲಿ . . . ಕರೆದುಕೊಂಡು ಹೋಗಿ ನಿಲ್ಲಿಸುತ್ತೇವೆ " ಈ ತೆರನ ಶೈಲಿ ಪತ್ತೇದಾರಿ ಕಾದಂಬರಿಗಳ ಶೈಲಿಯಾಯಿತು. ಈ ತೆರನಾಗಿ ಭಾಷಾ ಶೈಲಿಯ ದೋಷ ಅಲ್ಲಲ್ಲಿ ಕಂಡುಬರುತ್ತದೆ.

ಸುಲಭ ಬೆಲೆಗೆ ಸಾಹಿತ್ಯವನ್ನೊದಗಿಸಬೇಕೆಂದು ಹೊರಟಿರುವ ಉದಾರ ಉದ್ಯಮಿಗಳು 'ಅಗ್ಗದ ಬೆಲೆಗೆ ಮುಗ್ಗಿದ ಹುರುಳಿ'ಯ ವ್ಯಾಪಾರ ಮಾಡದೆ ಉತ್ತಮ ಭಾಷೆಯ ಉತ್ತಮ ಕೃತಿಗಳನ್ನೊದಗಿಸಿದರೆ, ಭಾಷಾಭಿವೃದ್ಧಿ ಮತ್ತು ಸಾಹಿತ್ಯಾಭಿವೃದ್ಧಿ ಎಲ್ಲಾ ಆಗುತ್ತದೆ.

ಯ. ಹನುಮಯ್ಯ

*
* *

ಊರ್ವಶಿ (ಒಂದು ಸಾಮಾಜಿಕ ಘಟನೆ)—ಲೇಖಕರು: ಗೊರೂರು ರಾಮಸ್ವಾಮಯ್ಯಂಗಾರ್; ಪುಟಗಳು ೩೫೮; ಬೆಲೆ, ಮೂರು ರೂಪಾಯಿ.

ಮನುಷ್ಯನಿಗೆ ಹುಟ್ಟು, ಕಲಿಕೆ, ಪ್ರತಿಷ್ಠೆ ಮೊದಲಾದವುಗಳಿಗಿಂತ ಅವನ ಶೀಲವೇ ಮುಖ್ಯ. ಅದೇ ಅವನ ಯೋಗ್ಯತೆಯನ್ನು ನಿರ್ಧರಿಸುವ ಒರೆಗಲ್ಲು. ಚರಿತ್ರಹೀನ ಮೃಗಸಮಾನ. ಅದರಲ್ಲಿಯೂ ಹೆಣ್ಣು ಶೀಲಭ್ರಷ್ಟಳಾದರೆ ಇಹದ ನಿಷ್ಠುರ ಸಮಾಜದಲ್ಲಿ ಉಳಿಗಾಲವಿಲ್ಲ, ಪರಕ್ಕೆ ರಹದಾರಿಯಿಲ್ಲ. ಅವಳ ಉನ್ನತಿ ಅವನತಿ ಮತ್ತು ಸುಖದುಃಖಗಳಿಗೆ ಆಕೆಯ ಶೀಲವೇ ಕಾರಣ. ಒಮ್ಮೆ ಕಾಲು ಜಾರಿದರೂ ಸಾಕು ಆಕೆ ಮೇಲೇಳುವಂತಿಲ್ಲ, ತನ್ನ ದುರ್ನಡತೆಗೆ ಪಶ್ಚಾತ್ತಾಪಪಟ್ಟು ತಿದ್ದಿಕೊಳ್ಳುವಂತಿಲ್ಲ, ಹೊರಗೆಲ್ಲೂ ತಿರುಗಾಡುವಂತಿಲ್ಲ ಮತ್ತು ಯಾವ ಶುಭಕಾರ್ಯಗಳಲ್ಲೂ ಭಾಗಿಯಾಗುವಂತಿಲ್ಲ. ಅವಳು ಕಾಣಿಸಿಕೊಂಡೆಡೆಯಲ್ಲಿ ಅಶುಭ ತಾಂಡವವಾಡುತ್ತದೆ. ಅವಳ ಅಮಂಗಳ ಮುಖವನ್ನು ನೋಡಿದರೆ ಸಾಕು ಯಾವ ಕೆಲಸವೂ ಆಗುವುದಿಲ್ಲ, ಏನೂ ಹುಟ್ಟುವುದಿಲ್ಲ, ಇರುವುದೂ ಇಲ್ಲವಾಗುತ್ತದೆ. ಕಣ್ಣೀರಿನಿಂದ ಕೈತೊಳೆಯುತ್ತ ಅಜ್ಞಾತದಲ್ಲಿ ನವೆಯಬೇಕಾಗುತ್ತದೆ ಆಕೆ. ಮುದುಕರನ್ನು ಊರು ಬೇಡವೆನ್ನುತ್ತದೆ ಕಾಡು ಕರೆಯುತ್ತದೆಯಂತೆ. ಆದರೆ ನೀತಿಗೆಟ್ಟವಳನ್ನು ಊರು ತಳ್ಳಿದರೂ ಕಾಡು ಕರೆಯುವುದಿಲ್ಲ. ಮುಂದಿನ ಆಗುಹೋಗುಗಳ ಅರಿವಿಲ್ಲದೆ ಅಜಾಗರೂಕತೆಯಿಂದ ಒಂದೇ ಒಂದು ಸಾರಿ ನಡತೆಗೆಟ್ಟು ಶೀಲಹರಣ ಮಾಡಿದವನಿಂದ ತಿರಸ್ಕೃತಳಾಗಿ ಸಮಾಜ ಹೇರಿದ ನಿಂದೆ ನಿಷ್ಠುರಗಳನ್ನು ತಲೆಯಲ್ಲಿ ಹೊತ್ತು ಕೈಹಿಡಿದವನು ಬಿಟ್ಟ ಹೆಣ್ಣಾಗಿ ತೌರಿಗೆ ಅಂಟಿಕೊಂಡು ಕೂತು ಪಶ್ಚಾತ್ತಾಪದಗ್ಧಳಾಗಿ ಪುನರ್ಜನ್ಮ ಪಡೆದು ಆಜೀವಪರ್ಯಂತ ತನಗೆ ಗಂಟುಬಿದ್ದ ಕಳಂಕವನ್ನು ಹೋಗಲಾಡಿಸಲು ಪ್ರಯತ್ನಿಸಿದ ಸುಂದರಿಯೂ ಯುವತಿಯೂ ಮತ್ತು ಶೀಲವತಿಯೂ ಆದ ಹೆಣ್ಣೊರ್ವಳ ಶೋಕಪೂರ್ಣವಾದ ಮತ್ತು ಹೃದಯಹಾರಿಯಾದ ಜೀವನಕಥೆ 'ಊರ್ವಶಿ'ಯಲ್ಲಿ ಚಿತ್ರಿತವಾಗಿದೆ ಮನಮುಟ್ಟುವಂತೆ.

ಮಲ್ಲಿಗೆ ಹಳ್ಳಿಯ ಶ್ಯಾನುಭೋಗ ರಾಮಣ್ಣನವರ ಕಿರಿಯ ಮಗಳು ಸೀತಾಲಕ್ಷ್ಮಿಯ ಮದುವೆ ರಂಭಾಪುರಿಯ ಗುಂಡಣ್ಣನವರ ಮಗ ಸುಂದರರಾಜನೊಡನೆ

ಆಯಿತು. ಮದುವೆಯಾದ ಮೇಲೆ ಸೀತಾಲಕ್ಷ್ಮಿ ಅಕ್ಕ ಜಲಜಾಕ್ಷಿಯು ಹೆರಿಗೆಗೆ ಅವಳ ಊರಿಗೆ ಹೋಗಿ ಕೆಲವು ದಿನ ಅಲ್ಲಿದ್ದಳು. ಸೀತಾಲಕ್ಷ್ಮಿ ಒಮ್ಮೆ ತೋಟದಲ್ಲಿ ಭಾವ ನರಸಿಂಹನ ಭೋಗವಸ್ತುವಾದಳು. ಇದರಿಂದ ಗರ್ಭಿಣಿಯಾದ ಆಕೆ ಆಸ್ಪತ್ರೆಯಲ್ಲಿ ಸತ್ತ ಮಗುವನ್ನು ಹಡೆದು ಅನಂತರ ಅಣ್ಣ ಶ್ರೀನಿವಾಸನೊಡನೆ ತೌರುಸೇರಿದಳು. ಭಗ್ನಪ್ರೇಮಿಯಾದ ಸುಂದರರಾಜ ಕೈತುಂಬ ಸಾಲಮಾಡಿ ಮತಿವಿಕಳನಾಗಿ ಅಲೆಯ ತೊಡಗಿದ. ಗಂಡನ ಮನೆ ಸೇರಿದ ಸೀತಾಲಕ್ಷ್ಮಿ ಭಾವನಾದ ಕೃಷ್ಣನ ಕಾಮುಕತನಕ್ಕೆ ದಕ್ಕದೆ ಆತನ ಕೋಪಕ್ಕೆ ಗುರಿಯಾಗಿ ಮತ್ತೆ ತೌರು ಸೇರಬೇಕಾಯಿತು. ನಿಲ್ಲಿಸಿದ್ದ ಪಿಟೀಲ್‌ವಾದನವನ್ನು ಶಾಲೆಯ ಮುಖ್ಯೋಪಾಧ್ಯಾಯಿನಿ ಕಮಲಮ್ಮನವರಲ್ಲಿ ಮುಂದು ವರಿಸಿ ಪ್ರವೀಣೆಯಾದಳು. ಪ್ರಾಣಾಚಾರ್ಯರೊಡನೆ ಬೆಂಗಳೂರಿಗೆ ಹೋಗಿ ತನ್ನ ಸಂಗೀತ ಪ್ರೌಢಿಮೆಯನ್ನು ಮೆರೆದು ವೈದ್ಯಕಲಿತು ಊರಿಗೆ ಬಂದು ದೀನದಲಿತರ ಸೇವೆಗೆ ನಿಂತಳು. ಮತ್ತೆ ರಂಭಾಪುರಿಗೆ ಹೋಗಿ ರೋಗಗ್ರಸ್ತನಾದ ಪತಿಯ ಶುಶ್ರೂಷೆಮಾಡಿ ಅವನು ಆರೋಗ್ಯವಂತನಾದ ಮೇಲೆ ದಂಪತಿಗಳು ಯಾತ್ರೆ ಹೋದರು. ಮಾಯಾ ವರಂನಲ್ಲಿ ವಿಧಿಪೂರ್ವಕವಾಗಿ ಇಬ್ಬರೂ ಸ್ನಾನಕ್ಕಿಳಿದಾಗ ಸುಂದರರಾಜ ನೀರಿನಲ್ಲಿ ಮುಳುಗಿದ. ಅವನನ್ನು ಎಳೆದುಕೊಳ್ಳಲು ಕೈನೀಡಿದ ಆಕೆಯೂ ಮುಳುಗಿ ಇಬ್ಬರೂ ಕಾವೇರಿ ನದಿಯಲ್ಲಿ ಕೊಚ್ಚಿಹೋದರು. ಜೊತೆಯಲ್ಲಿ ಹೋಗಿದ್ದ ಕಮಲಮ್ಮ ಮತ್ತು ಗುಂಡಣ್ಣನವರು ಅವರ ಶವಗಳನ್ನು ತೆಗೆಸಿ ಸಂಸ್ಕಾರಮಾಡಿ ಊರಿಗೆ ಮರಳಿದರು.

ಸೀತಾಲಕ್ಷ್ಮಿ ನಿರಾಭರಣ ಸುಂದರಿ. "ಚಿನ್ನದಲ್ಲಿ ಕಡೆದು ಮಾಡಿದ ಒಳ್ಳೆಯ ಮಾಟದ ಗೊಂಬೆಯಂತಿದ್ದಳು." ಮಲ್ಲಿಗೆ ಹಳ್ಳಿಗೆ ಆಕೆ ಊರ್ವಶಿ, ಕಾದಂಬರಿಗೆ ನಾಯಿಕೆ. ರತಿದೇವಿ ಮತ್ತು ಕಲಾದೇವಿಯರು ಆಕೆಗೆ ಒಲಿದಿದ್ದರು. ಪಿಟೀಲು ವಾದನದಲ್ಲಿ ಅದ್ಭುತ ಕೌಶಲ ಪಡೆದಿದ್ದಳು. ಮನಸಾರೆ ಮೆಚ್ಚಿ ಕೈಹಿಡಿದ ಸುಂದರರಾಜನನ್ನು ಮನಸಾರೆ ಪ್ರೀತಿಸುತ್ತಿದ್ದಳು. ಪ್ರತಿಯೊಂದು ಕೆಲಸದಲ್ಲೂ ಅಚ್ಚುಕಟ್ಟು. ಕಾರ್ಯದಲ್ಲಿ ಪಾದರಸದಂತಿದ್ದಳು. ನರಸಿಂಹನ ಮನೆಗೆ ಆಕೆ ಬಂದ ಕೂಡಲೇ ಆ ಮನೆಯ ಸ್ಥಿತಿ ಬದಲಾಯಿಸಿತು. ತಿಪ್ಪೆಗುಂಡಿಯಂತಿದ್ದ ಅದು ವಾಸ ಯೋಗ್ಯವಾಯಿತು. ಆಕೆಯ ಪ್ರಭಾವದಿಂದ ಹುಟ್ಟು ಕೊಳಕನಾದ ನರಸಿಂಹನೂ ಬದಲಾಯಿಸಿದ. ಆದರೆ ಆಕೆ ಉಪಕಾರಮಾಡಲು ಅಕ್ಕನ ಮನೆಗೆ ಬಂದುದು ಆಕೆಯ ಬಾಳಿಗೆ ಮುಳುವಾಯಿತು. ಆಕೆಯ ಕೈಯಿನ ಶುಚಿರುಚಿಯಾದ ಊಟ ಉಂಡ ನರಸಿಂಹ ಮದಿಸಿ ಕೃತಘ್ನನಾಗಿ ಆಕೆಯ ಮೇಲೆ ಕೈಮಾಡಿದ. ಹಾಲೆರದ ಕೈಯನ್ನೆ ಹಾವು ಅಗಿಯಿತು. ಆತ ಆ ಅನಾಘ್ರಾತ ನವಕುಸುಮವನ್ನು ಆಘ್ರಾಣಿಸಿ ಬಿಸಾಡಿದ್ದ. ಕಾಮ ಗುರಿಗಂಡಿದ್ದ. ಅನಂತರ ಗರಬಡಿದವಳಂತೆ ಮನೆಗೆ ಬಂದು

ಮಲಗಿದಳು. ಜ್ವರ ಬಂದು ಸನ್ನಿಗೆ ತಿರುಗಿತು. ಕೆಲವು ದಿನಗಳಾದ ಮೇಲೆ ಚೇತರಿಸಿಕೊಂಡರೂ ಮೊದಲಿನ ಸೀತಾಲಕ್ಷ್ಮಿಯಾಗಿರಲಿಲ್ಲ. ಮುಖದ ಕಳೆ ಮೈಯ ಯೌವನ ಮಸುಳಿತು. ಆಕೆ ಮುಂದೇನಾಗುವುದೆಂದು ನಿರೀಕ್ಷಿಸಿ ಭಯಪಟ್ಟಂತೆಯೆ ನಡೆದು ಬಿಟ್ಟಿತು. "ಗಂಡನಿಂದ ಪ್ರಥಮಾಲಿಂಗನ ಚುಂಬನವನ್ನೂ ಸಹ ಅನುಭವಿಸದಿದ್ದ ಆಕೆ ಗರ್ಭವತಿಯಾಗಿದ್ದಳು." ಇದಕ್ಕೆ ಕಾರಣನಾದವನು ಮೂಕನಂತೆ ಸುಮ್ಮನಿದ್ದ. ಅಕ್ಕನ ಕಟಕಿ ಎದೆಯಿರಿಯುವಂತಾಯಿತು. ಲಜ್ಜೆಯಿಂದ ಮತ್ತು ಪಶ್ಚಾತ್ತಾಪದಿಂದ ಜರ್ಜರಿತಳಾದ ಸೀತಾಲಕ್ಷ್ಮಿ ಸಾಯದೆ ಎಲ್ಲವನ್ನೂ ಸಹಿಸಿಕೊಂಡಳು. ಆಸ್ಪತ್ರೆಯಲ್ಲಿ ಸತ್ತಮಗುವನ್ನು ಹಡೆದು ಪುನರ್ಜನ್ಮ ಪಡೆದಂತಾದಳು.

ನಿರುಪಾಯಳಾಗಿ ತೌರನ್ನು ಆಶ್ರಯಿಸಿದ ಸೀತಾಲಕ್ಷ್ಮಿಯ ಬಗ್ಗೆ ಸಮಾಜ ಕ್ರೌರ್ಯತಾಳಿತು. ಸಮಾಜಕ್ಕೆ ಹೆದರಿದ ಅಣ್ಣ ಅತ್ತಿಗೆಯರ ಕಿರುಕುಳ ಅಸಹನೀಯವಾದರೂ ಸಹಿಸಿಕೊಂಡಳು. ಅಣ್ಣಂದಿರು ಪಾಲಾದಾಗ ಶ್ರೀನಿವಾಸನ ಮನೆಯಲ್ಲಿ ಸೇರಿಕೊಂಡಳು. ಗಂಡನ ಮನೆಗೆ ಹೋಗಿ ಓರಗಿತ್ತಿಯರ ಮತ್ತು ಭಾವಂದಿರ ಆಗ್ರಹಕ್ಕೆ ಬಲಿಯಾಗಿ ನಿರಪರಾಧಿಯಾದರೂ ಕಳ್ಳತನದ ಆಪಾದನೆಯನ್ನು ಹೊತ್ತು ಹೋದ ಹದಿನೈದು ದಿನಗಳಲ್ಲೆ ತೌರಿಗೆ ಬಂದಳು. "ಅತ್ತದರಿ ಇತ್ತ ಪುಲಿ" ಎಂಬಂತೆ ಆಕೆಯ ಸ್ಥಿತಿ ಶೋಚನೀಯವಾಯಿತು. ಮನೆಯಲ್ಲಿ ಮನೆಯವರೆಲ್ಲರ ಬೈಗುಳ ಕೇಳಬೇಕು. ಹೊರಗೆ ಹೋದರೆ ಅವಳ ದರ್ಶನಕ್ಕೆ ಅಂಡಲೆವ ತರುಣ ಸಮೂಹ. ಆಕೆ ಒಂದು ನಗೆನೋಟ ಎಸೆದಿದ್ದರೂ ದಾಸಾನುದಾಸರಾಗುತ್ತಿದ್ದ ಅವರು ಒಡೆಯನನ್ನು ಅನುಸರಿಸುವ ಶುನಕನಂತೆ ಹಿಂಬಾಲಿಸುತ್ತಿದ್ದರು. ತಾನು ಇನ್ನಿರಬಾರದೆಂದು ಒಮ್ಮೆ ಮಡುವಿನಲ್ಲಿ ಮುಳುಗಿದಾಗ ಶ್ರೀನಿವಾಸ ಉಳಿಸಿದ. ಅಂದಿನಿಂದ ತನ್ನ ದುಗುಡವನ್ನೆಲ್ಲ ಪಿಟೀಲ ವಾದನದಲ್ಲಿ ಪತಿಯ ಧ್ಯಾನದಲ್ಲಿ ಕಳೆಯುತ್ತಿದ್ದಳು. ಸಮಾಜದ ದೃಷ್ಟಿಯಿಂದ ಪತಿ ಆಕೆಯ ಪಾಲಿಗೆ ಇಲ್ಲವಾದರೂ ಆತನನ್ನೆ ನಂಬಿ ಅನನ್ಯಭಕ್ತಿ ಮತ್ತು ಪ್ರೇಮದಿಂದ ಇದ್ದಳು. ಪತಿ ಧ್ಯಾನ ಮತ್ತು ಪತಿಕಲ್ಯಾಣವೆ ಆಕೆಯ ಜೀವದುಸಿರು. ಸುಂದರರಾಜ ಸಾಲಕ್ಕಾಗಿ ಜೈಲು ಸೇರಬೇಕಾದಾಗ ತನ್ನ ಆಪದ್ಧನದಂತಿದ್ದ ಡಾಬನ್ನು ಕೊಟ್ಟು ಅವನನ್ನು ಬಿಡಿಸಿ ಅಣ್ಣನ ಆಗ್ರಹಕ್ಕೆ ಗುರಿಯಾದಳು. ಬೆಂಗಳೂರಿಂದ ವೈದ್ಯಳಾಗಿ ಬಂದಮೇಲೆ ಪ್ರತಿಫಲಾಪೇಕ್ಷೆಯಿಲ್ಲದೆ ಜನರಿಗೆ ಸೇವೆ ಸಲ್ಲಿಸುತ್ತಿದ್ದಳು. ಸುಂದರರಾಜ ರೋಗಗ್ರಸ್ತನಾಗಿ ಊರಿಗೆ ಬಂದಮೇಲೆ ರಂಭಾಪುರಿಗೆ ಹೋಗಿ ಶುಶ್ರೂಷೆಮಾಡಿ ಮಾರ್ಫಿಯಾ ಇಲ್ಲದಿದ್ದರೆ ಕಣ್ಣುಮುಚ್ಚದಿದ್ದ ಅವನನ್ನು ತನ್ನ ಕಂಠಶ್ರೀಯಿಂದ ಮೈಮರೆಸಿ ಕಾಲನ ದವಡೆಯಿಂದ ಬಿಡಿಸಿಕೊಂಡಳು. ಅವಳಿಗೆ ಆದ ಸಂತೋಷಕ್ಕೆ ಪಾರವಿಲ್ಲ.

ಸೀತಾಲಕ್ಷ್ಮಿ ಒಂದು ಕೆಟ್ಟಗಳಿಗೆಯಲ್ಲಿ ಕೆಳಜಾರಿದರೂ ಮೇಲೇಳಬೇಕೆಂಬ ತೀವ್ರಾಕಾಂಕ್ಷೆಯಿದೆ. ಕೆಳ ಸರಿಯುತ್ತಿರುವವರು ಇನ್ನೂ ಕೆಳಕ್ಕೆ ಜಾರುವುದು ಸುಲಭ. ಕೆಳ ಜಾರಲು ಯಾವ ಪ್ರಯತ್ನವೂ ಬೇಕಿಲ್ಲ. ಮೇಲೇರಬೇಕಾದರೆ ಶ್ರದ್ಧಾಪೂರ್ವಕವಾದ ಪ್ರಯತ್ನಬೇಕು. ಆ ಪ್ರಯತ್ನ ಕಷ್ಟಸಾಧ್ಯ. ಫಲ ಅಸಂಭವ. ಸೀತಾಲಕ್ಷ್ಮಿ ತನ್ನ ಹಿಂದಿನ ಪಾಪಕಾರ್ಯಕ್ಕೆ ಪಶ್ಚಾತ್ತಾಪಪಟ್ಟು ಊರ್ಧ್ವಮುಖಿಯಾಗಿ ಪುರೋಗಾಮಿ ಪಥದಲ್ಲಿ ಅಡಿಯಿಡುತ್ತಾಳೆ. ಆ ಪ್ರಯತ್ನದಲ್ಲಿ ಯಶಸ್ವಿಯಾಗುತ್ತಾಳೆ. ಈ ಒಂದು ಮಹಾಗುಣದಿಂದಲೇ ಆಕೆ ಹಿಂದಿನ ಘಟನೆಯನ್ನು ತಾನೂ ಮರೆತು ಸಮಾಜ ಮತ್ತು ಓದುಗರೂ ಮರೆಯುವಂತೆ ಶ್ರಮಿಸಿ ತಾನೂ ಪಾವನಳಾಗಿ ತನ್ನ ಪ್ರಭಾವಕ್ಕೆ ಸಿಕ್ಕಿದವರನ್ನೂ ಪಾವನಗೊಳಿಸಿ ಕ್ಷಮಾರ್ಹಳಾಗುತ್ತಾಳೆ ಮತ್ತು ದಯಾಶೀಲರಾದ ಸಹೃದಯರ ಸಹಾನುಭೂತಿಗೆ ಭಾಜನಳಾಗುತ್ತಾಳೆ. ಊರಿನ ಕೆಲವು ಕಿರಿಯ ಸ್ತ್ರೀಪುರುಷರು 'ಸೀತಾಲಕ್ಷ್ಮಿಯದು ತಪ್ಪಿಲ್ಲ' ಎಂದು ಮಾತಾಡುವಂತೆ ವರ್ತಿಸುತ್ತಾಳೆ. ಅತ್ತೆಮಾವಂದಿರು ಆಕೆಯ ನಿಷ್ಕಪಟ ಸೇವೆಗೆ ಮೆಚ್ಚುತ್ತಾರೆ. ಸುಂದರರಾಜನಿಗೆ ಸ್ವಲ್ಪವೂ ಆಕೆಯ ನಡತೆಯಲ್ಲಿ ಸಂದೇಹವಿಲ್ಲ. ಯಾವುದು ಅಲಭ್ಯವೊ ಅದು ಲಭಿಸುವುದು, ಪತಿಯನ್ನು ಮತ್ತೆ ಪಡೆಯುವಳು. ತೀರ್ಥಯಾತ್ರೆಗೆ ಹೊರಟಾಗ "ಆಕೆಗೆ ತೀರ್ಥಯಾತ್ರೆಗಿಂತ ಹೆಚ್ಚಾಗಿ ತನ್ನ ಸ್ವಂತ ದೇವರ ಯಾತ್ರೆಯೇ ಆಯಿತು." "ಪತಿಯ ಸಾನಿಧ್ಯದಲ್ಲಿದ್ದ ಆ ಕಾಲ ಅವಳಿಗೆ ಸ್ವರ್ಗಸುಖವನ್ನು ತಂದುವು. ಏಕೆಂದರೆ ಆಕೆಗೆ ಹೆಂಡತಿ ಅಥವಾ ಗೃಹಿಣಿಯಾಗಿ ಬಾಳಿದ್ದುದು, ಸುಂದರರಾಜ ತನ್ನ ಹೆಂಡತಿಯೆಂದು ಯಾರಾದರೂ ಕೇಳಿದಾಗ ಹೇಳಿದ್ದುದು, ಅತ್ತೆಮಾವಂದಿರು ಸೊಸೆ ಎಂದು ಸಂಬೋಧಿಸಿದ್ದು ಆ ಕಾಲದಲ್ಲಿಯೇ." ಇದಕ್ಕಿಂತ ಇನ್ನೇನು ಬೇಕು! ಆಕೆಯ ಜೀವನ ಸಾರ್ಥಕವಾಯಿತು. ಆಕೆ ಆಸಿಸುವಂತಹುದು ಇನ್ನೇನೂ ಇರಲಿಲ್ಲ. 'ಕಾವೇರಿ ತೀರ್ಥದಲ್ಲಿ "ಅವಳಿಗೆ ಏನೋ ಪೂರ್ಣತೆಯುಂಟಾಗಿ ಮತ್ತೆ ಮತ್ತೆ ಇದೇ ಬಾಳಿನ ಗುರಿ ಕೊನೆ; ಇಷ್ಟು ಸಾಕು" ಎನ್ನಿಸಿತು.' ಹಾಗೆಯೇ ಸ್ವೇಚ್ಛಾಮರಣಿಯಾದ ಆಕೆ ಪತಿಯೊಡನೆ ಸಾವನ್ನಪ್ಪಿದಳು.

'ನರಸಿಂಹ ಹಿಡಿದುಕೊಂಡಾಗ ಸೀತಾಲಕ್ಷ್ಮಿ ಸ್ವಲ್ಪವೂ ಪ್ರತಿಭಟಿಸಲಿಲ್ಲವೆ?' ಎಂಬ ಪ್ರಶ್ನೆ ಸಹಜವಾಗಿ ಏಳುತ್ತದೆ. ಈ ಪ್ರಸಂಗಕ್ಕೆ ಪ್ರಕೃತಿಯ ಹಿನ್ನೆಲೆಯನ್ನು ಕಲ್ಪಿಸಿ "ಮನ್ಮಥನೂ ಕಲಿಯಂತೆ, ಜನರು ಅಜಾಗರೂಕರಾಗಿರುವುದನ್ನೇ ಅವನೂ ಕಾಯುತ್ತಿದ್ದು ತನ್ನ ಕೆಲಸವನ್ನು ಸಾಧಿಸಿಕೊಂಡುಬಿಡುತ್ತಾನೆ. ಸೀತಾಲಕ್ಷ್ಮಿಗೆ ಏನು ಎಲ್ಲಿ ಎಂದು ತಿಳಿಯುವುದಕ್ಕೆ ಮುಂಚೆಯೇ ನರಸಿಂಹ ಆಕೆಯ ಪಾತಿವ್ರತ್ಯವನ್ನು ಭಂಗಮಾಡಿಬಿಟ್ಟಿದ್ದನು" ಎಂದು ವಿವರಿಸಲಾಗಿದೆ. ಗಂಡಸು ಅಜಾಗರೂಕ

ನಾದರೂ ಹೆಂಗಸು ಸ್ವಾಭಾವಿಕವಾಗಿ ತನ್ನ ಮೈ ಮತ್ತು ಮಾನದ ಬಗ್ಗೆ ಜಾಗರೂಕಳಾಗಿರುತ್ತಾಳೆ. ಈ ಗುಣ ಹೆಂಗಸಿಗೆ ರಕ್ತಗತವಾಗಿ ಬಂದಿರುತ್ತದೆ. ಆದರೂ ಕಾಮವಶರಾಗುವುದು ಸಹಜ. ಆದ್ದರಿಂದಲೇ ಸೀತಾಲಕ್ಷ್ಮಿಯ ಈ ಅಪರಾಧವನ್ನು ಓದುಗರು ಮರೆಯುತ್ತಾರೆ ಮತ್ತು ಆಕೆಯ ದುಃಖದಲ್ಲಿ ಸಹಾನುಭೂತಿ ತೋರುತ್ತಾರೆ. ಆದರೆ ಸೀತಾಲಕ್ಷ್ಮಿ ಮತ್ತು ಕೃಷ್ಣನ ಪ್ರೇಮ ಪ್ರಸಂಗ ಸರಿಯೆ? "ಕೃಷ್ಣನ ಕಣ್ಣುಗಳಲ್ಲಿ ಕಾಮವೂ ಪಾಶವೀ ಆಶೆಯೂ ಒಡೆದು ಕಾಣುತ್ತಿತ್ತು." ಇದು ಆಕೆಗೆ ಗೊತ್ತಾಯಿತು. "ಕೃಷ್ಣ ಅವಳನ್ನು ನೋಡಿ ದೇಶಾವರದ ನಗೆಯನ್ನು ನಕ್ಕು ಹಿಂದೆ ಮುಂದೆ ತಿರುಗಲು ಪ್ರಾರಂಭಿಸಿದಾಗ, ಸೀತಾಲಕ್ಷ್ಮಿ ಚೇಷ್ಟೆಯಿಂದ ಒಂದೆರಡು ಸಲ ಆ ನಗೆಯನ್ನು ಹಿಂದಿರುಗಿಸಿಬಿಟ್ಟಳು" ಎಂದಿದೆ. ಮುಂದಕ್ಕೆ "ಈ ನಾಯಿ ಕೈಗೆ ಸಿಕ್ಕಿದೆ. ಕತ್ತಿಗೆ ಹುರಿಕಟ್ಟಿ ಸ್ವಲ್ಪಹೊತ್ತು ಆಡಿಸೋಣ" ಎಂದುಕೊಂಡಳು. ಮುಂದೆ ಹಾಗೆಯೆ ಆಡಿಸುವಳು. ಆದರೆ ಇದರಿಂದ ಆದ ಅನಾಹುತವೆಷ್ಟು! ಮನೆಯಲ್ಲಿ ಒಬ್ಬಳೇ ಇದ್ದಾಗ ಕೃಷ್ಣ ಚಕ್ಕಂದವಾಡುತ್ತ ನಾಟಕೀಯವಾಗಿ ಹಿಡಿಯ ಹೋಗುವನು. ಅವಳೂ ಪ್ರತಿಭಟಿಸಿದುದರಿಂದ ಮತ್ತು ಅಷ್ಟರಲ್ಲಿ ದೇವಸ್ಥಾನಕ್ಕೆ ಹೋಗಿದ್ದ ಮನೆಯವರೂ ಬಂದುದರಿಂದ ಪೀಡೆ ತಪ್ಪಿತು. ಕೃಷ್ಣ ನರಸಿಂಹನಂತೆ ಹಠಾತ್ತನೆ ಹಿಡಿದಿದ್ದರೆ ಅವಳ ಪಾಡೇನಾಗುತ್ತಿತ್ತು? ಈ ಅನರ್ಥಗಳಿಗೆ ಅವಳೇ ಕಾರಣಳೆಂದು ಓದುಗರು ಅಭಿಪ್ರಾಯಪಡುವುದು ಅನಿವಾರ್ಯ. "ಆಕೆ ಇಂತಹ ಬಿನ್ನಾಣದಿಂದ ಅವರೆದುರಿಗೆ ಒಂಟಿಯಾಗಿ ಯಾಕೆ ತಿರುಗಬೇಕು? ಹೆಣ್ಣು ಆಕರ್ಷಣೆ ತೋರಿಸದೆ ಗಂಡು ಎಂದಿಗೂ ಅದರ ಬಲೆಗೆ ಬೀಳುವುದಿಲ್ಲ" ಎಂಬ ಜಲಜಾಕ್ಷಿಯ ಮಾತು ಸೂಕ್ಷ್ಮಮತಿಗಳಾದ ಓದುಗರಿಗೆ ಉಚಿತವಾಗಿ ತೋರುತ್ತದೆ ಮತ್ತು ಅವರ ತೀರ್ಮಾನಕ್ಕೆ ಪುಷ್ಟಿಯೀಯುತ್ತದೆ, "ಅಜಾಗರೂಕಳಾಗಿ ಮೊದಲನೆಯ ಸಾರಿ ಮುಗ್ಗರಿಸಿದಳು, ಆಮೇಲೆ ಆಕೆ ಎಚ್ಚರಿಕೆಯಿಂದಿದ್ದಳು ಮತ್ತು ಶೀಲವನ್ನು ಕಾಪಾಡಿಕೊಂಡಿದ್ದಳು"—ಎಂದು ಆಕೆಯ ನಡತೆಯನ್ನು ಸಮರ್ಥಿಸುವುದಕ್ಕೆ ಈ ಪ್ರಸಂಗ ಒಂದು ದೃಷ್ಟಾಂತವಾಗಿ ಬಂದಿದೆ ಎಂದು ಇಟ್ಟುಕೊಂಡರೂ ಸೀತಾಲಕ್ಷ್ಮಿ ಚೇಷ್ಟೆಯಿಂದ ನಗೆಯನ್ನು ಹಿಂದಿರುಗಿಸಿದ್ದು ಸರಿಯೆ? ಅವಳ ವ್ಯಕ್ತಿತ್ವದಲ್ಲಿ ಇದೊಂದು ನ್ಯೂನತೆಯೆಂದರೆ ತಪ್ಪಲ್ಲ. ಆಕೆಯ ಮೊದಲನೆಯ ಅಪರಾಧವನ್ನು ಕ್ಷಮಿಸಿದ ಓದುಗರು ಈ ಎರಡನೆಯ ಅಪರಾಧವನ್ನು ಕ್ಷಮಿಸುವರೆ!

ಸುಂದರರಾಜ ರಸಿಕ, ಸೌಂದರ್ಯೋಪಾಸಕ, ಜೊತೆಗೆ ಹಾಡುಗಾರಿಕೆ ಹುಟ್ಟುಗುಣವಾಗಿ ಬಂದಿತ್ತು. ಸೀತಾಲಕ್ಷ್ಮಿಯ ಕಂಠಶ್ರೀ ಮತ್ತು ಸೌಂದರ್ಯಶ್ರೀಗೆ ಮನಸೋತು ಮದುವೆಯಾಗುವನು. ಅವನದು ಪ್ರೇಮವಿವಾಹ. ಪ್ರೇಮಮೂರ್ತಿ

ಯಾದ ಆತ ಹೆಂಡತಿಯ ಶೀಲವನ್ನು ಶಂಕಿಸುವುದಿಲ್ಲ. ತಂದೆ ಏರ್ಪಡಿಸಿದ ಎರಡನೆಯ ಮದುವೆಯ ಧಾರೆಯ ಸಮಯದಲ್ಲಿ ಓಡಿಹೋಗುವನು. ಸೀತಾಲಕ್ಷ್ಮಿ ಇದ್ದಂತೆ ಎರಡನೆಯ ಮದುವೆಯಾಗುವುದು ಅಸಹ್ಯವೆನಿಸಿತು. ಮತಿಹೀನನಾಗಿ ಗೊತ್ತು ಗುರಿಯಿಲ್ಲದೆ ತಿರುಗುತ್ತಾನೆ ನಿರಾಶೆಯಿಂದ. ಆರೋಗ್ಯ ಸುಧಾರಿಸಿದ ಮೇಲೆ ಸೀತಾ ಲಕ್ಷ್ಮಿಯೊಡನೆ "ತನ್ನ ಪಾಡಿಗೆ ತಾನು ಇದ್ದುಬಿಡೋಣ" ಎಂದು ಯೋಚಿಸುವನು. ರೋಗದಿಂದ ಬದುಕಿಸಿದ ಆಕೆ ಈಗಲೂ ಬದುಕಿಸುವಳೆಂದೂ ಅಥವಾ ತನ್ನ ಪ್ರಾಣ ವನ್ನು ಆಕೆಗೊಪ್ಪಿಸಿದರೆ ಕ್ಷೇಮವೆಂದೂ ಭಾವಿಸಿ ನೀರಿನಲ್ಲಿ ಮುಳುಗಿದಾಗ ಅವಳ ಕಡೆ ಕೈನೀಡಿದನು. ಆದರೆ ಬಿದಿ ಬಗೆದುದು ಬೇರೆ.

ಗಂಭೀರವಾದ ಮತ್ತು ವಿಚಾರಯೋಗ್ಯವಾದ ವಸ್ತುವನ್ನು ಆರಿಸಿಕೊಂಡಿದ್ದಾರೆ. ಹಾಸ್ಯಪೂರ್ವಕವಾದ ವಸ್ತುಗಳನ್ನು ಆರಿಸಿಕೊಳ್ಳುತ್ತಿದ್ದ ಶ್ರೀಯುತರು ಇಲ್ಲಿ ಬೇರೆ ಹಾದಿಯಲ್ಲಿ ಕ್ರಮಿಸಿರುವುದು ಕಂಡುಬರುತ್ತದೆ. ಸೀತಾಲಕ್ಷ್ಮಿಯರಂಥ ನತದೃಷ್ಟ ವ್ಯಕ್ತಿಗಳು ಅನೇಕರಿದ್ದಾರೆ. ಇಂಥ ಘಟನೆಗಳು ಇಂದಿಗೂ ನಡೆಯುತ್ತವೆ. ಸಮಾಜದ ಕಟ್ಟುಕಟ್ಟಳೆಗೆ ಬೇಸತ್ತು ಹೆಣ್ಣಿನ ದುಃಖಮಯ ಬಾಳಿಗೆ ಕನಿಕರಿಸಿ ಸಮಾಜದಲ್ಲಿ ನಡೆದ ಒಂದು ಯಥಾರ್ಥ ಘಟನೆಯನ್ನು ಓದುಗರ ಎದೆವುಗುವಂತೆ ಚಿತ್ರಿಸಿ, ಕನ್ನಡ ಗದ್ಯದಲ್ಲಿ ತಮ್ಮ ಸರಳಶೈಲಿ ತಿಳಿಹಾಸ್ಯ ಮತ್ತು ಹೃದಯಂಗಮವಾದ ನಿರೂಪಣಾ ವೈವಿಧ್ಯತೆಯಿಂದ ಕೀರ್ತಿ ಗಳಿಸಿರುವ ಶ್ರೀ ರಾಮಸ್ವಾಮಯ್ಯಂಗಾರ್‍ಯರು ಅಭಿನಂದನಾರ್ಹರಾಗಿದ್ದಾರೆ. ವಸ್ತು ಜೀವನಕ್ಕೆ ಸಮೀಪವಾಗಿದೆ, ಆದ್ದರಿಂದಲೆ ವಾಸ್ತವವಾಗಿದೆ. ಕಥೆ ಕುತೂಹಲಕಾರಿಯಾಗಿದೆ. ಸ್ವಲ್ಪ ಲಂಬಿತವಾಗಿರುವಂತೆ ಕಂಡರೂ ಬಾಧಕವಿಲ್ಲ. ಪಾತ್ರಗಳೆಲ್ಲ ಸ್ವೈಜವಾಗಿ ಆಕರ್ಷಣೀಯವಾಗಿವೆ. ಜಾಗ್ರತ ಗೊಂಡು ಪುರೋಗಾಮಿಶೀಲೆಯಾದ ಸೀತಾಲಕ್ಷ್ಮಿಯ ಪಾತ್ರಕಲ್ಪನೆ ಪಾತ್ರ ಚಿತ್ರಣ ಪುರೋಗಾಮಿ ಲೇಖಕನ ಪ್ರತಿಭೆಗೆ ಮಾತ್ರ ಸ್ಫುರಿಸುವಂತಹುದು. ಒಬ್ಬ ಸಾಮಾನ್ಯ ಲೇಖಕನ ಕೈಲಿ ಇದೇ ವಸ್ತು ಸಿಕ್ಕಿದ್ದರೆ ಆಗ ಒಮ್ಮೆ ಜಾರಿದ ಸೀತಾ ಲಕ್ಷ್ಮಿ ಇನ್ನೂ ಕೆಳಜಾರಿ ಪಾಪಕೂಪದಲ್ಲಿ ಮುಳುಗುತ್ತಿದ್ದಳು ಅಥವಾ ದುಃಖಾತಿ ರೇಕದಿಂದ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಳು; ಕಥೆ ದುರಂತವಾಗುತ್ತಿತ್ತು. ಇಲ್ಲಿ ಕಥೆ ದುಃಖಾಂತವಾಗಿ ಮುಗಿದರೂ ದುಃಖಾಂತವಲ್ಲ. ಏಕೆಂದರೆ ಆ ದಂಪತಿಗಳ ಪಾಲಿಗೆ ಅದೇ ಸುಖಾಂತ. ಬಹುಶಃ ಅವರು ಜೀವಿಸಿದ್ದರೂ ಸಹ ಮರಣವನ್ನು ಪಡೆಯುತ್ತಿರಲಿಲ್ಲ ಅಥವಾ ಕಮಲಮ್ಮನ ಮಾತಿನಂತೆ ಆ ಪ್ರೇಮಿಗಳ 'ಪ್ರೇಮ ಸಮಾಧಿ'ಯಾಗುತ್ತಿರಲಿಲ್ಲ. ಕಮಲಮ್ಮನ ಪಾತ್ರನಿರೂಪಣೆ ತುಂಬ ಚೆನ್ನಾಗಿದೆ. ಈಕೆ ದೇವತಾಮನುಷ್ಯೆ. ಸೀತಾಲಕ್ಷ್ಮಿಯ ಏಳಿಗೆಗೆ ಈಕೆಯೇ ಕಾರಣಳು. ನರಸಿಂಹ

ಕೃಷ್ಣ ಮೊದಲಾದ ದುಷ್ಟಪಾತ್ರಗಳಲ್ಲಿಯೂ ಕಾದಂಬರಿಕಾರರ ಕೌಶಲ ವ್ಯಕ್ತವಾಗಿದೆ. ಸಂಭಾಷಣೆ ಉಚಿತವಾಗಿದೆ. ಸರಳಶೈಲಿ ಶ್ರೀಯುತರ ಒಂದು ವೈಶಿಷ್ಟ್ಯ. ಇವರ ಇತರ ಕೃತಿಗಳಲ್ಲಿ ಕಾಣಬರುವ ಮೋಹಕ ಶೈಲಿ ಇಲ್ಲಿಯೂ ಕಂಡುಬರುತ್ತದೆ. ಕಥೆ ಬೋಧಕವಾಗಿದೆ, ಕಾಂತಾಸಮ್ಮಿತೋಪದೇಶದಿಂದ ರಂಜಕವಾಗಿದೆ. ಇಲ್ಲಿ ಬರುವ ನಾಲ್ಕಾರು ವರ್ಣನೆ ಹಿತವಾಗಿವೆ. "ಮೀನು ನೀರಿನಲ್ಲಿ ಈಜುವಂತೆ" ಸೀತಾಲಕ್ಷ್ಮಿ ಪಿಟೀಲನ್ನು ಬಾರಿಸುತ್ತಿದ್ದಳು ಎಂಬ ಅಲಂಕಾರ ಮೂರುನಾಲ್ಕು ಸಾರಿ ಬಂದಿರುವುದರಲ್ಲಿ ಔಚಿತ್ಯ ತೋರುವುದಿಲ್ಲ. ಕಾದಂಬರಿ ವಸ್ತು, ಪಾತ್ರ, ಶೈಲಿ— ಇವುಗಳ ವಿಶೇಷದಿಂದ ಓದುಗರನ್ನು ಆಕರ್ಷಿಸದಿರದು. ಇಂಥ ವಿಚಾರಾತ್ಮಕ ಕಾದಂಬರಿಗಳು ಶ್ರೀಯುತರ ಲೇಖನಿಯಲ್ಲಿ ಹಲವಾರು ಮೂಡಲೆಂದು ಆಶಿಸುತ್ತೇನೆ.

ಸೋ. ಕೆಂ. ರಾಮಣ್ಣ

*
* *

ಒರೆಗಲ್ಲು ಮತ್ತು ಬೇರೆ ಕಥೆಗಳು—ವಿವಿಧ ಲೇಖಕರು; ಪ್ರಕಾಶಕರು: ಸುದ್ದಿ ಮತ್ತು ಸಾರ್ವಜನಿಕ ಸಂಬಂಧಗಳ ಖಾತೆಯ ಮುಖ್ಯಾಧಿಕಾರಿಗಳು; ಹೈದರಬಾದ್ ಸರ್ಕಾರ, ಹೈದರಬಾದ್-ದಕ್ಷಿಣ; ಪುಟಗಳು ೧೪೪; ಬೆಲೆ, ರೂ. ೧-೦-೦.

ಹೈದರಬಾದ್ ಸರಕಾರದ ಸುದ್ದಿ ಮತ್ತು ಸಾರ್ವಜನಿಕ ಸಂಬಂಧಗಳ ಖಾತೆಯವರು ೧೯೫೨ ರಲ್ಲಿ ನಡೆಸಿದ ಸಣ್ಣ ಕಥೆಗಳ ಸ್ಪರ್ಧೆಯಲ್ಲಿ ಮೊದಲನೆಯ ಮತ್ತು ಎರಡನೆಯ ಬಹುಮಾನಗಳನ್ನು ಗಳಿಸಿದ ಎರಡು ಕಥೆಗಳನ್ನು ಮತ್ತು ಸ್ಪರ್ಧೆಗೆ ಬಂದಿದ್ದ ಇತರ ಕಥೆಗಳಲ್ಲಿ ಎಂಟನ್ನು ಆರಿಸಿ ಪ್ರಕಟಿಸಿದ್ದಾರೆ. ದೇಶೀಯ ಭಾಷೆಗಳಲ್ಲಿ ಸ್ಪರ್ಧೆಯನ್ನೇರ್ಪಡಿಸಿ ಬಹುಮಾನ ಕೊಟ್ಟು ಅವುಗಳಲ್ಲಿ ಉತ್ತಮವಾದ ಕಥೆಗಳನ್ನು ಪ್ರಕಟಿಸುವ ಸರ್ಕಾರದ ನೀತಿ ಮೆಚ್ಚತಕ್ಕುದು. ಹೀಗೆ ಮಾಡುವುದರಿಂದ ತರುಣ ಲೇಖಕರಿಗೆ ಪ್ರೋತ್ಸಾಹವೂ ಮತ್ತು ಪ್ರಾಂತಭಾಷೆಗಳಿಗೆ ಪ್ರಾತಿನಿಧ್ಯವೂ ದೊರೆತಂತಾಗುತ್ತದೆ. ಹೈದರಬಾದ್ ಸರ್ಕಾರದ ಮೇಲ್ಪಂಕ್ತಿಯನ್ನು ಇತರ ಸರ್ಕಾರಗಳೂ ಅನುಸರಿಸಿದರೆ ಕನ್ನಡ ಅಭಿವೃದ್ಧಿಯಾಗುವುದರಲ್ಲಿ ಸಂದೇಹವಿಲ್ಲ.

ಈ ಕಥಾಗುಚ್ಛದಲ್ಲಿ ಹತ್ತು ಕಥೆಗಳಿವೆ. ಶ್ರೀ ದೇವೇಂದ್ರಕುಮಾರ ಹಕಾರಿಯವರ 'ಒರೆಗಲ್ಲು' ಮೊದಲನೆಯದು, ತನ್ನ ಸತೀತ್ವ ರಕ್ಷಣೆಗಾಗಿ ಆಸ್ತಿಯನ್ನು ರಕ್ಕಸ ಮಹಮೂದನಿಗೆ ಬಿಟ್ಟು ದೆಹಲಿಗೆ ಬಂದು ಹರಿಬಾಬುವಿನಲ್ಲಿ ಕೆಲಸಕ್ಕೆ ಸೇರಿ ಒಡೆಯುನ ನಡೆಯನ್ನು ತಿದ್ದಿ ತಾನೂ ಪಾವನಳಾದ ಸಾಧ್ವಿ ಕಮಲೆಯ ರೋಮಾಂಚಕಾರಿಯಾದ ಸಾಹಸದ ಕಥೆಯಿದು. ಇದಕ್ಕೆ ಮೊದಲನೆಯ ಬಹುಮಾನ ಬಂದಿದೆ. ಶ್ರೀ ನರಸಿಂಹ ಕಠಾವಿಯವರ 'ವಿದ್ಯೆಗಾಗಿ' ಎಂಬುದು ಎರಡನೆಯ ಕಥೆ. ಯಾವುದೊ

ಪೂರ್ವಜನ್ಮದ ವಾಸನೆಯಿಂದ ಈ ಜನ್ಮದಲ್ಲಿ ವಿದ್ಯಾಭಿಲಾಶೆ ಮೂಡಿ ಏಕಲವ್ಯನಂತೆ ಪ್ರತ್ಯಕ್ಷ ಗುರುಬೋಧನೆಯಿಲ್ಲದೆ ಅಂತ್ಯಜರ ಕುಲದಲ್ಲಿ ಹುಟ್ಟಿ ಗೌಡರ ಮನೆಯಲ್ಲಿ ದನಗಾಯುತ್ತ ಓದುಬರಹ ಕಲಿತು ಗೌಡರ ಕೋಪಕ್ಕೆ ಬಲಿಯಾದ ಹನುಮನ ದುರಂತ ಚಿತ್ರಿತವಾಗಿದೆ. ಎರಡನೆಯ ಬಹುಮಾನ ಈ ಕಥೆಗೆ ದೊರೆತಿದೆ.

ಕುಮಾರಿ ಸುಶೀಲಾ ಬಾಡಗಂಡಿಯವರ "ಕವಿಯ ಬಾಳೊಂದು"ವಿನಲ್ಲಿ ಪ್ರತಿಭಾವಂತನಾದ ಕವಿ ಮೋಹನನು ಗತಿಸಿದ ಪ್ರೇಯಸಿಯ ಹಂಬಲದಿಂದ ಕೃಶವಾಗಿ ತಾನೂ ಗತಿಸುತ್ತಾನೆ. ನಾಲ್ಕನೆಯದು ಶ್ರೀ ಸುಕುಮಾರ ದೇಸಾಯಿಯ ಯವರ "ಟೊಳ್ಳು ಬುರುಜು." ದಾಸನಾಗಿ ಅನುಭವಿಸುವ ಸುಖಕ್ಕಿಂತ ಸ್ವತಂತ್ರನಾಗಿ ಪಡುವ ದುಃಖ ಅಮೂಲ್ಯವಾದುದೆಂಬುದನ್ನು ತಿಳಿಯದ ಆಗ್ರಾಪಟ್ಟಣದ ಟಾಂಗಾ ವಾಲ ರಾಮಸಿಂಗನ ಅಜ್ಞಾನವನ್ನೂ ಸ್ವಾರ್ಥವನ್ನೂ ಚಿತ್ರಿಸುವ ವ್ಯಂಗ್ಯ ಕಥೆಯಿದು. "ಸಂಗೀತದಲ್ಲಿ ಸಮಾಧಿ"ಯಲ್ಲಿ ತಾನು ಸಲಹದಿದ್ದರೂ ಗಾನವಿಶಾರದೆ ಎಂದು ಬಿರುದಾಂಕಿತಳಾದ ತಂಗಿಯ ಸಂಗೀತವನ್ನು ಕೇಳಿ ಅತ್ಯಾನಂದಪಟ್ಟು ಹೃದಯ ಸ್ತಂಭನದಿಂದ ರಘು ತೀರಿಹೋಗುವನು. ಇದರ ಕಥೆಗಾರ್ತಿ ಶ್ರೀಮತಿ ವಾಗೀಶ್ವರಿ ನಾರಾಯಣ ಅವರು. ಶ್ರೀ ಎಚ್. ಬಿ. ಕುಲಕರ್ಣಿಯವರ "ದೀಪಾವಳಿಯ ಕತ್ತಲೆ" ಯಲ್ಲಿ ದೀಪಾವಳಿ ಹಬ್ಬಕ್ಕೆ ಅಕ್ಕನಿಗೆ ಉಟ್ಟುಕೊಳ್ಳಲು ಕೊಡಲು ತಾನಿದ್ದ ಸೆಟ್ಟರ ಮನೆಯಿಂದ ಸೀರೆಯನ್ನು ಕದ್ದೊಯ್ದು ರೈಲ್ವೆ ನಿಲ್ದಾಣದಲ್ಲಿ ಮಲಗಿದ್ದಾಗ ಸೀರೆ ಯನ್ನೂ ಕಳೆದುಕೊಂಡು ಪೋಲೀಸರ ಕೈಗೂ ಸಿಕ್ಕಿಬಿದ್ದ ತಬ್ಬಲಿ ನಿಂಗನ ವಿಷಾದ ಪೂರ್ಣವಾದ ಕಥೆಯಿದೆ. ಶ್ರೀ ಎಸ್. ಜಿ. ಬಿರಾದರವರ ರುದ್ರವೀಣೆಯಲ್ಲಿ ಸಂಗೀತ ಗಾರನೊಬ್ಬನು ತನ್ನ ಜೀವನವೃತ್ತಾಂತವನ್ನು ಕಥೆಗಾರನಿಗೆ ಹೇಳಿದುದರಿಂದ ಎದೆ ಹಗುರವಾದಂತಾಗಿ ತಾನು ಇಳಿದಿದ್ದ ಗುಡಿಯಲ್ಲಿ ಪರಂಧಾಮವನ್ನೈದುತ್ತಾನೆ. 'ಚಿಕಿತ್ಸೆ' ಎಂಟನೆಯ ಕಥೆ. ಇದರಲ್ಲಿ ಮನೋರೋಗಿಯಾದ ಬಾಲಕ ರಾಜಾನು ಗುಣಮುಖನಾದ ಚಿಕಿತ್ಸಾವಿಧಾನವಿದೆ. ಮಾಡಿದವರು ಶ್ರೀ ಎನ್. ಶ್ಯಾಮ ಪ್ರಸಾದ ಮೌದ್ಗಲ್‌ರವರು. ಶ್ರೀ ಕೃಷ್ಣರಾಯ ನಿಲೋಗಲ್ಲುರವರ "ಸುಶಯನಾ" ದಲ್ಲಿ ನಿರುಪಾಯರಾಗಿ ಶೀಲಭ್ರಷ್ಟರಾದರೂ ಧರ್ಮಿಷ್ಟರಾದ ದಂಪತಿಗಳ ಪುನರ್ಮಿಲನ ಚಿತ್ರಿತವಾಗಿದೆ. "ಹಾಲು ಸಕ್ಕರೆ" ಶ್ರೀ ಸಿದ್ದಯ್ಯ ಪುರಾಣಿಕರದು. ಇದೆ ಕೊನೆಯ ಕಥೆ. ಇಬ್ಬರು ಪ್ರೇಮಿಗಳು ಅನಿವಾರ್ಯ ಕಾರಣಗಳಿಂದ ಅಗಲಿ ಕಷ್ಟಗಳನ್ನು ಅನುಭವಿಸಿ ಕೊನೆಗೆ ಮದುವೆಯಾಗುತ್ತಾರೆ.

ಮೊದಲನೆಯ ಎರಡು ಕಥೆಗಳು ಬಹುಮಾನ ಯೋಗ್ಯವಾಗಿವೆ. ಅವುಗಳ ವಸ್ತು, ಕಥಾಸಂವಿಧಾನ, ಶೈಲಿ ಮತ್ತು ಪಾತ್ರನಿರೂಪಣೆ ಹೃದಯಂಗಮವಾಗಿವೆ. ವಿದ್ಯೆ

ಗಾಗಿ, ಕವಿಯ ಬಾಳೊಂದು, ಸಂಗೀತದಲ್ಲಿ ಸಮಾಧಿ, ದೀಪಾವಳಿಯ ಕತ್ತಲೆ, ಮತ್ತು ರುದ್ರವೀಣೆ ದುರಂತ ಕಥೆಗಳು. ದೀಪಾವಳಿಯ ಕತ್ತಲೆ ದುರಂತವಲ್ಲದಿದ್ದರೂ ಕಥಾನಾಯಕ ನಿಂಗ ಕಷ್ಟವನ್ನನುಭವಿಸಬೇಕಾಗುತ್ತದೆ. ಈ ದುರಂತ ಕಥೆಗಳಲ್ಲೆಲ್ಲ ದುರಂತ ಸಹಜವಾಗಿದ್ದರೂ 'ವಿದ್ಯೆಗಾಗಿ' ಎಂಬ ಕಥೆಯಷ್ಟು ಮನೋಜ್ಞವಾಗಿಲ್ಲ 'ದೀಪಾವಳಿಯ ಕತ್ತಲೆ'ಯಷ್ಟು ಪರಿಣಾಮಕಾರಿಯಾಗಿಲ್ಲ—ಉಳಿದುವು. ದುಃಖದಿಂದ ಪ್ರಾರಂಭವಾಗಿ ಸುಖಾಂತದಲ್ಲಿ ಒರೆಗಲ್ಲು ಮತ್ತು ಸುಶಯನಾ ಮುಗಿಯುತ್ತವೆ. ಸುಶಯನಾದಲ್ಲಿ ಧರ್ಮಾಧರ್ಮದ ನಿರೂಪಣೆ ಚೆನ್ನಾಗಿದೆ. ಭಾರತೀಯರು ಅಗತ್ಯವಾಗಿ ಕಲಿಯಬೇಕಾದ ಒಂದು ಉದಾತ್ತ ನೀತಿಯನ್ನು ಸೊಗಸಾಗಿ ಕಥೆಗಾರರು 'ಟೊಳ್ಳು ಬುರುಜು'ವಿನಲ್ಲಿ ಅಳವಡಿಸಿದ್ದಾರೆ. ಸಹೋದರಿ ಪ್ರೇಮ 'ಸಂಗೀತದಲ್ಲಿ ಸಮಾಧಿ' ಮತ್ತು 'ದೀಪಾವಳಿಯ ಕತ್ತಲೆ'ಯಲ್ಲಿ ನಿರೂಪಿತವಾಗಿದೆ. ಕಥೆಗಳೆಲ್ಲ ಚೆನ್ನಾಗಿವೆ. ಪ್ರತಿಯೊಂದು ಕಥೆಯೂ ವಿಶಿಷ್ಟವಸ್ತು, ಶೈಲಿ ಮತ್ತು ಕಥಾತಂತ್ರದಿಂದ ಕೂಡಿವೆ. ಕೆಲವು ಬೋಧಕವಾಗಿವೆ. ಕೆಲವು ಹೃದಯ ವಿದ್ರಾವಕವಾಗಿ ರಸಾನುಭವಕಾರಿಯಾಗಿವೆ. ಈ ಕಥಾಸಂಕಲನ ಒಂದೆರಡು ಸಾರಿ ಓದಿ ಆನಂದಿಸಲು ಯೋಗ್ಯವಾಗಿದೆ. ಈ ಲೇಖಕರುಗಳು ಕಥಾವ್ಯವಸಾಯದಲ್ಲಿ ಮುಂದುವರಿದರೆ ಇನ್ನೂ ಉತ್ತಮ ಕಥೆಗಳು ಬರುವ ಮುನ್ಸೂಚನೆಗಳಿವೆ.

ಸೋ. ಕೆಂ. ರಾಮಣ್ಣ.

* * *

ಚಿಕ್ಕನ ಕಣ್ಣು—ತ್ರಿವೇಣಿ; ಭಾರತೀ ಪ್ರಕಾಶನ, ಕೃಷ್ಣಮೂರ್ತಿಪುರಂ, ಮೈಸೂರು; ಪುಟಗಳು ೩೧೫; ಬೆಲೆ, ರೂ. ೧-೮-೦.

ನಮ್ಮ ಮುಂದಿರುವ ಕಾದಂಬರಿಯಲ್ಲಿ ಮನೋವಿಜ್ಞಾನದ ಸಮಸ್ಯೆಯೊಂದರ ಆಧಾರದ ಮೇಲೆ ರಚಿತವಾದ ಕಥೆ ಅಡಕವಾಗಿದೆ. ವ್ಯಕ್ತಿದ್ವೇಷ, ಅಹಿತ ವಾತಾವರಣ, ವ್ಯಕ್ತಿಯ ಸ್ವತಂತ್ರವರ್ತನೆಗೆ ತಂದೊಡ್ಡಿದ ಅಡ್ಡಿ ಆತಂಕಗಳು, ಹೇಗೆ ಮನುಷ್ಯನ ಮನಸ್ಸಿನ ಮೇಲೆ ದುಷ್ಪರಿಣಾಮ ಉಂಟುಮಾಡಬಹುದು ಎಂದು ತೋರಿಸುವುದು ಕಾದಂಬರಿಯ ಉದ್ದೇಶವಾಗಿದೆ. ಲೇಖಕಿಯರು ಈ ತಮ್ಮ ಉದ್ದೇಶವನ್ನು ಚೆನ್ನಾಗಿ ಸಾಧಿಸಿದ್ದಾರೆ ಎಂದೇ ಹೇಳಬೇಕು.

ಮುದ್ದಿನಲ್ಲಿ ಬೆಳೆದ ಕುಸುಮ ಅಜ್ಜಿ ತಾಯಿಯವರನ್ನು ಬಲುಬೇಗ ಕಳೆದುಕೊಂಡು ತಂದೆಯ ಬಾಳಿಗೆ ಹೆಣೆದುಕೊಂಡ ಬಳ್ಳಿಯಾಗಿ ಬೆಳೆಯುತ್ತಾಳೆ. ಕುಸುಮಳ ಮನಸ್ಸು ಹೃದಯಗಳ ಅಧಿಕಾರವಾಣಿಗೆ ತಂದೆಯ ಮನಸ್ಸು ಸದಾ ಹೂಗೊಡುವ ಬಂಟನಾಗಿಬಿಡುತ್ತದೆ—ತಂದೆಗೆ ಮಗಳ ಮೇಲಿನ ಪ್ರೀತಿ ಅಷ್ಟು. ತಂದೆ ಜಗನ್ನಾಥರಾಯರ ಲೈಂಗಿಕ ಪ್ರವೃತ್ತಿ (Sex urge)

ಅಳಿದ ಹೆಂಡತಿ ರಾಜಮ್ಮನ ಮೇಲಿನ ತುಂಬುಪ್ರೇಮ, ಅವಳಿಗಾಗಿ ಇದ್ದ ಕೊರಗು, ಮತ್ತು ಆಕೆಯ ನೆನಪಿಗೆ ನಿತ್ಯಸಾಕ್ಷಿಯಾದ ಕುಸುಮಳ ಸಾಮೀಪ್ಯದ ಪ್ರಭಾವ ಇವುಗಳ ಫಲವಾಗಿ ಸೋತು ಮಲಗಿಬಿಡುತ್ತದೆ. ಆದರೆ ಇದು ಕೇವಲ ಕ್ಷಣಿಕ. ಲಕ್ಷ್ಮಣರಾಯರಿಗೆ ಪದ್ಮ ಎಂಬ ವಯಸ್ಸಾದ, ಇನ್ನೂ ಮದುವೆಯಾಗದ ಮಗಳಿದ್ದಳು. ಅವಳ ಮದುವೆಯ ಸಮಸ್ಯೆಗೆ ಜಗನ್ನಾಥ ರಾಯರೊಬ್ಬರೇ ಉತ್ತರವಾಗಿದ್ದರು. ಲಕ್ಷ್ಮಣರಾಯರ ಅವಿಶ್ರಾಂತ ಪ್ರಯತ್ನದ ಫಲವಾಗಿ ಜಗನ್ನಾಥರಾಯರಲ್ಲಿ ಲೈಂಗಿಕ ತೃಷೆ ಕೆರಳುತ್ತದೆ; ಅವರ ದೃಢಮನಸ್ಸು ಬಾಗಿ ಹೊಸ ಹೆಂಡತಿ ಯೊಡನೆ ಸಂಸಾರ ಅನಿವಾರ್ಯವೇ ಆಗಿಬಿಡುತ್ತದೆ.

ಇದು ಕಾದಂಬರಿಯಲ್ಲಿ ಒಂದು ಘಟ್ಟ. ಇಲ್ಲಿಂದ ಕುಸುಮಳ ಬಾಳು ಕೆಡುತ್ತ ಬರುತ್ತದೆ. ಬೆಳೆದ ಮುದ್ದುಮಗಳು ಕುಸುಮಳನ್ನು ಈ ಹೊಸ ಸನ್ನಿವೇಶದಲ್ಲಿ ಹೇಗೆ ನಡೆಸಿಕೊಳ್ಳಬೇಕೆಂಬ ತಿಳಿವಳಿಕೆ ಜಗನ್ನಾಥರಾಯರಿಗೆ ಇರಲಿಲ್ಲ. ಹೊಸ ಹೆಂಡತಿ ಪದ್ಮಳಿಗೆ ಕುಸುಮಳನ್ನು ಕಂಡರೆ ಅಸೂಯೆ ದಿನೇ ದಿನೇ ವೃದ್ಧಿಯಾಗುತ್ತ ಹೋಯಿತು. ಕುಸುಮಳಿಗೆ ಇದ್ದಕ್ಕಿದ್ದಹಾಗೆ ಮನೆಗೆ ಬಂದ ಪದ್ಮಳೊಡನೆ ಅನುಸರಣೆ ಬರಲಿಲ್ಲ. ಮನೆಯಲ್ಲಾದ ಬದಲಾವಣೆಗಳು ಅವಳಿಗೆ ಅರ್ಥವಾಗ ಲಿಲ್ಲ. ಪದ್ಮ ಅವಳ ಹಕ್ಕನ್ನು ಅಪಹರಿಸಲು ಬಂದ ಶತ್ರು; ತಾನು ಅವಳನ್ನು ಎದುರಿಸದೆ ವಿಧಿ ಯಿಲ್ಲ ಎಂದು ಕುಸುಮ ತಿಳಿದಳು. ಪದ್ಮಳ ಮನಸ್ಸಿನಲ್ಲಿ ಕುಸುಮ ತನ್ನ ದಾಂಪತ್ಯಜೀವನದಲ್ಲಿ ಒಂದು ಮುಳ್ಳು, ಆ ಮುಳ್ಳು ತೆಗೆದುಹಾಕದೆ ತನಗೆ ಸುಖವಿಲ್ಲ ಎನಿಸಿತು. ಜಗನ್ನಾಥರಾಯರ ಪ್ರೇಮಕ್ಕೆ ಬಲತಾಯಿ ಬಲಮಗಳು ಕಾದಾಡತೊಡಗಿದರು, ಎಲ್ಲ ವಿಧದಲ್ಲೂ ಬಲಶಾಲಿನಿಯಾದ ಪದ್ಮಳನ್ನು ಎದುರಿಸುವುದು ಸಣ್ಣವಯಸ್ಸಿನ ಏನೂ ತಿಳಿಯದ ಕುಸುಮಳಿಗೆ ಅಸಾಧ್ಯವೇ ಸರಿ. ಜಗನ್ನಾಥರಾಯರು ಹೆಂಡತಿ ಒಲಿದರೆ ಸಾಕು ಎಂದು ಗಿಳಿಯನ್ನು ಸಾಕಿ ಬೆಕ್ಕಿನ ಪಾಲು ಮಾಡಿದ ಹಾಗೆ ಮುದ್ದಾಗಿ ಬೆಳೆಸಿದ ಕುಸುಮಳನ್ನು ಪದ್ಮಳ ಅಂಕೆಶಿಕ್ಷೆಗೆ ಅನಾಯಾಸವಾಗಿ ಬಿಟ್ಟು ಕೊಟ್ಟರು. ಎಲ್ಲ ಜವಾಬ್ದಾರಿಯ ಜೊತೆಗೆ ಕುಸುಮಳ ಜವಾಬ್ದಾರಿಯನ್ನು ಬಿಟ್ಟು ತಮ್ಮ ದೈಹಿಕ ಸುಖವನ್ನು ಮಾತ್ರ ಕಾದುಕೊಂಡರು.

ಒಡೆದ ಸಂಸಾರದ ಅಹಿತವಾತಾವರಣ ಕುಸಮಳನ್ನು ನಿಧಾನವಾಗಿ ಮನೋವೈಪರೀತ್ಯದ ಗಡಿ ದಾಟಿಸಿಬಿಡುತ್ತದೆ. ಅವಳಲ್ಲಿ ಬಲತಾಯಿಯ ಬಗ್ಗೆ ದ್ವೇಷಭಯಗಳು ಕಾಲಿಡುತ್ತವೆ. ಅವುಗಳ ತಾಂಡವ ನೃತ್ಯದ ತುಳಿತಕ್ಕೆ ಸಿಕ್ಕು ಅವಳ ಸುಂದರ ವ್ಯಕ್ತಿತ್ವ ಒಡೆದ ಕನ್ನಡಿಯಾಗಿಬಿಡುತ್ತದೆ. ಕುಸುಮ ಮನೋರೋಗಕ್ಕೆ ಗುರಿಯಾದಳು; ಹುಚ್ಚಿ ಎನ್ನಿಸಿಕೊಂಡುಬಿಟ್ಟಳು.

ಅವಳ ಮನೋವಿಕಾರ ಯಾರಿಗೂ ಅರ್ಥವಾಗಲಿಲ್ಲ. ಪದ್ಮಳ ತಮ್ಮ ರಾಜನ ಪ್ರೇಮ ಸಹಾನುಭೂತಿಗಳಿಲ್ಲದಿದ್ದರೆ ಕುಸುಮಳ ಬಾಳು ಮತ್ತೆ ನಗುವ ಗುಲಾಬಿಯ ಹಾಗೆ ಅರಳುವುದು ಸಾಧ್ಯವಾಗುತ್ತಿರಲಿಲ್ಲ. ರಾಜ ತನ್ನ ಪ್ರೀತಿಯ ಕುಸುಮಳನ್ನು ಮನೆಯ ಸೆರೆಯಿಂದ, ಮಾಂತ್ರಿಕರ ಕ್ರೂರ ಚಿಕಿತ್ಸೆಗಳಿಂದ ಬಿಡಿಸಿ ಹುಚ್ಚಾಸ್ಪತ್ರೆಗೆ ಸೇರಿಸುತ್ತಾನೆ. ಅವಳ ಮನೋವಿಕಾರ ಬಲಿಯುವ ಮುನ್ನ ಚಿಕಿತ್ಸೆ ಪ್ರಾರಂಭವಾದುದರಿಂದ ಅವಳ ರೋಗ ಬೇಗ ವಾಸಿಯಾಗುತ್ತದೆ.

ಸರಳವಾಗಿ ಸಮಸ್ಯೆಯನ್ನು ಬಿಡಿಸಿ ನಡೆಸಿರುವ ಕತೆ, ಕತೆಗೆ ನೆರವಾಗಿರುವ ಸಮರ್ಪಕ ಪಾತ್ರಗಳ ಸೃಷ್ಟಿ, ಓದುಗರ ಕುತೂಹಲವನ್ನು ಎಲ್ಲಿಯೂ ಕೆಡಿಸದ ಹಾಗೆ

ಕೂಡಿರುವ ಸಂದರ್ಭಗಳು ಮತ್ತು ಅವುಗಳ ಔಚಿತ್ಯ, ಇವು ಕಾದಂಬರಿಯ ಕೆಲವು ಸರ್ವಾದರಣೀಯವಾದ ಅಂಶಗಳು. ಎಲ್ಲಕ್ಕೂ ಮಿಗಿಲಾಗಿ ತ್ರಿವೇಣಿಯವರ ಸುಂದರ ಶೈಲಿ ಎಲ್ಲರ ಮೆಚ್ಚುಗೆಗೆ ಪಾತ್ರವಾಗದೆ ಇರದು.

ತ್ರಿವೇಣಿಯವರ ಗದ್ಯಶೈಲಿ ಅವರ ಕಾದಂಬರಿಯ ವಿಶಿಷ್ಟ ಲಕ್ಷಣ. ಶೈಲಿ ಚೊಕ್ಕವೂ ಹೌದು, ಸಮರ್ಪಕವೂ ಹೌದು. ಸುಶಿಕ್ಷಿತರು ಉಪಯೋಗಿಸಬಹುದಾದ ಸಾಮಾನ್ಯ ಭಾಷೆ ಇಲ್ಲಿದೆ. ಬರವಣಿಗೆಗೋಸ್ಕರ ಉದ್ದಾಮವಾಗಿಸುವ ಪ್ರಯತ್ನ ಎಲ್ಲೂ ಕಂಡುಬರುವುದಿಲ್ಲ. ಗಾದೆಗಳು, ಉಪಮೆಗಳು ಸಂದರ್ಭೋಚಿತವಾಗಿ, ಸ್ವಾರಸ್ಯವಾಗಿ, ಅರ್ಥಪೂರ್ಣವಾಗಿ ಕಾದಂಬರಿಯ ಭಾಷೆಯಲ್ಲಿ ಹಾಸುಹೊಕ್ಕಾಗಿ ಸೇರಿವೆ. ಕನ್ನಡದಲ್ಲಿ ತ್ರಿವೇಣಿಯರದು ಒಂದು ಅಮೂಲ್ಯವಾದ ಶೈಲಿ.

ಕಾದಂಬರಿ ಓದಿ ಮುಗಿಸಿದಮೇಲೆ ವಿಮರ್ಶೆಯ ಕಣ್ಣಿಗೆ ಕೆಲವು ದೋಷಗಳು ಕಾಣಬಹುದು. ಆ ಕಾರಣದಿಂದ ಈ ಕಾದಂಬರಿಯ ಬೆಲೆ ಇಳಿಯುವುದಿಲ್ಲ. ನಮಗೆ ಬಹಳ ಮುಖ್ಯವಾದುದೆಂದೆನಿಸುವ ಒಂದು ದೋಷವನ್ನು ಕುರಿತು ವಿಚಾರ ಮಾಡಬಹುದು. ಈ ಕಾದಂಬರಿಯ ರಚನೆಯಲ್ಲಿ ಲೇಖಕಿಯರ ಉದ್ದೇಶ ಸ್ವಲ್ಪ ಅತಿಯಾಗಿ ಪ್ರವೇಶಮಾಡಿದೆ. ಮನಶ್ಶಾಸ್ತ್ರದ ಒಂದು ಸಮಸ್ಯೆ ಆಧಾರವಾಗಿ ಕಾದಂಬರಿ ಕಟ್ಟಿರುವುದು ಸರಿ. ಕಾದಂಬರಿಯ ಕೊನೆಯ ಭಾಗ—ಕುಸುಮಳ ಮನೋವಿಕಾರ ದೂರವಾಗಿ ಮತ್ತೆ ಮೊದಲಿನ ಕುಸುಮಳಾಗುವುದು—ಸ್ವಲ್ಪ ಕೃತಕವಾದ ಹಾಗೆ ಕಾಣುತ್ತದೆ. ಮನೋವಿಕಾರ ಬಲಿಯುವ ಮುನ್ನ ಕುಸುಮಳನ್ನು ಹುಚ್ಚಾಸ್ಪತ್ರೆಗೆ ಸೇರಿಸಿದುದರಿಂದ ಅವಳ ರೋಗ ವಾಸಿಯಾಗಲೇಬೇಕೇನೊ? ಅದು ರಾಜನ ನಂಬಿಕೆ; ಅಲ್ಲದೆ ಹಾಗಾಗುವುದೂ ಸಹಜ, ಕಾದಂಬರಿಯಲ್ಲಿ ಬೇರೆ ಬಗೆಯಾಗಿದ್ದರೆ ಕಾದಂಬರಿಯ ಬೆಲೆ ಹೆಚ್ಚಾಗುತ್ತಿತ್ತೆಂದು ನಮ್ಮ ಅಭಿಪ್ರಾಯ.

ವಿ. ವಿ.

***

ಅವ್ಯಕ್ತ ಮಾನವ (ಮದ್ರಾಸು ವಿಶ್ವವಿದ್ಯಾನಿಲಯದ ಪ್ರಕಟನೆ)—ರಾಯಲ್ ೧/೮; ಪುಟಗಳು ೧೫೬+೧೬+೧೦; ಬೆಲೆ, ರೂ. ೬-೦-೦.

ಮನುಷ್ಯ ಹಕ್ಕಿಯಂತೆ ಆಕಾಶದಲ್ಲಿ ಹಾರುವುದನ್ನು ಕಂಡುಕೊಂಡ, ಮೀನಿನಂತೆ ನೀರಿನಲ್ಲಿ ಮುಳುಗಿರುವುದನ್ನು ಸಾಧಿಸಿದ, ದೂರದ ಅಂತರವಿಲ್ಲದೆ ಧ್ವನಿಕೇಳಲೂ ರೂಪುನೋಡಲೂ ಸಾಧನ ಸಂಪಾದಿಸಿದ, ಆಕಾಶದ ಗ್ರಹಗಳ ತಾರೆಗಳ ದೂರವನ್ನಳೆದು ಗಾತ್ರವನ್ನು ತೂಗಲು ಕಲಿತ, ಅಷ್ಟೇ ಅಲ್ಲ ಜಗತ್ತನ್ನೇ ಧ್ವಂಸಮಾಡಲು ಶಕ್ತಿಗಳಿಸಿದ, ಜೊತೆಗೆ ಸೌರ್ಯವ್ಯೂಹದ ಮಿಕ್ಕ ಗ್ರಹಗಳನ್ನೂ ಎಟಗಿಸಲು ಪ್ರಯತ್ನ ನಡಸು

ತ್ತಿದ್ದಾನೆ. ಹೀಗೆ ಸೃಷ್ಟಿಯ ಗುಟ್ಟನ್ನೂ ರಟ್ಟುಮಾಡಿ ತಾನು ಅಜೇಯನೆಂದು ಮೆರೆಯು ತ್ತಿರುವ ಈ ಸಾಹಸಿ ತನ್ನನ್ನೂ ತಾನೇ ಅರಿಯನೆಂದರೆ ಆಶ್ಚರ್ಯವಲ್ಲವೆ! ಹೌದು ; ಆ ವಿಷಯವನ್ನೇ ಈ 'ಅವ್ಯಕ್ತಮಾನವ' ಗ್ರಂಥದಲ್ಲಿ ವಿಚಾರಮಾಡಿದೆ.

ಈ 'ಅವ್ಯಕ್ತಮಾನವ' ಡಾ|| ಅಲೆಕ್ಸಿಸ್ ಕಾರೆಲ್ ಅವರ Man The Unknown ಎಂಬ ಕೃತಿಯ ಕನ್ನಡ ಅನುವಾದ. ಡಾ|| ಕಾರೆಲ್ ಅವರು ಅಮೆರಿಕದ ರಾಕ್‌ಫೆಲರ್ ವೈದ್ಯ ಸಂಶೋಧನಾಸಂಸ್ಥೆಯ ಸಂಶೋಧಕರೊಬ್ಬರಾಗಿದ್ದರು. ಇವರೊಬ್ಬ ಪ್ರಸಿದ್ಧ ವಿಜ್ಞಾನಿಯಾಗಿದ್ದುದರ ಜೊತೆಗೆ ಮಾನವ ವ್ಯಕ್ತಿಗಳನ್ನೂ ಅಧ್ಯಯನಮಾಡಿ ತಿಳಿದುಕೊಂಡಿದ್ದರು. ಮಾನವ ಎಲ್ಲ ಕಾಲದೇಶಗಳ ಅನುಭವ ಮತ್ತು ಅಧ್ಯಯನದ ಮೊತ್ತವೆಂಬುದು ಅವರ ಅಭಿಪ್ರಾಯ. ಅವರು ಹೇಳಿರುವುದೆಲ್ಲ ತಾವೇ ಸ್ವತಃ ಕಂಡದ್ದು ಇಲ್ಲವೆ ತಿಳಿದವರಿಂದ ಅರಿತುದು. ಮಾನವನ ಎಲ್ಲ ಬಗೆಯ ಎಲ್ಲ ಅಂತಸ್ತಿನ ಜೀವನದ ಪರಿಚಯ ಚನ್ನಾಗಿ ಬಲ್ಲವರು. ಸಾಧುಸಂತರ ಜ್ಞಾನಿಗಳ ಕಲಾ ವಂತರ ಕವಿಗಳ ಮತ್ತು ವಿಜ್ಞಾನಿಗಳ ಸಹವಾಸ ಪಡೆದವರು. ಅಮೆರಿಕ ಮತ್ತು ಯೂರೋಪು ದೇಶಗಳ ಜೀವನವನ್ನರಿತವರು. ಪ್ರಸಿದ್ಧ ವಿಜ್ಞಾನಿಗಳ ಸಂಶೋಧನೆ. ಪರಿಶ್ರಮ ಮತ್ತು ಸಾಧನೆಯ ಅಪಾರಜ್ಞಾನದ ಪ್ರಯೋಜನ ಪಡೆದವರು. ಈ ಎಲ್ಲ ಜ್ಞಾನಸಂಪಾದನೆಗೆ ಅನುಕೂಲವಾದ ಈ ಆಧುನಿಕ ಸಲಕರಣೆಗಳ ಪ್ರಯೋಜನವನ್ನೂ ಅರಿತವರು. ಇಂತಹವರು ಆ ಅನುಭವದ ಸಾರವನ್ನು ಈ ಗ್ರಂಥದಲ್ಲಿ ಒದಗಿಸಿದ್ದಾರೆ.

ಜಡವಸ್ತುಗಳ ವಿಷಯದಲ್ಲಿ ವಿಜ್ಞಾನಸದೃಷ್ಟಿ ಯಾವ ಪ್ರಗತಿಯನ್ನು ಸಾಧಿ ಸಿದೆಯೊ ಅದೇ ಪ್ರಮಾಣದಲ್ಲಿ ಜೀವ ವಿಜ್ಞಾನಸದೃಷ್ಟಿ ಬೆಳೆದಿಲ್ಲ. ಇದಕ್ಕೆ ಕಾರಣ ಹಲವು. ತಾನು ಬದುಕಿದ್ದ ಸನ್ನಿವೇಶದಲ್ಲಿ ನಮ್ಮ ಪೂರ್ವಿಕ ಆಹಾರ ಸಂಪಾದಿಸುವುದಕ್ಕೇ ಕಡುಕಷ್ಟ ಪಡಬೇಕಾಗಿತ್ತು. ಆ ಸಮಸ್ಯೆ ಕೊಂಚಮಟ್ಟಿಗೆ ಬಗೆಹರಿದು ಕಷ್ಟ ಕಡಮೆ ಯಾಗಿ ಕಾಲ ಮಿಗುವಂತಾದಾಗ ತನ್ನ ಸುತ್ತಮುತ್ತಲು ಆಶ್ಚರ್ಯಕರವಾಗಿದ್ದ ಸೂರ್ಯ ಚಂದ್ರ ನಕ್ಷತ್ರ ಮೊದಲಾದುವುಗಳ ಕಡೆ ಅವನ ಕುತೂಹಲ ಕೆರಳಿತು. ಆ ಕುತೂಹಲ ತೃಪ್ತಿಗಾಗಿ ಅನ್ವೇಷಣೆ ನಡೆಯಿತು. ವಿಶ್ವದ ಕೇಂದ್ರವೆಂದು ನಂಬ ಲಾಗಿದ್ದ ಭೂಮಿಯನ್ನು ಈ ಸೌರವ್ಯೂಹದ ಸಾಮಾನ್ಯ ಗ್ರಹವೊಂದು ಎಂದು ಗ್ಯಾಲಿಲಿಯೊ ಸ್ಥಾಪಿಸಿದಾಗ ದೇಹಶಾಸ್ತ್ರದ ವಿಷಯ ಗೊತ್ತೇಯಿರಲಿಲ್ಲ. ದೇಹ ಶಾಸ್ತ್ರದ ಅಧ್ಯಯನ ಪ್ರಾರಂಭವಾದಮೇಲೂ ದೇಹವೊಂದು ಯಂತ್ರವೆಂಬಂತೆ ಅದರ ನಾನಾ ಅಂಗಗಳ ರಚನೆಯ ಪರಿಶೋಧನೆ ನಡೆಯಿತೇ ಹೊರತು ಆ ದೇಹದಲ್ಲಿ ಮನೆ ಮಾಡಿ ಅದನ್ನು ಬೆಳಗುತ್ತಿರುವ 'ಜೀವ' ಜ್ಯೋತಿಯ ವಿಷಯ ಯೋಚಿಸಲು ಸರಿಯಾದ ದಾರಿ ಹಿಡಿಯಲಾಗಲಿಲ್ಲ. ಮಾನವಜೀವ ಅವಿಭಾಜ್ಯವಾದ ರಚನೆ. ಆ

ಪ್ರಶ್ನೆ ತುಂಬ ಜಟಿಲವಾದುದು. ಜೀವಶಾಸ್ತ್ರಾಧ್ಯಯನಕ್ಕೆ ಬೇಕಾದ ಸಲಕರಣೆಗಳೂ ಅಪಾರ.

ಮಾನವನಿಗೆ ಸಂಬಂಧಪಟ್ಟ ಶರೀರಶಾಸ್ತ್ರ, ರಸಾಯನಶಾಸ್ತ್ರ, ಮನಃಶಾಸ್ತ್ರ, ಶಿಕ್ಷಣಶಾಸ್ತ್ರ, ಸಮಾಜಶಾಸ್ತ್ರ, ಅರ್ಥಶಾಸ್ತ್ರ, ತತ್ತ್ವಶಾಸ್ತ್ರ, ಆಧ್ಯಾತ್ಮವಾದ, ಇವೆಲ್ಲವನ್ನು ಆಯಾಯ ಶಾಸ್ತ್ರಜ್ಞರು ಮಾನವನನ್ನು ಖಂಡಖಂಡವಾಗಿ ಮಾಡಿ ಬೇರೆಬೇರೆಯಾಗಿ ಅವರವರ ದಾರಿಯಲ್ಲಿ ಅಧ್ಯಯನಮಾಡಿದ್ದಾರೆ; ಪರಿಶೋಧನೆ ನಡೆಸಿದ್ದಾರೆ. ಆದರೆ ಮಾನವನ ಶರೀರವನ್ನೂ ಅವನ ಮನಸ್ಸನ್ನೂ ಅವನಿಗೆ ಸಂಬಂಧಪಟ್ಟ ಇತರ ವಿಷಯಗಳನ್ನೂ ಅವನಿಗೂ ಸನ್ನಿವೇಶಕ್ಕೂ ಇರುವ ಸಾಮರಸ್ಯವನ್ನೂ ಏಕಕಾಲದಲ್ಲಿ ಅಖಂಡವಾಗಿ ತುಲನೆಮಾಡಿ ಅಭ್ಯಾಸಿಸಿ ಜೀವದ ಮಹತ್ತ್ವನ್ನು ಕಂಡುಹಿಡಿಯುವ ಮಾರ್ಗವನ್ನು ಯಾರೂ ಕಂಡುಹಿಡಿಯಲಿಲ್ಲ. ಬೇರೆಬೇರೆಯಾಗಿ ಸಂಗ್ರಹಿಸಿದ ವಿಷಯಗಳನ್ನಾದರೂ ಕ್ರೋಢೀಕರಿಸಿ ಸಮಂಜಸವಾಗಿ ಜೋಡಿಸಿಕೊಂಡು ಜೀವದ ನಿಜಸ್ವರೂಪವನ್ನು ಕಾಣಲು ಯಾರೂ ಶಕ್ತರಾಗಲಿಲ್ಲ. ಅರಣ್ಯದಲ್ಲಿ ಹಾದಿ ಹುಡುಕುತ್ತ ಹೊರಟವನ ಸುತ್ತ ಅರಣ್ಯದ ಮರಗಿಡಗಳೆಲ್ಲ ಸಿಕ್ಕಾಬಟ್ಟೆ ಓಡಾಡುವಂತಾದರೆ ಹೇಗೋ ಹಾಗೆ ಜೀವವಿಜ್ಞಾನಿ ಈ ಪ್ರಶ್ನೆಯ ಮಧ್ಯೆ ದಿಗ್ಭ್ರಾಂತನಾಗಿದ್ದಾನೆ. ಆದರಿಂದ ಮಾನವನನ್ನು ಕುರಿತ ಅಜ್ಞಾನ ನಮ್ಮಲ್ಲಿ ಅಪಾರವಾಗಿದೆ.

ಈ ನಾಗರಿಕ ಮಾನವನ ಉತ್ಕೃಷ್ಟ ಬೆಳವಣಿಗೆಗೆ ಅನುಕೂಲವಾದ ಸನ್ನಿವೇಶವಾವುದು? ನಮ್ಮ ದೈಹಿಕ ಮತ್ತು ಮಾನಸಿಕ ರಚನೆಯಿಂದ ಹೋರಾಟ, ಪ್ರಯಾಸ ಮತ್ತು ಸಂಕಟಗಳನ್ನು ಕಡಮೆಮಾಡಲು ಸಾಧ್ಯವೆ? ಈ ಕೃತಕ ಜೀವನದಲ್ಲಿ ಪತನ ಹೊಂದುತ್ತಿರುವ ಮಾನವನು ಉಳಿಯುವುದೆಂತು? ಹೀಗೆ ನಮ್ಮ ಉದ್ಧಾರಕ್ಕೆ ಸಂಬಂಧಪಟ್ಟ ಹಲವು ಪ್ರಶ್ನೆಗಳಿವೆ. ಆದರೆ ಈಗ ಸಂಗ್ರಹಿಸಲಾಗಿರುವ ವಿಜ್ಞಾನ ಜ್ಞಾನ ಈ ಪ್ರಶ್ನೆಗಳಿಗೆ ಉತ್ತರ ಕೊಡಲು ಏನೇನೂ ಸಾಲದು.

ವಿಜ್ಞಾನ ಎಂದೂ ಮಾನವತೆಯ ಪ್ರಗತಿಗೆ ಪ್ರಯೋಗಿಸಲ್ಪಟ್ಟಿಲ್ಲ. ವಿಜ್ಞಾನಿ ತನ್ನ ಕುತೂಹಲವನ್ನು ಸಮಾಧಾನಗೊಳಿಸಿಕೊಳ್ಳಲೂ ತನ್ನ ಕಲ್ಪನೆಯನ್ನು ಸಾಧಿಸಿ ಆಶ್ಚರ್ಯವನ್ನುಂಟುಮಾಡಲೂ ಪ್ರಯತ್ನಿಸಿದ. ಅದರಲ್ಲಿ ಅವನು ಜಯಶೀಲನಾಗಿರಬಹುದು. ಅದರಿಂದಲೇ ಈಗಿನ ಸನ್ನಿವೇಶ ಸೃಷ್ಟಿಯಾಗಿದೆ. ನಾವೀಗ ಯಂತ್ರಯುಗದ ಮಧ್ಯದಲ್ಲಿದ್ದೇವೆ. ಕಠಿಣವಾದ ಶಿಸ್ತು ಸಂಯಮಗಳೆಲ್ಲ ಕಡಿಮೆಯಾಗಿವೆ. ವಿಶಾಲವಾಗಿ ಬೆಳೆದ ಪಟ್ಟಣಗಳಲ್ಲಿ ಅಂತರಿಕ್ಷಕ್ಕೆ ಮುಟ್ಟುವ ಸೌಧಗಳಲ್ಲಿ ವಾಸಿಸುತ್ತೇವೆ. ಶರೀರ ಶ್ರಮವನ್ನು ಕಡಮೆ ಮಾಡಿಕೊಳ್ಳಲು ಒಂದು ಕಡೆ ಬೇಕಾದ ಯಂತ್ರಸಾಮಗ್ರಿಗಳನ್ನು ಪಡದಿದ್ದೇವೆ. ಶ್ರಮವಿಲ್ಲದೆ ದೇಹಬಲ ಕಡಿಮೆಯಾದೀತೆಂದು

ಒಂದು ಕಡೆ ಟೆನ್ನಿಸ್, ಕ್ರಿಕೆಟ್ ಮೊದಲಾದ ವ್ಯಾಯಾಮದಲ್ಲಿ ತೊಡಗುತ್ತೇವೆ. ಆದರೂ ಶ್ರಮಜೀವಿಗಳ ಶಕ್ತಿ ನಮಗಿಲ್ಲ. ಸಮಾಜಸೇವಕರೆಂಬುವವರೇ, ಆಡಳಿತ ಸೂತ್ರ ಹಿಡಿದವರೇ, ನೈತಿಕಪತನದ ಕೆಲಸದಲ್ಲಿ ತೊಳಲುತ್ತಿದ್ದಾರೆ. ಇನ್ನು ಅವರ ಅನುಯಾಯಿಗಳ ಮಾತೇನು? ಮಾನವ ತಾನು ಸೃಷ್ಟಿಸಿದ ಪ್ರಪಂಚಕ್ಕೇ ಅಪರಿಚಿತನಾಗಿದ್ದಾನೆ. ಮಾನವತೆಗೆ ಅನುಕೂಲವಾಗಿ ಈ ಪ್ರಪಂಚವನ್ನು ವ್ಯವಸ್ಥೆಗೊಳಿಸಲು ಅವನು ಅಶಕ್ತನಾಗಿದ್ದಾನೆ. ಜೀವನ ಕೃತಕವಾಗಿ ಅವನು ಸುಖಿಯಾಗಿಲ್ಲ. ಶಾಂತಿ ಪಡೆದಿಲ್ಲ. ಇದು ಅವನ ಪತನವಲ್ಲದೆ ಮತ್ತೇನು? ಹೀಗೆಲ್ಲ ಆಗಲು ಕಾರಣ ತಾನೆ ಏನು ಎಂಬುದು ಅವನಿಗೇ ಗೊತ್ತಿಲ್ಲ.

ಭೌತ, ರಸಾಯನ, ಖಗೋಳ, ಮೊದಲಾದ ಶಾಸ್ತ್ರಗಳು ತಮಗೆ ಸಲ್ಲಬೇಕಾದುದಕ್ಕಿಂತಲೂ ಹೆಚ್ಚು ಗೌರವವನ್ನೂ ಆಸಕ್ತಿಯನ್ನೂ ಮಾನವನಿಂದ ಪಡೆದಿವೆ. ಇದರಿಂದ ಹಾನಿಯಾಗಿಲ್ಲವಾದರೂ ನಮ್ಮ ಮನಸ್ಸನ್ನೂ ಮರುಳುಮಾಡಿ ನಮ್ಮನ್ನು ನಾವೇ ಮರೆಯುವಂತೆ ಮಾಡಿವೆ. ಈ ಶಾಸ್ತ್ರಗಳೆಲ್ಲ ನಮ್ಮ ಬೌದ್ಧಿಕ, ನೈತಿಕ, ಆರೋಗ್ಯ, ನರನಾಡಿ ರಕ್ಷಣೆ ಈ ಶಕ್ತಿಗಳನ್ನಾಗಲಿ ಮನಶ್ಶಾಂತಿಯನ್ನಾಗಲಿ ಉಂಟುಮಾಡಿಲ್ಲವೆಂಬುದು ನಿರ್ವಿವಾದವಾದುದು.

ಮಾನವ ವಿಜ್ಞಾನದ ನಿರ್ಮಾಣವು ಇನ್ನು ನಡೆಯಲಿರುವ ಮಹತ್ಕಾರ್ಯ. ದೇಹದ ನರನಾಡಿಗಳ ಗ್ರಂಥಿಗಳ ಮೆದುಳ ಪಂಚೇಂದ್ರಿಯಗಳ ಮತ್ತಿತರ ಅಂಗಗಳ ರಚನೆ, ಅವುಗಳು ಯಾವ ಯಾವ ಸನ್ನಿವೇಶದಲ್ಲಿ ಹೇಗೆ ಹೇಗೆ ಕೆಲಸಮಾಡುತ್ತವೆ, ಅವುಗಳ ಕೆಲಸಕಾರ್ಯಗಳಿಂದ ಮನಸ್ಸಿನ ಮೇಲೆ ಆಗುವ ಪರಿಣಾಮವೇನು? ಬೇರೆ ಬೇರೆ ಸಂದರ್ಭದಲ್ಲಿ ಮನಸ್ಸಿನ ಸ್ಥಿತಿಗತಿಯೇನು? ಈ ಬಗೆಯ ಸಾಮರಸ್ಯ ಯೋಚನೆ ಬೇಕು. ಅದು ಬಿಟ್ಟು ದೇಹ ಒಂದು ಯಂತ್ರದಂತೆ ಅಂದರೆ ತಪ್ಪಾಗುತ್ತದೆ. ಯಂತ್ರದಲ್ಲಿ ಬೇರೆಬೇರೆಯಾಗಬಲ್ಲ ಭಾಗಗಳನ್ನು ಒಂದು ವ್ಯವಸ್ಥೆಯಿಂದ ಜೋಡಿಸಲಾಗಿದೆ. ಅದನ್ನು ನಡಸುವವನು ಯಂತ್ರದಿಂದ ಬೇರೆಯಾದವನೊಬ್ಬ. ಅದರೆ ಮಾನವನ ಉದ್ಭವ ಒಂದು ಸೂಕ್ಷ್ಮ ಜೀವಕಣದಿಂದ ಪ್ರಾರಂಭವಾಗಿ ಅದು ದ್ವಿಗುಣ ದ್ವಿಗುಣವಾಗುತ್ತ ವ್ಯವಸ್ಥಿತವಾಗಿ ಬೆಳೆದು ದೇಹರೂಪಕ್ಕೆ ಬರುತ್ತದೆ. ಮತ್ತು ಅದನ್ನು ನಡಸುವ ಜೀವಶಕ್ತಿ ದೇಹದ ಪ್ರತಿಯೊಂದು ಕಣದಲ್ಲೂ ಅಡಗಿದೆ. ಪ್ರತಿಯೊಂದು ಕಣವೂ ಗೂಡಿನಲ್ಲಿ ಜೇನಿನಂತೆ ತನ್ನ ಕೆಲಸವನ್ನು ಸಮರ್ಪಕವಾಗಿ ನಿರ್ವಹಿಸುತ್ತ ದೇಹವ್ಯಾಪಾರಕಾರ್ಯಕ್ಕೆ ಕಾರಣವಾಗಿದೆ. ಈ ರಹಸ್ಯ ಗಹನವಾದುದು; ಇದುವರೆಗೆ ಯಾರೂ ಇದನ್ನು ಸಮರ್ಪಕವಾಗಿ ಭೇದಿಸಿಲ್ಲ. ಹೀಗಿರುವಾಗ ನಾವು ದೇಹವೊಂದರ ರಕ್ಷಣೆ ಮಾಡುತ್ತೇವೆಂದು ಮನಸ್ಸಿನ ಬೆಳವಣಿಗೆಯನ್ನು

ಉಪೇಕ್ಷಿಸಿದ್ದೇವೆ. ದೇಹವೆಷ್ಟೇ ಬೆಳೆದರೂ, ಎಷ್ಟೇ ಬಲವಾದ ಕೋಟೆಯಿದ್ದರೂ ಅಂತರಿಕ್ಷದಿಂದಾಗುವ ವಿಮಾನಧಾಳಿಯಿಂದ ಪಟ್ಟಣವನ್ನು ಹೇಗೆ ರಕ್ಷಿಸಲಾರದೊ ಹಾಗೆ, ನಮ್ಮ ಮಾನಸಿಕ ವೇದನೆಗಳನ್ನು ತಡೆಯಲಾರದು. ಅದರಿಂದ ದೇಹ ಮನಸ್ಸೆರಡೂ ಒಟ್ಟಿಗೆ ಬೆಳೆಯುವಂತೆ ನೋಡಿಕೊಳ್ಳಬೇಕು.

ಮಾನವನ ವಿಷಯದ ಜಿಜ್ಞಾಸೆ ಪ್ರಾರಂಭವಾದಾಗಿನಿಂದಲೂ ದೇಹವನ್ನು ಆತ್ಮದಿಂದಲೂ ಆತ್ಮವನ್ನು ದೇಹದಿಂದಲೂ ಬೇರ್ಪಡಿಸಿ ಜಿಜ್ಞಾಸೆ ನಡೆಸುತ್ತಿದ್ದೇವೆ. ಆದರೆ ನಾವು ಇವೆರಡನ್ನೂ ಅಖಂಡವೆಂದು ಪರಿಗಣಿಸುವುದು ಹಿತಕರ. ಮನಸ್ಸಿನ ವ್ಯಾಪಾರಗಳಿಂದ ದೇಹದ ಮೇಲೆ ಪರಿಣಾಮವಾಗುವುದು ನಿರ್ವಿವಾದ. ಕೋಪ ತಾಪಗಳಲ್ಲಿ ದೇಹದ ಸ್ಥಿತಿ ಎಲ್ಲರ ಅನುಭವಕ್ಕೂ ನಿಲುಕುವಂತಹದು. ಆಂತರಿಕ ಭಾವನೆಗೆ ಸಂಬಂಧವಿರುವ ಪ್ರಾರ್ಥನೆಯ ಉದಾಹರಣೆ; ಭಕ್ತಿಯಿಂದ ತಲ್ಲೀನವಾಗಿ ನಡಸಿದ ಪ್ರಾರ್ಥನೆಯಿಂದ ಒದಗುವ ಆನಂದದ ಅನುಭವವನ್ನು ಈಗಿನ ವಿಜ್ಞಾನ ನಂಬುವುದಿಲ್ಲ. ಆದರೂ ಅದಲ್ಲಿದೆ.

ನಮ್ಮ ಬೌದ್ಧಿಕ ವ್ಯಾಪಾರಗಳ ಪ್ರಗತಿಗೆ ಪೋಷಕವಾಗುವಂತಹ ಆವರಣವನ್ನು ನಮ್ಮ ಸಮಾಜವು ನಿರ್ಮಿಸಿದೆಯೆ? ನೈತಿಕ ಜೀವನಕ್ಕೆ ನಾವು ಕೊಡುವ ಸ್ಥಾನ ಯಾವುದು? ಜನಜೀವನಕ್ಕೆ ಕಾರಣರಾದವರೆಷ್ಟುಮಂದಿ ಬಡತನದಲ್ಲಿ ಬದುಕಿ ಕಷ್ಟದೆಸೆಯಲ್ಲಿ ಸಾಯುತ್ತಾರೆ, ದರೋಡೆಕಾರರು ಪ್ರಬುದ್ಧಮಾನರಾಗಿ ಸುಖದಿಂದ ಬಾಳುತ್ತಾರೆ! ಪಾತಕಿಗಳೂ ಕಳ್ಳರೂ ಶೋಷಣಕಾರರೂ ರಾಜಕಾರಣಿಗಳಿಂದ ರಕ್ಷಿತರಾಗಿ ನ್ಯಾಯಾಧಿಕಾರಿಗಳಿಂದ ಮರ್ಯಾದಿತರಾಗಿರುವುದಿಲ್ಲವೆ? ಇಂತಹ ಹಣವೇ ಆಧಾರವಾದ ಹೊಡೆತದಿಂದ ಮಾನವ ಬಳಲಿದ್ದಾನೆ. ಸಜ್ಜನ ಹತ್ತರೊಡನೆ ಹನ್ನೊಂದನೆಯವನಾಗಿ ಬಾಳಬೇಕಾಗಿದೆ.

ಮನುಷ್ಯ ತನ್ನ ಸಮಾಜ ಸನ್ನಿವೇಶಕ್ಕೆ ಹೊಂದಿಕೊಂಡುಬಿಡುತ್ತಾನೆ. ಸುಖ ಸಂತೋಷಗಳನ್ನೂ ಸಂಪತ್ತು ಸೌಲಭ್ಯಗಳನ್ನೂ ಬಯಸುತ್ತಾನೆ. ಅವುಗಳನ್ನು ಸಂಪಾದಿಸಲು ಸಾಹಸ ತೋರುತ್ತಾನೆ. ಈ ಸಾಹಸಪ್ರವೃತ್ತಿ ಮಹಾಕಾರ್ಯಗಳನ್ನು ಮಾಡಲೂ ಸ್ಫೂರ್ತಿ ತರುವುದುಂಟು. ಆ ಬಗೆಯ ಫ್ಯಾಷನ್ ಪಾಶ್ಚರನು ರೋಗ ನಿವಾರಣಾಕಾರ್ಯದಲ್ಲಿ ಕ್ರಾಂತಿಯನ್ನುಂಟುಮಾಡುವಂತೆ ಮಾಡಿತು, ಮುಸಲೋನಿಯು ಹೊಸ ಜನಾಂಗವನ್ನು ಕಟ್ಟುವಂತೆ ಮಾಡಿತು, ಐನ್‌ಸ್ಟೀನನು ಹೊಸ ವಿಶ್ವ ದೃಷ್ಟಿಯನ್ನು ಕಾಣುವಂತೆ ಮಾಡಿತು. ಅದೇ ಬಗೆಯ ಭಾವನೆ ಜನರನ್ನು ಕೊಳ್ಳೆ ಹೊಡೆಯಲೂ ಕೊಲೆಮಾಡಲೂ ಪ್ರೇರೇಪಿಸಬಹುದು. ಮತ್ತೆ ಅದೇ ಭಾವನೆ ಗುಡಿ ಗೋಪುರಗಳನ್ನೂ ವಿಶ್ವವಿದ್ಯಾಲಯಗಳನ್ನೂ ಸ್ಥಾಪಿಸುವಂತೆ ಮಾಡಬಹುದು. ಹೀಗೆ

ಈ ಬಗೆಯ ಸಾಹಸಭಾವನೆ ಜನರಿಗೆ ಅನುಕೂಲವಾದ ಅಥವಾ ಅನನುಕೂಲವಾದ ಕೆಲಸಗಳಿಗೆ ಪ್ರೇರಿಸಬಹುದು. ಆದರೆ ಅದೆಂದೂ ಸುಖಶಾಂತಿಯನ್ನು ತರಲಾರದು.

ಈಗ ಮಾನವತೆಗೊದಗಿರುವ ಕಷ್ಟದೆಸೆ ಗಂಡಾಂತರ ಮಾನವನಿಗೆ ಅರಿವಾಗಿರುವುದರಿಂದಲೇ ಅವನು ಇಷ್ಟು ನಿಷ್ಠುರವನ್ನು ತನ್ನ ಮೇಲೆಯೇ ಪ್ರದರ್ಶಿಸುತ್ತಿದ್ದಾನೆ. ಯಕ್ಷ ಪ್ರಶ್ನೆ ಅವನನ್ನು ಕಾಡುತ್ತಿರಬೇಕು. ಇದರಿಂದ ಪಾರಾಗಬೇಕಾಗಿದ್ದರೆ ಮಾನವನ ಯೋಚನಾರೀತಿ ಬದಲಾಗದ ಹೊರತು ಸಾಧ್ಯವಿಲ್ಲ. ಮಾನವನು ಪುನರುದ್ಧಾರವಾಗಬೇಕಾಗಿದ್ದರೆ ಆಧುನಿಕ ಸಮಾಜವು ಅತಿಜಾಣತನದ ದೋಷದಿಂದ ತಪ್ಪಿಸಿಕೊಳ್ಳಬೇಕು.

ಗೆಲಿಲಿಯೊ ಕಾಲದಿಂದಲೂ ಪರಿಮಾಣಾತ್ಮಕವಾದುದನ್ನು ಗುಣಾತ್ಮಕವಾದುದರಿಂದ ಬೇರ್ಪಡಿಸಿ ನೋಡಲಾಗುತ್ತಿದೆ. ವಿಜ್ಞಾನಿಗಳಲ್ಲಿ ಬಹುಮಂದಿ ವಿಶ್ವದ ವಾಸ್ತವಿಕತೆಯನ್ನೇ ನಂಬಿ ಜಡವಸ್ತುವಿಗೆ ಪ್ರಾಮುಖ್ಯಸ್ಥಾನವನ್ನು ಕೊಟ್ಟು ಮನಸ್ಸು ಮತ್ತು ದೇಹದ ದ್ವೈದೀಭಾವವನ್ನು ಬೆಳಸಿಕೊಂಡು ಮನಸ್ಸಿಗೆ ಅಪ್ರಾಮುಖ್ಯತೆ ಕೊಟ್ಟುಕೊಂಡು ಬಂದರು. ಈಗ ಆ ಭಾವನೆಯನ್ನು ಬದಲಾಯಿಸಬೇಕೆಂದರೆ ಅವರ ಕೈಯಲ್ಲಾಗದು. ಏಕೆಂದರೆ, ಹಾಗಾದರೆ ಅವರು ನಂಬಿರುವ ಶಾಸ್ತ್ರಗಳು ಕಂಪನಗೊಂಡು ಶಿಥಿಲತೆಯುಂಟಾಗುತ್ತದೆ. ಇದುವರೆಗೂ ಅವರು ಸುಲಭವಾಗಿ ಬೆಳೆಸಿಕೊಂಡು ಬಂದಿರುವ ಅವರ ನಂಬಿಗೆಯ ಸುಂದರ ಪುಟ್ಟ ಹೂದೋಟ ಅವ್ಯವಸ್ಥಿತವಾದ ಕಾಡಾಗಿ ಪರಿಣಮಿಸುತ್ತದೆ. ಅದಕ್ಕಾಗಿಯೇ ಅವರೀಗ ತಮ್ಮ ದಾರಿಯನ್ನು ಸರಿಮಾಡಿಕೊಳ್ಳಲೂ ಹೆದರುತ್ತಿದ್ದಾರೆ. ಅದರಿಂದ ಅವರ ಅಳತೆಗೆ ಸಿಗದ ವಿಷಯಗಳನ್ನು ನಿರ್ಲಕ್ಷಿಸುತ್ತಾರೆ. ನ್ಯಾಯವಾಗಿ ಅದಕ್ಕೇ ಹೆಚ್ಚು ಮಹತ್ತು ಕೊಡಬೇಕಾಗಿತ್ತು. ಅದು ತಪ್ಪಿ ವಿಜ್ಞಾನ ದಿಗ್‌ದಿಗಂತದಲ್ಲಿ ಜಯಭೇರಿ ಹೊಡೆಯುವಂತಾದರೂ ಮಾನವನ ಅವನತಿಗೆ ಕಾರಣವಾಯಿತು. ಮನುಷ್ಯನ ಮನೋಭಾವನೆಯೂ ಅವನ ದೇಹದ ಉಷ್ಣ, ಚಲನಶಕ್ತಿ ಸಿದ್ಧಾಂತದಷ್ಟೇ ಮುಖ್ಯವೆಂದು ತಿಳಿದಿದ್ದರೆ ಸರಿಹೋಗುತ್ತಿತ್ತು. ಈಗಿನಂತಿಲ್ಲದೆ ಮಾನಸಿಕ ಕ್ರಿಯೆ ಶ್ರೇಷ್ಠಸ್ಥಾನ ಗಳಿಸಬೇಕಾಗಿದೆ. ನೀತಿ ಕಲೆ ಧರ್ಮ ಮೊದಲಾದವುಗಳ ಅಧ್ಯಯನವೂ ಗಣಿತ ಭೌತ ರಾಸಾಯನ ಶಾಸ್ತ್ರಾಧ್ಯಯನದಷ್ಟೇ ಅನಿವಾರ್ಯವಾಗಬೇಕು.

ಹೀಗೆ ಒಂದು ಭಾವನೆ ಬೆಳೆದು ಸಫಲತೆ ಕಾಣಬೇಕಾದರೆ ಜನರು ವಿಷಯಗಳನ್ನು ಕ್ರೋಢೀಕರಿಸಿ ಸಮರಸತೆಯಿಂದ ಕೂಲಂಕಷವಾಗಿ ಅಧ್ಯಯನ ನಡಸಬೇಕು. ಇದೇನು ಕೊಂಚಕಾಲದ ಸುಲಭಸಾಧ್ಯವಾದ ಕೆಲಸವಲ್ಲ. ಈ ಕಾರ್ಯದಲ್ಲಿ ಮಹಾಪುರುಷರ ತ್ಯಾಗ ಅನಿವಾರ್ಯ. ಮಾನವಶಾಸ್ತ್ರದ ಅಧ್ಯಯನಕ್ಕೆ ಅನುಕೂಲವಾದ

ಸಂಸ್ಥೆಗಳು ಹುಟ್ಟಿಕೊಳ್ಳಬೇಕು. ಈಗಾಗಲೆ ಪ್ಯಾರಿಸಿನಲ್ಲಿ ಸ್ಥಾಪಿತವಾಗಿರುವ 'ಪ್ಯಾಶ್ಚರ್ ಇನ್‌ಸ್ಟಿಟ್ಯೂಟ್' ಅಮೆರಿಕದಲ್ಲಿರುವ 'ರಾಕ್‌ಫೆಲರ್ ಇನ್‌ಸ್ಟಿಟ್ಯೂಟ್' ಮೊದಲಾದ ಸಂಸ್ಥೆಗಳು ಗೊತ್ತಾದ ಕಾರ್ಯವನ್ನು ಮಾಡುತ್ತಿರುವಂತೆ ಪ್ರಜಾತಂತ್ರ ರಾಷ್ಟ್ರಗಳಲ್ಲಿ ಖಾಸಗಿ ಸಾಹಸದಿಂದಲೇ ಇಂತಹ ಸಂಸ್ಥೆಗಳೂ ಸ್ಥಾಪಿತವಾಗಬೇಕಾಗಿದೆ. ಈ ಸಂಸ್ಥೆಗಳ ಚಾಲಕರು ರಾಜಕೀಯದ ಹೊಲಸಿನಿಂದ ದೂರವಿರಬೇಕು. ಇಲ್ಲದಿದ್ದರೆ ಮಹದುದ್ದೇಶ ಕೆಡುತ್ತದೆ. ಅಂತಹವರನ್ನು ಸಮಾಜ ಉತ್ಕೃಷ್ಟರೀತಿಯಲ್ಲಿ ಮರ್ಯಾದಿಸುವಂತಾಗಬೇಕು.

ಇಷ್ಟೆಲ್ಲ ಚಿಂತೆಗೊಂಡು ನಾವು ನಿರಾಶರಾಗಬೇಕಾಗಿಲ್ಲ. ನಾವು ನೈಸರ್ಗಿಕ ನಿಯಮಗಳನ್ನು ಮೀರಿ ನೀತಿಗೆಟ್ಟು ನಡೆದು ದಂಡಿತರಾಗಿ ಬುದ್ಧಿ ಕಲಿತಿದ್ದೇವೆ. ನಮ್ಮ ಮುಂದಿರುವ ಯಕ್ಷಪ್ರಶ್ನೆಯ ಅರಿವು ನಮಗುಂಟಾಗಿದೆ. ಇದುವರೆಗೆ ವಿಜ್ಞಾನ ಸಾಧಿಸಿರುವುದು ಅಲ್ಪವೇನಲ್ಲ. ಅದರ ಸಹಾಯ ನಮಗಿದೆ. ಇದುವರೆಗೆ ನಮಗೆ ಮನದಟ್ಟಾಗಿರುವಷ್ಟು ಮಾನವಶಾಸ್ತ್ರವೂ ಕೂಡ ನಮ್ಮನ್ನು ಗುರಿಯ ಕಡೆಗೆ ತಿರುಗಿಸಿದೆ. ಅದರಿಂದ ನಾವೀಗ ಎಚ್ಚತ್ತು ಮುಂದೆ ನಡೆಯೋಣ; ಕ್ರಾಂತಿಕಾರಿಯಾಗಿ ಮುಂದೆ ಮುಂದೆ ನುಗ್ಗೋಣ.

ಮಾನವನ ಇತಿಹಾಸದಲ್ಲಿ ಇದೇ ಮೊದಲನೆಯದು; ಪತನೋನ್ಮುಖವಾಗಿರುವ ನಾಗರಿಕತೆಗೆ ತನ್ನ ಪತನದ ಜ್ಞಾನ ಉಂಟಾಗಿರುವುದು. ಹಾಗೆಯೇ ಇದೇ ಮೊದಲ ಸಾರಿ ವಿಜ್ಞಾನದ ಅಪಾರಶಕ್ತಿಯ ಸಹಾಯ ದೊರಕಿರುವುದೂ. ಈ ಜ್ಞಾನವನ್ನೂ ಶಕ್ತಿಯನ್ನೂ ನಾವು ಉಪಯೋಗಿಸಿಕೊಳ್ಳಬೇಕು. ಗತಕಾಲದ ಹಿರಿಯ ನಾಗರಿಕತೆಗಳಿಗೊದಗಿದ ದುರದೃಷ್ಟದಂತಹ ಕೇಡಿನಿಂದ ತಪ್ಪಿಸಿಕೊಳ್ಳಲು ಇದೊಂದೇ ದಾರಿ. ನಮ್ಮ ಭವಿಷ್ಯ ನಿರ್ಮಾಣಕಾರ್ಯ ನಮ್ಮ ಕೈಯಲ್ಲಿದೆ. ಹೊಸಮಾರ್ಗ ಹಿಡಿದು ಮುಂದೆ ಮುಂದೆ ಸಾಗೋಣ.

ಹೀಗೆ ಈ 'ಅವ್ಯಕ್ತಮಾನವ'ದಲ್ಲಿ ಜಿಜ್ಞಾಸೆ ನಡೆದಿದೆ. ಜ್ಞಾತ (Known) ವಾದುದನ್ನು ವಿವರಿಸಿ ಅದನ್ನು ತೋರಿಕೆ (Plausible) ಯಿಂದ ಬೇರ್ಪಡಿಸಲು ಪ್ರಯತ್ನ ನಡೆದಿದೆ. ಜೊತೆಗೆ ಅಜ್ಞಾತ (Unknown) ವಾಗಿರುವುದರ ಮತ್ತು ಅಜ್ಞೇಯವಾದುದರ (Unknowable) ಇರುವಿಕೆಯನ್ನು ಮನಗಾಣಲಾಗಿದೆ. ಮಾನವನ ವಿಷಯದಲ್ಲಿ ಈ ವರೆಗೆ ಸಂಗ್ರಹವಾದ ಜ್ಞಾನವನ್ನು ಸಮರಸವಾಗಿ ಕ್ರೋಢೀಕರಿಸಿ ಸರಳವಾಗಿ ವಿವರಿಸಿ ಪರಿಚಯಮಾಡಿಕೊಡಲಾಗಿದೆ. ನಿಜವಾಗಿಯೂ ಈ ಗ್ರಂಥ ಮಾನವತೆಗೊದಗಿರುವ ಈ ಕಷ್ಟಕಾಲದಲ್ಲಿ ಕ್ರಾಂತಿಕಾರಕವಾದ ಒಂದು ಹೊಸ ದೃಷ್ಟಿಯನ್ನುಂಟುಮಾಡದಿರದು.

Man The Unknown ಗ್ರಂಥವನ್ನು ಕನ್ನಡಕ್ಕೆ ಅನುವಾದಿಸಿಕೊಟ್ಟು ಶ್ರೀ ಉ. ಲಕ್ಷ್ಮೀನಾರಾಯಣಾಚಾರ್ಯ ಮತ್ತು ಶ್ರೀ ಕು. ಶಿ. ಹರಿದಾಸಭಟ್ಟ ಈ ಮಹನೀಯರು ಕನ್ನಡಿಗರಿಗೆ ಉಪಕರಿಸಿದ್ದಾರೆ. ಇಂತಹ ಗಹನ ವಿಷಯವನ್ನು ಪರಿವರ್ತಿಸುವ ಕಾರ್ಯ ಸುಲಭವಾದುದಲ್ಲ. ಆದರೂ ಅನುವಾದಕರು ಆ ಕೆಲಸದಲ್ಲಿ ಬಹುಮಟ್ಟಿಗೆ ಯಶಸ್ವಿಯಾಗಿದ್ದಾರೆಂದು ಹೇಳಬಹುದು. ಭಾಷೆ ಸರಳವಾಗಿದ್ದರೂ ವಿಷಯದ ಘನತೆ ಗಾಂಭೀರ್ಯವನ್ನು ಉಳಿಸಿಕೊಂಡುಬಂದಿದೆ. ವಿವರಣೆಯ ರೀತಿ ಸೊಗಸಾಗಿದೆ. ಇಂತಹ ಗ್ರಂಥ ಈ ನುರಿತ ವಿದ್ವಾಂಸರಿಂದ ಸರಿಯಾದ ಭಾಷಾಂತರವಾಗಿದ್ದರೆ ಇನ್ನೂ ಚೆನ್ನಾಗಿರುತ್ತಿತ್ತೇನೊ ಅನಿಸುತ್ತದೆ.

ಇಂತಹ ಉಪಯುಕ್ತ ಕೃತಿಗಳನ್ನು ಕನ್ನಡದಲ್ಲಿ ಅಂದವಾಗಿ ಪ್ರಕಟಿಸುವ ಮಹತ್ಕಾರ್ಯವನ್ನು ಕೈಗೊಂಡು ಮದ್ರಾಸು ವಿಶ್ವವಿದ್ಯಾನಿಲಯ ಕನ್ನಡಿಗರ ಕೃತಜ್ಞತೆಗೆ ಪಾತ್ರವಾಗಿದೆ. ಅಷ್ಟೇ ಅಲ್ಲ, ಸ್ತುತ್ಯಕಾರ್ಯಮಾಡಿದಂತಾಗಿದೆ.

ಡಾ|| ಕಾರೆಲ್ ಪಾಶ್ಚಾತ್ಯ ಸಮಾಜಗಳನ್ನು ಕುರಿತು ಈ ಜಿಜ್ಞಾಸೆ ನಡಸಿದ್ದಾರೆ—ಆದರಿದು ಎಲ್ಲಾ ಸಮಾಜಗಳಿಗೂ ಅನ್ವಯಿಸುತ್ತದೆ. ಹೇಳುವುದುಂಟು—ಪಾಶ್ಚಾತ್ಯ ಸಮಾಜಗಳು ಭೌತವಾದಿ, ಪೌರ್ವಾತ್ಯ ಸಮಾಜಗಳು ಅಧ್ಯಾತ್ಮವಾದಿ, ಪಾಶ್ಚಾತ್ಯ ಸಮಾಜಗಳು ಸ್ವಾರ್ಥಿ, ಪೌರಾತ್ಯ ಸಮಾಜಗಳು ಧಾರ್ಮಿಕ ಎಂದು. ಅದೇನು ಅಷ್ಟು ನಿಜವಲ್ಲ. ವಿನೋಬಾ ಹೇಳುವಂತೆ, ಕ್ರೈಸ್ತ ಮತಾವಲಂಬಿಗಳಾದ ಪಾಶ್ಚಾತ್ಯರಿಗೆ ಬೈಬಲ್ಲಿನಲ್ಲಿರುವ 'ಬೆಟ್ಟದ ಮೇಲಿನ ಉಪದೇಶ' (Sermon on the Mount) ಕ್ಕಿಂತ ಇನ್ನೇನು ಬೇಕು. ಹಿಂದೂ ಧರ್ಮದಲ್ಲಿ ಹೇಳಿರುವುದನ್ನೇ ಅಲ್ಲೂ ಹೇಳಿದೆ. ಮಾನವನ ಪ್ರವೃತ್ತಿ ಎಲ್ಲೆಲ್ಲಿಯೂ ಒಂದೇ. ವ್ಯತ್ಯಾಸ ತೋರುತ್ತಿರುವುದೇಕೆಂದರೆ, ಅಲ್ಲಿ ವಿಜ್ಞಾನ ಮೂರು ಶತಮಾನದಿಂದ ಒಂದೇ ಸಮನೆ ಆಧ್ಯಾತ್ಮಿಕ ಯೋಚನೆಯನ್ನು ಅದುಮಿ ಬರೀ ಆರ್ಥಿಕ ಆಸೆಯನ್ನು ಕೆರಳಿಸಿ ಬೆಳೆದಿರುವುದರಿಂದ.

ಸರಿಯಾಗಿ ನೋಡುವುದಾದರೆ ವೇದಾಂತಕ್ಕೂ ವಿಜ್ಞಾನಕ್ಕೂ ಘರ್ಷಣೆಯಿಲ್ಲ. ವೇದಾಂತ ಆತ್ಮವಿಜ್ಞಾನವಾದರೆ ಇನ್ನೊಂದು ಹೊರಪ್ರಪಂಚವಿಜ್ಞಾನ. ಆದರೆ ಈಗ ವಿಜ್ಞಾನದ ಗತಿ ನೀತಿನಿಯಮವನ್ನು ಮೀರಿದ್ದಾಗಿದೆ. ನೀತಿನಿಯಮವಿಲ್ಲದ ಸಮಾಜ ಪ್ರಗತಿಹೊಂದಲಾರದು. ಎಲ್ಲಿ ಪ್ರಶಾಂತಭಾವನೆಯೂ ಶ್ರದ್ಧಾಶಕ್ತಿಯೂ ಇದೆಯೋ ಅಲ್ಲಿ ಪ್ರಗತಿ ತಾನಾಗಿಯೇ ಸಾಧ್ಯವಾಗುತ್ತದೆ. ವಿಜ್ಞಾನ ಬ್ರೇಕ್ ಇಲ್ಲದೆ ಬರೀ ಆಕ್ಸಿಲರೇಷರ್ ಇರುವ ಕಾರಿನಂತಾದರೆ ಗತಿಯೇನು? ವಿಜ್ಞಾನವನ್ನು ಅಹಿಂಸಾಮಾರ್ಗದಲ್ಲಿ ಉಪಯೋಗಿಸಿಕೊಳ್ಳುವುದಾದರೆ ವೇದಾಂತಕ್ಕೂ

ಅದಕ್ಕೂ ಸಾಮರಸ್ಯ ಉಂಟಾಗುತ್ತದೆ. ವಿಜ್ಞಾನ ಯಾವ ಮಾರ್ಗದಲ್ಲಿ ನಡೆಯ ಬೇಕೆಂಬುದನ್ನು ಗೊತ್ತುಮಾಡುವ ಪ್ರಾಮುಖ್ಯತೆ ವೇದಾಂತಕ್ಕೆ ಬಂದಾಗ ಕಾರೆಲ್ ಅವರ ಆಸೆ ನೆರವೇರುವಂತಾಗುತ್ತದೆ. ಇದು ಅನಿವಾರ್ಯ; ಏಕೆಂದರೆ ಮಾನವ ತಾನು ಪತನವಾಗುತ್ತಿರುವುದನ್ನು ಇನ್ನೂ ಹೆಚ್ಚು ಕಾಲ ಸಹಿಸಲಾರ.

ನಭ

*
* *

ಮರುಮದುವೆ—ಬರೆದವರು : ಎಚ್. ವಿ. ಸಾವಿತ್ರಮ್ಮ ; ಪ್ರಕಾಶಕರು : ಕಾವ್ಯಾಲಯ, ಮೈಸೂರು ; ೧೯೫೪ ; ಪುಟಗಳು ೨೨೨ ; ಬೆಲೆ, ರೂ. ೧-೪-೦.

ಈ ಗ್ರಂಥದಲ್ಲಿ ಏಳು ಸಣ್ಣ ಕಥೆಗಳು ಮತ್ತು ಒಂದು ತಕ್ಕಮಟ್ಟಿನ ದೀರ್ಘವಾದ ಕಥೆ ಇವೆ. 'ಆದರ್ಶ', 'ದಮಯಂತಿ', 'ಸರ್ಪಮಚ್ಚರ', 'ಹೊಣೆಯಾರು', 'ಹತ್ತಿರ ಹೊರಗೆ', 'ಮೇನಕೆ', 'ಮರುಮದುವೆ' ಮತ್ತು 'ಸಲ್ಲದ ಆಸೆ' (ಬಿಸಿಲುಗುದುರೆ) ಎಂಬಿವೇ ಆ ಕಥೆಗಳು. ಇವುಗಳಲ್ಲೊಂದಾದ 'ಮರುಮದುವೆ' ಎಂಬ ಹೆಸರನ್ನು ಈ ಕೃತಿಗೆ ಕೊಟ್ಟಿದೆ.

ಯೌವ್ವನದ ಯುವಕ-ಯುವತಿಯರ, ನಲ್ಲ-ನಲ್ಲೆಯರ, ಸತಿಪತಿಯರ ಮನಸ್ಸನ್ನು ಕಾಡುವ ಪ್ರೇಮದ ಸುತ್ತಮುತ್ತ ಈ ಕಥೆಗಳನ್ನು ಬಹುಮಟ್ಟಿಗೆ ಹೆಣೆಯಲಾಗಿದೆ ಎನ್ನಬಹುದು. ವಾಸ್ತವಿಕ ಪ್ರಪಂಚದ ಸುಳಿಯಲ್ಲಿ ಸಿಕ್ಕಿಹಾಕಿಕೊಂಡಾಗ ತಾವು ಬಾಲ್ಯದಿಂದ ಮನಸ್ಸಿನಲ್ಲಿ ಕಟ್ಟಿಕೊಂಡು ಆಸಕ್ತಿಯಿಂದ ಬೆಳೆಸಿದ ಧ್ಯೇಯಗಳು ಮತ್ತು ಆದರ್ಶಗಳು ಹೇಗೆ ವ್ಯತ್ಯಾಸವಾಗಬೇಕಾಗುತ್ತದೆ, ಅದರಿಂದುಂಟಾಗುವ ನಿರಾಸೆ ಯೇನು, ಅದು ಅವರ ಜೀವನವನ್ನು ಹೇಗೆ ಮಾರ್ಪಡಿಸಬಹುದು ಇಲ್ಲವೆ ನಾಶಮಾಡ ಬಹುದು ಎಂಬಿವುಗಳ ಸುಂದರ ಚಿತ್ರವನ್ನು ಈ ಕಥೆಗಳಲ್ಲಿ ಕಾಣುತ್ತೇವೆ. ಅಲ್ಲದೆ ಇಂಥ ವಿವಿಧ ಸನ್ನಿವೇಶಗಳಲ್ಲಿ ಸ್ತ್ರೀಯರು ಹೇಗೆ ನಡೆದುಕೊಳ್ಳುತ್ತಾರೆ ಎಂಬುದನ್ನೂ ಕೂಡ ಕಾಣುತ್ತೇವೆ.

ಪಂಜಾಬಿನ ಸಿಯಾಲ್‌ಕೋಟೆಯ ಮನೆಗೆ ಬೆಂಕಿಬಿದ್ದಾಗ ಭಯದಿಂದ ತನ್ನ ಹೆಂಡತಿಯನ್ನು ನಿರ್ಲಕ್ಷಿಸಿ ಓಡಿ ದೆಹಲಿಗೆ ಬರುತ್ತಾನೆ ಭಾಸ್ಕರ. ಅಲ್ಲಿ ಒಂದು ದಿನ ನಿರಾಶ್ರಿತರ ವಸತಿಯಲ್ಲಿ ತನ್ನ ಹೆಂಡತಿಯನ್ನು ಕಾಣುತ್ತಾನೆ. ಆದರೆ ಆತ್ಮಾಭಿಮಾನವುಳ್ಳ ಅವನ ಹೆಂಡತಿ ದಮಯಂತಿ ತನ್ನನ್ನು ಮಾನವಳನ್ನಾಗಿ ಮಾಡಿದ ಡಾಕ್ಟರ್ ಮುಹಮ್ಮದರನ್ನು ಮದುವೆಯಾಗುತ್ತಾಳೆ. ಇದು 'ದಮಯಂತಿ' ಕಥೆಯ ವಸ್ತು. ಸ್ವಾತಂತ್ರ್ಯ ಸಮರದಲ್ಲಿ ಒಂದೇ ಆದರ್ಶವನ್ನು ಹಿಡಿದು ಸುಂದರನೂ ಸತ್ಯವತಿಯೂ ಹೋರಾಡುತ್ತಾರೆ. ಸ್ವಾತಂತ್ರ್ಯ ಬಂದ ತರುವಾಯ ಸುಂದರ ದೊಡ್ಡ ಅಧಿಕಾರಿಯಾಗಿ ತನ್ನ ಆದರ್ಶವನ್ನು ಮರೆಯುತ್ತಾನೆ. ಆದರೆ ಅವನ ಹೆಂಡತಿಗೆ ಇದು ಸರಿಬೀಳದೆ ಮನೆ ಬಿಟ್ಟುಹೋಗಿ

ಸಮಾಜಸೇವೆಗೆ ಟೊಂಕಕಟ್ಟಿ ನಿಲ್ಲುತ್ತಾಳೆ. ತನ್ನ ಧ್ಯೇಯಕ್ಕಾಗಿ ಪತಿಯನ್ನೂ ಕೂಡ ತ್ಯಜಿಸಿದ ವೀರರಮಣಿ ಸತ್ಯವತಿ. ಇದು 'ಆದರ್ಶ' ಕಥೆ. ಪಟ್ಟಣದ ಜೀವನಕ್ಕೆ ಒಗ್ಗಿದ್ದ ಸೀತೆ ಪತಿಯ ಧ್ಯೇಯಗಳಿಗೆ ಅಡ್ಡಿಬರಲಾರದೆ ಆತನೊಡನೆ ಹಳ್ಳಿಗೆ ಹೋಗಿ ನೆಲಸಿದರೂ ಕೂಡ ಅಲ್ಲಿಯ ಜೀವನವನ್ನು ಒಗ್ಗಿಸಿಕೊಳ್ಳಲಾರದೆ ಕೊನೆಗೆ ಅಲ್ಲಿಯ ಶಕ್ತಿಗೆ ತನ್ನ ಪ್ರಾಣವನ್ನು ಅರ್ಪಿಸಿದ ಕಥೆ 'ಸರ್ಪಮಚ್ಚರ'ದಲ್ಲಿದೆ. ಹದಿನೆಂಟು ವರ್ಷವಾದರೂ ರಾಧೆಗೆ ಸರಿಯಾದ ವರನನ್ನು ಹುಡುಕುವುದರಲ್ಲಿ ವಿಫಲರಾದ ಶ್ರೀನಿವಾಸರಾಯರು ಬೇಸರಗೊಂಡು ಬೆಪ್ಪ ಅನಂತನಿಗೆ ಕೊಟ್ಟು ಮದುವೆಮಾಡುತ್ತಾರೆ. ಅನಂತನ ಈರ್ಷ್ಯೆ ಎಚ್ಚೆತ್ತ ಒಂದು ದಿನ ಅವನ ಪಶುಸಮಾನವಾದ ಕೋಪಕ್ಕೆ ರಾಧ ಪಾತ್ರಳಾಗಿ ಪ್ರಾಣಬಿಡುತ್ತಾಳೆ. ಈ ತಪ್ಪಿನ ಹೊಣೆ ಯಾರದು ಎಂಬ ಪ್ರಶ್ನೆ 'ಹೊಣೆ ಯಾರು' ಎಂಬ ಕಥೆಯಲ್ಲಿ ಬರುತ್ತದೆ. ತಂದೆಯದೇ ? ವರನ ತಾಯಿಯದೇ ? ಮದುವೆಯಾದ ವಧುವಿನದೆ ? ವರನದೆ ? ಇಲ್ಲ ಅಂಥ ಹುಡುಗಿಯನ್ನು ತಿರಸ್ಕರಿಸಿದ ಚಂದುವಿನಂಥ ಯುವಕನದೆ ? 'ಈ ತಪ್ಪು ಯಾರದೋ ಭಗವಂತನೇ ನಿರ್ಧರಿಸಬೇಕು' ಎಂದು ಲೇಖಕಿಯರು ಚಂದುವಿನಿಂದ ಹೇಳಿಸಿದ್ದರೂ ಈ ತಪ್ಪು ನಮ್ಮ ಸಮಾಜದ್ದು ಅಲ್ಲವೆಂದು ಹೇಳುವರಾರು ? ತನ್ನ ಆಸೆ ಆಕಾಂಕ್ಷೆಗಳಿಗೆ ಬರುವ ಅಡ್ಡಿಗಳನ್ನು ಸಹಿಸದ ಹಠಸ್ವಭಾವದ ರತ್ನ ಗಂಡನ ಪ್ರೀತಿಯನ್ನು ಸಂಪಾದಿಸಿದ್ದರೂ ಅತ್ತೆ ಅತ್ತಿಗೆನಾದಿನಿಯರ ಕಿರುಕುಳ ಸಹಿಸಲಾರದೆ ಮನೆಬಿಟ್ಟು ಸಂಸಾರ ತ್ಯಜಿಸಿದುದನ್ನು 'ಹತ್ತರ ಹೊರಗೆ' ಎಂಬ ಕಥೆಯಲ್ಲಿ ವರ್ಣಿಸಲಾಗಿದೆ. ಸುಂದರಿಯಾದ ಯುವತಿಯನ್ನು ಮದುವೆಯಾದ ಗಂಡ ಅನೇಕ ವರ್ಷಗಳ ಕಾಲ ಅವಳನ್ನು ಅಲಕ್ಷ್ಯಮಾಡಿ ಪುನಃ ಅವಳನ್ನೇ ಹುಡುಕಿಕೊಂಡುಬಂದಾಗ ಆ ಸ್ತ್ರೀ ಅವನನ್ನು ಒಪ್ಪಲಾರಳು ಎಂಬುದರ ಚಿತ್ರ 'ಮೇನಕೆ'ಯಲ್ಲಿದೆ. ವಯಸ್ಸು ಮೀರಿದ ವ್ಯಕ್ತಿ ಹದಿನಾರು ವರ್ಷದ ತರುಣಿಯನ್ನು ಮರುಮದುವೆಯಾದರೆ ಆ ತರುಣಿಯು ತಾರುಣ್ಯದ ವಿಲಾಸಗಳಿಗಾಗಿ ಹಾತೊರೆಯುವುದು ಅಸಹಜವೇ ? ಅಂಥವಳು ಏನುಮಾಡಬೇಕು ? ಎಂಬ ಪ್ರಶ್ನೆ 'ಮರುಮದುವೆ'ಯಲ್ಲಿ ಕಾಣುತ್ತದೆ. ಮರುಮದುವೆಯ ಹಲವು ಅನರ್ಥಗಳನ್ನು ನಿವಾರಿಸಬೇಕಾದರೆ ಸಂಸಾರದಲ್ಲಿ ಹೊಂದಾಣಿಕೆಯನ್ನು ತರುವುದೇ ಆಗಿದೆ ಎಂದು ಸೂಚಿಸಲಾಗಿದೆ. ಮದುವೆಯಾಗಿ ಒಂದು ಮುದ್ದುಮಗುವನ್ನು ಪಡೆದು ಸುಖಸಂಸಾರದಲ್ಲಿದ್ದರೂ ಕೂಡ ಬಾಲ್ಯದಲ್ಲಿ ತನ್ನ ಹೃದಯ ಮಂದಿರದಲ್ಲಿಟ್ಟು ಪೂಜಿಸಿದ ರಘುವನ್ನು ಪುನಃ ಕಂಡಾಗ ಪಡೆಯುವ ಸಲ್ಲದ ಆಸೆ ಸುಶೀಲೆಗೆ ಇದೆ. ಕಲ್ಪನಾಪ್ರಪಂಚದಲ್ಲಿ ಭಾವಪರವಶಳಾಗಿ ವಿಹರಿಸುತ್ತಿದ್ದ ಸುಶೀಲೆಯನ್ನು ಅವಳ ಅಶಕ್ತತೆಯನ್ನು ತೋರಿಸಿಕೊಟ್ಟು ದಾರಿಗೆ ತಂದವನು ಕರ್ತವ್ಯಪಥವನ್ನರಿತಿದ್ದ ರಘು. ಇದು 'ಸಲ್ಲದ ಆಸೆ'ಯ ವಸ್ತು.

ಈ ಮೇಲಿನ ಕಥೆಗಳ ವಸ್ತುವನ್ನು ವೀಕ್ಷಿಸಿದಾಗ ಒಂದು ವಿಷಯ ಪ್ರಮುಖವಾಗಿ ಕಾಣುತ್ತದೆ. ಈ ಕಥೆಗಳಲ್ಲಿ ವಿಶೇಷವಾಗಿ ವಿರಸಪ್ರಣಯದ, ವಿಷಮ ದಾಂಪತ್ಯದ ಚಿತ್ರವಿದೆ. ಈ ಎಲ್ಲಕ್ಕೂ ಲೇಖಕಿಯರು ಒಂದು ಮುಖ್ಯ ಪರಿಹಾರವನ್ನು ಸೂಚಿಸಿರುವಂತೆ ತೋರುತ್ತದೆ. ಇದು 'ಮರುಮದುವೆ' ಮತ್ತು 'ಸಲ್ಲದ ಆಸೆ'ಗಳಲ್ಲಿ ಸ್ಪಷ್ಟವಾಗಿ ಹೇಳಲ್ಪಟ್ಟಿದೆ. ಲೋಕದಲ್ಲಿ ಎಲ್ಲವೂ ತನಗೆ ಬೇಕಾದಂತೆಯೇ ನಡೆಯುವುದಿಲ್ಲ. ಮನಸ್ಸಿನ ಮಂಡಿಗೆಯನ್ನು ತಿನ್ನುತ್ತ ಭಾವಪ್ರಪಂಚದಲ್ಲಿ

ಕುಳಿತಾಗ ಅಸಾಮಾನ್ಯ ವ್ಯವಹಾರಕ್ಕೆ ಕೈಹಾಕಿ ಸಮಾಜದೂಷಿತರಾಗಬೇಕಾಗುತ್ತದೆ. ಅದುಬಿಟ್ಟು ವಾಸ್ತವಿಕ ಪ್ರಪಂಚಕ್ಕೆ ಹೊಂದಿಕೊಂಡು ಸರಿಹೋಗಿಸಿಕೊಂಡು ನಡೆದರೆ ಅವರ ಬಾಳಹಾದಿ ಸುಗಮವಾಗುತ್ತದೆ. 'ಸಂಸಾರ ಸರಿಹೋಗಬೇಕು' ಎಂದು ಸುಶೀಲೆ ಅರಿತುಕೊಳ್ಳುವುದರ ಅರ್ಥವಿದೇ.

ಸಾಮಾನ್ಯವಾಗಿ ಪುರುಷಲೇಖಕರು ತಮ್ಮ ಪ್ರಣಯಕ್ಕೆ, ತಮ್ಮ ಶೃಂಗಾರ ವಿಲಾಸಗಳಿಗೆ ನೆರವಾಗುವವಳು ಸ್ತ್ರೀ ಎಂಬ ಮನೋಭಾವದಿಂದ ತಮ್ಮ ಕಣ್ಣಿಗೆ ಸ್ತ್ರೀ ಹೇಗೆ ಕಾಣುತ್ತಾಳೆಂಬ ಚಿತ್ರವನ್ನು ಕೊಡಲು ಬಹುಮಟ್ಟಿಗೆ ಸಮರ್ಥರಾಗುತ್ತಾರೆ. ಸ್ತ್ರೀಯರ ಮನೋಧರ್ಮವನ್ನು ಸ್ತ್ರೀ ಅರಿಯುವಂತೆ ಪುರುಷ ಅರಿಯುವುದು ವಿರಳ ಇಲ್ಲವೆ ಅಸಾಧ್ಯ. ಸ್ತ್ರೀಯರ ಮನೋಧರ್ಮವೇನು, ಆಕೆಯ ಆಸೆ ಆಕಾಂಕ್ಷೆಗಳೇನು ಎಂಬುದನ್ನು ವಾಸ್ತವಿಕವಾಗಿ ಲೇಖಕಿಯರು ಚಿತ್ರಿಸುವುದರಲ್ಲಿ ಸಮರ್ಥರಾಗಿದ್ದಾರೆ. ಪುರುಷನಂತೆ ಸ್ತ್ರೀಗೂ ಮಾನವಸಹಜವಾದ ಆತ್ಮಾಭಿಮಾನ, ತಮ್ಮ ಧ್ಯೇಯದಲ್ಲಿ ನಂಬಿಕೆ ಮೊದಲಾದ ಗುಣಗಳು ಇರುತ್ತವೆ ಎಂಬುದನ್ನು ಈ ಕಥೆಗಳಲ್ಲಿ ನಾವು ಕಾಣುವುದಕ್ಕೆ ಸ್ತ್ರೀಯ ಮನೋಧರ್ಮವನ್ನು ಅರಿತ ಸ್ತ್ರೀಯ ಲೇಖಣಿಯೇ ಕಾರಣ ಎಂದು ಬೇರೆ ಹೇಳಬೇಕಾಗಿಲ್ಲ. ಸನ್ನಿವೇಶಗಳನ್ನು ವರ್ಣಿಸುವಲ್ಲಿ ಒಂದು ನಯ, ಒಂದು ಸಂಯಮ, ಒಂದು ಸರಳತೆ ಇಲ್ಲಿಯ ಕಥೆಗಳ ವೈಶಿಷ್ಟ್ಯ. ಪಾತ್ರಗಳ ಮನೋವ್ಯಾಪಾರವನ್ನು ಲೇಖಕಿಯರು ತಮ್ಮ ವಾಕ್ಸರಣಿಯಿಂದ ವಿಶದಪಡಿಸುತ್ತ ತಮ್ಮ ವ್ಯಕ್ತಿತ್ವವನ್ನು ಓದುಗರ ಮುಂದೊಡ್ಡುವ ವಿಧಾನವನ್ನನುಸರಿಸದೆ ಸನ್ನಿವೇಶ ಸಂದರ್ಭಗಳ ಚಿತ್ರಗಳ ಮೂಲಕವೂ, ಪಾತ್ರಗಳ ಸರಳ ಸುಂದರ ಸಂವಾದಗಳ ಮೂಲಕವೂ ತಾನಾಗಿ ಓದುಗರ ಮನಸ್ಸಿಗೆ ವೇದ್ಯವಾಗುವ ಕ್ರಮವನ್ನನುಸರಿಸುವುದು ಉತ್ತಮವಾಗಿ ಕಾಣಿಸುತ್ತದೆ. ಏಕೆಂದರೆ ಓದುಗರಿಗೆ ಪಾತ್ರಗಳ ಹೃದಯವನ್ನು ತಾವೇ ಚಿತ್ರಿಸಿಕೊಂಡು ಆನಂದಿಸುವ ಸುಯೋಗವನ್ನು ಒದಗಿಸಿಕೊಟ್ಟಂತಾಗುತ್ತದೆ. ಬಹು ಸರಳವಾದ ರೀತಿಯಲ್ಲಿ ರಚಿಸಿದರೂ ಓದುಗರ ಮನವೊಲಿಸುವಂತೆ ಪರಿಣಾಮಕಾರಿಯಾಗಿ ಕಥೆಗಳನ್ನು ಶ್ರೀಮತಿ ಸಾವಿತ್ರಮ್ಮನವರು ಬರೆಯಬಲ್ಲರೆಂಬುದಕ್ಕೆ ಈ ಕಥೆಗಳೇ ಸಾಕ್ಷಿ. ಸಣ್ಣ ಕಥೆಗಳನ್ನು ಬರೆಯುವ ವಾಡಿಕೆ ಕಡಿಮೆಯಾಗುತ್ತಿರುವ ಈ ಕಾಲದಲ್ಲಿ ಇಂಥ ಕೃತಿಗಳಿಗೆ ಹೆಚ್ಚು ಉತ್ತೇಜನ ಕೊಡಬೇಕು ಎಂಬುದನ್ನು ಮರೆಯಕೂಡದು. ಕಥೆಗಳ ಆರಂಭ, ಬೆಳವಣಿಗೆ ಮತ್ತು ಮುಕ್ತಾಯಗಳಿಗೆ ಇನ್ನಷ್ಟು ಗಮನ ಕೊಡಬೇಕೆನಿಸುತ್ತದೆ.

ಕೆ. ಎಸ್. ಕೃಷ್ಣಮೂರ್ತಿ

*
* *

ರತ್ನಾವಳೀ—ಮೂಲಲೇಖಕ : ಶ್ರೀ ಹರ್ಷ ; ಅನುವಾದಕರು : ಎಸ್. ರಂಗಾಚಾರ್ಯ, ಎಂ.ಎ.; ಪ್ರಕಾಶಕರು : ಸಂಸ್ಕೃತ ಸಾಹಿತ್ಯಸದನ, ೨೧೧ ವಿಶ್ವೇಶ್ವರಪುರ, ಬೆಂಗಳೂರು ೪ ; ಬೆಲೆ, ರೂ. ೧-೮-೦.

ಸಂಸ್ಕೃತ ಸಾಹಿತ್ಯದಲ್ಲಿ ಶ್ರೀ ಹರ್ಷನಿಂದ ರಚಿತವಾದ 'ರತ್ನಾವಳೀ' ನಾಟಿಕೆಗೆ ವಿಶಿಷ್ಟವಾದ ಸ್ಥಾನವಿದೆ. ವತ್ಸರಾಜನು ಸಿಂಹಳರಾಜಪುತ್ರಿಯಾದ ರತ್ನಾವಳಿಯನ್ನು ಪಡೆಯುವುದೇ ಈ ರೂಪಕದ ವಸ್ತುವಾದರೂ, ಶ್ರೀ ಹರ್ಷನ ಜಾಣ್ಮೆ ತೋರಿ ಬರುವುದು ಈ ವಸ್ತುವನ್ನು ತನ್ನ ರೂಪಕಕ್ಕೆ ಅಪೂರ್ವವಾದ ರೀತಿಯಲ್ಲಿ ಅಳವಡಿಸಿ ಕೊಂಡಿರುವುದರಲ್ಲಿ. ಆದ್ದರಿಂದಲೇ ಈ ಕೃತಿ ಹುಟ್ಟಿದಂದಿನಿಂದ ಆಲಂಕಾರಿಕರಿಗೆ ತುಂಬ ಪ್ರಿಯವಾಗಿದೆ. ಮನೋಹರವಾದ ವಸ್ತುವನ್ನುಳ್ಳ ಈ ಕೃತಿಯನ್ನು ಹಿಂದೆ ದಿ. ಬಸವಪ್ಪಶಾಸ್ತ್ರಿಗಳು ಕನ್ನಡಿಸಿದ್ದರು. ಆ ಭಾಷಾಂತರ ಗದ್ಯಪದ್ಯಾತ್ಮಕವಾದದ್ದು.

ಪ್ರಕೃತದ ಗ್ರಂಥ ನಾಟಕದ ಗದ್ಯಾನುವಾದ. ಮೂಲದ ಸಾನ್ನಿಧ್ಯವನ್ನು ಎಳ್ಳಷ್ಟೂ ಬಿಡದೆ ಅನುವಾದ ಮಾಡಿರುವ ಈ ಗ್ರಂಥದಿಂದ ಕನ್ನಡಿಗರಿಗೆ ತುಂಬ ಉಪಕಾರವುಂಟಾಗಿದೆಯೆಂದು ಮತ್ತೆ ಹೇಳಬೇಕಾಗಿಲ್ಲ. ಸಂಸ್ಕೃತ ಗ್ರಂಥಗಳನ್ನು ಇಂಗ್ಲೀಷಿನಲ್ಲಿ ಓದಬಯಸುವವರಿಗೆ ಈ ತೆರನಾದ ಆನುಕೂಲ್ಯಗಳಿವೆ. ಕನ್ನಡಿಗರಿಗಾದರೊ ಇದುವರೆಗೂ ಅತ್ಯಲ್ಪವಾಗಿದ್ದ ಸಹಾಯವನ್ನು ಪೂರ್ಣಗೊಳಿಸಲು ಹೊರಟಿರುವ ಶ್ರೀ ರಂಗಾಚಾರ್ಯರ ಈ ಪ್ರಯತ್ನ, ಸಾಹಸ ಸ್ತುತ್ಯವಾದದ್ದು. ಸರಳವಾದ ಕನ್ನಡದಲ್ಲಿ ಅವರ ಅನುವಾದವಿರುವುದರಿಂದ ಮೂಲಗ್ರಂಥವನ್ನು ಹತ್ತಿರ ಇಟ್ಟುಕೊಂಡು ಅರ್ಥಮಾಡಿಕೊಳ್ಳಬೇಕೆನ್ನುವವರಿಗೆ ಇದರಿಂದ ತುಂಬ ಪ್ರಯೋಜನವುಂಟು. ಪೀಠಿಕೆ, ಕವಿಚರಿತ್ರೆ, ಕಥಾವಸ್ತು ಹಾಗೂ ಪಾತ್ರಗಳ ಪರಿಚಯ, ಗ್ರಂಥದ ಕೊನೆಯಲ್ಲಿ ಬರುವ ಟಿಪ್ಪಣಿಗಳು ಇವು ಗ್ರಂಥದ ಉಪಯುಕ್ತತೆಯನ್ನು ಹೆಚ್ಚಿಸಿರುವುವಲ್ಲದೆ, ಈ ಗ್ರಂಥವನ್ನು ನೋಡಿದಾಗ ಕಾಳೆ ಮುಂತಾದ ಮಹನೀಯರ ಗ್ರಂಥಗಳ ನೆನಪಾಗುತ್ತದೆ.

ವಿದ್ಯಾರ್ಥಿಗಳಿಗೂ ಮೂಲನಾಟಕವನ್ನೋದಬೇಕೆನ್ನುವವರಿಗೂ ಇಷ್ಟು ಉಪಯುಕ್ತವಾಗಿರುವ ಈ ಗ್ರಂಥದಲ್ಲಿ ಮುದ್ರಣದೋಷಗಳು ಅಲ್ಲಲ್ಲೇ ಉಳಿದುಬಿಟ್ಟಿವೆ. ಉದಾ : ಯೌಗಂಧರಾಯಣನೆನ್ನುವ ಹೆಸರೂ ಗ್ರಂಥದ ಉದ್ದಕ್ಕೂ ಯೌಗಂಧರಾಯಣನೆಂದೇ ಅಚ್ಚಾಗಿದೆ. ಶ್ರೀ ಹರ್ಷನ ಭಾಷೆ ಸಮಾಸ ಭೂಯಿಷ್ಠವಾದದ್ದು. ಬಾಣನ ಪಂಥದವನಲ್ಲವೇ ಅವನು? ಆದ್ದರಿಂದ ಅವನ ಪದ್ಯಗಳನ್ನು ಉಂಡುಂಡೆಯಾಗಿ ಅನುವಾದ ಮಾಡುವುದಕ್ಕಿಂತ ವಾಕ್ಯಗಳನ್ನು ಅಲ್ಲಲ್ಲೇ ಒಡೆಯುವುದು ಲೇಸು. ಸರಳವಾಗಿರುವ ಈ ಅನುವಾದಕ್ಕೆಲ್ಲ ಈ ಮಾತು ಅನ್ವಯಿಸದು. ಕೆಲವು

ಕಡೆ ಅನುವಾದವನ್ನು ಇನ್ನೂ ಸರಳವಾಗಿಸಿದ್ದರೆ, ಪ್ರಥಮಾವಿಭಕ್ತಿಯ ಪ್ರತ್ಯಯವನ್ನು ತೆಗೆದುಹಾಕಿದ್ದರೆ ಚೆನ್ನಾಗಿರುತ್ತಿತ್ತೆಂದು ನಮ್ಮ ಅಭಿಪ್ರಾಯ.

ಒಂದು ಭಾಷೆ ಬೆಳೆಯಬೇಕಾದರೆ ಅದರ ಕೇವಲ ಸ್ವತಂತ್ರ ಕೃತಿಗಳಿಂದಲ್ಲ; ಮತ್ತೊಂದು ಭಾಷೆಯಿಂದ ಅನುವಾದ ಮಾಡಿಕೊಂಡಿರುವ ಕೃತಿಗಳಿಂದಲೂ ಅದು ಬೆಳೆಯುತ್ತದೆ. ಕನ್ನಡ ಹಿಂದೆ ಹಾಗೆ ಬೆಳೆಯಿತು, ಮುಂದೆ ಹಾಗೆ ಬೆಳೆಯಬೇಕಾಗಿದೆ. ಪೀಠಿಕೆ ಟಿಪ್ಪಣಿಗಳಿಂದ ಕೂಡಿದ ಈ ತೆರನಾದ ಅನುವಾದಗಳು ಸಂಸ್ಕೃತವನ್ನು ಅಭ್ಯಾಸಮಾಡಬೇಕೆಂಬ ಉತ್ಕಟೇಚ್ಛೆಯುಳ್ಳ ಕನ್ನಡಿಗರಿಗೆ ತುಂಬ ಆವಶ್ಯಕವಾಗಿದ್ದವು. ಆ ಒಂದು ಕೊರತೆಯನ್ನು ಅನುವಾದಕರು ಪೂರೈಸಿದ್ದಾರೆ.

ಸಾಹಿತ್ಯಪ್ರಿಯ.

ಸಂಪಾದಕೀಯ

ಬೀಳ್ಕೊಡಿಗೆ

ಕನ್ನಡಸಾಹಿತ್ಯಪರಿಷತ್ತಿನವರು ಕೈಕೊಂಡಿರುವ ಕನ್ನಡ-ಕನ್ನಡ ಕೋಶ ರಚನೆಯ ಸಂಪಾದಕರಾಗಿ ಶ್ರೀ ಡಿ. ಎಲ್. ನರಸಿಂಹಾಚಾರ್, ಎಂ.ಎ., ಅವರು ನೇಮಕ ಗೊಂಡಿರುವುದು ನಮಗೆ ತುಂಬ ಸಂತೋಷದ ಮತ್ತು ಹೆಮ್ಮೆಯ ಸಂಗತಿಯಾಗಿದೆ. ಈ ಸಂದರ್ಭದಲ್ಲಿ ಪ್ರಬುದ್ಧ ಕರ್ಣಾಟಕದ ವಾಚಕರ ಪರವಾಗಿ ನಮ್ಮ ಹೃತ್ಪೂರ್ವಕ ವಾದ ಅಭಿನಂದನೆಗಳನ್ನು ಶ್ರೀಯುತರಿಗೆ ನಾವು ಅರ್ಪಿಸುತ್ತೇವೆ.

ಶ್ರೀ ನರಸಿಂಹಾಚಾರ್ಯರ ಬಹುಮುಖವಾದ ವಿದ್ವತ್ತು ಪ್ರತಿಭೆಗಳ ಎತ್ತರ ಬಿತ್ತರ ಗಳನ್ನಾಗಲೀ ಗ್ರಂಥಪರಿಶೋಧನಾಸಾಮರ್ಥ್ಯದಕ್ಷತೆಗಳನ್ನಾಗಲೀ ಕಾವ್ಯವಿಮರ್ಶೆ ಯಲ್ಲಿ ಕಾಣಬರುವ ವಿವೇಚನಾಪೂರ್ಣವಾದ ರಸಿಕತೆ ಪಾಂಡಿತ್ಯಗಳನ್ನಾಗಲೀ ಇಲ್ಲಿ ಪ್ರತ್ಯೇಕವಾಗಿ ಮತ್ತೆ ಹೇಳಬೇಕಾಗಿಲ್ಲ. ಕನ್ನಡ ಭಾಷಾಸಾಹಿತ್ಯಗಳ ಅಧ್ಯಯನದಲ್ಲಿ ತೊಡಗಿರುವವರೆಲ್ಲ ಆಚಾರ್ಯರ ಸತ್ವವನ್ನು ಬಲ್ಲವರೇ ಆಗಿದ್ದಾರೆ.

ಮಹಾರಾಜರವರ ಕಾಲೇಜಿನ ಕನ್ನಡ ಸಂಘದವರು ಶ್ರೀಯುತರ ಗೌರವಾರ್ಥ ವಾಗಿ ಬೀಳ್ಕೊಡಿಗೆಯ ಸಮಾರಂಭವನ್ನು ಪ್ರೊ || ಕೆ. ವಿ. ಪುಟ್ಟಪ್ಪನವರ ಅಧ್ಯಕ್ಷತೆ ಯಲ್ಲಿ ೧೫-೧೦-೫೪ ರಂದು ಏರ್ಪಡಿಸಿದ್ದರು. ಶ್ರೀಗಳಾದ ಎನ್. ಅನಂತರಂಗಾ ಚಾರ್, ಪ್ರಭುಶಂಕರ್, ಹೆಚ್. ಎಂ. ಶಂಕರನಾರಾಯಣರಾವ್, ಜಯದೇವಪ್ಪ, ಹ. ಮಾ. ನಾಯಕ ಮತ್ತು ಶ್ರೀಮತಿ ರತ್ನಮ್ಮ ಇವರುಗಳು ಅತಿಥಿಗಳನ್ನು ಕುರಿತಾದ ಅಭಿನಂದ ಭಾಷಣಗಳನ್ನು ಮಾಡಿದರು.

ಆಚಾರ್ಯರ ಶಿಷ್ಯವಾತ್ಸಲ್ಯವೂ ಮಿತ್ರಸ್ನೇಹವೂ ಕನ್ನಡದ ಅಭಿಮಾನವೂ ಶಾಸ್ತ್ರಸಂಶೋಧನಾಸಕ್ತಿಯೂ ಎಷ್ಟು ಗಾಢವಾದದ್ದು ಎಷ್ಟು ಅವ್ಯಾಜವಾದದ್ದು ಎಷ್ಟು ಅಕೃತಿಮವಾದದ್ದು ಎಂಬುದು ಅಂದು ಅವರು ಆಡಿದ ಉತ್ತರರೂಪವಾದ ಕೆಲವೇ ಮಾತುಗಳಲ್ಲಿ ವ್ಯಕ್ತವಾಯಿತು.

"ನನಗೆ ಕನ್ನಡವೆಂದರೆ ಮೊದಲಿನಿಂದಲೂ ಪ್ರೇಮ. ಲಕ್ಷ್ಮೀಶನೇ ನನ್ನ ಮೊದಲ ಗುರು. ಅವನ ಜೈಮಿನಿ ಭಾರತದಿಂದ ನನ್ನ ಕನ್ನಡ ಕಲಿಕೆ ಮೊದಲಾಯಿತು, ಆದ್ದರಿಂದ ವಿಜ್ಞಾನವನ್ನು ಬಿಟ್ಟು ಕನ್ನಡದ ಅಭ್ಯಾಸಕ್ಕಾಗಿ ಬಂದೆ. ಈ ಕೆಲಸವನ್ನು ಬಿಟ್ಟುಹೋಗಲು ನನಗೆ ವ್ಯಸನವೇ. ನನ್ನ ಜೀವಮಾನದ ಕೆಲವು ರಸನಿಮಿಷಗಳನ್ನು ನಾನು ವಿದ್ಯಾರ್ಥಿಗಳೊಡನೆ ಕಳೆದಿದ್ದೇನೆ. ನಾನು ಬೆಂಗಳೂರಿಗೆ ಹೋಗುವ ವಿಷಯ ಈಗ ಒಂದೂವರೆ ವರ್ಷದಿಂದಲೂ ಹೊಗೆಯಾಡುತ್ತಲಿತ್ತು. ಅಧ್ಯಕ್ಷರೂ ನನ್ನನ್ನು

ಬಿಟ್ಟುಕೊಡಲು ಒಪ್ಪಿರಲಿಲ್ಲ. ಈಗ ಒಪ್ಪಿದ್ದಾರೆ. ನಾನು ಆ ಕಾರ್ಯನಿರ್ವಹಣೆಗೆ ಹೋಗಲೇಬೇಕಾಗಿದೆ. ಕೊಟ್ಟ ಮಾತನ್ನು ನಡೆಸಿಕೊಡಲೇಬೇಕಾಗಿದೆ. ಇಟ್ಟ ಹೆಜ್ಜೆಯನ್ನು ಹಿಂದಿಡಲಾರೆ. ಇಲ್ಲಿ ಹೃದಯಕ್ಕೆ ಸಂತೋಷ ದೊರಕುತಿತ್ತು. ಅಲ್ಲಿ ಎದುರಿಸುವ ಪದಗಳ ಮರ್ಮ ನನಗೆ ದೊರಕಿದರೆ ಬುದ್ಧಿಗೆ ಸಂತೋಷ ದೊರಕುತ್ತದೆ. ಈ ದೊಡ್ಡ ಕಾರ್ಯಕ್ಕೆ ಶಕ್ತಿಯನ್ನೂ ಸತ್ವವನ್ನೂ ಪರಮಾತ್ಮನು ನನಗೆ ಅನುಗ್ರಹಿಸಲಿ. ನಿಮ್ಮೆಲ್ಲರ ಪ್ರೀತಿವಿಶ್ವಾಸಗಳನ್ನು ಹೊತ್ತು ಈ ಕಾರ್ಯನಿರ್ವಹಣೆಗಾಗಿ ನಾನು ಹೋಗುತ್ತಿದ್ದೇನೆ''.

ಅಧ್ಯಕ್ಷತೆ ವಹಿಸಿದ ಶ್ರೀ ಕುವೆಂಪು ಅವರು ಸಂದರ್ಭೋಚಿತವಾಗಿ, ತುಂಬ ರಸೋತ್ಕಟವಾಗಿ, ಆ ಹೊತ್ತು ಮಾತನಾಡಿದರು. ವಿದ್ಯಾರ್ಥಿದೆಸೆಯ ದಿನಗಳಿಂದಲೂ ತಮಗೂ ಆಚಾರ್ಯರಿಗೂ ಇದ್ದ ಸ್ನೇಹವನ್ನು ನೆನೆದರು. ಆಚಾರ್ಯರ ವಿದ್ವತ್ತು ಪ್ರತಿಭೆ ರಸಿಕತೆಗಳನ್ನು ಪ್ರಶಂಸಿಸಿದರು. ಆಚಾರ್ಯರು ಕೈಕೊಳ್ಳಲಿರುವ ಬೃಹತ್ಕಾರ್ಯ ನಿರ್ವಿಘ್ನವಾಗಿ ನೆರವೇರಲೆಂದು ಆಶಿಸಿದರು.

"ಶ್ರೀ ಡಿ. ಎಲ್. ಎನ್. ರವರು ನಮ್ಮಿಂದ ತೆರಳುವುದು ಸಂಸ್ಥೆಗೆ ದೊಡ್ಡ ನಷ್ಟ; ನಾಡಿಗೆ ಇಮ್ಮಡಿಯ ಲಾಭ. ದೊಡ್ಡ ಲಾಭಕ್ಕಾಗಿ ಸಣ್ಣ ನಷ್ಟವನ್ನು ಸಹಿಸಬೇಕು. ಬೆಂಗಳೂರು ನಮಗೆ ದೂರವಲ್ಲ. ವಿದ್ಯಾರ್ಥಿಗಳು ಬಯಸಿದರೆ ಅವರು ಇಲ್ಲಿಗೆ ಬಂದು ತಮ್ಮ ಜ್ಞಾನವನ್ನು ನಮಗೆ ನೀಡುತ್ತಾರೆ. ಕನ್ನಡಕ್ಕೆ ಒಳ್ಳೆಯ ಸ್ಥಾನ ಲಭಿಸಿದಾಗ ವಿದ್ವಾಂಸರಿಂದ ಉಪನ್ಯಾಸಕೊಡಿಸುವ ಪದ್ಧತಿ ಏರ್ಪಾಟಾಗಬಹುದು. ಶ್ರೀಯುತರನ್ನು ಬಿಟ್ಟುಕೊಡಲು ನಾನು ಹಿಂದು ಮುಂದು ನೋಡಿದೆ. ಕೋಶದ ಕೆಲಸ ನಿಲ್ಲದು. ಆದರೆ ಯಾರೋ ಈ ಕಾರ್ಯವನ್ನು ಅಸಮರ್ಪಕವಾಗಿ ಮಾಡುವುದಕ್ಕಿಂತ ಬಹು ದೊಡ್ಡ ಕೆಲಸವಾದ ಇದನ್ನು ಇವರೇ ಮಾಡುವುದು ಕ್ಷೇಮವೆಂದೆಣಿಸಿ ಇವರನ್ನು ಕಳುಹಿಸಿಕೊಡಲು ಒಪ್ಪಿದ್ದೇನೆ. ಶ್ರೀಯುತರು ವಿದ್ವಾಂಸರು, ಕವಿಹೃದಯವುಳ್ಳವರು. ಇಂದು ಇವರನ್ನು ಬೀಳ್ಕೊಡುತ್ತಿದ್ದೇವೆ. ಇವರು ಈ ಕೆಲಸವನ್ನು ಮುಗಿಸಿ ಬೇಗ ನಮ್ಮಲ್ಲಿಗೆ ಮತ್ತೆ ಬರಲಿ. ಆಗ ಇದಕ್ಕಿಂತಲೂ ಅತಿಶಯವಾಗಿ ಅವರಿಗೆ ಸ್ವಾಗತ ಸಮಾರಂಭವನ್ನು ಏರ್ಪಡಿಸೋಣ. ಶ್ರೀಯುತರಿಗೆ ಈ ಕೆಲಸಕ್ಕೆ ಬೇಕಾಗುವ ಶಕ್ತಿ ಸಾಮರ್ಥ್ಯಗಳನ್ನು ಪರಮಾತ್ಮನು ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇನೆ.''

ಶ್ರೀ ಡಿ. ಎಲ್. ನರಸಿಂಹಾಚಾರ್ಯರು ಕೈಕೊಂಡಿರುವ ಕಾರ್ಯ ಸರ್ಕಾರದವರ, ಮತ್ತು ಸಾರ್ವಜನಿಕರ ಸಹಕಾರ ಸಹಾನುಭೂತಿಗಳಿಂದ ಶೀಘ್ರವಾಗಿ ಮುಗಿಯಲಿ. ಆಚಾರ್ಯರ ಸಂಪಾದಕತ್ವದಲ್ಲಿ ರೂಪುಗೊಳ್ಳುವ ಕೋಶ ಪ್ರಮಾಣಗ್ರಂಥವಾಗಿ ಆಕರ ಗ್ರಂಥವಾಗಿ ತೊಳಗಿ ಬೆಳಗಲಿ ಎಂದು ನಾವು ಆಶಿಸುತ್ತೇವೆ.

ಸಾದರ ಸ್ವೀಕಾರ

೧. **ಶ್ರೀ ರಾಮಕೃಷ್ಣ ವಚನವೇದ** (ಉತ್ತರಾರ್ಧ)—ಮೂಲ ಬಂಗಾಳಿ ಲೇಖಕರು : ' ಮ ' ; ಪ್ರಕಾಶಕರು : ಶ್ರೀ ರಾಮಕೃಷ್ಣ ಆಶ್ರಮ, ಮೈಸೂರು ; ಪುಟಗಳು ಕ್ರೌನ್ ಅಷ್ಟದಳ xiv+೧೦೧೨ (ಶ್ರೀ ಕುವೆಂಪು ಅವರ ಮುನ್ನುಡಿಯೊಡನೆ) ; ಬೆಲೆ, ರೂ. ೧೦-೦-೦.

೨. **ಭಾರತದ ಸಂಕ್ಷಿಪ್ತ ಚರಿತ್ರೆ**—ಮೂಲ ಇಂಗ್ಲಿಷ್ ಲೇಖಕರು : W. H. Moreland and Atul Chandra Bhatterjee ; ಅನುವಾದಕರು : ಶ್ರೀ ಎಂ. ವಾಸುದೇವ ರಾವ್ ; ಪರಿಶೀಲನಕಾರರು : ಶ್ರೀ ವಿ. ರಾಘವೇಂದ್ರರಾಯರು ; ಪ್ರಕಾಶಕರು : ಮದ್ರಾಸು ವಿಶ್ವ ವಿದ್ಯಾನಿಲಯ ; ಪುಟಗಳು ಡೆಮ್ಮಿ, ಅಷ್ಟದಳ ೪೧೯ ; ಉತ್ತಮ ಪ್ರತಿ ಬೆಲೆ, ರೂ. ೧೫-೦-೦.

೩. **ದುರಾಸೆಯ ದಂಡ** (ಮೊದಲಾದ ಐದು ಏಕಾಂಕ ನಾಟಕಗಳು)—ಲೇಖಕರು : ಮೈಸೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ; ಪ್ರಕಾಶಕರು : ಸೆಂಟ್ರಲ್ ಕಾಲೇಜು, ಕರ್ಣಾಟಕ ಸಂಘ, ಬೆಂಗಳೂರು ; ಪುಟಗಳು ೬+೧೧೪ ; ಬೆಲೆ, ರೂ. ೧-೪-೦.

೪. **ಮಕ್ಕಳ ಮಾತು**—ಬರೆದವರು : ಕರ್ಣಾಟಕ ಸಂಘದ ಸದಸ್ಯರು ; ಸಂಪಾದಕರು : ಶ್ರೀ ಜಿ. ಪಿ. ರಾಜರತ್ನಂ; ಪ್ರಕಾಶಕರು : ಕರ್ಣಾಟಕ ಸಂಘ, ಸೆಂಟ್ರಲ್ ಕಾಲೇಜು, ಬೆಂಗಳೂರು ; ಪುಟಗಳು ೯೦ ; ಬೆಲೆ, ರೂ. ೧-೮-೦.

೫. **ಹುಚ್ಚಿಯ ತೆನೆ**—ಬರೆದವರು : ಕರ್ಣಾಟಕ ಸಂಘದ ಸದಸ್ಯರು ; ಸಂಪಾದಕರು : ಶ್ರೀ ಜಿ. ಪಿ. ರಾಜರತ್ನಂ ; ಪ್ರಕಾಶಕರು : ಕರ್ಣಾಟಕ ಸಂಘ, ಸೆಂಟ್ರಲ್ ಕಾಲೇಜು, ಬೆಂಗಳೂರು ; ಪುಟಗಳು ೮೦ ; ಬೆಲೆ, ರೂ. ೧-೦-೦.

೬. **ಗಂಧದ ಹುಡಿ**—ಬರೆದವರು : ಕರ್ಣಾಟಕ ಸಂಘದ ಸದಸ್ಯರು ; ಸಂಪಾದಕರು : ಶ್ರೀ ಜಿ. ಪಿ. ರಾಜರತ್ನಂ ; ಪ್ರಕಾಶಕರು : ಕರ್ಣಾಟಕ ಸಂಘ, ಸೆಂಟ್ರಲ್ ಕಾಲೇಜು, ಬೆಂಗಳೂರು ; ಪುಟಗಳು ೮೦ ; ಬೆಲೆ, ರೂ. ೧-೦-೦.

೭. **ಶ್ರೀ ರಾಮಾಯಣದರ್ಶನಂ ಉಪನ್ಯಾಸಮಾಲೆ**—ವಿವಿಧ ಲೇಖಕರಿಂದ ; ಸಂಪಾದಕರು : ಶ್ರೀ ದೇ. ಜವರೇಗೌಡ ; ಪ್ರಕಾಶಕರು : ಸಾಹಿತ್ಯದರ್ಶನಮಾಲೆ, 'ಗುರುಕೃಪಾ' ವಿ.ವಿ. ಮೊಹಲ್ಲ, ಮೈಸೂರು ; ಪುಟಗಳು ೧೧೨ ; ಬೆಲೆ, ರೂ. ೧-೪-೦.

೮. **ಜೀವನ ಗೀತ** (ಕವನ)—ಬರೆದವರು: ಶ್ರೀ ಜೀ. ಶಂ. ಪರಮಶಿವಯ್ಯ ; ಪ್ರಕಾಶಕರು : ಕಾವ್ಯೋದಯ ಪ್ರಕಾಶನ, ಸರಸ್ವತಿಪುರಂ, ಮೈಸೂರು ; ಪುಟಗಳು ೬೪ ; ಬೆಲೆ, ರೂ. ೧-೦-೦.

೯. **ಜಯದೇವ** (ನಾಟಕ)—ಬರೆದವರು : ' ಕಾವ್ಯ ಶ್ರೀ ' ; ಪ್ರಕಾಶಕರು : ಪ್ರತಿಭಾ ಪ್ರಕಾಶನ, ಕಾಟನ್‌ಪೇಟೆ, ಬೆಂಗಳೂರು ೨ ; ಪುಟಗಳು vi+೭೬ ; ಬೆಲೆ, ರೂ. ೦-೧೨-೦.

೧೦. **ಸ್ವಯಂವರ** (ನಾಟಕ)—ನಾಟಕಕಾರರು : ಶ್ರೀ ಎಂ. ವಿ. ಸೀತಾರಾಮಯ್ಯ ; ಮಾರಾಟಗಾರರು : ಸತ್ಯಶೋಧನ ಪ್ರಕಟನ ಮಂದಿರ, ಕೋಟೆ, ಬೆಂಗಳೂರು ; ಪುಟಗಳು ಫೂಲ್ ಸ್ಕ್ಯಾಪ್ $\frac{೧}{೮}$ ೬೦ ; ಬೆಲೆ, ರೂ. ೦-೧೦-೦.

೧೧. **ಯೋಗಲಹರಿ** (ಕಾವ್ಯ)—ಬರೆದವರು: ಶ್ರೀ ಅ. ಗೌ. ಕಿನ್ನಿಗೋಳಿ ; ಪ್ರಕಾಶಕರು : ಯುಗಪುರುಷ ಪ್ರಕಟಣಾಲಯ, ಕಿನ್ನಿಗೋಳಿ, ದ.ಕ.: ಪುಟಗಳು ೫೨ ; ಬೆಲೆ, ರೂ. ೧-೦-೦.

೧೨. **ಸಮರ್ಪಣೆ** (ಕವನ)—ಬರೆದವರು : "ಕಮಲನಾಥ ;" ಪ್ರಕಾಶಕರು : ಯುಗ ಪುರುಷ ಪ್ರಕಟಣಾಲಯ, ಕಿನ್ನಿಗೋಳಿ, ದ.ಕ ; ಪುಟಗಳು vi+೬೨ ; ಬೆಲೆ, ರೂ. ೧-೦-೦.

೧೩. **ಪಕ್ಷಿಕಾಶಿ** (ಕವನ) ದ್ವಿತೀಯ ಮುದ್ರಣ—ಬರೆದವರು : ಶ್ರೀ ಕುವೆಂಪು ; ಪ್ರಕಾಶಕರು : ಉದಯರವಿ, ವಿ.ವಿ. ಮೊಹಲ್ಲ, ಮೈಸೂರು ; ಪುಟಗಳು ; ಬೆಲೆ, ರೂ. ೧-೧೨-೦.

೧೪. **ಕಾನೂರು ಹೆಗ್ಗಡಿತಿ** (ಕಾದಂಬರಿ) ತೃತೀಯ ಮುದ್ರಣ—ಬರೆದವರು : ಶ್ರೀ ಕುವೆಂಪು ; ಪ್ರಕಾಶಕರು : ಉದಯರವಿ, ವಿ.ವಿ. ಮೊಹಲ್ಲ, ಮೈಸೂರು ; ಪುಟಗಳು ; ಬೆಲೆ, ಸಾದಾಪ್ರತಿ ರೂ. ೬-೮-೦ ; ಉತ್ತಮ ಪ್ರತಿ ರೂ. ೮-೦-೦.

೧೫. **ಹೇಮಂತಗಾನ** (ಕಾದಂಬರಿ)—ಶ್ರೀ ವ್ಯಾಸರಾಯ ಬಲ್ಲಾಳ ; ಪ್ರಕಾಶಕರು : ಉಷಾ ಸಾಹಿತ್ಯಮಾಲೆ, ಮೈಸೂರು ; ಪುಟಗಳು ೪೩೫ ; ಬೆಲೆ, ರೂ. ೩-೪-೦.

೧೬. **ಬಲೆಯು ಬೀಸಿದರು**—ಬಸವರಾಜ ಕಟ್ಟೀಮನಿ ; ಪ್ರಕಾಶಕರು : ಮೋಹನ ಪ್ರಕಾಶನ, ಕೃಷ್ಣಮೂರ್ತಿಪುರಂ. ಮೈಸೂರು. ಪುಟಗಳು ೨೫೯ ; ಬೆಲೆ, ರೂ. ೧-೮-೦.

೧೭. **ಅನಾಥೆ**—ಎಂ. ಗೋಪಾಲಕೃಷ್ಣ ಅಡಿಗ ; ಪ್ರಕಾಶಕರು : ಮೋಹನ ಪ್ರಕಾಶನ, ಕೃಷ್ಣಮೂರ್ತಿಪುರಂ, ಮೈಸೂರು ; ಪುಟಗಳು ೨೮೮ ; ಬೆಲೆ, ರೂ. ೧-೮-೦.

೧೮. **ಕೆನಿಲ್‌ವರ್ತ್**—ಅನುವಾದಕರು : ಎಚ್. ಎಲ್. ನಾಗೇಗೌಡ, ಪ್ರಕಾಶಕರು : ಕನ್ನಡ ಕವಿಕಾವ್ಯಮಾಲೆ, ೫೭೮ ಕೃಷ್ಣರಾಜವನಂ, ಮೈಸೂರು ; ಪುಟಗಳು ೨೮೮ ; ಬೆಲೆ, ರೂ. ೩-೦-೦.

೧೯. **ಪುಸ್ತಕವನ್ನು ಬಿಡು**—ಎಸ್. ಮಂಜನಾಥ್, ಎಂ.ಎ. ; ಪ್ರಕಾಶಕರು : ಕನ್ನಡ ಕವಿಕಾವ್ಯಾಮಾಲೆ, ೫೭೮ ಕೃಷ್ಣರಾಜವನಂ, ಮೈಸೂರು ; ಪುಟಗಳು ೧೨೮ ; ಬೆಲೆ, ರೂ. ೧-೮-೦.

೨೦. **ಪಾರಿಜಾತ**—ಬಿ. ರಾಮರಾವ್ ; ಪ್ರಕಾಶಕರು : ಲೇಖಕರು ; ಬೆಲೆ, ರೂ. ೦-೧೨-೦.

೨೧. **ರಾಜ್ಯಾಂಗತತ್ತ್ವಗಳು**—ಲೇಖಕರು : ಶ್ರೀ ಡಿ.ವಿ.ಜಿ. ಅವರು ; ಪ್ರಕಾಶಕರು : ಕಾವ್ಯಾಲಯ, ಮೈಸೂರು ; ಪುಟಗಳು ೧೪೨ ; ಬೆಲೆ, ರೂ. ೧-೦-೦.

೨೨. **ನವ್ಯಸಾಹಿತ್ಯ ನಿರ್ಮಾಣ** (ಅಖಿಲಭಾರತ ಆಕಾಶವಾಣಿಯ ಮೈಸೂರು ಕೇಂದ್ರದಿಂದ ಪ್ರಸಾರವಾದ ಭಾಷಣಗಳು—ಪ್ರಕಾಶಕರು : ಕಾವ್ಯಾಲಯ, ಮೈಸೂರು ; ಪುಟಗಳು ೪೮ ; ಬೆಲೆ, ೦-೪-೦.

೨೩. **ಶಿವತಾಂಡವ** (ಕವನಸಂಕಲನ)—ಬರೆದವರು : ಶ್ರೀ ಸಾ. ಶಿ. ಮರುಳಯ್ಯ ; ರಾಗಿಣಿ ಪ್ರಕಾಶನ, ಮೈಸೂರು ; ಪುಟಗಳು ಕ್ರೌನ್ ಅಷ್ಟಪತ್ರ ೬೦ ; ಬೆಲೆ, ರೂ. ೧-೦-೦.

೨೪. **ನೌಕಾಘಾತ**—ಮೂಲಲೇಖಕರು : ರವೀಂದ್ರನಾಥ ಠಾಕೂರರು ; ಅನುವಾದಕಿ : ಎಚ್. ಸಾವಿತ್ರಮ್ಮ ; ಪ್ರಕಾಶಕರು : ಕಾವ್ಯಾಲಯ, ಮೈಸೂರು, ೧೯೫೪ ; ಪುಟಗಳು ೨೩೧ ; ಬೆಲೆ, ರೂ. ೧-೪-೦.

೨೫. **ಮುಳ್ಳಿನ ಹಾಸಿಗೆ**—ಬರೆದವರು : ಶ್ರೀ ಪಂ. ಮೂ. ರುದ್ರಮುನಿಸ್ವಾಮಿ ; ಪ್ರಕಾಶಕರು : ಭಾರತೀ ಪ್ರಕಾಶನ, ಕೃಷ್ಣಮೂರ್ತಿಪುರಂ, ಮೈಸೂರು ; ಪುಟ ೩೨೦ ; ಬೆಲೆ, ರೂ. ೧-೮-೦.

೨೬. **ಮೂಲಾನಕ್ಷತ್ರ**—ಬರೆದವರು : ಶ್ರೀ ಶೇಷನಾರಾಯಣ ; ಪ್ರಕಾಶಕರು : ಕಾವ್ಯಾಲಯ, ಮೈಸೂರು ; ಪುಟಗಳು ೨೨೪ ; ಬೆಲೆ, ರೂ. ೧-೪-೦.

ಪ್ರಾಚ್ಯಲೇಖನಮಾಲೆ

ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ—ಜೂನ್-ಡಿಸೆಂಬರ್ ೧೯೫೩.

೧. ಜೈನದರ್ಶನಮ್ (ಕನ್ನಡ ವ್ಯಾಖ್ಯಾನದೊಡನೆ): ಮಹಾಮಹೋಪಾಧ್ಯಾಯ ಪಂಡಿತರತ್ನಂ ದಿ|| ಶ್ರೀ ಲಕ್ಷ್ಮೀಪುರಂ ಶ್ರೀನಿವಾಸಾಚಾರ್ಯರವರು.

೨. ಉತ್ತರ ಕನ್ನಡ ಜಿಲ್ಲೆಯ ಕರಾವಳಿ ಪ್ರದೇಶದಲ್ಲಿ ವಾಸಿಸುವ ಪಂಗಡಗಳ ಮನೆಮಾತು: ಡಾ|| ವರದರಾಜ ಉಮರ್ಜಿ, ಎಂ.ಎ., ಪಿ.ಎಚ್. ಡಿ.

೩. ಮಧುರಾಪುರಿ: ಶ್ರೀ ಹುಲ್ಲೂರು ಶ್ರೀನಿವಾಸ ಜೋಯಿಸರು.

೪. ತಿರುಕ್ಕುಱಳ್ (ತಮಿಳು ಮೂಲ ಮತ್ತು ಕನ್ನಡ ಭಾಷಾಂತರ: ಶ್ರೀ ಎಲ್. ಗುಂಡಪ್ಪ, ಎಂ.ಎ.

೫. ಶ್ರೀ ಕೃಷ್ಣರಾಜ ಮಹಾರಾಜ ಕಂಠೀರವ ವಿರಚಿತವಾದ ಚಾಮುಂಡಾ ಲಘು ನಿಘಂಟು: ಸಂಪಾದಕರು: ಶ್ರೀ ಎಲ್ ಗುಂಡಪ್ಪ, ಎಂ.ಎ.; ಮತ್ತು ಆಸ್ಥಾನ ವಿದ್ವಾನ್ ಎಂ. ಎಸ್. ಸುಬ್ರಹ್ಮಣ್ಯಶಾಸ್ತ್ರಿಗಳು.

ಶಿವಾನುಭವ—ಜೂನ್-ಜುಲಾಯಿ ೧೯೫೪.

೧. ಭಕ್ತಿ: ಶ್ರೀ ಗೌರೀಶಂಕರ ದೇವರು.

೨. ವೇದಪೂರ್ವ ವೀರಶೈವಧರ್ಮ: ಶ್ರೀ ಎನ್. ಎನ್. ವಿರೂಪಾಕ್ಷಯ್ಯ.

೩. ಭಕ್ತಿಯೋಗ: ಶ್ರೀ ಶಿವಾನಂದರು.

೪. ಆಗಮ ವಿಶಿಷ್ಟ ಶಿವತತ್ವ: ಶ್ರೀ ಅವಧಾನಿಶಾಸ್ತ್ರಿ.

೫. ದಾಸೀ ಸಂತ ಜನಾಯಿ: ಶ್ರೀ ಗಿರಿಕುಂದ ಅವಧಾನಿಶಾಸ್ತ್ರಿಗಳು.

೬. ಶಿವಶರಣರ ಚರಿತ್ರೆಗಳು ಭಾಗ ೪: ಶ್ರೀ ರಾ. ಬ. ಫ. ಗು. ಹಳಕಟ್ಟಿ, ಬಿ.ಎ., ಎಲ್‌ಎಲ್.ಬಿ.

೭. ಸಕಲಾಗಮ ಶಿಖಾಮಣಿ ವಚನ: ಶ್ರೀ ರಾ. ಬ. ಫ. ಗು. ಹಳಕಟ್ಟಿ, ಬಿ.ಎ., ಎಲ್‌ಎಲ್.ಬಿ.

ಶಿವಾನುಭವ—ಆಗಸ್ಟ್ ೧೯೫೪.

೧. ಅಕ್ಕನ ತ್ಯಾಗ: ಶ್ರೀ ಗೋದುತಾಯಿ.

೨. ಪೂರ್ಣಯೋಗಕ್ಕಿಂತ ವೀರಶೈವ ಷಟ್‌ಸ್ಥಲವು ಹೆಚ್ಚಿನದು: ಶ್ರೀ ಸ್ವಾಮಿ ಶಿವಾನಂದರು.

ಶಿವಾನುಭವ—ಅಕ್ಟೋಬರ್ ೧೯೫೪.

೧. ವೀರಶೈವ ಮತ್ತು ಷಟಸ್ಥಲ ಬ್ರಹ್ಮಿಯ ವೈಶಿಷ್ಟ್ಯ : ವಿದ್ವಾನ್ ಕೆ. ಎಂ. ರಾಜಶೇಖರಯ್ಯ.

೨. ಅವತಾರ : ಶ್ರೀ ಸ್ವಾಮಿ ಶಿವಾನಂದರು.

೩. ಅಮರಗಣಂಗಳ ಅರಿವು : ಶ್ರೀ ಸಿ. ಸ. ಮಹಾಂತಣ್ಣವರ ಮೂ. ಹೂನೂರ.

೪. ಶ್ರೀ ಇ. ಅಮರಗಣಾಧೀಶ್ವರರು : ಶ್ರೀ ರಾ. ಬ. ಫ. ಗು. ಹಳಕಟ್ಟಿ, ಬಿ.ಎ., ಎಲ್‌ಎಲ್. ಬಿ.

ಶಿವಾನುಭವ—ಡಿಸೆಂಬರ್ ೧೯೫೪.

೧. ಭಕ್ತಿಯೋಗ.

೨. ನಿರ್ಗುಣಪೂಜೆ.

೩. ಲಿಂಗ : ಶ್ರೀ ಸ್ವಾಮಿ ಶಿವಾನಂದರು.

೪. ೭೭೦ ಅಮರಗಣಾಧೀಶ್ವರರ ಚರಿತ್ರೆ.

ಶರಣಸಾಹಿತ್ಯ—ಜೂನ್ ೧೯೫೪.

೧. ಹರಿಹರನ ಮಲುಹಣನ ರಗಳೆ : ಶ್ರೀ ನಾ. ಶಿ. ಮರುಳಯ್ಯನವರು.

ಶರಣಸಾಹಿತ್ಯ—ಜುಲೈ ೧೯೫೪.

೧. ಹರಿಹರನ ಭಕ್ತಿಗೀತೆಗಳು : ಶ್ರೀ ಕೆ. ವೆಂಕಟರಾಯಾಚಾರ್ಯ, ಸುರತ್ಕಲ್.

೨. ಪಾಲ್ಕುರಿಕೆ ಸೋಮನಾಥಕವಿ : ಶ್ರೀ ಬಂಡಾರು ತಮ್ಮಯ್ಯನವರು.

ಶರಣಸಾಹಿತ್ಯ—ಆಗಸ್ಟ್ ೧೯೫೪.

೧. ಕವಿಯಿತ್ರಿ ಅಕ್ಕಮಹಾದೇವಿ : ಶ್ರೀ ಪ್ರೊ॥ ಕೆ. ಜಿ. ಕುಂಡಣಗಾರ್, ಎಂ.ಎ.

೨. ಪಾಲ್ಕುರಿಕೆ ಸೋಮನಾಥಕವಿ : ಶ್ರೀ ಬಂಡಾರು ತಮ್ಮಯ್ಯನವರು.

೩. ಕವಿಶಾಂತಲಿಂಗದೇಶಿಕ.

೪. ಹೆಂಡದ ಮಾರಯ್ಯ : ಶ್ರೀ ಎಚ್. ಎನ್. ರೇಣುಕಪ್ರಸಾದ್.

೫. ಸತ್ಯೇಂದ್ರ ಚೋಳಮಹಾರಾಜ : ಶ್ರೀ ಟಿ. ಶಿವಮೂರ್ತಿಶಾಸ್ತ್ರೀ.

ಶರಣಸಾಹಿತ್ಯ—ಸೆಪ್ಟೆಂಬರ್ ೧೯೫೪.

೧. ನಿಜಗುಣರ ಭಕ್ತಿಗೀತಗಳು : ಶ್ರೀ ಕೆ. ವೆಂಕಟರಾಯಾಚಾರ್ಯ, ವಿದ್ವಾನ್.

೨. ಕರ್ಣಾಟಕ ಕವಿಚೈತ್ರವನ ಚೂತ : ಶ್ರೀ ದೇಸಾಯಿ ಪಾಂಡುರಂಗರಾಯರು, ಎಂ.ಎ.,

೩. ಶ್ರೀ ನಿಜಗುಣ ಶಿವಯೋಗಿಗಳು : ಶ್ರೀ ಟಿ. ಶಿವಮೂರ್ತಿಶಾಸ್ತ್ರೀ.

೪. ಮನುಚೋಳನ ಚರಿತ್ರೆ : ಶ್ರೀ ಟಿ. ಶಿವಮೂರ್ತಿಶಾಸ್ತ್ರೀ.

ಶರಣಸಾಹಿತ್ಯ—ಅಕ್ಟೋಬರ್ ೧೯೫೪.

೧. ಲಾವಣಿ ಮತ್ತು ಪವಾಡ : ಶ್ರೀ ದೇಸಾಯಿ ಪಾಂಡುರಂಗರಾಯರು, ಎಂ.ಎ.

೨. ಹರೀಶ್ವರನು ಚಿತ್ರಿಸಿದ ಪಾರ್ವತಿಪರಮೇಶ್ವರರ ಕಲ್ಯಾಣ : ಶ್ರೀ ಬ. ನ. ಗುಂಡೂರಾವ್.

೩. ಪಾಲ್ಕುರಿಕೆ ಸೋಮನಾಥಕವಿ : ಶ್ರೀ ಬಂಡಾರು ತಮ್ಮಯ್ಯನವರು.

೪. ಆದವಾನಿ ಆಲೂರುಗಳ ಪ್ರಾಚೀನ ಇತಿಹಾಸ : ಶ್ರೀ ಹುಲ್ಲೂರು ಶ್ರೀನಿವಾಸ ಜೋಯಿಸರು.

ಶರಣಸಾಹಿತ್ಯ—ನವಂಬರ್ ೧೯೫೪.

೧. ಆದವಾನಿ ಆಲೂರುಗಳ ಪ್ರಾಚೀನ ಇತಿಹಾಸ : ಶ್ರೀ ಹುಲ್ಲೂರು ಶ್ರೀನಿವಾಸ ಜೋಯಿಸರು.

೨. ಕವಿ ಲಕ್ಷ್ಮೀಶನ ಬಿರುದು : ಶ್ರೀ ಕೆ. ವೆಂಕಟರಾಯಾಚಾರ್ಯ, ಸುರತ್ಕಲ್.

೩. ಪಾಲ್ಕುರಿಕೆ ಸೋಮನಾಥನ ವಿನೂತನ ಕಾವ್ಯಪ್ರತಿಭೆ: ಶ್ರೀ ಭಂಡಾರು ತಮ್ಮಯ್ಯನವರು.

೪. ಶ್ರೀ ರಾಮಾಶ್ವಮೇಧದಲ್ಲಿ ಕಂಗೊಳಿಸುವ ಮುದ್ದಣ ಮನೋರಮೆಯ ಸರಸ ಸಲ್ಲಾಪಗಳು : ಶ್ರೀ ಕೆ. ರಾಘವೇಂದ್ರರಾವ್.

ಕನ್ನಡನುಡಿ—ಜುಲೈ ೧೯೫೪.

ವ್ಯಾಸರ ವಾಸುದೇವ : ಶ್ರೀ ಸಮೇತನ ಹಳ್ಳಿ ರಾಮರಾಯರು.

ಕನ್ನಡನುಡಿ—ಆಗಸ್ಟ್ ೧೯೫೪.

ವ್ಯಾಸರ ವಾಸುದೇವ : ಶ್ರೀ ಸಮೇತನ ಹಳ್ಳಿ ರಾಮರಾಯರು.

ಕನ್ನಡನುಡಿ—ಸೆಪ್ಟೆಂಬರ್ ೧೯೫೪.

೧. ಸಾಹಿತ್ಯದಲ್ಲಿ ಸದಾಚಾರ : ಶ್ರೀ ಮಿ. ಕೃ. ರಾಜಗೋಪಾಲ್, ಎಂ.ಎ.

೨. ಕಲೆ ಮತ್ತು ಸಾಹಿತ್ಯಗಳಲ್ಲಿ ವಾಸ್ತವಿಕತೆಯ ಸ್ಥಾನ: ಶ್ರೀ ವಿ. ಸೀತಾ ರಾಮಯ್ಯ, ಎಂ.ಎ.

ಕನ್ನಡನುಡಿ—ಅಕ್ಟೋಬರ್ ೧೯೫೪

೧. ರೊಮ್ಯಾಂಟಿಸಿಸ್ಮ್ ಮತ್ತು ರಿಯಲಿಸ್ಮ್ : ಶ್ರೀ ಎ. ಎನ್. ಮೂರ್ತಿರಾವ್.

೨. ಸಾಹಿತ್ಯದಲ್ಲಿ ವಾಸ್ತವಿಕತೆಯ ಸ್ಥಾನ: ಶ್ರೀ ಅ. ನ. ಕೃಷ್ಣರಾವ್.

೩. ಸಮಕಾಲೀನ ಕವಿತೆಯಲ್ಲಿ ಸಾಮಾಜಿಕ ಪ್ರಜ್ಞೆ : ಶ್ರೀ ಕೆ. ನರಸಿಂಹಮೂರ್ತಿ, ಎಂ.ಎ.

ಕನ್ನಡನುಡಿ—ನವೆಂಬರ್ ೧೯೫೪.

೧. ಪದಶುದ್ಧಿ : ಶ್ರೀ ಎ. ಕೆ. ಪುಟ್ಟರಾಮು.

೨. ರಾಷ್ಟ್ರಸ್ವಾತಂತ್ರ್ಯ ಮತ್ತು ಸಾಹಿತ್ಯ:—(೧೯೫೪ ನೆ ಆಗಸ್ಟ್ ೧೫ ರಂದು ಮೈಸೂರು ಆಕಾಶವಾಣಿಯಲ್ಲಿ ಪ್ರಸಾರವಾದ ಭಾಷಣಮಾಲೆ.

ಕನ್ನಡನುಡಿ—ಡಿಸೆಂಬರ್ ೧೯೫೪.

೧. 'ಜೋಗುಳ' ವಿಮರ್ಶೆ : ಶ್ರೀ ಕುಲವರ್ಮ ಬಾಲಕೃಷ್ಣ (ದ.ಕ.).

೨. ಪದಶುದ್ಧಿ : ಶ್ರೀ ಎ. ಕೆ. ಪುಟ್ಟರಾಮು.

೩. ಶ್ರೀ ಇ. ಐ. ಭಾಸ್ಕರರಾಯರ ದತ್ತಿ ಬಹುಮಾನಪಡೆದ ವಿಮರ್ಶೆಯ ಲೇಖನಗಳು.

ಜಯಕರ್ಣಾಟಕ—ಜುಲೈ ೧೯೫೪.

೧. ಚಿತ್ರಾಪುರದ ಪ್ರಾಚೀನತೆ : ಶ್ರೀ ಕೆ. ವೆಂಕಟರಾಯಾಚಾರ್ಯ, ವಿದ್ವಾನ್ ಸುರತ್ಕಲ್ಲು.

೨. ಪುಣ್ಯಪುರುಷ ಪುರಂದರದಾಸರು : ಶ್ರೀ ರಾ. ಭ. ಹಾಸಣಗಿ ವಿದ್ವಾನ್.

೩. ಗೌತಮಬುದ್ಧನ ಧರ್ಮ : ಶ್ರೀ ಪಂಡಿತ ಮಹದೇವ ಪ್ರ. ಪೂಜಾರ.

ಜಯಕರ್ಣಾಟಕ—ಆಗಸ್ಟ್ ೧೯೫೪.

೧. ಉತ್ತರ ಕನ್ನಡದ ಮನೆಮಾತುಗಳು : ಶ್ರೀ ಡಾ|| ವರದರಾಜ ಉಮರ್ಜಿ.

೨. ಕಬ್ಬಿಗರ ಬಲ್ಲಹ ಮುದ್ದಣನು ಚಿತ್ರಿಸಿದ ಸೀತೆ : ಶ್ರೀ ಕೆ. ಕುಶಾಲಪ್ಪಗೌಡ, ಮದ್ರಾಸು.

೩. ರಸರಾಜ್ಯದ ರಾಣಿ-ಶೃಂಗಾರ : ಶ್ರೀ ಜಿ. ಆರ್. ಪಾಂಡೇಶ್ವರ.

ಜಯಕರ್ಣಾಟಕ—ಸೆಪ್ಟಂಬರ್ ೧೯೫೪.

೧. ಕೆಲವು ಮಹತ್ವದ ಯೋಗಗಳು : ಶ್ರೀ ಪಂಡಿತ ಕೇಶವಶರ್ಮ, ಗಲಗಲಿ.

ಜಯಕರ್ಣಾಟಕ—ಅಕ್ಟೋಬರ್ ೧೯೫೪.

೧. ಬೌದ್ಧಸಾಹಿತ್ಯ : ಶ್ರೀ ಕಿಬ್ಬಳ್ಳಿ ಗಣಪತಿಶರ್ಮ, ರಾಷ್ಟ್ರಭಾಷಾಪ್ರವೀಣ, ಸಾಹಿತ್ಯರತ್ನ.

೨. ರಾವಣ : ಅನು. ಶ್ರೀ ಶಿವಮೂರ್ತಿಪುರಾಣಿಕ ಬದ್ದಯ್ಯಸ್ವಾಮಿಗಳು.

೩. ಮದುವೆಯ ಮನೆ : ಶ್ರೀ ಪಂಡಿತ ಕೇಶವಶರ್ಮ, ಗಲಗಲಿ.

ಜಯಕರ್ಣಾಟಕ—ನವೆಂಬರ್ ೧೯೫೪.

೧. ಕರ್ಣಾಟಕ ಸಂಗೀತ ತ್ರಿಮೂರ್ತಿಗಳು : ಶ್ರೀ ಪಿ. ವಿ. ರಾಜಮನ್ನಾರ.

ಜೀವನ—ಏಪ್ರಿಲ್ ೧೯೫೪.

ದಿ ಗುಡ್ ಅರ್ತ್ : ಶ್ರೀ ತಿರುಮಲೆ ಶ್ರೀನಿವಾಸಾಚಾರ್ಯ.

ಜೀವನ—ಮೇ ೧೯೫೪.

೧. ಕೊಡಗಿನ ಅರಸು ದುರಂತ ದೇವಪ್ಪರಾಜ : ಶ್ರೀ ಎನ್. ಎಸ್. ಅನಂತ ಪದ್ಮನಾಭರಾವ್.

೨. ಶ್ರೀ ಗೋಪಾಲಕೃಷ್ಣರಾಯರ ಕಥೆಗಳಲ್ಲಿ ಪಾತ್ರಸೃಷ್ಟಿ : ಶ್ರೀ ಎಂ. ವಿ. ಸೀತಾರಾಮಯ್ಯನವರು.

ಜೀವನ—ಜೂನ್ ೧೯೫೪.

ಶ್ರೀ ಗೋಪಾಲಕೃಷ್ಣರಾಯರ ಕಥೆಗಳಲ್ಲಿ ಪಾತ್ರಸೃಷ್ಟಿ : ಶ್ರೀ ಎಂ. ವಿ. ಸೀತಾರಾಮಯ್ಯನವರು.

ಜೀವನ—ಜುಲೈ ೧೯೫೪.

೧. ಶ್ರೀ ಕೃಷ್ಣಚರಿತದ ರೂಪಾಂತರಗಳು : ಶ್ರೀ ಉಡುಪಿ ವೆಂಕಟಕೃಷ್ಣರಾವ್.

೨. ಗದಾಯುದ್ಧದ ಕೆಲವು ಸಮಸ್ಯೆಗಳು : ತಾ. ವರದರಾಜ ಅಯ್ಯಂಗಾರ್.

ಜೀವನ—ಆಗಸ್ಟ್ ೧೯೫೪.

೧. ಇಂದಿನ ಕನ್ನಡಸಾಹಿತ್ಯ ಮತ್ತು ಸಂಸ್ಕಾರ : ಶ್ರೀ ಟಿ. ಎಚ್. ಶ್ರೀಧರ.

೨. ಕನ್ನಡಕ್ಕೆ ಬಂದ ಕಾದಂಬರಿಯುಗ : ಶ್ರೀ ಶಿವರಾಮಕಾರಂತ.

೩. ಗರಡಿಯ ಮನೆಯಲ್ಲಿ ಲೇಖನಿಯ ಗಾರುಡಿ : ಶ್ರೀ ವಿ. ಅಶ್ವತ್ಥನಾರಾಯಣ ರಾವ್.

೪. ಹಿಂದಿನ-ಇಂದಿನ ಗದ್ಯಸಾಹಿತ್ಯ : ಶ್ರೀ ಎಂ. ವಿ. ಸೀತಾರಾಮಯ್ಯ.

೫. ನಮ್ಮ ಪತ್ರಿಕೆಗಳಲ್ಲಿ ಗ್ರಂಥವಿಮರ್ಶೆ : ಶ್ರೀ ಮಾ. ನ. ಚೌಡಪ್ಪ.

ಜೀವನ—ಸೆಪ್ಟಂಬರ್ ೧೯೫೪.

೧. ಕನ್ನಡದಲ್ಲಿ ಲಘುಪ್ರಬಂಧಗಳು : ಶ್ರೀ ಜಿ. ವರದರಾಜರಾವ್.

೨. ಕಲೆಗಾಗಿಯೇ ಕಲೆ : ಶ್ರೀ ರಂ. ಶ್ರೀ ಮುಗಳಿ.

೩. ಸ್ವಾತಂತ್ರ್ಯಾನಂತರದಲ್ಲಿ ಮಹಿಳೆಯರು ರಚಿಸಿದ ಸಾಹಿತ್ಯ : ಶ್ರೀ ಸಿ. ಕೆ. ನಾಗರಾಜರಾವ್.

ಜೀವನ—ಅಕ್ಟೋಬರ್ ೧೯೫೪.

ಸೌಂದರ್ಯವು ವಸ್ತುನಿಷ್ಠವೋ ಮನೋನಿಷ್ಠವೋ : ಶ್ರೀ ಕೆ. ಟಿ. ರಾಮಕೃಷ್ಣ ರಾವ್.

ಜೀವನ—ನವೆಂಬರ್ ೧೯೫೪.

ಕನ್ನಡ ಸಾಹಿತ್ಯದಲ್ಲಿ ಪುರಂದರದಾಸರು : ಶ್ರೀ ಶಂಕರ್ ಕಿಟಿಲಯ ವಿದ್ವಾನ್.

ಜೀವನ—ಡಿಸೆಂಬರ್ ೧೯೫೪.

ಬಸವಣ್ಣನ ಬಳಗ (ಜನಪದಸಾಹಿತ್ಯದ ಚಿತ್ರ) : ಶ್ರೀ ನೀ. ಕಸ್ತೂರಿ.

ಭಾರತಿ—ಡಿಸೆಂಬರ್ ೧೯೫೪.

೧. ಕರುಣರಸಮು : ಶ್ರೀ ಪೋತುಕೂಚಿ ಸುಬ್ರಹ್ಮಣ್ಯಶಾಸ್ತ್ರಿ.

೨. ಯಕ್ಷಗಾನಮುಲು ಸಾಂಪ್ರದಾಯಕ ಪಾತ್ರಲು : ಶ್ರೀ ಎಸ್. ವಿ. ಜೋಗಾರಾವು.

Journal of the Royal Asiatic Society of Great Britain and Ireland—Parts 1 and 2, 1954.

A Dravidian turn in Apabhraṃśa by—K. DEVREESE, PhD.

Language—July-September 1954.

The Segmental Phonemes of Sanskritized Tamil—by MURRAY FOWLER.

Journal of the University of Bombay—September 1954.
(Arts Number)

(1) Hymns to Indra in Mandala—by H. D. VELANKAR
(2) Bādarāyaṇa's Conception of Brahman—by P. H. MODI.
(3) Some unknown senses of plural number as shown by Pāṇini—by R. S. BHATTACHARYA.
(4) The order of the 'Duryodana' Plays of Bhasa—by S. A. DANGE.

Oriental Thought—October 1954.

The Problem of Nāndī and Pūrvaraṅga—by Prof. R. B. ATHAVALE, M.A.

The Quarterly Journal of the Mythic Society—October 1954.

The Antiquity of Mysore—by Dr M. AROKIASWAMI, M.A., PH.D.

Bulletin of the School of Oriental and African Studies: University of London—Vol. XVI, Part 2, 1954.

The Language of the Buddhist Sanskrit Text—by J. BROUGH.

ಪ್ರಬುದ್ಧ ಕರ್ಣಾಟಕ

ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಪತ್ರಿಕೆ

'ಪ್ರಬುದ್ಧ ಕರ್ಣಾಟಕ'ವು ಚೈತ್ರ, ಆಷಾಢ, ಆಶ್ವಯುಜ, ಪುಷ್ಯಮಾಸಗಳಲ್ಲಿ ಆಯಾ ತಿಂಗಳ ಹುಣ್ಣಿಮೆಯ ಹೊತ್ತಿಗೆ ವರ್ಷಕ್ಕೆ ನಾಲ್ಕು ಸಲ ಹೊರಡುತ್ತದೆ.

ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) :

ಸಾಮಾನ್ಯ ಚಂದಾದಾರರಿಗೆ	ರೂ.	೩	೮	೦
ವಾಚನಾಲಯ ಮುಂತಾದ ಸಂಸ್ಥೆಗಳಿಗೆ	ರೂ.	೪	೮	೦
ಮೈಸೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗೆ ಮಾತ್ರ	ರೂ.	೨	೮	೦

ಸಂಚಿಕೆಗಳನ್ನು ರಿಜಿಸ್ಟರ್ ಮೂಲಕ ತರಿಸಿಕೊಳ್ಳಬೇಕೆನ್ನುವವರು ಚಂದಾ ಹಣದ ಜೊತೆಗೆ ರೂ. ೧-೨-೦ ಕಳುಹಿಸಬೇಕು.

ಚಂದಾಹಣವನ್ನೂ ಅದರ ವಿಚಾರವಾಗಿ ಪತ್ರಗಳನ್ನೂ ಕಾರ್ಯದರ್ಶಿ, ಪ್ರಚಾರ ಮತ್ತು ಪ್ರಕಾಶನ ಕಾರ್ಯ, ಯೂನಿವರ್ಸಿಟಿ ಆಫೀಸು, ಮೈಸೂರು, ಎಂಬ ವಿಳಾಸಕ್ಕೆ ಕಳುಹಿಸಬೇಕು. ವಿಶ್ವವಿದ್ಯಾನಿಲಯದ ರಿಜಿಸ್ಟ್ರಾರವರಿಗಾಗಲಿ, ಪ್ರಬುದ್ಧ ಕರ್ಣಾಟಕದ ಸಂಪಾದಕರಿಗಾಗಲಿ ಕಳುಹಿಸಬಾರದು. ಮೈಸೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ಚಂದಾಹಣವನ್ನು ತಮ್ಮ ತಮ್ಮ ಕಾಲೇಜಿನ ಅಕೌಂಟ್ಸ್ ಅಧಿಕಾರಿಗಳಿಗೆ ಮುಂಗಡವಾಗಿ ಸಲ್ಲಿಸಿ, ಪಡೆದ ರಸೀತಿಯನ್ನು ತಮ್ಮ ವಿಳಾಸದೊಂದಿಗೆ ಕಳುಹಿಸಿಕೊಡಬೇಕು. ಕಾಲೇಜುಗಳ ಅಧ್ಯಾಪಕ ವರ್ಗದವರೂ ಇದೇ ರೀತಿ ಮಾಡಬಹುದು. ವಿದ್ಯಾರ್ಥಿಗಳು ತಾವು ವಿದ್ಯಾರ್ಥಿಗಳೆಂಬ ಬಗ್ಗೆ ತಮ್ಮ ಪಾಠಶಾಲೆಯ ಮುಖ್ಯೋಪಾಧ್ಯಾಯರಿಂದ ಒಂದು ಪ್ರಮಾಣಪತ್ರವನ್ನು ಪಡೆದು ಅದನ್ನು ಚಂದಾ ಹಣದೊಡನೆ ಕಳುಹಿಸಬೇಕು. ಚಂದಾದಾರರು ತಮ್ಮ ಚಂದಾ ಹಣವನ್ನು (ಸರ್ಕಾರಿ ಖಜಾನೆಯಲ್ಲಿ 'ಯೂನಿವರ್ಸಿಟಿ ಫಂಡ್'ಗೆ ಕಟ್ಟಿ ಖಜಾನೆ ರಸೀತಿಯನ್ನು ತಮ್ಮ ವಿಳಾಸದೊಡನೆ ಪ್ರಬುದ್ಧ ಕರ್ಣಾಟಕದ ಆಫೀಸಿಗೆ ಕಳುಹಿಸಬಹುದು.)

ಪ್ರಬುದ್ಧ ಕರ್ಣಾಟಕದ ೩೦, ೩೧, ೩೨ ನೆಯ ಸಂಪುಟಗಳನ್ನು ಸಂಪುಟ ಒಂದಕ್ಕೆ ಒಂದು ರೂಪಾಯಿನಂತೆ ಪಡೆಯಬಹುದು. ಸಾಮಾನ್ಯ ಸಂಚಿಕೆಯ ಬೆಲೆ ನಾಲ್ಕಾಣೆ, ಎರಡು ಸಂಚಿಕೆಗಳ ಬೆಲೆ ಎಂಟಾಣೆ. ಅಂಚೆಯ ಮೂಲಕ ತರಿಸಿಕೊಳ್ಳುವವರು ಸಂಪುಟ ಒಂದಕ್ಕೆ ಹದಿಮೂರು ಆಣೆ. ಸಾಮಾನ್ಯಸಂಚಿಕೆ ಒಂದಕ್ಕೆ ಏಳು ಆಣೆ, ಎರಡು ಸಂಚಿಕೆಗಳನ್ನು ಒಳಗೊಂಡ ಸಂಚಿಕೆಗೆ ಒಂಬತ್ತು ಆಣೆಯಂತೆ ಅಂಚೆ ವೆಚ್ಚವನ್ನು ಕಳುಹಿಸಬೇಕು.

'ಪ್ರಬುದ್ಧ ಕರ್ಣಾಟಕ'ದಲ್ಲಿ ಪ್ರಕಟನೆಗೆ ಲೇಖನಗಳನ್ನೂ ವಿಮರ್ಶೆಗೆ ಗ್ರಂಥಗಳನ್ನೂ ವಿನಿಮಯಕ್ಕೆ ಪತ್ರಿಕೆಗಳನ್ನೂ ಪ್ರಬುದ್ಧ ಕರ್ಣಾಟಕದ ಸಂಪಾದಕ (ಮಹಾರಾಜರವರ ಕಾಲೇಜು, ಮೈಸೂರು) ರಿಗೆ ಕಳುಹಿಸಬೇಕು.

ಕಾರ್ಯದರ್ಶಿ,
ವಿಶ್ವವಿದ್ಯಾನಿಲಯದ ಪ್ರಕಟನ ಮತ್ತು
ಪ್ರಚಾರೋಪನ್ಯಾಸ ಶಾಖೆ, ಮೈಸೂರು.

ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಗ್ರಂಥಮಾಲೆ

ಪ್ರಧಾನಸಂಪಾದಕರು :
- ಬಿ. ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್., ೧೯೪೩ ರ ವರೆಗೆ
- ಎ. ಆರ್. ಕೃಷ್ಣಶಾಸ್ತ್ರೀ, ಎಂ.ಎ., ೧೯೪೩ ರಿಂದ ೧೯೪೭ರ ವರೆಗೆ
- ಕೆ. ವಿ. ಪುಟ್ಟಪ್ಪ, ಎಂ.ಎ., ೧೯೪೭ ರಿಂದ

೧. **ಹರಿಶ್ಚಂದ್ರಕಾವ್ಯ ಸಂಗ್ರಹ** (ಐದನೆಯ ಮುದ್ರಣ)—ಸಂಪಾದಕರು : ಟಿ. ಎಸ್. ವೆಂಕಣ್ಣಯ್ಯ, ಎಂ.ಎ. ಮತ್ತು ಎ. ಆರ್. ಕೃಷ್ಣಶಾಸ್ತ್ರೀ, ಎಂ.ಎ.

೨. **ಕರ್ಣಾಟಕ ಕಾದಂಬರೀ ಸಂಗ್ರಹ**—(ಮೂರನೆಯ ಮುದ್ರಣ) ಸಂಪಾದಕರು : ಟಿ. ಎಸ್. ವೆಂಕಣ್ಣಯ್ಯ, ಎಂ.ಎ.

೩. ***ಪ್ರಭುಲಿಂಗಲೀಲೆಯ ಸಂಗ್ರಹ** (ಸಚಿತ್ರ)—ಸಂಪಾದಕರು : ಎಂ. ಎಸ್. ಬಸವಲಿಂಗಯ್ಯ, ಎಂ.ಎ., ಬಿ.ಎಲ್. ಮತ್ತು ಎಂ. ಆರ್. ಶ್ರೀನಿವಾಸಮೂರ್ತಿ, ಬಿ.ಎ.

೪. ***ಸಾಕ್ರೆಟೀಸನ ಕೊನೆಯ ದಿನಗಳು** (ಸಚಿತ್ರ)—ಅನುವಾದಕರು . ಎ. ಎನ್. ಮೂರ್ತಿರಾವ್, ಎಂ.ಎ.

೫. ***ಶ್ರೀರಾಮಕೃಷ್ಣ ಪರಮಹಂಸ**—ಲೇಖಕರು : ಕೆ. ವಿ. ಪುಟ್ಟಪ್ಪ, ಎಂ.ಎ.

೬. ***ರವೀಂದ್ರನಾಥ ಠಾಕೂರರು** (ಸಚಿತ್ರ)—ಲೇಖಕರು : ಮಾಸ್ತಿ ವೆಂಕಟೇಶ ಅಯ್ಯಂಗಾರ್, ಎಂ.ಎ.

೭. **ಆರೋಗ್ಯ, ಅದರ ಜ್ಞಾನ ಮತ್ತು ಸಾಧನ** (ಸಚಿತ್ರ)—ಲೇಖಕರು : ಜೆ. ಎ. ಈಶ್ವರ ಮೂರ್ತಿ, ಬಿ.ಎ., ಎಲ್.ಎಂ.ಎಸ್., ಬಿ.ಎಸ್‌ಸಿ.

೮. **ಪಂಪರಾಮಾಯಣ ಸಂಗ್ರಹ**—ಸಂಪಾದಕರು : ಆಸ್ಥಾನ ಮಹಾವಿದ್ವಾನ್ ತಿರುವಳ್ಳೂರ್ ಶ್ರೀನಿವಾಸರಾಘವಾಚಾರ್ ಮತ್ತು ಡಿ. ಎಲ್. ನರಸಿಂಹಾಚಾರ್, ಎಂ.ಎ.

೯. **ಹಣಪ್ರಪಂಚ**—ಲೇಖಕರು : ವಿ. ಸೀತಾರಾಮಯ್ಯ, ಎಂ.ಎ.

೧೦. ***ಸಂಸ್ಕೃತ ನಾಟಕ**—ಲೇಖಕರು : ಎ. ಆರ್. ಕೃಷ್ಣಶಾಸ್ತ್ರೀ, ಎಂ.ಎ.

೧೧. **ಜೀವವಿಜ್ಞಾನ**—ಲೇಖಕರು : ಬಿ. ವೆಂಕಟನಾರಾಯಣಪ್ಪ, ಎಂ.ಎ.

೧೨. **ಹಿಂದೂದರ್ಶನಸಾರ**—ಲೇಖಕರು : ಮಹಾಮಹೋಪಾಧ್ಯಾಯ ಪಂಡಿತರತ್ನಂ ಲಕ್ಷ್ಮೀಪುರಂ ಶ್ರೀನಿವಾಸಾಚಾರ್ಯ.

೧೩. **ರಾಜನೀತಿ**—ಲೇಖಕರು : ಎಚ್. ಕೃಷ್ಣರಾವ್, ಎಂ.ಎ.

೧೪. **ಹದಿಬದೆಯ ಧರ್ಮ**—ಸಂಪಾದಕಿಯರು: ಡಿ. ಚಂಪಾಬಾಯಿ, ಎಂ.ಎ.

೧೫. ***ಪುರಾಣನಾಮಚೂಡಾಮಣಿ**—ಲೇಖಕರು : ಬೆನಗಲ್ ರಾಮರಾವ್, ಎಂ.ಎ., ಎಲ್‌ಎಲ್.ಬಿ. ಮತ್ತು ಪಾಸ್ಯಂ ಸುಂದರಶಾಸ್ತ್ರಿ.

೧೬. **ಯಶೋಧರ ಚರಿತೆಯ ಸಂಗ್ರಹ**—ಸಂಪಾದಕರು: ಕೆ. ವಿ. ರಾಘವಾಚಾರ್, ಎಂ.ಎ., ಬಿ.ಟಿ.

೧೭. ***ಗ್ರೀಕರ ತತ್ತ್ವಶಾಸ್ತ್ರಸಾರಸಂಗ್ರಹ**—ಲೇಖಕರು: ಕೆ. ಆರ್. ಶ್ರೀನಿವಾಸ ಅಯ್ಯಂಗಾರ್, ಎಂ.ಎ.

೧೮. **ಹಿಂದೂ ದೇಶದ ಭೂಚರಿತ್ರೆ**—ಲೇಖಕರು: ವೈ. ನಾಗಪ್ಪ, ಎಂ.ಎಸ್‌ಸಿ.

೧೯. **ವಚನಧರ್ಮಸಾರ**—ಲೇಖಕರು: ಎಂ. ಆರ್. ಶ್ರೀನಿವಾಸಮೂರ್ತಿ, ಬಿ.ಎ.

೨೦. **ಪ್ರಾಣಿಶಾಸ್ತ್ರ**—ಡಾ|| ಎ. ಸುಬ್ಬರಾವ್, ಬಿ.ಎ., ಡಿ.ಎಸ್‌ಸಿ., ಮತ್ತು ಎ. ನಾರಾಯಣರಾವ್, ಎಂ.ಎಸ್‌ಸಿ.; ಬೆಲೆ, ಸಾದಾ ರೂ. ೧-೪-೦; ಕ್ಯಾಲಿಕೊ ರೂ. ೧-೮-೦.

೨೧. ***ಆಧುನಿಕ ತತ್ತ್ವಶಾಸ್ತ್ರಸಮಸ್ಯೆಗಳು**—ಜಿ. ಹನುಮಂತರಾವ್, ಎಂ.ಎ.: ಬೆಲೆ, ಸಾದಾ ರೂ. ೧-೦-೦.

೨೨. **ಕನ್ನಡ ಕೈಪಿಡಿ** (ಭಾಗ ೫, ಸಾಹಿತ್ಯಚರಿತ್ರೆ)—ಬಿ. ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್.; ಬೆಲೆ, ಸಾದಾ ರೂ. ೧-೪-೦; ಕ್ಯಾಲಿಕೊ ರೂ. ೨-೪-೦.

೨೩. **ಇಸ್ಲಾಂ ಸಂಸ್ಕೃತಿ**—ಮೂಲಲೇಖಕರು: ಪ್ರೊ|| ಮಹಮದ್ ಅಬ್ಬಾಸ್ ಷೂಸ್ತ್ರಿ; ಅನುವಾದಕರು: ರಾಜಸೇವಾಸಕ್ತ ಬಿ. ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್.; ಬೆಲೆ, ರೂ. ೨-೦-೦.

೨೪. **ತಮಿಳು ಪಾಠಗಳು**—ಲೇಖಕರು: ಎಸ್. ರುದ್ರಪತಿ, ಎಂ.ಎ.; ಬೆಲೆ, ಸಾದಾ ರೂ. ೩-೪-೦.

೨೫. **ಅಶೋಕ**—ಲೇಖಕರು: ಎನ್. ಕಸ್ತೂರಿ, ಎಂ.ಎ., ಬಿ.ಎಲ್.; ಬೆಲೆ, ಸಾದಾ ರೂ. ೧-೨-೦.

೨೬. **ಭಾರತೀಯ ಕಾವ್ಯಮೀಮಾಂಸೆ**—ಲೇಖಕರು: ಪ್ರೊ|| ತೀ. ನಂ. ಶ್ರೀಕಂಠಯ್ಯ, ಎಂ.ಎ.; ಬೆಲೆ, ಸಾದಾ ರೂ. ೩-೮-೦; ಉತ್ತಮ ರೂ. ೪-೦-೦.

೨೭. **ಭಾರತೀಯ ಸಂಸ್ಕೃತಿ**—ಲೇಖಕರು: ಡಾ|| ಎಸ್. ಶ್ರೀಕಂಠಶಾಸ್ತ್ರೀ, ಎಂ.ಎ., ಡಿ.ಲಿಟ್.; ಬೆಲೆ, ಸಾದಾ ರೂ. ೩-೦-೦; ಉತ್ತಮ ರೂ. ೪-೦-೦.

೨೮. **ಸಾರ್ವಜನಿಕ ಹಣಕಾಸು**—ಲೇಖಕರು: ಶ್ರೀ ವಿ. ಎಲ್. ಡಿ'ಸೋಜ, ಬಿ.ಎ., ಬಿ.ಕಾಂ. (ಲಂಡನ್) ಮತ್ತು ಶ್ರೀ ಬಿ. ಆರ್. ಸುಬ್ಬರಾವ್, ಎಂ.ಎ., ಡಿಪ್-ಇನ್-ಕಾಂ; ಬೆಲೆ, ಸಾದಾ ರೂ. ೨-೮-೦; ಉತ್ತಮ ರೂ. ೩-೮-೦.

ಈ ಗ್ರಂಥಮಾಲೆಯ ಪುಸ್ತಕಗಳನ್ನು ತರಿಸಿಕೊಳ್ಳಲಿಚ್ಛಿಸುವವರು ಈ ಕೆಳಗಿನ ವಿಳಾಸಕ್ಕೆ ಬರೆಯಬೇಕು.

ಸೂಪರಿಂಟೆಂಡೆಂಟ್,

ಓರಿಯಂಟಲ್ ರಿಸರ್ಚ್ ಇನ್‌ಸ್ಟಿಟ್ಯೂಟ್, ಮೈಸೂರು.

ಮೈಸೂರು ವಿಶ್ವವಿದ್ಯಾನಿಲಯದ ಪ್ರಚಾರ ಪುಸ್ತಕಮಾಲೆ

೧. *ಖಗೋಳಶಾಸ್ತ್ರಪ್ರವೇಶ—ಸಿ. ಎನ್. ಶ್ರೀನಿವಾಸ ಅಯ್ಯಂಗಾರ್, ಡಿ.ಎಸ್‌ಸಿ.
೨. ಸಮಾಜದ ರೋಗರುಜಿನಗಳು—ಜಿ. ಹನುಮಂತರಾವ್, ಎಂ.ಎ.
೩. ತೆರಿಗೆ—ಬಿ. ಆರ್. ಸುಬ್ಬರಾವ್, ಎಂ.ಎ.
೪. *ನವರತ್ನಗಳು—ಎಚ್. ಸುಬ್ಬಾಜೋಯಿಸ್, ಎಂ.ಎಸ್‌ಸಿ.
೫. ನಮ್ಮ ಹಳ್ಳಿಗಳು—ಜಿ. ಎನ್. ಕೃಷ್ಣಮೂರ್ತಿ, ಎಂ.ಎ.
೬. ಕುಮಾರವ್ಯಾಸ—ಎಸ್. ವಿ. ರಂಗಣ್ಣ, ಎಂ.ಎ.
೭. ಹಂಪೆಯ ಹರಿಹರ—ಡಿ. ಎಲ್. ನರಸಿಂಹಾಚಾರ್, ಎಂ.ಎ.
೮. ಕನ್ನಡ ಸಾಹಿತ್ಯ—ಕೆ. ವೆಂಕಟರಾಮಪ್ಪ, ಎಂ.ಎ.
೯. *ವಿದ್ಯುಚ್ಛಕ್ತಿಯ ವೈಭವ—ಬಿ. ಎ. ಕೃಷ್ಣಸ್ವಾಮಿರಾವ್, ಎಂ.ಎಸ್‌ಸಿ.
೧೦. ಪಂಪ—ಟಿ. ಎನ್. ಶ್ರೀಕಂಠಯ್ಯ, ಎಂ.ಎ.
೧೧. ಪ್ರಾಣಿಜೀವನ—ಎ. ನಾರಾಯಣರಾವ್, ಎಂ.ಎಸ್‌ಸಿ.
೧೨. ಕನಸುಗಳು—ಡಾ|| ಎನ್. ಎಸ್. ನಾರಾಯಣಶಾಸ್ತ್ರೀ, ಎಂ.ಎ., ಡಿ.ಲಿಟ್.
೧೩. ಮದುವೆ—ಎನ್. ಕಸ್ತೂರಿ, ಎಂ.ಎ., ಬಿ.ಎಲ್.
೧೪. ನಮ್ಮ ಆರ್ಥಿಕದೃಷ್ಟಿ—ಎಸ್. ಗೋಪಾಲಸ್ವಾಮಿ, ಎಂ.ಎ.
೧೫. ವಾಯುಗುಣ—ಕೆ. ಶೇಷಾದ್ರಿ ಅಯ್ಯಂಗಾರ್, ಎಂ.ಎಸ್‌ಸಿ., ಎಲ್‌ಎಲ್.ಬಿ.
೧೬. ಬೆಳಕು—ಟಿ. ಎಸ್. ಸುಬ್ಬರಾಯ, ಎಂ.ಎಸ್‌ಸಿ.
೧೭. ಕರ್ಣಾಟಕ ಕಾದಂಬರಿ—ವಿ. ಸೀತಾರಾಮಯ್ಯ, ಎಂ.ಎ.
೧೮. ಕಾಳಿದಾಸನ ಕಾವ್ಯಗಳು—ಎಸ್. ರಾಮಚಂದ್ರರಾವ್, ಎಂ.ಎ.
೧೯. ಇಂಗ್ಲೆಂಡಿನ ರಾಜಕೀಯ ಬೆಳವಣಿಗೆ—ಪಿ. ಜಿ. ಸತ್ಯಗಿರಿನಾಥನ್, ಎಂ.ಎ.
೨೦. ಕಣ್ಣು ಮತ್ತು ಅದರ ರಕ್ಷಣೆ—ಡಿ. ಶಾಮಣ್ಣ, ಬಿ.ಎ., ಎಂ.ಬಿ., ಬಿ.ಎಸ್.
೨೧. *ಸಾರ್ವಜನಿಕ ವೆಚ್ಚ—ಡಾ|| ಎಂ. ಎಚ್. ಗೋಪಾಲ್, ಎಂ.ಎ., ಪಿಎಚ್.ಡಿ.
೨೨. ಶಿಶುವಿಹಾರಗಳು—ಸಿ. ರಂಗಾಚಾರ್, ಬಿ.ಎಸ್‌ಸಿ., ಎಂ.ಎಡ್.
೨೩. ಸಂಖ್ಯೋದ್ಯಾನ—ಬಿ. ಸೀತಾರಾಮಶಾಸ್ತ್ರೀ, ಎಂ.ಎ.
೨೪. ವಿಡಂಬನ—ಎಸ್. ವಿ. ರಂಗಣ್ಣ, ಎಂ.ಎ.
೨೫. *ಎಲ್ಲೋರ ಮತ್ತು ಅಜಂತಾ—ಡಾ|| ಎಂ. ಎಚ್. ಕೃಷ್ಣ, ಎಂ.ಎ., ಡಿ.ಲಿಟ್.
೨೬. ಸಾರಜನಕದ ಮಹತ್ವ—ಎಚ್. ಸುಬ್ಬಾಜೋಯಿಸ್, ಎಂ.ಎಸ್‌ಸಿ.
೨೭. ಭಾಸ—ಡಾ|| ಎಚ್. ಎಲ್. ಹರಿಯಪ್ಪ, ಎಂ.ಎ., ಪಿಎಚ್.ಡಿ.
೨೮. ಪಾಶ್ಚಾತ್ಯ ರಾಜಕೀಯ ತತ್ವಗಳು—ಎಂ. ಯಾಮುನಾಚಾರ್ಯ, ಎಂ.ಎ.
೨೯. ಸರ್ವಜ್ಞಕವಿ—ಎ. ಆರ್. ಕೃಷ್ಣಶಾಸ್ತ್ರೀ, ಎಂ.ಎ.

೩೦. ರಕ್ತ—ಡಿ. ಶಾಮಣ್ಣ, ಬಿ.ಎ., ಎಂ.ಬಿ., ಬಿ.ಎಸ್.
೩೧. ಇಂಗ್ಲಿಷ್ ಪ್ರಬಂಧಗಳು—ಎಸ್. ಮಂಜುನಾಥ್, ಎಂ.ಎ.
೩೨. ಅಕ್ಕಮಹಾದೇವಿ—ಎಸ್. ವಿ. ಪರಮೇಶ್ವರಭಟ್ಟ, ಎಂ.ಎ.
೩೩. ಗಣಿತಶಾಸ್ತ್ರದ ಸ್ವರೂಪ—ಡಾ|| ಸಿ. ಎನ್. ಶ್ರೀನಿವಾಸ ಅಯ್ಯಂಗಾರ್, ಡಿ.ಎಸ್‌ಸಿ.
೩೪. *ಋಗ್ವೇದ—ಎಂ. ಎ. ಕೃಷ್ಣಸ್ವಾಮಿ, ಎಂ.ಎ.
೩೫. ಕುಮಾರವ್ಯಾಸ ವಾಣಿ—ಎಸ್. ವಿ. ರಂಗಣ್ಣ, ಎಂ.ಎ.
೩೬. ಆಳ್ವಾರುಗಳು—ಎಂ. ಯಾಮುನಾಚಾರ್ಯ, ಎಂ.ಎ.
೩೭. ಹಿಂದು ಮುಸ್ಲಿಂ ಮೈತ್ರಿಯನ್ನು ಬೆಳಸಿದ ರಾಜರು—ವಿ. ರಾಘವೇಂದ್ರರಾವ್, ಎಂ.ಎ., ಬಿ.ಟಿ.
೩೮. ಸುಭಾಷಿತ ಸಂಗ್ರಹಗಳು—ಎಂ. ಪಿ. ಲಕ್ಷ್ಮೀನರಸಿಂಹಶಾಸ್ತ್ರೀ, ಎಂ.ಎ.
೩೯. ಮಕ್ಕಳ ಭಾವಜೀವನ—ಡಾ|| ಬಿ. ಕುಪ್ಪುಸ್ವಾಮಿ ನಾಯಿಡು, ಎಂ.ಎ., ಡಿ.ಲಿಟ್.
೪೦. ಸಹಕಾರ—ಎಸ್. ಗೋಪಾಲಸ್ವಾಮಿ, ಎಂ.ಎ.
೪೧. *ನಯಸೇನ—ಜಿ. ವೆಂಕಟಸುಬ್ಬಯ್ಯ, ಎಂ.ಎ., ಬಿ.ಟಿ.
೪೨. ಕೌಟಿಲ್ಯ—ಡಾ|| ಎಂ. ವಿ. ಕೃಷ್ಣರಾವ್, ಎಂ.ಎ., ಬಿ.ಟಿ., ಡಿ.ಲಿಟ್.
೪೩. ತೆಲುಗು ಚಾಟುಪದ್ಯಗಳು—ಕೆ. ವೆಂಕಟರಾಮಪ್ಪ, ಎಂ.ಎ.
೪೪. ಮುನಿಸಿಪಾಲಿಟಿಗಳು—ಎಚ್. ಕೃಷ್ಣರಾವ್, ಎಂ.ಎ.
೪೫. *ಲಕ್ಷ್ಮೀಶ—ಎನ್. ಅನಂತರಂಗಾಚಾರ್, ಎಂ.ಎ., ಬಿ.ಟಿ.
೪೬. ರುಚಿ—ಎಸ್. ವಿ. ರಂಗಣ್ಣ, ಎಂ.ಎ.
೪೭. ಕೀಟಗಳು—ಡಿ. ಎಸ್. ವೀರಯ್ಯ, ಎಂ.ಎಸ್‌ಸಿ.
೪೮. ಅಲೆಗಳು—ಕೆ. ಶೇಷಾದ್ರಿ ಅಯ್ಯಂಗಾರ್, ಎಂ.ಎಸ್‌ಸಿ., ಎಲ್‌ಎಲ್.ಬಿ.
೪೯. ಮುದ್ರಣ—ಟಿ. ಎಸ್. ಶಾಮರಾವ್, ಎಂ.ಎ.
೫೦. ಐವರು ಭೌತವೈಜ್ಞಾನಿಕರು—ಬಿ. ಎ. ಕೃಷ್ಣಸ್ವಾಮಿರಾವ್, ಎಂ.ಎಸ್‌ಸಿ.
೫೧. *ಕೃತಕ ರೇಷ್ಮೆ—ಎಂ. ಷಡಕ್ಷರಸ್ವಾಮಿ, ಎಂ.ಎಸ್‌ಸಿ.
೫೨. *ಚೀನರ ಇತಿಹಾಸ ಮತ್ತು ನಾಗರಿಕತೆ—ಎಸ್. ವೆಂಕಟದೇಶಿಕಾಚಾರ್, ಎಂ.ಎ.
೫೩. *ಯುದ್ಧಕಾಲದ ಆರ್ಥಿಕ ಸಮಸ್ಯೆಗಳು—ಎಸ್. ಲಕ್ಷ್ಮೀನರಸಿಂಹನ್, ಎಂ.ಎ.
೫೪. *ಆಹಾರ—ಜೆ. ಆರ್. ಲಕ್ಷ್ಮಣರಾವ್, ಎಂ.ಎಸ್‌ಸಿ.
೫೫. *ಇಬ್ಸನ್ನಿನ ಕೆಲವು ನಾಟಕಗಳು—ಎಸ್. ಮಂಜುನಾಥ್, ಎಂ.ಎ.
೫೬. ಶಬ್ದಪ್ರಪಂಚ—ಆರ್. ಎಲ್. ನರಸಿಂಹಯ್ಯ, ಎಂ.ಎಸ್‌ಸಿ.

೫೭. ಪ್ರಜಾಭಿಪ್ರಾಯ—ಟಿ. ಎಸ್. ರಾಜಗೋಪಾಲ ಅಯ್ಯಂಗಾರ್, ಎಂ.ಎ.,
ಎಲ್‌ಎಲ್.ಬಿ.

೫೮. ಕಲ್ಲಿದ್ದಲು—ಕೆ. ಎಸ್. ಲಕ್ಷ್ಮಣರಾವ್. ಎಂ.ಎಸ್‌ಸಿ.

೫೯. ಜನಪದಮುಕ್ತಕಗಳು—ಎಚ್. ಎಂ. ಶಂಕರನಾರಾಯಣರಾವ್, ಎಂ.ಎ.

ವಿಶ್ವವಿದ್ಯಾನಿಲಯದ ಪ್ರಚಾರೋಪನ್ಯಾಸದ ಪುಸ್ತಕಗಳನ್ನು ಮತ್ತು ಪುಟ್ಟಣ್ಣಚೆಟ್ಟರ ಪುದುವಟ್ಟಿನಮಾಲೆಯ ಪುಸ್ತಕಗಳನ್ನು ಕೊಳ್ಳುವವರಿಗೆ ಈ ಕೆಳಗೆ ಕಂಡಂತೆ ಕಮೀಷನ್ ಕೊಡಲಾಗುವುದು. ಅಂಚೆ ಮತ್ತು ಪುಸ್ತಕವನ್ನು ಕಳುಹಿಸುವ ಖರ್ಚು ಪ್ರತ್ಯೇಕ.

ಶೇಕಡ ೧೬೨/೩ ರಂತೆ ೫೦ ಪುಸ್ತಕಗಳನ್ನು ಕೊಳ್ಳುವವರಿಗೆ
ಶೇಕಡ ೨೦ ರಂತೆ ೨೦೦ ಪುಸ್ತಕಗಳನ್ನು ಕೊಳ್ಳುವವರಿಗೆ
ಶೇಕಡ ೨೫ ರಂತೆ ೫೦೦ ಪುಸ್ತಕಗಳನ್ನು ಕೊಳ್ಳುವವರಿಗೆ
ಶೇಕಡ ೩೩೧/೩ ರಂತೆ ೨೦೦೦ ಪುಸ್ತಕಗಳನ್ನು ಒಂದು ವರ್ಷದಲ್ಲಿ ಕೊಳ್ಳುವವರಿಗೆ

ಸಾಧಾರಣ ಪ್ರತಿ ೩ ಆಣೆ. ಉತ್ತಮ ಪ್ರತಿ ೪ ಆಣೆ.

ಕಾರ್ಯದರ್ಶಿ, ಪ್ರಚಾರ ಮತ್ತು ಪ್ರಕಾಶನಕಾರ್ಯ,
ಯೂನಿವರ್ಸಿಟಿ ಆಫೀಸ್ ಕಟ್ಟಡ, ಮೈಸೂರು.

---

* ಈ ಪುಸ್ತಕಗಳು ನಮ್ಮಲ್ಲಿ ಸಿಗುವುದಿಲ್ಲ.

ಸರ್ ಕೆ. ಪಿ. ಪುಟ್ಟಣ್ಣಚೆಟ್ಟರ ಪುದುವಟ್ಟಿನ ಪ್ರಕಟನಮಾಲೆ

೧. *ಟಪಾಲ್ ಸಂಸ್ಥೆಯ ವಿವರ—ಕೆ. ಲಕ್ಷ್ಮೀನರಸಿಂಹಯ್ಯ, ಬಿ.ಎ., ಎಲ್ ಎಲ್ ಬಿ.
೨. *ವಿಶ್ವವಿಸರಣ—ಜಿ. ಎಸ್. ಪರಮಶಿವಯ್ಯ, ಎಂ.ಎಸ್ ಸಿ.
೩. *ಸರ್ಕಾರದ ಪದ್ಧತಿ ಮತ್ತು ರಚನಾಕ್ರಮ—ಎಚ್. ಕೃಷ್ಣರಾವ್, ಎಂ.ಎ.
೪. *ವ್ಯವಸಾಯದ ಮಣ್ಣುಗಳು—ಕೂರಪಾಡು ಗುಂಡಪ್ಪ, ಬಿ.ಎ.
೫. *ಆಕಾಶಯಾನ—ಬಿ. ಕೆ. ಎ. ರಾವ್.
೬. *ವಿಶ್ವವಿದ್ಯಾನಿಲಯಗಳು—ಡಾ|| ಎಂ. ಸಿದ್ಧಲಿಂಗಯ್ಯ, ಎಂ.ಎ., ಬಿ.ಟಿ., ಪಿಎಚ್.ಡಿ., ಡಿಪ್.ಎಡ್. ಮತ್ತು ಸಿ. ರಂಗಾಚಾರ್, ಬಿ.ಎಸ್ ಸಿ., ಎಂ.ಎಡ್.
೭. *ಹೆರಿಗೆ ಮತ್ತು ಶಿಶುಪೋಷಣೆ—ಡಾ|| ರತ್ನಮ್ಮ ಐಸಾಕ್, ಎಲ್.ಎಂ.ಎಸ್., ಎಂ.ಆರ್.ಸಿ.ಎಸ್., ಎಲ್.ಆರ್.ಸಿ.ಪಿ.
೮. *ಮಲೇರಿಯಾ ನಿರೋಧ—ಬಿ. ಅನಂತಸ್ವಾಮಿರಾವ್, ಬಿ.ಎಸ್ ಸಿ., ಎಂ.ಬಿ., ಬಿ.ಎಸ್., ಎಂ.ಪಿ.ಎಚ್.
೯. *ಗ್ರಾಮ ನೈರ್ಮಲ್ಯ—ಎಸ್. ಡಿ. ನಾರಾಯಣಗೌಡ, ಎಂ.ಬಿ., ಬಿ.ಎಸ್., ಡಿ.ಪಿ., ಎಚ್.
೧೦. ಪಶುಪಾಲನೆ—ಎಂ. ಕೃಷ್ಣಶಾಸ್ತ್ರೀ ಬಿ.ಎ., ಐ.ಡಿ.ಡಿ., ಅಸೋಸಿಯೇಟ್ ಐ.ಡಿ.ಆರ್.ಐ.
೧೧. *ಯೋಗಾಸನಗಳು—ವಿದ್ವಾನ್ ಟಿ. ಕೃಷ್ಣಮಾಚಾರ್ಯ.
೧೨. ಮೈಸೂರು ದೇಶದ ರಸಾಯನಿಕ ಕೈಗಾರಿಕೆಗಳು—ಕೆ. ಅಶ್ವತ್ಥನಾರಾಯಣ ರಾವ್, ಡಿ.ಎಸ್ ಸಿ.
೧೩. ವಿದ್ಯುಚ್ಛಕ್ತಿಯ ಉಪಯೋಗ—ಎಂ. ಜಿ. ತಿರುನಾರಾಯಣ, ಬಿ.ಎ., ಬಿ.ಎಸ್ ಸಿ. (ಆನರ್ಸ್, ಇ.ಇ.) ಸಿ.ಪಿ., ಇ.ಟಿ. (ಐ.ಐ.ಎಸ್.)
೧೪. ಮಕ್ಕಳ ಬೆಳವಣಿಗೆ—ಡಾ|| ಬಿ. ಕುಪ್ಪುಸ್ವಾಮಿನಾಯಿಡು, ಎಂ.ಎ., ಡಿ.ಲಿಟ್.
೧೫. ರೇಡಾರ್—ಆರ್. ಎಲ್. ನರಸಿಂಹಯ್ಯ, ಎಂ.ಎಸ್ ಸಿ. ಸಾಧಾರಣ ಪ್ರತಿ ೬ ಆಣೆ, ಉತ್ತಮ ಪ್ರತಿ ೮ ಆಣೆ.
೧೬. ಗಣಿಕೆಲಸದ ಕೈಪಿಡಿ—ಜೆ. ಪಿ. ಡೇವಿಡ್, ಬಿ.ಎಸ್ ಸಿ. ಸಾಧಾರಣ ಪ್ರತಿ ೬ ಆಣೆ, ಉತ್ತಮ ಪ್ರತಿ ೮ ಆಣೆ.

ಸಾಧಾರಣ ಪ್ರತಿ ೨ ಆಣೆ; ಉತ್ತಮ ಪ್ರತಿ ೩ ಆಣೆ.

ಕಾರ್ಯದರ್ಶಿ,
ಪ್ರಕಟನಶಾಖೆ ಮತ್ತು ವಿಶೇಷೋಪನ್ಯಾಸಗಳು,
ಯೂನಿವರ್ಸಿಟಿ ಆಫೀಸ್, ಮೈಸೂರು.

ಪ್ರಬುದ್ಧ ಕರ್ಣಾಟಕ

ಸಂಪುಟ ೩೬

(ಜಯ ಸಂವತ್ಸರ)

ಮೈಸೂರು :

ಮೈಸೂರು ವಿಶ್ವವಿದ್ಯಾನಿಲಯ

೧೯೫೪-೧೯೫೫

ವೆಸ್ಲಿ ಪ್ರೆಸ್ ಮತ್ತು ಪಬ್ಲಿಷಿಂಗ್ ಹೌಸ್
ಮೈಸೂರು

ವಿಷಯ ಸೂಚಿಕೆ

೬. ಕಥೆಗಳು—

೭. ಕಾವ್ಯಾವಲೋಕನ—

೮. ವಸ್ತುಕೋಶ—

ಪ್ರಬುದ್ಧ ಕರ್ಣಾಟಕಕ್ಕೆ ವಿನಿಮಯವಾಗಿ ಬರುವ ಪತ್ರಿಕೆಗಳು

ಇಂಗ್ಲಿಷ್ ಪತ್ರಿಕೆಗಳು

Annals of the Oriental Research Institute, University, Madras; *Bramhavidya*, Adyar, Madras; *Bulletin of the School of Oriental Studies*, London; *Journal of the Andhra Historical Research Society*, Rajahmundry; *Journal of the Karnataka Historical Research Society*, Dharwar; *Quarterly Journal of the Mythic Society*, Bangalore; *The Indian* P.E.N., Bombay; *Annals of the Venkateswara Oriental Institute*, Tirupati; *The Jaina Siddhanta Bhaskara* and *The Jaina Gazette*, Arrah; *Bulletin of the Deccan College Research Institute*, Poona; *Publication of the Kannada Research Office*, Dharwar; *The Journal of the Literary Committee of the L.E. Association*, Dharwar; *Annals of Bhandarkar Oriental Research Institute*, Poona.

ವಾರಪತ್ರಿಕೆಗಳು

'ಒಕ್ಕಲಿಗರ ಪತ್ರಿಕೆ', ಬೆಂಗಳೂರು; 'ಕಂಠೀರವ', ಮಂಗಳೂರು; 'ಚೇತನಾ', ಬೆಂಗಳೂರು; 'ಕರ್ಣಾಟಕ ವೈಭವ', ಬಿಜಾಪುರ; 'ಪ್ರಭಾತ', ಮಂಗಳೂರು.

ಮಾಸಪತ್ರಿಕೆಗಳು

'ಆಂಧ್ರ ಸಾಹಿತ್ಯ ಪರಿಷತ್ಪತ್ರಿಕೆ' (ತೆಲುಗು), ಕಾಕಿನಾಡ; 'ಕತೆಗಾರ', ಬೆಂಗಳೂರು; 'ಕನ್ನಡ ಸಹಕಾರಿ', ಮಂಗಳೂರು; 'ಜಯಕರ್ನಾಟಕ,' ಧಾರವಾಡ; 'ಜಯಂತಿ', ಧಾರವಾಡ; 'ಮೈಸೂರು ವ್ಯವಸಾಯ ಶೋಧಕ ಸಂಘದ ಪತ್ರಿಕೆ', ಬೆಂಗಳೂರು; 'ಮಕ್ಕಳ ಪುಸ್ತಕ', ಬೆಂಗಳೂರು; 'ಮೈಸೂರು ಸಹಕಾರ ಪತ್ರಿಕೆ', ಬೆಂಗಳೂರು; 'ವಿದ್ಯಾದಾಯಿನಿ', ಮೈಸೂರು; 'ವಿವೇಕಾಭ್ಯುದಯ', ಮೈಸೂರು; 'ಶರಣಸಾಹಿತ್ಯ', ಬೆಂಗಳೂರು; 'ಶಿವಾನುಭವ', ಬಿಜಾಪುರ; 'ಸದ್ಬೋಧಚಂದ್ರಿಕೆ, ಅಗಡಿ; 'ಸರಸ್ವತಿ', ಬೆಂಗಳೂರು; 'ಸುಬೋಧ', ಬೆಂಗಳೂರು; 'ಜೀವನ', ಬೆಂಗಳೂರು; 'ಕಥಾವಳಿ', ಬೆಂಗಳೂರು; 'ಪುಸ್ತಕ ಪ್ರಪಂಚ', ಮೈಸೂರು; 'ಕನ್ನಡ ನುಡಿ', ಬೆಂಗಳೂರು;

ತ್ರೈಮಾಸಿಕಪತ್ರಿಕೆಗಳು

'ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ', ಬೆಂಗಳೂರು; 'ಭಾರತ ಇತಿಹಾಸ ಸಂಶೋಧನ ಮಂಡಲದ ಪತ್ರಿಕೆ' (ಮರಾಠಿ), ಪೂನಾ.

ಗ್ರಂಥಮಾಲೆ

'ಮನೋಹರ ಗ್ರಂಥಮಾಲೆ,' ಧಾರವಾಡ; 'ಮಿಂಚಿನಬಳ್ಳಿ', ಧಾರವಾಡ.

ಮೈಸೂರು ಮಹಾರಾಜರವರ ಕಾಲೇಜಿನ
ಕರ್ಣಾಟಕ ಸಂಘದ ಪ್ರಕಟನೆಗಳು

೧. **ನಾಗಾನಂದನಾಟಕ** (ಶ್ರೀ ಅನಂತನಾರಾಯಣ ಶಾಸ್ತ್ರಿಗಳವರಿಂದ)—ಬೆಲೆ, ರೂ. ೧-೦-೦; ಮಾರಾಟಗಾರರು: ಪ್ರೋಗ್ರೆಸ್ ಬುಕ್ ಸ್ಟಾಲ್, ಮೈಸೂರು.

೨. ಕರ್ಣಾಟಕ ಮೃಚ್ಛಕಟಿಕಪ್ರಕರಣಂ (ಆಸ್ಥಾನ ಕವಿ ನಂಜನಗೂಡು ಸುಬ್ಬಾಶಾಸ್ತ್ರಿಗಳವರಿಂದ) ರೂ. ೧-೧೨-೦; ಮಾರಾಟಗಾರರು: ಶ್ರೀ ರಾಮಚಂದ್ರ ಬುಕ್ ಡಿಪೊ, ಮೈಸೂರು.

ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘದ ಪ್ರಕಟಣೆಗಳು

೧. ಶ್ರೀ ಕೈಲಾಸಂ ಅವರ ಸ್ಮರಣೆ—ಶ್ರೀ ಕೆ. ವಿ. ಅಯ್ಯರ್; ರೂ. ೨-೪-೦.
೨. ಕರ್ಣಾಟಕ ಮಾಲವಿಕಾಗ್ನಿಮಿತ್ರ ನಾಟಕಂ—ಶ್ರೀ ಮೋಟಗಾನಹಳ್ಳಿ ಶಂ. ಸುಬ್ರಹ್ಮಣ್ಯಶಾಸ್ತ್ರೀ; ರೂ. ೧-೧೨-೦.
೩. ಮೊನ್ನ ವನ್ನ (ಮಾರಿಸ್ ಮ್ಯಾಟರ್‌ಲಿಂಕನ ಮೂರಂಕದ ನಾಟಕ)—ಶ್ರೀ ಎಸ್. ಜಿ. ಶಾಸ್ತ್ರಿ; ರೂ. ೨-೦-೦.
೪. ನಾಗನ ಪದಗಳು—ಶ್ರೀ ಜಿ. ಪಿ. ರಾಜರತ್ನಂ; ರೂ. ೧-೪-೦.
೫. ಶಕ್ತಿ (ಸಚಿತ್ರ)—ಶ್ರೀ ಆರ್. ಎಲ್. ನರಸಿಂಹಯ್ಯ; ರೂ. ೩-೦-೦.
೬. ಬಾಲಸರಸ್ವತಿ (ಕತೆ, ಪ್ರಬಂಧ, ಸಂವಾದ); ರೂ. ೨-೮-೦.
೭. ನಮ್ಮ ನಮ್ಮವರು (ಚಿತ್ರಗಳು, ಪ್ರಬಂಧಗಳು); ರೂ. ೨-೮-೦.
೮. ಚಿನ್ನದ ದೋಸೆ—(ಜಾನಪದ ಕತೆಗಳು); ೧೨ ಆಣೆ.
೯. ಮಕ್ಕಳ ಮಾತು—(ಎಸ್ಸೆಗಳು); ರೂ. ೧-೦-೦.
೧೦. ಪಚ್ಚೆಯ ತೆನೆ—(ಎಸ್ಸೆಗಳು); ರೂ. ೧-೦-೦.
೧೧. ಗಂಧದ ಹುಡಿ—(ಎಸ್ಸೆಗಳು); ರೂ. ೧-೦-೦.
೧೨. ದುರಾಸೆಯ ದಂಡ—(ಐದು ಏಕಾಂಕ ನಾಟಕಗಳು); ರೂ. ೧-೪-೦.

(ಪ್ರಕಟನೆ ೬ ರಿಂದ ೧೨ ಕಾಲೇಜ್ ಬರವಣಿಗೆಯ ಉತ್ತಮ ಉದಾಹರಣೆಗಳು)

Edited by Sri S. V. Parameswara Bhatta, M.A. and Sri D. Javare Gowda, M.A.
Published by The University of Mysore, Mysore.
Printed by Hugh Warren at the Wesley Press and Publishing House, Mysore City